

ನಿರೀಕ್ಷೆಯ ನೆರಳು

ಪದ್ಮಾ ಶ್ರೀಧರ್

ನಿರೀಕ್ಷೆಯ ನೆರಳು

ಶ್ರೀಮತಿ ಪದ್ಮಾ ಶ್ರೀಧರ್

ಸನ್ ಪಬ್ಲಿಷರ್ಸ್
೨೨೯, ೧೬೭ ಕಟ್ಟಡ, ಕೆ.ಹೆಚ್.ಬಿ.ಶಿರ್ಕೆ ಅಪಾರ್ಟಮೆಂಟ್ಸ್,
ಕೆಂಗೇರಿ ಉಪನಗರ, ಬೆಂಗಳೂರು ೫೬೦೦೬೦

NIREEKSHEY NERALU-A social novel by Smt. Padma Shreedhar, 'Chiguru', 1248, 7th B Cross, New town, Yalahanka Upanagara, Bangaloru 560 106 ; Published by M/s Sun Publishers, 229, Bld 167, KHB Sirke Apts., Kengeri Upanagara, Bangalore 560060.

Pp. 344, Demi; Printed on 70 GSM Maplitho paper.

First Edition: 2010

Price: Rs. 200/-

DTP: Smt. Mala

Impression at: Harshini Offset Printers, Bangalore 4

'ನಿರೀಕ್ಷೆಯ ನೆರಳು' ಕಾದಂಬರಿಯನ್ನು ಕುರಿತು:

ಸುಮಾರು ಅರವತ್ತು ವರ್ಷಗಳ ಹಿಂದಿನ ಘಟನಾವಳಿಗಳ ಅನುಭವಗಳನ್ನು ಓದುಗರೊಂದಿಗೆ ಹಂಚಿಕೊಳ್ಳಬೇಕೆಂಬ ಉದ್ದೇಶದಿಂದ ಈ ವಿಶಿಷ್ಟ ಕಾದಂಬರಿಯು ಸೃಷ್ಟಿಗೊಂಡು ಪ್ರಕಟಗೊಳ್ಳುತ್ತಿದೆ. ಇಲ್ಲಿ ಬರುವ ಘಟನೆಗಳನ್ನು, ಅನುಭವಗಳನ್ನು, ರಂಜನೀಯವಾಗಿ, ಸ್ವಾರಸ್ಯವಾಗಿ, ಕೌತುಕಮಯವಾಗಿ ಬಿಡಿ ಬಿಡಿಯಾಗಿ ಬರೆದಿಟ್ಟವರು ದಿ॥ ಎಮ್. ವಿ. ವೆಂಕಸುಬ್ಬಯ್ಯನವರು. ಅವರ ಭಾಷಾ ಶೈಲಿ, ಬರಹದ ಓಟ ಆ ದಶಕದ ಜನ ಜೀವನ, ಸಾಮಾಜಿಕ ಚಿಂತನೆಗಳೊಂದಿಗೆ ದಿನನಿತ್ಯದ ಹೋರಾಟ, ಜಂಝಾಟಗಳಿಗೆ ಅನುಗುಣವಾಗಿದೆ.

ವೆಂಕಟಸುಬ್ಬಯ್ಯನವರು ವಿದ್ಯಾವಂತರಾಗಿದ್ದು ಓದುವ, ಬರೆಯುವ ಹವ್ಯಾಸ ಗಳನ್ನುಳ್ಳವರಾಗಿದ್ದರು. ಸಂಸ್ಕೃತ, ಹಿಂದಿ, ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ನಾಟಕಗಳು, ಸಣ್ಣಕತೆಗಳು, ಕವನಗಳು, ಪ್ರಬಂಧಗಳು, ರೇಡಿಯೋ ಪ್ರಹಸನಗಳು, ಪ್ರವಾಸಕಥನಗಳು ಹೀಗೆ ಹತ್ತು ಹಲವಾರು ವಿಷಯಗಳು ಅವರ ಬರವಣಿಗೆಯ ಭಂಡಾರದಲ್ಲಿ ಅಡಗಿದ್ದವು. ಆದರೆ ಹೆಚ್ಚು ಲೇಖನಗಳು ಓದುಗರ ಕಡೆಗೆ ಹೋಗಲಿಲ್ಲ. ಅದಕ್ಕೆ ಕಾರಣ, ಆ ಕಾಲದಲ್ಲಿ ಬರಹಗಾರರಿಗೆ ಹೆಚ್ಚು ಅವಕಾಶಗಳಿರಲಿಲ್ಲ, ಪ್ರೋತ್ಸಾಹವೂ ಇರಲಿಲ್ಲ. ಎಲೆ ಮರೆಯ ಕಾಯಿಯಂತೆ ಮರೆಯಲ್ಲೇ ಇದ್ದರು; ಬೆಳಕಿಗೆ ಬರಲಿಲ್ಲವಲ್ಲ ಎನ್ನುವ ಕೊರತೆ ನಮ್ಮನ್ನು ಕಾಡುತ್ತದೆ.

ಚಿಲುಕವಿಲ್ಲದ ಹಳೆಯ ಪೆಟ್ಟಿಗೆಗಳಲ್ಲಿ ಕಡತಗಳ ಅಡಿಯಲ್ಲಿ ಸರಕುಗಳ ಸಂದಿ ಯಲ್ಲಿ ಅಡಗಿದ್ದ ಲೇಖನಗಳಿಗೆ ಎಷ್ಟೋ ವರ್ಷಗಳ ನಂತರ ಹೊರಕ್ಕೆ ಬರುವ ಅವಕಾಶ ಸ್ವಲ್ಪ ಸ್ವಲ್ಪ ಸಿಗುತ್ತಿದೆ. ಪರಿಷ್ಕರಿಸಿ, ಪ್ರಕಟಗೊಳಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಅವರ ಜೀವಿತ ಕಾಲದ ಅಮೂಲ್ಯವಾದ ಕೆಲವಾರು ವರ್ಷಗಳನ್ನು ಹಳ್ಳಿಯ ವಾತಾವರಣದಲ್ಲಿ ಕಳೆಯಬೇಕಾದ ಪರಿಸ್ಥಿತಿ ಒದಗಿದಾಗ ಅವರು ಧೈರ್ಯಗೆಟ್ಟವರಲ್ಲ. ಎದುರಾಗುವ ಸಮಸ್ಯೆಗಳನ್ನು ಎದುರಿಸಿ, ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಹೋಗಬೇಕಾದ ಅನಿವಾರ್ಯತೆ ಇದ್ದರೂ, ಆ ಅನುಭವಗಳು ಅಪಾರ. ಅವುಗಳ ಮೌಲ್ಯವನ್ನು ಕಟು ಸತ್ಯವನ್ನು ಆಗಾಗ ಬರೆದಿಡುವ ಹವ್ಯಾಸಗಳನ್ನಿಟ್ಟುಕೊಂಡಿದ್ದರು. ಮುಂದಿನ ಜನಾಂಗದವರಿಗೆ, ಅಂದಿನ ಚಿತ್ರಣಗಳನ್ನು ತಲುಪಿಸುವುದು ಅವರ ಉದ್ದೇಶ ವಾಗಿತ್ತೆಂದೆನಿಸುತ್ತದೆ. ಆ ಉದ್ದೇಶ, ಈಗ ಒಂದು ಉತ್ತಮ, ಉದಾತ್ತ ವಿಷಯ ಗಳನ್ನೊಳಗೊಂಡ ಸಾಮಾಜಿಕ ಕಾದಂಬರಿಯ ರೂಪದಲ್ಲಿ ಹೊರ ಬರುತ್ತಿದೆ.

ಈ ಬಿಡಿ ಬರಹಗಳನ್ನು ಕೂಲಂಕುಷವಾಗಿ ಓದಿ, ಪರಿಷ್ಕರಿಸಿ, ಸ್ವಲ್ಪ ಮಟ್ಟಿಗೆ ತಿದ್ದಬೇಕಾಗಿ ಬಂದ ಸಮಯದಲ್ಲಿ ಆ ಅಧಿಕಾರವನ್ನು ನಾನು ತೆಗೆದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ವೆಂಕಟಸುಬ್ಬಯ್ಯನವರ ಮಗಳು ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಇಚ್ಛಿಸುತ್ತೇನೆ. ಕಾದಂಬರಿಯಲ್ಲಿ ಕಾಣ ಸಿಗುವ ಪಾತ್ರಗಳು, ಸನ್ನಿವೇಶಗಳು ಹಾಗೂ ಸಂಭಾಷಣೆಗಳು ಎಲ್ಲವೂ ನಮ್ಮ ತಂದೆಯವರ ಸೃಷ್ಟಿಗಳೇ. ಕೆಲವೊಮ್ಮೆ ಅವುಗಳಿಗೆ ಬಣ್ಣವನ್ನು ಹಚ್ಚಿ ಅಲಂಕಾರ ಮಾಡುವ ಕೆಲಸವನ್ನು ನಾನು ಮಾಡಿದ್ದೇನೆ. ಏಕೆಂದರೆ ಅವರ ಮನೋಭಾವ ಸ್ವಲ್ಪ ಮಟ್ಟಿಗೆ ತಿಳಿದಿತ್ತು. ಹಾಗೇ ಅವರನ್ನು ಬಲ್ಲ ಎಲ್ಲರಿಗೂ ಅವರ ಮನೋಧರ್ಮ ಅರ್ಥವಾಗುತ್ತದೆ.

ಈ ದಿನ, ನಾನು ಲೇಖಕಿಯರ ಸಾಲಿನಲ್ಲಿ ನಿಂತಿದ್ದೇನೆಂದರೆ; ಅದಕ್ಕೆ ನಮ್ಮ ತಂದೆಯವರೇ ಬಹುತೇಕ ಕಾರಣಕರ್ತರು, ಪೋಷಕರು. ಅವರು ಬರೆದಿಡುತ್ತಿದ್ದ ಲೇಖನಗಳನ್ನು ಕಂಡೂ ಕಾಣದಂತೆ ಓದುತ್ತಿದ್ದುದು ಉಂಟು. ಹಾಗೆಯೇ ಕೆಲವೊಮ್ಮೆ ಶುದ್ಧ ಪ್ರತಿಗಳನ್ನು ಬರೆದುಕೊಟ್ಟಿದ್ದೂ ಉಂಟು. ಅದೇ ಭಾವನೆಯಿಂದ ಈಗ ಈ ಕಾದಂಬರಿಯನ್ನು ಒಂದು ಆಕಾರಕ್ಕೆ ತಂದಿರುವೆನಾದರೂ, ಕಾದಂಬರಿಯ ಕಥಾವಸ್ತು, ಪಾತ್ರಗಳು, ಸನ್ನಿವೇಶಗಳು ಎಲ್ಲದರ ಪೂರ್ಣ ಕೀರ್ತಿ ನಮ್ಮ ತಂದೆಯವರಿಗೆ ಸೇರುತ್ತದೆ. ಏಕೆಂದರೆ, ಆ ಬಾಂಧವ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದರು.

ನನ್ನ ಈ ಪ್ರಯತ್ನಕ್ಕೆ ಸಹಾಯಕರಾಗಿ, ಸಹಕಾರವನ್ನು ನೀಡಿದವರು, ಡಾ॥ ಎ.ಎಚ್. ಶಿವಾನಂದರು. ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಮ್ಮ ತಂದೆಯವರ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ ಇದ್ದಿತು. ಆ ಕಾರಣದಿಂದಾಗಿ ಈ ಕಾದಂಬರಿಯನ್ನು ನಮ್ಮ ತಂದೆಯವರ ನೆನಪಿನಲ್ಲಿ, ಕುಟುಂಬದ ಸದಸ್ಯರೆಲ್ಲರಿಗೂ ಕಾಣಿಕೆಯನ್ನಾಗಿ ಅರ್ಪಿಸಲು ಇಷ್ಟಪಡುತ್ತೇನೆ.

ಓದುಗರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತಿರುವ ಸನ್ ಪಬ್ಲಿಕೇಷನ್ ಬಳಗದವರಿಗೆ ನನ್ನ ಧನ್ಯವಾದಗಳು.

ಇತಿ

ಬೆಂಗಳೂರು — *ಪದ್ಮಾ ಶ್ರೀಧರ್,*

ಕಾದಂಬರಿಯ ಕುರಿತು ಪ್ರಕಾಶಕರ ಮಾತು

ಇದು ಕೇವಲ ಕಾದಂಬರಿಯಲ್ಲ. ಕೆಲವು ಅರ್ಥಪೂರ್ಣವಾದ, ಸ್ವಾರಸ್ಯವಾದ ಘಟನೆಗಳನ್ನೂ ಅನುಭವಗಳನ್ನೂ ಒಳಗೊಂಡ ಒಂದು ಜೀವನ ಚಿತ್ರಣ. ಬಿಡಿ ಬಿಡಿ ಬರಹಗಳನ್ನು ಒಂದುಗೂಡಿಸಿ ಕಥಾ ರೂಪದಲ್ಲಿ ಹೆಣೆದು ಒಂದು ಪೂರ್ಣ ಕೃತಿಯನ್ನಾಗಿ ಮಾಡಲಾಗಿದೆ. ಎಷ್ಟೋ ವರ್ಷಗಳ ನಂತರ ಹೊರಬರುತ್ತಿದೆ.

1970ನೇ ಇಸವಿಯಲ್ಲಿ ಬರೆದ ಈ ಪ್ರತಿಗಳ ಈ ಸನ್ನಿವೇಶಗಳು ಸುಮಾರು 50–60 ವರ್ಷಗಳ ಹಿಂದಿನ ದಿನಗಳಿಗೆ ಸಂಬಂಧಪಟ್ಟಿದ್ದು. ಪ್ರತಿಯೊಬ್ಬ ವ್ಯಕ್ತಿಯಲ್ಲೂ, ವ್ಯಕ್ತಿಗತ, ಸಾಮಾಜಿಕ, ಪರಿಸರ, ಬಂಧು, ಬಳಗ ಎಲ್ಲವನ್ನು ಒಳಗೊಂಡ ಅನುಭವಗಳು ಉಂಟಾಗುವುದು. ಸರ್ವೇ ಸಾಮಾನ್ಯ ಕೆಲವರಲ್ಲಿ ಸದಾ ಕಾಲಕ್ಕೂ ಉಳಿಯುವಂಥದ್ದು ಇರಬಹುದು. ಕೆಲವರು ಅದನ್ನು ಮರೆತೇ ಬಿಡಬಹುದ ಆದರೂ ಆಯಾ ಸಮಯದಲ್ಲಿ ನಿರೀಕ್ಷೆ ಎನ್ನುವುದು ನಿರಂತರವಾಗಿರುತ್ತದೆ. ನಿರೀಕ್ಷೆಯ ನೆರಳು ಸಹನೀಯವೂ ಹೌದು; ಅಸಹನೀಯವೂ ಹೌದು.

ದೈನಂದಿನ ಚಟುವಟಿಕೆಗಳಲ್ಲಿ ಸಮಸ್ಯೆಗಳಲ್ಲಿ ವ್ಯಕ್ತಿಗೆ ಉಂಟಾಗುವ ಅನುಭವಗಳು ಅನೇಕ. ಆ ಅನುಭವಗಳನ್ನು ಹಾಳೆಗಳ ಮೇಲೆ ಬಿಡುವು ಸಿಕ್ಕಾಗ ಬರೆದಿಡು: ಹವ್ಯಾಸವನ್ನು ಬೆಳೆಸಿಕೊಂಡಿದ್ದವರು ಶ್ರೀ ವೆಂಕಟ ಸುಬ್ಬಯ್ಯನವರು. ಸಂಸ್ಕೃತ, ಹಿಂದಿ ಹಾಗೂ ಕನ್ನಡ ಭಾಷೆಗಳಲ್ಲಿ ತಕ್ಕಮಟ್ಟಿಗೆ ಜ್ಞಾನವನ್ನು ಹೊಂದಿದ್ದ ಲೇಖಕರು. ಅವರ ಈ ಅಪೂರ್ವ ಬರಹವು ಈಗ ಓದುಗರ ಮುಂದೆ ಕಾದಂಬರಿಯ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ಬರಹಗಳನ್ನು ಪರಿಷ್ಕರಿಸಿ ಕೊಟ್ಟವರು, ಅವರ ಮಕ್ಕಳು. ಸಂಗೀತ ಸಾಹಿತ್ಯಗಳಲ್ಲಿ ಆಸಕ್ತಿ ಇದ್ದ ಲೇಖಕರು, ತಮ್ಮ ಮಕ್ಕಳನ್ನು ಓದಿಸಿ ಬರೆ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಇದನ್ನು ಸ್ಮರಿಸಿಕೊಳ್ಳುತ್ತಾ ಅವರ ಮಕ್ಕಳು ಈ ಕಾದಂಬರಿಯನ್ನು ಪ್ರಕಟಿಸಲು ಮುಂದಾಗಿದ್ದಾರೆ.

ಓದುಗರಿಗೆ, ಮುದವನ್ನು ಕೊಡುವ ಈ ಕಾದಂಬರಿಯಂತೆ ನಿರೀಕ್ಷೆಯ ನೆರಳು, ಹಸಿರಾಗಿರಲಿ, ತಂಪಾಗಿರಲಿ, ಬಣ್ಣ ಬಣ್ಣವಾಗಿರಲಿ ಎಂದು ಹಾರೈಸುತ್ತೇನೆ

– *ಪ್ರಕಾಶಕರು*

ನಿರೀಕ್ಷೆಯ ನೆರಳು

****

"ಯಾಕೋ ಗುಂಡಣ್ಣ ಹೀಗೆ ಕೂತು ಬಿಟ್ಟೇದೀಯ? ಹುಶಾರಾಗಿದೀಯ ತಾನೇ?" ಸಾತಕ್ಕ ಕಳಕಳಿಯಿಂದ ಪ್ರಶ್ನಿಸಿದಳು.

"ಹುಶಾರಾಗಿದೀನಿ ಸಾತು ಏನೋ ಯೋಚಿಸ್ತಿದ್ದೆ."

"ಹೆಂಡ್ತಿ ಮಕ್ಕಳ ಚಿಂತೆ ಆಗಿದ್ರೆ, ಬೇಗ ಬಾ ಅಂತ ಕಾಗದ ಬರೆದು ಹಾಕು. ನನ್ನ ಕೈಯ ಅಡಿಗೆ ರುಚಿಯಾಗಿಲ್ಲ ಅಂತ ಕಾಣುತ್ತೆ."

"ಛೆ ಹಾಗೇನಿಲ್ಲ ಸಾತು. ಅವಳು ಇನ್ನೂ ನಾಲ್ಕು ದಿನ ಅವಳ ಅಣ್ಣನ ಮನೇಲಿರ್ಲಿ.... ಅದಲ್ಲ ವಿಷಯ."

"ನಂಗೆ ಹೇಳೋದಾದ್ರೆ ಹೇಳು. ಇವಳಿಗೆ ಹೇಳೋದೇನು ಅಂತಿದ್ರೆ ಹೇಳ್ಬೇಡ ಬಿಡು...." ಊಟದ ಮಂದಲಿಗೆಯನ್ನೆಳೆದು ಹಾಕಿಕೊಂಡು ಅದರ ಮೇಲೆ ಕುಳಿತು, ಹೂಬತ್ತಿಗಳನ್ನು ಹೊಸೆಯತೊಡಗಿದಳು.

"ನನ್ನನ್ನೊಂದು ವಿಷಯ ಕೊರೀತಿದೆ ಸಾತು, ಏನ್ಮಾಡ್ಲಿ ಅಂತ ಗೊತ್ತಾಗ್ತಿಲ್ಲ."

ಅದೇನು ವಿಷಯ ಎಂದು ಸಾತಕ್ಕ ಕೇಳಲಿಲ್ಲ. ಅವನೇ ಮುಂದುವರೆಸಿದ "ನಮ್ಮ ಫ್ಯಾಕ್ಟರಿಯ ಕೆಲವು ಕೆಲಸಗಾರರನ್ನು ಕೆಮಿಸ್ಟ್‌ಗಳನ್ನು ಲಕ್ನೋದ ಹತ್ತಿರವಿರುವ ಸಕ್ಕರೆ ಕಂಪೆನಿಯವರು ಕರೆಸ್ಕೊಳ್ತಾರಂತೆ... ಆ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಿ ಬಿಟ್ಟಿದಾರೆ ನಮ್ಮ ಜನರಲ್ ಮ್ಯಾನೇಜರ್."

"ಅದೆಲ್ಲಿದೆ? ತುಂಬಾ ದೂರಾನಾ?"

"ಇದೇನು ಹೀಗೆ ಕೇಳ್ತೀಯ.... ಸಾತು? ಲಕ್ನೋ ಗೊತ್ತಿಲ್ವಾ...? ಅದು ಉತ್ತರ ಪ್ರದೇಶದ ರಾಜಧಾನಿ. ಅದರ ಸಮೀಪದಲ್ಲಿ ಒಂದು ಸಕ್ಕರೆ ಕಂಪೆನಿ ಶುರುವಾಗಿದೆ. ಅಲ್ಲಿಗೆ ಕೆಲಸಗಾರರು ಬೇಕಂತೆ. ನನ್ನ ಮೇಲಿನವರು ಕೂಡಾ ಒಂದಿಬ್ಬರು ಹೊರಡೋಕೆ

ಸಿದ್ಧರಾಗಿದಾರೆ."

"ನಿನ್ನನ್ನು ಒಂದ್ಮಾತು ಕೇಳದೇ, ನಿನ್ನ ಹೆಸರನ್ನು ಯಾಕೆ ಸೇರ್ಸಿದ್ರು?"

"ನಾನು ಆಗುಲ್ಲ ಅಂತ ಅನ್ನಲ್ಲ ಅಂತ ಅಂದ್ಕೊಂಡಿರಬಹುದು. ಆದರೆ ..."

"ನಿನಗೆ ಹೋಗೋಕೆ ಇಷ್ಟ ಇದೆಯೋ ಇಲ್ವೋ?"

"ಅದೇ ಗೊತ್ತಾಗ್ತಿಲ್ಲ. ಇದು ಇಷ್ಟದ ಪ್ರಶ್ನೆ ಅಲ್ಲ... ಇಲ್ಲಿಯ ಸಂಬಳದ ಮೂರರಷ್ಟು ಸಂಬಳ ಸಿಗುತ್ತೆ... ವಾಸಕ್ಕೆ ಮನೆ ಕೊಡ್ತಾರೆ... ಎಲ್ಲಾ ಅನುಕೂಲವೂ ಇರುತ್ತೆ. ಆದರೆ ಒಂದೇ ಒಂದು ಸಮಸ್ಯೆ.. ಅತಿ ದೂರ ಲಕ್ಷ್ಮಿ ಏನಂತಾಳೋ?"

"ಮಾತಾಡಿ ನೋಡು. ಅನುಕೂಲತೆಗಳು ಹೆಚ್ಚಾಗಿದ್ರೆ ಯಾಕೆ ಬೇಡ ಅಂತಾಳೆ..?"

"ನೀನು ಮಾತಾಡ್ತೀಯಾ ಸಾತು?"

"ಯಾಕೋ ನಿನ್ನ ಹೆಂಡ್ತಿ ಹತ್ರ ಮಾತಾಡುಕ್ಕೆ ನಿಂಗೆ ಭಯಾನಾ? ಹುಲಿ ಹಾಗೆ ಘರ್ಜಿಸ್ತಿರ್ತೀಯಾ ಅವಳ್ಮೇಲೆ.. ನೀನು ಹೊರಟ್ರೆ ಅವಳು ಬರುಲ್ಲ ಅಂತ ಖಂಡಿತಾ ಅನ್ನುಲ್ಲ."

"ಅದೇನೋ ಸರಿ..... ಆದರೆ ಏಕಾ ಏಕೀ ನಾನೊಬ್ಬನೇ ಹೇಗೆ ಈ ನಿರ್ಧಾರ ವನ್ನು ತಗೊಳ್ಳಿ ಅಂತ ಯೋಚ್ನೆ ಮಾಡ್ತಿದ್ದೆ."

"ನಿನ್ನಣ್ಣ ಸೀತಾರಾಮನ್ನ ಕೇಳು... ಎಷ್ಟಾಗ್ಲಿ ಈ ಮನೆಗೆ ದೊಡ್ಡವನು. ನಿನ್ನ ಮೇಲಿನವರ ಪರಿಚಯವೂ ಅವನಿಗಿದೆ. ಏನು ಎತ್ತ ಎಲ್ಲಾ ಹೇಗೆ ಅಂತ ವಿಚಾರಿಸ್ತಾನೆ."

"ಹೌದು ಸಾತು. ಅಣ್ಣನ್ನ ಒಂದ್ಮಾತು ಕೇಳ್ಲೇ ಬೇಕು. ಅವನು ಬೇಡ ಅಂತಂದ್ರೆ ನಾನು ಹೋಗೋದಿಲ್ಲ." ಎಂದ ಸ್ವಲ್ಪ ಆತಂಕ ಕಡಿಮೆ ಆಗಿತ್ತು.

* * *

ಆದರೆ ಅಣ್ಣ ಸೀತಾರಾಮ ಬೇಡ ಎನ್ನಲಿಲ್ಲ. ಅವಕಾಶ ಸಿಕ್ಕಿರುವಾಗ ಯಾಕೆ ಹಿಂಜರಿತೀಯ? ಈಗ ನಿನ್ನ ಸಂಬಳದಲ್ಲಿ ನಿನಗೆ ಏನು ಉಳಿತಾಯ ಆಗುತ್ತೆ? ಸಂಪಾದನೆ ಚೆನ್ನಾಗಿ ಇರುವಾಗ ಗಳಿಸಿ ಕೂಡಿಟ್ಕೋಬೇಕು. ಈಗ ನಿನ್ನ ಸಂಸಾರ ಇನ್ನೂ ಚಿಕ್ಕದು. ಇನ್ನೂ ನಾಲ್ಕಾರು ಮಕ್ಕಳಾಗುತ್ವೆ, ನಿನ್ನ ಹೆಣ್ಣು ಮಕ್ಕಳ ಮದುವೆಯ ಹೊತ್ತಿಗೆ ನಿನಗೆ ಚಿಂತೆ ಇರುವುದಿಲ್ಲ. ಒಪ್ಕೊ.... ನಾನು ನಿನ್ನ ಜನರಲ್ ಮ್ಯಾನೇಜರ್ ಹತ್ರ ಮಾತ್ನಾಡಿ, ನಿನ್ನ ವಿವರಗಳನ್ನ ತಿಳಿದ್ಕೊಳ್ತೀನಿ.... ಎಂದಿದ್ದ. ಗುಂಡಣ್ಣನಿಗೆ ಸಮಾಧಾನವಾಗಿತ್ತು.

"ಈಗಿನ್ನು ನನ್ನ ವಯಸ್ಸು ಚಿಕ್ಕದು. ಕಷ್ಟಪಟ್ಟು ದುಡಿಯೋನಿಗೆ ಯಾವೂರಾ ದ್ರೇನು? ಇಲ್ಲೇನು ನಮ್ಮಪ್ಪ ಆಸ್ತಿ ಮಾಡಿಟ್ಟಿದಾರೆಯೇ ನಮಗೋಸ್ಕರ? ತಲೆಯಲ್ಲಿ ವಿದ್ಯೆ ಇದೆ. ಮೈಯಲ್ಲಿ ಬಲವಿದೆ. ಇಷ್ಟರ ಮೇಲೆ ಅಲ್ಲಿ ಸರಿ ಹೋಗದಿದ್ರೆ ಒಂದೆರಡು

ವರ್ಷಗಳ ನಂತರ ವಾಪಸ್ಸು ನಮ್ಮ ಊರಿಗೇ ವಾಪಸ್ಸು ಬಂದ್ರಾಯ್ತು" ಎಂತಂದು ಕೊಂಡ.

ಅಲ್ಲಿಗೆ, ಹೊರಡುವುದೆಂದು ತೀರ್ಮಾನವಾಗಿತ್ತು. ಲಕ್ಷ್ಮಿಗೆ ಕಾಗದವನ್ನು ಬರೆದು ಕರೆಸಿಕೊಂಡ. ಅವಳನ್ನು ಬಿಡಲು ಅವಳ ಅಣ್ಣ ಬಂದಿದ್ದ. ಅವನಿಗೂ ವಿಷಯವನ್ನು ತಿಳಿಸಿದ. ಅವನೂ ಈ ನಿರ್ಧಾರಕ್ಕೆ ಸಮ್ಮತಿಯನ್ನಿತ್ತ.

"ಇಲ್ಲಿ ಏನಿದೆ ಅಂತ ಇಲ್ಲೇ ಇರ್ಬೇಕು? ಆಸ್ತೀನೇ ಪಾಸ್ತೀನೇ? ತಿಂಗಳ ಸಂಬಳ.... ಸರ್ಕಾರಿ ಕೆಲಸವೂ ಅಲ್ಲ. ಭಡ್ತಿ ಇಲ್ಲ. ಪಿಂಚಣಿ ಇಲ್ಲ... ಕೈ ತುಂಬ ಸಂಬಳ ಸಿಗೋದಾದ್ರೆ ಎಲ್ಲಿದ್ರೇನು?.... ಹೇಗೂ ಅಪ್ಪ ಅಮ್ಮನೂ ಇಲ್ಲ..... ಯಾರಿಗೋಸ್ಕರ ಬಂದು ಹೋಗಿ ಮಾಡ್ಬೇಕು. ಆ ಖರ್ಚೂ ಉಳಿಯುತ್ತೆ...." ಎಂದಿದ್ದ.

"ಅಣ್ಣಾ, ಏನ್ಮಾತು ಅಂತ ಆಡ್ತೀಯ?.... ಅತ್ಗೆ ಇದಾರೆ, ಅವರು ಏನಂದ್ಕೊಳ್ತಾರೆ?" ಲಕ್ಷ್ಮಿ ಅಣ್ಣನನ್ನು ಎಚ್ಚರಿಸಿದಳು.

"ಅಯ್ಯೋ ನೀನೊಂದು.... ಅವರೇನಂದ್ಕೊಳ್ತಾರೆ..... ಅವರನ್ನು ನಿಮ್ಮ ಜೊತೆಗೆ ಕರ್ಕೊಂಡು ಹೋದ್ರಾಯ್ತಪ್ಪ.... ಅವರು ನಿಮ್ಮ ಮನೇಲೇ ತಾನೇ ಇದಾರೆ, ಇನ್ನೆಲ್ಲಿಗೆ ಹೋಗ್ತಾರೆ...?"

"ಸಾತೂನ ಬಿಟ್ಟು ಹೋಗುವ ಮಾತೇ ಇಲ್ಲ. ಅವಳು ಇಲ್ಲಿ ಎಲ್ಲಿರ್ತಾಳೆ?" ಗುಂಡಣ್ಣನೆಂದ.

"ಅವರನ್ನೂ ಒಂದ್ಮಾತು ಕೇಳಿ, ದೂರಾ ದೇಶ.... ಸರಿ ಹೋಗ್ಬೇಕಲ್ಲ." ಲಕ್ಷ್ಮಿ ಸಂಶಯವನ್ನು ವ್ಯಕ್ತ ಪಡಿಸಿದಳು.

"ಸರಿ ಹೋಗ್ದೇ ಏನು? ನಮಗೆ ಸರಿ ಹೋದ್ಮೇಲೆ ಅವಳ್ಗೂ ಸರಿ ಹೋಗುತ್ತೆ.... ಕೇಳೋದೇನು ಬೇಡ."

"ಭಾವಂಗೂ ಒಂದ್ಮಾತು ತಿಳಿಸ್ಬೇಕು.... ಏನಂತಾರೋ?"

"ಅದನ್ನೆಲ್ಲ ನಾನು ನೋಡ್ಕೋತೀನಿ..... ನೀನು ತೆಪ್ಪಗಿರು" ಹೆಂಡತಿಯ ಮೇಲೆ ಅಬ್ಬರಿಸಿದ.

ಲಕ್ಷ್ಮಿ ಸ್ವಲ್ಪ ಮಟ್ಟಿಗೆ ಉಬ್ಬಿ ಹೋಗಿದ್ದಳು. ಮುಂದೆ ಸಿಗಲಿರುವ ಅನುಕೂಲಗಳ ಬಗ್ಗೆ ಸಮಾಧಾನವಾಗಿತ್ತು. ನಾಲ್ಕಾರು ಕಾಸುಗಳನ್ನು ಉಳಿಸಬಹುದು. ಮಕ್ಕಳಿಗೆ ಹೊಸ ಹೊಸ ಬಟ್ಟೆಗಳನ್ನು ಹೊಲಿಸಬಹುದು. ಚೂರು ಪಾರು ಚಿನ್ನವನ್ನು ಕೊಳ್ಳಬಹುದು. ಹಾಗೆ ಉತ್ತರ ಭಾರತದ ಕೆಲವು ಪುಣ್ಯ ಕ್ಷೇತ್ರಗಳ ದರ್ಶನವನ್ನು ಮಾಡಬಹುದು. ಇದುವರೆಗೂ ಬರೀ ಭೂಪಟದಲ್ಲಿ ನೋಡಿ, ಪಾಠದಲ್ಲಿ ಓದಿರುವುದು ಅಷ್ಟೇ. ತಿರುಗಾಡಿ ಬರುವ ಅವಕಾಶ ಸಿಗುವುದೆಂದರೆ ಯಾರಿಗುಂಟು ಯಾರಿಗಿಲ್ಲ? ಅವಳು ಕಲ್ಪನಾ ವಿಲಾಸದಲ್ಲಿ ಸಂಚರಿಸುತ್ತಿದ್ದಳು. ಗುಂಡಣ್ಣ ಎಚ್ಚರಿಸಿದ.

"ಲಕ್ಷ್ಮೀ ಏನಾಗಿದೆ ನಿಂಗೆ? ಫ್ಯಾಕ್ಟರಿಯ ಸೈರನ್ ಕೂಗ್ತಿದೆ.... ಕನ್ನಡಿ ಬಾಚಣಿಗೆಯನ್ನು ಎಲ್ಲಿ ಬಡಿದಿದೀಯ?"

"ದಿನಾ ಎಲ್ಲಿರುತ್ತೋ ಅಲ್ಲೇ ಇದೆ! ಕಲ್ಲಾಬಿಲ್ಲಿ ಯಾರು ಮಾಡ್ತಾರೆ? ಮಧ್ಯಾಹ್ನದ ಊಟಕ್ಕೆ ಏನು ಅಡಿಗೆ ಮಾಡ್ಲಿ?"

"ಸಾತೂನ ಕೇಳು, ಒಂದು ವಾರದಿಂದ ಅಡಿಗೆ ಮನೇಲಿ ಏನಿದೆ ಏನಿಲ್ಲ ಅಂತ ಅವಳಿಗೆ ಗೊತ್ತು. ಹೊತ್ತಾಯ್ತು ಹೊರಟೆ..." ಎಂದು ಹೇಳಿ ಚಪ್ಪಲಿ ಮೆಟ್ಟಿ ಮುಂಬಾಗಿಲನ್ನು ದಾಟಿದ.

* * *

ಕೆಲವೇ ದಿನಗಳಲ್ಲಿ ಲಕ್ನೋಗೆ ಹೋಗುವುದೆಂದು ನಿರ್ಧಾರ ಆಗಿತ್ತು. ರೈಲಿಗೆ ಟಿಕೆಟ್ಟುಗಳನ್ನು ಮುಂಗಡವಾಗಿ ಖರೀದಿಸಲಾಗಿತ್ತು. ಮೂರು ನಾಲ್ಕು ದಿನಗಳ ಪ್ರಯಾಣ. ಮಂಡ್ಯದಿಂದ ಬೆಂಗಳೂರಿಗೆ ಬರಬೇಕು. ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ ಮಾಡಬೇಕು. ಅಲ್ಲಿಂದ ಲಕ್ನೋಗೆ ಮತ್ತೆ ಬೇರೆ ರೈಲು.

ಅಗತ್ಯವಾದ ಸಾಮಾನು ಸರಂಜಾಮುಗಳನ್ನೆಲ್ಲಾ ಗೋಣಿ ಚೀಲಗಳಲ್ಲಿ ಕಟ್ಟಿಡಲಾಗಿತ್ತು. ಸೀರೆ ಬಟ್ಟೆ ಇತ್ಯಾದಿಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಡಲಾಗಿತ್ತು. ಹಾಸಿಗೆಯನ್ನು ಸುತ್ತಿಲಿ ದಾರ ಹಾಕಿ ಬಿಗಿದು ಕಟ್ಟಲಾಗಿತ್ತು. ಬುಟ್ಟಿಗಳಲ್ಲಿ ಹಣ್ಣುಗಳು, ಹಾಲು, ಕಾಫಿಯ ಫ್ಲಾಸ್ಕು, ಕುಡಿಯುವ ನೀರಿಗೆ ರೈಲು ಚೊಂಬು, ಕುಡಿಯಲು ಲೋಟಗಳು, ಕೈ ಒರೆಸಿಕೊಳ್ಳಲು ಹಳೆಯ ಬಟ್ಟೆಗಳು, ಒರೆಸಿ ಎಸೆಯಲು ಆಗುವಂತೆ ಪತ್ರಿಕೆಯ ಹಾಳೆಗಳು... ಒಂದೇ ಎರಡೇ, ಬೇಕಾದುವನ್ನೆಲ್ಲವನ್ನು ಲಕ್ಷ್ಮಿ ವಿತರಣೆಯಾಗಿ ತೆಗೆದಿಟ್ಟಳು. ಸಾತಕ್ಕ ಮೆಚ್ಚುಗೆಯಿಂದ ನೋಡಿದಳು.

"ಲಕ್ಷ್ಮೀ ನಿನ್ನ ಜಾಣತನವೇ ಜಾಣತನ... ಎಲ್ಲವನ್ನು ಎಷ್ಟು ಎಚ್ಚರದಿಂದ ತೆಗೆದಿಟ್ಟಿದೀಯ. ಆದರೆ ಇಲ್ಲಿಂದ ಅಲ್ಲಿಗೆ ಸಾಗಿಸುಕ್ಕೆ ಕಷ್ಟ ಆಗುಲ್ವಾ? ಗುಂಡಣ್ಣ ಏನಂತಾನೋ?"

"ಏನಂತಾರೆ? ಯಾವುದನ್ನು ಬಿಡುಕ್ಕೆ ಆಗತ್ತೆ ಅತ್ಗೇ ನೀವೇ ಹೇಳಿ."

"ಪಾತ್ರೆ ಪಡಗ ಎಲ್ಲಾ ಅಲ್ಲೂ ಸಿಗುತ್ತೆ ಲಕ್ಷ್ಮೀ."

"ಆದರೆ, ದುಡ್ಡು ಕೊಡ್ಬೇಡ್ವಾ ಅತ್ಗೇ. ಇವನ್ನೆಲ್ಲಾ ಏನು ಮಾಡೋದು?"

"ಕೆಲವನ್ನ ಸೀತಾರಾಮನ ಮನೆಯಲ್ಲಿಡೋಣ. ಕೆಲವನ್ನ ನಿನ್ನ ಅಣ್ಣನ ಮನೆಯಲ್ಲಿಡೋಣ. ಎಷ್ಟು ಬೇಕೋ ಅಷ್ಟನ್ನೇ ತಗೊಂಡು ಹೋಗೋಣ. ಹೇಗೂ ಕಂಪೆನಿಯವರು ಮುಂಗಡವಾಗಿ ಸ್ವಲ್ಪ ಹಣವನ್ನು ಕೊಟ್ಟೇ ಕೊಡ್ತಾರೆ. ಪ್ರಯಾಣಕ್ಕೆ ಬೇಕಾದುದನ್ನು ಮರೆಯದೇ ತಗೊಂಡು ಹೋದ್ರಾಯ್ತು."

ಹೀಗೆ ಚರ್ಚೆಗಳು ನಡೆದಿದ್ದರೂ, ತೆಗೆದುಕೊಂಡು ಹೋಗುವ ಲಗೇಜು

ಹೆಚ್ಚಾಗಿಯೇ ಇತ್ತು. ಹತ್ತಿರದವರಿಗೆ ಗುಂಡಣ್ಣ ಸಂಸಾರ ಸಮೇತನಾಗಿ ಲಕ್ನೋಗೆ ಹೋಗುತ್ತಿರುವ ವಿಷಯ ತಿಳಿಯಿತು. ಒಬ್ಬೊಬ್ಬರು ಒಂದೊಂದು ಥರ ಮಾತನ್ನಾಡಿದ್ದರು. ಲಕ್ಷ್ಮಿಗೆ ಪಿಚ್ಚೆನ್ನಿಸಿತ್ತು.

"ಎಲ್ರೂ ಹೆದರಿಸುವ ಹಾಗೆ ಮಾತಾಡ್ತಾರಲ್ಲ ಅತ್ಗೇ.... ಎಲ್ರಿಗೂ ನಮ್ಮ ಬಗ್ಗೆ ತಾತ್ಸಾರ ನಾವು ಬಡವರು ಅಂತ."

"ಬಡತನ ಸಿರಿತನ ಯಾರಿಗೂ ಶಾಶ್ವತವಲ್ಲ... ಅದನ್ನೆಲ್ಲ ಮನಸ್ಸಿಗೆ ಹಚ್ಕೋಬೇಡ. ದೂರದ ಪ್ರಾಂತ್ಯಕ್ಕೆ ಹೋಗ್ತಾ ಇದೀವಿ. ಮನಸ್ನಲ್ಲಿ ಯಾವ ಕಹಿಯೂ ಇರಬಾರ್ದು. ಸಮಯ ಅಂದ್ರೇ ಇವರುಗಳನ್ನೇ ಅನುಸರಿಸಬೇಕಾಗುತ್ತೆ."

"ನೀವು ಇದನ್ನೆಲ್ಲ ಹೇಗೆ ಸಹಿಸ್ತೀರೋ....? ನಂಗೆ ಆಶ್ಚರ್ಯ ಆಗುತ್ತೆ..."

"ಸಹಿಸ್ಲೇಬೇಕು ಲಕ್ಷ್ಮೀ ಇಲ್ದಿದ್ರೆ ದಿನಗಳು ಕಳೆಯೋದು ಹೇಗೆ? ಈ ಚಿಂತೆಗಳನ್ನು ಬಿಟ್ಟು ದೇವರಧ್ಯಾನ ಮಾಡಿದ್ರೆ ನೆಮ್ಮದಿ ಸಿಗುತ್ತೆ."

"ಏನು ನೆಮ್ಮದಿಯೋ.... ಇನ್ನು ಅಲ್ಲಿ ಹೇಗೋ, ಹೊಸ ಜಾಗ, ಹೊಸಾ ಜನ.... ಭಾಷೆ ಬೇರೆ... ನೋಟ ಬೇರೆ...."

"ಎಲ್ರೂ ನಮ್ಮೋರೇ ಅವರೂ ಮನುಷ್ಯರೇ ತಾನೇ. ಎಲ್ಲಾ ಹೇಗೋ ನಡೆಯುತ್ತೆ. ದೇವರ ಮೇಲೆ ಭಾರ ಹಾಕು. ಅವನೇ ಮಾರ್ಗ್ಗಾನ ತೋರಿಸೋನು." ಸಾತಕ್ಕ ಹಾಗೆ ಹೇಳಿದ್ರೂ ಅವಳ ಮನಸ್ನಲ್ಲೂ ಸ್ವಲ್ಪ ಮಟ್ಟಿನ ಆತಂಕ ಇತ್ತು.

"ಗುಂಡಣ್ಣ ತನಗೆ ಪ್ರಿಯನಾದವನು, ಲಕ್ಷ್ಮಿಯೂ ಕೆಟ್ಟವಳಲ್ಲ. ಉತ್ತರ ಭಾರತಕ್ಕೆ ಹೋಗಿ ಬರುವ ಅವಕಾಶ ತನಗೆ ಸುನಾಯಾಸವಾಗಿ ಸಿಕ್ಕಿದೆ. ಕಾಶೀಯಾತ್ರೆ, ಗಯಾ, ಪ್ರಯಾಗ, ಹರಿದ್ವಾರ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಬರಬಹುದು. ಸೀತಾರಾಮ ಇದನ್ನೆಲ್ಲ ಮಾಡಿಸುಲ್ಲ. ಶ್ರೀನಿವಾಸನೂ ಅಷ್ಟೆ. ಯಾವ ಜನ್ಮದ ಕರ್ಮವೋ, ತನಗೆ ಈ ಜನ್ಮದಲ್ಲಿ ಈ ಶಿಕ್ಷೆ ಗಂಗೆಯಲ್ಲಿ ಅದನ್ನೆಲ್ಲ ತೊಳ್ಕೊಂಡು ಪಾವನವಾದ್ರೆ ಸಾಕು. ಗುಂಡಣ್ಣ ಖಂಡಿತಾ ಕಾಶೀಯಾತ್ರೆ ಮಾಡಿಸ್ತಾನೆ." ತನ್ನಲ್ಲೇ ಅಂದುಕೊಂಡಳು.

ಲಕ್ಷ್ಮಿಯ ಅಣ್ಣ ತಮ್ಮಂದಿರು ರೈಲ್ವೇ ನಿಲ್ದಾಣಕ್ಕೆ ಬಂದಿದ್ದರು. ಸೀತಾರಾಮನೂ ಬಂದಿದ್ದ. ಅಂತೂ ಮಂಡ್ಯದ ನೀರಿನ ಋಣ ತೀರಿತ್ತು. ಗಂಟು ಮೂಟೆಗಳೊಂದಿಗೆ, ಸಂಸಾರದೊಂದಿಗೆ, ಲಕ್ನೋದ ಕಡೆಗೆ ಪ್ರಯಾಣ ಬೆಳೆಸಿದ್ದಾಗಿತ್ತು.

ಸಾತಕ್ಕ ತನ್ನೊಂದಿಗೆ ತನ್ನ ಮಡಿ ಪೆಟ್ಟಿಗೆಯನ್ನು ತೆಗೆದಿರಿಸಿಕೊಂಡಿದ್ದಳು. ಅದರಲ್ಲಿ ಅವಳು ದಿನ ನಿತ್ಯ ಉಡುವಂಥ ಸೀರೆಗಳು, ಒಂದು ಸಣ್ಣ ಸಂಪುಟ, ಹಾಗೂ ಜಪಮಣಿಮಾಲೆ ಇವಿಷ್ಟೇ ಅವಳ ಆಸ್ತಿ.... ಮಡಿ ಹುಡಿ ಮಾಡಲು ಆಗದೇ ಇದ್ದುದರಿಂದ ಕೇವಲ ಫಲಾಹಾರ...... ಹಾಗೂ ಕುಡಿಯಲು ಹಾಲು......

ಹಾಲಿಗೆ ದೋಷವಿಲ್ಲ.

ಲಕ್ಷ್ಮಿ ಒಂದಿಷ್ಟು ತಿಂಡಿಗಳನ್ನು ಮಾಡಿಟ್ಟುಕೊಂಡಿದ್ದಳು. ಮಕ್ಕಳಿಗೆ ಆಗಬೇಕಲ್ಲ.... ಶಾಂತ, ಲಲಿತ ಇಬ್ಬರೂ ಚಿಕ್ಕವರು. ಕಿಟಕಿಯ ಬಳಿ ಕುಳಿತುಕೊಳ್ಳುವುದಕ್ಕೆ ಪೈಪೋಟಿ ನಡೆಸುತ್ತಿದ್ದರು. ಶಾಸ್ತ್ರಿ ಗುಡುಗಿದ "ಕಣ್ಣಿಗೆ ಕಸ ಬೀಳುತ್ತೆ, ಹೇಳಿದಷ್ಟು ಕೇಳಿ..... ಇಲ್ದಿದ್ರೆ ಹೊಡೆತ ಬೀಳುತ್ತೆ...."

"ಅತ್ತೇ ಹೊರಗಡೆ ನೋಡಿ. ಗಿಡ ಮರಗಳು ಹೇಗೆ ಓಡ್ತಿವೆ ಅಂತ...." ಶಾಂತ ಉತ್ಸಾಹದಿಂದ ಹೇಳಿದಳು.

"ಓಡ್ತಾ ಇರೋದು ಗಿಡ ಮರಗಳಲ್ಲ. ನಾವು ಕೂತಿರುವ ರೈಲು. ನಮಗೆ ಹಾಗೆ ಅನ್ನಿಸುತ್ತೆ ಅಷ್ಟೇ. ಅದನ್ನೇ ನೋಡ್ತಿರಬೇಡಿ ತಲೆ ಸುತ್ತು ಬರುತ್ತೆ." ಆದರೂ ಕಣ್ಣು ಎಳೆದುಕೊಂಡು ತೂಕಡಿಕೆ ಬರುವವರೆಗೂ ಶಾಂತ, ಲಲಿತ ಹೊರಗಿನ ದೃಶ್ಯಗಳನ್ನು ನೋಡುತ್ತಿದ್ದರು.

ಶಾಸ್ತ್ರಿಗೆ ಆತಂಕ.... ಹೊಸ ಜಾಗ.... ಅಲ್ಲಿ ಹೇಗೋ ಜನರು ಹೇಗೋ ಭಾಷೆಯೂ ಬೇರೆ. ತಾನು ಹೊರಟಿದ್ದಾಗಿದೆ. ಅಲ್ಲಿಯ ಪರಿಸರಕ್ಕೆ ಹೊಂದಿಕೊಳ್ಳಲೇ ಬೇಕು. ಆದರೂ, ಈ ದೂರ...... ಈ ಪ್ರಯಾಣ.. ಪಾಪ ಸಾತು ಇದನ್ನೆಲ್ಲಾ ಹೇಗೆ ತಡೆದುಕೊಳ್ತಾಳೋ.... ಸ್ನಾನವಿಲ್ಲ, ಊಟವಿಲ್ಲ. ಇವಳನ್ನು ಹೊರಡಿಸಬಾರ್ದಾಗಿತ್ತು... ಸೀತಾರಾಮನೂ, ಸಾತು ಇರಲಿ ಎಂದು ಹೇಳಲಿಲ್ಲ. ಸಾತು ಬಗ್ಗೆ ಕನಿಕರ ಮೂಡಿತು. ರೈಲು ಮತ್ತೊಂದು ನಿಲ್ದಾಣದಲ್ಲಿ ನಿಂತಿದ್ದಾಗ, ಹಾಲು ಹಣ್ಣುಗಳನ್ನು ತಂದು ಕೊಟ್ಟ.

"ಸಾತು ಫಲಾರ ಮಾಡಿ, ಮಲಕ್ಕೋ..... ಒಂದೆ ಸಮನೆ ಕೂತಿದ್ರೆ ಬೆನ್ನು ನೋವು ಬರುತ್ತೆ" ಅಂತ ಹೇಳಿ ಹಾಸಿಗೆಯ ಸುರುಳಿಯನ್ನು ಬಿಚ್ಚಿ ಕೊಟ್ಟ.

* * *

ಎರಡು ಟಾಂಗಾ ಮಾಡಿಕೊಂಡು ಅವರಿವರನ್ನು ಕೇಳಿಕೊಂಡು ಇವನ ಸಂಸಾರಕ್ಕೆಂದು ತೆರವು ಮಾಡಿಸಿಟ್ಟಿದ್ದ ಕಂಪೆನಿಯ ಮನೆಗೆ ಬಂದ. ಸಾಮಾನುಗಳನ್ನು ಇಳಿಸಿಕೊಡಲು ಕೂಲಿಯಾಳುಗಳು ಬಂದಿದ್ದರು. ಮೇಲುಸ್ತುವಾರಿಯ ವ್ಯಕ್ತಿಯೊಬ್ಬ ಬಂದು, "ಸಲಾಂ ಸಾಬ್" ಎಂದು ಹೇಳಿ, ಮನೆಯ ಮುಂಬಾಲಿಗೆ ಹಾಕಿದ್ದ ಬೀಗವನ್ನು ತೆಗೆದುಕೊಟ್ಟ, ಸಾಮಾನುಗಳನ್ನು ಒಳಗೆ ಇರಿಸಿದ್ದಾಗಿತ್ತು. ಲಕ್ಷ್ಮಿ ಮನೆಯ ಮುಂದಿನ ವರಾಂಡದಲ್ಲಿ ನಿಂತು ಅಕ್ಕ ಪಕ್ಕ ನೋಡಿದಳು. ಮುಖದಲ್ಲಿ ಸಮಾಧಾನದ ಗೆರೆಗಳು ಕಂಡು ಬಂದವು. ಅಕ್ಕ ಪಕ್ಕದ ಮನೆಯವರು ಹೊಸದಾಗಿ ಬಂದವರನ್ನು ಮರೆಯಲ್ಲಿ ನಿಂತು ನೋಡುತ್ತಿದ್ದರು.

"ಎಲ್ರೂ ನಡೀರಿ ಒಳ್ಗೇ...." ಶಾಸ್ತ್ರಿ ಅವಸರಿಸಿದ. ಎಲ್ಲರೂ ಒಳಗೆ ಬಂದರು.

ಪ್ರಯಾಣದ ಆಯಾಸವನ್ನು ಬಗೆಹರಿಸಿಕೊಳ್ಳಲು ಕುಳಿತರು. ಸಮೀಪದಲ್ಲಿದ್ದ ಮೆಸ್‌ನಿಂದ ಕಾಫಿಯನ್ನು ಹಾಲನ್ನೂ ತಿಂಡಿಯನ್ನೂ ತರಿಸಿದ.

"ನಾನು ಮೊದಲು ಸ್ನಾನ ಮಾಡಿ ಬಿಡ್ತೀನಿ" ಎನ್ನುತ್ತಾ ಸಾತು ಬಚ್ಚಲು ಮನೆಯ ಕಡೆಗೆ ನಡೆದಳು. ಧಾರಾಕಾರವಾಗಿ ಸುರಿಯುತ್ತಿದ್ದ ನಲ್ಲಿಯ ನೀರನ್ನು ಹೊಯ್ದುಕೊಂಡು, ಪ್ರಯಾಣದ ಕೊಳೆಯನ್ನು ತೊಳೆದುಕೊಂಡು ಆಯಾಸವನ್ನು ಪರಿಹರಿಸಿಕೊಂಡಳು.

"ಅತ್ಗೇಗೇನೋ ತಣ್ಣೀರು ಅಭ್ಯಾಸವಾಗಿದೆ. ನಾವು ಏನ್ಮಾಡೋದು?" ಲಕ್ಷ್ಮಿ ಪ್ರಶ್ನಿಸಿದಳು.

"ಮಕ್ಕಳಿಗೆ ಕೈಕಾಲು ಮುಖ ತೊಳ್ಸು. ಸಾಕು. ನಾನೂ ತಣ್ಣೀರ್ನಲ್ಲೇ ಮಾಡ್ತೀನಿ ಸ್ಟವ್ ತೆಗೆದು, ಸೀಮೆ ಎಣ್ಣೆ ಹಾಕಿ ಹಚ್ಚಿಸೋಕೆ ಸಮಯ ಬೇಕು... ಅಲ್ಲೀವರ್‍ಗೂ ಕಾಯ್ತೀಯಾ....?

"ಸಾಮಾನುಗಳ ಕಟ್ಟನ್ನು ಬಿಚ್ಚುವ ಮೊದಲು, ಮನೇನ ಚೆನ್ನಾಗಿ ಕಸ ಗುಡಿಸಿ ಒರೆಸ್ಬೇಕು. ವಾಚಮನ್ ಇದ್ನಲ್ಲ, ಅವನನ್ನು ಕೇಳಿ ಪೊರಕೆ ಬಕೇಟುಗಳನ್ನು ತರಿಸ್ಕೊಡಿ. ಶಾಸ್ತ್ರಿ ವಾಚಮೆನ್‌ನ್ನು ಕರೆದ.

* * *

ಹೀಗೆ ಹೊಸ ಜೀವನ ಪ್ರಾರಂಭವಾಗಿತ್ತು. ಕಟ್ಟನ್ನು ಬಿಚ್ಚಿ ಬೇಕು ಬೇಕಾದ ಸಾಮಾನುಗಳನ್ನು ತೆಗೆದಿದ್ದು ಆಗಿತ್ತು. ನಿಧಾನವಾಗಿ ಅಲ್ಲಿಯ ಜೀವನಕ್ಕೆ ಹೊಂದಿಕೊಳ್ಳಲಾರಂಭಿಸಿದರು.

ಅಕ್ಕ ಪಕ್ಕದ ಮನೆಯ ಹೆಂಗಸರು ಬಂದು ನೋಡಿ ಕೈ ಮುಗಿದಿದ್ದರು. ಬರೀ ಮೂಕ ಸಂಭಾಷಣೆ. ಕೆಂಪು ಸೀರೆಯನ್ನುಟ್ಟು ತಲೆಯ ಮೇಲೆ ಸೆರಗನ್ನು ಹೊದ್ದಿರುವ ಸಾತಕ್ಕನ ಬಗ್ಗೆ ಅತೀವ ಕುತೂಹಲ. ಆದರೆ, ಯಾಕೆ ಏನು ಎಂದು ಕೇಳಿ ತಿಳಿದುಕೊಳ್ಳುವುದಕ್ಕೆ ಆಸ್ಪದವಿಲ್ಲ. ತಾನೊಂದು ಕುತೂಹಲದ ವಸ್ತು ಅಂತ ಅನ್ನಿಸಿದಾಗ ಸಾತಕ್ಕ ಮುಜುಗರಗೊಂಡಿದ್ದಳು. ಆದರೆ ಅದನ್ನೆಲ್ಲ ಎದುರಿಸುವ ಮನಸ್ಥೈರವೂ ಇತ್ತು.

ಲಕ್ಷ್ಮಿಗೆ ಮನೆಯ ಕೆಲಸ ಕಾರ್ಯಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ಸಮಯ ಕಳೆದು ಹೋಗುತ್ತಿತ್ತು. ಅಲ್ಲದೇ ತಾನು ಮೂರನೇ ಮಗುವಿಗೆ ಗರ್ಭವತಿ ಯಾಗಿರುವ ಸೂಚನೆಗಳು ಕಂಡು ಬಂದು ಆತಂಕವೂ ಹೆಚ್ಚಾಗಿತ್ತು. ಪರಸ್ಥಳ, ಇಲ್ಲಿ ತನಗೆ ಹೆರಿಗೆ ಮಾಡಿಸುವವರ್‍ಯಾರು, ಬಾಣಂತನ ಹೇಗೆ ನಡೆಯುತ್ತದೆ. ಈಗ ತಕ್ಷಣಕ್ಕೆ ಅಣ್ಣನ ಮನೆಗೆ ಹೋಗುವಂತೆಯೂ ಇಲ್ಲ.... ಈ ಆತಂಕಗಳು ಕಾಡುತ್ತಿದ್ದವು.

ಶಾಂತ ಹಾಗೂ ಲಲಿತಳನ್ನು ಹತ್ತಿರದ ಪ್ರಾಥಮಿಕ ಶಾಲೆಗೆ ಸೇರಿಸಲಾಗಿತ್ತು.

ಅಲ್ಲಿಯ ಸ್ಥಳೀಯ ಮಕ್ಕಳೊಡನೆ ಹಿಂದಿಯನ್ನು ಅತಿ ಬೇಗ ಕಲಿತು ಬಿಟ್ಟರು. ಮಗ್ಗಿ, ಬಾಯಿ ಪಾಠ, ಪುಸ್ತಕಗಳು ಬರಹ ಎಲ್ಲಾ ಹಿಂದಿ ಮಯ. ಚಿಕ್ಕವರಿಗೆ ಏನೂ ಕಷ್ಟವೆನಿಸಲಿಲ್ಲ.

ಸಾತಕ್ಕನೂ ಅಲ್ಪ ಸ್ವಲ್ಪ ಹಿಂದಿಯನ್ನು ಕಲಿಯಲು ಪ್ರಯತ್ನ ಪಟ್ಟಿದ್ದಳು. ಅಕ್ಕ ಪಕ್ಕದ ಹೆಂಗಸರೊಡನೆ ಮಾತನಾಡುವಾಗ ಅವರಿಗೆ ತಮಾಷೆ ಎನಿಸುತ್ತಿತ್ತು. ಆದರೆ ರಾಮಾಯಣ ಮಹಾಭಾರತ ಮುಂತಾದ ಪುಣ್ಯ ಕಥೆಗಳ ಶ್ಲೋಕವನ್ನು ಹೇಳುವಾಗ ಸಾತಕ್ಕನ ಬಗ್ಗೆ ಅತೀವ ಗೌರವಾದರಗಳು ಹುಟ್ಟಿಕೊಂಡವು. "ಮಾತಾಜೀ ಪ್ರಣಾಮ್" ಎಂದು ಗೌರವ ವಿಶ್ವಾಸಗಳಿಂದ ಕೈ ಮುಗಿದು ವಂದಿಸುತ್ತಿದ್ದರು.

ಕೆಲವೇ ದಿನಗಳಲ್ಲಿ ಲಕ್ಷ್ಮಿಗೆ ಗರ್ಭಪಾತವಾಗಿತ್ತು. "ಇಲ್ಲಿಯ ಹವಾಮಾನ ನನಗೆ ಒಗ್ಗಲಿಲ್ಲ. ಈ ಸಲವಾದರೂ ಗಂಡು ಮಗು ಹುಟ್ಟುತ್ತೆ ಅಂತ ಅಂದ್ಕೊಂಡಿದ್ದೆ." ಲಕ್ಷ್ಮಿ ಪೇಚಾಡಿದಳು.

ದುಃಖಿಸ್ಬೇಡ ಲಕ್ಷ್ಮಿ... ದೇವರ ಇಚ್ಛೆ ಹೇಗಿದೆಯೋ ಹಾಗೆ ಆಗುತ್ತೆ. ನೀನು ಆಯಾಸ ಮಾಡ್ಕೋಬೇಡ. ನಿನ್ನ ಆರೋಗ್ಯದ ಕಡೆ ಗಮನಕೊಡು. ನಾನು ಎಲ್ಲವನ್ನೂ ನೋಡಿಕೊಳ್ತೀನಿ" ಸಾತಕ್ಕ ಸಾಂತ್ವನ ಹೇಳಿ ಧೈರ್ಯವನ್ನು ತುಂಬಿದ್ದಳು.

"ಅಲ್ಲಾ ಅತ್ತೇ, ದೇಶ ಹೊಸದು, ಭಾಷೆ ತಿಳೀದು, ನೀವು ಎಷ್ಟು ಧೈರ್ಯವಾಗಿದೀರಲ್ಲ, ನಂಗೆ ಆಶ್ಚರ್ಯ ಆಗುತ್ತೆ."

"ಪರಿಸ್ಥಿತಿ ಎಲ್ಲವನ್ನು ಎದುರಿಸುವ ಶಕ್ತಿಯನ್ನು ಕೊಡುತ್ತೆ ಲಕ್ಷ್ಮೀ..... ಇಲ್ಲಿಯವರೂ ನಮ್ಮವರೇ ಅಂತ ಅಂದ್ಕೊಂಡಾಗ ಮನಸ್ಸಿಗೆ ಹುಮ್ಮಸ್ಸು ಸಿಗುತ್ತೆ."

"ಆದ್ರೂ ನಿಮ್ಮ ಮಡಿ ಹಾಳಾಯ್ತೇನೋ ಅದಕ್ಕೆ ನಾವೇ ಕಾರಣವೇನೋ ಅಂತ ಬೇಸರವಾಗುತ್ತೆ ಅತ್ಗೇ."

"ನನ್ನ ಮಡಿಗೆ ಏನೂ ಕಡಿಮೆ ಆಗಿಲ್ಲ.... ಮೈಲಿಗೆ ಆದರೆ ಏನಾಯ್ತು? ಅದಕ್ಕೆ ಶುದ್ಧಿ ಮಾಡ್ಕೊಂಡ್ರೆ ಆಯ್ತು. ನಾನೆಂದಾದ್ರು ಗೊಣಗಿದೀನಾ?"

"ಇಲ್ಲ ಅತ್ಗೇ... ನಿಮ್ಮ ಗುಣ ದೊಡ್ಡದು."

"ಸಾಕು ಹೊಗಳಿದ್ದು, ಈಗ ಹಾಲನ್ನು ಕುಡಿ ಸಜ್ಜಿಗೆಯನ್ನು ಮಾಡಿಕೊಡ್ತೀನಿ. ದೇಹಕ್ಕೆ ಶಕ್ತಿ ಬರುತ್ತೆ......." ಎಂದು ಹೇಳಿದ್ದಳು.

"ಈ ಅತ್ತಿಗೆಯೂ ನನ್ನೊಂದಿಗೆ ಇಲ್ಲದಿದ್ರೆ ತಾನೇನು ಮಾಡ್ಬೇಕಾಗಿತ್ತು? ಗಂಡನಿಗೆ ಫ್ಯಾಕ್ಟರಿಯ ಕೆಲಸಗಳು, ಮಕ್ಕಳು ಚಿಕ್ಕವರು. ತನಗೆ ಶುಶ್ರೂಷೆ ಮಾಡುವವರ್‍ಯಾರಿದ್ದರು? ಲಕ್ಷ್ಮಿಯ ಕಣ್ಣುಗಳು ಆತ್ಮೀಯತೆಯಿಂದ ತೇವಗೊಂಡವು.

* * *

ಮಕ್ಕಳ ಸ್ಕೂಲಿಗೆ ರಜ ಇದ್ದಾಗ, ಗುಂಡಣ್ಣ ಹೆಂಡತಿ ಮಕ್ಕಳು ಹಾಗೂ

ಸಾತಕ್ಕನೊಡನೆ ಮೊದಲ ಭಾರಿಗೆ ಕಾಶೀ ಯಾತ್ರೆ ಮಾಡಿದ. ಗಯಾ, ಪ್ರಯಾಗಕ್ಕೆ ಕರೆದುಕೊಂಡು ಹೋದ. ಗಂಗಾಸ್ನಾನ ಮಾಡಿ ಸಾತಕ್ಕ ತೃಪ್ತಿಗೊಂಡಳು. ತ್ರಿವೇಣಿ ಸಂಗಮದಲ್ಲಿ ಬಾಗಿನವನ್ನು ಕೊಟ್ಟಿದ್ದಾಗಿತ್ತು. ಶಾಸ್ತ್ರಿ ಗಯಾದಲ್ಲಿ ತನ್ನ ಪಿತೃಗಳಿಗೆ ತರ್ಪಣವನ್ನು ಕೊಟ್ಟು ಅವರ ಆತ್ಮಗಳಿಗೆ ತೃಪ್ತಿಯನ್ನು ಕೊಟ್ಟ.

ಈ ಯಾತ್ರೆಗೋಸ್ಕರ ನಾನು ಹಂಬಲಿಸಿದ್ದೆ ಗುಂಡಣ್ಣ. ನನ್ನ ಜನ್ಮ ಸಾರ್ಥಕವಾಯ್ತು. ಇನ್ನು ನನ್ನ ಉಸಿರು ನಿಂತು ಹೋದ್ರೂ ನಂಗೆ ಚಿಂತೆ ಇಲ್ಲ. ಕಾಶೀಯಾತ್ರೆ ಮಾಡಿಸಿದ ಪುಣ್ಯ ನಿನ್ನನ್ನ ಕಾಪಾಡಲಿ" ಸಾತಕ್ಕ ಹೃತ್ಪೂರ್ವಕವಾಗಿ ಹೇಳಿದಳು.

"ಥೂ ಇದೇನು ಅಪದ್ಧದ ಮಾತು. ಈ ಕಡೆ ಇರೋವಾಗ ಇನ್ನೂ ಆದಾಗಲೆಲ್ಲಾ ನಿನ್ನನ್ನು ಇಲ್ಲಿಗೆ ಕರ್‍ಕೊಂಡು ಬಂದು ಗಂಗಾ ಸ್ನಾನಾನ ಮಾಡಿಸ್ತೀನಿ........ ನಿನ್ನಿಂದ ನನಗೂ ಈ ಅವಕಾಶ ಲಭ್ಯ ಆಗಿದೆ. ಇಲ್ದಿದ್ರೆ ಇಲ್ಲಿಗೆ ಬರುವ ಮಾತೆಲ್ಲಿತ್ತು?"

"ಇದನ್ನೇ ಧರ್ಮ ಕರ್ಮ ಸಂಯೋಗ ಅಂತ ಅನ್ನೋದು. ತಿರುಮಕೂಡ್ಲು ಸಂಗಮದಲ್ಲೇ ಸ್ನಾನ ಮಾಡುವ ಯೋಗ ಸಿಕ್ಕಿರಲಿಲ್ಲ. ನಂಗೆ..... ನೀನು ನಿನ್ನ ಫ್ಯಾಕ್ಟರಿಯವರೇ ಈ ಯಾತ್ರೆಗೆ ಕಾರಣರು.... ನಿನ್ನ ಜನರಲ್ ಮ್ಯಾನೇಜರ್‌ಗೆ ಈ ಶ್ರೇಯಸ್ಸು ಸೇರುತ್ತದೆ."

ಶಾಸ್ತ್ರಿ ಉತ್ತರಿಸಲಿಲ್ಲ.... ಜನರಲ್ ಮ್ಯಾನೇಜರ್ ವಾಪಸ್ಸು ಮಂಡ್ಯಕ್ಕೆ ಹೊರಟು ಹೋಗಿದ್ದ. ಅವನಿಗೆ ಇಲ್ಲಿ ಸರಿ ಹೋಗಿರಲಿಲ್ಲ. ತನ್ನನ್ನು ಕರೆತಂದು ಸಿಕ್ಕಿಸಿದ ಎಂದು ಹೇಳಲು ಇಷ್ಟವಾಗಲಿಲ್ಲ. ಅವನ ಬದಲಿಗೆ ಬಂದಿದ್ದ ಜನರಲ್ ಮ್ಯಾನೇಜರ್‌ಗೆ ಶಾಸ್ತ್ರಿಯ ಮೇಲೆ ಒಲವು ಸ್ನೇಹ ಇರಲಿಲ್ಲ. ಮೇಲಾಗಿ, ಸಾತಕ್ಕ ಅಥವಾ ಲಕ್ಷ್ಮಿಯಿಂದ ಯಾವ ಆಕ್ಷೇಪಣೆಯೂ ಇರಲಿಲ್ಲ. ತನ್ನ ಪಾಡಿಗೆ ತಾನು ತನ್ನ ಕೆಲಸವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದ.

ಆದರೆ ಲಕ್ಷ್ಮಿಗೆ ಗರ್ಭಪಾತವಾದ ಬಗ್ಗೆ ಸ್ವಲ್ಪ ಮಟ್ಟಿಗೆ ಮನಸ್ಸು ಬೇಸರಗೊಂಡಿತ್ತು. ಒಂದೆರಡು ಗಂಡು ಮಕ್ಕಳಾಗಲಿ ಎನ್ನುವ ಬಯಕೆ ಅವನಲ್ಲಿಯೂ ಇತ್ತು. ಅವನು ಹೆಣ್ಣು ಮಕ್ಕಳ ವಿರೋಧಿ ಅಲ್ಲ. ಆದರೂ ಹೆಣ್ಣು ಮಕ್ಕಳು ಬೇಗ ಬೆಳೆದು ಬಿಡ್ತಾರೆ. ಮದುವೆ ಮಾಡಿ ಅವರವರ ಗಂಡಂದಿರ ಮನೆಗೆ ಕಳಿಸಿಕೊಡಲೇ ಬೇಕು. ವೃದ್ಧಾಪ್ಯ ಸಮೀಪಿಸುವಷ್ಟರಲ್ಲಿ ತನ್ನೆತ್ತರ ಬೆಳೆದು ನಿಲ್ಲುವ ಗಂಡು ಮಕ್ಕಳಿರಬೇಕು. ಆಗ ಒಂಥರಾ ಜೀವನ ಸಾರ್ಥಕವಾಗುತ್ತೆ.... ಇದು ಅವನ ಅನಿಸಿಕೆ.

ಆದರೆ, ಮತ್ತೂ ಒಂದು ಬಾರಿ ಲಕ್ಷ್ಮಿಗೆ ಗರ್ಭಪಾತವಾಗಿತ್ತು. ಅವಳಿಗೆ ಇಲ್ಲಿಯ ಹವಾ ಒಗ್ಗಿಲ್ಲ. ಅಥವಾ ಮನಸ್ನಲ್ಲಿ ಏನೋ ಕಳವಳ ಇರಬೇಕೆಂದುಕೊಂಡ ಅವಳೊಡನೆ ಮಾತಾಡಿದ.

"ನಿನ್ನ ತವರು ಮನೇಲಿ ಇದ್ದು ಬರ್ಬೇಕು ಅಂತ ಹಂಬಲ ಇದ್ರೆ ಹೋಗ್ಬಾ... ಕರ್ಕೊಂಡು ಹೋಗಿ ಬಿಟ್ಟು ಬರ್ತೀನಿ."

"ನೋಡೋಣ ಸುಮ್ಸುಮ್ನೆ ಈಗ್ಯಾಕೆ, ರೈಲು ಛಾರ್ಜು ದಂಡ ಅಲ್ಲದೇ ನಾನು ಬಂದ ಹೊರತು ಆಗ್ಲಿಲ್ಲ ಅಂತ ಕೇಳೋದು ಯಾರಿದಾರೆ ಅಲ್ಲಿ? ನನಗೆ ಯಾವ ಹಂಬಲವೂ ಇಲ್ಲ ಬಿಡಿ". ಗಂಭೀರವಾಗಿ ಹೇಳಿದ್ದಳು.

"ಸರಿ ನಿನ್ನಿಷ್ಟ ಅಕ್ಕ ಪಕ್ಕದ ಹೆಂಗಸರ ಹತ್ತಿರ ಮಾತಾಡಿ ಇಲ್ಲಿಯ ವಾತಾವರಣಕ್ಕೆ ಹೇಗೆ ಒಗ್ಗಿಕೊಳ್ಳಬೇಕು ಅಂತ ತಿಳ್ಕೋ...."

"ನಂಗೇನಾಗಿದೆ? ಸರಿಯಾಗೇ ಇದೀನಿ. ಭಾಷೇನೇ ಗೊತ್ತಿಲ್ಲ. ಏನು ಮಾತಾಡೋದು?"

"ಸಾತೂನ ನೋಡು ಎಷ್ಟು ಹಾಯಾಗಿದಾಳೆ?" ಮಡಿ ಹುಡಿ ಎಲ್ಲಕ್ಕೂ ಹೊಂದಿಕೊಂಡು ಬಿಟ್ಟಿದ್ದಾಳೆ. ಆರೋಗ್ಯದಲ್ಲಿ ಕೂಡಾ ವ್ಯತ್ಯಾಸವಾಗಿಲ್ಲ."

"ಅವರಿಗೇನು ಚಿಂತೆ?..... ಗಂಡ ಇಲ್ಲ ಮಕ್ಕಳಿಲ್ಲ. ಸಂಸಾರದ ಬಂಧನವಿಲ್ಲ. ಆಸೆ ಆಕಾಂಕ್ಷೆಗಳಿಲ್ಲ.... ನನಗೆ ತಾನೇ ಚಿಂತೆ. ಈ ಎರಡು ಸಲವಾದ್ರೂ ಗಂಡು ಮಕ್ಕಳಾಗುತ್ವೆ ಅಂತ ತುಂಬಾ ಆಸೇನ ಇಟ್ಕೊಂಡಿದ್ದೆ. ಯಾಕೆ ಹೀಗಾಯ್ತೋ? ಯಾರಾದ್ರೂ ಡಾಕ್ಟರನ್ನಾದ್ರೂ ಕೇಳೋಣ ಅಂತಾದ್ರೆ ಆಸ್ಪತ್ರೆ ಎಲ್ಲಿದೆಯೋ? ಹೆಂಗಸು ಡಾಕ್ಟರು ಇದಾಳೋ ಇಲ್ವೋ? ನೀವು ಯಾರನ್ನಾದ್ರೂ ವಿಚಾರಿಸ್ತೀರಾ?...."

"ನಾನು ಹೇಗೆ ವಿಚಾರಿಸಲಿ?" ಫ್ಯಾಕ್ಟರಿಯ ಡಿಸ್ಪೆನ್ಸರೀಲಿ ಇರೋನು ಒಬ್ಬನೇ ಡಾಕ್ಟರ್ರು.. ಮಿಡ್‌ವೈಫು ಕೂಡಾ ಇದ್ದ ಹಾಗೆ ಕಾಣಲ್ಲ. ಅದಕ್ಕೇ ಹೇಳಿದ್ದು ಅಕ್ಕ ಪಕ್ಕದ ಹೆಂಗಸ್ರನ್ನು ವಿಚಾರಿಸು ಅಂತ...."

"ಸರಿ ನಂಗೆ ಸ್ವಲ್ಪ ಹಿಂದೀನ ಕಲಿಸಿಕೊಡಿ. ಏನು ಕೇಳ್ಬೇಕು. ಹೇಗೆ ಕೇಳ್ಬೇಕು ಅಂತ ಅಭ್ಯಾಸ ಮಾಡ್ಕೊಳ್ತೀನಿ" ಲಕ್ಷ್ಮಿ ನಗುತ್ತಾ ಹೇಳಿದಳು.

"ನನಗೆಲ್ಲಿದೆ ಬಿಡುವು? ಶಾಂತನ್ನ ಕೇಳು, ಹೇಳಿಕೊಡ್ತಾಳೆ."

"ಶಾಂತನ್ನ ಇದನ್ನೆಲ್ಲಾ ಹೇಳ್ಕೊಡು ಅಂತ ಕೇಳುಕ್ಕಾಗುತ್ತಾ?" ಈ ಹೊತ್ನಲ್ಲೇ ಹೇಳ್ಕೊಡಿ. ಮಕ್ಕಳೂ ಮಲಗಿರ್ತಾರೆ.... ಅತ್ಗೇನೂ ಮಲಗಿರ್ತಾರೆ...."

"ನನಗೂ ನಿನ್ಜೊತೆ ಕಾಲ ಕಳೆಯೋಕೆ ಇದೇ ಸಮಯ ಸಿಗೋದು. ಆದರೆ ಇದು ಹಿಂದೀ ಪಾಠವನ್ನು ಹೇಳಿಕೊಡುವ ಸಮಯ ಅಲ್ಲ. ಏನಿದ್ರೂ ಗಂಡ ಹೆಂಡ್ತಿ ಒಟ್ಟಿಗೇ ಮಲಗುವ ಸಮಯ ಮಾತಾಡ್ಬೇಡ – ಸಾತೂಗೆ ಎಚ್ಚರವಾಗುತ್ತೆ" ಶಾಸ್ತ್ರಿ ಎಚ್ಚರಿಸಿದ. ಲಕ್ಷ್ಮಿ ಸುಮ್ಮನಾದಳು.

*   *   *

ಕೆಲವೇ ತಿಂಗಳುಗಳಲ್ಲಿ ಲಕ್ಷ್ಮಿ ತಕ್ಕ ಮಟ್ಟಿಗೆ ಹಿಂದಿಯಲ್ಲಿ ಮಾತನಾಡುವುದನ್ನು

ಕಲಿತಿದ್ದಳು. ಸಾತಕ್ಕನೂ ಹರುಕು ಮುರುಕು ಹಿಂದಿಯನ್ನು ಕಲಿತಿದ್ದಳು. ಒಮ್ಮೊಮ್ಮೆ ಅವಳಿಗೆ ತನಗೇ ನಗು ಬರುತ್ತಿತ್ತು. ವ್ಯಾಕರಣವೋ ದೇವರಿಗೇ ಪ್ರೀತಿ. ಶಾಂತ ತಮಾಷೆ ಮಾಡುತ್ತಿದ್ದಳು.

"ಈ ರೀತಿ ಹಿಂದೀಲಿ ಮಾತಾಡೋ ಬದ್ಲು ಸುಮ್ಮನಿರೋದೇ ವಾಸಿ ಎಲ್ರೂ ನಗ್ತಾರೆ ಅಷ್ಟೇ."

"ನಕ್ಕರೆ ನಗ್ಲಿ ಬಿಡು ಅವರ ಹಲ್ಲುಗಳೇ ಕಾಣುತ್ವೆ. ನಾನೀಗ ಸರಿಯಾಗಿ ಕಲಿತು ಏನಾಗ್ಬೇಕಿದೆ? ಪರೀಕ್ಷೆಗೆ ಕಟ್ಬೇಕೆ ಪಾಸು ಮಾಡ್ಬೇಕೆ?" ದಬಾಯಿಸುತ್ತಿದ್ದಳು.

"ಹೌದು ಶಾಂತ ಅವರು ಇಷ್ಟು ಕಲಿತಿರೋದೇ ಹೆಚ್ಚು. ಈ ಸಾರಿ ಬೆಂಗಳೂರಿಗೆ ಹೋದಾಗ ನೋಡ್ತಿರು ಎಲ್ರೂ ಅತ್ಗೇನ ಬಾಯ್ತುಂಬಾ ಹೊಗಳ್ತಾರೆ."

"ನಾವು ಯಾವಾಗ ಬೆಂಗಳೂರಿಗೆ ಹೋಗ್ತಿದೀವಿ?" ಲಲಿತ ಕೇಳಿದ್ದಳು. ಲಕ್ಷ್ಮಿ ಸಾತಕ್ಕನ ಕಡೆ ನೋಡಿದಳು. ಇಬ್ಬರೂ ಉತ್ತರಿಸಲಿಲ್ಲ.

ಲಕ್ಷ್ಮಿ ಮತ್ತೆ ಗರ್ಭಿಣಿಯಾಗಿದ್ದಳು. ಹೆರಿಗೆಗೆ ಬೆಂಗಳೂರಿಗೆ ಹೋಗುವುದೆಂದು ನಿರ್ಧಾರವಾಗಿತ್ತು. ದಿನಾ ಆಗೋವರ್ಗೂ ಕಾಯೋದು ಬೇಡ, ಪ್ರಯಾಣದಲ್ಲಿ ಆಯಾಸ ಆಗುತ್ತೆ. ಮುಂಚಿತವಾಗಿಯೇ ಹೋಗೋದೆಂದು ಶಾಸ್ತ್ರಿ ಹೇಳಿದ್ದ.

"ಮಕ್ಕಳ ಸ್ಕೂಲು ತಪ್ಪುತ್ತಲ್ಲ, ಏನ್ಮಾಡೋದು?"

ಏನ್ಮಹಾ ಕಳೆದು ಹೋಗೋದು? ಏನು ಮೆಟ್ರಿಕ್ ಪರೀಕ್ಷೇನೆ? ಮೇಷ್ಟ್ರಿಗೆ ಹೇಳ್ತೀನಿ. ನಾನು ರಜಕ್ಕೆ ಹಾಕ್ಕೊಂಡಿದೀನಿ, ಎಲ್ರೂ ಹೊರಡೋದೇ."

"ನಿಂಗೆ ಕಷ್ಟ ಆಗುತ್ತಲ್ಲೋ ಗುಂಡಣ್ಣ."

"ಏನೂ ಕಷ್ಟ ಆಗುಲ್ಲ, ನಂಗೂ ಅನ್ನ ಸಾರು ಮಾಡುಕ್ಕೆ ಬರುತ್ತೆ, ಸಮಯಾ ಅಂದ್ರೆ ಮೆಸ್ ಇದೆ... ನೀನೇನೂ ಯೋಚಿಸ್ಬೇಡ."

ಕೆಲವೇ ದಿನಗಳಲ್ಲಿ ಬೆಂಗಳೂರಿಗೆ ಎಲ್ಲರೂ ಹೊರಟಿದ್ದರು. ಅಕ್ಕಪಕ್ಕದ ಹೆಂಗಸರು ಬಂದು ಮಾತನ್ನಾಡಿಸಿಕೊಂಡು ಹೋಗಿದ್ದರು.

ಲಕ್ಷ್ಮಿಯನ್ನು ಶಾಂತಳೊಂದಿಗೆ ಅವಳ ಅಣ್ಣನ ಮನೆಯಲ್ಲಿ ಬಿಟ್ಟು, ಸಾತಕ್ಕ ಹಾಗೂ ಲಲಿತಳನ್ನು ಸೀತಾರಾಮನ ಮನೆಗೆ ಕರೆತಂದು ಬಿಟ್ಟ.

"ನಾನು ದೊಡ್ಡಪ್ಪನ ಮನೇಲಿರಲ್ಲ. ಅಮ್ಮನ ಜತೇಲಿ ಅತ್ತೆ ಮನೇಲಿರ್ತೀನಿ" ಲಲಿತ ರಗಳೆ ತೆಗೆದಳು.

"ಸುಮ್ಮನೇ ಹೇಳಿದಷ್ಟು ಕೇಳು ಲಲಿತಾ, ಹಠ ಮಾಡ್ಬೇಡ, ನಿನ್ನ ಅಮ್ಮಂಗೆ ಕಷ್ಟ ಆಗುತ್ತೆ."

ಶಾಂತಂಗೆ ಅಮ್ಮನ ಜೊತೆ ಮಾವನ ಮನೆಯಲ್ಲಿರುವುದು ಇಷ್ಟವಿರಲಿಲ್ಲ. ಆದರೂ ಮಾತನ್ನಾಡದೇ ಸುಮ್ಮನಾದಳು. ಅಪ್ಪ ಎಲ್ಲರನ್ನೂ ಇಲ್ಲಿ ಬಿಟ್ಟು ಒಬ್ಬರೇ

ವಾಪಸ್ಸು ಊರಿಗೆ ಹೋಗುತ್ತಿರುವುದು ಗೊಂದಲವಾಗಿತ್ತು.

ಶಾಸ್ತ್ರಿ ಹೆಂಡತಿಯ ಕೈಗೆ ಹಾಗೇ ಸಾತಕ್ಕನ ಕೈಗೆ ಒಂದಿಷ್ಟು ಹಣವನ್ನು ಕೊಟ್ಟು "ನಾವು ಇವರಿಗೆ ಹೊರೆ ಆಗಿದೀವಿ ಅಂತ ಅನ್ನಿಸ್ಬಾರ್ದು ಸಣ್ಣ ಪುಟ್ಟ ಖರ್ಚುಗಳಿರುತ್ವೆ, ನಾನು ಮತ್ತೆ ದುಡ್ಡನ್ನು ಮನಿ ಆರ್ಡರ್ ಮಾಡ್ತೀನಿ" ಎಂದು ಹೇಳಿದ್ದ.

* * *

ಈ ಬಾರಿಯೂ ಲಕ್ಷ್ಮಿಗೆ ಹೆಣ್ಣು ಮಗುವಾಯಿತು. ಆ ಕ್ಷಣದಲ್ಲಿ ಅವಳು ತನ್ನ ಮಗುವನ್ನು ನೋಡಲು ಬಯಸಲಿಲ್ಲ. ವಿಷಯ ತಿಳಿದ ಕೂಡಲೇ ಸಾತಕ್ಕ ಲಲಿತಳನ್ನು ಕರೆದುಕೊಂಡು ಬಂದಿದ್ದಳು. ಲಕ್ಷ್ಮಿಯ ಉದಾಸೀನದ ಮುಖವನ್ನು ಕಂಡು ಸಾತಕ್ಕನಿಗೂ ಮರುಕ ಉಕ್ಕಿತ್ತು. ಲಕ್ಷ್ಮಿಯ ಅಣ್ಣ, ಗುಂಡಣ್ಣನಿಗೆ ಟೆಲಿಗ್ರಾಂ ಕೊಟ್ಟು ವಿಷಯವನ್ನು ತಿಳಿಸಿದ್ದ. ಅವನು ಸಾತಕ್ಕನಿಗೆ ಪತ್ರವನ್ನು ಬರೆದ. ಅವನಿಗೂ ಬೇಸರವಾಗಿದೆಯೆಂದು ಅವನ ಪತ್ರದಿಂದಲೇ ತಿಳಿಯುವಂತಿತ್ತು.

"ನೀನು ಬೇಜಾರು ಮಾಡ್ಕೊಂಡ್ರೆ ನಿನ್ನ ಹೆಂಡತಿಯೂ ಬೇಸರ ಮಾಡ್ಕೊಳ್ತಾಳೆ... ಮಗುವಿನ ಮೇಲೆ ಮಮತೆಯೇ ಇಲ್ಲವಾಗುತ್ತೆ. ಇದರಲ್ಲಿ ಆ ಹಸುಗೂಸಿನ ತಪ್ಪೇನಿದೆ? ನೀನು ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ಲಕ್ಷ್ಮಿಗೆ ಕಾಗದವನ್ನು ಬರಿ" ಸಾತಕ್ಕ ತಿಳುವಳಿಕೆ ಹೇಳಿ ಪತ್ರವನ್ನು ಬರೆದಿದ್ದಳು.

ಗಂಡನಿಂದ ಮನಿ ಆರ್ಡರ್ ಹಾಗೂ ಪತ್ರ ಬಂದಿತ್ತು, ಲಕ್ಷ್ಮಿ ಪತ್ರವನ್ನು ಓದಿ ಕೊಂಡರೂ ಮನಸ್ಸಿಗೆ ಸಮಾಧಾನವಾಗಿರಲಿಲ್ಲ. ಆದರೆ ಗಂಡನಿಗೆ ಬೇಸರವಾಗಿಲ್ಲ ವೆಂದು ತಿಳಿದು ಮನಸ್ಸು ಹಗುರವಾಗಿತ್ತು. ಮೊದಲ ಬಾರಿಗೆ ಮಗುವಿನ ಮುಖವನ್ನು ಸರಿಯಾಗಿ ನೋಡಿದಳು. ಮುದ್ದು ಮುಖವನ್ನು ನೋಡಿ ನಿಟ್ಟುಸಿರುಗರೆದಳು.

ಒಂದು ತಿಂಗಳ ಬಾಣಂತನ ಕಳೆಯುತ್ತಿದ್ದಂತೆಯೇ ಲಕ್ಷ್ಮಿ ಗಂಡನಿಗೆ ಪತ್ರವನ್ನು ಬರೆದಳು. "ಇನ್ನೆಷ್ಟು ದಿನ ಅಣ್ಣನ ಮನೇಲಿರುವುದು ಅತ್ತಿಗೆ ಕೈಯಲ್ಲಿ ಸೇವೆ ಮಾಡಿಸಿಕೊಳ್ಳೋದು? ನಮ್ಮನ್ನು ಕರ್ಕೊಂಡು ಹೋಗಿ" ಎಂದು ತಿಳಿಸಿದ್ದಳು.

ಗುಂಡಣ್ಣ ಸೀತಾರಾಮನಿಗೆ ಪತ್ರವನ್ನು ಬರೆದ ನನಗೆ ಈಗ ರಜ ಸಿಕ್ಕುವುದಿಲ್ಲ. ಒಂದು ತಿಂಗಳು ಮಗು ಬಾಣಂತೀನ ನಿಮ್ಮ ಮನೇಲಿ ಇಟ್ಕೊಂಡಿರು. ರಜ ಸಿಕ್ಕ ಕೂಡಲೇ ಬಂದು ಕರ್ಕೊಂಡು ಹೋಗ್ತೀನಿ ಅಂತ.

ಕೆಲವೇ ದಿನಗಳ ನಂತರ, ಸೀತಾರಾಮ ಲಕ್ಷ್ಮಿಯನ್ನು ಮಗುವನ್ನು ತನ್ನ ಮನೆಗೆ ಕರೆದುಕೊಂಡು ಹೋಗಲೆಂದು ಬಂದ. ಬಾಣಂತನ ಮಾಡಿದ್ದಕ್ಕೆ ಕೃತಜ್ಞತೆಯನ್ನು ಹೇಳಿ, ಲಕ್ಷ್ಮಿನ ಅತ್ತಿಗೆಗೆ ಒಂದು ಸೀರೆಯನ್ನು ಉಡುಗೊರೆಯನ್ನಾಗಿ

ಕೊಡಿಸಿದ. ಲಕ್ಷ್ಮಿ ಅಚ್ಚರಿಗೊಂಡಿದ್ದಳು.

ಗಂಡಸರು ನಮಗೆ ಇದೆಲ್ಲ ಹೊಳೆಯೋದೇ ಇಲ್ಲ ಸಾತೂನೇ ಹೇಳಿ ಹಣವನ್ನು ಕೊಟ್ಟಳು. ಲಕ್ಷ್ಮಿ ಸಾತಕ್ಕನನ್ನು ಮನದಲ್ಲೇ ವಂದಿಸಿದಳು. ಅತ್ತಿಗೆ ಸಂತುಷ್ಟಳಾಗಿದ್ದಳು. "ಮುಂದಿನ ಬಾಣಂತನಕ್ಕೂ ಇಲ್ಲಿಗೇ ಬಾ ನನಗೆ ಏನೂ ತೊಂದರೆ ಇಲ್ಲ" ಎಂದು ಸಂತಸದಿಂದ ಹೇಳಿದಳು.

ಆದರೆ, ಲಕ್ಷ್ಮಿಯ ಮನಸ್ಸು ಮುದುರಿತ್ತು. ತಂಗಿ ಜಯಳ ನೆನಪಾಗಿತ್ತು. ಇವರೆಲ್ಲಾ ಮುಖ ನೋಡಿ ಮಣೆಯನ್ನು ಹಾಕುವ ಜನ. ಈಗ ನನ್ನ ಕೈಯಲ್ಲಿರುವ ಹಣಕ್ಕೆ ಇವಳು ಮರ್ಯಾದೆಯನ್ನು ಕೊಡುತ್ತಿರುವುದು ಎಂದುಕೊಂಡಳು. ಕಣ್ಣುಗಳು ತುಂಬಿದ್ದವು.

"ಅಳ್ಬೇಡ ಲಕ್ಷ್ಮಿ, ನಾವೂ ಶ್ರೀಮಂತರಲ್ಲ, ಇದ್ದುದರಲ್ಲಿ ನನಗೆ ತಿಳಿದಂತೆ ಬಾಣಂತವನ್ನು ಮಾಡಿದೀನಿ."

"ಹಾಗೆನ್ಬೇಡ ನಾಗು... ಈಗ ನೀನೇ ನನ್ನ ತಾಯಿಯ ಸಮಾನ" ಅತ್ತಿಗೆಯ ಕೈ ಹಿಡಿದು ವಿಶ್ವಾಸವನ್ನು ತೋರಿದಳು.

ನಾದಿನಿಯನ್ನು ದೇವರ ಮುಂದೆ ಕೂರಿಸಿ, ಸೋಬಲಕ್ಕಿಯನ್ನಿಟ್ಟು ಅರಿಶಿನ ಕುಂಕುಮವನ್ನು ತಾಂಬೂಲವನ್ನು ಕೊಟ್ಟಳು. ಶಾಂತಳ ಕೈಗೆ ಲಂಗದ ಬಟ್ಟೆಯನ್ನು ಉಡುಗೊರೆಯನ್ನಾಗಿ ಕೊಟ್ಟಳು.

ದೇವರಿಗೆ ಹಾಗೇ ಅಣ್ಣ ಅತ್ತಿಗೆಗೆ ನಮಸ್ಕರಿಸಿ, ಲಕ್ಷ್ಮಿ ಮಗುವನ್ನೆತ್ತಿಕೊಂಡು ಭಾವನೊಂದಿಗೆ ಹೊರಟಳು. ಮನೆಯ ಮುಂದೆ ಜಟಕಾಗಾಡಿ ನಿಂತಿತ್ತು. ಹಾಸಿಗೆ, ಟ್ರಂಕನ್ನು ಇಟ್ಟಾದ ಮೇಲೆ ಇವರುಗಳು ಹತ್ತಿ ಕುಳಿತರು. ಜಟಕಾ ಗಾಡಿ ರೈಲ್ವೇ ಸ್ಟೇಷನ್ನಿನ ಕಡೆಗೆ ಓಡಿತು.

* * *

ಮುಂಬಾಗಿಲಿನಲ್ಲಿ ಮಗು, ಬಾಣಂತಿಯನ್ನು ನಿಲ್ಲಿಸಿ ಆರತಿಯನ್ನೆತ್ತಿ ವಾರಗಿತ್ತಿ ಒಳಕ್ಕೆ ಬರ ಮಾಡಿಕೊಂಡಳು. ಸಾತಕ್ಕ ಸಂಭ್ರಮದಿಂದ ಮುಂದೆ ಬಂದು ಮಗುವನ್ನೆತ್ತಿಕೊಂಡಳು. ಎಲ್ಲರೂ ಮಗುವನ್ನು ಕುತೂಹಲದಿಂದ ಬಂದು ಬಂದು ನೋಡಿದರು.

"ಮಗು ತುಂಬಾ ಮುದ್ದಾಗಿದೆ ಲಕ್ಷ್ಮಿ. ಏನು ಹೆಸರನ್ನಿಡ್ಬೇಕು ಅಂತ ಅಂದ್ಕೊಂಡಿದೀಯ" ಓರಗಿತ್ತಿ ಕೇಳಿದಳು.

"ಏನೋ ಒಂದು ಸ್ಕೂಲಿಗೆ ಸೇರಿಸುವ ವೇಳೆಗೆ ಇಟ್ರಾಯ್ತು."

"ಅಂಥಾ ಉದಾಸೀನ ಯಾಕೆ ಲಕ್ಷ್ಮಿ, ನಿನಗೆ ಅಷ್ಟು ಬೇಡವಾದ್ರೆ ನಂಗೆ ಕೊಟ್ಬಿಡು. ನಮ್ಮನೇಲೋ ಬರೀ ಗಂಡು ಪಾಳ್ಯ..."

"ಹುಂ....... ನಮ್ಮ ಪಾಪೂನ ಯಾರ್ಗೂ ಕೊಡುಲ್ಲ. ನಮಗೇ ಬೇಕು." ಶಾಂತ ಮಗುವನ್ನು ಅವುಚಿಕೊಂಡಳು.

"ದೂರ ನಿಂತ್ಕೋ ಮೈಮೇಲೆ ಬಿದ್ರೆ ಮಗೂಗೆ ಪೆಟ್ಟಾಗುಲ್ವಾ......" ಬೆದರಿದ ಮಗು ಅಳಲು ಪ್ರಾರಂಭಿಸಿತ್ತು.

"ಅಳುವಾಗ್ಲೂ ಎಷ್ಟು ಮುದ್ದಾಗಿ ಅಳ್ತಿದೆ....... ರಾಣೀ..... ರಾಣೀ....... ನನ್ನ ಕಂದಾ....... ಸುಮ್ನಿರು......." ಸಾತಕ್ಕ ಮುದ್ದಿಸಿ ಸಮಾಧಾನಗೊಳಿಸಿದಳು.

"ಲಲಿತ, ಪದ್ಮಿನಿ, ರಾಗಿಣಿ ಅಂತಾ ಮೂರು ಜನ ಪ್ರಸಿದ್ಧ ನರ್ತಕಿಯರಿದ್ದಾರೆ. ಒಬ್ಬರಿಗಿಂತ ಒಬ್ಬರು ಚೆನ್ನಾಗಿದಾರೆ. ಹಾಗೇ ಈ ಅಕ್ಕ ತಂಗಿಯರು, ಒಬ್ಬರಿಗಿಂತ ಒಬ್ಬರು ರೂಪವತಿಯರು. ಈ ಮಗೂಗೆ ಪದ್ಮಿನಿ ಅಂತ ಹೆಸರನ್ನಿಡಿ... ಚೆನ್ನಾಗಿ ಒಪ್ಪುತ್ತೆ." ವಾರಗಿತ್ತಿ ಎಂದಳು.

"ಮತ್ತೆ.... ರಾಗಿಣಿ? ರಾಗಿಣಿ ಎಲ್ಲಿದ್ದಾಳೆ....?"

"ಬರ್ತಾಳೆ ಬಿಡು.... ಇನ್ನೊಬ್ಳು ಪುಟ್ಟ ತಂಗಿ......" ಸರ್ರನೆ ನಾಲಿಗೆಯನ್ನು ಕಚ್ಚಿಕೊಂಡು ಸಾತಕ್ಕನ ಕಡೆ ನೋಡಿ ಬಾಯ ಮೇಲೆ ಬೆರಳನ್ನಿಟ್ಟುಕೊಂಡಳು. ಸಾತಕ್ಕ ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡಿದಳು. ಆದರೂ ಲಕ್ಷ್ಮಿಗೆ ಅಕ್ಕ ಹೇಳಿದ್ದು ಕೇಳಿಸಿತ್ತು.

"ಅತ್ಗೇ ಈ ಮಕ್ಕಳನ್ನೆಲ್ಲ ಹೊರಕ್ಕೆ ಕಳಿಸಿ. ನಂಗೆ ಆಯಾಸ ಆಗ್ತಿದೆ. ನಾನು ಸ್ವಲ್ಪ ಹೊತ್ತು ಮಲಗ್ತೀನಿ." ಎಂದು ಹೇಳಿ ಮಲಗಿ ಬಿಟ್ಟಳು. ಗೋಡೆಯ ಕಡೆ ತಿರುಗಿದ್ದವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಅಕ್ಕ ಬೇಕೂಂತ ಹೀಗೆ ಹೇಳಿರಬಹುದೇ..... ಮೊದಲೇ ಮೂರು ಹೆಣ್ಣು ಮಕ್ಕಳು.... ಅಕ್ಕಂಗಾದರೋ ಮೂರು ಗಂಡು ಮಕ್ಕಳು.... ಈ ಅತ್ತೀಗೇಗದ್ರೂ ತಿಳೀಬೇಡ್ವೇ... ಹುಂ... ಯಾರನ್ನು ಅಂದ ಏನು ಪ್ರಯೋಜನ?.... ಸಾಲಾಗಿ ಈ ಹೆಣ್ಣು ಮಕ್ಕಳು ನನಗೇ ಹುಟ್ಬೇಕೆ....? ಎಲ್ಲರೂ ಆಡಿಕೊಳ್ಳುವ ಹಾಗೆ.. ಕಣ್ಣೀರನ್ನು ಒರೆಸಿಕೊಂಡಳು. ಸಾತಕ್ಕನಿಗೆ ಲಕ್ಷ್ಮಿ ಅಳುತ್ತಿರುವಳೆಂದು ಗೊತ್ತಾಗಿತ್ತು. ಆದರೆ ಎಲ್ಲರೆದುರಿಗೆ ಏನೆಂದು ಸಮಾಧಾನ ಹೇಳಿಯಾಳು?

ಅವರ ಮನೆಯಲ್ಲಿ ಒಂದು ತಿಂಗಳು ಕಳೆಯುವುದರೊಳಗೆ ಗುಂಡಣ್ಣ ರಜ ಹಾಕಿ ಬಂದಿದ್ದ. ಸೀತಾರಾಮನ ಮನೆ ಚಿಕ್ಕದು. ಮನೆ ತುಂಬಾ ಮಕ್ಕಳು. ನಾಲ್ಕು ದಿನ ಕಳೆಯುವಷ್ಟರಲ್ಲಿ ಮಕ್ಕಳ ಕಿತ್ತ ಆಟ, ರಗಳೆ ಬೇಸರ ತಂದಿತ್ತು. ಅವರವರಲ್ಲಿ ಮನಸ್ತಾಪ ಬರುವ ಮೊದಲು ಹೊರಟು ಬಿಡಬೇಕೆಂದು ಲಕ್ಷ್ಮಿ ಸಾತಕ್ಕನೊಡನೆ ಮಾತನ್ನಾಡಿದಳು.

"ಅತ್ಗೇ ವಾಪಸ್ಸು ಹೋಗೋಣ ಅಂತ ಅನ್ನಿಸ್ತಿದೆ.... ಭಾವಂಗೆ ಅಸಮಾಧಾನ

ಆಗಿರುವಂತಿದೆ" ಎಂದಿದ್ದಳು. ಸಾತಕ್ಕನಿಗೂ ಅವಳ ಮಾತು ಸರಿ ಎನಿಸಿತ್ತು. ಗುಂಡಣ್ಣನಿಗೆ ಪತ್ರವನ್ನು ಬರೆದಿದ್ದಳು. ಗುಂಡಣ್ಣ ಬಂದಿದ್ದ.

"ನಾನು ಮಂಡ್ಯಕ್ಕೆ ಹೋಗಿ ಸಕ್ಕರೆ ಫ್ಯಾಕ್ಟರಿಯ ಮ್ಯಾನೇಜರ್ ಹತ್ರ ಮಾತನ್ನಾಡಿಕೊಂಡು ಬರ್ತೀನಿ... ಮುಂದಿನ ವಾರಕ್ಕೆ ರೈಲಿಗೆ ಟಿಕೆಟ್ಟು ಮಾಡ್ಸಿದೀನಿ" ಎಂದಿದ್ದ.

"ಹಾಗಾದ್ರೆ ನನ್ನನ್ನು ಸುಂದರಿಯ ಮನೆಗೆ ಕರ್ಕೊಂಡು ಹೋಗಿ ಬಿಡು. ನಾನೂ ಶಾಂತ ಲಲಿತ ನಾಲ್ಕು ದಿನ ಅಲ್ಲಿರ್ತೀವಿ."

"ಯಾಕೇ ಸಾತು... ಅಣ್ಣನ ಮನೆ ಬೇಜಾರಾಗ್ತಿದೆಯೇನು? ಅತ್ತಿಗೆ ಏನಾದ್ರೂ ಅಂದ್ರಾ?" ಪಿಸು ದನಿಯಲ್ಲಿ ಕೇಳಿದ.

"ಇಲ್ಲ. ಗುಂಡಣ್ಣ ಹಾಗೇನಿಲ್ಲ. ಹೇಗೂ ಹೊರಟಿದೀವಲ್ಲ. ಹೊರಡೋಕ್ಮುಂಚೆ ಸುಂದರೀನ ನೋಡಿ ಮಾತನಾಡ್ಸೋಣಾ ಅಂತ. ಅವಳಿಗೆ ಇಲ್ಲಿಗೆ ಬರುಕ್ಕೆ ಬಿಡುವಾಗುತ್ತೋ ಇಲ್ವೋ.....?"

"ಸರಿ. ಹಾಗೇ ಮಾಡು. ನಾನು ನಿನ್ನನ್ನ ತುಮಕೂರಿನಲ್ಲಿ ಬಿಟ್ಟು ಅಲ್ಲಿಂದ ಮಂಡ್ಯಕ್ಕೆ ಬರ್ತೀನಿ. ಆಮೇಲೆ ನೀನು ಅವರ ಮನೆಯ ಮಕ್ಕಳ ಜೊತೇಲಿ ವಾಪಸ್ಸು ಬಂದ್ಬಿಡು..." ಎಂದ. ಸುಂದರಿಯ ಮಕ್ಕಳಿಗೆ ಹಾಗೇ ಸೀತಾರಾಮನ ಮಕ್ಕಳಿಗೆಂದು ಹೊಸ ಬಟ್ಟೆಗಳನ್ನು ಕೊಂಡು ತಂದಿದ್ದ.

"ಇಷ್ಟೆಲ್ಲಾ ಯಾಕೆ ಖರ್ಚು ಮಾಡ್ತೀಯ.... ಅಗತ್ಯವೇನಿತ್ತು?"

"ಇರಲಿ ಬಿಡು. ನಾನೇನು ಪದೇ ಪದೇ ತರ್ತೀನಾ?..." ಎಂದು ಹೇಳಿದ್ದ ಲಕ್ಷ್ಮಿಗೆ ಅಸಮಾಧಾನವಾಗಿತ್ತು.

"ಈಗೇನು ಅಗತ್ಯವಿತ್ತು? ಹಬ್ಬವೇ ಹರಿದಿನವೇ? ಮದುವೆಯೇ? ಮುಂಜಿಯೇ? ಈಗಲಿಂದ ಕಾಸಿಗೆ ಕಾಸು ಕೂಡಿ ಹಾಕಿದರೆ, ಮುಂದೆ ಹೆಣ್ಣು ಮಕ್ಕಳ ಮದುವೆಯ ಸಮಯಕ್ಕೆ ಆಗುತ್ತೆ. ಅಷ್ಟಾದರೂ ತಿಳೀಬೇಡ್ವಾ ಇವರಿಗೆ?"

"ಹೋಗ್ಲಿ ಬಿಡು ಲಕ್ಷ್ಮಿ.... ಗುಂಡಣ್ಣನ ಕೈ ದೊಡ್ಡದು. ಧಾರಾಳ ಮನಸ್ಸು.....ನಮ್ಮ ಮನೇ ಮಕ್ಕಳಿಗೇ ತಾನೇ ಕೊಡ್ತಾ ಇರೋದು. ಇದರಿಂದ ಅವರಿಗೂ ಸಂತೋಷ ವಾಗುತ್ತೆ. ನಾನು ಸುಂದರಿಯ ಮನೆಯಿಂದ ಹಪ್ಪಳ, ಸಂಡಿಗೆ, ಬಾಳಕ, ಉಪ್ಪಿನಕಾಯಿ ಎಲ್ಲವನ್ನೂ ತರ್ತೀನಿ. ಅವಳು ವರ್ಷಾನುಕಾಲಕ್ಕೆ ಆಗುವಷ್ಟು ಮಾಡಿಸಿ ಇಟ್ಟಿರ್ತಾಳೆ..... ಘಾವಂಗೆ ಆಳುಕಾಳುಗಳ ಸಹಕಾರವಿದೆ.

"ಸರಿ ಅತ್ಗೇ.... ಬೇಗ ಬಂದ್ಬಿಡಿ. ಶಾಂತಾ ಜ್ವಾಪಾನ ಕಣೇ..... ಲಲಿತನ್ನು ಹುಶಾರಾಗಿ ನೋಡ್ಕೋ.... ಅವಳೋ ಚೇಷ್ಟೆ.... ಬಿದ್ದು ಪೆಟ್ಟು ಗಿಟ್ಟು ಮಾಡ್ಕೊಂಡಾಳು..."

"ಹೋಗಮ್ಮ ಅವಳಿಗೇ ಹೇಳು..." ಶಾಂತ ಸರ‍್ರನೆ ನುಡಿದಳು.

"ಅದು ಮುಂದೆ ನಿನ್ನ ಮದುವೆಯಾದ್ಮೇಲೆ ಹೋಗಿ ಇರಬೇಕಾದ ಮನೆ. ಒಳ್ಳೇ ಹುಡ್ಗಿ ಅಂತ ಅನ್ನಿಸ್ಕೋಬೇಕು. ತಲೆ ಹರಟೆ ಮಾತನ್ನಾಡ್ಬಾರ್ದು." ಮಗಳಿಗೆ ಬುದ್ಧವಾದವನ್ನು ಹೇಳಿದಳು.

"ಲಕ್ಷ್ಮೀ.... ನಿನಗ್ಯಾಕೆ ಆತಂಕ? ನಾನು ಇರ್ತೀನಲ್ಲ.... ಅವರ ಮನೇಲೂ ಅಷ್ಟೇ ಬರೀ ಗಂಡು ಪಾಳ್ಯ.... ತಿನ್ನೋದು ಬೀದೀಲಿ ಆಟ ಆಡೋದು... ಅಷ್ಟೆ ನಡೀರೇ.... ನಿಮ್ಮಣ್ಣ ಜಟಕಾ ತಂದಿದಾನೆ.." ಸಾತಕ್ಕ ಅವರಿಬ್ಬರೊಡನೆ ಹೊರಕ್ಕೆ ಬಂದು, ಅತ್ತಿಗೆಗೆ ಹೇಳಿ ಜಟಕಾದ ಬಳಿಗೆ ನಡೆದಳು.

*   *   *

"ಲಕ್ಷ್ಮೀ ಈಗ ನಿನ್ನ ಗಂಡನ ಸಂಪಾದನೆ ಚೆನ್ನಾಗಿದೆ. ಬೆಂಗಳೂರಿನಲ್ಲಿ ಸೈಟುಗಳು ಸುಲಭವಾಗಿ ಸಿಗುತ್ವೆ... ಅರ್ಜಿ ಹಾಕು ಅಂತ ನಿನ್ನ ಗಂಡನಿಗೆ ಹೇಳು." ವಾರಗಿತ್ತಿ ಹೇಳಿದಳು.

"ಅದೆಲ್ಲಾ ಏನೋ ನಂಗೆ ಗೊತ್ತಾಗುಲ್ಲ ಅಕ್ಕ. ಈಗಿನ್ನೂ ಲಕ್ನೋಗೆ ಹೋಗಿ ಎರಡು ವರ್ಷಗಳಾಗಿವೆ. ಅದಕ್ಕೆಲ್ಲಾ ಓಡಾಡೋರು ಯಾರು?"

"ನಿನ್ನ ಭಾವ ಓಡಾಡ್ತಾರೆ... ಸ್ವಂತ ಮನೆ ಮಾಡ್ಕೊಂಡ್ರೆ ನಿಮಗೇ ಅನುಕೂಲ. ಬೇಡಾಂತ ಅನ್ಸಿದ್ರೆ ಸೈಟನ್ನು ಮಾರಿದ್ರಾಯ್ತು. ಇಲ್ಲಿ ಸಾವಿರಾರು ರುಪಾಯಿ ಲಾಭ ಸಿಗುತ್ತೆ..." ಆಸೆಯನ್ನು ಹುಟ್ಟಿಸಿದಳು.

"ನೋಡೋಣ ಅಕ್ಕಾ.... ಸಮಯ ನೋಡಿ ಮಾತಾಡ್ತೀನಿ...ಅವರ್ಹತ್ರ ಮಾತಾಡುಕ್ಕೆ ಭಯ ಆಗುತ್ತೆ. ನಾನೇ ಏನೋ ಅಪರಾಧ ಮಾಡಿದೀನೇನೋ ಅಂತ ಅನ್ಸುತ್ತೆ."

"ಹಾಗ್ಯಾಕೆ ಅಂತೀಯ ಲಕ್ಷ್ಮೀ......"

"ಮತ್ತಿನ್ನೇನು ಸಾಲಾಗಿ ಬರೀ ಹೆಣ್ಣು ಮಕ್ಕಳುಗಳಿಗೇ ಜನ್ಮ ಕೊಟ್ಟೆ. ಅವರಿಗೆ ಬೇಸರ ಆಗ್ದೇ ಇರುತ್ತಾ? ನೀವೇ ಹೇಳಿ ಅಕ್ಕಾ."

"ಇದರಲ್ಲಿ ನಿನ್ನ ತಪ್ಪೇನಿದೆ ಹೇಳು. ಆದರೂ ಮುಂದೆ ಕಷ್ಟ ಇದೆ. ಅದಕ್ಕೇ ಆಸ್ತಿ ಮಾಡ್ಕೊಳ್ಳಿ ಅಂತ ಹೇಳಿದ್ದು. ಸಾತಕ್ಕನ್ನ ನಿಮ್ಮ ಜೊತೆ ಕರ್ಕೊಂಡು ಹೋಗ್ತಿದೀರಿ ತಾನೇ.... ನಿಂಗೆ ಒಬ್ಬರು ಸಹಾಯಕರು ಬೇಕೇ ಬೇಕು...."

"ಹೂಂ. ಅವರು ನಮ್ಮ ಜೊತೆಗೇ ಬರ್ತಾರೆ. ಹಾಗ್ಯಾಕೆ ಕೇಳ್ತಿದೀರಿ?"

"ಅವರಿಗೆ ನಿಮ್ಮ ಮನೆ ಸರಿ ಹೋಗುತ್ತಂತೆ. ನಮ್ಮ ಮನೇಲಿ ಎಲ್ಲಾ ಲೆಖ್ಖಾಚಾರವಂತೆ. ಏನ್ಮಾಡೋದು ನೀನೇ ಹೇಳು. ದುಡಿಯೋರು ಇವರೊಬ್ರು.... ತಿನ್ನುಕ್ಕೆ ನಾವೆಲ್ಲಾ. ಹಾಗೆ ಬಂದ ಸಂಬಳ ಹೀಗೆ ಖರ್ಚಾಗಿ ಹೋಗುತ್ತೆ.... ನಂಗೊಂದು

ಸೀರೆ ತೆಗೆಸ್ಕೊಡಿ ಅಂತಂದ್ರೆ ಲೆಖ್ಖ ಹಾಕ್ತಾರೆ.... ಮಕ್ಕಳಂತೂ ಹಳೇ ಬಟ್ಟೇಲೆ ಕಾಲ ಹಾಕುತ್ವೆ... ಹೆಣ್ಣು ಮಕ್ಕಳಾಗಿದ್ದಿದ್ರೆ, ಮೈ ತುಂಬಾ ಬಟ್ಟೆ ಹಾಕ್ಲೇಬೇಕಾಗ್ತಿತ್ತು... ಇವೋ ಗಂಡು ಗೋವಿಗಳು... ಚಡ್ಡಿ ಇದ್ರೆ ಷರಟಿಲ್ಲ, ಷರಟು ಇದ್ರೆ ಚಡ್ಡಿ ಇಲ್ಲ. ಹಾಗೇ ನಡೀತಿದೆ. ನಿಟ್ಟುಸಿರು ಬಿಟ್ಟಳು. ಲಕ್ಷ್ಮಿ ಅಚ್ಚರಿಗೊಂಡಳು. ಅಕ್ಕ ಇದನ್ನೆಲ್ಲಾ ತನಗ್ಯಾಕೆ ಹೇಳ್ತಿದಾರೆ ಎಂದು ಚಿಂತಿಸಿದಳು.

* * *

ಲಕ್ಷ್ಮಿ, ತಾವುಗಳು ವಾಪಸ್ಸು ಹೊರಡುವ ಮೊದಲು ತನ್ನ ಓರಗಿತ್ತಿಯ ಕೈಗೆ ಸ್ವಲ್ಪ ಹಣವನ್ನು ಕೊಟ್ಟಳು. ಇದರಲ್ಲಿ ನೀವು ಒಂದೆರಡು ಸೀರೆಗಳನ್ನು ತಗೊಳ್ಳಿ ಅಕ್ಕಾ..... ಎಂದಿದ್ದಳು.

"ಛೇ ಇದೆಲ್ಲಾ ಏನೂ ಬೇಡ ಅಂತ ಬಾಯಿ ಹೇಳಿದರೂ ಅವಳು ಹಣವನ್ನು ತೆಗೆದಿಟ್ಟುಕೊಂಡಿದ್ದಳು. ಸಾತಕ್ಕ ತನ್ನ ಬಳಿ ಕೂಡಿಟಿದ್ದ ಚಿಲ್ಲರೆ ಕಾಸುಗಳಿಂದ ನಾಲ್ಕು ನಾಲ್ಕು ಆಣೆಯ ನಾಣ್ಯವನ್ನು ತೆಗೆದು ಮಕ್ಕಳ ಕೈಯಲ್ಲಿಟ್ಟಳು. ಸೀತಾರಾಮನ ಹೆಂಡತಿಗೆ ಐದು ರೂಪಾಯಿಗಳನ್ನು ಕೊಟ್ಟಳು.

"ಅಗತ್ಯಕ್ಕಿಂತ ಹೆಚ್ಚು ದಿನ ಇಲ್ಲಿ ಇರಬೇಕಾಯ್ತು... ನಿಮಗೂ ನಮ್ಮಿಂದ ತೊಂದರೆ ಆಗಿದೆ... ಮನಸ್ನಲ್ಲಿ ಇಟ್ಕೋ ಬೇಡ" ಎಂದಿದ್ದಳು.

"ಎಂಥಾ ಮಾತಾಡ್ತೀರಿ ಸಾತಕ್ಕ? ..... ನೀವೇನು ಬೇರೆಯೋರಾ? ನಿಮ್ಮನ್ನು ಇಲ್ಲೇ ಇರಿ ಅಂತ ಹೇಳಬಹುದಾಗಿತ್ತು. ಆದರೆ ಲಕ್ಷ್ಮಿಗೆ ಕಷ್ಟ ಆಗುತ್ತೆ. ಚಿಕ್ಕ ಮಗು.... ಎದ್ದ ಬಾಣಂತಿ... ಅದಕ್ಕೇ ನಿಮ್ಮನ್ನು ಕಳಿಸಿಕೊಡ್ತಿದೀನಿ."

ಸಾತಕ್ಕ ಅದಕ್ಕೆ ಉತ್ತರಿಸಲಿಲ್ಲ.

ರೈಲು ಓಡುತ್ತಿತ್ತು. ಗುಂಡಣ್ಣ ಯಾವುದೋ ಆಲೋಚನೆಯಲ್ಲಿದ್ದ. ಲಕ್ಷ್ಮಿ ಸಾತಕ್ಕನಿಗೆ ಸಂಜ್ಞೆ ಮಾಡಿದಳು. ಸಾತಕ್ಕ ಫ್ಲಾಸ್ಕಿನಲ್ಲಿದ್ದ ಕಾಫಿಯನ್ನು ಜಾಗರೂಕತೆಯಿಂದ ಬಟ್ಟಲಿಗೆ ಬಗ್ಗಿಸಿಕೊಟ್ಟಳು. ಶಾಂತ, ಲಲಿತಾ ಇಬ್ಬರೂ "ಅತ್ತೇ ನಮಗೆ ಕಾಫೀ......" ಗೋಗರೆದರು.

"ರೈಲು ಓಡ್ತಾ ಇರೋವಾಗ ನಿಮಗೆ ಕುಡಿಯೋಕೆ ಬರುಲ್ಲ ಲಂಗದ ಮೇಲೆ ತುಳುಕುತ್ತೆ..... ಮುಂದಿನ ಸ್ಟೇಷನ್‌ನಲ್ಲಿ ರೈಲು ನಿಂತಾಗ ಕೊಡ್ತೀನಿ. ಈಗ ಕೊಬ್ಬರಿ ಮಿಠಾಯಿ ಇದೆ ಕೊಡ್ತೀನಿ..." ಎನ್ನುತ್ತಾ ಮಿಠಾಯಿಯ ಚೂರುಗಳನ್ನು ಡಬ್ಬಿಯಿಂದ ತೆಗೆದು ಕಾಗದದ ಚೂರುಗಳ ಮೇಲೆ ಹಾಕಿಕೊಟ್ಟಳು.

"ಮಿಠಾಯಿ ಎಲ್ಲಿತ್ತು ಅತ್ಗೇ.... ಸುಂದರೀ ಮನೇದಾ?"

"ಹುಂ. ಅಡಿಗೆಯೋರ ಕೈಯಲ್ಲಿ ಮಾಡಿಸಿಕೊಟ್ಟಳು. ಸೀತಾರಾಮನ ಮನೆಗೆ

ಒಂದಿಷ್ಟು ಕೊಟ್ಟೆ..... ಇಲ್ಲಿಗೆ ಸ್ವಲ್ಪ ತಂದೆ, ಕೋಡುಬಳೆ, ಚಕ್ಕುಲಿ, ಖಾರದಪುಡಿ, ಪುರಿ ಉಂಡೆ ಎಲ್ಲಾ ಇದೆ. ನೀನು ಏನನ್ನೂ ತಿನ್ನುವ ಹಾಗಿಲ್ಲವಲ್ಲ." ಸ್ವೆಟರನ್ನು ಹಾಕಿಕೊಂಡು ಮಫ್ಲರನ್ನು ಸುತ್ತಿಕೊಂಡು ಕುಳಿತಿದ್ದ ಲಕ್ಷ್ಮಿಯ ಕಡೆ ನೋಡಿ ನಸುನಗುತ್ತಾ ಹೇಳಿದಳು.

"ಆ ಪಥ್ಯ ಎಲ್ಲಾ ಏನೂ ಮಾಡ್ತಿಲ್ಲ ನಾನು. ಅಣ್ಣನ ಮನೇಲಿ ಯಾವ ಪಥ್ಯವೂ ಇಲ್ಲ. ತಣ್ಣೀರ್‍ನಲ್ಲಿ ಕೆಲಸ ಮಾಡ್ದೆ. ನಂಗೂ ಏನೂ ಆಗ್ಲಿಲ್ಲ. ಮಗೂಗೂ ಅಪಥ್ಯ ಆಗ್ಲಿಲ್ಲ."

"ಹೆಣ್ಮಕ್ಳು ಗಟ್ಟಿ, ದೇವರ ಸೃಷ್ಟಿ ಹಾಗಿರುತ್ತೆ. ಹುಟ್ತಾನೇ ಎಲ್ಲವನ್ನೂ ತಡೆದು ಕೊಳ್ಳುವ ಶಕ್ತಿಯನ್ನು ಭಗವಂತ ಕೊಡ್ತಾನೆ.... ಮುಂದೆ ಗಂಡ ಮಕ್ಕಳು ಸಂಸಾರ ಅಂತಾದ್ರೆ ಏನು ಸುಲಭಾನೇ....." ಲಕ್ಷ್ಮಿ ದೀರ್ಘವಾಗಿ ಸಾತಕ್ಕನನ್ನೇ ನೋಡಿದಳು. ಇವರಿಗೆ ಗಂಡ ಮಕ್ಕಳು ಅಂತ ಯಾವ ಸಂಸಾರವೂ ಇರಲಿಲ್ಲ. ಆದರೂ ಕಷ್ಟ ಸಹಿಷ್ಣು ಎಲ್ಲರ ಮಧ್ಯೆಯೂ ಇದ್ದು, ಅಸೂಯೆಪಡದೇ ಅತೃಪ್ತಿಯನ್ನು ತೋರದೇ, ವಿರಾಗಿನಿಯಂತೆ ಪವಿತ್ರವಾದ ಜೀವನವನ್ನು ಸವೆಸುತ್ತಿದ್ದಾರೆ. ಇದಕ್ಕಿಂತ ಕಷ್ಟ ಇನ್ನೇನು ಬೇಕು? ಇದಕ್ಕೇ ಹೆಂಗಸರು ಮುತ್ತೈದೆ ಸಾವನ್ನು ಬಯಸುವುದು.... ಕೆಂಪು ಸೀರೆ, ಬೋಳು ತಲೆಯ ಮೇಲೆ ಸೆರಗು, ಮೈತುಂಬಾ ಬರುವಂತೆ ಉಡುವ ಹದಿನಾರು ಮೊಳದ ದಪ್ಪನೆಯ ಸೀರೆ, ಕೈಯಲ್ಲಿ ಬಳೆ ಇಲ್ಲ, ಕತ್ನಲ್ಲಿ ಕರೀಮಣಿ ಇಲ್ಲ. ಕಾಲು ಬೆರಳಿನಲ್ಲಿ ಕಾಲುಂಗುರವಿಲ್ಲ. ಹಣೆಗೆ ಕುಂಕುಮ ಮೂಗಿನಲ್ಲಿ ಮೂಗುಬೊಟ್ಟು ಇಲ್ಲ. ಆ ಅಲಂಕಾರವೆಲ್ಲಾ ಇದ್ದಿದ್ದರೆ ಎಷ್ಟು ಲಕ್ಷಣವಾಗಿ ಕಾಣು ತ್ತಿದ್ರೋ..... ದೇವರು ಎಂಥಾ ಅನ್ಯಾಯ ಮಾಡಿಬಿಟ್ಟಿದಾನೆ ಇವರಿಗೆ..... ಲಕ್ಷ್ಮಿ ತ್ಚು.... ತ್ಚು... ಎಂದಳು.

"ಏನಾಯ್ತು ಲಕ್ಷ್ಮಿ....." ಸಾತಕ್ಕ ಎಚ್ಚರಿಸಿದಳು.

"ಏನಿಲ್ಲ ಅತ್ಗೇ..... ಒಂದೇ ಸಮನೆ ಮಗೂನ ತೊಡೆಯ ಮೇಲೆ ಕೂರಿಸ್ಕೊಂಡು ಕೂತಿದ್ದಕ್ಕೆ ಕಾಲು ನೋಯ್ತಿದೆ.... ಅಷ್ಟೇ.."

"ಇಲ್ಲಿ ಸ್ವಲ್ಪ ಹೊತ್ತು ಕೊಡು. ನೀನು ಒಂದು ಗಳಿಗೆ ಮಲಕ್ಕೋ" ಎಂದು ಹೇಳಿ ಮಗುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಮುದ್ದು ಮಾತುಗಳಿಂದ ಮಗುವನ್ನು ಆಡಿಸತೊಡಗಿದಳು. ಶಾಂತ, ಲಕ್ಷ್ಮಿ ಇಬ್ಬರೂ ಅತ್ತೆಯ ಬಳಿಗೆ ಸಾರಿದರು. ಅವರನ್ನೇ ಅನುಕರಿಸುತ್ತಾ ಮಗುವನ್ನು ಆಡಿಸತೊಡಗಿದರು.

* * *

ಈ ಐದಾರು ತಿಂಗಳ ಅವಧಿಯಲ್ಲಿ ಗುಂಡಣ್ಣ ಏನೋ ಆಲೋಚನೆಯಲ್ಲಿದಾನೆ ಬದಲಾಗಿದ್ದಾನೆ ಎಂದು ಸಾತಕ್ಕನಿಗೆ ಅನ್ನಿಸತೊಡಗಿತು. ಬಾಣಂತಿಗೆ ಮಕ್ಕಳಿಗೆ

ಬಡಿಸಿ ಆದ ಮೇಲೆ ಗುಂಡಣ್ಣನಿಗೆ ತಟ್ಟೆಯನ್ನು ಹಾಕಿದಳು.

"ನಿನ್ನನ್ನು ಏನೋ ಕೊರೀತಿದೆ ಅಂತ ನಿನ್ನ ಮುಖವೇ ಹೇಳ್ತಿದೆ. ಏನಾಯ್ತೋ ಗುಂಡಣ್ಣಾ?"

"ಏನಿಲ್ಲಾ ಸಾತು.... ಸುಮ್ಮನೇ ಬಡಿಸು." ಎಂದು ಊಟಕ್ಕೆ ಕುಳಿತ.

"ಇಲ್ಲ ಗುಂಡಣ್ಣ... ಏನೋ ಇದೆ. ಲಕ್ಷ್ಮಿಗೆ ಮತ್ತೆ ಹೆಣ್ಣು ಮಗುವಾಯ್ತು ಅಂತ ಬೇಸರಾನಾ? ಅದ್ರಲ್ಲಿ ಅವಳ ತಪ್ಪೇನಿದೆ?"

"ಛೆ..... ಅದೆಲ್ಲಾ ಏನೂ ಅಲ್ಲ ಸಾತು... ಅವಳದ್ದಾಗಲೀ ಮಗೂದಾಗ್ಲೀ ತಪ್ಪೇನಿದೆ.... ಇಬ್ಬರೂ ಹುಶಾರಾಗಿದಾರಲ್ಲ ಅಷ್ಟು ಸಾಕು."

"ಹಾಗಾದ್ರೆ ಏನು ಅಂತ ಹೇಳೋದಾದ್ರೆ ಹೇಳು. ಮನೆಯೋರು ನಮಗಲ್ದೇ ಇನ್ಯಾರಿಗೆ ಹೇಳ್ತೀಯಾ?" ಸೀತಾರಾಮ ಏನಾದ್ರೂ ಅಂದ್ನಾ?"

"ಇಲ್ಲ ಸಾತು.... ಸುಮ್ಮನೇ ಊಟ ಮಾಡೋಕೆ ಬಿಡ್ತೀಯಾ?" ಸಿಡುಕಿದ.

"ಸರಿಯಪ್ಪಾ.... ಊಟ ಮಾಡು. ನಾನು ಅಕ್ಕನಾಗಿ, ನನಗೆ ಕೇಳೋ ಹಕ್ಕಿದೆ ಅಂತ ಅಂದ್ಕೊಂಡೆ.... ಹೋಗ್ಲಿ ಬಿಡು."

"ನೀನು ಕೋಪಿಸ್ಕೋ ಬೇಡ.... ಫ್ಯಾಕ್ಟರೀಲಿ ಸ್ವಲ್ಪ ಏರುಪೇರಾಗಿದೆ. ಅದನ್ನು ನಿಂಗೆ ಹೇಳಿಕೊಂಡ್ರೆ ಏನು ಪ್ರಯೋಜನ?"

"ಏರು ಪೇರು ಅಂದ್ರೆ?.... ಹಣಕಾಸ್ನಲ್ಲಾ?..... ಏನಾಯ್ತು?...."

"ಏನೋ ಒಂದು. ನಿಂಗ್ಯಾಕೆ ಅಂತ... ನಿನ್ನ ಕೆಲಸ ಎಷ್ಟೋ ಅಷ್ಟು ನೋಡ್ಕೋ. ಸಮಯ ಬಂದಾಗ ನಾನೇ ಹೇಳ್ತೀನಿ" ಎನ್ನುತ್ತಾ ಸರಸರನೆ ಊಟವನ್ನು ಮುಗಿಸಿ ಎದ್ದ.

"ನಿಧಾನವಾಗಿ ಊಟಾನಾದ್ರೂ ಮಾಡೋ ಗುಂಡಣ್ಣ.... ಇನ್ಮೇಲೆ ನಿನ್ನನ್ನ ಇದನ್ನೆಲ್ಲ ಕೇಳೋದಿಲ್ಲ." ಆದರೂ ಗುಂಡಣ್ಣ ಎದ್ದು ಹೋಗಿದ್ದ. ಸಾತಕ್ಕನಿಗೆ ಬೇಸರವಾಗಿತ್ತು.

ಬಾಣಂತಿ ಲಕ್ಷ್ಮಿಗೆ ಕುಡಿಯಲು ಹಾಲನ್ನು ತೆಗೆದುಕೊಂಡು ಹೋಗಿ ಕೊಟ್ಟು ಮಗುವನ್ನೆತ್ತಿಕೊಂಡಳು. "ಅತ್ಗೇ ಇವರದ್ದು ಊಟ ಆಯ್ತಾ? ನಿಮ್ಮ ಫಲಾಹಾರ ಆಯ್ತಾ?" ಲಕ್ಷ್ಮಿ ಕೇಳಿದಳು.

"ಹೂಂ ಆಯ್ತು... ನಿನ್ನ ಗಂಡ ಯಾಕೋ ಸರಿಯಾಗಿ ಊಟಾನೆ ಮಾಡ್ಲಿಲ್ಲ. ಕೇಳಿದ್ರೆ ಗುರ್ ಅಂತಾನೆ.... ನೀನಾದ್ರೂ ಕೇಳು."

"ನಾನಾ? ಏನಂತ ಕೇಳ್ಲಿ?.... ನಿಮಗೇ ಹೇಳ್ದಿದ್ದ ಮೇಲೆ ನಂಗೆ ಹೇಳ್ತಾರಾ?.... ಅವರೋ ಬಾಣಂತಿ ರೂಮು ಅಂತ ಒಳಕ್ಕೆ ಬರೋದೇ ಇಲ್ಲ. ನನ್ಮೇಲೆ ಅಸಮಾಧಾನ ಇರಬಹುದು. ಇದೂ ಹೆಣ್ಣು ಹುಟ್ಟಿದರೆ ನನ್ನ ತಪ್ಪೇನಿದೆ."

"ಛೆ.... ನಿನ್ಮೇಲೆ, ಮಗುವಿನ ಮೇಲೆ ಅವನಿಗೆ ಯಾವ ಅಸಮಾಧಾನವೂ ಇಲ್ಲ... ಮನಸ್ಸಿಗೆ ಏನೋ ಹಚ್ಚಕೊಂಡಿದಾನೆ ಅಂತ ಅನ್ಸುತ್ತೆ... ನೀನೇ ಕೇಳ್ಕೋಡು. ಹೇಳಿದ್ರೂ ಹೇಳಬಹುದು."

"ಹೌದು ಅತ್ಗೇ.... ಮಗುವಿನ ಕೆಲಸದಲ್ಲಿ ನಾನು ಅವರ ಎದುರಿಗೇ ಬಂದಿಲ್ಲ. ಅವರೋ ಬಾಗಿಲಲ್ಲೇ ನಿಂತು ನೋಡಿ ಹಾಗೇ ಹೊರಟು ಹೋಗ್ತಾರೆ. ಈ ಮಗುವೋ ಬೇಗ ಮಲಗುಲ್ಲ. ತಟ್ಟಿ ಕುಟ್ಟಿ ಮಲಗಿಸಿದ್ರೂ ಬೇಗ ಎದ್ದು ಬಿಡುತ್ತೆ. ಅವರಿಗೋ ಊಟ ಆಗ್ತಿದ್ದ ಹಾಗೆ ನಿದ್ದೆ. ಬೇಗ ಮಲಗಿ ಬಿಡ್ತಾರೆ. ಯಾವಾಗ ಮಾತಾಡೋದು?"

"ಏನೋಮ್ಮ ಬಿಡುವು ಮಾಡ್ಕೊಂಡು ಮಾತಾಡಿ ನೋಡು.. ನಾನು ಇನ್ನೇನ್ಹೇಳ್ಲಿ." ಎನ್ನುತ್ತಾ ಹೊರಟು ಹೋಗಿದ್ದಳು. ಲಕ್ಷ್ಮಿಯ ತಲೆಯಲ್ಲಿ ಏನೇನೋ ಕೆಟ್ಟ ಕೆಟ್ಟ ಆಲೋಚನೆಗಳು ಬರಲಾರಂಭಿಸಿದ್ದವು. ಏಳೆಂಟು ತಿಂಗಳ ಮೇಲಾಯಿತು. ತನ್ನ ಗಂಡ ಒಂಟಿಯಾಗಿ ಇಲ್ಲಿದ್ದರು. ಆ ಬೇಸರವಿರಬಹುದೇ.... ಅಥವಾ ಇವರಿಂದ ಏನಾದರೂ ಅವಿವೇಕ ನಡೆದಿರಬಹುದೇ..... ಆ ಆಲೋಚನೆಯಿಂದ ಅವಳ ಮನಸ್ಸು ಕಳವಳಗೊಂಡಿತು. ಮರುಕ್ಷಣವೇ ಛೇ ಹಾಗಿರಲಾರದು. ಅವರ ಮೇಲೆ ಅಪನಂಬಿಕೆ ಪಡಬಾರದು ತಾನು.... ಅವರು ಅಂಥವರಲ್ಲ.... ಆದರೂ.... ಆದರೂ.... ಅವರ ಮನಸ್ನಲ್ಲಿ ಏನಿದೆ ಅಂತ ಆದಷ್ಟು ಬೇಗ ತಾನು ತಿಳಿದುಕೊಳ್ಳಬೇಕು. ಇನ್ನು ಮುಂದೆ ಅವರನ್ನು ಒಂಟಿಯಾಗಿ ಬಿಟ್ಟು ಊರಿಗೆ ಹೋಗಬಾರದು ಅಂತ ತನ್ನಲ್ಲೇ ಅಂದುಕೊಂಡಳು.

* * *

ಗಂಡ ಊಟ ಮುಗಿಸಿ, ಕೈ ತೊಳೆದು ತನ್ನ ರೂಮಿಗೆ ಹೋಗುವುದನ್ನೇ ಕಾದಿದ್ದ ಲಕ್ಷ್ಮಿ ಅಲ್ಲಿಗೆ ಬಂದಳು. ಟವೆಲ್ಲಿಗೆ ಕೈ ಒರೆಸುತ್ತಿದ್ದವನು ಹೆಂಡತಿಯ ಕಡೆ ನೋಡಿದ "ಏನಾದ್ರೂ ಬೇಕಾಗಿತ್ತಾ? ಮಗು ಮಲಗ್ತಾ?" ಕೇಳಿದ.

"ಹೂಂ ಅತ್ಗೆ ತೂಗಿ ಮಲಗಿಸ್ತಿದಾರೆ. ಒಂದು ವಿಷಯ ಹೇಳೋಣ ಅಂತ ಬಂದೆ. ಅಕ್ಕ ಹೇಳ್ತಿದ್ರು ಬೆಂಗಳೂರ್ನಲ್ಲಿ ಸೈಟುಗಳು ಮಾರಾಟಕ್ಕೆ ಇವೆಯಂತೆ.... ನಿಮ್ಮ ಹತ್ರ ಮಾತಾಡು ಅಂತ ಹೇಳಿದ್ರು."

"ಹೂಂ ಸೀತಾರಾಮನೂ ಈ ವಿಷಯ ಹೇಳ್ದ. ಸೈಟಿಗೆ ಹಾಕುವಷ್ಟು ಹಣ ನನ್ನಲ್ಲಿಲ್ಲ. ನೋಡೋಣ.... ಮುಂದೆಂದಾದ್ರು ಹಣೇಲಿ ಬರೆದಿದ್ರೆ ಸೈಟು ಸಿಗುತ್ತೆ. ಅದಕ್ಕೆ ಏನು ಅವರಸರ?"

"ಅದೇನೊ ನೀವೇ ಹೇಳ್ಬೇಕು.... ಈಗಾಗ್ಲೇ ಮೂರು ಜನ ಹೆಣ್ಣು ಮಕ್ಕಳು..... ದುಡ್ಡು ಕೂಡಿಡಬೇಕೋ.... ಸೈಟು ಮನೆ ಮಾಡ್ಕೋಬೇಕೋ ಅದು ನಿಮಗೇ ಸೇರಿದ್ದು."

"ಯಾಕೋ ಈ ನಡುವೆ ನಮ್ಮೂರಿಗೇ ವಾಪಸ್ಸು ಹೊರಟು ಹೋಗೋಣ ಅಂತ ಅನ್ನಿಸ್ತಿದೆ. ಆದರೆ ಹಾಗೆ ಹೋಗುವಂತಿಲ್ಲ.... ಬಿಡೋ ಹಾಗಿಲ್ಲ."

"ಕೆಲ್ಸಾನ ಬಿಡ್ಬೇಕು ಅಂತಿದೀರಾ? ಮುಂದೆ ಗತಿ?" ಸಂದೇಹದಿಂದ ಕೇಳಿದಳು.

"ಹೇಳಿದ್ನಲ್ಲ ತಕ್ಷಣಕ್ಕೆ ಬಿಡುವ ಹಾಗಿಲ್ಲ ಅಂತ... ಐದು ವರ್ಷ ಕೆಲ್ಸ ಮಾಡ್ತೀನಿ ಅಂತ ಬರೆದು ಕೊಟ್ಟು ಬಿಟ್ಟಿದೀನಿ."

"ಸರಿ ಮತ್ತೆ? ಯಾಕೆ ಸಂಬಳಾನಾ ಸರಿಯಾಗಿ ಕೊಡ್ತಿಲ್ವಾ?"

"ಸಂಬಳ ಸಾರಿಗೆ ಎಲ್ಲಾ ಸರಿಯಾಗಿ ಸಿಕ್ತಿದೆ ಲಕ್ಷ್ಮಿ.... ಅದಲ್ಲ ಸಮಸ್ಯೆ.."

"ಮತ್ತೆ? ಹುಟ್ಟಿ ಬೆಳೆದ ಊರ್ನಿಂದ ದೂರ ಇರೋಕೆ ಆಗ್ತಿಲ್ವಾ?"... ಅಪ್ಪ ಅಮ್ಮ ಬದುಕಿದ್ದಿದ್ರೆ ಬೇರೆ ಮಾತಾಗಿರ್‍ತಿತ್ತು.... ನಿಮ್ಮಣ್ಣ ಏನಾದ್ರೂ ಅಂದ್ರೇನು?"

"ಅವನ್ಯಾಕೆ ಏನನ್ನಾದ್ರೂ ಅಂತಾನೆ? ಅವನ ಸಂಸಾರ ತಾಪತ್ರಯ ಅವನಿಗೆ ಹೋಗ್ಲಿ ಬಿಡು. ಅವನಿಗೆ ಹೇಳಿದ್ರೆ ಅಲ್ಲೇ ಎಲ್ಲಾದ್ರೂ ಕೆಲಸ ಕೊಡಿಸ್ತಾನೆ."

"ಹಾಗಂತ ಹೇಳಿಬಿಟ್ರಾ?" ತಟ್ಟನೆ ಕೇಳಿದಳು. "ಕೈತುಂಬಾ ಸಂಬಳ ಬರುತ್ತೆ. ಬಾಡಿಗೆ ಇಲ್ಲದೇ ಮನೆ ಇದೆ. ಮಕ್ಕಳೂ ಚಿಕ್ಕವರು. ಹಿಂದೆ ಮುಂದೆ ಯೋಚಿಸದೇ ಕೆಲ್ಸಾನ ಬಿಟ್ಟು ಬಿಡ್ಬೇಡಿ. ಸಂಸಾರ ನಡೆಸೋದು ಕಷ್ಟ ಆಗುತ್ತೆ.... ಎಂತೆಂಥದೋ ನಿರ್ಧಾರ ತಗೋಬೇಡಿ."

"ನಂಗೇನು ತಿಳುವಳಿಕೆ ಇಲ್ಲ ಅಂತ ಅಂದ್ಕೊಂಡ್ಯಾ?.... ಒಬ್ಬಂಟಿಗನಾಗಿದ್ರೆ ಏನು ಮಾಡ್ತಿದ್ನೋ..... ಈಗ ಸಂಸಾರ ಬೆಳೆದಿದೆ.... ಜವಾಬ್ದಾರಿ ಹೆಚ್ಚಿದೆ. ಸುಮ್ನೇ ನನ್ನ ತಲೆ ಕೆಡಿಸ್ಬೇಡ. ಮಾತು ಮುಗಿದಿದ್ರೆ ಹೋಗು. ಮಲಕ್ಕೋತೀನಿ. ಅವನು ಹಾಸಿಗೆಯ ಮೇಲೆ ಕುಳಿತ. ಲಕ್ಷ್ಮಿ ಅವನ ಮಗ್ಗುಲಲ್ಲಿ ಕುಳಿತಳು.

"ಈಗ ನಾವು ಅನುಕೂಲವಾಗಿದೀವಿ ಅಂತ ಎಲ್ರೂ ತಿಳ್ಕೊಂಡಿದಾರೆ. ನನಗೆ ಚಿನ್ನ ಬಣ್ಣ ಯಾವುದೂ ಬೇಡ. ಸಾಲ ಸೋಲ ಮಾಡುವಂಥ ದಿನಗಳು ಬರದಿದ್ರೆ ಸಾಕು. ದೇವರಲ್ಲಿ ಅದನ್ನೇ ಬೇಡೋದು...."

"ನನ್ಮೇಲೆ ನಿಂಗೆ ನಂಬ್ಕೆ ಇಲ್ವಾ? ನಿಮ್ಮನೆಲ್ಲಾ ಉಪವಾಸ ಕೆಡವುಲ್ಲ.. ಆ ದೇವರು ದಾರಿ ತಪ್ಪಿಸುಲ್ಲ. ಆ ನಂಬಿಕೆ ನನಗಿದೆ. ನೀನು ಹೋಗು. ಸಾತು ಕಾಯ್ತಾ ಇರಬಹುದು."

"ಅವರೇ ನನ್ನನ್ನ ಕಳಿಸಿದಾರೆ. ನೀವು ಒಂಟಿಯಾಗಿ ಬಿಟ್ಟಿದೀರಿ ಅಂತ ನಿಮ್ಮಕ್ಕನಿಗೆ ಚಿಂತೆ.... ನಾನು ಇನ್ನು ಸ್ವಲ್ಪ ಹೊತ್ತು ಇಲ್ಲೇ ಇರ್ತೀನಿ" ಎಂದಾಗ ಅವಳ ಇಂಗಿತ ಅವನಿಗೆ ಅರ್ಥವಾಗಿತ್ತು.

"ಸರಿ ರೂಮಿನ ಬಾಗಿಲನ್ನು ಹಾಕ್ತೀನಿ.. ಶಾಂತ ಲಲಿತ ಮಲಗಿದಾರೆ ತಾನೇ?" ಎನ್ನುತ್ತಾ ಬಾಗಿಲನ್ನು ಭದ್ರಪಡಿಸಿ ದೀಪವನ್ನು ಆರಿಸಿದ.

* * *

ಸಾತಕ್ಕ ತಕ್ಕ ಮಟ್ಟಿಗೆ ಹಿಂದಿಯಲ್ಲಿ ಮಾತನ್ನಾಡುವುದನ್ನು ಕಲಿತಿದ್ದಳು. ಮಗುವನ್ನು ನೋಡಲು ಬರುವ ಅಕ್ಕ ಪಕ್ಕದ ಮನೆಯ ಹೆಂಗಸರಿಗೆ ಸಾತಕ್ಕನನ್ನು ಕಂಡರೆ ಪೂಜ್ಯ ಭಾವನೆ. ಸ್ವಾಮೀಜಿಗಳಂತೆ ಕಾಣ್ತಾರೆ ಅಂತ ಮಾತನ್ನಾಡಿಕೊಳ್ಳುತ್ತಿದ್ದರು.

ಮಾತಾಜೀ, ಮಗೂಗೆ ಏನು ಹೆಸರಿಟ್ಟಿದೀರಿ ಅಂತ ಕೇಳಿದರೆ, 'ಪದ್ಮಿನಿ' ಅಂತಲೇ ಹೇಳುತ್ತಿದ್ದರು. ಹಾಗಾಗಿ ಮಗುವಿಗೆ ಅದೇ ಹೆಸರು ಉಳಿಯಿತು. ಪದ್ಮಿನಿ ಹತ್ತು ತಿಂಗಳ ಮಗುವಾಗಿದ್ದಾಗ ಲಕ್ಷ್ಮಿ ಮತ್ತೆ ಗರ್ಭಿಣಿಯಾಗಿದ್ದಳು. ಅವಳಿಗೆ ಗೊತ್ತಾಗುವಷ್ಟರಲ್ಲಿ ಪದ್ಮಿನಿಗೆ ಒಂದು ವರ್ಷ ತುಂಬಿತ್ತು. ಅವಳ ಹಠ ರಗಳೆ ಸ್ವಲ್ಪ ಜಾಸ್ತಿಯಾಗಿತ್ತು. ಶೀಷೆಯ ಹಾಲನ್ನು ಅಭ್ಯಾಸ ಮಾಡಿಸಿದ್ದರು.

"ಅತ್ಗೇ, ನಾನೀಗ ಏನ್ಮಾಡ್ಲಿ? ಇವಳೇ ಇನ್ನು ಚಿಕ್ಕವಳು. ಗೊತ್ತಾಗ್ಲೇ ಇಲ್ಲ ಹೀಗಾಗಿದೆ ಅಂತ ಪಕ್ಕದ ಮನೆಯವರೆಲ್ಲ ಏನಂದ್ಕೊಳ್ತಾರೆ, ನಗುಲ್ವಾ?"

"ಇದರಲ್ಲಿ ನಗೋದೇನು ಬಂತು? ಅಲ್ಲದೇ ಇವೆಲ್ಲಾ ನಂಗೇನು ಗೊತ್ತಾಗುತ್ತೆ?"

"ಊರಲ್ಲೇ ಇದ್ದಿದ್ರೆ ಹೀಗಾಗುತ್ತಿರಲಿಲ್ಲ ಅಥವಾ ನನ್ನ ಅತ್ತಿಗೇನೋ ಅಕ್ಕನೋ ಏನಾದ್ರೂ ಪರಿಹಾರ ಹೇಳಿರೋರು. ಪರಂಗಿ ಹಣ್ಣನ್ನು ತಿಂದ್ರೆ ಮೈ ಇಳಿದು ಹೋಗುತ್ತೆ ಅಂತ ಹೇಳ್ತಾರೆ ಇಲ್ಲಿ ಎಲ್ಲಿ ಸಿಗುತ್ತೋ ಯಾರ ಮನೇಲಿ ಮರ ಇದೆಯೋ ಇದ್ರೂ ಕೇಳೋದಾದ್ರೂ ಹೇಗೆ?"

"ಅಂಥಾ ಕೆಲ್ಸಾನ ಮಾತ್ರ ಕನಸ್ನಲ್ಲೂ ಯೋಚಿಸ್ಬೇಡ. ಅದು ಮಹಾ ಪಾಪ ಈ ಊರಿಗೆ ಬಂದ ಕೆಲವು ತಿಂಗಳುಗಳಲ್ಲಿ ಎರಡೆರಡು ಬಾರಿ ಮೈ ಇಳಿದಿತ್ತು. ಆಗ ಎಷ್ಟು ಪರಿತಾಪ ಪಟ್ಟೆ ನೀನು? ಜ್ಞಾಪಕ ಇದೆಯಾ?"

"ಗಂಡು ಮಗು ಹುಟ್ಟುತ್ತೇನೋ ಅಂತ ಅಂದ್ಕೊಂಡಿದ್ದೆ. ಆದರೆ ಈಗ ಆತಂಕವೇ ಜಾಸ್ತಿ ಆಗುತ್ತೆ ಅತ್ಗೇ.... ಈಗಾಗಲೇ ಮೂರು ಜನ ಹೆಣ್ಣು ಮಕ್ಕಳಿದ್ದಾರೆ.... ಹೆಣ್ಣೇ ಹುಟ್ಟಿ ಬಿಟ್ಟರೇ?"

"ಗಂಡು ಮಗೂನೇ ಹುಟ್ಟುತ್ತೆ ಅಂತ ಅಂದ್ಕೋ. ಈ ಮಗೂನ ನಾನು ನೋಡ್ಕೋತೀನಿ. ನೀನು ಆಯಾಸ ಮಾಡ್ಕೋಬೇಡ. ಚೆನ್ನಾಗಿ ಆರೈಕೆ ಮಾಡ್ಕೋ.... ಹಾಲು ಕುಡಿ, ಹಣ್ಣು ತಿನ್ನು.... ಯೋಚನೆಯನ್ನೇ ಮಾಡ್ಬೇಡ."

ನೀವೇನೋ ಸುಲಭವಾಗಿ ಹೇಳಿ ಬಿಡ್ತೀರಿ ಅತ್ಗೇ.... ನನ್ನ ಆತಂಕ ನಿಮಗೆ ಹೇಗೆ ಅರ್ಥವಾಗುತ್ತೆ.... ಮತ್ತೆ ಬಾಣಂತನಕ್ಕೆ ಯಾರ ಮನೆಗೆ ಹೋಗ್ಲೀ? ಈಗಿನ್ನೂ ವಾಪಸ್ಸು ಬಂದು ಕೆಲವೇ ತಿಂಗಳುಗಳಾಗಿವೆ. ಇವರನ್ನು ಮತ್ತೆ ಒಂಟಿಯಾಗಿ ಬಿಟ್ಟು ಹೋಗೋದು ಹೇಗೆ? ಇವರು ಊಟ ತಿಂಡಿಗೆ ಕಷ್ಟಪಡ್ತಾರಲ್ಲ... ಮಕ್ಕಳನ್ನು

ನಾನು ಕರ್ಕೊಂಡು ಹೋಗಕ್ಕೂ ಆಗುಲ್ಲ. ಬಿಟ್ಟು ಹೋಗಕ್ಕೂ ಆಗುಲ್ಲ...."

"ಹೋಗ್ಲೇ ಬೇಕು ಅಂತೇನಿಲ್ಲ. ಇಲ್ಲೇ ಇದ್ದರಾಯ್ತು.... ಹೇಗೋ ಆಗುತ್ತೆ..."

"ಹೇಗೋ ಹೇಗಾಗುತ್ತೆ ಅತ್ಗೇ... ನಿಮ್ಮ ಮಡಿಗೆ ತೊಂದರೆ ಆಗುತ್ತೆ.... ಕೆಲಸ ಜಾಸ್ತಿ ಆಗುತ್ತೆ...."

"ಏನು ಇಲ್ಲ. ಜತೇಲಿ ಇದ್ದ ಮೇಲೆ ಅದಕ್ಕೆಲ್ಲಾ ಯೋಚಿಸ್ಬೇಕಾ? ಈಗ ಈ ಊರು ನಮಗೂ ಹಳೇದಾಗಿದೆ. ಅಕ್ಕ ಪಕ್ಕದವರು ಸಮಯ ಅಂದ್ರೆ ಸಹಾಯ ಮಾಡ್ದೇ ಇರ್ತಾರಾ?"

"ಎಲ್ಲರ ಎದುರಿಗೆ ಓಡಾಡುಕ್ಕೆ ನಂಗೆ ನಾಚ್ಕೆ ಆಗುತ್ತೆ" ತಲೆ ತಗ್ಗಿಸಿ ನುಡಿದಳು.

"ಇದಕ್ಕೆ ನಾನೇನು ಹೇಳ್ಲಿ? ಸೀತಾರಾಮನ ಹೆಂಡ್ತಿಗೆ ಸುಂದರಿಗೆ ಸಾಲು ಸಾಲಾಗಿ ಮಕ್ಕಳು ಹುಟ್ಟಿದವು. ಒಂದೂವರೆ ವರ್ಷ ಅಂತರದಲ್ಲಿ...."

"ಆದರೇನು? ಇಬ್ಬರಿಗೂ ಬರೀ ಗಂಡು ಮಕ್ಕಳೇ."

"ಅದೇ ನಿನ್ನ ತಲೇಲಿ ತುಂಬಿ ಹೋಗಿದೆ. ಸುಂದರಿ ಮಗನಿಗೆ ಶಾಂತನ್ನು ಕೊಡೋದು ಅಂತ ಮಾತು ಆಗಿದೆಯಲ್ಲ. ಹಾಗೇ ಲಲಿತಂಗೂ ಪಾತು ಮಗನನ್ನು ವಿಚಾರಿಸಿದರೆ ಆಯ್ತು.... ಗುಂಡಣ್ಣನ ಮಕ್ಕಳು ರೂಪದಲ್ಲಿ ಚೆನ್ನ ಅಂತ ಎಲ್ಲರೂ ಹೇಳೋದನ್ನ ಕೇಳಿದೀನಿ. ಹೆಣ್ಣು ಮಕ್ಕಳನ್ನು ಬೆಳೆಸಿ, ಕಂಡವರ ಮನೆಗೆ ಕಳಿಸ್ತಿದೀನಿ ಅನ್ನೋ ಚಿಂತೆಯೇ ಬೇಡ. ಅವರೆಲ್ಲಾ ನಮ್ಮವರೇ... ಸುಮ್ಮನೇ ಅದದೇ ಮಾತ್ಯಾಕೆ? ನಾನು ಸ್ನಾನ ಮಾಡಿ ಅಡುಗೆಗೆ ಇಡ್ತೀನಿ. ನಿನ್ನ ಗಂಡ ಬರೋದ್ರೊಳಗೆ ಅಡಿಗೆ ಆಗಿರಬೇಕು. ಬಿಸಿ ಬಿಸಿ ಅನ್ನ ಬಡಿಸ್ದಿದ್ರೆ ಕೂಗಾಡ್ತಾನೆ."

"ಅಂತೂ ಸದಾ ನಿಮಗೆ ಅಡುಗೆ ಮನೆಯ ಕೆಲಸವೇ ಆಯ್ತು."

"ನನಗೆ ತಾನೇ ಬೇರೆ ಇನ್ನೇನು ಕೆಲಸ ಇದೆ? ಬರೋ ಕೆಲಸಾನ ಮಾಡೋಕೆ ಬೇಸರ ಏನೂ ಇಲ್ಲ." ಎನ್ನುತ್ತಾ ಬಚ್ಚಲು ಮನೆಯ ಕಡೆಗೆ ನಡೆದಳು. ಅತ್ತಿಗೆಯೊಡನೆ ಅಷ್ಟು ಮಾತನ್ನಾಡಿದರೂ ಲಕ್ಷ್ಮಿಯ ಚಿತ್ತದಲ್ಲಿ ಆತಂಕವಿದ್ದೇ ಇತ್ತು. ಇಷ್ಟು ಬೇಗ ತನಗೆ ಮತ್ತೊಂದು ಮಗು ಬೇಡ. ಏನಾದರೂ ಔಷಧಿಯನ್ನು ತೆಗೆದುಕೊಳ್ಳಲೇ ಬೇಕು. ಆದರೆ ಈ ಮಗು ಗಂಡು ಮಗುವಾಗಿದ್ದರೇ... ತಾನೇ ಕೈಯಾರೆ ಕಳೆದು ಕೊಂಡಂತಾಗುತ್ತದೆ. ಜಾತಕವನ್ನು ನೋಡಿ ಭವಿಷ್ಯ ಹೇಳುವವರ್ಯಾರಾದ್ರೂ ಇದ್ದರೆ ಕೇಳ್ಬೇಕು. ಆದರೆ ಕನ್ನಡ ಭಾಷೆ ಗೊತ್ತಿಲ್ಲದವರ ಹತ್ತಿರ ಹೇಗೆ ಕೇಳೋದು... ಜಾತಕವನ್ನು ಓದಲು ಅವರಿಗೆ ತಿಳಿಯಬೇಕಲ್ಲ. ತನ್ನ ಗಂಡಂಗೇ ಅಲ್ಪ ಸ್ವಲ್ಪ ಜ್ಯೋತಿಷ್ಯ ಜ್ಞಾನ ಇದೆ. ಇವರನ್ನೇ ಕೇಳಿದರೇ.... ಹೇಗೆ ಕೇಳುವುದು? ಯಾಕೆ ಅಂತ ಕೇಳಿದ್ರೆ ಏನು ಹೇಳೋದು? ನಾನಾಗಿಯೇ ನಾನು ಮತ್ತೆ ಬಸರಿ ಎಂದು ಹೇಗೆ ಹೇಳಿಕೊಳ್ಳುವುದು?

* * *

ಆದರೆ ಕೆಲವೇ ವಾರಗಳಲ್ಲಿ ಗುಂಡಣ್ಣನಿಗೂ ಗೊತ್ತಾಯಿತು. ನೆರೆ ಮನೆಯ ಹೆಂಗಸರಿಗೂ ತಿಳಿಯಿತು. ಲಕ್ಷ್ಮಿ ನಾಚಿಕೊಂಡಳು. ಗುಂಡಣ್ಣನಿಂದ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ಅಲ್ಲದೇ ಫ್ಯಾಕ್ಟರಿಯಲ್ಲಿ ಅವನ ಸಮಸ್ಯೆಗಳು ಹಾಗೆ ಮುಂದುವರೆದಿದ್ದವು. ಈ ಬಾರಿ ತಾನು ಬಾಣಂತನಕ್ಕೆ ಎಲ್ಲಿಗೂ ಹೋಗುವುದಿಲ್ಲವೆಂದು ಲಕ್ಷ್ಮಿ ತೀರ್ಮಾನ ಮಾಡಿಬಿಟ್ಟಿದ್ದಳು. ಆದದ್ದಾಗಲಿ, ಕಷ್ಟವೆಷ್ಟೇ ಆಗಲಿ ತಾನು ಇಲ್ಲಿಯೇ ಇರುತ್ತೇನೆಂದುಕೊಂಡಳು. ಗುಂಡಣ್ಣನೂ ಆ ಬಗ್ಗೆ ಮಾತಾಡಲಿಲ್ಲ. ತನಗೆ ಮತ್ತೆ ರಜ ಸಿಗುವುದಿಲ್ಲ. ಕೇಳಲೂ ಆಗುವುದಿಲ್ಲವೆಂದುಕೊಂಡ. ಹಿಂದಿನ ಸಾರಿ ರಜ ಹಾಕಿ ಊರಿಗೆ ಹೋಗಿದ್ದ ಸಮಯದಲ್ಲೇ ಈ ಸಮಸ್ಯೆಗಳು ಪ್ರಾರಂಭವಾದದ್ದು.

ಹೊಸದಾಗಿ ನೇಮಕಗೊಂಡಿದ್ದ ಜನರಲ್ ಮ್ಯಾನೇಜರ್ ತನ್ನ ಕಡೆಯ ಒಬ್ಬ ಕೆಮಿಸ್ಟ್‌ನನ್ನು ಹೊಸದಾಗಿ ಸೇರಿಸಿಕೊಂಡಿದ್ದ. ಅವನು ಗುಂಡಣ್ಣನಿಗೆ ಗೌರವವನ್ನು ಕೊಡುತ್ತಿರಲಿಲ್ಲ. ಕೆಲಸದ ವೇಳೆ ತಾನು ತಪ್ಪು ಮಾಡಿ ಸಿಕ್ಕಿ ಬೀಳುವ ಸಮಯ ಬಂದಾಗ ತನ್ನೊಂದಿಗೆ ಗುಂಡಣ್ಣನನ್ನು ಪ್ರಶ್ನಿಸುವಂತೆ ಮಾಡಿ, ಜನರಲ್ ಮ್ಯಾನೇಜರ್ ಒಂದೆರಡು ಬಾರಿ ಕರೆಸಿ ಮಾತಾಡಿದ್ದರು. ಗುಂಡಣ್ಣ ಇಕ್ಕಟ್ಟಿಗೆ ಸಿಕ್ಕಿಬಿದ್ದಿದ್ದ ತನ್ನ ತಪ್ಪು ಏನೂ ಇಲ್ಲ ಅಂತ ಹೇಳಿದರೂ ಅವರು ನಂಬಿರಲಿಲ್ಲ. ಇವನ ಮೇಲೆ ಚಾಡಿ ಹೇಳುವಂತಿರಲಿಲ್ಲ. ಫ್ಯಾಕ್ಟರಿ ಅವರದ್ದು, ಹೆಚ್ಚು ಸಂಖ್ಯೆಯ ಕೆಲಸಗಾರರ. ಅವರ ಕಡೆಯವರು, ಅಧಿಕಾರವೆಲ್ಲಾ ಅವರ ಕಡೆಯೇ ಇರುವಾಗ, ತಾನು ಮಾತನಾಡಿದರೂ ಅದಕ್ಕೆ ಬೆಲೆ ಇಲ್ಲ ಅಂತ ಬಲ್ಲ. ಏಕಾಏಕೀ ತಾನು ಕೆಲಸಕ್ಕೆ ರಾಜೀನಾಮೆ ಕೊಡುವಂತಿಲ್ಲ. ಅದೂ ತಪ್ಪಾಗುತ್ತದೆ. ಐದು ವರ್ಷಗಳ ಬಾಂಡ್‌ಗೆ ಸಹಿ ಹಾಕಿದ್ದ. ಹಲ್ಲು ಕಚ್ಚಿಕೊಂಡು ತಾನು ಇಲ್ಲಿಯೇ ಇರಬೇಕಾಗುತ್ತದೆಂದು ತಿಳಿದಿತ್ತು. ತನ್ನ ಕಾರ್ಯ ನಿರ್ವಹಣೆಯಲ್ಲಿ ನಿಷ್ಠೆ ಪ್ರಾಮಾಣಿಕತೆ ಇದೆ ಎಂದು ಗೊತ್ತಿದ್ದರು ಕೂಡಾ, ಇವನ ಸಹಾಯಕ್ಕೆ ಬರಲು ಉಳಿದವರು ಹಿಂಜರಿಯುತ್ತಿದ್ದರು. ಇದು ಮ್ಯಾನೇಜರ್ ಹಾಗೂ ಅವನ ಬಂಟ ಬೇಕೆಂದೇ ತನಗೆ ಕೊಡುತ್ತಿರುವ ಕಿರುಕುಳ ಎಂದು ತಿಳಿದಿದ್ದನಾದ್ದರಿಂದ ಎಂದಿಗೇ ಈ ಅವಧಿ ಮುಗಿಯುತ್ತದೋ ಎಂದಿಗೆ ಇಲ್ಲಿಂದ ಹೊರಡುವ ಸಮಯ ಬರುತ್ತದೋ ಎಂದು ನಿರೀಕ್ಷಿಸುತ್ತಿದ್ದ. ಆದರೆ ಈ ಕುರಿತು ಸಾತಕ್ಕನೊಂದಿಗಾಗಲೀ, ಲಕ್ಷ್ಮಿಯೊಂದಿಗಾಗಲೀ ಚರ್ಚಿಸಲು ಇಷ್ಟವಿರಲಿಲ್ಲ. ಇದೆಲ್ಲಾ ಅವರಿಗೆ ಏನು ಗೊತ್ತಾಗುತ್ತೆ ಎನ್ನುವ ಧೋರಣೆ ಸಹ.

ಈ ಸಮಯದಲ್ಲಿ ಕಂಠಿ ಗಯಾ ಪ್ರಯಾಗದಲ್ಲಿ ತನ್ನ ಪಿತೃಗಳಿಗೆ ಶ್ರಾದ್ಧ ಮಾಡಲು ಬರುತ್ತಿರುವುದಾಗಿ ತಿಳಿಸಿ ಪತ್ರವನ್ನು ಬರೆದಿದ್ದ. "ಕಂಠಿಯಿಂದ ಕಾಗದ

ಬಂದಿದೆ. ಅವನೂ ಅವನ ತಮ್ಮಂದಿರು ಬರ್ತಿದಾರಂತೆ. ಮೊದಲು ಎರಡು ದಿನಗಳ ಮಟ್ಟಿಗೆ ಇಲ್ಲಿಗೆ ಬರ್ತಾರೆ. ಆಮೇಲೆ ಇಲ್ಲಿಂದ ಕಾಶೀ ಕಡೆಗೆ ಪ್ರಯಾಣ ಬೆಳೆಸ್ತಾರಂತೆ. ಬರಬೇಡ ಅಂತ ಬರೆದ್ರೆ ಬೈದುಕೊಳ್ತಾನೆ. ಬಾ ಅಂತಂದ್ರೆ ನಿನಗೇ ಕಷ್ಟ ಆಗುತ್ತೆ" ಎಂದು ಸಾತಕ್ಕನೊಡನೆ ಹೇಳಿದ್ದ.

"ಕಷ್ಟ ಆಗುತ್ತೆ ಅಂತ, ಬರ್ತೀನಿ ಅಂದೋರನ್ನ ಬರ್ಬೇಡಿ ಅನ್ನೋಕೆ ಆಗುತ್ತಾ? ಎರಡು ದಿನಗಳ ಮಟ್ಟಿಗೆ ತಾನೇ ಹೇಗೋ ಆಗುತ್ತೆ. ಅಡಿಗೆ ತಾನೇ ನನ್ನ ಕೈಲಿ ಆಗೋ ಕೆಲಸ? ಅದಕ್ಕೆ ಏನೂ ಕಷ್ಟವಿಲ್ಲ. ಬರಲಿ ಬಿಡು" ಎಂದಳು.

ಲಕ್ಷ್ಮಿ ಮಾತ್ರ ತನ್ನ ಅಸಮ್ಮತಿಯನ್ನು ಸೂಚಿಸಿದ್ದಳು "ಅವರದ್ದೊಂದು ಥರ ಸ್ವಭಾವ ಅಂತ ನೀವೇ ಹೇಳ್ತೀರಲ್ಲ ಅತ್ಗೆ. ಕೊಂಕು ಮಾತುಗಳನ್ನಾಡಿದ್ರೆ ನಿಮಗೂ ಬೇಜಾರಾಗುತ್ತೆ..... ಈ ಸಮಯದಲ್ಲಿ ಯಾರೂ ಬರೋದೇ ಬೇಡ ಅಂತ ಅನ್ನಿಸ್ತಿಗೆ ನಂಗೆ."

"ಆಡಿದ್ರೆ ಆಡಿದ. ಅದು ಅವನ ಹುಟ್ಟು ಗುಣ. ಬರ್ಬೇಡ ಅಂತ ಹೇಳಿದ್ರೆ ಅದೇ ಒಂದು ರಾದ್ಧಾಂತವಾಗುತ್ತೆ.... ಅವನೂ ಬಂದು ನೋಡ್ಲಿ... ನಮಗೆ ಇಲ್ಲಿ ಯಾವ ಕಷ್ಟ ತಾಪತ್ರಯಗಳಿಲ್ಲ ಅಂತ ತಿಳೀಲಿ...." ಲಕ್ಷ್ಮಿ ಸುಮ್ಮನಾಗಿದ್ದಳು.

* * *

ಗುಂಡಣ್ಣನೇ ರೈಲ್ವೇ ಸ್ಟೇಷನ್ನಿಗೆ ಹೋಗಿ ಕಂಠಿ ಹಾಗೂ ಅವನ ತಮ್ಮನನ್ನು ಮನೆಗೆ ಕರೆದುಕೊಂಡು ಬಂದ. ಮೊದಲಿಗೆ ಎಲ್ಲರಿಗೂ ಬಿಸಿ ಬಿಸಿ ಕಾಫಿ ಆಯಿತು. ಕಂಠಿ ಕುಳಿತಲ್ಲಿಂದಲೇ ಮನೆಯನ್ನು ವೀಕ್ಷಿಸಿದ.

"ಏನೇ ಅನ್ನು ಶಾಸ್ತ್ರೀ.... ಈ ಕಡೆ ಬಿಸಿಲು, ಶೆಕೆ ಜಾಸ್ತಿ. ಬೆವರಿಳಿದು ಹೋಗುತ್ತೆ. ಮೊದಲು ಸ್ನಾನ ಮಾಡ್ಬೇಕು. ನೀರು ಕಾದಿದೆಯಾ ಹೇಗೆ?" ಗತ್ತಿನಿಂದ ಕೇಳಿದ.

"ಕಾಯ್ಸಕ್ಕೆ ಹಂಡೆ ಒಲೆ ಇಲ್ಲ. ಈ ಕಡೆ ಬೇಸಗೇಲಿ ಎಲ್ರೂ ತಣ್ಣೀರ್ನಲ್ಲೇ ಸ್ನಾನ ಮಾಡ್ತಾರೆ. ಬಿಸಿ ನೀರು ಬೇಕು ಅಂತ ಅನ್ನೋದೇ ಇಲ್ಲ."

"ಅದೂ ಸರಿಯೇ, ಉಳಿತಾಯವೂ ಆಯ್ತು. ದೇಹಕ್ಕೆ ಹಿತವೂ ಆಯ್ತು. ಮೈ ಸೋಪು ಇದ್ರೆ ಕೊಡು" ಎಂದು ಹೇಳಿ ಸೋಪನ್ನು ತೆಗೆದುಕೊಂಡು ಸ್ನಾನದ ಮನೆಯ ಕಡೆಗೆ ಹೊರಟವನು, ಅಡಿಗೆ ಮನೆಯ ಬಾಗಿಲಲ್ಲಿ ನಿಂತು ಇಣುಕಿದ. ಸಾತಕ್ಕ ಇಜ್ಜಲು ಒಲೆಯ ಮುಂದೆ ಕುಳಿತು ಬೀಸಣಿಗೆಯಿಂದ ಬೀಸುತ್ತಿದ್ದಳು.

"ಸಾವಿತ್ರೀ ಹೇಗಿದೀಯ?" ಅವನ ಕರ್ಕಶ ಧ್ವನಿಗೆ ಬೆಚ್ಚಿ ಇತ್ತ ತಿರುಗಿದಳು. ತಲೆಯ ಮೇಲಿನ ಸೆರಗನ್ನು ಸರಿಪಡಿಸಿಕೊಂಡಳು. ಅವಳನ್ನೇ ತದೇಕವಾಗಿ ನೋಡಿದ. ಒಲೆಯ ಉರಿಯ ಶಾಖಕ್ಕೆ ಮುಖ ಕೆಂಪಾಗಿತ್ತು. ನಸು ನಕ್ಕ ಅವನ ನಗು ಇವಳಿಗೆ

ಹಿಡಿಸಲಿಲ್ಲ. ಎದ್ದು ನಿಂತಳು.

"ಏನಡಿಗೆ ಮಾಡ್ತಿದೀಯ? ಸೊಗಸಾಗಿ ಏನಾದ್ರೂ ಮಾಡು.... ಪ್ರಯಾಣದಲ್ಲಿ ಊಟ, ತಿಂಡಿ, ಯಾವುದೂ ಚೆನ್ನಾಗಿರ್ಲಿಲ್ಲ. ಲಕ್ಷ್ಮಿ ಎಲ್ಲಿ? ಒಳಗಿದಾಳೆ ತಾನೇ?" ಅವನ ಮಾತಿಗೆ ಸಾವಿತ್ರಿ ಅಸಹ್ಯಿಸಿಕೊಂಡಳು. "ಇಲ್ಲಿ ನಿನ್ನ ಮಡಿ ಹುಡಿ ಸರಿ ಹೋಗುತ್ತಾ ಸಾವಿತ್ರೀ... ಎಲ್ಲಾ ಬಿಟ್ಟು ನಿನಗೆ ಇದೆಲ್ಲಿಯ ಕರ್ಮ? ನಮ್ಮೂರು ತಮ್ಮೂರು ಅನ್ನೋದನ್ನ ಬಿಟ್ಟು..... ಇಲ್ಲಿ ಏನು ಸಂಭ್ರಮ ಅಂತ ಇರ್ಬೇಕು... ಈ ಬಾರಿ ನನ್ನ ಜತೆ ವಾಪಸ್ಸು ಬರೋದಾದ್ರೆ ಬಾ... ಶ್ರೀನಿವಾಸನ ಮನೇಲಿ ಇರೂವಂತೆ...... ಅವನ ಹೆಂಡತಿಯೂ ಮತ್ತೆ ಬಸಿರಿ. ಅವಳಿಗೂ ಸಹಾಯಕರಿಲ್ಲ" ನಕ್ಕ ಸಾವಿತ್ರಿ ಉತ್ತರಿಸಲಿಲ್ಲ.

"ಅದೇನು ಮೌನಗೌರಿ ವ್ರತ ಹಿಡಿದಿದೀಯೇನು?.... ವ್ರತ ಕತೆ ನಿಂಗ್ಯಾಕೆ? ಒಪ್ಪತ್ತಿನ ಊಟ ಎಲ್ಲೋ ನಡೆಯುತ್ತೆ.... ಯಾಕೆ ಸೀತಾರಾಮನ ಮನೇಲಿ ನಿಂಗೆ ಸರಿ ಹೋಗ್ಲಿಲ್ಲವೇನು?"

ಅಷ್ಟರಲ್ಲಿ ಲಕ್ಷ್ಮಿ ಹಿತ್ತಲ ಬಾಗಿಲಿನಿಂದ ಒಳಕ್ಕೆ ಬಂದಿದ್ದಳು. ಕಂಠಿಯ ನೋಟ ಅತ್ತ ಹರಿಯಿತು. ಮೇಲಿನಿಂದ ಕೆಳಗೆ ಅವಳನ್ನೇ ನೋಡಿದ. ಲಕ್ಷ್ಮಿಯ ಕೈ ಹಿಡಿದು ಪದ್ಮಿನಿ ನಿಂತಿದ್ದಳು.

"ಏನಮ್ಮಾ ಲಕ್ಷ್ಮಿ ಹೇಗಿದೀಯ? ಏನು ತಯಾರಿ ನಡೆದಿದೆ?" ಕುಹಕದಿಂದ ವಿಚಾರಿಸಿದ.

"ಹೇಗಿದೀರಿ ಭಾವ? ಪಾರ್ವತಿ, ಮಕ್ಕಳು ಎಲ್ಲಾ ಚೆನ್ನಾಗಿದಾರಾ?" ವಿಚಾರಿಸಿದಳು.

"ನೀನೇ ವಾಸಿ.... ಸಾವಿತ್ರಿ ವಿಚಾರಿಸೋದು ಇರ್ಲಿ... ಕೇಳಿದ್ದಕ್ಕೆ ಉತ್ತರ ಸಹ ಕೊಡ್ಲಿಲ್ಲ. ಅಲ್ಲ ಪಾರ್ವತಿ ಏನು ಪಾಪ ಮಾಡಿದಾಳೆ..... ಸುಂದರಿ ಮನೆಗೆ ಹೋಗಿದ್ಲಂತೆ ಸಾವಿತ್ರಿ...." ಶಾಸ್ತ್ರಿ ಕಂಠಿಯ ಹಿಂದೆ ಬಂದು ನಿಂತ.

"ಇಲ್ಲೇನೋ ಅಡ್ಗೆ ಮನೆ ಬಾಗ್ಲಲ್ಲಿ ಮಾತಿಗೆ ನಿಂತೆ ಕಂಠೀ.... ಬೇಗ ಸ್ನಾನ ಮಾಡು. ಫ್ಯಾಕ್ಟರಿಗೆ ಕರ್ಕೊಂಡು ಹೋಗ್ತೀನಿ."

"ಫ್ಯಾಕ್ಟರೀಲಿ ಏನಿದೆ? ಅದೇ ಕಬ್ಬು, ಅದೇ ಸಕ್ಕರೆ... ಅದೇ ಸದ್ದು... ಅದೇ ಗದ್ದಲ... ಸ್ನಾನ ಮಾಡಿ ತಿಂದು ಒಂದು ಗಳಿಗೆ ಮಲಕ್ಕೋತೀನಿ. ಏನು ತಿಂಡಿ ಮಾಡಿದೀಯ ಸಾವಿತ್ರೀ..."

"ಅಕ್ಕಿ ರೊಟ್ಟಿ ಚಟ್ನಿ ಮಾಡು ಅಂತ ಹೇಳಿದೀನಿ. ನಿನ್ನ ತಮ್ಮ ಎಲ್ಲಿ?..... ಕಾಫಿ ಕುಡಿದಾಯ್ತಾ?"

"ಅವನನ್ನು ನನ್ನ ಜತೇಲಿ ಕರ್ಕೊಂಡು ಬರುಕ್ಕೆ ಇಷ್ಟವಿರಲೇ ಇಲ್ಲ. ಪಾರ್ವತಿದೇ

ಗೋಳು. ಒಬ್ಬರೇ ಅಷ್ಟು ದೂರ ಹೋಗ್ಬೇಡಿ. ಜತೇಲಿ ಒಬ್ಬರು ಇರ್‍ಲಿ... ಅಲ್ಲಾ ಗಂಗಾ ನದೀಲೇನು ಮೊಸಳೆ ಇದೆಯಾ? ಸೆಳೆತ ಇದೆಯಾ? ನಾನು ನೀರಿಗಿಳಿದ್ರೆ ಎಲ್ಲಾ ತಟಸ್ಥವಾಗುತ್ತೆ. ಅಂಥಾ ಕಂಠೀ ನಾನು......" ಪೌರುಷದಿಂದ ಹೇಳಿಕೊಂಡು ಸಾವಿತ್ರಿಯ ಕಡೆ ನೋಡಿ ನಕ್ಕ. ಅವಳು ನಗಲಿಲ್ಲ. ಶಾಸ್ತ್ರಿ ಅವನನ್ನು ಎಳೆದುಕೊಂಡು ಬಂದ. ನಿನ್ನ ಪೌರುಷವೆಲ್ಲಾ ಹೆಂಗಸರ ಮುಂದೆ... ಗಂಗೆಗೆ ಇಳಿದು ನೋಡು. ಸೆಳೆತ ಹೇಗಿರುತ್ತೆ ಅಂತ. ವಿಶ್ವೇಶ್ವರನೇ ಕಾಪಾಡ್ಬೇಕು ನಿನ್ನನ್ನ. ಪಾತೂನ ಕರ್‍ಕೊಂಡು ಬರೋದಲ್ವಾ?..... ಅವಳಿಗೂ ಕಾಶೀಯಾತ್ರೆ ಮಾಡಿಸಿದ ಹಾಗಾಗ್ತಿತ್ತು." ಬಚ್ಚಲ ಮನೆಯ ಕಡೆಗೆ ಕರೆದುಕೊಂಡು ಹೋದ.

"ಕಾಶೀಯಾತ್ರೆ ಮಾಡೋಕೆ ಅವಳಿಗೆ ಇನ್ನೂ ಬೇಕಾದಷ್ಟು ಸಮಯವಿದೆ. ಅವಳಿನ್ನೂ ಮುದುಕಿಯಾಗಿಲ್ಲ. ಅವಳೀಗ ಐದು ತಿಂಗಳ ಮಗುವಿನ ಬಾಣಂತಿ..."

"ಹೌದೇನೋ ಭಾವ.... ಈಗ ಹೇಳ್ತಿದೀಯಲ್ಲ.... ಎಂಥಾ ಮಗು..... ಎಷ್ಟನೇದು?"

"ಗಂಡು ಮಗು" ಮೀಸೆಯ ಬಳಿಗೆ ಕೈ ಹೋಗಿತ್ತು. "ಐದನೇದು" ಎಂದು ಹೆಮ್ಮೆಯಿಂದ ಹೇಳಿಕೊಂಡ. ಲಕ್ಷ್ಮಿ ಸಾತಕ್ಕನ ಕಡೆ ನೋಡಿದಳು. ಸಾವಿತ್ರಿ ಇವನ ಜಂಭಕ್ಕಿಷ್ಟು ಎಂದು ತನ್ನಲ್ಲೇ ಗೊಣಗಿಕೊಂಡಳು.

"ನಾನು ಊಟದ ಹೊತ್ತಿಗೆ ಬಂದು ಬಿಡ್ತೀನಿ. ಅಂಗಡಿಯಿಂದ ಏನಾದ್ರೂ ಸಾಮಾನು ಬೇಕಿದ್ರೆ ಹೇಳು ಸಾತು ಕಳಿಸಿಕೊಡ್ತೀನಿ."

"ಎಲ್ಲಾ ಇದೆ... ಏನೂ ಬೇಡ. ನೀನು ಅರ್ಧ ದಿನದ ರಜ ಹಾಕುಕ್ಕೆ ಆಗಲ್ವಾ?...." ಅವಳ ಇಂಗಿತ ಅರ್ಥವಾಗಿತ್ತು.

"ರಜ ಇಲ್ಲ ಸಾತು.... ಹೋಗಿ ಸೈನ್ ಹಾಕಿ, ಪರ್ಮಿಷನ್ ತಗೊಂಡು ಬರ್ತೀನಿ... ಶಾಂತನ್ನ ಸ್ಕೂಲಿಗೆ ಕಳಿಸ್ಬೇಡ. ಮನೇಲೇ ಇಟ್ಕೋ... ತಟ್ಟೆ ಬಟ್ಟಲು ತಕ್ಕೊಡೋಕೆ ಬೇಕಾಗುತ್ತೆ ಅವಳೆಲ್ಲಿ?"

"ಪಕ್ಕದ ಮನೆಯವರು ಕರೆದಿದ್ರು... ಇಬ್ಬರೂ ಹೋಗಿದಾರೆ. ಅವಳು ಸ್ಕೂಲಿಗೆ ಹೋಗದಿದ್ರೆ ಲಲಿತಳೂ ಹೋಗುಲ್ಲ. ಇಬ್ಬರೂ ಹುರಿದು ಮುಕ್ತಾರೆ."

"ಮಾವಯ್ಯ ಬಂದಿದಾನೆ, ಗಲಾಟೆ ಮಾಡ್ಬೇಡಿ ಅಂತ ಹೆದರಿಸು. ತೆಪ್ಪಗಿರ್ತಾರೆ. ನಾನು ಬೇಗ ಬಂದು ಬಿಡ್ತೀನಿ" ಎಂದು ಹೇಳಿ ಮನೆಯಿಂದ ಹೊರಟ.

* * *

ಬಿಸಿ ಬಿಸಿ ಅಕ್ಕಿ ರೊಟ್ಟಿಯ ಮೇಲೆ ಬೆಣ್ಣೆಯನ್ನು ಹಾಕಿಸಿಕೊಂಡು ಚಟ್ನಿಯೊಂದಿಗೆ ನಾಲ್ಕು ರೊಟ್ಟಿಗಳನ್ನು ತಾನು ತಿಂದು, ತನ್ನ ತಮ್ಮನಿಗೂ ಹಾಕಿಸಿದ.

"ನಮ್ಮ ಸಾವಿತ್ರಿ ತಿಂಡಿ, ಅಡಿಗೆ ಮಾಡೋದ್ರಲ್ಲಿ ಎತ್ತಿದ ಕೈ... ಅದೇ ನಿನ್ನ

ಅತ್ತಿಗೆ ಸೋಂಭೇರಿ... ಅಕ್ಕಿ ರೊಟ್ಟೀನ ನೋಡು ಎಷ್ಟು ಚೆನ್ನಾಗಿ ತಟ್ಟಿದಾಳೆ. ಹದವಾಗಿ ಬೇಯಿಸಿದಾಳೆ" ಕುಳಿತಲ್ಲಿಂದಲೇ ಸಾವಿತ್ರಿಗೆ ಕೇಳುವಂತೆ ಹೊಗಳಿದ.

ಶಾಂತ ಇಬ್ಬರಿಗೂ ಬಿಸಿ ಬಿಸಿ ಗಟ್ಟಿ ಕಾಫಿಯನ್ನು ತಂದಿತ್ತಳು. ಏನೇ ಶಾಂತಾ ಏನು ಓದ್ತಾ ಇದೀಯೆ?.... ನಿನ್ನ ತಂಗಿ ಏನು ಓದ್ತಾಳೆ?"

"ನಾನು ಮೂರನೇ ಕ್ಲಾಸು.... ಇವಳು ಒಂದನೇ ಕ್ಲಾಸು..."

"ಬಾಯಿ ಪಾಠ ಮಗ್ಗೀ ಎಲ್ಲಾ ಹೇಳ್ಕೊಟ್ಟಿದಾರೋ?"

"ಹೂಂ ಮಾವಯ್ಯ...."

"ಎಲ್ಲಿ ಎಂಟನೇ ಮಗ್ಗಿ ಹೇಳು."

ಶಾಂತ ನಾಚಿದಳು. ಆದರೆ ಲಲಿತ ಹಿಂದಿಯಲ್ಲಿ ಏಕ್, ದೋ, ತೀನ್ ಅಂತ ಶುರು ಮಾಡಿದಳು.

"ಕನ್ನಡದಲ್ಲಿ ಕಲಿತಿಲ್ವಾ?"

"ಇಲ್ಲಿ ಸ್ಕೂಲಲ್ಲಿ ಎಲ್ಲಾ ಪಾಠಾನೂ ಹಿಂದೀಲೇ ಹೇಳಿಕೊಡೋದು." ಲಲಿತ ಎಂದಳು.

"ಸರಿ ಹೋಯ್ತು. ಹಿಂದೀಲಿ ಕಲಿತು ಏನ್ಮಾಡ್ತೀರಿ?.... ನಿಮ್ಮಮ್ಮನೂ ಹೇಳಿ ಕೊಟ್ಟಿಲ್ವಾ ಹಾಗಾದ್ರೆ....."

"ಅಮ್ಮಂಗೆ ಪುರುಸೊತ್ತೇ ಇಲ್ಲ.... ಕೇಳಿದ್ರೆ ಬೈತಾಳೆ..."?

"ಸರಿ ನಿಮ್ಮಮ್ಮಂಗೆ ಸಧ್ಯಕ್ಕೆ ಪುರುಸೊತ್ತು ಸಿಗುವುದಿಲ್ಲ. ನಿಮ್ಮ ಅತ್ತೆಗೆ ಬಿಡುವಿಲ್ಲ. ನನ್ನ ಜತೇಲಿ ನಮ್ಮೂರಿಗೆ ಬಾ... ಅಲ್ಲಿಯ ಕನ್ನಡ ಸ್ಕೂಲಿಗೆ ಸೇರಿಸ್ತೀನಿ.. ಎಲ್ಲಾ ಕಲಿಯೂವಂತೆ." ಲಲಿತಳ ಕೆನ್ನೆಯನ್ನು ಚಿವುಟಿದ. ಅವಳು ಹಿಂದೆ ಸರಿದಳು.

"ಅಮ್ಮನ್ನು ಕೇಳ್ಬಿಟ್ಟು ಹೇಳ್ತೀನಿ." ಅಂದಳು. ಅಷ್ಟರಲ್ಲಿ ಲಕ್ಷ್ಮಿ ಬಂದಳು.

"ಲಕ್ಷ್ಮೀ ನಿನ್ನ ಮಗಳು ಜಾಣೆ. ಎಲ್ಲಾ ಸಾವಿತ್ರಿಯ ಹಾಗೆ." ಹೊಗಳಿದ. ಒಳಗಿದ್ದ ಸಾವಿತ್ರಿಗೆ ಕಂಠಿಯ ಮಾತು ಕೇಳಿಸಿತ್ತು. ಒಳಗೊಳಗೇ ಹಲ್ಲು ಕಡಿದಳು.

"ಶಾಂತ ಮಾವಯ್ಯಂಗೆ ಚಾಪೆ ದಿಂಬು ಕೊಡು. ಒಂದು ಗಳಿಗೆ ಮಲಗ್ಲಿ ಸುಮ್ನೇ ಪ್ರಶ್ನೆ ಕೇಳ್ಬೇಡಿ. ಪ್ರಯಾಣ ಮಾಡಿ ಆಯಾಸ ಆಗಿದೆ..."

"ಹೌದು ಕಣ್ರೇ ಹುಡ್ಗೀರಾ.... ಗಡದ್ದಾಗಿ ತಿಂಡಿ ತಿಂದಿದ್ದಾಯ್ತು... ನಿಮ್ಮಪ್ಪ ಬರೋವರ್ಗೂ ಮಲಗಿರ್ತೀನಿ. ಊಟಕ್ಕೆ ಎಲೆ ಹಾಕಿದ ಮೇಲೆ ಎಬ್ಬಿಸ್ಬಿಡಿ" ಎಂದು ಹೇಳಿದ. ಶಾಂತ ಚಾಪೆಯನ್ನು ಹಾಸಿ ದಿಂಬುಗಳನ್ನು ಕೊಟ್ಟಳು.

"ನಂಜುಂಡಾ ನೀನು ಮಲಕ್ಕೋತೀಯೇನೋ.." ತಮ್ಮನನ್ನು ಕೇಳಿದ.

"ಇಲ್ಲ ಅಣ್ಣಯ್ಯ... ಬಟ್ಟೆಗಳನ್ನು ಒಗೆದುಬಿಡ್ತೀನಿ. ಬಿಸಿಲು ಚೆನ್ನಾಗಿದೆ...."

"ಕೆಲಸದವಳು ಒಗೆದು ಹಾಕ್ತಾಳೆ" ಲಕ್ಷ್ಮಿ ಎಂದಳು.

"ಸರಿ ಒಗೆಯುವ ಬಟ್ಟೆಗಳ ಜತೇಲೆ ಎಲ್ಲವನ್ನೂ ಇಟ್ಬಿಟ್ಟು ನೀನು ಮಲಗೋದಾದ್ರೆ ಮಲಗು" ಎಂದು ಹೇಳಿ ತಾನು ಚಾಪೆಯ ಮೇಲೆ ಉರಳಿ ಮಗ್ಗುಲಾಗಿ ಮಲಗಿದ. ಕ್ಷಣ ಮಾತ್ರದಲ್ಲಿ ಗೊರಕೆಯ ಸದ್ದು ಕೇಳಲಾರಂಭಿಸಿತ್ತು.

"ಸ್ಕೂಲಿಗಂತೂ ಹೋಗ್ಲಿಲ್ಲ, ಇವಳನ್ನು ಆಡಿಸ್ತಾ ಇರಿ. ನಾನು ಅತ್ತೆಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡ್ತೀನಿ" ಎಂದು ಲಕ್ಷ್ಮಿ ಹೇಳಿ ಪದ್ಮಿನಿಯನ್ನು ಶಾಂತಳ ಬಳಿ ಬಿಟ್ಟು ತಾನು ಒಳಕ್ಕೆ ಹೋದಳು. ನಂಜಂಡನೂ ಇನ್ನೊಂದು ಚಾಪೆಯನ್ನು ಹಾಸಿಕೊಂಡು ಮಲಗಿದ.

* * *

ಲಕ್ಷ್ಮಿ ಸಾವಿತ್ರಿ ಅಡಿಗೆಯನ್ನು ಮುಗಿಸಿ ಗುಂಡಣ್ಣನ ಬರವನ್ನೇ ಕಾಯುತ್ತಾ ಕುಳಿತರು... ಅರ್ಧ ದಿನದ ರಜವನ್ನು ಹಾಕಿ ತಡವಾಗಿ ಮನೆಗೆ ಬಂದ.

"ಸಾತೂ ಒಂದಿಷ್ಟು ಹಪ್ಪಳ ಸಂಡಿಗೇನ ಕರಿದು ಬಿಡು. ಲಕ್ಷ್ಮೀ ತಟ್ಟೆ ಹಾಕಿ ಬಿಡು. ಕಂಠೀನ ಅವನ ತಮ್ಮನ್ನು ಎಬ್ಬಿಸ್ತೀನಿ" ಶಾಸ್ತ್ರಿ ಎಂದ.

"ನಾವೇ ಎದ್ದಿದೀವಿ" ಇಂಗಿನ ವಗ್ಗರಣೆ ವಾಸನೆ ಮನೇನೆಲ್ಲಾ ತುಂಬಿಕೊಂಡಿದೆ. ಎಲೆ ಹಾಕಿಸು. ನಾನು ತಟ್ಟೇಲಿ ಊಟ ಮಾಡುಲ್ಲ....." ಕಂಠಿ ಎಂದ.

"ಮುತ್ತುಗದ ಎಲೆ ಇದ್ದರೆ ತೆಗೀ ಲಕ್ಷ್ಮೀ......"

"ಯಾಕಯ್ಯಾ ಎಲೆ ಇಲ್ವಾ?.... ಸಾವಿತ್ರಿ ಯಾವುದರಲ್ಲಿ ಊಟ ಮಾಡ್ತಾಳೆ?"

"ಅವಳು ಬೆಳ್ಳಿ ತಟ್ಟೇಲಿ ಊಟ ಮಾಡ್ತಾಳೆ. ಅವಳದ್ದೇ ತಟ್ಟೆ ಇದೆ. ಹಚ್ಚಿದ ಮುತ್ತುಗದ ಎಲೆ ಇರಬೇಕು... ಹಾಕಿಸ್ತೀನಿ ಬಿಡು...."

"ನಿನ್ಹೆಂಡ್ತಿ ಹೊಟ್ಟೆ ಹೊತ್ಕೊಂಡು ಎಷ್ಟು ಕೆಲ್ಸ ಮಾಡ್ತಾಳೆ... ಹೋಗು ನೀನು ತೆಗೆದುಕೊಡು" ಕುಳಿತಲ್ಲಿಂದಲೇ ಆಜ್ಞೆ ಮಾಡಿದ.

"ತೆಗೀತಾಳೆ ಬಿಡು. ನೀನೇನು ನಿನ್ನ ಹೆಂಡತಿಗೆ ಸಹಾಯ ಮಾಡೋದು ಮಹಾ.....? ನಾನು ನೋಡಿಲ್ವಾ? ಏದುಸಿರು ಬಿಟ್ಕೊಂಡು ಅವಳೇ ಎಲ್ಲಾ ಮಾಡ್ತಾಳೆ.... ಬಸಿರೀಲೂ ಅಷ್ಟೇ ಬಾಣಂತನದಲ್ಲೂ ಅಷ್ಟೇ..."

"ನಿನ್ನ ತಂಗಿ ಸೋಂಭೇರಿ. ಅಷ್ಟಾದ್ರೂ ಮಾಡ್ಲಿ ಅಂತ.... ಈಗ ಅವಳ ವಿಷಯ ಯಾಕೆ? ಹೊಟ್ಟೆ ಹಸೀತಿದೆ. ಕೈ ಕಾಲು ತೊಳೆದು ಬರ್ತೀನಿ. ಎಲೆ ಹಾಕ್ಸು." ಎನ್ನುತ್ತಾ ಎದ್ದ. ನಂಜುಂಡ ಅವನನ್ನು ಹಿಂಬಾಲಿಸಿದ.

ಮುತ್ತುಗದ ಎಲೆಯನ್ನು ಹಾಕಿ ಕುಡಿಯಲು ನೀರಿನ ಲೋಟಗಳನ್ನಿಟ್ಟು ಲಕ್ಷ್ಮಿ ಒಳಗೆ ಹೊರಟು ಹೋಗಿದ್ದಳು. ಸಾತಕ್ಕನೇ ಮಡಿಯಲ್ಲಿ ಎಲೆಗಳಿಗೆ ಬಡಿಸಿದಳು. ಪರಿಶಿಂಚನೆ ಮಾಡಿ, ಚಿತ್ರಾವತಿಯನ್ನಿಟ್ಟು, ಅನ್ನಕ್ಕೆ ಕೈ ಹಾಕಿದ. ಸಾತಕ್ಕ ಒಂದೊಂದನ್ನೇ ತಂದು ಬಡಿಸಿದಳು. ಮೌನವಾಗಿ ಊಟ ಸಾಗಿತು.

ಕಡೆಯಲ್ಲಿ ಮೂವರೂ ಆಪೋಶನವನ್ನು ತೆಗೆದುಕೊಂಡು, "ಅನ್ನದಾತಾ ಸುಖೀಭವ" ಎಂದು ಹೇಳಿ ಎದ್ದರು 'ಡರ್' ಎಂದು ಅಕ್ಕಪಕ್ಕದ ಮನೆಯವರಿಗೆ ಕೇಳುವಂತೆ ತೇಗಿದ ಕಂಠಿ, ಅಡಿಗೆಯ ಮನೆ ಬಾಗಿಲಿಗೆ ಬಂದ. "ಅಡಿಗೆಯೆಲ್ಲಾ ದಿವಿನಾಗಿತ್ತು ಸಾವಿತ್ರಿ.... ಹೊಟ್ಟೆ ತುಂಬಿ ಹೋಯ್ತು. ಇನ್ನು ನಿಮ್ಮಿಬ್ಬರ ಊಟ ಆಗ್ಬೇಕು. ಸಾಕಷ್ಟು ಮಾಡಿದೀಯ ತಾನೇ?" ಪ್ರಶ್ನಿಸಿದ.

"ಹೂಂ. ಮಕ್ಕಳ ಊಟವೂ ಆಗಿಲ್ಲ.... ಬೇಕಾದಷ್ಟು ಮಿಕ್ಕಿದೆ, ನೀನು ಸುಧಾರಿಸ್ಕೋ... ನಾನು ಮಕ್ಕಳನ್ನು ಕರ್ಕೊಂಡು ಬರ್ತೀನಿ. ಪಕ್ಕದ ಮನೇಲಿ ಆಡ್ತಿರಬಹುದು." ಎಂದು ಹೇಳಿ ಹೊರಟ ಶಾಸ್ತ್ರಿಯೊಡನೆ ಕಂಠಿಯೂ ಆಚೆಗೆ ಬಂದ.

ಲಕ್ಷ್ಮಿ ಮಕ್ಕಳಿಗೆ ಬಡಿಸಿ, ಪದ್ಮಿನಿಗೆ ಊಟವನ್ನು ಮಾಡಿಸಿದಳು. "ಲಕ್ಷ್ಮೀ ನೀನು ಕೂತ್ಕೊಂಡ್ಬಿಡು. ಎಷ್ಟೊ ಹೊತ್ತ ಉಪವಾಸ ಇರ್ತೀಯಾ...." ಸಾತಕ್ಕ ಎಂದಳು.

"ಎಲೆ ತೆಗೆದು ಗೋಮೆ ಹಾಕಿ ಬಿಡ್ತೀನಿ ಅತ್ಗೆ.... ಆಮೇಲೆ ಇಬ್ಬರೂ ಒಟ್ಟಿಗೆ ಕೂತ್ಕೊಳ್ಳೋಣ.... ಊಟ ಮಾಡಿ ನೀವೆಲ್ಲಾ ಮಲಕ್ಕೊಂಡು ನಿದ್ದೆ ಮಾಡ್ಬೇಕು. ಗಲಾಟೆ ಮಾಡ್ಬಾರ್ದು" ಮಕ್ಕಳಿಗೆ ತಾಕೀತು ಮಾಡಿದಳು.

"ಆಟ ಆಡ್ತೀವಮ್ಮಾ...." ಶಾಂತ ಎಂದಳು.

"ಈ ಬಿಸಿಲ ಹೊತ್ನಲ್ಲಿ ಎಂಥಾ ಆಟ? ಹೇಳಿದ ಮಾತನ್ನು ಸುಮ್ಮನೇ ಕೇಳು.... ಮಾವಯ್ಯ ಬೇಜಾರು ಮಾಡ್ಕೋತಾರೆ."

"ಅವರು ಊರಿಗೆ ಯಾವಾಗ ವಾಪಸ್ಸು ಹೋಗ್ತಾರೆ" ಲಲಿತ ಕೇಳಿದಳು. ಸಾತಕ್ಕ ನಕ್ಕಳು.

"ಮಾವಯ್ಯನ ಜತೆ ಊರಿಗೆ ಹೋಗ್ತೀಯೇನು?..... ಕರೀತಿದ್ದ ನಿನ್ನನ್ನ..."

"ಇವತ್ತು ಹೋಗಿ ನಾಳೇನೇ ವಾಪಸ್ಸು ಬಂದ್ಬಿಡ್ತೀನಿ" ಇಬ್ಬರೂ ನಕ್ಕರು. ಮಕ್ಕಳ ಊಟವಾದ ಮೇಲೆ, ಅವರುಗಳನ್ನು ರೂಮಿಗೆ ಕಳುಹಿಸಿ, ಎಲೆ ತೆಗೆದು ಆಚೆಗೆ ಎಸೆದು ತಟ್ಟೆಗಳನ್ನು ತೆಗೆದು ತೊಳೆದು ಗೋಮೆಯನ್ನು ಹಾಕಿ ನೆಲವನ್ನು ಒರೆಸಿದಳು. ನಂತರ ಸಾತಕ್ಕ ಲಕ್ಷ್ಮಿ ಇಬ್ಬರೂ ಊಟಕ್ಕೆ ಕುಳಿತರು.

* * *

ವೆರಾಂಡದಲ್ಲಿ ಕುರ್ಚಿಗಳನ್ನು ತಂದು ಹಾಕಿದ. ಶಾಸ್ತ್ರಿ, ಕಂಠಿ ಮಾತಿಗೆ ಕುಳಿತರು. ನಂಜುಂಡ ಹತ್ತಿರದಲ್ಲೇ ಸುತ್ತಾಡಿ ಬರುತ್ತೇನೆಂದು ಹೊರಟಿದ್ದ.

"ಜ್ವಾಪಾನಕಣೋ ನಂಜುಂಡಾ. ಗೊತ್ತಿಲ್ಲದ ಊರು, ರಸ್ತೆ ತಪ್ಪಬಹುದು. ಶಾನೇ ದೂರ ಹೋಗ್ಬೇಡ. ಆಮೇಲೆ ನಿನ್ನನ್ನ ಎಲ್ಲಿ ಹುಡುಕ್ಲೀ..." ಕಂಠಿ ಎಚ್ಚರಿಸಿದ.

"ನನ್ನ ಹೆಸರನ್ನು ಹೇಳಿ, ಯಾರನ್ನು ಕೇಳಿದ್ರು ನಮ್ಮ ಮನೇನ ತೋರಿಸ್ತಾರೆ"

ಶಾಸ್ತ್ರಿ ಎಂದ.

"ಮುಂಡೇದಕ್ಕೆ ಭಾಷೆ ಬರ್ಬೇಕಲ್ಲ.... ಏನಂತ ಕೇಳ್ತಾನೆ?" ಕಂಠಿ ಜೋರಾಗಿ ನಕ್ಕ.

"ಹೌದಲ್ವಾ?" ಶಾಸ್ತ್ರಿ ಪೆಚ್ಚಾಗಿ ನಕ್ಕ. "ಹೌದಪ್ಪಾ.... ಈ ಭಾಷೇದೇ ಒಂದು ಭಾರಿ ಸಮಸ್ಯೆ.... ಹೊಸದರಲ್ಲಿ ನಂಗೂ ಕಷ್ಟ ಆಯ್ತು. ಸಾತೂ ಗಂತೂ ಇವತ್ತಿಗೂ ಚೆನ್ನಾಗಿ ಮಾತಾಡೋಕೆ ಬರುಲ್ಲ."

"ಅಷ್ಟು ಬವಣೆ ಪಡೋಕೆ ಇಂಥಾ ಊರಿಗ್ಯಾಕೆ ಬಂದೆ? ನನ್ನನ್ನು ಒಂದ್ಮಾತು ಕೇಳಿದ್ರೆ ಬೇಡ ಅಂತಿದ್ದೆ."

"ಚೆನ್ನಾಗಿ ಸಂಬಳ ಬರುತ್ತಯ್ಯಾ.... ನಾಲ್ಕು ಕಾಸು ಕೂಡಿ ಹಾಕಿದ್ರೆ ಮುಂದೆ ನಂಗೇ ಅನುಕೂಲ...."

"ಬರೀ ದುಡ್ಡಿನ ಮುಖ ನೋಡ್ಬೇಡ. ಕ್ರಮೇಣ ನೀವೆಲ್ಲಾ ಕನ್ನಡ ಭಾಷೇನೇ ಮರೆತು ಬಿಡ್ತೀರಿ.... ನಮ್ಮೂರು, ನಮ್ಮ ಭಾಷೆ ಅಂದ್ರೆ.. ಪ್ರೇಮ ಇರಬೇಕಯ್ಯ... ದೇಶ ಕೋಶ ಬಿಟ್ಟು.. ಅಜ್ಞಾತವಾಸದಲ್ಲಿರೋರ ಥರ ಎಲ್ಲೋ ಯಾಕೆ ಇರ್ಬೇಕು.... ನಮ್ಮ ನೆಲದಲ್ಲಿ ಇದ್ದರೆ ಆ ಸೊಗಡೇ ಬೇರೆ."

"ಅದೇನೋ ನಿಜ. ಆದರೆ ಅಲ್ಲಿ ಏನಿದೆ ಆಸ್ತಿ? ಏನಿದೆ ಆದಾಯ? ಕಷ್ಟಪಟ್ಟು ಕೆಲಸ ಮಾಡಿದರೆ, ಕೈ ತುಂಬಾ ಸಂಬಳಾನಾದ್ರೂ ಸಿಗುತ್ತೆ ಇಲ್ಲಿ."

"ಸಂಬಳಕ್ಕೋಸ್ಕರ ತಾಪೇದಾರಿ ಕೆಲಸ ಮಾಡ್ತೀಯಾ? ನನ್ನ ಹಾಗೇ ಸ್ವಂತ ವ್ಯಾಪಾರಾನ ಮಾಡು. ಯಾರ ಗುಲಾಮನಾಗಿರಬೇಕಾಗಿಲ್ಲ."

"ಇದು ಗುಲಾಮಗಿರಿ ಅಲ್ವೋ ಭಾವ."

"ಮತ್ತಿನ್ನೇನು? ಸ್ವಾತಂತ್ರ್ಯ ಇದೆಯಾ ಹೇಳು?"

"ಬಿಡು. ಅದು ಅವರವರು ಪಡೆದುಕೊಂಡು ಬಂದದ್ದು ನಿನ್ನ ವ್ಯಾಪಾರ ಹೇಗಿದೆ? ಲಾಭದಾಯಕವಾಗಿದೆಯಾ?"

"ಹೂಂ. ತಕ್ಕಮಟ್ಟಿಗೆ ಚೆನ್ನಾಗಿದೆ. ನಮ್ಮೂರಿನ ಸಮೀಪದಲ್ಲಿ ಒಂದು ಹಳ್ಳಿ ಇದೆ. ಹತ್ತು ಎಕರೆ ಜಮೀನು ತಗೊಂಡಿದೀನಿ. ಹೆಂಚಿನ ಮನೆ ಕಟ್ಟಿಸ್ತಿದೀನಿ. ಏಳೆಂಟು ಎಮ್ಮೆಗಳನ್ನು ಸಾಕಿ ಹಾಲನ್ನು ಹೋಟೆಲ್ಲಿಗೆ ಸರಬರಾಜು ಮಾಡೋಣ ಅಂತ ಅಂದ್ಕೊಂಡಿದೀನಿ. ಆದಾಯ ಚೆನ್ನಾಗಿ ಬರುತ್ತೆ."

"ಹೌದಾ, ಇನ್ನೂ ಪ್ರಾರಂಭ ಮಾಡಿಲ್ವಾ?"

"ಹೂಂ. ವಾಪಸ್ಸು ಹೋದ್ಮೇಲೆ, ಎಮ್ಮೆಗಳನ್ನು ಖರೀದಿ ಮಾಡ್ತೀನಿ. ಮನೇಲಿ ಮಕ್ಕಳಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ಯಾವುದಕ್ಕೂ ಕೊರತೆ ಇರುಲ್ಲ. ಈ ಸಾರಿ ಬಾಣಂತನಕ್ಕೆ ಲಕ್ಷ್ಮೀನ ನಮ್ಮ ಮನೆಗೇ ಕಳಿಸು. ಹೇಗೂ ಸಾವಿತ್ರಿಯೂ

ಬರ್ತಾಳೆ. ಅಚ್ಚುಕಟ್ಟಾಗಿ ಬಾಣಂತನವನ್ನು ಮಾಡಿ ಕಳಿಸ್ತೀವಿ. ಈ ಬಾರಿ ನಿನ್ನ ಹೆಂಡ್ತೀಗೆ ಗಂಡು ಮಗುವೇ ಆಗುತ್ತೆ.... ಹೆರಿಗೆ ದಿನ ಯಾವಾಗ ಬೀಳುತ್ತೆ?"

"ಸರಿಯಾಗಿ ಗೊತ್ತಿಲ್ಲ. ಅವಳಿಗೇ ಗೊತ್ತು... ನೋಡೋಣ.. ನಾನು ಅವಳ ಹತ್ತಿರ ಮಾತಾಡಿ, ನಿಂಗೆ ಪತ್ರ ಬರೀತೀನಿ."

"ಹಾಗೇ ಮಾಡು... ಬಂದಿದ್ದೋನು ಒಂದ್ಮಾತು ಹೇಳ್ಲಿಲ್ಲ ಅಂತ ಬೈದುಕೋ ಬೇಡ....." ವಿಚಿತ್ರ ನಗೆಯನ್ನು ನಕ್ಕ.

"ನಾನ್ಯಾಕೆ ಬೈದುಕೊಳ್ಳಲಿ? ಲಕ್ಷ್ಮಿ ಒಪ್ಪಿದ್ರೆ ಖಂಡಿತಾ ಕರ್‍ಕೊಂಡು ಬಂದು ಬಿಡ್ತೀನಿ.... ಈಗಲೇ ಪಾತೂಗೆ ಒಂದ್ಮಾತು ಹೇಳಿರು."

"ಅವಳ್ಗೇನು ಹೇಳೋದು? ನನ್ನ ಮನೇಲಿ ನನ್ನ ಮಾತೇ ನಡೆಯೋದು. ನಾನೇ ಯಜಮಾನ. ಮನೆ ದೊಡ್ಡದಾಗಿದೆ. ನೀರಿಗೆ ಬಾವಿ ಇದೆ. ಬಾಣಂತನ ಮಾಡುವ ಮನಸ್ಸು ನನಗಿದೆ. ಇನ್ನೇನ್ಬೇಕು ಹೇಳು?"

"ಇಷ್ಟು ಹೇಳಿದ್ಯಲ್ಲಾ ಅದೇ ಬೇಕಾದಷ್ಟಾಯ್ತು."

"ಕಂಠಿಗೂ ಸೇವೆ ಮಾಡೋಕೆ ಅವಕಾಶ ಕೊಡು... ಸಾವಿತ್ರಿಗೂ ಹೇಳು. ಸದಾ ಒಲೆ ಮುಂದೆ ಕೂತ್ಕೊಂಡು ಕೆಂಪು ಮುಖ ಮಾಡ್ಕೊಂಡು ಬೇರೆಯವರಿಗೆ ಬೇಯಿಸಿ ಹಾಕೋದು ನಾಲ್ಕು ದಿನವಾದ್ರೂ ತಪ್ಪಲಿ. ನಾನು ಅಡಿಗೆ ಮಾಡಿ ಕೂರಿಸಿ ಬಡಿಸ್ತೀನಯ್ಯಾ..."

"ಕಂಠೀ, ಅಡಿಗೆ ಕೆಲಸ ಸಾವಿತ್ರಿಗೆ ಕಷ್ಟವೂ ಅಲ್ಲ, ಬೇಸರವೂ ಅಲ್ಲ. ಏನೇನೋ ಆಡ್ಬೇಡ. ಹೆಂಗಸ್ರಿಗೆ ಅಡಿಗೆ ಮನೆ ಕೆಲ್ಸ ಬಿಟ್ಟು ಬೇರೆ ಏನು ಕೆಲ್ಸ ಇರುತ್ತೆ ಹೇಳು?"

"ಬೇರೆ ಹೆಂಗಸರ ವಿಷಯ ಬಿಡು. ಸಾವಿತ್ರೀನ ನೋಡಿದ್ರೆ ಅಯ್ಯೋ ಅಂತ ಅನ್ಸುತ್ತೆ...ಶಾಸ್ತ್ರೀ. ಚಿಕ್ಕ ವಯಸ್ಸಿಗೇ ಗಂಡನ್ನ ಕಳ್ಕೊಂಡ್ಳು.... ಏನು ಸುಖ ಕಂಡ್ಳು?" ಅನುಕಂಪವನ್ನು ವ್ಯಕ್ತಗೊಳಿಸಿದ.

"ಅದು ಅವಳ ಪೂರ್ವಾರ್ಜಿತ ಕರ್ಮ.... ಏನ್ಮಾಡೋಕೆ ಆಗುತ್ತೆ? ನಾವು ಅಣ್ಣ ತಮ್ಮಂದಿರು ಅವಳನ್ನು ಚೆನ್ನಾಗಿಯೇ ನೋಡ್ಕೊಳ್ತಾ ಇದೀವಿ. ನೀನು ಇಲ್ಲದ ಅಪವಾದ ಹೊರಿಸ್ಬೇಡ. ಏಳು, ಸಕ್ಕರೆ ಫ್ಯಾಕ್ಟರೀನ ತೋರಿಸ್ಕೊಂಡು ಬರ್ತೀನಿ. ಪಾಸು ತಗೊಂಡಿದೀನಿ... ನಮ್ಮೂರ್‍ನಿಂದ ಭಾವ ಬಂದಿದಾನೆ ಅಂತ ಹೇಳಿದೀನಿ."

"ಸರಿ ಹೋದ್ರಾಯ್ತು... ನಿನ್ನ ಹೆಂಡ್ತಿ ಸ್ಟ್ರಾಂಗ್ ಕಾಫಿ ಮಾಡಿಕೊಡ್ತಾಳಾ ಅಂತ ಕೇಳು, ಅವಳ ಊಟ ಆಗಿರಬಹುದು." ಶಾಸ್ತ್ರಿ ಎದ್ದು ಒಳಗೆ ಹೊದ. ಸಾವಿತ್ರಿ ಕಾದ ನೀರಿಗೆ ಕಾಫಿ ಪುಡಿಯನ್ನು ಹಾಕಿಟ್ಟಿದ್ದಳು. ಸೋಸಲು ಬಟ್ಟೆಯನ್ನು ಸಿದ್ಧ ಮಾಡಿಟ್ಟುಕೊಂಡಿದ್ದಳು.

"ಕಾಫಿಗೆ ಸ್ವಲ್ಪ ಸಕ್ಕರೇನಾ ಹೆಚ್ಚಾಗಿಯೇ ಹಾಕು. ಕಂಠಿ ಸಿಹಿಯಾಗಿ ಕುಡೀತಾನೆ."

ಸಾತಕ್ಕ ಉತ್ತರಿಸದೇ ಕಾಫಿಯನ್ನು ಬೆರೆಸಿ, ಬಟ್ಟಲುಗಳಿಗೆ ಹಾಕಿ ಕೊಟ್ಟಳು.

* * *

ಫ್ಯಾಕ್ಟರಿಯ ಒಳಗೆ ಕಂಠಿ ಹಾಗೂ ನಂಜುಂಡನನ್ನು ಕರೆದುಕೊಂಡು ಹೋಗಿ, ಸಕ್ಕರೆಯನ್ನು ತಯಾರಿಸುವ ವಿಧಾನವನ್ನು ಅದಕ್ಕೆ ಸಂಬಂಧಪಟ್ಟ ಮೆಷಿನ್ನುಗಳನ್ನು, ತೋರಿಸಿದ ಕಬ್ಬನ್ನು ಅರೆಯುವುದರಿಂದ ಹಿಡಿದು, ಕಬ್ಬಿನ ಹಾಲು, ಕುದಿದು, ಮರಳು ಸಕ್ಕರೆಯ ರೂಪಕ್ಕೆ ತಿರುಗುವುದನ್ನು ಪ್ರತಿಯೊಂದನ್ನು ವಿವರಿಸಿದ.

ಕಂಠಿ ಮೆಚ್ಚುಗೆಯನ್ನು ಪ್ರಕಟಿಸಲಿಲ್ಲ. ಅವಹೇಳನವನ್ನು ಮಾಡಲಿಲ್ಲ. ಶಾಸ್ತ್ರಿ ಕುಡಿಯಲು ಕಬ್ಬಿನ ಹಾಲನ್ನು ತರಿಸಿದ. ಕಂಠಿ ಹಾಗೂ ನಂಜುಂಡ ಸ್ವಲ್ಪ ಸ್ವಲ್ಪ ಕುಡಿದರು. ಒಂದು ಕ್ಯಾನ್‌ನಲ್ಲಿ ಕಬ್ಬಿನ ಹಾಲಿನ್ನು ಹಾಕಿಸಿ ಮನೆಗೆ ಕಳಿಸಿದ.

"ಸಾವಿತ್ರಿ ಕುಡೀತಾಳಾ..... ಈ ಕಬ್ಬಿನ ಹಾಲು ಮಡಿಗೆ ಬರುತ್ತಾ?"

"ಅವಳು ಕುಡಿಯಲ್ಲ, ಕುಡಿದ್ರೆ ತಪ್ಪೇನಿಲ್ಲ. ಅದಕ್ಕೆ ದೋಷವಿಲ್ಲ. ಕಬ್ಬನ್ನು ಕತ್ತರಿಸಿ ಹೋಳು ಮಾಡಿಕೊಂಡು ತಿಂತಾಳೆ. ನಮಗೂ ಕೊಡ್ತಾಳೆ. ಚೆನ್ನಾಗಿರುವ ಕಬ್ಬು ಬಂದಾಗ, ಎಂಟು ಹತ್ತು ಜಲ್ಲೆಗಳನ್ನು ಮನೆಗೆ ತಂದು ಕೊಡ್ತಾರೆ."

"ನಾನು ಖರೀದಿಸಿರುವ ಜಮೀನಿನಲ್ಲಿ ಕಬ್ಬು ಹಾಕಿಸೋಣ ಅಂತಿದೀನಿ. ಲಾಭದಾಯಕ ಅಂತ ಎಲ್ಲರೂ ಅಂತಾರೆ."

"ಅಲ್ಲಿ ಹತ್ತಿರದಲ್ಲಿ ಸಕ್ಕರೆ ಕಾರ್ಖಾನೆ ಎಲ್ಲಿದೆ? ಬೆಲ್ಲ ಮಾಡಿಸಬೇಕು ಅಷ್ಟೇ....."

"ಆಲೆ ಮನೆಯ ಆಲೋಚನೆಯೂ ಇದೆ... ಆದರೆ ನಂಗೆ ಸಹಾಯಕರಿಲ್ಲ... ನೀನೂ ಆ ಕಡೆಗೆ ಬಂದ್ಬಿಡು. ಒಟ್ಟಾಗಿ ಈ ಕೆಲಸಗಳನ್ನು ಮಾಡೋಣ. ಲಾಭವನ್ನು ಹಂಚಿಕೊಳ್ಳೋಣ."

"ನಾನು ಈ ಕೆಲಸವನ್ನು ಬಿಟ್ಟು ಬರೋದೆಂದ್ರೆ ಸಾಧ್ಯವಿಲ್ಲ."

"ನಿಂಗೆ ಈ ತ್ಯಾಪೇದಾರಿಯ ಕೆಲಸವೇ ಇಷ್ಟ ಅನ್ನು. ಸ್ವಾತಂತ್ರ್ಯವಿಲ್ಲ. ಮೇಲಿನ ಅಧಿಕಾರಿಗಳು ಹೇಳಿದ ಹಾಗೆ ಕೇಳ್ಬೇಕು. ನನ್ನನ್ನು ನೋಡು. ಯಾರ ಹಂಗೂ ಇಲ್ಲ. ನಾನೇ ರಾಜ...."

"ಅದು ನಿನ್ನ ಇಷ್ಟ. ಅದಕ್ಕೆ ನಾನೇನು ಹೇಳ್ಲಿ?"

"ಸರಿ ಬಿಡು, ಕನ್ನಡ ಭಾಷೆಯೇ ಗೊತ್ತಿಲ್ಲದ ಊರಿನಲ್ಲಿ, ನೆಂಟರಿಷ್ಟರಿಂದ ದೂರ ಇಲ್ಲೆಲ್ಲೋ ಇರೋದೇ ನಿನಗೆ ಸಮ್ಮತವಿರುವಂತಿದೆ. ಸಾವಿತ್ರಿಗೆ ಲಕ್ಷ್ಮಿಗೆ ಬೇಸರ ಇಲ್ವಾ?"

"ಬೇಸರ ಯಾಕೆ? ನನ್ನ ಅನ್ನದ ಋಣ ಎಲ್ಲಿದೆಯೋ, ಅಲ್ಲಿ ನಾನು ಇರುವಾಗ, ನನ್ನ ಜೊತೆ ಅವರುಗಳೂ ಇರಬೇಕಲ್ವೇ?"

"ನೀನು ಏನೇ ಹೇಳು ಇದೊಂಥರಾ ವನವಾಸ... ನನ್ನಂಥೋನಿಗೆ ಇಂಥಾ

ಊರೆಲ್ಲಾ ಹಿಡಿಸೋದಿಲ್ಲ. ಝುಣ ಝುಣ ಅಂತ ಹಣಾನ ಎಣಿಸೋಕೆ ಹುಟ್ಟಿದ ಊರನ್ನು ಬಿಟ್ಟು ಬಂದಿದೀಯ... ನಿನ್ನನ್ನು ನೋಡಿದ್ರೆ ಮರುಕ ಹುಟ್ಟುತ್ತೆ.."

"ಅಂಥಾ ಪಾಡು ಏನೂ ಎಲ್ಲ ಕಂಠೀ. ನೀನು ಸುಮ್ನಿರು... ಎಲ್ಲಾದರಲ್ಲೂ ಏನಾದರೊಂದು ತಪ್ಪನ್ನು ಕಂಡು ಹಿಡಿದು ಕೊಂಕು ಮಾತು ಆಡದೇ ಇದ್ರೆ, ನೀನು ಶ್ರೀಕಂಠನೇ ಅಲ್ಲ. ನೀನು ಇಷ್ಟು ಮಾತಾಡ್ತೀಯ ನಿನ್ನ ತಮ್ಮ ಮಾತನ್ನೇ ಆಡುಲ್ವಲ್ಲಾ?" ಅವನ ಕಡೆ ನೋಡಿದ.

"ಅವನಿಗೆ ಇನ್ನೂ ಮದುವೆಯಾಗಿಲ್ಲ. ಏನೂ ಗೊತ್ತಿಲ್ಲ. ಏನೂ ಬೇಕಿಲ್ಲ. ನೀನು ನಂಗೆ ಬಾಮೈದ, ಅವನಿಗೇನು ಸಂಬಂಧ? ನಿನ್ನ ಹೆಂಡತಿಯ ಕಡೆ ಯಾವ್ದಾದ್ರೂ ಹೆಣ್ಣಿದ್ದರೆ ತಿಳಿಸು."

"ಹೂಂ ತಿಳಿದ್ರೆ ತಿಳಿಸ್ತೀನಿ. ಇನ್ನು ಮನೆಗೆ ಹೋಗೋಣ. ಇಲ್ಲಿ ಹತ್ತಿರದಲ್ಲಿ ಏನೂ ಇಲ್ಲ ನೋಡೋಕೆ. ಲಕ್ನೋ ಷಹರಿಗೆ ಹೋದರೆ ಬೇಕಾದಷ್ಟು ನೋಡುವ ಜಾಗಗಳಿವೆ. ಭೂಲ್ ಭುಲಯ್ಯಾ ಅಂತ ಒಂದು ಸ್ಥಳ ಇದೆಯಂತೆ. ನಾನೂ ಹೋಗಿಲ್ಲ. ಒಂದು ಸಾರ್ರಿ ಒಳಗೆ ಹೋದರೆ ವಾಪಸ್ಸು ಬರೋಕೆ ದಾರಿಯನ್ನು ಹುಡುಕೋದೆ ಕಷ್ಟ ಆಗುತ್ತಂತೆ ಅಲ್ಲೇ ಸುತ್ತಾಡಿ ಸುತ್ತಾಡಿ ಸುಸ್ತಾಗಬೇಕು, ಹಾಗಿದೆಯಂತೆ."

"ಕಳೆದು ಹೋಗ್ತೀನಿ ಅಂತ ಭಯವೇನೋ ಶಾಸ್ತ್ರಿ?" ನಕ್ಕ ಕಂಠಿ.

"ಭಯ ಅಲ್ಲ ಸಮಯವೇ ಇಲ್ಲ. ಲಕ್ಷ್ಮಿಯ ಬಾಣಂತನದಲ್ಲಿ ಸ್ವಲ್ಪ ಹೆಚ್ಚು ದಿನ ರಜ ತಗೊಂಡೆ. ರಜ ಕೊಡೋಕೇ ಗೋಳಾಡಿಸ್ತಾರಯ್ಯ."

"ಅದಕ್ಕೇ ಹೇಳಿದ್ದು, ಈ ಗುಲಾಮಗಿರಿ ಯಾಕೇ ಅಂತ... ನನ್ನ ಹಾಗೆ ಸ್ವತಂತ್ರವಾಗಿರು... ಆರಾಮವಾಗಿರಬಹುದು."

"ನಡೀದೇ ಇರೋ ಮಾತನ್ನ ಮತ್ತೆ ಮತ್ತೆ ಹೇಳ್ತೀಯಲ್ಲ ಕಂಠೀ" ಸ್ವಲ್ಪ ಬಿರುಸಾಗಿ ಹೇಳಿದ.

"ಬಿಡು ನಿನ್ನ ಹಣೇಬರಹ. ಏನೋ ಭಾಮೈದಂಗೆ ಅನುಕೂಲವಾಗ್ಲಿ ಅಂತ ತಿಳುವಳಿಕೆ ಹೇಳಿದ್ರೆ ನಿಂಗೆ ಬೇಡ. ಬೇಡವಾದ್ರೆ ಬಿಡು... ಮುಂದೆ ಒಂದಲ್ಲ ಒಂದು ದಿನ ನಿಂಗೇ ಬೇಸರವಾಗುತ್ತೆ. ಆಗೇನು ಮಾಡ್ತೀಯ?" ಕೆಣಕಿ ಕೇಳಿದ.

"ಆಗ ನೋಡೋಣ...." ಶಾಸ್ತ್ರಿ ಎಂದ. ಅಲ್ಲಿಗೆ ಮಾತು ಮುಗಿದಿತ್ತು.

* * *

ಮಾರನೇ ದಿನ ಕಂಠಿ ಹಾಗೂ ಅವನ ತಮ್ಮ ಅಲಹಾಬಾದಿಗೆ ಪ್ರಯಾಣ ಬೆಳೆಸಿದರು. ಕಂಠಿ ಆಡಿದ ಮಾತುಗಳು ಶಾಸ್ತ್ರಿಯನ್ನು ಯೋಚಿಸುವಂತೆ ಮಾಡಿತ್ತು. ಮೇಲಿನವರ ಕಿರುಕುಳದಿಂದ ಸ್ವಾಭಿಮಾನಕ್ಕೆ ಧಕ್ಕೆ ಬರುತ್ತಿತ್ತು. ಈ ಕೆಲಸಕ್ಕೆ ರಾಜೀನಾಮೆ

ಕೊಟ್ಟು ಮಂಡ್ಯಕ್ಕೆ ವಾಪಸ್ಸು ಹೋಗಲು ಇಷ್ಟವಿರಲಿಲ್ಲ. ಸಂಬಳ ಹೆಚ್ಚು ಸಿಗುತ್ತದೆಂಬ ಆಸೆಯಿಂದ ಬಂದುದಾಗಿತ್ತು... ಆದರೆ ಪರದೇಶದಲ್ಲಿ ಬಂದು ಏಕಾಂಗಿಯಾಗಿ ನಿಂತ ಅನುಭವವಾಗುತ್ತಿತ್ತು. ತನ್ನ ತುಮುಲವನ್ನು ಯಾರಿಗೂ ಹೇಳಿಕೊಳ್ಳುವಂತಿರಲಿಲ್ಲ. ಮನೆಯಲ್ಲಿಯೂ ಹೇಳುವಂತಿರಲಿಲ್ಲ. ಅವರುಗಳಿಗೆ ಇದೆಲ್ಲ ಅರ್ಥವಾಗುವುದಿಲ್ಲ. ಹೀಗೇ ಮುಂದುವರೆದರೆ, ತಾನು ಒಂದು ದೃಢ ನಿರ್ಧಾರವನ್ನು ತೆಗೆದುಕೊಳ್ಳಲೇ ಬೇಕಾಗುತ್ತೆ. ಸಧ್ಯಕ್ಕೆ, ಲಕ್ಷ್ಮಿಗೆ ಹೆರಿಗೆಯಾಗುವವರೆಗೂ ಬೇರೆ ಪ್ರಶ್ನೆಯೇ ಇಲ್ಲ....ಅಂತ ಎಂದುಕೊಂಡ.

ಲಕ್ಷ್ಮೀನ ಬಾಣಂತನಕ್ಕೆ ಕಂಠಿಯ ಮನೆಗೆ ಕಳಿಸಬೇಕು. ಹೇಗೂ ಅವನಾಗಿಯೇ ಹೇಳಿದಾನೆ ಎಂದುಕೊಂಡು ಆ ವಿಷಯವನ್ನು ಎತ್ತಿದ.

“ಸಾತೂ, ನೀನು ಮಕ್ಕಳನ್ನು ಕರೆದ್ಕೊಂಡು ಪಾತು ಮನೆಗೆ ಹೋಗ್ಬಿಡಿ. ಅಲ್ಲಿ ಅವನ ಮನೇಲಿ ಎಲ್ಲಾ ಅನುಕೂಲವಿದೆಯಂತೆ.”

“ಏನು ಬಾಣಂತನಕ್ಕೆ ಪಾತು ಮನೆಗೆ ಹೋಗೋದೆ? ಒಪ್ಕೊಂಡು ಬಿಟ್ಯಾ?” ಸಾತಕ್ಕ ಕೇಳಿದಳು.

“ಒಪ್ಕೊಂಡಿಲ್ಲ, ನಿಮ್ಮಿಬ್ಬರನ್ನು ಕೇಳಿ ಹೇಳ್ತೀನಿ ಅಂತಂದೆ.”

“ನಾನು ಎಲ್ಲಿಗೂ ಹೋಗುಲ್ಲಪ್ಪಾ... ನಿನ್ನ ಊಟ ತಿಂಡಿಗೆ ತೊಂದರೆ ಆಗುತ್ತೆ....” ಸಾತಕ್ಕ ಖಡಾ ಖಂಡಿತವಾಗಿ ಹೇಳಿದಳು.

“ನಾನೂ ಹೋಗುಲ್ಲ. ವರ್ಷದ ಕೆಳಗೆ ಖರ್ಚು ಮಾಡಿಕೊಂಡು ಎಲ್ಲರೂ ಹೋಗಿ ಬಂದುದಾಗಿದೆ. ಏನಾಗುತ್ತೋ ಹೇಗಾಗುತ್ತೋ ಅದು ಇಲ್ಲೇ ಆಗಲಿ” ಲಕ್ಷ್ಮಿಯೂ ನುಡಿದಳು.

“ಸರಿ ಏನದ್ರೂ ಮಾಡ್ಕೊಳ್ರಪ್ಪಾ, ಅವನು ಹೇಳಿದ್ದು ಸರಿ ಅಂತ ಅನ್ನಿಸ್ತು ಹೇಳ್ದೆ” ಶಾಸ್ತ್ರಿ ಸಿಡುಕಿದ.

“ಪಾತೂಗೆ ಕಷ್ಟವಾಗುತ್ತೆ ಅಷ್ಟೇ.... ಕಂಠೀ ಹೇಳಿಬಿಡ್ತಾನೆ. ಅವನಿಗೇನು ಗೊತ್ತು? ಆಮೇಲೆ ಸುಮ್ಮನೇ ಹಗರಣವಾಗುತ್ತೆ.... ಅದೇನು ಲಕ್ಷ್ಮಿಯ ಅಣ್ಣನ ಮನೆಯಲ್ಲ ಅಥವಾ ನಿನ್ನ ಅಣ್ಣನ ಮನೆಯಲ್ಲ......”

“ಸಾಕು.... ಇನ್ನು ಈ ಮಾತು ಸಾಕು” ಶಾಸ್ತ್ರಿ ಆ ಸ್ಥಳದಿಂದ ಎದ್ದು ಹೋಗಿದ್ದ.

“ನೋಡಿ ಅತ್ಗೇ, ಹೇಗೆ ಪಿತ್ತ ಕೆರಳಿದೋರ ಥರ ರೇಗಾಡ್ತಾರೆ... ಒಂಟಿಯಾಗಿ ಇವರನ್ನೂ ಬಿಟ್ಟು ಹೋಗೋದು ಸರೀನಾ... ಮಕ್ಕಳಿಗೆ ಸ್ಕೂಲು ತಪ್ಪುತ್ತೆ... ಸುಮ್ಮನೇ ಖರ್ಚು ವೆಚ್ಚ, ಇದೆಲ್ಲಾ ಅರ್ಥವಾಗೋದು ಬೇಡ್ವಾ?”

“ನೀನು ಉದ್ವೇಗ ಮಾಡ್ಕೋಬೇಡ.... ಕಂಠಿ ಎಂಥೋನು ಅಂತ ಇವನಿಗೆ ಸರಿಯಾಗಿ ಗೊತ್ತಿಲ್ಲ.... ಸುಮ್ಮನೇ ಬಾಯಿ ಮಾತಿಗೆ ಹೇಳಿರ್ತಾನೆ. ಅದನ್ನು ಇವನು

ನಿಜ ಅಂತ ತಿಳ್ಕೊಂಡಿದಾನೆ."

"ಹೌದು ಅತ್ಗೇ, ಎಲ್ಲರನ್ನೂ ಬೇಗ ನಂಬಿ ಬಿಡ್ತಾರೆ. ನಮ್ಮನ್ನೆಲ್ಲಾ ಹೇಗೆ ದಬಾಯಿಸ್ತಾರೆ? ಕಂಠೀ ಭಾವನ ಹತ್ರ ಮಾತ್ರ ಮೆತ್ತಗೆ ಮಾತಾಡ್ತಾರೆ..."

"ತಂಗೀ ಗಂಡ ಅಂತ, ಸರಿ ಹೋಗಿಸಿಕೊಳ್ತಾನೆ. ಇಲ್ಲಿ ಎರಡು ದಿನ ಇದ್ನಾ? ಏನೇನು ತಪ್ಪುಗಳನ್ನು ಹುಡುಕಿ ಇಟ್ಕೊಂಡಿದಾನೋ...... ಪಾತು ಎದುರಿಗೆ ಎಲ್ಲವನ್ನೂ ಒದರ್ತಾನೆ... ನಿನ್ನ ಅಣ್ಣನ ಮನೇಲಿ ಹಾಗೆ ಹೀಗೆ ಅಂತ....ಅವನು ಆಡಿಕೊಳ್ಳುವ ಸ್ವಭಾವದವನು. ಅವನ ಮಾತಿಗೆ ಕಿವೀನೇ ಕೊಡ್ಬಾರ್ದು. ಅವನ ತಮ್ಮ ಮಾತೇ ಇಲ್ಲ... ಅದ್ಹೇಗೆ ಇಂಥಾ ಅಣ್ಣನನ್ನು ಸಹಿಸಿಕೊಳ್ತಾನೋ?"

* * *

ಊರಿನ ಸುತ್ತ ಮುತ್ತ ಚೆನ್ನಾಗಿ ಪರಿಚಯವಾಗಿದ್ದುದರಿಂದ ಹೆಚ್ಚು ತೊಂದರೆ ಇರಲಿಲ್ಲ.... ಹೆರಿಗೆ ನೋವು ಪ್ರಾರಂಭವಾದ ಕೂಡಲೇ ಸಮೀಪದಲ್ಲಿದ್ದ ಹೆರಿಗೆ ಆಸ್ಪತ್ರೆಗೆ ಸೇರಿಸಿದ ಕೆಲವೇ ಗಂಟೆಗಳೊಳಗೆ ಲಕ್ಷ್ಮಿ ಮಗುವನ್ನು ಹೆತ್ತಿದ್ದಳು. ಎಂಥಾ ಮಗು ಅಂತ ಕೇಳುವ ಧೈರ್ಯವೇ ಇರಲಿಲ್ಲ. ಆದರೂ ನರ್ಸು ಬಂದು, ಹೆಣ್ಣು ಮಗುವಾಗಿದೆ ಅಂತ ತಿಳಿಸಿದಾಗ ಚೈತನ್ಯವಿಲ್ಲದವನಂತೆ, ಶಾಸ್ತ್ರಿ ನಿಂತ. "ಯಾಕೆ ಹೀಗಾಯ್ತು? ಜಾತಕವನ್ನು ತೋರಿಸಿದಾಗ, ಗಂಡು ಮಗು ಹುಟ್ಟುವ ಯೋಗ ಇದೆ ಅಂತ ಹೇಳಿದ್ರಲ್ಲ, ಏನು ವ್ಯತ್ಯಾಸವಾಯಿತು. ಜಾತಕ ಸರಿ ಇಲ್ಲವೇ? ಜ್ಯೋತಿಷಿಗಳು ಸರಿಯಾಗಿ ನೋಡಲಿಲ್ಲವೇ? ಅಥವಾ ತಿಳಿದರೂ ಹೇಳಲಿಲ್ಲವೇ? ಅಥವಾ ಅವರ ಮಾತು ನಿಜವೇ ಆಗಿದ್ದು ಇಲ್ಲಿ ಆಸ್ಪತ್ರೆಯಲ್ಲಿ ಏನದರೂ ಅಚಾತುರ್ಯ ನಡೆದಿರಬಹುದೇ? ತಿಳಿದುಕೊಳ್ಳುವುದು ಹೇಗೆ? ಯಾರನ್ನು ಕೇಳುವುದು?" ಈ ಆಲೋಚನೆಯಲ್ಲಿದ್ದವನನ್ನು ನರ್ಸು ಎಚ್ಚರಿಸಿದಳು. "ಡಾಕ್ಟರ್ ಸಾಬ್ ಕರೀತಿದಾರೆ, ಬರ್ಬೇಕು" ಎಂದು ಹಿಂದಿಯಲ್ಲಿ ಹೇಳಿದ್ದಳು. ಲೇಡಿ ಡಾಕ್ಟರು ಮಾತಾಡಿದ್ದಳು.

"ನಿಮ್ಮ ಹೆಂಡತಿಯ ಮನಸ್ಸಿಗೆ ಆಘಾತವಾಗಿದೆ. ಇದುವರೆಗೂ ಅವರು ಮಗುವಿನ ಮುಖವನ್ನು ನೋಡಿಲ್ಲ. ಒಂದೇ ಸಮನೆ ಅಳ್ತಿದಾರೆ. ಹೀಗಾದ್ರೆ ತಾಯಿ ಮಗು ಇಬ್ಬರಿಗೂ ತೊಂದರೆ.... ಅವರನ್ನು ನೀವೇ ಸಮಾಧಾನಗೊಳಿಸಬೇಕು" ಅಂತ ಸಲಹೆ ನೀಡಿ, ಕೆಲವು ಔಷಧಿಗಳನ್ನೂ, ಪಥ್ಯವನ್ನೂ ಬರೆದುಕೊಟ್ಟಳು. ಹೊರ ಬಂದವನಿಗೆ ವಾರ್ಡಿಗೆ ಹೋಗಿ ಲಕ್ಷ್ಮಿಯನ್ನು ಮಾತನಾಡಿಸುವುದೂ ಬೇಡ ಅಂತೆನ್ನಿಸಿತು. ಅತ್ತೂ ಕರೆದು ರಂಪ ಮಾಡಿದರೆ ಎಲ್ರೂ ಏನಂದುಕೊಳ್ತಾರೆ. ಈಗ ಸಾತಕ್ಕನೇ ಇವಳಿಗೆ ಸಮಾಧಾನ ಹೇಳಬೇಕೆಂದುಕೊಂಡು ಮನೆಗೆ ಬಂದ. ಸಾತಕ್ಕನಿಗೆ ವಿಷಯವನ್ನು ತಿಳಿಸಿದ. ಅವಳ ಮುಖವೂ ಕಳೆಗುಂದಿತು. "ದೇವರು ಹೀಗ್ಯಾಕೆ ಪರೀಕ್ಷೆ ಮಾಡ್ತಾನೋ.... ಲಕ್ಷ್ಮಿಯನ್ನು ಸಮಾಧಾನಗೊಳಿಸುವುದು ಹೇಗೆ?" ಅವಳಿಗೂ

ಚಿಂತೆ ಆಗಿತ್ತು.

ಹೊಟ್ಟೆಯ ಹಸಿವನ್ನು ತಾಳಲಾರದೇ ಮಗು ಅಳಲಾರಂಭಿಸಿದಾಗ ನರ್ಸು ಮಗುವನ್ನು ಲಕ್ಷ್ಮಿಯ ಮಗ್ಗುಲಲ್ಲಿ ಮಲಗಿಸಿದಳು. "ನೀನೆಂಥಾ ತಾಯಿಯಮ್ಮಾ.... ಮಗು ಅಳ್ತಾನೆ ಇದೆ. ಕರುಣೆ ಬೇಡ್ವಾ? ಸುಮ್ಮನೇ ಹಾಲು ಕುಡಿಸು" ಎಂದು ದನಿ ಎತ್ತರಿಸಿ ನುಡಿದಿದ್ದಳು. ಅಕ್ಕ ಪಕ್ಕ ಮಲಗಿದ್ದವರು ಕೂತಿದ್ದವರು, ನಿಂತಿದ್ದವರು ಇವಳ ಕಡೆ ಗಮನವನ್ನು ಹರಿಸಿದ್ದರು. ಲಕ್ಷ್ಮಿಗೆ ಭೂಮಿ ಬಿರಿದು, ತನ್ನನ್ನು ನುಂಗಬಾರದೇ ಎನ್ನುವಷ್ಟು ಬೇಸರವಾಗಿತ್ತು. ಮಗು ಅಳುತ್ತಲೇ ಇತ್ತು. ನರ್ಸು ಮತ್ತೂ ಒಂದೆರಡು ಬಾರಿ ಹೇಳಿದ ಮೇಲೆ ಲಕ್ಷ್ಮಿ ಮಗುವನ್ನೆತ್ತಿಕೊಂಡಳು. ಮನಸ್ಸಿನಲ್ಲಿ ಏನು ಮಂಥನವಿತ್ತೋ ಆದರೂ ತನ್ನ ಕರ್ತವ್ಯ ಎಂದುಕೊಂಡು ಹಾಲೂಡಿಸಿದಳು. ಆದರೂ ಸಾತಕ್ಕ ಮಗು ಬಾಣಂತಿಯನ್ನು ನೋಡಲೆಂದು ಬಂದಾಗ, ದುಃಖದ ಕಟ್ಟೆ ಒಡೆದಿತ್ತು. ಗೋಡೆಯ ಕಡೆ ಮುಖ ಮಾಡಿ ಅತ್ತಳು.

"ಸಮಾಧಾನ ಮಾಡ್ಕೋ ಲಕ್ಷ್ಮೀ. ನೀನು ತಿಳುವಳಿಕಸ್ಥೆ ನಿಂಗೆ ಹೇಳಿಕೊಡ್ಬೇಕಾ?"

"ನಂಗೇ ಹೀಗ್ಯೇಕೆ ಅನ್ಯಾಯ ಆಗುತ್ತೆ ಅತ್ಗೇ... ನಾನೇನು ಪಾಪ ಮಾಡಿದ್ದೆ?"

"ಇದು ಅನ್ಯಾಯ ಅಲ್ಲ ಲಕ್ಷ್ಮಿ ದೇವರು ಮಾಡಿರುವ ನ್ಯಾಯ. ಹೆಣ್ಣು ಮಕ್ಕಳಿಗೆ ಎಲ್ಲಿ ಹೆಚ್ಚು ರಕ್ಷಣೆ ಸಿಗುತ್ತದೆ ಎಲ್ಲಿ ಉತ್ತಮ ಭವಿಷ್ಯ ಇರುತ್ತದೆ ಅಲ್ಲಿ ಹೆಣ್ಣು ಮಕ್ಕಳು ಜನ್ಮ ತಾಳುತ್ವೆ. ನಿಮ್ಮಂತಹ ತಂದೆ ತಾಯಿ ಸಿಕ್ಕಿರುವುದು ಅವುಗಳ ಪುಣ್ಯ. ದೇವರು ಇದನ್ನೆಲ್ಲಾ ಮೊದಲೇ ಯೋಚಿಸಿರುತ್ತಾನೆ. ಇದನ್ನು ಒಪ್ಪಿಕೋ ಇದರಿಂದ ಮನಃಶ್ಯಾಂತಿ ಕೆಡುಲ್ಲ..."

"ಅತ್ಗೇ ನಿಮಗೆ ನನ್ನ ಅಳಲು ಏನು ಅಂತ ಅರ್ಥವಾಗೂದೇ ಇಲ್ಲವಲ್ಲ."

"ಅರ್ಥವಾಗುತ್ತೆ ಲಕ್ಷ್ಮೀ. ಆದರೆ ನಾನು ನಿಂಗಿಂತ ದೊಡ್ಡವಳು. ನನಗೆ ತಿಳಿದ ಹಾಗೆ ಸಮಾಧಾನ ಹೇಳುವುದು ನನ್ನ ಕರ್ತವ್ಯ... ನೀನು ಹೀಗೆ ಬೇಸರಗೊಂಡ್ರೆ, ಗುಂಡಣ್ಣಂಗೆ ಬೇಜಾರಾಗುಲ್ವಾ? ಅವನು ಗಂಡಸು ಯಾವುದನ್ನು ಮನಃ ಬಿಚ್ಚಿ ಮಾತಾಡುಲ್ಲ. ಹೊರಗೆ ದುಡಿಯುವ ಗಂಡಸು, ಅವನಿಗೂ ಬೇರೆ ಬೇರೆ ಸಮಸ್ಯೆಗಳಿರುತ್ವೆ, ಇದು ನೀನು ಹೆತ್ತ ಮಗು. ನೀನೇ ನಿರಾದರಣೆ ತೋರಿಸಿ, ಸರಿಯಾಗಿ ಸಾಕದಿದ್ದರೆ ಮಗು ಬೆಳೆಯುವುದು ಹೇಗೆ? ನಿನ್ನ ಕರ್ತವ್ಯವನ್ನು ನೀನು ಮಾಡು. ಉಳಿದುದನ್ನು ಆ ಭಗವಂತನಿಗೆ ಬಿಡು." ಸಾತಕ್ಕನ ಸಮಾಧಾನದ ನುಡಿಗಳನ್ನು ಅರ್ಥ ಮಾಡಿಕೊಳ್ಳುವ ಮನಸ್ಸು ಇಲ್ಲದಿದ್ದರೂ, ಮುಂದೆ ಮಾತು ಬೆಳೆಸದೇ ಸುಮ್ಮನಾದಳು.

ಮಗುವನ್ನು ತೊಟ್ಟಿಲಿಗೆ ಹಾಕುವ ಸಮಯದಲ್ಲಿ ಮಗುವಿಗೆ ಒಂದು ಹೆಸರನ್ನು ಇಡಲೇ ಬೇಕಾಗುತ್ತೆ. ಲಕ್ಷ್ಮಿಗೆ ತನ್ನ ಓರಗಿತ್ತಿಯ ಮಾತುಗಳು ನೆನಪಾಗಿತ್ತು. "ಅಕ್ಕಾ

ಅದ್ಯಾವ ಗಳಿಗೇಲಿ 'ರಾಗಿಣಿ' ಅಂತ ಹೇಳಿದ್ರೋ ಅದು ನಿಜವಾಯಿತು." ಎಂದು ಮುಖ ಚಿಕ್ಕದು ಮಾಡಿಕೊಂಡಳು.

"ಸರಿ ಆ ಹೆಸರನ್ನೇ ಇಟ್ಟರಾಯ್ತು... ಹೆಸರೂ ಚೆನ್ನಾಗಿದೆ" ಸಾತಕ್ಕ ತನ್ನ ಅಭಿಮತವನ್ನು ತಿಳಿಸಿದಳು. ಮಗುವಿಗೆ ಅದೇ ಹೆಸರು ಉಳಿಯಿತು.

* * *

ಸುಂದರಿಯ ಮಗಳಿಗೆ ಮದುವೆ ಗೊತ್ತಾಗಿತ್ತು. ಸಂಸಾರ ಸಮೇತರಾಗಿ ಬಂದು ಮಂಗಳ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ಅಕ್ಕ ಭಾವ ವಿನಂತಿಸಿಕೊಂಡು, ಪತ್ರವನ್ನು ಬರೆದಿದ್ದರು. ಹಾಗೆಯೇ ಸಾತಕ್ಕನನ್ನು ಹತ್ತು ದಿನಗಳ ಮುಂಚಿತವಾಗಿ ಕಳುಹಿಸಬೇಕೆಂದು ಬರೆದಿದ್ದರು.

"ಸಾತೂ, ಸುಂದರಿ ಹಾಗೂ ಭಾವ ನಿನ್ನನ್ನ ಮುಂಚಿತವಾಗಿ ಕಳಿಸಬೇಕೆಂದು ಕೇಳ್ಕೊಂಡಿದಾರೆ... ಏನ್ಮಾಡ್ತೀಯಾ?" ಶಾಸ್ತ್ರಿ ಕೇಳಿದ್ದ.

"ನಾನೊಬ್ಬಳೇ ಹೇಗೆ ಪ್ರಯಾಣ ಮಾಡಲಿ? ನಿನ್ನ ಜತೇಲೇ ಹೋಗಿ, ಮದುವೆ ಮುಗಿಸ್ಕೊಂಡು ನಿನ್ನ ಜತೇಲೇ ವಾಪಸ್ಸು ಬಂದು ಬಿಡ್ತೀನಿ."

"ನಾನು ರಜ ಸಿಕ್ಕಿದ್ರೆ ಬರ್ತೀನಿ. ಇಲ್ದಿದ್ರೆ ಇಲ್ಲ. ಇಲ್ಲಿ ನಾನು ಇಲ್ಲದಿದ್ರೆ ಹೇಗಾಗುತ್ತೆ? ಲಕ್ಷ್ಮಿ ಒಬ್ಬಳೇ ಆಗುಲ್ವಾ? ಮಕ್ಕಳೂ ಚಿಕ್ಕವು."

"ಹೌದು. ಯಾರೂ ಹೋಗೋದೇ ಬೇಡ. ನಾನು ಸುಂದರಿಗೆ ಪತ್ರ ಬರೀತೀನಿ."

"ಹಾಗ್ಮಾಡ್ಬೇಡಿ ಅತ್ಗೇ. ಆಮೇಲೆ ಅವರೆಲ್ಲಾ ನಮ್ಮನ್ನೇ ದೂಷಿಸ್ತಾರೆ... ಇಲ್ಲಿಂದ ಆ ಕಡೆಗೆ ಹೋಗೋರು ಯಾರಾದ್ರು ಇದ್ದರೆ ಅವರ ಜತೇಲಿ ಹೋಗಿ. ಕೆಲವು ದಿನ ಇದ್ದು ಬನ್ನಿ. ಅವರಿಗೂ ಸಂತೋಷ ಆಗುತ್ತೆ...."

"ಬೇಡ ಬೇಡ ಸಾತೂನ ಯಾರ್‍ಯಾರ ಜತೇಲೋ ಹಾಗೆಲ್ಲಾ ಕಳಿಸಕ್ಕೆ ಆಗುಲ್ಲ. ಎಲ್ರೂ ಹೊರಟು ಬಿಡೋಣ."

"ಇಲ್ಲ, ನಾನು ನಾಲ್ಕು ನಾಲ್ಕು ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಗೂ ಬರಲ್ಲ. ಶ್ರೀನಿವಾಸಂಗೆ ಕಾಗದ ಬರೀರಿ... ಬಂದು ಕರ್ಕೊಂಡು ಹೋಗು ಜತೆಗೆ ಯಾರೂ ಇಲ್ಲ ಅಂತ."

"ಅವನು ಇಲ್ಲೀ ತನಕ, ಅದಕ್ಕೋಸ್ಕರ ರೈಲು ಛಾರ್ಜು ಹಾಕ್ಕೊಂಡು ಬರ್ತಾನಾ? ನಾನೇ ಸಾತೂ ಜತೆಗೆ ಹೋಗ್ತೀನಿ."

"ಮತ್ತೆ? ಇಲ್ಲಿ?"

"ನೋಡೋಣ. ಏನಾದ್ರೂ ವ್ಯವಸ್ಥೆ ಮಾಡ್ತೀನಿ. ನಿನ್ನ ದೊಡ್ಡ ತಮ್ಮ ಬರ್ತಾನಾ ಅಂತ ವಿಚಾರಿಸ್ತೀನಿ. ಅವನು ಬಂದರೆ ಇಲ್ಲಿ ನಿನ್ನ ಜತೆಗಿರ್ತಾನೆ?"

"ಅವನು ಇಷ್ಟು ದೂರ, ಇಷ್ಟಕ್ಕೋಸ್ಕರ ಬರ್ಬೇಕಾ? ಅವನು ಇನ್ನೂ ಚಿಕ್ಕೋನು

ಎಲ್ಲಾದ್ರೂ ಕಳೆದು ಹೋದ್ರೆ."

"ಯಾಕೆ ಕಳೆದು ಹೋಗ್ತಾನೆ? ಅವನು ಕಲಿಯೋದು ಯಾವಾಗ? ಪರೀಕ್ಷೆ ಇಲ್ಲದಿದ್ರೆ ಬಾ ಅಂತ ಬರೆಯೋದು."

"ಈ ತಾಪತ್ರಯಗಳಿಗೇ ತಲೆ ಕೆಡೋದು. ಯಾವುದೂ ಸುಸೂತ್ರವಾಗಿ ಆಯ್ತು ಅನ್ನೋ ಹಾಗೇ ಇಲ್ಲ. ಅಲ್ಲೇ ಇದ್ದಿದ್ರೆ, ವಾರ ಮುಂಚಿತವಾಗಿ ಅತ್ತಿಗೆಯೂ ಹೋಗಿರೋರು. ಈಗ ಪ್ರಯಾಣಕ್ಕೇ ಮೂರು ನಾಲ್ಕು ದಿನಗಳು ಬೇಕು.... ಇದೇನು ಚೆನ್ನಾ?"

"ಹೋಗ್ಲಿ ಬಿಡು ಲಕ್ಷ್ಮೀ. ನಾನು ಮದುವೆಗೆ ಹೋಗದಿದ್ದರೇನಾಯ್ತು? ನಾನೇನು ಆರತಿ ಎತ್ತಬೇಕೇ? ಮದು ಮಕ್ಕಳನ್ನು ಎದುರುಗೊಳ್ಳಬೇಕೇ? ಎಲ್ಲೋ ಮರೆ ಮರೆಯಾಗಿ ನಿಂತಿರುಕ್ಕೆ ಹೋಗದೇ ಇದ್ದರೂ ಆಗುತ್ತೆ..."

"ಹಾಗೆಲ್ಲ ನೆಪ ಹೇಳುಕ್ಕೆ ಆಗುಲ್ಲ. ನಾವು ಕಳಿಸ್ಲಿಲ್ಲ ಅನ್ನೋ ಮಾತು ಬಂದೇ ಬರುತ್ತೆ. ನೋಡೋಣ ಆ ಹೊತ್ತಿಗೆ ಭಗವಂತ ಏನಾದ್ರೂ ವ್ಯವಸ್ಥೆಗೆ ದಾರಿ ತೋರಿಸ್ತಾನೆ."

"ಏನು ತೋರಿಸ್ತಾನೋ ಯಾವಾಗ ನೋಡಿದ್ರೂ ತೊಡಕು, ಬೇಜಾರಾಗಿ ಹೋಗಿದೆ" ಲಕ್ಷ್ಮಿ ಗೊಣಗಿದಳು.

"ನೀನು ಗೊಣಗ್ಬೇಡ. ಜೋರಾಗಿ ಮಾತಾಡು. ನಾನು ಮನೇ ಯಜಮಾನ. ಏನಾದ್ರೂ ವ್ಯವಸ್ಥೆ ಮಾಡ್ತೀನಿ ಅಂತ ಅಂದ್ನಲ್ಲ. ಎಲ್ರೂ ಬಾಯಿ ಹಾಕ್ಕೊಂಡು ಬರ್ಬೇಡಿ." ಎಂದು ಇಬ್ಬರ ಮೇಲೂ ರೇಗಿ, ಅರ್ಧ ಊಟಕ್ಕೇ ಕೈತೊಳೆದು ಎದ್ದು ಹೋಗಿದ್ದ. ಇವರಿಬ್ಬರೂ ಮುಖ ಮುಖ ನೋಡಿಕೊಂಡರು.

"ಊಟ ಮಾಡುವಾಗ ಮಾತಾಡ್ಬಾರ್ದು ಅಂತ ಇದಕ್ಕೇ ಹೇಳೋದು. ಅವನಿಗೆ ಸಹನೆ ಕಡಿಮೆ ಅಂತ ತಿಳಿದೂ, ನೀನು ಕೆರಳುವ ಹಾಗೆ ಮಾತಾಡ್ತೀಯ. ಊಟ ಮುಗಿಯೋವವರೆಗೂ ಸುಮ್ಮನಿರಬಾರದಾಗಿತ್ತಾ?"

"ನಾನೇನ್ಮಾಡ್ಲಿ ಅತ್ಗೇ... ಪ್ರಾರಂಭ ಮಾಡ್ದೋರು ಅವರೇಯ... ಹಾಗಲ್ಲ ಹೀಗೆ ಅಂತ ನಾನು ಮಾತಾಡೋದು ತಪ್ಪಾ ಹಾಗಾದ್ರೆ."

"ಹೋಗಲಿ ಬಿಡು ಲಕ್ಷ್ಮಿ, ಮದುವೆ ಗಿದುವೆ ಅಂತ ಹೋಗೋ ಆಸೆ ನನಗಿಲ್ಲ. ಸುಂದರಿ ಆಕ್ಷೇಪಣೆ ಮಾಡ್ತಾಳೆ ತಾನೇ? ಮಾಡ್ಕೊಳ್ಳಲಿ. ಇಲ್ಲಿಯ ಕಷ್ಟ ಅವಳಿಗೇನು ಗೊತ್ತಾಗುತ್ತೆ?" ಸಾತಕ್ಕ ಅಡಿಗೆ ಮನೆಗೆ ತೆರಳಿದಳು. ಲಕ್ಷ್ಮಿ ಎಂಜಲು ತಟ್ಟೆಯನ್ನು ತೆಗೆದು ಗೋಮೆ ಹಚ್ಚಿ ಒರೆಸಿದಳು. ಶಾಸ್ತ್ರಿ ಸುಧಾರಿಸಿಕೊಳ್ಳಲೆಂದು ಚಾರಪಾಯಿಯ ಮೇಲೆ ಮಲಗಿದ. ರಾಗಿಣಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟುಕೊಂಡು ಹೋಗಿ, ಕಷ್ಟಪಟ್ಟು ಮಂಚವನ್ನು ಹತ್ತಿ ತಂದೆಯ ಮಗ್ಗುಲಲ್ಲಿ ಮಲಗಿದಳು. ಪದ್ಮಿನಿಯೂ ಬಂದು,

ಇನ್ನೊಂದು ಪಕ್ಕದಲ್ಲಿ ಮಲಗಿದಳು. "ಏನ್ರೇ ಇಬ್ಬಿಬ್ರು ಬಂದ ಮೈಮೇಲೆ ಬೀಳ್ತೀರಿ" ಹಾಗೆ ಹೇಳಿದರೂ, ಅವರಿಬ್ಬರೂ ಇಳಿದು ಹೋಗಲಿಲ್ಲ. ಇವನೂ ಇಳಿಸಲಿಲ್ಲ. ಕೆಲವೇ ನಿಮಿಷಗಳಲ್ಲಿ ಶಾಸ್ತ್ರಿಗೆ ನಿದ್ದೆ ಹತ್ತಿತ್ತು.

* * *

ಕಂಠಿ ಬಂದು ಹೋದಾಗ್ನಿಂದ ಶಾಸ್ತ್ರಿಯ ಮನ ಅಲ್ಲೋಲ ಕಲ್ಲೋಲಗೊಂಡಿತ್ತು. ಕಾರ್ಖಾನೆಯ ಜನರಲ್ ಮ್ಯಾನೇಜರ್‌ನ ವರ್ತನೆ ಬೇಸರವನ್ನು ಮೂಡಿಸುತ್ತಿತ್ತು. ತಾನು ಮಂಡ್ಯ ಸಕ್ಕರೆ ಕಾರ್ಖಾನೆಯ ಕೆಲಸವನ್ನು ಬಿಟ್ಟು ಬಂದು ಬಹಳ ದೊಡ್ಡ ತಪ್ಪು ಮಾಡಿದೆ ಅಂತ ಅನ್ನಿಸುತ್ತಿತ್ತು... ಹೆಚ್ಚು ಸಂಬಳ ಸಿಗುತ್ತದೆಂಬ ಆಸೆಯಿಂದ ಇಲ್ಲಿಗೆ ಬಂದು ಅವಮಾನಿತನಾದೆ ಅಂತೆನ್ನಿಸುತ್ತಿತ್ತು. ಇವನ ಕೈ ಕೆಳಗೆಂದು ನೇಮಿಸಿದ್ದ ಅಸಿಸ್ಟೆಂಟ್ ಕೆಮಿಸ್ಟ್ ಇವನು ಹೇಳಿದಂತೆ ಕೇಳುತ್ತಿರಲಿಲ್ಲ. ತಲೆ ಹರಟೆ ಮಾಡುತ್ತಿದ್ದ. ಅವನ ಮೇಲೆ ದೂರು ಕೊಡುವಂತೆಯೂ ಇರಲಿಲ್ಲ. ಒಂದೆರಡು ಬಾರಿ ಆ ಬಗ್ಗೆ ಮಾತು ಬಂದಾಗ, ನಿಮ್ಮ ಕೆಲಸ ಎಷ್ಟೋ ಅಷ್ಟು ನೋಡ್ಕೊಂಡು ಹೋಗಿ ಅನ್ನುವ ಮಾತನ್ನು ಕೇಳಬೇಕಾಗಿ ಬಂದಿತ್ತು. ಹೌದು.... ಕಂಠಿ ಹೇಳೋದು ನಿಜ. ಈ ಗುಲಾಮಗಿರಿ ಮಾಡಿದ್ದು ಸಾಕು... ತಾನೂ ಏನಾದ್ರೂ ಸ್ವಂತ ಮಾಡಬೇಕು ಎಂಬ ಹಂಬಲ ಮೂಡುತ್ತಿತ್ತು. ಆದರೆ ಈ ಬಗ್ಗೆ ಅವನಿಗೆ ಸೂಕ್ತ ಸಲಹೆಯನ್ನು ಹೇಳುವವರ್ಯಾರೂ ಇರಲಿಲ್ಲ. ಆದರೂ ತಾನು ಬರೆದು ಕೊಟ್ಟ ಅವಧಿ ಮುಗಿಯುವ ದಿನವನ್ನು ನಿರೀಕ್ಷಿಸುತ್ತಿದ್ದ.

ಬೇಸಗೆಯ ತೀವ್ರತೆಯನ್ನು ಅನುಭವಿಸಿದ್ದಾಗಿತ್ತು. ಹಗಲು ದೊಡ್ಡದಾಗಿರುತ್ತಿತ್ತು. ಬಿಸಿಲಿನ ಪ್ರಖರತೆ ಹೆಚ್ಚಾಗಿರುತ್ತಿತ್ತು. ಬೇಸಗೆಯಲ್ಲಿ ತೆಳ್ಳನೆಯ ಹತ್ತಿ ಬಟ್ಟೆಯ ಉಡುಪುಗಳೇ, ಬೆವರಿಗೆ ಒದ್ದೆಯಾಗಿ ಮೈಗೆ ಅಂಟಿಕೊಂಡು ಬಿಡುತ್ತಿತ್ತು. ದಿನಕ್ಕೆ ಎರಡು ಬಾರಿ ತಣ್ಣೀರಿನಲ್ಲಿ ಸ್ನಾನ ಮಾಡಿದರೂ, ಹಿತವೆನಿಸುತ್ತಿರಲಿಲ್ಲ. ಸಾಯಂಕಾಲದ ಹೊತ್ತು ಮನೆಯ ಅಂಗಳದಲ್ಲಿ ಮನೆಯ ಸುತ್ತ ಮುತ್ತಲೂ ತಣ್ಣೀರನ್ನು ಹರಿಸಿ, ನೆಲವನ್ನು ತಂಪು ಮಾಡಬೇಕಾಗುತ್ತಿತ್ತು. ದಿನದ ಇಪ್ಪತ್ನಾಲ್ಕು ಗಂಟೆಯೂ ಎಲ್ಲಾ ಕೋಣೆಗಳ ಫ್ಯಾನುಗಳು ತಿರುಗುತ್ತಲೇ ಇರುತ್ತಿದ್ದವು. ಮಣ್ಣಿನ ಹೂಜಿಗಳಲ್ಲಿ ತಣ್ಣಗಾಗುವ ನೀರು ಬೇಗ ಬೇಗ ಬರಿದಾಗುತ್ತಿದ್ದವು. ಕುಡಿಯಲು ಲೋಟಗಳಿಗೆ ಬಗ್ಗಿಸಿಕೊಂಡ ನೀರು ಸ್ವಲ್ಪ ಹೊತ್ತಿನಲ್ಲೇ ಬೆಚ್ಚಗಾಗುತ್ತಿತ್ತು. ಬಿಸಿಯಾಗಿ ಬೀಸುವ ಗಾಳಿ ಧೂಳನ್ನು ಹರಡಿ, ಹಿಂಸೆಯನ್ನುಂಟುಮಾಡಿತ್ತಿತ್ತು. ಶೆಖೆಗಾಲದಲ್ಲಿ ಸಿಗುವ ಹಣ್ಣುಗಳನ್ನು ತಂದು ಶರಬತ್ತನ್ನು ತಯಾರಿಸಿಕೊಂಡು ಕುಡಿಯುತ್ತಿದ್ದರು. ಸಕ್ಕರೆಗೆ ಬರವಿರಲಿಲ್ಲ. ಅಲ್ಲಿಯ ಕೆಲಸಗಾರರಿಗೆ ಉಚಿತವಾಗಿ ಸಕ್ಕರೆಯನ್ನು ಹಂಚುತ್ತಿದ್ದರು. ಬಿಸಿಲ ಹೊತ್ನಲ್ಲಿ ಮಕ್ಕಳು ಹೊರಗೆ ಆಡುವಂತಿಲ್ಲ. ಆಯಾಸಕ್ಕೆ ಸುಸ್ತಾಗಿ ಬಿಡುತ್ತಿದ್ದರು. ಸ್ಕೂಲಿಗೆ ರಜವಿರುತ್ತಿತ್ತು.

ಶೆಕೆಯನ್ನು ಕಡಿಮೆ ಮಾಡುವ ಸಾಧನಗಳೆಲ್ಲವನ್ನೂ ಉಪಯೋಗಿಸುತ್ತಿದ್ದರು.

ಹಾಗೇ ಚಳಿಗಾಲ ಪ್ರಾರಂಭವಾಯಿತೆಂದರೆ...... ಕೊರೆವ ಚಳಿ, ಹಗಲು ಚಿಕ್ಕದು, ರಾತ್ರಿ ದೊಡ್ಡದು. ಮಟಮಟ ಮಧ್ಯಾಹ್ನದ ಸೂರ್ಯನ ಬಿಸಿಲಿಗೂ ಶಾಖವೇ ಇಲ್ಲ. ಊಟವಾಗುತ್ತಿದ್ದಂತೆಯೇ ಮೈ ನಡುಗಿಸುವ ಚಳಿ. ಅಂಗಳದಲ್ಲಿ ಬರುವ ಬಿಸಿಲನ್ನು ಕಾಯಿಸಿಕೊಳ್ಳಲು, ಅಲ್ಲಿ ಚಾರಪಾಯಿಗಳನ್ನು ಹಾಕಿದ್ದರು..... ಸಾತಕ್ಕ ಬಿಸಿಲಿಗೆ ಬೆನ್ನನ್ನು ಒಡ್ಡಿ ಕುಳಿತಿದ್ದುದನ್ನು ಶಾಸ್ತ್ರಿ ಕಂಡ.

"ಸಾತೂ ಮಾಗೀ ಬಿಸಿಲನ್ನ ಹೆಚ್ಚು ಹೊತ್ತು ಕಾಯಿಸ್ಬೇಡ. ಆರೋಗ್ಯ ಕೆಡುತ್ತೆ" ಎಂದಿದ್ದ.

"ಏನ್ಮಾಡ್ಲೋ.... ಹೊಟ್ಟೆಗೆ ಹಿಟ್ಟು ಬಿದ್ದ ಕೂಡ್ಲೇ..... ಬೆನ್ನು ಗಡ ಗಡ ಅನ್ನುತ್ತೆ.... ಸ್ವಲ್ಪ ಹೊತ್ತು ಮೈ ಕೈ ಕಾಯಿಸಿಕೊಳ್ತೀನಿ. ಹಾಳಾದ್ದು ಈ ಬಿಸಿಲಿಗೆ ಶಾಖವೇ ಇಲ್ಲ" ಶಾಸ್ತ್ರಿ ಗೊಳ್ ಅಂತ ನಕ್ಕ.

"ಉಣ್ಣೆ ಶಾಲನ್ನು ಹೊದ್ಕೋ..... ಈಗಲ್ದೇ ಇನ್ನ್ಯಾವಾಗ ಉಪಯೋಗಿಸ್ತೀಯ?"

"ಶಾಲು ಜಾರಿ ಜಾರಿ ಹೋಗುತ್ತಪ್ಪಾ ಕೆಲಸ ಮಾಡಕ್ಕೆ ಆಗುಲ್ಲ. ಏನಿದ್ರೂ ರಾತ್ರಿಯ ಹೊತ್ತು ಹೊದ್ಕೊಂಡು ಮಲಗಬಹುದು. ದಪ್ಪನೆ ನೂಲಿನ ಸೀರೆಯಾದರೂ ಈ ಚಳಿಯನ್ನು ತಡೆಯಲೊಲ್ಲದು" ಸಾತಕ್ಕನ ಬಗ್ಗೆ ಮರುಕ ಉಕ್ಕಿತು. ರವಿಕೆ ಹೊಲಿದುಕೊಳ್ಳಲು ಮೂರು ಗಜ ಫ್ಲ್ಯಾನಲ್ ಬಟ್ಟೆಯನ್ನೂ ಹಾಗೇ ಮಕ್ಕಳಿಗೆಂದು ಚೀಟಿ ಬಟ್ಟೆಯನ್ನೂ ತಂದು ಕೊಟ್ಟ. "ಬೇಗ ಹೊಲಿದುಕೊಡು ಬೆಚ್ಚಗಿರುತ್ತೆ." ಎಂದ.

"ನನಗೆ ಬಿಡುವೆಲ್ಲಿದೆ? ಮಕ್ಕಳ ಸೇವೇನೇ ಆಗಿ ಹೋಗುತ್ತೆ. ಹೊಲಿಗೆ ಮಿಷನ್ ಇದ್ದಿದ್ರೆ ಬಿಡುವು ಸಿಕ್ಕಿದಾಗ ಬೇಗ ಬೇಗ ಹೊಲೆಯಬಹುದಾಗಿತ್ತು. ಕೈಯಲ್ಲಿ ಹೊಲೆಯೋದು ನಿಧಾನ ಆಗುತ್ತೆ." ಲಕ್ಷ್ಮಿಯೂ ನುಡಿದಳು.

"ಇಬ್ಬಿಬ್ರು ಹೆಂಗಸರಿದೀರಿ ಬಿಡುವಿಲ್ಲ ಅಂತಂದ್ರೆ ಕೇಳ್ದೋರು ನಗ್ತಾರೆ."

"ನಕ್ಕರೆ ನಗಲಿ ಬಿಡು. ಇಲ್ಲಿ ಎಲ್ಲಾ ಮನೆಯ ಹೆಂಗಸರ ಬಳಿಯೂ ಹೊಲಿಗೆ ಮಿಷನ್ ಇದೆ. ನಮ್ಮ ಮನೆಗೂ ಒಂದನ್ನು ತಂದರೆ ಬೇಕಾದಷ್ಟು ಬಟ್ಟೇನ ಹೊಲೀಬಹುದು." ಸಾತಕ್ಕ ಇದೇ ಸಮಯ ಅಂತಂದುಕೊಂಡು ನುಡಿದಳು.

"ಹೋಗ್ಲಿ ಬಿಡಿ ಅತ್ಗೇ ಎಷ್ಟಾಗುತ್ತೋ ಏನೋ...."

"ಸರಿ ನನ್ನ ಬುಡಕ್ಕೇ ಬಂತು" ಎಂದು ಹಗುರವಾಗಿ ನಕ್ಕರೂ ಗಂಭೀರವಾಗಿ ಯೋಚಿಸಿದ. ಕೆಲವೇ ದಿನಗಳಲ್ಲಿ ಮನೆಗೆ ಒಂದು ಶುಭಗಳಿಗೆಯಲ್ಲಿ ಹೊಲಿಗೆ ಮಿಷನ್ನಿನ ಆಗಮನವಾಯಿತು. ಜೊತೆಗೆ, ಬಟ್ಟೆ ಕತ್ತರಿಸುವ ದೊಡ್ಡ ಕತ್ತರಿ, ಅಳತೆ ಮಾಡುವ ಟೇಪು, ಸೂಜಿಗಳು, ಬಣ್ಣ ಬಣ್ಣದ ರೀಲು ದಾರಗಳು ಎಲ್ಲಾ ಬಂದವು.

ಲಕ್ಷ್ಮಿ ಹಿಗ್ಗಿದಳು. ಆದರೆ ಒಂದು ಗಳಿಗೆ ಸಣ್ಣಗೆ ಮುಳ್ಳು ಚುಚ್ಚಿದಂತೆಯೂ ಆಗಿತ್ತು. ಆದರೆ ಕೆಲವೇ ನಿಮಿಷಗಳಲ್ಲಿ ಸರಿಪಡಿಸಿಕೊಂಡಳು. ಸಾತಕ್ಕನಿಂದ ತನಗೆ ಉಪಕಾರವೇ ಆಯಿತು. ಇನ್ನು ಮುಂದೆ ಬೇಕಾದಷ್ಟು ಬಟ್ಟೆಗಳನ್ನೂ ಸುಲಭವಾಗಿ ಹೊಲಿಯಬಹುದು ಅಂತಂದುಕೊಂಡಳು.

ಲಕ್ಷ್ಮಿ ಫ್ಲ್ಯಾನಲ್ ಬಟ್ಟೆಯನ್ನು ಎಚ್ಚರಿಕೆಯಿಂದ ಕತ್ತರಿಸಿ, ಸಾತಕ್ಕನಿಗೆ ಮೆಚ್ಚುಗೆಯಾಗುವಂತೆ ರವಿಕೆಗಳನ್ನು ಹೊಲಿದುಕೊಟ್ಟಳು. ಮಕ್ಕಳಿಗೆಂದು ತಂದಿದ್ದ ಬಟ್ಟೆಯನ್ನು ತೆಗೆದಳು.

"ಅತ್ಗೇ ನೋಡಿ ಇಲ್ಲಿ.... ಒಂದು ಥಾನು ಚೀಟಿ ಬಟ್ಟೆಯನ್ನು ತಂದಿದಾರೆ. ಮಕ್ಕಳಿಗೆ ಲಂಗ ರವಿಕೇನ ಹೊಲಿಯಬೇಕಂತೆ. ಒಂದೇ ತರಹದ ಲಂಗ ರವಿಕೆ ಹಾಕ್ಕೊಂಡು ಓಡಾಡಿದ್ರೆ ಎಲ್ಲಾ ನಮ್ಮನೆಯೋವೇ ಅಂತ ಎಲ್ರಿಗೂ ಗೊತ್ತಾಗ್ಬೇಕು" ವ್ಯಂಗ್ಯದಿಂದ ಹೇಳಿದಳು.

"ಅವನಿಗೇನು ಗೊತ್ತಾಗುತ್ತೆ ಬಟ್ಟೆಯ ಆಯ್ಕೆ? ಒಂದೇ ತರಹ ಇದ್ದರೇನಾಯ್ತು? ಯಾವ ಭೇದ ಭಾವವೂ ಇರಲ್ಲ." ಮೆಲುವಾಗಿ ನಕ್ಕಳು.

"ಅಲ್ವೇ ಮತ್ತೆ?...." ಅವಳೂ ನಕ್ಕಳು.... ಆದರೂ ಆಸಕ್ತಿಯಿಂದ ಅವರವರ ಅಳತೆಗೆ ತಕ್ಕಂತೆ ಲಂಗ ರವಿಕೆಯನ್ನು ಹೊಲೆದಳು. ಉಳಿದ ಬಟ್ಟೆಯಲ್ಲಿ ದಿಂಬಿನ ಕವರುಗಳನ್ನೂ ಒಂದೆರಡು ಕೈ ಚೀಲಗಳನ್ನೂ ಹೊಲೆದಳು.

"ನಿನ್ನ ಜಾಣತನವನ್ನು ಮೆಚ್ಚಬೇಕು ಲಕ್ಷ್ಮಿ. ಒಂದು ಚೂರು ಬಟ್ಟೆಯನ್ನು ದಂಡ ಮಾಡದೇ ಉಪಯೋಗ ಬರುವಂತೆ ಮಾಡಿದೆಯಲ್ಲ."

"ಮತ್ತಿನ್ನೇನು ಮಾಡೋದು ಅತ್ಗೇ. ದುಡ್ಡು ಕೊಟ್ಟು ತಂದಿರೋದನ್ನ ಬಿಟ್ಟು ಬಿಡುಕ್ಕೆ ಆಗುತ್ತಾ?"

"ಕೈಯಲ್ಲಿ ತಿರುಗಿಸ್ತಾ ಹೊಲಿತಾನೇ ಇರ್ತೀಯಲ್ಲಾ ಕೈ ನೋವು ಬರುಲ್ವಾ?"

"ಮೊದ ಮೊದಲು ಬಂತು. ಈಗ ಅಭ್ಯಾಸವಾಗಿ ಹೋಯ್ತು."

"ಮಕ್ಕಳಿಗೂ ಹೇಳಿಕೊಡು.... ಹೆಣ್ಣು ಮಕ್ಕಳು ಕಲಿತಿದ್ರೆ ಮುಂದೆ ಉಪಯೋಗಕ್ಕೆ ಬರುತ್ತೆ."

"ನೀವೂ ಅಭ್ಯಾಸ ಮಾಡ್ಕೊಳ್ಳಿ ಅತ್ಗೆ." ಮಕ್ಕಳು ನಿಧಾನವಾಗಿ ಕಲಿಯಲಿ.ಎಲ್ಲರೂ ಮಿಷನ್ನನ್ನು ತಿರುಗಿಸಿದರೆ ಬೇಗ ಹಾಳಾಗುತ್ತೆ.

"ನಂಗ್ಯಾಕೆ ಬೇಡ ಬಿಡು. ನನಗೆ ಬೇಕಾದಾಗ ನೀನು ಹೊಲಿದುಕೊಡು ಅಂತಂದ್ರೆ ಇಲ್ಲ ಅಂತೀಯಾ?"

"ಇಲ್ಲ ಅತ್ಗೇ..... ನಿಮಗೆ ಏನು ಬೇಕೋ ಕೇಳಿ ಹೊಲೆದುಕೊಡ್ತೀನಿ." ಹಾಗೆಂದವಳು ತಟ್ಟನೆ ಮಾತನ್ನು ನಿಲ್ಲಿಸಿದಳು. ಆಸೆ ಅಕಾರಸ್ಥೆ ಇರುವ ಹೆಂಗಸು.

ಆದರೂ ಉಡುಗೆ ತೊಡುಗೆಯಲ್ಲಿ ಯಾವ ವೈವಿಧ್ಯತೆಯೂ ಇಲ್ಲ. ತಾನು ಹೀಗೆ ಆಡಬಾರದಾಗಿತ್ತೆಂದು ಕೊಂಡಳು.

* * *

ಡಿಸೆಂಬರ್-ಜನವರಿ ಚಳಿಗಾಲ ಮುಗಿಯುತ್ತಿದ್ದ ಹಾಗೇ ಕಬ್ಬು ಅರೆಯುವ ಕೆಲಸ ಸ್ವಲ್ಪ ಕಡಿಮೆ ಆಗುತ್ತೆ. ಒಂದು ವಾರ ರಜಾ ತಗೋತೀನಿ. ಮತ್ತೊಮ್ಮೆ ಕಾಶೀ, ಹರಿದ್ವಾರ, ಎಲ್ಲಾ ಕಡೆ ಹೋಗಿ ಬರೋಣ....." ಊಟಕ್ಕೆ ಕುಳಿತಾಗ ಶಾಸ್ತ್ರಿ ಸಾತಕ್ಕನಿಗೆ ಹೇಳಿದ.

"ಚಳೀ ಇದ್ರೆ ಪ್ರಯಾಣವೂ ಕಷ್ಟ..... ಅಲ್ಲಿ ಗಂಗಾಸ್ನಾನಾನ ಈ ಕೊರೆಯೋ ಚಳೀಲಿ ಹೇಗೆ ಮಾಡೋದು?"

"ಚಳೀಗೆ ಹೆದರ್ತೀಯಾ ಸಾತು... ನೀನು ದಿನಾ ತಣ್ಣೀರಿನ ಸ್ನಾನವೇ ತಾನೇ ಮಾಡೋದು, ಅಭ್ಯಾಸವಾಗಿದೆಯಲ್ಲ.... ನಿಂಗೆ."

"ಇಲ್ಲ, ಇಲ್ಲಿಗೆ ಬಂದ್ಮೇಲೆ ಬಿಸಿ ನೀರನ್ನು ಅಭ್ಯಾಸ ಮಾಡ್ಕೊಂಡಿದೀನಿ.. ನಾನೆಂದೂ ಚಳಿಗಾಲದಲ್ಲಿ ನದೀ ಸ್ನಾನ ಮಾಡಿಯೇ ಇಲ್ಲ...."

"ಗಂಗಾಸ್ನಾನ; ತುಂಗಾಪಾನ ಅಂತ..... ಈ ಕಡೇ ಇರೋವಾಗ, ಕಾಶೀ ಯಾತ್ರೆ, ಗಂಗಾಸ್ನಾನ, ತ್ರಿವೇಣಿ ಸಂಗಮ ಸ್ನಾನ ನಿಂಗೆ ಒಂದೆರಡು ಬಾರಿ ಮಾಡಿಸ್ಲೇಬೇಕು ಅಂತ ಅಂದ್ಕೊಂಡು ಬಿಟ್ಟಿದ್ದೀನಿ."

"ಮತ್ತೊಮ್ಮೆ ಕಾಶೀಯಾತ್ರೆ ಮಾಡಿಸ್ಲೇಬೇಕು ಅನ್ನೋ ಹಠ ತೊಟ್ಟಿರುವಂತಿದೆ. ಸುಂದರಿಯ ಮಗಳ ಮದುವೆಗೆ ಬೇರೆ ಹೋಗ್ಬೇಕು ಅಂತ ಹೇಳ್ತಿದ್ದೆ, ಅಲ್ಲಿಂದ ಬಂದ್ಮೇಲೆ ಹೋಗಿ ಬಂದ್ರಾಯ್ತು."

"ಮದುವೆ ಮುಂದಕ್ಕೆ ಹೋಗಿದೆಯಂತೆ ಭಾವ ಕಾಗದ ಬರೆದಿದ್ರು. ಈಗ ಇನ್ನೊಂದು ಬಾರಿ ಕಾಶೀಯಾತ್ರೆ ಮಾಡಿಸಿಬಿಡ್ತೀನಿ. ಹಾಗೇ ಗಯಾ ಪ್ರಯಾಗಕ್ಕೆ ಹೋಗಿ ಪಿತೃಗಳಿಗೆ ತರ್ಪಣವನ್ನು ಬಿಡ್ಬೇಕು ಅಂತ ಅಂದ್ಕೊಂಡಿದೀನಿ."

"ಹಾಗಿದ್ರೆ ಸರಿ. ಈ ಕೆಲಸಕ್ಕೆ ನಾನೇಕೆ ಅಡ್ಡ ಮಾತಾಡ್ಲೀ.... ಸುಮ್ನೇ ಖರ್ಚು, ಶ್ರಮ ಯಾಕೆ ಅಂತ ಹಾಗೆ ಹೇಳ್ದೆ....."

"ನಿನಗೂ ಈ ಲಕ್ಷ್ಮಿಯ ಗಾಳಿ ಬೀಸಿದ ಹಾಗಿದೆಯಲ್ಲ.... ಖರ್ಚಿನ ಚಿಂತೆ ಯಾಕೆ ಮಾಡ್ತೀಯ? ಭಗವಂತ ಕೊಟ್ಟಾಗ ಖರ್ಚು ಮಾಡುಕ್ಕೆ ಹಿಂದೆ ಮುಂದೆ ನೋಡ್ಬಾರ್ದು.ಕೈ ಬಿಚ್ಚಿ ದಾನ ಧರ್ಮ ಮಾಡಿದರೆ ನಮಗೇ ಶ್ರೇಯಸ್ಸು."

"ಹೌದಪ್ಪಾ ಸಂಪಾದಿಸೋನು ನೀನು... ಖರ್ಚು ಮಾಡೋನೂ ನೀನು.... ಸುಂದರಿಯ ಮನೆಯ ಮದುವೆಗೆ ಬರೀ ಕೈಯಲ್ಲಿ ಹೋಗುಕ್ಕೆ ಆಗುತ್ತಾ? ಉಡುಗೊರೆಗಳ ಬಗ್ಗೇನೂ ಯೋಚಿಸ್ಬೇಕಲ್ಲ...."

"ಅದನ್ನೆಲ್ಲ ಯೋಚಿಸ್ಲೇ ಬೇಡ.... ಕಾಶೀಯಾತ್ರೆಗೆ ಹೋಗಿ ಬರುವ ತಯಾರಿ ಮಾಡ್ಕೋ.... ಅಷ್ಟೇ...." ಸಾತಕ್ಕ ತಲೆಯಾಡಿಸಿದ್ದಳು.

* * *

ಮೊದಲೇ ಅಂದುಕೊಂಡಿದ್ದಂತೆ, ಶಾಸ್ತ್ರಿ ಸಂಸಾರ ಸಮೇತನಾಗಿ ಕಾಶೀಯಾತ್ರೆಗೆ ಹೊರಟ. ಪ್ರಯಾಣಕ್ಕೆ ಬೇಕಾದ ಹಾಸಿಗೆ ಹೊದ್ದಿಕೆ, ಬಟ್ಟೆಗಳಲ್ಲದೆ ಮಾರ್ಗಮಧ್ಯಕ್ಕೆ ಬೇಕಾಗುವ ತಿಂಡಿ ತೀರ್ಥಗಳನ್ನು ತಯಾರಿಸಿ ತೆಗೆದಿಟ್ಟು ಕೊಂಡುದ್ದಾಗಿತ್ತು.

"ಇನ್ನೂ ಒಬ್ಬರು ಗಂಡಸರು ಇದ್ದಿದ್ದರೆ ಚೆನ್ನಾಗಿತ್ತು. ಇವರೊಬ್ಬರೇ ಗಂಡಸರು, ನಾವೆಲ್ಲಾ ಬರೀ ಹೆಂಗಸರು.... ಎಲ್ಲಾದಕ್ಕೂ ಇವರೊಬ್ಬರೇ ಪರದಾಡಬೇಕಲ್ಲ' ಲಕ್ಷ್ಮಿ ಪೇಚಾಡಿದಳು.

"ನೀನು ಸುಮ್ಮನಿದ್ದು ಬಿಡು. ಹೇಗಾಗುತ್ತೋ ಹಾಗೇ ಆಗುತ್ತೆ."

"ಸುಮ್ಮನೇ ಹೇಗೆ ಇರುಕ್ಕೆ ಆಗುತ್ತೆ ಅತ್ಗೇ. ಖರ್ಚು ಮಾಡ್ಕೊಂಡು ಶ್ರಮ ಪಟ್ಕೊಂಡು ಹೋದ್ಮೇಲೆ ಎಲ್ಲಾ ಸರಿಯಾಗಿ ಆಗ್ಬೇಡ್ವೇ?"

"ಆಗುತ್ತೆ... ಆ ವಿಶ್ವೇಶ್ವರನೇ ಎಲ್ಲಾ ನೋಡ್ಕೋತಾನೆ. ಆತಂಕ ಪಡಬೇಡ. ಅವನು ಹೇಳೋದೂ ಸರಿ. ಇಲ್ಲಿಗೆ ಈ ಯಾತ್ರಾ ಕ್ಷೇತ್ರಗಳು ಹತ್ತಿರ ಇಲ್ಲಿ ಇರೋವಾಗ ಕೈಯಲ್ಲಿ ಆಗುವಾಗ ಹೋಗದೇ ಇದ್ದರೆ ಏನು ಚೆನ್ನ ಅಂತ. ನಾನು ಹೂಂ ಅಂತಂದೆ. ಇಲ್ದಿದ್ರೆ ನಂಗೆ ಮನೆ ಬಿಟ್ಟು ಹೊರಗೆ ಎಲ್ಲಾದ್ರೂ ಹೋಗೋದು ಅಂತಂದ್ರೆ ಅಷ್ಟಕಷ್ಟೇ."

"ನಂಗೇನು ಸುಲಭವೇ? ಈ ಎಲ್ಲಾ ಮಕ್ಕಳನ್ನು ಎಳ್ಕೊಂಡು ಏನು ಫಜೀತಿಯೋ?" ಆಗ ಹೋಗಿದ್ದಾಗ ಇವರು ಇಬ್ಬರೇ ಇದ್ದರು. ಹಾಗೆ ಹೇಳಿದರೂ ಎಲ್ಲಾ ತಯಾರಿಯನ್ನೂ ಮಾಡಿದ್ದಳು.

"ಶಾಂತಂಗೆ, ಲಲಿತಂಗೆ, ಸ್ವಲ್ಪ ಸಂಭ್ರಮ. ಆ ಬಾರಿ ಹೋಗಿ ಬಂದದ್ದು ಸ್ವಲ್ಪ ಸ್ವಲ್ಪ ನೆನಪಿನಲ್ಲಿತ್ತು. ಪದ್ಮಿನಿ ರಾಗಿಣಿಯರಿಗೆ ಇನ್ನು ತಿಳುವಳಿಕೆ ಸಾಲದು. ಅದರೂ ಈ ಮಕ್ಕಳಿಗೂ ಕಾಶೀಯಾತ್ರೆಯ ಯೋಗವಿತ್ತು. ಶಾಸ್ತ್ರಿ ಮೊದಲೇ ರೈಲಿಗೆ ಟಿಕೆಟ್ಟುಗಳನ್ನು ಕಾದಿರಿಸಿದ್ದನಾದ್ದರಿಂದ ಯಾವ ಗೊಂದಲವೂ ಇರಲಿಲ್ಲ. ಸುಸೂತ್ರ ಅಂತ ಅಲ್ಲದಿದ್ದರೂ, ಹೆಚ್ಚು ಕಷ್ಟಪಡದೇ ಕಾಶೀಯಾತ್ರೆಯನ್ನು ಮುಗಿಸಿಕೊಂಡು ಹಿಂದಿರುಗಿದ್ದರು. ಪ್ರಯಾಣದ ಆಯಾಸವನ್ನು ಪರಿಹರಿಸಿಕೊಂಡು ಎರಡು ದಿನಗಳ ನಂತರ ಶಾಸ್ತ್ರಿ ಕೆಲಸಕ್ಕೆ ಹಾಜರಾದ.

ಸ್ವಲ್ಪ ಹೊತ್ತಿನಲ್ಲೇ ಅವನಿಗೆ ಜನರಲ್ ಮ್ಯಾನೇಜರ್‌ನಿಂದ ಕರೆ ಬಂದಿತ್ತು. ಅಲ್ಲಿ ಅವನ ಕಡೆಯ ಒಬ್ಬ ಹೊಸ ವ್ಯಕ್ತಿ ಕುಳಿತಿದ್ದ. ಅವನನ್ನು ಶಾಸ್ತ್ರಿಗೆ ಪರಿಚಯಿಸಿದ. ಇವನು ಸೋಹನ್‌ಲಾಲ್ ಅಂತ ಶುಗರ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ

ಮಾಡಿಕೊಂಡಿದ್ದಾನೆ. ಆದರೆ ಅನುಭವ ಸಾಲದು. ನೀವು ಇವನಿಗೆ ಟ್ರೈನಿಂಗ್ ಕೊಡಬೇಕು. ಟ್ರೈನಿಂಗ್ ಮುಗಿಯುವವೆಗೂ ನೀವು ಈ ಊರು ಬಿಟ್ಟು ಎಲ್ಲಿಗೂ ಹೋಗುವಂತಿಲ್ಲ. ಯಾವುದೇ ಕಾರಣಕ್ಕೂ ರಜವನ್ನು ತೆಗೆದುಕೊಳ್ಳುವಂತಿಲ್ಲ ಅಂತಂದ.

"ಸಾರ್..... ಈ ಮೊದಲೇ ನಾನು ಹೇಳಿದೀನಿ. ಇನ್ನೆರಡು ತಿಂಗಳಿಗೆ ನನ್ನ ಅಕ್ಕನ ಮಗಳಿಗೆ ಮದುವೆ ನಾವುಗಳು ಹೋಗಲೇಬೇಕು."

"ಪದೇ ಪದೇ ಹೇಗ್ರೀ ರಜ ಹಾಕ್ತೀರಿ? ... ಈಗ್ಬೇರೆ ರಜದ ಮೇಲೆ ಹೋಗಿದ್ರಿ.... ನಿಮ್ಮ ಪತ್ನಿಯ ಹೆರಿಗೆ ಸಮಯದಲ್ಲಿ ಎರಡೆರಡು ಸಾರಿ ರಜ ಹಾಕಿದ್ರಿ... ರಜಾನೇ ತಗೋತಿದ್ರೆ ಕೆಲಸ ಹೇಗೆ ನಡೆಯುತ್ತೆ ಶಾಸ್ತ್ರೀಜೀ.....?"

"ಕಾರಣ ಇಲ್ಲದೇ ನಾನು ರಜ ಹಾಕಿಲ್ಲ ಸಾರ್.... ರಜ ಮಂಜೂರು ಮಾಡಿದ್ಮೇಲೇ ಹೋಗಿರೋದು."

"ಗೊತ್ತು, ಆದರೂ, ನೀವುಗಳೇ ಹೀಗೆ ರಜ ತಗೊಂಡ್ರೆ, ಕೆಳಗಿನವರು ಕೇಳಿದ್ರೆ ಇಲ್ಲ ಅನ್ನೋಕೆ ಆಗುತ್ತಾ? ಕಂಪೆನಿಯ ಕೆಲಸಕ್ಕೆ ತೊಂದರೆ ಆಗುತ್ತೆ ಅಂತ ಗೊತ್ತು ತಾನೇ?"

"ಗೊತ್ತು ಸಾರ್... ಆದರೂ, ರೂಲ್ಸುಗಳನ್ನು ಮೀರಿ ಹೆಚ್ಚು ರಜ ತಗೊಂಡಿಲ್ಲ... ರಜ ಇನ್ನೂ ಬಾಕಿ ಇದೆ...."

"ಏನ್ರೀ.... ರೂಲ್ಸು ಅದೂ ಇದು ಅಂತ ನಂಗೇ ಹೇಳ್ತೀರಿ. ನಾನು ನಿಮ್ಮ ಮೇಲಿನ ಅಧಿಕಾರಿ.... ನನಗೆ ಜವಾಬ್ದಾರಿ ಜಾಸ್ತಿ. ಕಂಪೆನಿಯ ಹಿತಾಸಕ್ತಿ ನನಗೆ ಮುಖ್ಯ.... ನಿಮ್ಮ ಹಾಗೆ ಬರೀ ಸಂಬಳಕ್ಕೆ ದುಡಿಯೋನಲ್ಲ ನಾನು.... ಕಂಪೆನಿಯ ಒಳಿತಿಗಾಗಿ ದುಡಿಯೋನು ನಾನು......" ಶಾಸ್ತ್ರಿ ತಲೆತಗ್ಗಿಸಿ ನಿಂತ. ನಖ ಶಿಖಾಂತ ಅವನ ಮೈ ರೋಷದಿಂದ ಕುದಿಯಿತು. "ಏನ್ರೀ ಸುಮ್ಮನೇ ನಿಂತು ಬಿಟ್ಟರೇ.... ಇನ್ನು ಆರು ತಿಂಗಳು ನೀವು ಯಾವ ರಜವನ್ನು ತಗೊಳ್ಳುವಂತಿಲ್ಲ....."

"ಈ ಮೊದಲು ರಜ ಬೇಕು ಅಂತ ಹೇಳಿದೀನಿ... ಈಗ ರಜ ತಗೊಳ್ಳುವ ಹಾಗಿಲ್ಲ ಅಂತ ಹೇಳಿದ್ರೆ ಹೇಗೆ ಸಾರ್.... ನಾವೂ ನಮ್ಮ ನೆಂಟರಿಷ್ಟರ ಮನೆಯ ಸಮಾರಂಭಗಳಿಗೆ ಹೋಗಲೇ ಬೇಕಾಗುತ್ತದೆ."

"ಹೋಗಿ ಬೇಡ ಅಂತ ಯಾರು ಹೇಳಿದ್ರು? ಹೋಗಿ ಅಲ್ಲೇ ಇರಿ. ಯಾರು ಬೇಡ ಅಂದ್ರು?..... ಹೆಚ್ಚು ಸಂಬಳ ಬೇಕು. ಬಿಟ್ಟಿ ಮನೆ ಬೇಕು. ಆದರೆ ಕೆಲಸ ಮಾಡ್ಬೇಕು ಅಂತಂದ್ರೆ ಏನೋ ನೆವ. ಜವಾಬ್ದಾರಿ ಬೇಡ್ವಾ ನಿಮಗೆ?"

"ಬೇಜವಾಬ್ದಾರಿಯಿಂದ ನಾನೆಂದೂ ವರ್ತಿಸಿಲ್ಲ. ಪ್ರಾಮಾಣಿಕನಾಗಿ ಕೆಲಸ ಮಾಡಿದೀನಿ. ಸಂಬಳ ತಗೊಂಡಿದೀನಿ. ಕಂಪೆನಿಯವರೇ ಕ್ವಾರ್ಟಸ್ ಕೊಟ್ಟಿದಾರೆ.... ಈಗ್ಯಾಕೆ ಹೀಗೆ ಮಾತಾಡ್ತಿದೀರಿ...."

"ಅದನ್ನೆಲ್ಲ ಪ್ರಶ್ನಿಸುವ ಹಕ್ಕು ನಿಮಗಿಲ್ಲ. ನೀವಿನ್ನು ಹೋಗಬಹುದು."

"ಆದರೆ ಕೆಲವು ವಿಷಯಗಳು ಈಗಲೇ ಇತ್ಯರ್ಥ ಆಗಬೇಕು."

"ಮೊದಲು ಈ ಟ್ರೈನಿಂಗ್ ಮುಗೀಲಿ. ಆಮೇಲೆ ಮುಂದಿನ ಮಾತು."

"ನಾನು ಅನುಭವೀ ಕೆಮಿಸ್ಟ್ ಅಂತ ನನ್ನನ್ನು ಇಲ್ಲಿಗೆ, ಹಿಂದೆ ಇದ್ದ ಮ್ಯಾನೇಜರ್ ನೇಮಕ ಮಾಡಿಕೊಂಡರು. ನನಗೂ ಸ್ವಾಭಿಮಾನ ಇದೆ. ಈ ವ್ಯಕ್ತಿಯ ಎದುರಿಗೆ ನೀವು ಹೀಗೆಲ್ಲಾ ಮಾತನಾಡಿ ನನಗೆ ಅವಮಾನ ಮಾಡುವಂತಿಲ್ಲ."

"ನಾನು ಕರೆಸಿ ಮಾತಾಡಿದ್ರೆ, ಅದು ಅವಮಾನವೇನ್ರಿ... ಈ ಹುಡುಗಂಗೆ ಟ್ರೈನಿಂಗ್ ಬೇಕು ಅಂತ ನಿಮ್ಮನ್ನು ಕೇಳಿದ್ದೇ ತಪ್ಪಾ?"

"ನಾನು ಹಾಗೆ ಹೇಳ್ಲಿಲ್ಲ ಸಾರ್..... ಅವಶ್ಯವಾಗಿ ಟ್ರೈನಿಂಗ್ ಕೊಡ್ತೀನಿ. ಆದರೆ ಒಂದು ವಿಷಯವನ್ನು ಈಗಲೇ ಹೇಳಿಬಿಡ್ತೀನಿ. ಹೀಗೇ ಮುಂದುವರೆದರೆ ನಾನು ರಾಜೀನಾಮೆಯನ್ನು ಕೊಡಬೇಕಾಗುತ್ತೆ" ಶಾಸ್ತ್ರಿ ತಡೆ ತಡೆದು ನುಡಿದ.

"ಕೊಡ್ರೀ.... ಕೊಡಿ. ಏನು ಹೆದರಿಸ್ತೀರಾ? ನಿಮ್ಮಂಥ ಹತ್ತು ಜನರನ್ನು ಇಟ್ಕೋಳ್ಳೋ ತಾಕತ್ತು ನಮ್ಮ ಕಂಪೆನಿಗಿದೆ. ನೀವಲ್ಲದಿದ್ರೆ ಇನ್ನೊಬ್ಬರು." ಬಹಳ ಕೇವಲವಾಗಿ ಮಾತನಾಡಿದ.

ಶಾಸ್ತ್ರಿಯ ಮುಖ ಕೆಂಪಾಯಿತು. ಇನ್ನು ಈ ಧೂರ್ತನೊಡನೆ ಮಾತನಾಡಿದರೆ ಮರ್ಯಾದೆ ಬರುವುದಿಲ್ಲವೆಂದುಕೊಂಡು ಕೈ ಮುಗಿದು ಹೊರಬಂದ. ಒಳಗೆ ಅವನು ನಕ್ಕಿದ್ದು ಕೇಳಿಸಿತ್ತು. ಶಾಸ್ತ್ರಿ ಹಿಂತಿರುಗುವುದನ್ನೇ ಕಾಯುತ್ತಿದ್ದ ಅವನ ಕೆಲವು ಸಹೋದ್ಯೋಗಿಗಳು ಅವನನ್ನು ಸುತ್ತುವರೆದರು. ಶಾಸ್ತ್ರಿಯ ಧುಮುಗುಟ್ಟುತ್ತಿದ್ದ ಮುಖವನ್ನು ನೋಡಿಯೇ ಏನು ಮಾತು ಕತೆ ನಡೆದಿರಬಹುದೆಂದು ಊಹಿಸಿದರು.

ಅವರ ಪೈಕಿ ಒಬ್ಬನು, ಶಾಸ್ತ್ರಿಗೆ ಆಪ್ತನಾಗಿದ್ದ. "ಈ ಮ್ಯಾನೇಜರ್‌ಗೆ ಮೊದಲಿನ ಮ್ಯಾನೇಜರ್‌ನ ಕಂಡರೆ ಆಗುತ್ತಿರಲಿಲ್ಲ. ಆ ದ್ವೇಷವನ್ನು ನಿಮ್ಮ ಮೇಲೆ ತೋರ್ಪಡಿಸಿ ಕೊಳ್ಳುತ್ತಿದ್ದಾನೆ. ತನ್ನ ಕಡೆಯವರನ್ನು ಹೊಸ ಹೊಸದಾಗಿ ಕೆಲಸಕ್ಕೆ ನೇಮಿಸಿಕೊಳ್ಳು ತ್ತಿದ್ದಾನೆ. ಅವರುಗಳಿಗೆ ಟ್ರೈನಿಂಗ್ ಕೊಟ್ಟು, ಕೆಲಸವನ್ನು ಕಲಿತ ಮೇಲೆ, ನಮ್ಮ ಮೇಲೆ ಅವರನ್ನು ಇಡುತ್ತಾನೆ. ಇದು ಅವನ ಉಪಾಯ." ಎಂದ.

"ಅವನ ಉಪಾಯ ಏನೇ ಇರಲಿ. ಇನ್ನು ನಾನು ಇಲ್ಲಿ ಮುಂದುವರಿಯುವುದಿಲ್ಲ. ರಾಜೀನಾಮೆ ಕೊಟ್ಟು ಹೊರಟು ಹೋಗ್ತೀನಿ."

"ದುಡುಕ್ಬೇಡಿ ಶಾಸ್ತ್ರೀಜೀ..... ನಮ್ಮ ಯೂನಿಯನ್ ಮುಖಂಡರ ಹತ್ತಿರ ಮಾತನಾಡಿ. ಅವರು ಪರಿಹಾರವನ್ನು ಸೂಚಿಸ್ತಾರೆ. ನಾವು ನಿಮ್ಮ ಪರವಾಗಿ ಇದ್ದೇವೆ. ಹೋರಾಟ ಮಾಡೋಣ."

"ಹೋರಾಟ ಮಾಡಿ ಗೆಲ್ಲುವುದರಿಂದ ಏನು ಪ್ರಯೋಜನ? ಮತ್ತೆ ಇದೇ

ವಾತಾವರಣದಲ್ಲಿ ಕೆಲಸ ಮಾಡ್ಬೇಕು... ಇದೇ ಮ್ಯಾನೇಜರ್‌ನ ಅಧಿಕಾರದಲ್ಲಿ ಮುಂದುವರೆಯಲು ಇಷ್ಟವಿಲ್ಲ. ಹೊಸದಾಗಿ ಬಂದಿರುವವರನ್ನು ನನ್ನ ಸಮಾನರಾಗಿ, ಅಥವಾ ನನಗಿಂತ ಮೇಲಿನವರಾಗಿ ಮಾಡಿದರೆ, ಅದು ನನಗೆ ಅವಮಾನ ಅಲ್ಲವೇ?"

"ಹೌದು. ನೀವು ಹೇಳೋದು ನಿಜ. ಆದರೆ ಈಗ ನೀವು ಏಕಾಏಕೀ ಹೋಗುವಂತಿಲ್ಲ. ಈ ಊರಿಗೆ ಬಂದು ನಾಲ್ಕು ವರ್ಷಗಳು ಕಳೆದಿರಬಹುದು. ಒಂದು ವರ್ಷ ಬಾಕಿ ಇದೆ. ಆ ಬಾಂಡ್‌ನ್ನು ಉಲ್ಲಂಘಿಸಿ ಹೋಗುವಂತಿಲ್ಲ. ಯಾವುದಕ್ಕೂ ನೀವು ಕಾರ್ಮಿಕರ ಮುಖಂಡರ ಹತ್ತಿರ ಮಾತನಾಡಬೇಕು ಎಂದು ಸಲಹೆಯನ್ನಿತ್ತರು.

ಮಧ್ಯಾಹ್ನ ಊಟಕ್ಕೆ ಬಂದವನ ಮುಖವನ್ನು ನೋಡಿ ಸಾತಕ್ಕ ಆತಂಕಗೊಂಡಳು. ನಡೆಯಬಾರದ್ದು ಏನೋ ನಡೆದಿದೆ ಅಂತ ಊಹಿಸಿದಳು. ಆದರೆ ತಾನಾಗಿಯೇ ಕೇಳಲು ಹಿಂಜರಿದಳು. ಮೊನ್ನೆ ಇನ್ನು ಕಾಶೀಯಾತ್ರೆಯನ್ನು ಮುಗಿಸಿಕೊಂಡು ಬಂದಿದ್ದೇವೆ. ವಿಶ್ವೇಶ್ವರಾ ನೀನೇ ಕಾಪಾಡು ಎಂದು ಪ್ರಾರ್ಥಿಸಿದಳು. ಅವನು ಮೌನವಾಗಿ ಊಟ ಮುಗಿಸಿ, ಸ್ವಲ್ಪ ಹೊತ್ತು ಮಲಗಿದ್ದು ಎದ್ದು ಕಾಫಿಯನ್ನು ಕುಡಿದು ಹೊರಟುಬಿಟ್ಟ.

ಲಕ್ಷ್ಮಿ, ಚಿಕ್ಕವರಿಬ್ಬರೂ ಮಲಗಿದ ಕೂಡಲೇ ಹೊಲಿಗೆ ಮಿಷನ್ನನ್ನು ತೆಗೆದಿಟ್ಟು ಕೊಂಡು ಕುಳಿತಳು. ಸಾತಕ್ಕ ಅವಳ ಬಳಿಗೆ ಬಂದಳು.

"ಗುಂಡಣ್ಣ ಯಕೋ ಎಂದಿನಂತಿರಲಿಲ್ಲ. ನೀನು ಗಮನಿಸಿದ್ಯಾ?" ಕೇಳಿದಳು.

"ಇಲ್ಲ ಅತ್ಗೇ.... ದಿನಾ ಅಡಿಗೆ ಮಾಡಿ ಬಡಿಸೋರು ನೀವೇ ತಾನೇ? ಏನಾದ್ರೂ ಅಂದ್ರಾ?"

"ಏನೂ ಮಾತಾಡ್ಲಿಲ್ಲ.... ಮುಖ ಧುಮುಗುಟ್ಟುತ್ತಿತ್ತು. ಕಂಠಿ ಏನಾದ್ರೂ ಕಾಗದ ಬರೆದಿರಬಹುದಾ ಅಂತ ನಂಗೆ ಅದೇ ಅನುಮಾನ."

"ಏನು ಬರೆದಿರಬಹುದು?"

"ಸಾತೂನ ಇಲ್ಲಿಗೆ ಕಳಿಸು. ಪಾತೂ ಬಸಿರಿ. ಬಾಣಂತನ ಮಾಡುಕ್ಕೆ ಯಾರೂ ಇಲ್ಲ ಅಂತ ಬರೆದಿರಬಹುದಾ."

"ನೀವೇನು ಅವರ ಗುಲಾಮರಾ? ಅದಕ್ಕೆ ಇವರ್‍ಯಾಕೆ ಮನಸ್ಸು ಕೆಡಿಸ್ಕೋಬೇಕು...."

"ಸುಂದರಿ ಮಗಳ ಮದುವೆ ನಿಂತು ಹೋಗಿರಬಹುದಾ...... ಅವಳು ಬೇಸರಗೊಂಡು ಪತ್ರ ಬರೆದಿರಬಹುದಾ?"

"ಹಾಗೇನಾದ್ರೂ ಇದ್ದರೆ, ನಮಗೆ ತಿಳಿಸ್ದೇ ಇರೋ ಅಂತ ವಿಷಯಾನಾ ಅತ್ಗೇ... ನೀವೇ ಕೇಳಬಹುದಾಗಿತ್ತು."

"ಯಾಕೋ ನಂಗೆ ಕೇಳ್ಬೇಕು ಅಂತ ಅನ್ನಿಸ್ಲೇ ಇಲ್ಲ. ಹೋದ ವಾರ ಎಲ್ಲಾ

ಸಿಕ್ಕಾಬಟ್ಟೆ ಖರ್ಚಾಗಿದೆ, ಶ್ರಮಪಟ್ಟಿದಾನೆ. ಏನೂ ಆಯಾಸವೋ... ನನಗಂತೂ ಅರ್ಥವಾಗ್ಲಿಲ್ಲ. ಏನೇನೋ ಆಲೋಚನೆಗಳು ಬರುತ್ವೆ"

"ನಾನು ಕೇಳ್ತೀನಿ... ಈ ಮಕ್ಕಳ ಸೇವೇಲಿ, ಅವರನ್ನು ವಿಚಾರಿಸಿಕೊಳ್ಳುಕ್ಕೇ ಆಗ್ತಿಲ್ಲ... ನನ್ನ ಮೇಲೆ ಅಸಮಾಧಾನವಿರಬಹುದು." ಓರೆಗಣ್ಣಿನಿಂದ ಅತ್ತಿಗೆಯ ಕಡೆ ನೋಡಿದಳು. ಸಾತಕ್ಕ ಇತ್ತ ನೋಡಲಿಲ್ಲ.

"ಹಾಗಿರಲಾರದು ಲಕ್ಷ್ಮೀ... ಅವನು ಯಜಮಾನ.... ಅವನ ಇಷ್ಟದಂತೆ ವರ್ತಿಸುವ ಹಕ್ಕು ಅವನಿಗಿದೆ..... ನಿಂಗೆ ಕೇಳಬೇಕು ಅಂತ ಅನ್ನಿಸಿದ್ರೆ ಕೇಳು." ಲಕ್ಷ್ಮಿ ಬಟ್ಟೆ ಹೊಲಿಯುವುದನ್ನು ನಿಲ್ಲಿಸಿ ಚಿಂತೆಯಲ್ಲಿ ಮುಳುಗಿದಳು.

ಫ್ಯಾಕ್ಟರಿಯ ಸೈರನ್ ಕೂಗಿ ಎಷ್ಟೋ ಹೊತ್ತಾದರೂ ಗಂಡ ಮನೆಗೆ ಬಾರದೇ ಇದ್ದಾಗ ಅವಳು ಆತಂಕಗೊಂಡಿದ್ದಳು. ಮಕ್ಕಳು ಸ್ಕೂಲಿನಿಂದ ಹಿಂತಿರುಗಿದ್ದರು. ದೇವರಿಗೆ ಸಾಯಂಕಲಾದ ದೀಪವನ್ನು ಹಚ್ಚಿಯಾಗಿತ್ತು. ಮಕ್ಕಳಿಗೆ ಬಾಯಿ ಪಾಠವನ್ನು ಹೇಳಿ ಕೊಟ್ಟದ್ದೂ ಆಗಿತ್ತು.

"ಯಾಕೋ ಇವರಿನ್ನೂ ಮನೆಗೆ ಬರಲಿಲ್ವಲ್ಲಾ ಅತ್ಗೇ.... ತಡವಾಗಿ ಬರ್ತೀನಿ ಅಂತ ನಿಮಗೇನಾದ್ರೂ ಹೇಳಿದ್ರಾ?"

"ಇಲ್ಲ ಅವನು ಮಾತೇ ಆಡ್ಲಿಲ್ಲ ಅಂತೀನಿ. ಏನಾದ್ರೂ ಫಜೀತೀಲಿ ಸಿಕ್ಕಿ ಬಿದ್ದಿದಾನಾ ಅಂತ ಭಯ ಆಗುತ್ತೆ ಕಣೇ."

"ಬಂದ್ರು ಅಂತ ಕಾಣುತ್ತೆ. ಗೇಟು ತೆಗೆದ ಸದ್ದಾಯ್ತು.... ಇಬ್ಬರೂ ಮೌನವಾಗಿ ಬಾಗಿಲಲ್ಲೇ ನಿಂತು ಇಣುಕಿದರು. ಶಾಸ್ತ್ರಿಯ ಜತೆಯಲ್ಲಿ ಇನ್ನು ಇಬ್ಬರು ಯಾರೋ ಇದ್ದರು. ಶಾಸ್ತ್ರಿ ಅವರಿಬ್ಬರನ್ನೂ ವರಾಂಡದಲ್ಲಿ ಕೂರಿಸಿ ಒಳಗೆ ಬಂದ.

"ಲಕ್ಷ್ಮೀ ಮೂರು ಲೋಟ ಟೀ ಮಾಡಿ ಲಲಿತನ ಕೈಯಲ್ಲಿ ಹೇಳಿ ಕಳಿಸು. ನಾನು ಬಂದು ತಗೊಂಡು ಹೋಗ್ತೀನಿ" ಎಂದು ಹೇಳಿ ಮತ್ತೆ ಹೊರಕ್ಕೆ ನಡೆದಿದ್ದ.

ಲಕ್ಷ್ಮಿ ಹಾಲನ್ನು ಬಿಸಿ ಮಾಡಿ, ಟೀಗೆ ನೀರನ್ನಿಟ್ಟು ಪುಡಿಯನ್ನು ಹಾಕಿ, ಕುದಿಸಿ ಶೋಧಿಸಿದಳು. ಧಾರಾಳವಾಗಿ ಸಕ್ಕರೆಯನ್ನು ಹಾಕಿ ಬೆರೆಸಿ, ಕಲಕಿ ಲಲಿತಳನ್ನು ಕರೆದಳು.

"ನಿಮ್ಮಣ್ಣಂಗೆ ಸ್ವಲ್ಪ ಬರ್ಬೇಕಂತೆ ಕರೆದು ಬಾ" ಲಲಿತ ಓಡಿದಳು. ಅವಳ ಹಿಂದೆಯೇ ಬಂದ. ಟೀಗಳ ಕಪ್ಪನ್ನು ತಟ್ಟೆಯಲ್ಲಿಟ್ಟು ಕೊಟ್ಟಳು. ಅವನ ಹಿಂದೆಯೇ ಸದ್ದಾಗದಂತೆ ಹೆಜ್ಜೆಯನ್ನು ಹಾಕಿದಳು. ಮರೆಯಲ್ಲಿ ನಿಂತು ಮಾತುಗಳನ್ನು ಆಲಿಸಿದಳು. ಮುಖ್ಯವಾದ ಮಾತುಗಳು ಮುಗಿದಿದ್ದವು. ಅಲ್ಲದೇ ಅವರು ಹಿಂದಿಯಲ್ಲಿ ಆಡಿದುದು ಇವಳಿಗೆ ಸರಿಯಾಗಿ ಅರ್ಥವಾಗಲಿಲ್ಲ.

ಆಫೀಸ್ನೋರು ಯಾರೂ ಎಂದೂ ಬಂದಿರಲಿಲ್ಲ. ಏನು ಗುಟ್ಟೋ.....? ಈ

ರಾತ್ರಿ ತಾನು ಕೇಳಲೇ ಬೇಕೆಂದುಕೊಂಡಳು. ಶಾಸ್ತ್ರಿ ಒಳಗೆ ಬರದೇ ಅಲ್ಲಿಂದಲೇ ಬರ್ತೀನಿ ಎಂದಷ್ಟೇ ಹೇಳಿ ಮತ್ತೆ ಅವರೊಡನೆ ಹೊರಟು ಹೋಗಿದ್ದ.

"ಎಂದೂ ಯಾರೂ ಈ ಮನೆಗೆ ಬಂದದ್ದು ಕಾಣೇ. ಕರ್‍ಕೊಂಡು ಬಂದ್ರ ಮತ್ತೆ ಅವರ ಜೊತೆ ಹೊರಟುಬಿಟ್ರು. ಎಲ್ಲಿಗೆ ಹೋದ್ರೋ ಎಷ್ಟು ಹೊತ್ತಿಗೆ ಬರ್ತಾರೋ" ತನಗೇ ಎಂಬಂತೆ ಹೇಳಿಕೊಂಡಳು. ಮಕ್ಕಳಿಗೆ ಬಡಿಸಿ, ಮಲಗಲು ಹಾಸಿಗೆಗಳನ್ನು ಹಾಸಿಕೊಟ್ಟಳು. ಸ್ವಲ್ಪ ಹೊತ್ತಿನಲ್ಲೇ ಶಾಸ್ತ್ರಿ ಹಿಂತಿರುಗಿದ್ದ.

ಕೈಕಾಲು ತೊಳೆದು, ಸಂಧ್ಯಾವಂದನೆಯ ಶಾಸ್ತ್ರವನ್ನು ಮಾಡಿ, ದೇವರಿಗೆ ದೀವನ್ನು ಹಚ್ಚಿ ತನ್ನ ಟ್ರಂಕನ್ನು ತೆಗೆದಿಟ್ಟುಕೊಂಡು ಕೂತ. "ಏನನ್ನೋ ಹುಡುಕ್ತಿದಾರೆ" ಲಕ್ಷ್ಮಿ ಸಾತಕ್ಕನಿಗೆ ವರದಿಯನ್ನು ಒಪ್ಪಿಸಿದಳು. ಕಾಗದ ಪತ್ರಗಳನ್ನು ತಿರುಗಿಸಿ ತಿರುಗಿಸಿ ನೋಡಿ ಕೆಲವನ್ನು ತೆಗೆದಿಟ್ಟುಕೊಂಡ.

"ಲಕ್ಷ್ಮೀ ತಟ್ಟೆ ಹಾಕು" ಎನ್ನುತ್ತಾ ಬಂದು ಊಟಕ್ಕೆ ಕುಳಿತ. ಲಕ್ಷ್ಮಿ ತಟ್ಟೆ ಬಟ್ಟಲನ್ನಿಟ್ಟು ಬಡಿಸಿದಳು. ಶಾಸ್ತ್ರಿ ನಿಧಾನವಾಗಿ ಊಟವನ್ನು ಮಾಡಿದ. ಅಡಿಗೆ ಮನೆಯಲ್ಲಿ ಫಲಾಹಾರಕ್ಕೆ ಸಿದ್ಧ ಮಾಡುತ್ತಿದ್ದ ಸಾತಕ್ಕ ಆಗಾಗ್ಗೆ ಅವನ ಕಡೆಯೇ ನೋಡುತ್ತಿದ್ದಳು. ಊಟ ಮುಗಿಸಿ ಆಪೋಶನವನ್ನು ತೆಗೆದುಕೊಂಡು ಎದ್ದು ಕೈ ತೊಳೆದ. ಮತ್ತೆ ತನ್ನ ರೂಮಿಗೆ ಹೋಗಿ ಆ ಪತ್ರಗಳನ್ನು ನೋಡಲಾರಂಭಿಸಿದ.

ಲಕ್ಷ್ಮಿ ತನ್ನ ಊಟವನ್ನು ಮುಗಿಸಿ ಮಕ್ಕಳು ನಿದ್ರಿಸುತ್ತಿರುವವರೆನ್ನುವುದನ್ನು ಖಚಿತಪಡಿಸಿಕೊಂಡು ಗಂಡ ಇದ್ದ ರೂಮಿಗೆ ಬಂದಳು. ಅವನು ಇವಳ ಕಡೆ ತಿರುಗಿರಲಿಲ್ಲ "ಹಾಸಿಗೆಯನ್ನು ಹಾಸಿ ಕೊಡ್ಲಾ?" ಎಂದು ಕೇಳಿದಳು.

"ಹೂಂ." ಎಂದಷ್ಟೇ ಹೇಳಿದ.

"ನಾನು ಹೋಗ್ಲಾ?" ಕೇಳಿದಳು.

"ಹೂಂ ಹೋಗು." ಎಂದ ಕತ್ತೆತ್ತದೇ. ಅವಳಿಗೆ ಕೆನ್ನೆಗೆ ಹೊಡೆದಂತಾಗಿತ್ತು. ನಾನು ಇಷ್ಟು ಬೇಡವಾದೆನೇ? ಇವರಿಗೆ ನನ್ನ ಅಗತ್ಯವಿಲ್ಲದ ಮೇಲೆ ನಾನು ಇಲ್ಲಿ ನಿಂತು ಮಾಡುವುದೇನು ಅಂತ ಮಕ್ಕಳು ಮಲಗಿದ್ದ ರೂಮಿಗೆ ಬಂದು ಮಲಗಿದಳು.

"ಯಾಕೇ ಲಕ್ಷ್ಮಿ ಬಂದು ಬಿಟ್ಯಾ? ಅವನೇನಂದ?" ಶಾಂತಳ ಪಕ್ಕ ಮಲಗಿದ್ದ ಸಾತಕ್ಕ ಕೇಳಿದಳು.

"ನಾನೂ ಏನೂ ಕೇಳ್ಲಿಲ್ಲ. ಅವರೂ ಏನೂ ಹೇಳ್ಲಿಲ್ಲ. ಬರೀ ಹಾಸಿಗೆಯನ್ನು ಹಾಸಿಕೊಟ್ಟು ಬಂದ್ಬಿಟ್ಟೆ."

"ಹಾಗಾದ್ರೆ ಅವನು ಇನ್ನೂ ಎದ್ದಿದಾನಾ?"

"ಹೂಂ.... ಗಾಢವಾಗಿ ಏನನ್ನೋ ನೋಡ್ತಿದಾರೆ..." ಎಂದಳು. ತಾನಾಗಿಯೇ ಮಾತಾಡಿದರೂ ತನ್ನ ಕಡೆ ನೋಡದಿರುವಂಥ ಗಹನವಾದ ವಿಚಾರ ಯಾವುದು

ಇರಬಹುದು? ಕಂಪೆನಿಯವರು ಸಂಬಳದಲ್ಲಿ ಏನಾದರೂ ಹಿಡಿದಿರಬಹುದೇ? ಅವಳ ಚಿತ್ತ ಅತ್ತ ತಿರುಗಿತ್ತು.

* * *

ಶಾಸ್ತ್ರಿ ರಾಜೀನಾಮೆಯನ್ನು ಕೊಡ್ತಿದಾರೆ ಎನ್ನುವ ವಿಷಯ ಕೆಲವೇ ದಿನಗಳಲ್ಲಿ ಕಂಪೆನಿಯೊಳಗಿನ ಕೆಲಸಗಾರರಿಗೆಲ್ಲಾ ತಿಳಿಯಿತು. ಕೆಲವರು, ಕೆಲವು ತರಹದ ಮಾತುಗಳನ್ನಾಡಿದ್ದರು.

"ಅಲ್ಲಾ ಶಾಸ್ತ್ರಿ ಇಲ್ಲಿ ನಿಮ್ಮ ಬದಲಿಗೆ ಯಾರೂ ಬಂದಂತಿಲ್ಲ. ನೀವು ಯಾಕೆ ಬಿಡ್ತಿದೀರಿ...?" ಯಾರೋ ಕೇಳಿದರು.

"ಇದು ನನಗೆ ಪರದೇಶ. ನಾನು ನನ್ನ ಸ್ವದೇಶಕ್ಕೆ ವಾಪಸ್ಸು ಹೊರಟು ಹೋಗೋಣ ಅಂತ ಅನ್ನಿಸ್ತು, ಅದಕ್ಕೇ ಹೊರಡ್ತಿದೀನಿ."

"ಕಂಪೆನಿಯವರು ನಿಮ್ಮನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲ್ಲ." ನೋಡ್ತಿರಿ.

"ಬಿಟ್ಟು ಕೊಡ್ತಾರೋ ಕಳಿಸಿಕೊಡ್ತಾರೋ, ಇನ್ನು ಕೆಲವೇ ದಿನಗಳಲ್ಲಿ ನಿಮಗೇ ತಿಳಿಯುತ್ತೆ."

"ಅಲ್ಲಿ ಮತ್ತೆ ಮಂಡ್ಯದ ಕಾರ್ಖಾನೆಗೇ ಸೇರಿಕೊಳ್ತೀರಾ?"

"ಏನೋ ನಾನು ಇನ್ನೂ ಏನನ್ನೂ ನಿರ್ಧರಿಸಿಲ್ಲ...."

"ಮತ್ತೆ? ಏಕಾಏಕೀ ಕೆಲಸ ಬಿಟ್ಟು ಏನ್ಮಾಡ್ತೀರಿ ಶಾಸ್ತ್ರೀಜೀ.... ಊರ್ನಲ್ಲಿ ಜಮೀನು ತೋಟ ಏನಾದ್ರೂ ಇದೆಯಾ?" ಯಾರೋ ಕೇಳಿದ್ದರು. ಶಾಸ್ತ್ರಿ ನಕ್ಕ. ಏನೂ ಇಲ್ಲ ಎನ್ನುವಂತೆ ತಲೆ ಆಡಿಸಿದ.

"ಇನ್ನೂ ನಾಲ್ಕು ತಿಂಗಳು ಇಲ್ಲಿರ್ತೀನಿ. ಮೊದಲು ಮಕ್ಕಳ ಪರೀಕ್ಷೆ ಮುಗಿಯ ಬೇಕು... ಮಧ್ಯದಲ್ಲಿ ಇಲ್ಲಿಂದ ಅಲ್ಲಿಗೆ ಹೋದ್ರೆ ಅಲ್ಲಿ ಯಾರು ಸೇರಿಸ್ಕೊಳ್ತಾರೆ?"

"ನಿಜ ಹೇಳಿ ಶಾಸ್ತ್ರಿಗಳೇ ನಿಮಗೆ ಬೇಸರ ಆಗ್ತಿಲ್ವಾ?"

"ನಿಮ್ಮನ್ನೆಲ್ಲಾ ಬಿಟ್ಟು ಹೋಗ್ಬೇಕಲ್ಲ ಅಂತ ಬೇಸರ ಆಗ್ತಿದೆ. ಆದರೆ, ನನಗೆ ಗೌರವ ಇಲ್ಲದ ಕಡೆ ಕೆಲಸ ಮಾಡಲು ನನ್ನ ಮನಸ್ಸು ಒಪ್ಪುತ್ತಿಲ್ಲ."

"ಅದೂ ಸರಿಯೇ ಯೂನಿಯನ್ ಮುಖಂಡರು ಏನಂದ್ರು?"

"ಅವರು ಜನರಲ್ ಮ್ಯಾನೇಜರ್ ಹತ್ರ ಮಾತಾಡಿದಾರೆ. ನನ್ನ ಕೆಲವು ನಿಬಂಧನೆ ಗಳನ್ನು ಅವರಿಗೆ ತಿಳಿಸಿದ್ದಾರೆ. ನೋಡೋಣ ಏನಾಗುತ್ತೆ ಅಂತ." ಎಂದು ಹೇಳಿ ಅಲ್ಲಿ ನಿಲ್ಲದೇ ಅಲ್ಲಿಂದ ಹೊರಬಿದ್ದ.

ಲಕ್ಷ್ಮಿ ಅವನಿಗೆ ಕಾಫಿಯನ್ನೂ ಅದೇ ತಾನೇ ಮಾಡಿದ್ದ ಬಿಸಿ ಬಿಸಿ ಬೋಂಡಾ ವನ್ನು ತಂದುಕೊಟ್ಟಳು.

"ಬೋಂಡಾ ಯಾಕೆ ಮಾಡ್ದೇ?"

"ಮಕ್ಕಳು ಕೇಳ್ತಿದ್ವು... ಎತ್ತಿಗೆ ಮಾಡಿದ್ದು ನಾನಲ್ಲ.." ಸಾತಕ್ಕನೂ ಅವನ ಎದುರಿಗೆ ಬಂದು ನಿಂತಳು. ಲಕ್ಷ್ಮಿ ಅಸಮಾಧಾನದಿಂದ ಹೊರಟು ಹೋಗಿದ್ದಳು.

"ಏನಾದ್ರೂ ಬೇಕಾ ಸಾತು?"

"ಇವತ್ತು ಅಕ್ಕ ಪಕ್ಕದ ಮನೆಯ ಹೆಂಗಸರೆಲ್ಲಾ ಬಂದಿದ್ರು ನಾವು ಈ ಊರನ್ನು ಬಿಟ್ಟು ಹೋಗ್ತಿರುವ ವಿಚಾರ ನಮಗೇ ಗೊತ್ತಿರಲಿಲ್ಲ. ಅವರುಗಳು ಬಂದು ಹೇಳಿದ್ರು, ಇದು ನಿಜಾನಾ?"

"ಹೂಂ ಸಾತು ಈ ವರ್ಷ ಮುಗೀತಿದ್ದ ಹಾಗೆ ಹೊರಟು ಬಿಡೋದೇ?"

"ನೀನು ನಮಗೆ ಹೇಳಲೇ ಇಲ್ಲ."

"ಹೇಳ್ದೇ ಇರ್ತಿದ್ನಾ? ಇನ್ನೂ ಸಮಯ ಇದೆಯಲ್ಲಾ."

"ನೀನು ಬರೆದುಕೊಟ್ಟ ಅವಧಿ ಇನ್ನೂ ಮುಗಿದಿಲ್ಲ ಅಲ್ವಾ?"

"ಇಲ್ಲಿಯ ನೀರಿನ ಋಣ, ಅನ್ನದ ಋಣ ಮುಗೀತಾ ಬಂದಿದೆ."

"ಯಾಕೆ? ಬೇಸರವಾಗುವಂಥ ಪ್ರಸಂಗ ಏನಾದ್ರೂ ನಡೀತಾ?"

"ನನ್ನನ್ನ ಏನೂ ಕೇಳ್ಬೇಡ.... ನಿಮಗೆಲ್ಲಾ ಯಾಕೆ?"

"ಅದೂ ಸರಿಯೇ..... ನಂಗ್ಯಾಕೆ ಹೇಳು. ನೀನು ಎಲ್ಲಿದ್ದರೆ ನಾನು ಅಲ್ಲಿ ಇರಬೇಕು. ಅಷ್ಟೇ ತಾನೇ...."

"ಹಾಗಲ್ಲ ಸಾತು. ತಿಳ್ಕೊಂಡು ಏನ್ಮಾಡ್ತೀಯ?"

"ನಿನಗೆ ಹೇಳುಕ್ಕೆ ಇಷ್ಟವಿಲ್ಲ ಅಂತಾಯ್ತು, ಕೇಳುಲ್ಲ ಬಿಡು."

"ಸುಂದರಿಯ ಮಗಳ ಮದುವೆ ಹೊತ್ತಿಗೆ ನಾವೆಲ್ಲಾ ಅಲ್ಲಿ ಇರ್ತೀವಿ."

"ಎಲ್ರೂ ಯಾಕೆ ಬಿಟ್ಟು ಬಂದ್ರಿ ಅಂತ ಕೇಳಿದ್ರೆ ಏನ್ಹೇಳೋದು?"

"ಅವಧಿ ಮುಗೀತು, ಬಿಟ್ಟು ಬಂದೆವು ಅಂದ್ರಾಯ್ತು. ಅದ್ಯಾವ ಮಹಾ ದೊಡ್ಡ ವಿಷಯ?" ಹೊರಡುವುದೆಂದು ನಿರ್ಧಾರ ತಗೊಂಡಿರುವನೆಂದು ಅರ್ಥವಾಗಿತ್ತು.

"ಲಕ್ಷ್ಮೀಗೆ ಯಾಕೆ ಹೇಳಿಲ್ಲ ಇನ್ನೂ....."

"ಅತ್ತೂ ಕರೆದು ರಂಪ ಮಾಡ್ತಾಳೆ. ಅದಕ್ಕೆ ಸ್ವಲ್ಪ ಮೋಹ ಜಾಸ್ತಿ."

"ಮೋಹ ಯಾರಿಗಿರುಲ್ಲ ಗುಂಡಣ್ಣ, ಅವಳು ಏನೇ ಹೇಳಿದ್ರೂ ಈ ಸಂಸಾರದ ಒಳಿತಿಗಾಗಿಯೇ ತಾನೇ."

"ನನಗೆ ಮರ್ಯಾದೆ ಮುಖ್ಯ. ಅದು ಅವಳಿಗೆ ಅರ್ಥವಾಗುಲ್ಲ."

"ಅರ್ಥವಾಗದೇ ಏನು? ಗಂಡನ ಮರ್ಯಾದೆಗಿಂತ ಹಣ ಮುಖ್ಯ ಅಲ್ಲ ಅಂತ ಅವಳಿಗೆ ತಿಳಿಯದೇನು?" ಲಕ್ಷ್ಮಿ ಒಳಗಿನಿಂದ ಸುಯ್ಯ್ ಅಂತ ಬಂದಳು.

"ಹೇಳ್ದೇ ಇದ್ರೆ ಬೇಡ ಬಿಡಿ ಅತ್ಗೇ.... ಅಪ್ಪ ಅಮ್ಮನ್ನ ಬಿಟ್ಟು ಇವರ ಹಿಂದೆ ಬಂದಿದೀನಲ್ಲ ಅದಕ್ಕೇ ಈ ಮರ್ಯಾದೆ" ಅಳುವಿನ ಧ್ವನಿಯಲ್ಲಿ ನುಡಿದಳು.

"ಸಾಕು ಸುಮ್ನಿರು. ನೋಡಿದ್ಯಾ ಸಾತು ಇದಕ್ಕೇ..... ಇದಕ್ಕೇ ನಾನು ಏನನ್ನೂ ತಿಳಿಸುಲ್ಲ ಇವಳಿಗೆ. ನನ್ನ ಮನಃಸ್ಥಿತಿ ಹೇಗಿದೆ ಅಂತ ನಿಮಗ್ಯಾರಿಗೆ ಅರ್ಥವಾಗುತ್ತೆ?" ಅವನು ಬೋಂಡದ ತಟ್ಟೆಯನ್ನು ಅತ್ತ ಸರಿಸಿ ಅಲ್ಲಿಂದ ಎದ್ದು ಹೋಗಿದ್ದ. ಇಬ್ಬರೂ ಮುಖ ಮುಖ ನೋಡಿಕೊಂಡರು.

* * *

ಅವಧಿ ಮುಗಿಯುವುದಕ್ಕೆ ಇನ್ನೂ ಐದಾರು ತಿಂಗಳುಗಳು ಬಾಕಿ ಇದೆ ಎನ್ನುವಾಗಲೇ ಹೊರಡುವುದಕ್ಕೆ ಎಲ್ಲಾ ಸಿದ್ಧತೆಗಳೂ ಆಗಿದ್ದವು. ಶಾಸ್ತ್ರಿಗೆ ಬರಬೇಕಾದ ಹಣಕ್ಕೆ ಯಾವ ತೊಂದರೆಯೂ ಉಂಟಾಗಲಿಲ್ಲ. ಆ ಅಸಿಸ್ಟೆಂಟ್ ಕೆಮಿಸ್ಟ್‌ನ ಟ್ರೈನಿಂಗ್ ಮುಗಿಯುತ್ತಿದ್ದಂತೆಯೇ ಶಾಸ್ತ್ರಿ ರಾಜೀನಾಮೆಯ ಪತ್ರವನ್ನು ಮ್ಯಾನೇಜರ್‌ಗೆ ಒಪ್ಪಿಸಿದ.

"ಹಾಗಾದ್ರೆ ಬಿಟ್ಟು ಹೋಗೋದು ಅಂತ ತೀರ್ಮಾನ ತಗೊಂಡೇ ಬಿಟ್ರಿ" ದೇಶಾವರಿ ನಗೆಯನು ನಕ್ಕ ಆ ಜನರಲ್ ಮ್ಯಾನೇಜರ್.

"ಆ ತೀರ್ಮಾನ ಎಂದೋ ಆಯಿತು ಅದು ಈಗ ಬದಲಾಗುಲ್ಲ. ನನಗೆ ಬಿಡುಗಡೆ ಬೇಕು."

"ಸರಿ" ಎಂದು ಹೇಳಿ ಆತ ರಾಜೀನಾಮೆಯ ಪತ್ರವನ್ನು ಅಂಗೀಕರಿಸಿದ. ಸಲ್ಲಬೇಕಾದ ಹಣಕಾಸುಗಳು ಸಂದಾಯವಾಗುವಂತೆ ಅನುಕೂಲವನ್ನು ಮಾಡಿಕೊಟ್ಟ, ಬೀಳ್ಕೊಡುಗೆ ಸಮಾರಂಭ ಮಾಡುವುದಾಗಿ ಘೋಷಿಸಿದ. ಶಾಸ್ತ್ರಿ ನಿರಾಕರಿಸಿದ.

"ಈ ಸಮಾರಂಭದ ಅಗತ್ಯವಿಲ್ಲ. ಇಲ್ಲಿ ಇದ್ದಾಗ ಆದ ಅನುಭವಗಳೇ ಸಾಕು. ನಾನಿನ್ನು ಬರ್ತೀನಿ" ಎಂದು ಕೈ ಮುಗಿದು ಹೊರಬಂದ. ಆದರೂ ಕಾರ್ಮಿಕ ಸಂಘದವರು ಹಾಗೂ ಇವನ ಹತ್ತಿರದ ಸಹೋದ್ಯೋಗಿಗಳು ಬೀಳ್ಕೊಡುವ ಸಮಾರಂಭವನ್ನು ಮಾಡುವ ಕಾರ್ಯಕ್ರಮವನ್ನು ಆಯೋಜಿಸಿಕೊಂಡರು.

ಶಾಸ್ತ್ರಿಗೆ ಶಾಲನ್ನು ಹೊದೆಸಿ, ಹಾರ ತುರಾಯಿಗಳನ್ನು ಅರ್ಪಿಸಿ, ಶಾಸ್ತ್ರಿಯ ಬಗ್ಗೆ ಕೆಲವು ಒಳ್ಳೆಯ ನುಡಿಗಳನ್ನಾಡಿ ಭಾವುಕತೆಯಿಂದ ಬೀಳ್ಕೊಟ್ಟರು. ಶಾಸ್ತ್ರಿಯ ಮನಸ್ಸೂ ತುಂಬಿ ಬಂದಿತ್ತು.

ಕಾರ್ಮಿಕ ಸಂಘದವರು ಅಗತ್ಯವಾದ ನೆರವನ್ನು ನೀಡಿದರು. ಮನೆಯ ಸಾಮಾನು ಸರಂಜಾಮುಗಳನ್ನು ಕಟ್ಟಿಸಿ, ಟ್ರಕ್‌ನಲ್ಲಿ ಬೆಂಗಳೂರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡುವುದಾಗಿ ತಿಳಿಸಿದ್ದರು. ಸಹಾಯಕ್ಕಾಗಿ ನಾಲ್ಕಾರು ಆಳುಗಳನ್ನು ಕಳಿಸಿದರು. ಮನೆ ಮಂದಿಗೆಲ್ಲಾ ಮೊದಲನೇ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡಲು ಟಿಕೆಟ್‌ಗಳನ್ನು ಮುಂಗಡವಾಗಿ ಖರೀದಿಸಿಕೊಟ್ಟರು. ಶಾಸ್ತ್ರಿ ಅವರ ಸಹಕಾರಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದ.

ಅಕ್ಕಪಕ್ಕದ ಮನೆಯವರು ಬಂದು ಮಾತನ್ನಾಡಿಸಿಕೊಂಡು ಹೋಗಿದ್ದರು.

ಸಾತಕ್ಕ ತನಗೆ ಬರುವ ಹಿಂದಿಯಲ್ಲೇ ಮಾತಾಡಿದಳು. "ಎಲ್ಲಾ ಆ ಭಗವಂತನ ನಿಯಮ...... ಈ ಕೆಲವೇ ವರ್ಷಗಳು ನಮ್ಮ ನಿಮ್ಮ ಸಂಬಂಧ ಇದ್ದುದು ಅದಕ್ಕಾಗಿ ಇಲ್ಲಿಗೆ ಕರೆಸಿಕೊಂಡಿದ್ದ. ಈಗ ಮರಳಿ ಗೂಡಿಗೆ ಕಳಿಸುತ್ತಿದ್ದಾನೆ" ಎಂದು ಕಣ್ಣಿಗೆ ಕಾಣದ ದೇವರಿಗೆ ಕೈ ಮುಗಿದಳು. ಅವರುಗಳು ಹೌದೆಂದು ತಲೆದೂಗಿ ಸಾತಕ್ಕನ ಕಾಲನ್ನು ಮುಟ್ಟಿ ನಮಸ್ಕರಿಸಿದರು.

"ಮಾತಾಜೀ.... ಆಶೀರ್ವಾದ ಮಾಡಿ" ಎಂದು ಹೇಳಿ ಹಣ್ಣುಗಳನ್ನು ಕೊಟ್ಟರು.

"ನಾನು ಯಾವ ಸ್ವಾಮಿನಿಯೂ ಅಲ್ಲ, ಗುರೂಜೀನೂ ಅಲ್ಲ. ಇದೆಲ್ಲಾ ಬೇಡ ಅಂತ ಹೇಳಿದರೂ ಬಲವಂತದಿಂದ ಕೊಟ್ಟರು. ಲಕ್ಷ್ಮಿಗೆ, ಮಕ್ಕಳಿಗೆ ಸಿಹಿ ತಿಂಡಿಯನ್ನು ಕೊಟ್ಟರು. ಸಾತಕ್ಕನ ಗಂಟಲು ಕಟ್ಟಿತ್ತು.

"ಪ್ರಾಂತ್ಯ ಯಾವುದಾದರೇನು ಭಾಷೆ ಯಾವುದಾದರೇನು? ಮನಸ್ಸು ಮನಸ್ಸಿನ ಸಂಬಂಧ ಇದು ಎಂದುಕೊಂಡಳು.

ಭಾರೀ ಸಾಮಾನುಗಳನ್ನು ಗೋಣೀ ಚೀಲಗಳಲ್ಲಿಟ್ಟು ಹೊಲಿದು ಟ್ರಕ್‌ನಲ್ಲಿ ಇರಿಸಲಾಗಿತ್ತು. "ಅಬ್ಬಾ ನಾಲ್ಕೈದು ವರ್ಷಗಳಲ್ಲಿ ಎಷ್ಟು ಸಾಮಾನು ಸೇರಿಕೊಂಡಿವೆ... ಬೇಡದೇ ಇರೋದನ್ನೆಲ್ಲಾ ಇಲ್ಲೇ ಬಿಟ್ಟು ಬಿಡೋಣ" ಶಾಸ್ತ್ರಿ ಎಂದ.

"ಯಾವುದನ್ನು ಬಿಡೋದು? ಎಲ್ಲಾ ಬೇಕಾಗಿರುವ ಸಾಮಾನುಗಳೇ.... ಸಂಸಾರಕ್ಕೆ ಬೇಕು ಅಂತ ತಗೊಂಡಿರೋದೇ... ಮತ್ತೆ ಮತ್ತೆ ಖರ್ಚು ಮಾಡಿ ತಗೊಳ್ಳುವ ಬದಲು ಹೇಗೂ ಲಾರಿ ಇದೆ. ಹಾಕ್ಕೊಂಡ್ರಾಯ್ತು." ಲಕ್ಷ್ಮಿ ನುಡಿದಳು.

"ನಿನಗೆ ದುರಾಸೆ, ಒಂದು ಪೊರಕೆ ಕಡ್ಡೀನ ಸಹ ಬಿಡುಲ್ಲ, ಅಲ್ಲಿ ಎಲ್ಲಿ ಇಡ್ತೀಯಾ?"

"ಹೌದು, ಅಂದ್ಹಾಗೇ ಇವುಗಳನ್ನೆಲ್ಲ ಯಾರ ಮನೇಲಿ ಇಡೋದು? ಎಲ್ಲರಿಗೂ ತೊಂದರೆ ಆಗುಲ್ವಾ?"

"ನಾನು ಅದಕ್ಕೆಲ್ಲ ವ್ಯವಸ್ಥೆ ಮಾಡ್ತೀನಿ. ಹೇಗೂ ಈ ಸಾಮಾನುಗಳು ನಮ್ಮೂರನ್ನು ತಲುಪಲು ತಿಂಗಳಾದರೂ ಬೇಕಾಗುತ್ತೆ... ಮೊದಲು ಇಲ್ಲಿಂದ ಹೊರಡೋಣ."

ಗೊತ್ತು ಮಾಡಿದ್ದ ಟಾಂಗಾಗಳು ಮನೆಯ ಮುಂದೆ ಬಂದು ನಿಂತಿದ್ದವು. ಪ್ರಯಾಣಕ್ಕೆ ತಕ್ಷಣಕ್ಕೆ ಬೇಕಾದ ಹಾಗೂ ಬೆಲೆ ಬಾಳುವ ಸಾಮಾನುಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಟ್ರಂಕುಗಳಲ್ಲಿ ದೊಡ್ಡ ದೊಡ್ಡ ಚೀಲಗಳಲ್ಲಿ ತುಂಬಿಟ್ಟುಕೊಂಡಿದ್ದರು. ನೆರೆದಿದ್ದ ನೆರೆ ಹೊರೆಯ ಸಮೂಹಕ್ಕೆ ಕೈ ಮುಗಿದು ಎಲ್ಲರೂ ಟಾಂಗಾ ಹತ್ತಿದರು. ಶಾಸ್ತ್ರಿ ತನ್ನ ಕುಟುಂಬದವರೊಡನೆ ತನ್ನ ನಾಡಿಗೆ ಮರಳಿ ಹೊರಟಿದ್ದ.

* * *

ಸಾತಕ್ಕನೊಂದಿಗೆ ಶಾಂತಾ, ಲಲಿತಳನ್ನು ಸುಂದರಿಯ ಮನೆಗೆ ಕಳಿಸುವುದು ಎಂದುಕೊಂಡಿದ್ದ. ಲಕ್ಷ್ಮಿ ಹಾಗೂ ಪದ್ಮಿನಿ, ರಾಗಿಣಿಯನ್ನು ಅವಳ ಅಣ್ಣನ ಮನೆಯಲ್ಲಿ ಬಿಡುವುದೆಂದು ನಿರ್ಧರಿಸಿದ್ದ. ತಾನು ಒಂದು ವ್ಯವಸ್ಥೆ ಆಗುವವರೆಗೂ ಸೀತಾರಾಮನ ಮನೆಯಲ್ಲಿ ಇರುವುದು ಎಂದು ತೀರ್ಮಾನಿಸಿದ್ದ.

ರೈಲ್ವೇ ಸ್ಟೇಷನ್ನಿಗೆ ಬಂದಿದ್ದ ನಾರಾಯಣ, ಅಕ್ಕನನ್ನು ಮಕ್ಕಳನ್ನು ತನ್ನೊಂದಿಗೆ ಕರೆದೊಯ್ದ..... ಶಾಸ್ತ್ರಿ ಸಾತಕ್ಕನನ್ನು ದೊಡ್ಡ ಹೆಣ್ಣು ಮಕ್ಕಳಿಬ್ಬರನ್ನು ತುಮಕೂರಿಗೆ ಕರೆತಂದು ಬಿಟ್ಟು ತಾನು ಕಂಠಿ ಇದ್ದ ಊರಿಗೆ ಬಂದ. ಈ ಮೊದಲೇ ಕಂಠಿಗೆ ಪತ್ರವನ್ನು ಬರೆದಿದ್ದನಾದ್ದರಿಂದ ಅವನು ಆಶ್ಚರ್ಯವನ್ನು ಪ್ರಕಟಿಸಲಿಲ್ಲ.

"ಒಬ್ಬನೇ ಬಂದ್ಯಾ ಕೈ ಬೀಸ್ಕೊಂಡು? ಅಂತೂ ನನ್ನ ಮಾತು ನಿನಗೆ ಪ... ವಾಯಿತು. ನಾನು ಈ ಹಳ್ಳಿಯ ಗೌಡರ ಹತ್ತಿರ ಮಾತಾಡಿದೀನಿ. ನಿನಗಾಗಿ ಒಂದು ಮನೆ ಹಾಗೂ ಹತ್ತು ಎಕರೆ ಜಮೀನನ್ನು ಶಿಫಾರಸ್ಸು ಮಾಡಿದೀನಿ. ಕೆಲವೇ ದಿನಗಳಲ್ಲಿ ಎಲ್ಲಾ ಸಿದ್ಧವಾಗುತ್ತೆ.... ನಿನ್ನ ಹೆಂಡ್ತಿ ಮಕ್ಕಳನ್ನು ಸಾವಿತ್ರೀನೂ ಇಲ್ಲಿಗೇ ಕರೆಸು. ನಮ್ಮ ಮನೆ ದೊಡ್ಡದಾಗಿದೆ" ಎಂದ.

"ಸುಂದರಿ ಮಗಳ ಮದುವೆವರೆಗೂ ಸಾತು ಅವರ ಮನೇಲಿರ್ತಾಳೆ. ಲಕ್ಷ್ಮಿ ಅವಳ ತವರು ಮನೇಲಿರ್ಲಿ. ನನ್ನನ್ನು ಗೌಡರ ಬಳಿಗೆ ಕರ್ಕೊಂಡು ಹೋಗು. ಖರ್ಚು ವೆಚ್ಚ ಎಷ್ಟು ಬರುತ್ತೆ ಅಂತ ಮೊದಲು ಮಾತಾಡ್ಬೇಕು.... ಪಾತು ಎಲ್ಲಿ ಕಾಣ್ತಿಲ್ಲವಲ್ಲ?" ವಿಚಾರಿಸಿದ.

"ಅವಳಾ? ಅವಳು ಹೊಲೆ ಮನೇ ಬಾಣಂತಿ. ಅದಕ್ಕೇ ಹೇಳಿದ್ದು ಸಾವಿತ್ರೀನ ಕರ್ಕೊಂಡು ಬಂದಿದ್ರಾಗಿತ್ತು ಅಂತ ಕೈ ಕಾಲು ತೊಳ್ಕೋ. ಮೊದಲು ಕಾಫಿ ಕು... ಆಮೇಲೆ ನಿನ್ನ ತಂಗೀನ ಮಾತನಾಡಿಸೂವಂತೆ...."

"ಎಷ್ಟು ದಿನ ಆಯ್ತು? ಎಂಥಾ ಮಗು?

"ಗಂಡು ಮಗು ಕಣಯ್ಯ..." ಕೈ ಬೆರಳು ಮೀಸೆಯ ಮೇಲೆ ಆಡಿತು. ಏನಂತಾಳೆ ನಿನ್ನ ಹೆಂಡ್ತಿ? ಮಕ್ಕಳ ಸಂಖ್ಯೆ ಬೆಳೆದಿದೆಯೋ ಹೇಗೆ?" ಶಾಸ್ತ್ರಿ ಉತ್ತರಿಸಲಿಲ್ಲ. ಕೈ ಕಾಲು ತೊಳೆದು ಬಂದು ದೂರದಿಂದ ತಂಗಿಯನ್ನು ನೋಡಿ ಮಾತಾಡಿದ.

ಕಂಠಿ ಹೆಮ್ಮೆಯಿಂದ ತನ್ನ ಜಮೀನನ್ನು ಎಮ್ಮೆಗಳನ್ನು ಪ್ರದರ್ಶಿಸಿಕೊಂಡಿದ್ದ. "ಸಾವಿತ್ರೀನ ಕಳಿಸು ಅಂತ ನಿನ್ನ ಭಾವಂಗೆ ಕಾಗದ ಬರಿ. ಇಲ್ಲಿ ನಮ್ಮ ಮನೆಯಲ್ಲೂ ಏನೂ ಕೊರತೆ ಇಲ್ಲ" ಎಂದಿದ್ದ.

"ಮದುವೆ ಮುಗೀಲಿ, ಸೀದಾ ಇಲ್ಲಿಗೇ ಕರ್ಕೊಂಡು ಬರ್ತೀನಿ, ಇಲ್ಲೇ ಎದುರಿಗೆ ಇದ್ದ ಮೇಲೆ ಸಹಾಯ ಮಾಡೇ ಮಾಡ್ತಾಳೆ. ಈಗ ಕರ್ಕೊಂಡು ಬರೋ... ಯಾಕೆ? ನೀನು ಮುಂಚೇನೇ ಒಂದ್ಮಾತು ತಿಳಿಸೋದಲ್ವಾ?"

"ಇನ್ನು ದಿನ ತುಂಬಿರಲಿಲ್ಲ. ನಿಧಾನವಾಗಿ ಪತ್ರ ಬರೆದರಾಯ್ತು ಅಂತ ಅಂದ್ಕೊಂಡೆ. ಅಷ್ಟರಲ್ಲಿ ನಿನ್ನ ಪತ್ರ ಬಂತು. ಎಲ್ಲರೂ ಸೀದಾ ಇಲ್ಲಿಗೇ ಬರ್ತೀರಿ ಅಂತ ಅಂದ್ಕೊಂಡಿದ್ದೆ. ಅಂತೂ ಸಾವಿತ್ರಿ ಕೈಕೊಟ್ಟಳು."

"ಅವಳ್ಗೇನು ಗೊತ್ತು? ಲಾರೀಲಿ ಸಾಮಾನು ಬರೋದಿದೆ. ಅದನ್ನು ಸೀದಾ ಇಲ್ಲಿಗೇ ತುಂಬಿಸ್ಕೊಂಡು ಹಾಗೇ ಬರ್ತಾ ಲಕ್ಷ್ಮೀನೂ ಮಕ್ಕಳನ್ನೂ ಕರ್ಕೊಂಡು ಬರ್ತೀನಿ. ಅಲ್ಲೀವರ್ಗೂ ನಾನು ಅಣ್ಣನ ಮನೇಲಿರ್ತೀನಿ."

"ನಿನ್ನ ಅತ್ತಿಗೇನೂ ಹೆತ್ತಿದಾಳಂತಯ್ಯಾ..... ಅವಳಿಗೂ ಗಂಡು ಮಗು ಎಲ್ರಿಗೂ ಗಂಡು ಮಕ್ಕಳೇ. ನಿನ್ನ ಹೆಂಡ್ತಿ ಮಾತ್ರ... ಕುಮಾರಿಯರಿಗೇ ಜನ್ಮ ಕೊಡ್ತಿದಾಳೆ. ಡಾಕ್ಟರಿಗೆ ತೋರ್ಸು...." ಹಾಗೇ ಮಂತ್ರ ಹಾಕ್ಸು.

"ಇದಕ್ಕೆಲ್ಲಾ ಯಾವ ಡಾಕ್ಟರು ಏನು ಹೇಳ್ತಾನೆ? ಇದು ಭಗವಂತ ನಮ್ಮ ಹಣೇಲಿ ಬರೆದಿದ್ದು... ಯಾವ ಮಂತ್ರ ಏನು ಮಾಡುತ್ತೆ..?"

"ಇಲ್ಲಿಗೆ ಬಂದು.... ಸಂಸಾರ ಮಾಡು. ಮುಂದಿನದು ಗಂಡು ಮಗು ಆಗದಿದ್ರೆ ನನ್ನನ್ನು ಕೇಳು" ಕಂಠಿ ವಿಕಟವಾಗಿ ನಕ್ಕಾಗ, ಅತಿಯಾಯಿತೆನ್ನಿಸಿತು. ಮಾತನ್ನು ಬದಲಾಯಿಸಿದ.

"ಬಿಡುವಾಗಿದ್ರೆ ಬಾ, ಪಟೇಲರ ಮನೆಗೆ ಹೋಗಿ ಬರೋಣ."

"ತಡೀ. ನಂಗೀಗ ಬಿಡುವಿಲ್ಲ, ಅಡಿಗೆ ಮಾಡ್ಬೇಕು. ನಿನ್ನ ಜೊತೆಗೆ ರಾಜನ್ನ ಕಳಿಸ್ತೀನಿ" ಎಂದು ಹೇಳಿ ರಾಜನನ್ನು ಕರೆದ. "ಹೋಗು ಮಾವಂಗೆ ಗೌಡರ ಮನೇನ ತೋರಿಸಿ, ಹಾಗೇ ಬಂದು ಬಿಡು ಅಲ್ಲಿ ನಿಂತ್ಕೋಬೇಡ." ಎಂದು ಹೇಳಿದ. ಶಾಸ್ತ್ರಿ ರಾಜನೊಂದಿಗೆ ಗೌಡರ ಮನೆಯ ಕಡೆಗೆ ನಡೆದ. ದೂರದಿಂದ ಮನೆಯನ್ನು ತೋರಿಸಿ, ಹಿಂದಿರುಗಿ ಹೋಗಿದ್ದ ರಾಜ.

ಶಾಸ್ತ್ರಿ ತಾನಾಗಿಯೇ ಗೌಡರಿಗೆ ತನ್ನ ಪರಿಚಯವನ್ನು ಹೇಳಿಕೊಂಡ. ಹಾಗೇ ಉಳಿದ ಮಾತುಗಳನ್ನಾಡಿದ. ಕೆಲವೇ ಗಂಟೆಗಳಲ್ಲಿ ಗೌಡರು ಮಾತಿನಲ್ಲೇ ಹಳ್ಳಿಯ ಸ್ಥೂಲ ಪರಿಚಯವನ್ನು ಮಾಡಿಕೊಟ್ಟರು. ನಿಮಗೆ ನಮ್ಮ ಕೈಲೇನೇನಾಗುತ್ತೋ ಆ ಅನುಕೂಲಗಳನ್ನು ಮಾಡಿಸಿಕೊಡ್ತೀನಿ. ಆದಷ್ಟು ಬೇಗ ನಿಮ್ಮ ಪಾದವನ್ನು ಈ ಹಳ್ಳಿಗೆ ಬೆಳೆಸ್ಬೇಕು" ಎಂದು ವಿನಂತಿಸಿಕೊಂಡರು. ಹಳ್ಳಿಗೆ ಹೊಸ ಸದಸ್ಯನೊಬ್ಬ ಬಂದು ಸೇರಲಿದ್ದಾನೆಂಬ ಸಂತಸ

ತುಂಬಿತ್ತು. ಶಾಸ್ತ್ರಿಗೂ ನೆಮ್ಮದಿ ಉಂಟಾಗಿತ್ತು. ಹಿಂದೆ ಮುಂದೆ ಯೋಚಿಸದೇ ಬಿಟ್ಟು ಬಂದರೂ, ತಕ್ಷಣಕ್ಕೆ ಒಂದು ನೆಲೆ ಸಿಕ್ಕಿತಲ್ಲ ಎಂದು ಕೊಡು ನಿರಾಳವಾದ ಉಸಿರನ್ನು ಬಿಟ್ಟ.

ಹೀಗೆ ಈ ಹಳ್ಳಿಗೆ ಶಾಸ್ತ್ರಿಯ ಪಾದಾರ್ಪಣವಾಯಿತು.

* * *

ನಾಯಕನ ಹಟ್ಟಿ ಶಿವಮೊಗ್ಗ ಜಿಲ್ಲೆಯ, ಶಿವಮೊಗ್ಗ ತಾಲೂಕಿಗೇ ಸೇರಿ. ಒಂದು ಹಳ್ಳಿ, ಶಿವಮೊಗ್ಗದಿಂದ ತಾಳಗುಪ್ಪಕ್ಕೆ ಹೋಗುವ ರೈಲು ಮಾರ್ಗದಲ್ಲಿ ಮೊದಲು ಸಿಗುವ ರೈಲು ನಿಲ್ದಾಣ. ಕೇವಲ ಸುಮಾರು ಐದಾರು ಮೈಲಿಗಳ ಪ್ರಯಾಣ ದಿನದಲ್ಲಿ ಬೆಳಿಗ್ಗೆ, ಸಾಯಂಕಾಲ, ಎರಡೂ ವೇಳೆಯಲ್ಲಿ ಈ ಪ್ರಯಾಣದ ಸೌಲಭ್ಯ ಹಳ್ಳಿಯವರಿಗೆ. ರೈಲು ಆ ನಿಲ್ದಾಣದಲ್ಲಿ ನಿಲ್ಲುತ್ತಿದ್ದುದು ಕೇವಲ ಎರಡು ನಿಮಿಷಗಳು ಮಾತ್ರ. ಕೆಲವೊಮ್ಮೆ ಗಡಿಬಿಡಿಯಲ್ಲಿ ಕೆಲವರಿಗೆ ರೈಲು ತಪ್ಪಿದ್ದು ಉಂಟು.

ಈ ಹಳ್ಳಿಗೆ ನಾಯಕನ ಹಟ್ಟಿ ಅಂತ ಯಾಕೆ ಹೆಸರು ಬಂತು ? ಯಾರಿಗೂ ತಿಳಿಯದು. ಯಾರಾದರೂ ನಾಯಕರು ಬಂದು ಅಲ್ಲಿ ವಾಸಿಸಲು ಪ್ರಾರಂಭಿಸಿ, ಆ ಹಳ್ಳಿಗೆ ಆ ಹೆಸರು ಬಂದಿರಬಹುದು. ಆದರೆ ಅದನ್ನು ತಿಳಿಸುವ, ಯಾವುದೇ ಮಾಹಿತಿ ಶಾಸನ ಇರಲಿಲ್ಲ. ಆದರೆ ಹಳ್ಳಿಯ ಜನಸಂಖ್ಯೆಯಲ್ಲಿ ಹೆಚ್ಚು ಪಾಲು ಇದ್ದುದು ಲಂಬಾಣಿಗರೇ, ಅವರು ಎಲ್ಲಿಂದ ಬಂದರು. ಅಲ್ಲಿ ಹೇಗೆ ವಲ. ಹೂಡಿದರು, ಬಹುಶಃ ಅವರುಗಳಿಗೆ ತಿಳಿದಿರಲಾರದು. ಅವರ ವೇಷಭೂಷಣ, ಭಾಷೆ ಎಲ್ಲವೂ ಭಿನ್ನವೇ. ಯಾವ ನವ ನಾಗರೀಕತೆಯ ಸೋಂಕು ಇಲ್ಲದೇ, ಕಾಡು ಮೇಡುಗಳಲ್ಲಿ ಸುತ್ತಾಡಿ ತಮ್ಮ ಜೀವನೋಪಾಯವನ್ನು ಕಂಡು ಕೊಂಡಿದ್ದರು. ಹಾಗಾಗಿ ಆ ಹಳ್ಳಿ ಯಾವ ಅಭಿವೃದ್ಧಿಯನ್ನು ಕಾಣದೇ ಹಳ್ಳಿಯಾಗಿಯೇ ಉಳಿದಿತ್ತು. ಇಂತಹ ಒಂದು ವಿಶಿಷ್ಟವಾದ ಹಳ್ಳಿಗೆ ಆ ಗುಂಡೂರಾವ್ ಬಂದು ಸೇರಿ. ಒಂದು ಸೋಜಿಗವೇ.

ಗುಂಡೂರಾವ್ ಶಾಸ್ತ್ರಿಗಳ ಮನೆತನಕ್ಕೆ ಸೇರಿದವನಾದ್ದರಿಂದ ಕೆಲವರು ಗುಂಡಾಶಾಸ್ತ್ರಿ ಎಂದು ಕರೆಯುತ್ತಿದ್ದರು. ನೆಂಟರಿಷ್ಟರಿಗೆ ಮನೆಯವರಿಗೆ ಗುಂಡಣ್ಣ, ಕೆಲವರಿಗೆ ಬರೀ ಶಾಸ್ತ್ರಿಗಳೇ ಎಂದು, ಇನ್ನು ಕೆಲವರಿಗೆ ಗುಂಡಪ್ಪನವರೇ ಎಂದೇ ಪರಿಚಯ. ಶಾಸ್ತ್ರಿಯ ಹೆಂಡತಿ ಮಹಾಲಕ್ಷ್ಮಿ ಈ ಹೆಸರಿನ ಬದಲು, ಅನ್ನಪೂರ್ಣ ಎಂದು ಹೆಸರಿಟ್ಟಿದ್ದರೆ ಹೆಚ್ಚು ಸೂಕ್ತವಾಗಿರುತ್ತಿತ್ತು. ಆಕೆಗೆ ಅಡಿಗೆ ಮನೆಯ ಕೆಲಸ ಯಾವಾಗಲೂ ತಪ್ಪಿದಲ್ಲ. ಅಡಿಗೆ ಮನೆಯೇ ತನ್ನ ಸಾಮ್ರಾಜ್ಯ ಅಂತ ತಿಳಿದಿದ್ದು, ಲಕ್ಷ್ಮಿ ಈ ಹಳ್ಳಿಗೆ ಬಂದಾಗ ಬೇಸರದಿಂದ ಮೂಗು ಮುರಿದಿದ್ದಳು.

"ಈ ಕೊಂಪೇಲಿ ಏನಿದೆ ಅಂತ, ನಮ್ಮನ್ನೆಲ್ಲ ಈ ಹಳ್ಳಿಗೆ ಎಳೆದು ತಂದು ಹಾಕಿದ್ರಿ? ಈ ಹಳ್ಳಿಗಿಂತ ನನ್ನ ತವರೂರು ಕಡೂರೇ ವಾಸಿ."

"ಹೋಗಿ ಅಲ್ಲೇ ಇರು", ಶಾಸ್ತ್ರಿ ಹೆಂಡತಿಯ ಮೇಲೆ ರೇಗಿದ್ದ.

"ನಮ್ಮಪ್ಪ ನಮ್ಮಮ್ಮ ಬದುಕಿದಿದ್ರೆ ಹಾಗೇ ಮಾಡ್ತಿದ್ದೆ. ಈಗ ನನ್ನ ಭಾಗಕ್ಕೆ ಅದು ಕಾಡೂರೇ. ಆದ್ರೆ ಈ ಹಳ್ಳಿ ಅದಕ್ಕಿಂತ ಅಧ್ವಾನ. ಸ್ಕೂಲಿಲ್ಲ, ಆಸ್ಪತ್ರೆ ಇಲ್ಲ. ಓದುವ ಮಕ್ಕಳ ಗತಿ ಏನು ? ಏನಾದ್ರೂ ಹೆಚ್ಚು ಕಡಿಮೆ ಆದರೆ ಯಾವ ಡಾಕ್ಟರಿದಾನೆ?

ಇದನ್ನೆಲ್ಲಾ ಯೋಚಿಸ್ಬೇಕಾಗಿತ್ತು ನೀವು."

"ಕಂಠಿ ಮಕ್ಕಳು ರೈಲಿನಲ್ಲಿ ಶಿವಮೊಗ್ಗಾದ ಸ್ಕೂಲ್ಗೆ ಹೋಗಿ ಓದಲ್ವಾ" ಹಾಗೇ ಓದಲಿ ಓದೋ ಮಕ್ಕಳು ಎಲ್ಲಿದ್ರೂ ಓದ್ತಾರೆ. ಇಲ್ಲಿ ಇರೋರೂ ಜನರೇ ತಿಳ್ಕೋ."

"ಆ ಕಂಠಿಯ ಮಾತು ಕೇಳಿ ನೀವೂ ಕೆಟ್ರಿ, ತಾನು ಈ ಕೊಂಪೇಲಿ ಹಾಳಾದ್ದು ಸಾಲ್ದು ಅಂತ ನಿಮ್ಮನ್ನೂ ಎಳೆದ್ರು ಅಷ್ಟೆ ಆದದ್ದು."

"ಬಾಯ್ಮುಚ್ಚು ಕಂಠಿ ನನ್ನ ಭಾವ, ಸಮಯ ಅಂದ್ರೆ ನಮ್ಮ ಸಹಾಯಕ್ಕೆ ಒದಗೋರು ಅವರುಗಳೇ ತಿಳ್ಕೋ."

"ನೋಡಿದೀನಲ್ಲ ಅವರು ಮಾಡೋ ಸಹಾಯಾನ. ಆತನ ಮಾತನ್ನು ಕೇಳ್ಕೊಂಡು ಇದ್ದ ಹಣಾನೆಲ್ಲ ಜಮೀನಿಗೆ ಸುರಿದ್ರಲ್ಲ. ನಾವೇನು ರೈತರೇ?" ನಮಗೇನು ಗೊತ್ತಿದೆ ವ್ಯವಸಾಯ ? ಶಾಸ್ತ್ರಿ ತನಗೆ ಕೇಳಿಸಲಿಲ್ಲ ಎಂಬಂತೆ ಸುಮ್ಮನಿದ್ದ. "ನಮಗೆ ಗದ್ದೆ ಗರ್ಜಿ ಕೆಲಸ ಏನು ಗೊತ್ತಿದೆ ? ವ್ಯವಸಾಯದ ಯಾವ ಅನುಭವ ಇದೆ ? ಕೈ ಸುಟ್ಕೊಂಡು ನಿರಾಧಾರ ಪರಂಜ್ಯೋತಿಗಳಾಗಿ ಬಿಡ್ತೀವಿ ಅಷ್ಟೆ. ಈಗಲೂ ನನ್ನ ಮಾತನ್ನು ಕೇಳಿ ಮಂಡ್ಯ ನಿಮ್ಮೂರು. ಅಲ್ಲಿಗೇ ಹೋಗೋಣ ಮ್ಯಾನೆಜರನ್ನ ಕೇಳ್ಕೊಂಡ್ರೆ ಶುಗರ್ ಫ್ಯಾಕ್ಟರೀಲೇ ಮತ್ತೆ ಕೆಲಸ ಸಿಗುತ್ತೆ. ತಿಂಗಳಿಗೆ ಇಷ್ಟು ಅಂತ ಕೈ ಮೇಲೆ ಸಂಬಳ ಬಿದ್ರೆ ಅಷ್ಟೇ ಸಾಕು ಹೇಗೋ ಆಗುತ್ತೆ."

ಲಕ್ಷ್ಮಿಯ ಮಾತುಗಳು ಶಾಸ್ತ್ರಿಗೆ ಹಿಡಿಸಲಿಲ್ಲ. "ಸಾಕು ನಿಲ್ಸು ನಿನ್ಮಾತನ್ನ. ಇಲ್ಲಿಗೆ ಬಂದು ಇನ್ನು ನೆಲೆ ಊರಿಲ್ಲ, ಆಗಲೇ ಅಪಶಕುನದ ಮಾತುಗಳನ್ನಾಡಬೇಡ. ನನಗೂ ಜವಾಬ್ದಾರಿ ಇದೆ. ನಿನ್ನಿಂದ ನಾನು ಏನನ್ನು ಕಲಿಯಬೇಕಾಗಿಲ್ಲ. ಹೋಗು ಸುಮ್ನೇ......" ಅವನು ಗದರಿದಾಗ ಲಕ್ಷ್ಮಿ ಮುಖ ದಪ್ಪಗೆ ಮಾಡಿಕೊಂಡು ಅಡಿಗೆ ಮನೆಯ ಕಡೆಗೆ ನಡೆದಳು.

ಹಸಿ ಸೌದೆಯಾದುದರಿಂದ, ಸರಿಯಾಗಿ ಉರಿಯದೇ ಅಡಿಗೆ ಮನೆತುಂಬಾ ಹೊಗೆ ಸುತ್ತಿಕೊಂಡಿತ್ತು. ಊದು ಕೊಳವೆಯಿಂದ ಊದಿ ಊದಿ ಗಂಟಲು ಉರಿಯ ತೊಡಗಿತ್ತು. ಕಣ್ಣು ಮೂಗುಗಳಲ್ಲಿ ನೀರು ತುಂಬಿಕೊಂಡಿತ್ತು. ಜೊತೆಗೆ ಒಣಕೆಮ್ಮು ಮೂಗನ್ನು ಸೀರೆಯ ಸೆರಗಿನ ತುದಿಯಿಂದ ಒರೆಸುತ್ತಾ ಗಂಡನನ್ನು ಮನದಲ್ಲೇ ಬೈದುಕೊಂಡಳು. "ಇದೊಂದು ದರಿದ್ರ ಹಳ್ಳಿ. ನಮಗೋಸ್ಕರವೇ ಸೃಷ್ಟಿಯಾಗಿದೆ" ಎಂದು ಗೊಣಗುತ್ತಾ ತನ್ನ ಕೋಪವನ್ನು ಪಾತ್ರೆಗಳ ಮೇಲೆ ಪ್ರದರ್ಶಿಸತೊಡಗಿದಳು.

"ಏನಯ್ಯಾ.....ಶಾಸ್ತ್ರೀ ಸಂಧ್ಯಾವಂದನೆ, ದೇವರಪೂಜೆ ಎಲ್ಲಾ ಆಯ್ತೇನಯ್ಯಾ? ಏನು ತಿಂಡಿ ಮಾಡಿದಾಳೆ ನಿನ್ನ ಹೆಂಡ್ತೀ? ಕಂಠಿ ಎತ್ತರದ ಧ್ವನಿಯಲ್ಲಿ ಮುಂಬಾಗಿಲಿನಲ್ಲಿ ಇಣುಕುತ್ತಾ, ಪ್ರಶ್ನಿಸಿದಾಗ, ಲಕ್ಷ್ಮಿ ತನ್ನ ಕೋಪದ ಆರ್ಭಟವನ್ನು ಕಡಿಮೆ ಮಾಡಿದಳು.

ಒಳಗೆ ಬಂದ ಕಂಠಿ ಅಲ್ಲೇ ಕುಳಿತಿದ್ದ ಸಾತಕ್ಕನನ್ನು ಕಂಡ.

"ಏನು ಅತ್ತಿಗೆಮ್ಮ.... ನಿಮ್ಮದಿನ್ನು ಸ್ನಾನ ಆದಂತಿಲ್ಲ?" ವ್ಯಂಗ್ಯವಾಗಿ ಕೇಳಿದ. ದಿಢೀರನೆ ಆಗ ಈಗ ಬಂದು ಹೀಗೆಯೇ ಮಾತನಾಡುತ್ತಿದ್ದ. ಎದುರು ಮನೆಯಲ್ಲೇ ಕಂಠಿಯವಾಸವಾಗಿದ್ದ."

"ಒಲೆ ಉರಿದರೆ ತಾನೇ? ಹಂಡೆ ನೀರು ಬಿಸಿಯಾಗಿಲ್ಲ. ಹಾಲು ಕಾಯಿಸಿಲ್ಲ, ಇನ್ನು ಕಾಫಿ, ತಿಂಡಿ, ನಿಧಾನವೇ..." ಗೊಣಗುತ್ತಾ ನುಡಿದಳು.

"ಹಸಿ ಸೌದೆ ಹೇಗೆ ಉರಿಯುತ್ತೇ ? ಮನೆಯೆಲ್ಲಾ ಹೊಗೆ ತುಂಬಿಕೊಂಡಿದೆ. ನಮ್ಮ ಮನೆ ಅಟ್ಟದಲ್ಲಿ ಒಣಗಿದ ಸೌದೆ ಇದೆ. ಕಳಿಸಿಕೊಡ್ತೀನಿ. ಆಗ ಲಕ್ಷ್ಮಿಯ ಕಣ್ಣು ಉರಿಯಾದ್ರೂ ಕಡಿಮೆ ಆಗುತ್ತೆ ಕಂಠಿ ಜೋರು ಧ್ವನಿಯಲ್ಲಿ ನಗುತ್ತಾ ಶಾಸ್ತ್ರೀಯ ಕಡೆ ನೋಡಿದ. ಶಾಸ್ತ್ರಿ ನಗಲಿಲ್ಲ.

"ನಂಗೆ ಹೊತ್ತಾಯ್ತು, ಗದ್ದೆ ಬದೀಲಿ ಅಳುಗಳು ಕಾಯ್ತಾ ನಿಂತಿರ್ತಾರೆ. ಎಂದು ಪಾತಕ್ಕನಿಗೆ ಹೇಳಿ ಹೆಗಲ ಮೇಲೆ ಶಲ್ಯವನ್ನು ಹೊದ್ದು ಕೈಯಲ್ಲಿ ಛತ್ರಿ ಹಿಡಿದು, ಮುಂಬಾಗಿಲ ಬಳಿ ಇದ್ದ ಚಪ್ಪಲಿಗಳನ್ನು ಮೆಟ್ಟಿ ಶಾಸ್ತ್ರಿ ಬಾಗಿಲನ್ನು ದಾಟಿದ. ಕಂಠಿಯೂ ತನ್ನ ಮನೆಯತ್ತ ತಿರುಗಿದ.

"ಸೌದೆ ಉರಿಯದೇ ಇದ್ರೆ, ಆ ಕಷ್ಟ ನಮಗೆ ನಾಲ್ಕು ಒಣಗಿದ ಸೌದೆ ತುಂಡುಗಳನ್ನು ಕಳಿಸೋದೂ ಬೇಡ ; ಆಮೇಲೆ ನಲವತ್ತು ಮಾತು ಆಡೋದೂ ಬೇಡ ಸಾತಕ್ಕ ನುಡಿದಾಗ ಲಕ್ಷ್ಮಿ ಹೌದು ಎನ್ನುವಂತೆ ತಲೆಯಾಡಿಸಿದಳು. ತನ್ನ ಅಣ್ಣ ಈ ಹಳ್ಳಿಗೆ ಬಂದು ಸೇರಲು, ಈ ಕಂಠಿಯೇ ಕಾರಣ ಎಂಬ ಬೇಸರ ಸಾತಕ್ಕನಲ್ಲೂ ಇತ್ತು. ಅದಲ್ಲದೇ ಕಂಠಿಯ ಬಗ್ಗೆ ಬೇರೆ ಆಕ್ರೋಶವೂ ಇತ್ತು.

ಸಾತಕ್ಕ ಬಾಲ ವಿಧವೆ, ಮದುವೆಯಾದ ಕೆಲವೇ ತಿಂಗಳುಗಳೊಳಗೆ ಗಂಡನನ್ನು ಕಳೆದುಕೊಂಡವಳು. ಒಂದೇ ಒಂದು ದಿನವೂ ಗಂಡನ ಮನೆಗೆ ಹೋಗಿದ್ದವಳಲ್ಲ. ಹತ್ತಾರು ವರ್ಷಗಳ ನಂತರ ಅತ್ತೆಯೂ ತೀರಿ ಹೋದಾಗ ಗಂಡನ ದಾಯಾದಿಗಳು, ಅವರಿಗೆ ಸೇರಿದ್ದ ಜಮೀನನ್ನು ಮಾರಿ ಬಂದ ಹಣದಲ್ಲಿ ಸ್ವಲ್ಪ ಹಣವನ್ನು ಸಾತಕ್ಕನ ಜೀವನಾಂಶವೆಂದು ಕೊಟ್ಟಿದ್ದರು. ಸಾತಕ್ಕ ಆ ಹಣವನ್ನೆಲ್ಲಾ ಗುಂಡಣ್ಣನ ಕೈಗೆ ಕೊಟ್ಟಿದ್ದಳು. ಈ ವಿಷಯ ತಿಳಿದ ಕಂಠಿ ಹಾಗೂ ಅವನ ಹೆಂಡತಿ ಪಾರ್ವತಿ, ಹಂಗಿಸಿ ನುಡಿದಿದ್ದರು.

"ಎಲ್ಲಾ ಹಣವನ್ನು ಗುಂಡಣ್ಣನ ಕೈಗೆ ಹಾಕಿದೀಯಲ್ಲ, ಕಡೇವರೆಗೂ ಇವರ ಮನೇಲಿ ಜೀತದಾಳಿನಂತೆ ಇರ್ತೀಯಾ ?" ಅಂತ.

"ನನಗೆ ಇವರುಗಳಲ್ಲದೇ ಬೇರೆ ಇನ್ಯಾರಿದ್ದಾರೆ?" ಸಾತಕ್ಕ ನೊಂದು ನುಡಿದಳು.

"ಯಾಕೆ ? ಸೀತಾರಾಮ; ಶ್ರೀನಿವಾಸ, ನಾನು ಎಲ್ರೂ ಇಲ್ವ ಯಾಕೆ ನಾವ್ಯಾರೂ

ನಿನಗೆ ಏನೂ ಆಗಬೇಕಾಗಿಲ್ವಾ ?" ಪಾರ್ವತಿ ಕೇಳಿದಳು.

"ನಾನೆಲ್ಲಿ ಹಾಗಂದೆ ಪಾತು ? ಎಷ್ಟೋ ವರ್ಷಗಳಿಂದ ಇವರ ಮನೇಲೇ ಇದೀನಿ. ನನಗೆ ಇಲ್ಲಿ ಸರಿ ಹೋಗಿದೆ. ಇವರ ಕಷ್ಟಕ್ಕೆ ನಾನೂ ಆಗಬೇಕು ಅಲ್ವಾ? ಗುಂಡಣ್ಣನಿಗೆ ಈಗ ಹಣದ ಅಗತ್ಯ ಇದೆ ಅಂತ ಕೊಟ್ಟೆ.. ನಿನಗೂ ಸ್ವಲ್ಪ ಕೊಡ್ತೀನಿ." ತಂಗಿಯನ್ನು ಒಲಿಸಲು ನೋಡಿದಳು.

"ಈಗ ಚಿನ್ನದ ಬೆಲೆ ಇಳಿದಿದೆಯಂತೆ, ಒಂದೆಳೆ ಸರಾನೋ ಒಂದು ಜೊತೆ ಬಳೇನೋ ಮಾಡಿಸಿಕೊಳ್ತೀನಿ, ಸಾಲ ಅಂತ ಕೊಟ್ಟಿರು. ನಿಧಾನವಾಗಿ ಸ್ವಲ್ಪ ಸ್ವಲ್ಪ ತೀರಿಸ್ತೀನಿ." ತನ್ನಾಸೆಯನ್ನು ಪ್ರಕಟಗೊಳಿಸಿದಳು.

"ನನ್ನ ಹತ್ರ ಈಗ ಹಣ ಇಲ್ಲವಲ್ಲೇ ಪಾತು. ಆಗ್ಲಿ, ಸಮಯ ನೋಡಿ ಗುಂಡಣ್ಣನ್ನ ಕೇಳ್ತೀನಿ, ಸುಮಾರು ಎಷ್ಟು ಬೇಕಾಗಬಹುದು ?"

"ಮೂವತೋ ನಲವತ್ತೋ ಅಗಬಹುದು."

"ಅಷ್ಟೊಂದಾ ? ನಾನ್ಹೇಗೆ ಕೇಳ್ಲೇ ಪಾತು ? ನಾನು, ಲಕ್ಷ್ಮಿ ಎಷ್ಟು ಬೇಡಾಂತ ಹೇಳಿದ್ರೂ ಕೇಳ್ಲಿಲ್ಲ. ಕೈಯಲ್ಲಿದ್ದ ಹಣಾನೆಲ್ಲ ಗದ್ದೆಗೆ ಸುರಿದ. ಈ ಮನೆ ಕಟ್ಟಿಸ್ದ. ಅಲ್ಲಿ ಎಂಥಾ ಒಳ್ಳೇ ಕೆಲಸವಿತ್ತು, ತಿಂಗಳಿಗೆ ಇನ್ನೂರು ರೂಪಾಯಿ ಸಂಬಳ ಬರ್ತಿತ್ತು. ವಾಸಕ್ಕೆ ಅಂತ ದೊಡ್ಡ ಬಂಗ್ಲೆ ಇತ್ತು, ಅಡಿಗೆ ಮನೇಲಿ, ಬಚ್ಚಲು ಮನೇಲಿ ನೀರಿನ ನಲ್ಲಿಗಳಿದ್ದವು. ಆನೆ ಸೊಂಡಿಲಿನಲ್ಲಿ ಸುರಿಯೋ ಹಾಗೆ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಆ ರಾಜಯೋಗ ಇಲ್ಲೆಲ್ಲಿದೆ ?"

"ಸಾಕು ಸಾಕು... ಈ ವೈಭವದ ವರ್ಣನೇನ ನಿನ್ನ ಬಾಯಲ್ಲಿ ಅನೇಕ ಬಾರಿ ಕೇಳೀ ಕೇಳೀ ಸಾಕಾಗಿದೆ. ನನಗೆ ಹಣ ಯಾವಾಗ ಕೊಡ್ತೀಯಾ ?"

"ಕೊಡ್ತೀನಿ ಅಂತದ್ನಲ್ಲ ಪಾತು, ಕೊಡ್ತೀನಿ ಅದಿರ್ಲಿ ನಿಮ್ಮ ಹಾಲಿನ ವ್ಯಾಪಾರ ಚೆನ್ನಾಗಿ ನಡೀತಿಲ್ವಾ ?"

"ಚೆನ್ನಾಗಿ ನಡೀತಿದ್ರೆ ನಾನ್ಯಾಕೆ ನಿನ್ನನ್ನ ಹಣ ಕೇಳ್ತಿದ್ದೆ ? ಈ ಪುಣ್ಯಾತ್ಮನ್ನ ಮದುವೆಯಾಗಿ ಬಂದದ್ದೇ ಬಂದದ್ದು, ಮೈ ಮೇಲೆ ಚಿನ್ನದ ಎಳೆ ಇರಲಿ, ಒಂದು ಒಳ್ಳೆ ನೂಲಿನ ಸೀರೆಗೆ ಕೂಡ ಗತಿ ಇಲ್ಲ."

ಸಾತಕ್ಕ ತಂಗಿಯ ಪೆಚ್ಚು ಧ್ವನಿಯನ್ನು ಗಮನಿಸಿ ನುಡಿದಳು. "ನಾನು ಈ ಮಾತುಗಳನ್ನು ಆಡ್ಬಾರ್ದು ಪಾತು ಆದ್ರೂ ಹೇಳ್ತೀನಿ, ನಿಮಗೇ ಇಷ್ಟು ಕಷ್ಟವಿರುವಾಗ, ಇಷ್ಟು ಮಕ್ಕಳ್ಯಾಕೆ ? ನಿಮ್ಮಿಬ್ಬರ ಮದುವೆ ನಡೆದ ವರ್ಷದಿಂದ ಕಂಡಿದೀನಿ, ಒಂದು ವರ್ಷ ಬಸುರಿ, ಮರುವರ್ಷ ಬಾಣಂತಿ ಹೀಗೆ ಎಷ್ಟು ವರ್ಷಾಂತ ?" ಪಾತು ನಾಚಿ ಕೆಂಪಾದಳು.

"ನಾನೇನು ಮಾಡ್ಲಿ ಅಕ್ಕ, ಕೊಡೋ ದೇವರು ಕೊಡುವಾಗ ನಾವು ಹೇಗೆ

ಬೇಡಾಂತ ಅನ್ನೋಕಾಗುತ್ತೆ ?"

"ನನಗೇನು ತಿಳುವಳಿಕೆ ಇಲ್ಲ ಅಂತ ಅಂದ್ಕೋಬೇಡ, ಮೊದಲು ನಿನ್ನ ಗಂಡಂಗೆ ಸ್ವಲ್ಪ ತಿಳುವಳಿಕೆ ಹೇಳು, ಅವನು ಹೇಳ್ದೇಳಿದ ಹಾಗೆಲ್ಲಾ ಕುಣೀ ಬೇಡಾ ತಿಳೀತಾ ?"

"ನಿನಗೆ ಅರ್ಥವಾಗಲ್ಲ ಪಾತಕ್ಕ. ನಿನಗೆ ಗಂಡ ಮಕ್ಕಳು, ಸಂಸಾರ ಅದೆಲ್ಲಾ ಹೇಗೆ ತಿಳಿಯುತ್ತೇ ?" ಪಾತಕ್ಕನಿಗೆ ಈ ಮಾತು ನೆಟ್ಟಿತು.

"ಹೌದು, ನನಗೆ ಆ ವಿಷಯವೆಲ್ಲಾ ತಿಳೀದು ನಿಜ. ಆದರೆ ನಾನೂ ಹೆಣ್ಣು, ನಾನು ಅಣ್ಣ ತಮ್ಮಂದಿರ, ಅಕ್ಕ ತಂಗಿಯರ ಸಂಸಾರಗಳನ್ನು ನೋಡಿದೀನಿ. ದಿನಗಳನ್ನು ಅವರುಗಳೊಂದಿಗೆ ಕಳಿದೀದಿನಿ. ಎಷ್ಟೆಷ್ಟೋ ಹೆರಿಗೆಗಳನ್ನು ಮಾಡಿಸಿದ್ದೀನಿ. ಬಾಣಂತನವನ್ನು ಮಾಡಿದ್ದೀನಿ. ನಂಗೆ ಅನ್ನಿಸಿದ್ದನ್ನ ಹೇಳಿದೆ. ಇಷ್ಟರ ಮೇಲೆ ನಿನ್ನಿಷ್ಟ."

ಈ ಮಾತುಗಳು ನೆನಪಾಗಿ ಸಾತಕ್ಕನ ಕಣ್ಣುಗಳು ನೀರಾಡಿದವು.

* * *

ಈ ಹಳ್ಳಿಯ ವಿಸ್ತೀರ್ಣ ಹೆಚ್ಚು ದೊಡ್ಡದಲ್ಲ, ಹಳ್ಳಿಯ ಮಧ್ಯ ಭಾಗದಲ್ಲಿ ರೈಲು ನಿಲ್ದಾಣವಿತ್ತು. ನಿಲ್ದಾಣದ ಒಂದು ಭಾಗಕ್ಕೆ, ಗದ್ದೆ ತೋಟಗಳು. ಇನ್ನೊಂದು ಭಾಗಕ್ಕೆ ಮನೆಗಳು, ಮನೆಗಳ ನಡುವೆ ಹರಿದು ಹೋಗುವ ಬೀದಿಯೇ ರಾಜಬೀದಿ, ಅಂಕು ಡೊಂಕಾದ ಬೀದಿಯಾದರೂ, ಈ ರಸ್ತೆ ಸಾಗರಕ್ಕೆ ಹೋಗುವ ರಸ್ತೆಯನ್ನು ಸೇರುತ್ತಿತ್ತು.

ರೈಲ್ವೇ ನಿಲ್ದಾಣದಲ್ಲಿದ್ದ, ಹಿಂಭಾಗದ ದೊಡ್ಡ ಗೇಟನ್ನು ದಾಟಿ ಕಾಲುದಾರಿಯಲ್ಲಿ ನಡೆದರೆ ಮೊದಲು ಸಿಗುತ್ತಿದ್ದುದು ಸ್ಟೇಷನ್ ಮಾಸ್ಟರರ ಮನೆ. ರೈಲ್ವೇ ಇಲಾಖೆಯವರು ಕಟ್ಟಿಸಿಕೊಟ್ಟ ಮನೆ, ಅಲ್ಲೇ ಸಮೀಪದಲ್ಲಿ ರೈಲ್ವೇ ನೌಕರರಿಗಾಗಿ ಕಟ್ಟಿಸಿದ್ದ ಮನೆಗಳಿದ್ದವು. ಇವರುಗಳೆಲ್ಲರಿಗಾಗಿ, ಒಂದು ಸಿಹಿ ನೀರಿನ ಬಾವಿಯನ್ನು ತೆಗೆಸಿ, ಕಟ್ಟೆಯನ್ನು ಕಟ್ಟಿ, ಎರಡೂ ಕಡೆಯಿಂದ ನೀರನ್ನು ಸೇದಲು ಅನುಕೂಲವಾಗು ವಂತೆ, ರಾಟೆಗಳನ್ನು ಹಾಕಿಸಿದ್ದರು. ಅಲ್ಲಿಂದ ಸ್ವಲ್ಪ ದೂರದಲ್ಲಿ ಚಮ್ಮಾರರ ಗುಡಿಸಲು ಗಳಿದ್ದವು. ಅವರುಗಳು ಬಾವಿಯ ಬಳಿಗೆ ಬಂದು ಸ್ವತಃ ನೀರನ್ನು ಸೇದುಕೊಳ್ಳು ವಂತಿರಲಿಲ್ಲ. ಬೇರೆಯವರು ನೀರನ್ನು ಸೇದಿಕೊಳ್ಳುವಾಗ ಬಂದು ದೂರದಲ್ಲಿ ನಿಂತು, ತಮ್ಮ ತಮ್ಮ ಕೊಡಗಳಿಗೆ ನೀರನ್ನು ಹನಿಸಿಕೊಳ್ಳುತ್ತಿದ್ದರು. ಸಂಜೆಯ ವೇಳೆ ಬಾವಿಯ ಕಟ್ಟೆಯ ಸುತ್ತ ಮಕ್ಕಳು ಆಡುವಷ್ಟು ಬಾವಿಯ ಕಟ್ಟೆಯ ಜಗುಲಿ ವಿಶಾಲವಾಗಿತ್ತು.

ಅಲ್ಲಿಂದ ಮುಂದೆ, ಹಳ್ಳಿಯ ಬೀದಿಯಲ್ಲಿ ಅರ್ಧ ಫರ್ಲಾಂಗ್‌ನಷ್ಟು ದೂರ ನಡೆದರೆ ಬಲಕ್ಕೆ ಮೊದಲು ಸಿಗುತ್ತಿದ್ದುದು ನಾಗಪ್ಪ ಭಟ್ಟರ ಮನೆ. ಹಳ್ಳಿಯಲ್ಲಿದ್ದ

ಒಂದೇ ಒಂದು ದೇವಸ್ಥಾನ ಈಶ್ವರನದು. ಆ ದೇವಸ್ಥಾನದ ಅರ್ಚಕರಾಗಿದ್ದವರು ಈ ನಾಗಪ್ಪಭಟ್ಟರು ಪೂರ್ವಕ್ಕೆ, ಅರ್ಧ ಫರ್ಲಾಂಗ್‌ನಷ್ಟು ದೂರದಲ್ಲಿ ಒಂದು ಸಣ್ಣ ಕೆರೆ. ಆ ಕೆರೆಯ ದಡದಲ್ಲಿ ಈಶ್ವರನ ದೇವಸ್ಥಾನ. ಗುಡಿಯ ದೇವರಿಗೆ ಬೆಳಗಿನ ಹೊತ್ತು ಅಭಿಷೇಕ, ಪೂಜೆ ಮಂಗಳಾರತಿ, ನಿತ್ಯವೂ ನಡೆಯುತ್ತಿತ್ತು. ಈ ಸೇವೆ ಊರ ಪಟೇಲರಾದ ನಂಜಪ್ಪನವರ ಕಡೆಯಿಂದ ನೇರವೇರುತ್ತಿತ್ತು. ಗೌರಿ, ಗಣೇಶ, ದಸರಾದಂಥ ಹಬ್ಬ ಹರಿದಿನಗಳಲ್ಲಿ ದೇವರಿಗೆ ವಿಶೇಷ ಪೂಜೆ, ಪ್ರಸಾದ ವಿನಿಯೋಗವೂ ಇರುತ್ತಿತ್ತು. ಅರ್ಚಕರ ಪತ್ನಿ ಸರೋಜಮ್ಮ ಅವರಿಗೆ ಇಬ್ಬರು ಗಂಡುಮಕ್ಕಳು, ಮಕ್ಕಳಿಬ್ಬರೂ ಬೇರೆ ಊರಲ್ಲಿ ತಾತನ ಮನೆಯಲ್ಲಿದ್ದುಕೊಂಡು ಸ್ಕೂಲಿಗೆ ಹೋಗುತಿದ್ದರು. ಆಗ ಈಗ ರಜದಲ್ಲಿ ಹಳ್ಳಿಗೆ ಬಂದು ಹೋಗುತ್ತಿದ್ದರು.

ಅವರ ಮನೆಯ ಪಕ್ಕದ ಮನೆಯಲ್ಲಿ ವಾಸವಾಗಿದ್ದವರು ಛೇರ್‌ಮನ್ ವೆಂಕಟಾಚಲಯ್ಯ ಆತನದು ಸ್ವಲ್ಪ ದೊಡ್ಡ ಪರಿವಾರ. ಆತನ ವೃದ್ಧ ತಂದೆತಾಯಿಗಳು ಅವರೊಂದಿಗೇ ಇದ್ದರು. ಆತನ ಪತ್ನಿ ಶಾರದಮ್ಮ ಈ ದಂಪತಿಗಳಿಗೆ ಈಗಾಗಲೇ ನಾಲ್ಕು ಜನ ಮಕ್ಕಳಿದ್ದು, ಆಕೆ ಮತ್ತೆ ಗರ್ಭಿಣಿಯಾಗಿದ್ದಳು. ಎಲ್ಲರಿಗಿಂತ ಸ್ವಲ್ಪ ಅನುಕೂಲ ಸ್ಥಿತಿಯಲ್ಲಿದ್ದುದರಿಂದ, ಸ್ವಲ್ಪ ಮಟ್ಟಿಗೆ ಅಹಂಕಾರವೂ ಇತ್ತು. ಆತನಿಗೆ ಕೃಷಿಯ ಬಗ್ಗೆ ಹೆಚ್ಚು ತಿಳುವಳಿಕೆ ಇದ್ದುದರಿಂದ, ಉಳಿತ ರೈತರಿಗೆ ಆತನ ಮೇಲೆ ಅಪಾರ ಗೌರವ, ಗದ್ದೆಯಲ್ಲಿ ತೋಟಗಳಲ್ಲಿ ಹೊಸ ಹೊಸ ತಳಿಗಳನ್ನು ತರಿಸಿ, ನಡೆಸಿ, ಪ್ರಯೋಗ ಮಾಡಿ, ಹೆಚ್ಚು ಹೆಚ್ಚು ಬೆಳೆಯನ್ನು ಬೆಳೆದು, ಹಳ್ಳಿಯ ರೈತರಿಗೆ, ಮಾದರಿಯ ರೈತನೆನೆಸಿಕೊಂಡಿದ್ದ ಮಡಿ ಆಚರಣೆ, ಪೂಜೆ ಪುನಸ್ಕಾರ, ಎಲ್ಲಾ ಬಲ್ಲವನಾಗಿದ್ದ. ಸೊಗಸಾಗಿ ಭಾರತವಾಚನವನ್ನು ಮಾಡುತ್ತಿದ್ದ ರಾತ್ರಿಯ ಊಟದ ನಂತರ ಗದುಗಿನ ಭಾರತವನ್ನು ಸುಶ್ಯಾವ್ಯವಾಗಿ ನಿರರ್ಗಳವಾಗಿ ಹಾಡುತ್ತಿದ್ದುದು ಅಕ್ಕ ಪಕ್ಕದ ಮನೆಯವರಿಗೆ ಕೇಳಿಸುತ್ತಿತ್ತು.

“ಅವರೇ ಪುಣ್ಯವಂತರು. ಮನೇಲಿ ಪೆಟ್ರೋಮ್ಯಾಕ್ಸ್ ದೀಪವನ್ನು ಹಚ್ಚಿಟ್ಟು ಕೊಂಡು ಭಾರತ, ಭಾಗವತ ಓದ್ತಾರೆ. ನಮ್ಮ ಮನೆಯ ಈ ಸೀಮೆ ಎಣ್ಣೆಯ ಬುಡ್ಡಿ ದೀಪಗಳಿಗೆ ಬೆಳಕೇ ಸಾಲದು" ಲಕ್ಷ್ಮಿ ಗೊಣಗಿದಳು.

“ನಿನಗೂ ಅಂಥಾ ಚೆನ್ನಾಗಿ ಹಾಡುಕ್ಕೆ ಬರುತ್ತೆ, ನೀನೂ ದೇವರಿಗೆ ದೀಪವನ್ನು ಹಚ್ಚಿಯಾದ್ಮೇಲೆ ಕೂತು ನಾಲ್ಕಾರು ದೇವರ ನಾಮಗಳನ್ನು ಹಾಡಿಕೋ. ಮಕ್ಕಳಿಗೂ ಹೇಳ್ಕೊಡು, ಕೂತಾಗ ನಿಂತಾಗ ದೇವರ ನಾಮ ಸ್ಮರಣೆ ಮಾಡಿದರೆ ನಿನಗೇ ಒಳ್ಳೆಯದು. ಕಯಾದುಗೆ ಪ್ರಹ್ಲಾದ ಹುಟ್ಟಿದ ಹಾಗೆ ನಿಂಗೂ ಗಂಡು ಮಗು ಹುಟ್ಟುತ್ತೆ" ಸಾತಕ್ಕ ಸಾಂತ್ವನ ಹೇಳಿದಳು.

“ನಂಗ್ಯಾಕೋ ವಿಪರೀತ ಭಯ ಆಗುತ್ತೆ ಅತ್ಗೇ.... ಕನಸಲ್ಲಿ ಹೆಣ್ಣು ಮಗು

ಹುಟ್ಟಿದಂತೆ ಕಂಡೆ, ಗಂಡು ಮಕ್ಕಳ ಭಾಗ್ಯ ನಮ್ಮ ಹಣೇಲಿ ಇದೆಯೋ ಇಲ್ವೋ ? ನಿಮ್ಮ ಅಣ್ಣನ ನಕ್ಷತ್ರ ರಾಶಿಯವರಿಗೆ ಹುಟ್ಟೋವೆಲ್ಲಾ ಹೆಣ್ಣು ಮಕ್ಕಳೇ ಅಂತೆ ಹೌದಾ ?"

"ಹಾಗಂತ ಯಾರು ಹೇಳಿದ್ರು ? ಈ ಸಾರಿ ನಿಂಗೆ ಗಂಡು ಮಗೂನೇ ಹುಟ್ಟೋದು ನೋಡ್ತಿರು."

"ನಿಮ್ಮ ಬಾಯ ಹರಕೆಯಿಂದ ಹಾಗಾದ್ರೆ ಸಾಕಾಗಿದೆ. ನಂಗಂತೂ ನಂಬಿಕೆಯೇ ಹೊರಟು ಹೋಗಿದೆ. ಲಕ್ಷ್ಮಿಗೆ ತಾನು ಗರ್ಭಿಣಿಯಾಗಿದೀನಿ ಎಂದು ತಿಳಿದ ದಿನದಿಂದ ಅವಳ ಆತಂಕಕ್ಕೆ ಕೊನೆ ಮೊದಲಿರಲಿಲ್ಲ. ಈಗ ಹೆರಿಗೆಯ ದಿನಗಳು ಹತ್ತಿರ ವಾಗುತ್ತಿವೆ. ಸಾತಕ್ಕನ ಹೊರತು ಬೇರೆ ಸಹಾಯಕರಿರಲಿಲ್ಲ. ಈ ಸಮಯದಲ್ಲಿ ಡಾಕ್ಟರಿಲ್ಲದ, ಆಸ್ಪತ್ರೆಯೇ ಇಲ್ಲದ ಈ ಹಳ್ಳಿಗೆ ಬಂದುದಾಗಿದೆ. ತನಗಾಗುವ ಅನುಭವ ಗಳನ್ನು ಮುಕ್ತವಾಗಿ ಸಾತಕ್ಕನೊಡನೆ ಹೇಳಿಕೊಳ್ಳಲಾಗುವುದಿಲ್ಲ. ಸಂಕೋಚ ಅಡ್ಡ ಬರುತ್ತದೆ. ಈ ಮೊದಲಿನ ಹೆರಿಗೆಗಳು ಆದದ್ದು ಸರ್ಕಾರಿ ಆಸ್ಪತ್ರೆಗಳಲ್ಲಿ ಇಲ್ಲಿ, ಈಗ ಏನು ಕತೆಯೋ? ಪಾರ್ವತಿ ಹೇಳಿದ್ದಳು. ಹೊನ್ನಮ್ಮ ಅಂತ ಒಬ್ಬ ಸೂಲಗಿತ್ತಿ ಇದಾಳೆ. ಅವಳೇ ಎಲ್ಲಾ ಹೆರಿಗೆಗಳನ್ನು ಮಾಡಿಸುತ್ತಾಳೆ ಅಂತ. ಅವಳು ಎಂಥವಳೋ? ನೆನೆಸಿಕೊಳ್ಳಲೂ ಭಯ ಆಗುತ್ತೆ" ಲಕ್ಷ್ಮಿಯ ಆತಂಕದ ಯೋಚನಾಲಹರಿಯನ್ನು ಸಾತಕ್ಕನ ಮಾತು ಕತ್ತರಿಸಿ ಹಾಕಿತು.

"ಇದುವರೆಗೂ ಕಂಠಿ ಮನೆಯಿಂದ ಎಮ್ಮೆ ಹಾಲನ್ನೇ ತಗೊಂಡಿದ್ದಾಯ್ತು. ಹೆಣ್ಣು ಮಕ್ಕಳಿಗೆ ಕುಡಿಯಲು ಹಾಲನ್ನು ಕೊಟ್ಟಿದ್ದೇ ಇಲ್ಲ. ಅವೂ ಅಷ್ಟೆ, ಬರಗೆಟ್ಟೋ ವಂತೆ, ದೊಡ್ಡೋರಿಗಿಂತ ಹೆಚ್ಚಾಗಿ ಗಟ್ಟಿ ಕಾಫೀನೇ ಕುಡಿಯುತ್ವೆ, ಈ ಸಾರಿ ನಿನ್ನ ಹೆಂಡ್ತಿಗೆ ಹುಟ್ಟೋದು ಗಂಡು ಮಗೂನೇ. ಮನೆಗೆ ಒಂದು ಹಸೂನ ಹೊಡೆಸ್ಕೊಂಡು ಬಾ ಮಗು ಬಾಣಂತಿಗೆ ಹಸುವಿನ ಹಾಲು ತುಪ್ಪ ಆಗಲಿ, ಅದೇ ತಾನೇ ಒಳ ಬಂದ ಗುಂಡಣ್ಣನಿಗೆ ಹೇಳಿದಳು."

'ಹೂಂ ನೋಡೋಣ..." ಶಾಸ್ತ್ರಿ ತಲೆಯಾಡಿಸಿ ನುಡಿದ.

* * *

ಕೆಲವೇ ದಿನಗಳೊಳಗೆ ಶಾಸ್ತ್ರಿ ಒಂದು ಗಬ್ಬದ ಹಸುವನ್ನು ಮನೆಗೆ ಹೊಡೆಸಿ ಕೊಂಡು ಬಂದ. ಕರಿ ಬಿಳುಪಿನ ಮೈ ಬಣ್ಣದ ಹಂಡ ಹಸು, ತಿವಿಯಲು ಅನುಕೂಲ ವಾಗಿರುಂಥ ಉದ್ದನೆಯ ಕೋಡುಗಳು ! ಚುರುಕಾಗಿರುವ ತುಂಟ ಹಸು, ಮೊದಲ ಬಾರಿಗೆ ಮನೆಗೆ ಒಂದು ಹಸು ಬಂದ ಸಂಭ್ರಮದಲ್ಲಿ ಸಾತಕ್ಕ 'ರಾಧೆ' ಎಂದು ಹಸುವಿಗೆ ನಾಮಕರಣ ಮಾಡಿದಳು.

ರಾಧೆಗೆ ದುಡುಕು, ಜೊತೆಗೆ ಸಿಡುಕು, "ಪುಣ್ಯಕೋಟಿ" ಜಾತಿಗೆ ಸೇರಿದ

ಹಸುವಂತೂ ಖಂಡಿತಾ ಅಲ್ಲ. ಮುಂದೆ ಬಂದರೆ ಹಾಯುವ, ಹಿಂದೆ ಬಂದರೆ ಒದೆಯುವ ವರ್ಗಕ್ಕೆ ಸೇರಿದ ಗೋವು, ಎದುರಿಗೆ ಕಂಡವರನ್ನು ಸಿರ್ ಎನ್ನುತ್ತಾ ಕೋಡುಗಳನ್ನು ಬಗ್ಗಿಸಿ ತಿವಿಯಲು ಮುಂದಾಗುವ ಗೋಮುಖ ವ್ಯಾಘ್ರ ! ಲಕ್ಷ್ಮಿ ಅಸಹನೆಯಿಂದ ಒದರಿದಳು.

"ಯಾವೋನೋ ನಿಮಗೆ ಮಂಕುಬೂದಿ ಎರಚಿ, ಡೋಪಿ ಹಾಕಿ ಈ ಹಸುವಿನ ಕಣ್ಣಿಯನ್ನು ನಿಮ್ಮ ಕೈಗೆ ಕೊಟ್ಟಿದಾನೆ. ಕೇವಲ ಏಳೆಂಟು ರೂಪಾಯಿಗೆ ಇಂಥ ಗಬ್ಬದ ಹಸುವನ್ನು ಯಾರು ಮಾರ್ತಾರೆ? ಹಸು ಎನ್ನುವ ಹೆಸರಿಗೇ ಕಳಂಕ ಮನೆಯ ಹಸು ಅಂತ ಧೈರ್ಯವಾಗಿ ಮುಂದೆ ನಿಂತು ಗೋಪೂಜೆ ಮಾಡುವಂತಿಲ್ಲ. ಈಗ್ಲೇ ಹೀಗೆ ಇನ್ನು ಕರು ಹಾಕಿದ ಮೇಲೆ ಏನು ಗತಿಯೋ ?" ಶಾಸ್ತ್ರಿ ಹುಬ್ಬುಗಂಟಿಕ್ಕಿ ಲಕ್ಷ್ಮಿಯನ್ನೇ ಬಿರುಗಣ್ಣಿನಿಂದ ನೋಡಿದ. ಆದರೆ ಯಾಕೋ ಏನೋ ಏನನ್ನೂ ಆಡಲಿಲ್ಲ.

ಒಂದು ವಾರದೊಳಗೆ ರಾಧೆ, ಮುದ್ದಾದ ಒಂದು ಹೋರಿ ಕರುವಿಗೆ ಜನ್ಮ ನೀಡಿದಳು. ಮೊದಲಿಗಿಂತ ಅವಳ ಕೋಪ ಹತ್ತು ಪಟ್ಟು ಹೆಚ್ಚಾಗಿತ್ತು. ಎದುರಿಗೆ ಸುಳಿದಾಡಿದವರನ್ನು 'ಬುಸ್" ಎಂದು ಹರಿಹಾಯ್ದು ಹೆದರಿಸುತ್ತಿದ್ದಳು. ಕೆಲವೊಮ್ಮೆ ಕಟ್ಟಿದ್ದ ಗೂಟವನ್ನೇ ಹಗ್ಗದ ಸಮೇತ ಕಿತ್ತುಕೊಂಡು ಹಾಯಲು ಅಟ್ಟಿಸಿಕೊಂಡು ಹೋಗುತ್ತಿದ್ದಳು. ಸುಧಾರಿಸುವುದೇ ಕಷ್ಟ ಎನಿಸುತ್ತಿತು. ಈಗ ಶಾಸ್ತ್ರಿಯ ಆತಂಕವೂ ಹೆಚ್ಚಾಗಿತ್ತು. ರಾಧೆಗೆ, ಮೂಗುದಾರ ಹಾಕಿಸಿ, ಬಲವಾದ ಗೂಟಕ್ಕೆ ಕಟ್ಟುತ್ತಿದ್ದರು. ಕರುವನ್ನು ಬಿಡುವುದಕ್ಕೆ ಮೊದಲು, ಮುಂದುಗಡೆ ಒಂದು ಕಾಲಿಗೂ, ಕತ್ತಿಗೂ ಸೇರಿಸಿ, ಒಂದು ಸಣ್ಣ ಹಗ್ಗವನ್ನು ಕಟ್ಟಿರುತ್ತಿದ್ದದರಿಂದ, ರಾಧೆಗೆ ಸರ್‍ರನೆ ತಿರುಗಲು ಆಗುತ್ತಿರಲಿಲ್ಲ. ಅಷ್ಟಾದರೂ ಯಾರೂ ಮುದ್ದಾದ ಕರುವಿನ ಬಳಿ ಸುಳಿಯುವಂತಿರಲಿಲ್ಲ. ಹುಲಿಯಂತೆ ಆರ್ಭಟಿಸಿ ಹೆದರಿಸುತ್ತಿದ್ದಳು. ಕೆಚ್ಚಲಿಗೆ ಕೈ ಹಾಕಿದರೆ ಹಿಂಗಾಲುಗಳನ್ನೆತ್ತಿ ಪಟಪಟನೆ ಒದೆಯುತ್ತಿದ್ದಳು. ಹಾಗಾಗಿ, ಹಿಂಗಾಲುಗಳನ್ನು ಹಿಂದಿನ ಒಂದು ಗೂಟಕ್ಕೆ ಸೇರಿಸಿ ಕಟ್ಟಿದ ನಂತರವೇ ಕರುವನ್ನು ಬಿಡುತ್ತಿದ್ದುದು. ಕರು ಸಾಕಷ್ಟು ಹಾಲನ್ನು ಕುಡಿದು ತೃಪ್ತಿಗೊಂಡ ನಂತರವೇ ಹಾಲನ್ನು ಕರೆಯುತ್ತಿದ್ದುದು. ಕೆಚ್ಚಲನ್ನು ಬೆಚ್ಚನೆಯ ನೀರಿನಿಂದ ತೊಳೆದು, ಮೊಲೆಗಳಿಗೆ ಹರಳೆಣ್ಣೆಯನ್ನು ತೆಳುವಾಗಿ ಸವರಿ, ನಂತರವೇ ಹಾಲನ್ನು ಹಿಂಡುತ್ತಿದ್ದುದು. ಈ ಕೆಲಸವೆಲ್ಲಾ ಶಾಸ್ತ್ರಿಯದೇ ಒಂದು ಸೇರಿನಷ್ಟು ಹಾಲನ್ನು ಕರೆಯಲು ಪ್ರತಿನಿತ್ಯ ಎರಡೂ ಹೊತ್ತು ಇಷ್ಟು ಪ್ರಯಾಸ ಪಡಬೇಕಾಗುತ್ತಿತ್ತು. ಲಕ್ಷ್ಮಿಗೆ ಅವಳ ಬಳಿಗೆ ಹೋಗಲು ಧೈರ್ಯವೇ ಇರಲಿಲ್ಲ. ಸಾತಕ್ಕನಿಗೆ ಈ ಕೆಲಸಗಳು ಗೊತ್ತಿರಲಿಲ್ಲ. ರಾಧೆ, ತನ್ನ ಮಗ ವಿನಾಯಕನಿಗೆ, ಪ್ರೀತಿಯಿಂದ ಹಾಲುಣಿಸಿ, ಮೈನೆಕ್ಕಿ ತೃಪ್ತಿಗೊಳ್ಳುತ್ತಿದ್ದಳು. ಎಲ್ಲರಿಗೂ ಅದೇ ಒಂದು

ಹಬ್ಬದಂತೆ.

ಮೊದಲ ಒಂದುವಾರ, ಮನೆಮಂದಿಯೆಲ್ಲಾ ಗಿಣ್ಣುಹಾಲಿನ ಸವಿಯನ್ನು ಸವಿದರು. ಎಳೆಗಂಧಿ ಹಾಲಿನ ದಿನಗಳು ಕಳೆದ ನಂತರ ಹಸುವಿನ ಹಾಲಿನ ಅಪ್ಪಟ ರುಚಿಯನ್ನು ಆಸ್ವಾದಿಸಿದರು.

"ಎಲ್ಲಾ ಸರಿ, ಆದರೆ, ಈ ರಾಧೆ ತಾನು ಹೆಣ್ಣು ಅನ್ನೋದನ್ನೇ ಮರೆತು ಬಿಟ್ಟಿದ್ದಾಳೆ ಅಂತ ಕಾಣಿಸುತ್ತೆ. ಹೆಂಗಸರನ್ನ ಕಂಡ್ರೇ ಆಗುಲ್ಲ ಇವಳಿಗೆ" ಲಕ್ಷ್ಮಿ ವ್ಯಂಗ್ಯ ಬರೆತ ನಗೆಯೊಂದಿಗೆ ನುಡಿದಾಗ, ಪಾತಕ್ಕ ವಿಸ್ಮಯದಿಂದ ಅವಳನ್ನೇ ನೋಡಿದಳು. ಆ ನೋಟದಲ್ಲಿ ಇಂಗಿತ ಅಡಗಿತ್ತು.

ವಿನಾಯಕ ಮನೆ ಮಂದಿಗೆಲ್ಲಾ ಮುದ್ದಿನ ಕರುವಾಗಿದ್ದ ರಾಧೆಯನ್ನು ಮೇಯಲು ಕಳಿಸಿದ್ದ ಸಮಯದಲ್ಲಿ, ಎಲ್ಲರೂ ಅವನ ಬಳಿ ಸಾರಿ ತಬ್ಬಿಕೊಂಡು ಮುದ್ದಿಸುತ್ತಿದ್ದರು. ಮುದ್ದಾದ ಸಣ್ಣ ಕರುವಿನ ಕೊರಳಿಗೆ ಸಣ್ಣ ಗಂಟೆಯೊಂದನ್ನು ಕಟ್ಟಿ, ಸಂಭ್ರಮದಿಂದ ಆಡಿಸುತ್ತಿದ್ದರು. ಸಾಯಂಕಾಲವಾಗುತ್ತಿದ್ದಂತೆಯೇ ರಾಧೆ, ಹಿಂಡಿನ ಅಧಿಪತಿಯಂತೆ, ಮುಂದಾಗಿ ಬಂದು 'ಅಂಬಾ' ಎಂದು ಜೋರಾಗಿ ಕೂಗಿ, ತನ್ನ ಬರುವಿಕೆಯನ್ನು ಸಾರಿ, ಎಲ್ಲರನ್ನು ಎಚ್ಚರಿಸುತ್ತಿದ್ದಳು. ಎಳೆಗರು ವಿನಾಯಕ ತನ್ನ ಎಳೆ ಕಂಠದಲ್ಲಿ 'ಅಂಬಾ ಎಂದು ಪ್ರತಿಯಾಗಿ ಕೂಗಿ, ತಾಯಿಯ ದನಿಗೆ ತನ್ನ ದನಿಯನ್ನೂ ಸೇರಿಸುತ್ತಿದ್ದ. "ರಾಧೆ ಬಂದ್ಲು, ರಾದೆ ಬಂದ್ಲು" ಎಲ್ಲರೂ ಎಚ್ಚೆತ್ತು ಕೊಳ್ಳುತ್ತಿದ್ದರು.

* * *

ಲಕ್ಷ್ಮಿಗೆ ಹೆರಿಗೆ ನೋವು ಪ್ರಾರಂಭವಾಗುತ್ತಿದ್ದಂತೆಯೇ ಸೂಲಗಿತ್ತಿ ಹೊನ್ನಮ್ಮನಿಗೆ ಹೇಳಿ ಕಳಿಸಲಾಯಿತು. ಕತ್ತಲೆ ಕೋಣೆಯಲ್ಲಿ ಹೆರಿಗೆ ನೋವನ್ನು ಅನುಭವಿಸುತ್ತಾ ಮಲಗಿದ್ದ ಲಕ್ಷ್ಮಿಗೆ ಹೊನ್ನಮ್ಮನನ್ನು ಕಂಡು, ಅಧೈರ್ಯವೇ ಹೆಚ್ಚಾಯಿತು. ಅಸಹ್ಯವೂ ಆಯಿತು. ಬಾಯ ತುಂಬಾ ತುಂಬಿಕೊಂಡಿದ್ದ ಹೊಗೆಸೊಪ್ಪಿನ ರಸದ ವಾಸನೆ, ಆಗಾಗ್ಗೆ ಎದ್ದು, ಕಿಟಕಿಯಿಂದಾಚೆ ಪಿಚಕ್ಕನೆ ತಂಬಾಕಿನ ರಸವನ್ನು ಉಗುಳುತ್ತಿದ್ದುದು ಅಸಹನೀಯವೆನಿಸುತ್ತಿತ್ತು ನೋವು ಹೆಚ್ಚಾದಂತೆ ಅನ್ನಿಸಿ, ನರಳಿಕೆ ಹೆಚ್ಚಾಗುತ್ತಿತ್ತು.

"ಅತ್ತಿಗೆ, ಇವಳನ್ನು ಹೊರಕ್ಕೆ ಕಳಿಸಿ, ಪಕ್ಕದ್ಮನೆ ಭಾಗೀರಥಮ್ಮನಿಗೆ ಹೇಳಿ ಕಳ್ಸಿ, ನಂಗ್ಯಾಕೋ ಭಯ ಹೆಚ್ಚಾಗ್ತಿದೆ." ಮುಖವನ್ನು ಕಿವುಚುತ್ತಾ ಲಕ್ಷ್ಮಿ ನುಡಿದಳು.

"ಏಯ್, ಸುಮ್ಕೇ ಮನಿಕ್ಕಳವ್ವಾ, ಈಗ್ಲೇ ಎರ್ಗೆ ಆಗೋ ಅಂಗೇ ಇಲ್ಲ. ಏನಿದ್ರೂ ಒತ್ತಾರೇನೇ" ಅವ್ವಾರೇ, ಒಂದಿಷ್ಟು ಕಸಾಯ ಮಾಡ್ಕೊಡಿ ನಾನು ಕುಡಿಸ್ತೀನಿ" ಸಾತಕ್ಕ ಬಿಸಿಬಿಸಿಯಾಗಿ ಜೀರಿಗೆ ಕಷಾಯವನ್ನು ಮಾಡಿ ತಂದಿತ್ತಳು. ಲಕ್ಷ್ಮಿ ತಾನೇ ಕುಡಿದಳು.

"ಅವ್ವಾರೇ, ನಂಗ್ವಸಿ ಬಿಸಿ ಹಾಲು ಕೊಟ್ಬಡಿ. ರಾತ್ರಿ ಒತ್ತು ಆಲು ಕುಡೀನಿದ್ರೆ

ನಿದ್ದೇನೇ ಅತ್ತಂಗಿಲ್ಲ" ಹೊನ್ನಿತಿ ಕೆಂಪು ಹಲ್ಲುಗಳನ್ನು ಪ್ರದರ್ಶಿಸಿ ಹೇಳಿದಾಗ ಸಾತಕ್ಕ ಗೊಣಗುತ್ತಾ, ಬಿಸಿ ಹಾಲಿಗೆ, ಸಕ್ಕರೆ ಹಾಕಿ ಕದರಿ ಕಂಚಿನ ಲೋಟಕ್ಕೆ ಹಾಕಿಕೊಂಡು ತಂದಿತ್ತಳು. ಗಟಗಟ ಹಾಲನ್ನು ಕುಡಿದ ಹೊನ್ನಿತಿ, ಹಾಗೇ ಒಂದು ಮೂಲೆಯಲ್ಲಿ ಉರುಳಿಕೊಂಡಳು. ಕೈಯನ್ನೇ ದಿಂಬನ್ನಾಗಿಸಿಕೊಂಡು, ಸೀರೆಯ ಸೆರಗನ್ನು ಮುಸುಕೆಳೆದು ಮಲಗಿದವಳಿಗೆ ಕ್ಷಣಮಾತ್ರದಲ್ಲಿ ನಿದ್ದೆ ಹತ್ತಿತ್ತು. ಗೊರಕೆಯ ಸದ್ದು ಬೆಚ್ಚಿಸುವಂತಿತ್ತು.

ಕತ್ತಲೆ ಕೋಣೆಯಿಂದ ಕ್ಷೀಣವಾಗಿ ಕೇಳಿ ಬರುತ್ತಿದ್ದ ಲಕ್ಷ್ಮಿಯ ನರಳಿಕೆಯ ಧ್ವನಿ, ಚಿಕ್ಕ ಮಕ್ಕಳಲ್ಲಿ ಕುತೂಹಲವನ್ನು, ಭಯವನ್ನು ಹುಟ್ಟಿಸಿದ್ದವು. "ಅತ್ತೇ...ಅತ್ತೇ.... ಅಮ್ಮಾ ಯಾಕೆ ಅಳ್ತಿದ್ದಾಳೆ ? ಏನಾಗಿದೆ ?" ರಾಗಿಣಿ ಕೇಳಿದಾಗ ಸಾತಕ್ಕ ಗದರಿದ್ದಳು.

"ಎಲ್ರೂ ಸುಮ್ನೆ ಊಟ ಮಾಡಿ ನಿಮ್ಮ ನಿಮ್ಮ ಪಾಡಿಗೆ ಮಲಕ್ಕೊಳ್ಳಿ. ಇಲ್ದಿದ್ರೆ ನಿಮ್ಮಣ್ಣಂಗೆ ಹೇಳ್ತೀನಿ" ಎಲ್ಲರೂ ತೆಪ್ಪಗಾದರು.

"ಮಧ್ಯಾಹ್ನ ಮಾಡಿದ್ದ ಅಡಿಗೆಯನ್ನು ಬಿಸಿ ಮಾಡಿ, ಮಕ್ಕಳನ್ನು ಒಟ್ಟಿಗೇ ಕೂರಿಸಿ ಬಡಿಸಿದಳು. ಊಟದ ನಂತರ, ನೆಲ ಒಣಗಿದ ಮೇಲೆ ಚಾಪೆ ಹಾಕಿ, ಹಾಸಿಗೆಗಳನ್ನು ಹಾಸುವಂತೆ ಶಾಂತಳಿಗೆ ಹೇಳಿ ಎಲ್ಲರನ್ನೂ ಮಲಗುವಂತೆ ಹೇಳಿದಳು" ಹದಿಮೂರು ವರ್ಷದ ಶಾಂತ ಮಾತ್ರ ಸ್ವಲ್ಪ ಪೆಚ್ಚಾಗಿದ್ದಳು. ಅವಳಿಗೆ ಅರೆ ಬರೆ ತಿಳುವಳಿಕೆ "ಈ ಬಾರಿ ಅಮ್ಮನಿಗೆ ಗಂಡು ಮಗುವೇ ಹುಟ್ಟಲಿ ಇಲ್ಲದಿದ್ದರೆ ಅಮ್ಮನಿಗೆ ತುಂಬಾ ಬೇಸರವಾಗುತ್ತದೆ" ಎಂದು ಅನೇಕ ಬಾರಿ ಹೇಳಿಕೊಂಡಿದ್ದಳು.

ಗ್ರಾಮ ಪಂಚಾಯಿತಿಯ ಮೀಟಿಂಗ್ ಮುಗಿಸಿಕೊಂಡು ಶಾಸ್ತ್ರಿ ತಡವಾಗಿ ಮನೆಗೆ ಬಂದ, ಹೆಂಡತಿಗೆ ಹೆರಿಗೆಯಾಗುವ ಸಮಯ ಬಂದಿದೆ ಅಂತ ತಿಳಿದಾಗ, ಅವನಿಗೂ ಆತಂಕವಾಗಿತ್ತು. ಕೈ ಕಾಲು ತೊಳೆದು, ದೇವರ ಮುಂದೆ ತುಪ್ಪದ ದೀಪಗಳನ್ನು ಹಚ್ಚಿಟ್ಟು, ಹೆಂಡತಿಗೆ ಸುಖ ಪ್ರಸವವಾಗಲೆಂದು, ದೇವರಲ್ಲಿ ಪ್ರಾರ್ಥಿಸಿ, ಮಂತ್ರಗಳನ್ನು ಹೇಳಿಕೊಂಡ. ಹಾಲಿನಲ್ಲಿದ್ದ ದೊಡ್ಡ ಒರಳು ಕಲ್ಲಿನ ತುಂಬಾ ನೀರನ್ನು ತುಂಬಿ, ರುಬ್ಬುವ ಗುಂಡುಕಲ್ಲನ್ನು ಒರಳೊಳಗೆ ನಿಲ್ಲಿಸಿದ. "ಹೀಗೆ ಮಾಡಿದರೆ ಹೆರಿಗೆ ಸುಲಭವಾಗುತ್ತದೆ" ಎಂದು ಕಂಠಿ ಹೇಳೀದ್ದನಂತೆ.

ಬೆಳಗಿನ ಝಾವದ ಹೊತ್ತಿಗೆ ಲಕ್ಷ್ಮಿಗೆ ನೋವು ಅಧಿಕವಾಗಿತ್ತು. ಮೇಲೆ ಮೇಲೆ ನೋವು ಕಾಣಿಸತೊಡಗಿತ್ತು. ಈಗಾಗಲೆ ನಾಲ್ಕು ಮಕ್ಕಳನ್ನು ಹೆತ್ತಿದ್ದ ಲಕ್ಷ್ಮಿಗೆ ಸ್ವತಃ ಎಲ್ಲಾ ಅನುಭವವಿತ್ತು. ನಾಲ್ಕಾರು ಬಾರಿ ಕರೆದರೂ ಹೊನ್ನಿತಿಗೆ ಎಚ್ಚರ ವಾಗಿರಲಿಲ್ಲ. ಸಾತಕ್ಕನೇ ಬಂದು ಲಕ್ಷ್ಮಿಯ ಬಳಿ ಕುಳಿತಳು. ಬೆಳಗಿನ ಝಾವ ಕಳೆಯುತ್ತಿದ್ದಂತೆಯೇ ಅವಳಿಗೆ ಹೆರಿಗೆ ಆಗಿ ಬಿಟ್ಟಿತು. ಲಕ್ಷ್ಮಿಯ ಚೀರುವಿಕೆ ಕೇಳಿ ಹೊನ್ನಮ್ಮ ಆಕಳಿಸುತ್ತಾ ಎದ್ದಳು.

"ಎಲ್ಲಿ, ಇತ್ಕಡೆ ಜರುಗಿ" ಎಂದು ಸಾತಕ್ಕನನ್ನು ಸರಿಸಿ, ಮಗುವನ್ನು ಕೈಗೆತ್ತಿಕೊಂಡಳು, "ಎಂಥಾ ಮಗು" ಎಂದು ನೋಡಿ ನುಡಿದಳು.

"ನಂಗೊತ್ತಿತ್ತು....ಗಂಡೇ ಉಟ್ಟೋದು ಅಂತ.... ನಾನು ಹೆರಿಗೆ ಮಾಡ್ಸೋಕೆ ಓದ ತಾವಲೆಲ್ಲಾ ಉಟ್ಟೋದು ಗಂಡು ಮಗುವೇ.... ಅದ್ಕೇಯ ಎಲ್ರೂ ನನ್ನೇ ಕರೆಸ್ತಾರೆ. ಹೊನ್ನೀ..... ನೀನೇ ಬಾ ಬಾ ಅಂತ ಬಡ್ಕೊಂತಾರೆ ಕಿಸಿ ಕಿಸಿ ನಗುತ್ತಾ ತಂಬಾಕನ್ನು ದವಡೆಗೆ ಒತ್ತಿಟ್ಟುಕೊಂಡು ನುಡಿದಳು. ಲಕ್ಷ್ಮಿಗೆ ಅವಳ ಮಾತುಗಳು ಬೇಡವಾಗಿತ್ತು. ಗಂಡು ಮಗು ಹುಟ್ಟಿದೆ. ತಾನು ನೋಡಬೇಕು.

"ಅತ್ತೀಗೇ..... ಮಗೂನ ಎತ್ತಿ ತೋರಿಸ್ತೀರಾ ?" ಆಸೆಯಿಂದ ಕೇಳಿದಳು

"ಹುಂ ನೋಡೋವಂತೆ, ಮೊದಲು ಸ್ವಲ್ಪ ಸುಧಾರಿಸ್ಕೋ.... ಗಂಡೋ ಮುತ್ತಿನ ಚೆಂಡೋ ಅಂತ. ಮಗು ದಿವಿನಾಗಿದೆ. ಲಕ್ಷ್ಮಿ ನಿರಾಳಗೊಂಡಳು.

"ನಿಜ ಹೇಳ್ತೀದೀರಾ ಅತ್ಗೆ. ಸರಿಯಾಗಿ ನೋಡಿದ್ರಾ ?"

"ಹುಂ, ಕಣೇ ಲಕ್ಷ್ಮಿ ಆಯಾಸ ಮಾಡ್ಕೋ ಬೇಡ ನೀನು. ಹೊನ್ನಿತಿ ಮಗುವಿನ ಮೈ ತೊಳಿತಿದಾಳೆ. ನಾನು ಹೊರಗೆ ಹೋಗಿ ಗುಂಡಣ್ಣಂಗೆ ಸಿಹಿ ಸುದ್ದಿ ತಿಳಿಸ್ತೀನಿ. ಅವನೂ ನಿದ್ದೆಗೆಟ್ಟು ಕೂತಿದಾನೆ."

"ಅವಳು ಒರಟು ಹೆಂಗಸಂತೆ ಕಾಣ್ತಾಳೆ ಅತ್ಗೆ. ಮಗೂಗೆ ಏನಾದ್ರೂ ಹೆಚ್ಚು ಕಡಿಮೆ ಮಾಡಿಯಾಳು, ನೀವು ಹೋಗಿ ನೋಡಿ ಅತ್ಗೆ."

"ಏಯ್....ಸುಮ್ಕಿರಮ್ಮೋ ಯಾಕಂಡೀಯಾ ? ಇಂಥ ಎರಿಗೇನ ದಿನಕ್ಕೆ ನಾಕು ಮಾಡಿಸಿವ್ನಿ. ನೀನೊಬ್ಳೆ ಅಲ್ಲ ಮಗೀನ ಎತ್ತಿರೋದು. ತಗೋ ನಿನ್ನ ಮಗೀನ ನೋಡು ಎಂಗವ್ನೆ ಅಂತ ಗಂಡ್ಮಗ ಉಟ್ಟಿತೆ ನಂಗೆ ಬೆಳ್ಳಿ ಲೋಟ ಕೊಡ್‌ಬೇಕು ನೀವು....." ಎನ್ನುತ್ತಾ ಮಗುವನ್ನು ಲಕ್ಷ್ಮಿಯ ಮಗ್ಗುಲಲ್ಲಿ ಮಲಗಿಸಿದಳು.

"ನಿಂಗ್ಯಾಕೇ ಬೆಳ್ಳಿ ಲೋಟ ಹೊನ್ನಮ್ಮ....? ಅದನ್ನು ಮಾರ್ಕೊಂಡು ಕಳ್ಳು ಕುಡ್ದು ಬರ್ತೀಯ ಅಷ್ಟೇ..." ಸಾತಕ್ಕ ಹೇಳಿದಳು.

"ಏಯ್ ಬುಡ್ರವ್ವಾ.. ನಾ ಅಂಗೆಲ್ಲಾ ಕುಡ್ಯೋಲ್ಲ ಬರೀ ತಂಬಾಕು ಆಕ್ಕೋತೀನಿ ಅಷ್ಟೇ." ಮತ್ತಷ್ಟು ತಂಬಾಕಿನ ಪುಡಿಯನ್ನು ತುಂಬಿಕೊಂಡಳು.

"ಸರಿ ಏನಾದ್ರೂ ಮಾಡ್ಕೋ. ನಾನು ಬಿಸಿ ಕಾಫಿ ಮಾಡ್ಕೊಂಡು ತರ್ತೀನಿ. ನೀನು ಇಲ್ಲೇ ಮಗ್ಗುಲಲ್ಲೇ ಕೂತಿರು" ಎಂದು ಹೇಳಿ ಸಾತಕ್ಕ ಹೊರ ಬಂದಳು. ಶತಪಥ ತಿರುಗುತ್ತಿದ್ದ ಶಾಸ್ತ್ರಿ ನಿಂತ "ನಿನ್ನ ಹೆಂಡ್ತಿಗೆ ಗಂಡು ಮಗುವಾಯ್ತು" ಸಾತಕ್ಕ ಸುದ್ದಿಯನ್ನು ತಿಳಿಸಿ, ಸ್ನಾನ ಮಾಡಲೆಂದು ಬಚ್ಚಲು ಮನೆಗೆ ಬಂದಳು. ಶಾಸ್ತ್ರಿ ನೆಮ್ಮದಿಯ ಉಸಿರನ್ನೆಳೆದ.

ವಿಷಯ ತಿಳಿದ ಪಾರ್ವತಿ, ಶಾರದಮ್ಮ ಹಾಗೂ ಭಾಗೀರಥಮ್ಮ ಮಗು

ಬಾಣಂತಿಯನ್ನು ನೋಡಿ ಮಾತನಾಡಿಸಲೆಂದು ಬಂದರು.

'ಹೆರಿಗೆ ಶಾನೇ ಕಷ್ಟದಾಗಿರಬೇಕು ಅಲ್ವಾ ? ಮಗು ತುಂಬಾ ಬೆಳೆದಿದೆ" ಭಾಗೀರಥಮ್ಮ ಕೇಳಿದಳು.

"ಊನ್ರವ್ವಾ... ಈಗಾದೀತು, ಆಗಾದೀತು ಅಂತ ರಾತ್ರಿಯೆಲ್ಲಾ ಕಣ್ಣಿಗೆ ಎಣ್ಣೆ ಬಿಟ್ಕೊಂಡು ಕಾದಿದ್ದೇ ಕಾದಿದ್ದು.....ಒಂದ್ಗಳ್ಗೆ ಕಣ್ರೇಪ್ಪೆ ಮುಚ್ನಿಲ್ಲ" ಹೊನ್ನಿತಿಯ ಮಾತಿಗೆ ಎಲ್ಲರೂ ಮುಖ ಮುಖ ನೋಡಿಕೊಂಡು ನಕ್ಕರು.

ಮನೆಯಲ್ಲಿ ಅಪರೂಪದ ಗಂಡು ಮಗು ಹುಟ್ಟಿರುವನೆಂಬ ಸಂಭ್ರಮದಲ್ಲಿ ಮಾಡಬೇಕಾದ ಶಾಸ್ತ್ರ, ಸಂಪ್ರದಾಯ, ಆರತಿ, ದೃಷ್ಟಿ ನೀವಾಳಿಸುವುದು ಎಲ್ಲಾ ನೆರವೇರಿತು. ಕಡುಬುಗಳನ್ನು ಮಾಡಿ ಹಂಚಿದ್ದಾಯಿತು. ಹನ್ನೊಂದನೆಯ ದಿನ ಮಗು ಬಾಣಂತಿಗೆ ನೀರು ಹಾಕಿ, ಮನೆಯಲ್ಲಿ ಪುಣ್ಯಾಃ ನಡೆಸಿ ಮನೆಯನ್ನು ಶುದ್ಧಿ ಮಾಡಲಾಯಿತು. ಹನ್ನೆರಡನೆಯ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮುತ್ತೈದೆಯರು ನೆರವೇರಿಸಿದರು. ಮೂರನೇ ತಿಂಗಳಿನಲ್ಲಿ ನೆಂಟರಿಷ್ಟರನ್ನೆಲ್ಲ ಕರೆದು ನಾಮಕರಣ ಶಾಸ್ತ್ರವನ್ನು ನೆರವೇರಿಸಬೇಕೆಂದುಕೊಂಡರು.

* * *

ಹೋಳಿ ಹಬ್ಬ ಕಳೆದಿತ್ತು ಕಾಮದಹನದ ಬೇಗೆಯನ್ನು ಕಳೆಯಲು ಮಳೆ ಸುರಿದಿರಲಿಲ್ಲ. ಮೋಡ ಕಟ್ಟಿ ಧಗೆಯನ್ನು ಹೆಚ್ಚಿಸಿತ್ತು. ಹದಿನೈದೇ ದಿನಕ್ಕೆ ಯುಗಾದಿ ಹಬ್ಬ ಯುಗಾದಿಯ ಉಗುಳು ನೀರಿನ ಮಳೆ ಯಾತಕ್ಕೂ ಸಾಲದು ಕೆಲವೊಮ್ಮೆ ಗುಡುಗು ಮಿಂಚು, ಬಿರುಗಾಳಿಯ ಆರ್ಭಟವೇ ಜಾಸ್ತಿ. ಸುಡುವ ಬಿಸಿಲು, ಉರಿವ ಶೆಕೆ, ಚೆನ್ನಾಗಿ ಮಳೆ ಸುರಿದರೆ ಸಾಕೆಂದು ಜಾತಕ ಪಕ್ಷಿಯಂತೆ ಕಾಯುವ ರೈತರಿಗೆ, ಆಕಾಶದೆಡೆ ಆಗಾಗ್ಗೆ ನೋಡಿ ನಿಟ್ಟುಸಿರು ಬಿಡುವುದಷ್ಟೇ ಕೆಲಸವಾಗಿತ್ತು. ಕೆಲವರು, ಆತಂಕದಿಂದ, ಶಾಸ್ತ್ರಿಗಳ ಮನೆಗೆ ಪ್ರಶ್ನೆ ಕೇಳಲು ಬರುತ್ತಿದ್ದರು.

"ಶಾಸ್ತ್ರಿಗಳೇ ಸ್ವಲ್ಪ ಶಾಸ್ತ್ರ ನೋಡಿ ಹೇಳ್ತೀರಾ? ಯಾವಾಗ ಮಳೆ ಬರುತ್ತೆ ಅಂತ ಹೇಳ್ತೀರಾ ?" ಶಾಸ್ತ್ರಿ ಪಂಚಾಂಗವನ್ನು ತೆಗೆದು ನೋಡಿ, ಅಲ್ಲಿ ಬರೆದಿರುವುದನ್ನು ನೋಡಿ ತನಗೆ ತಿಳಿದುದನ್ನು ಹೇಳ್ತಿದ್ದ.

"ಇನ್ನೊಂದು ವಾರದ ನಂತರ ಮೊದಲ ಮಳೆ ಬೀಳುತ್ತೆ. ನಂತರ ಉದ್ಯೋಗವನ್ನು ಪ್ರಾರಂಭ ಮಾಡಬಹುದು" ರೈತರು, ಶಾಸ್ತ್ರಿಯ ಮಾತಿಗೆ ತಲೆ ಯಾಡಿಸಿ, ಕೈ ಮುಗಿದು ನಮಸ್ಕರಿಸಿ ಹೋಗುತ್ತಿದ್ದರು.

ಶಾಸ್ತ್ರಿ ತನ್ನ ತಂದೆಯಿಂದ ತಕ್ಕ ಮಟ್ಟಿಗೆ, ಜ್ಯೋತಿಷ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದ. ಅದನ್ನು ತಿಳಿದವರು ಆಗ ಈಗ ಶಾಸ್ತ್ರಿಯ ಬಳಿಗೆ ಕೆಲವು ಸಲಹೆಗಳನ್ನು ಕೇಳಲು ಬರುತ್ತಿದ್ದರು. ಕೇಳಿದವರ ಪ್ರಶ್ನೆಗೆ ಶಾಸ್ತ್ರಿ ಗುಣಾಕಾರ ಹಾಕಿ, ಸಮಯದ

ಮೇಲೆ ಲಗ್ನವನ್ನು ಪರಿಗಣಿಸಿ, ಕೆಲವೊಮ್ಮೆ ಹೆಸರಿನ ಬಲದ ಮೇಲೆ ತನಗೆ ತಿಳಿದುದನ್ನು ಪ್ರಾಮಾಣಿಕವಾಗಿ ತಿಳಿಸುತ್ತಿದ್ದ. ಶಾಸ್ತ್ರಿಯ ಮನೆಯಿಂದ ಮೇಲುಗಡೆ ಲಂಬಾಣಿಗರ ಪಾಳ್ಯ ಇದ್ದಿತು. ಅಲ್ಲಿ ಅನೇಕ ಕುಟುಂಬಗಳು ವಾಸವಾಗಿದ್ದವು. ಅವರವರಲ್ಲಿ ಒಳಜಗಳವೂ ಇತ್ತು. ಒಗ್ಗಟ್ಟು ಇತ್ತು, ಅವರುಗಳು ಆಗೊಮ್ಮೆ ಈಗೊಮ್ಮೆ ಶಾಸ್ತ್ರಿಗಳ ಬಳಿಗೆ ಬರುತ್ತಿದ್ದರು.

"ಅಯ್ನೋರಾ... ಮನೇಲಿ ಮಗಳ ಲಗ್ನ ಕಟ್ಬೇಕು. ಸ್ವಲ್ಪ ಶಾಸ್ತ್ರಯೋಳಿ, ಬೀಗರು ಬೀಗರಿಗೆ ಎಂಗೆ ? ಮಾವ ಅಳಿಯಂಗೆ ಎಂಗೆ ಕೂಡಿ ಬತ್ತದೆ ? ಬಾವ ಬಾಮೈದ ಎಂಗಿರ್ತಾರೆ ? ಲಗ್ನ ಯಾವಾಗ ಮಾಡೋಣ...?" ಎಂದು ಕೇಳಿ ತಿಳಿದುಕೊಳ್ಳುತ್ತಿದ್ದರು ಒಳಗೆ ಕುಳಿತಿರುತ್ತಿದ್ದ ಸಾತಕ್ಕ ಗೊಣಗುತ್ತಿದ್ದಳು.

"ಮಾಡುಕ್ಕೆ ಕೆಲಸ ಇಲ್ಲ ಇವಕ್ಕೆ, ಬಂದು ಕೂತು ಬಿಡುತ್ವೆ.. ಬೀಗ ಬೀಗರಿಗೆ ಹೇಗಿದ್ದರೇನು ? ಮೊದ್ಲು ಗಂಡ ಹೆಂಡ್ತಿ ಹೇಗೆ ಬಾಳ್ತಾರೆ ಅನ್ನೊದು ಮುಖ್ಯ ಅಂತ ಯಾಕೆ ತಿಳಿಯೋಲ್ವೋ ? ಮದುವೆಯಾದ ಕೆಲವೇ ದಿನಕ್ಕೆ ಗಂಡ ಕುಡಿದು ಬಂದು ಹೊಡ್ದ, ಬಡಿದ, ಮನೆಯಿಂದಾಚೆ ನೂಕ್ದ ಅಂತ ಅವನನ್ನು ಬೈಯುತ್ತಾ ಓಡಿ ಬರೋದು. ಇದಕ್ಕೆ ಶಾಸ್ತ್ರ ಬೇರೆ ಕೇಡು"

"ಇವ್ರೂ ಅಷ್ಟೇ ಇದೆಲ್ಲಾ ಯಾಕೆ ಬೇಕಿತ್ತು ಇವರ್‍ಗೆ? ಪಂಚಾಂಗ ತೆರೆದಿಟ್ಕೊಂಡು ಕೂತ್ರೆ, ಇತ್ಲಾಕಡೆ ಧ್ಯಾನವೇ ಇರಲ್ಲ. ಇವರ ಪಾಂಡಿತ್ಯಕ್ಕೆ ಇದೊಂದು ಕಡಿಮೆ ಆಗಿತ್ತು." ಲಕ್ಷ್ಮಿ ದನಿ ಸೇರಿಸಿದಳು.

ಸಾತಕ್ಕ ಬೇಸರಗೊಂಡಳು "ನೀನು ಸದಾ ಅವನನ್ನು ಹಂಗಿಸಿ ಅನ್ನಬೇಡ ಲಕ್ಷ್ಮೀ ಏನೋ ಇವನ ಗ್ರಹಚಾರ ಚೆನ್ನಾಗಿಲ್ಲ ಇಲ್ದಿದ್ರೆ ಇವನೂ ಜಾಣನೇ ಮೆಟ್ರಿಕ್ ಪಾಸು ಮಾಡಿದಾನೆ, ಡಿಪ್ಲೋಮ ಮಾಡಿಕೊಂಡಿದಾನೆ ಕಾಂಪೌಂಡರ್ ಕೆಲಸಕ್ಕೆ ಸರ್ಟಿಫಿಕೇಟ್ ತಗೊಂಡಿದಾನೆ ಶುಗರ್ ಫ್ಯಾಕ್ಟರಿಯಲ್ಲಿ ಕೆಮಿಸ್ಟ್ ಆಗಿ ಒಳ್ಳೆ ಹೆಸರು ಗಳಿಸಿರಲಿಲ್ವಾ ?"

"ಅದೆಲ್ಲಾ ಸರಿ ಆದ್ರೂ ಈ ಹಳ್ಳೀಗೇಕೆ ಬಂದು ಸೇರಬೇಕಾಗಿತ್ತು. ನೀವೇ ಹೇಳಿ ಅತ್ಗೆ ? ಇದು ದಡ್ಡತನ ಅಲ್ವಾ ?" ಇದಕ್ಕೆ ಯಾವ ವಿದ್ಯೆಯೂ ಬೇಕಿರಲಿಲ್ಲ.

"ಹೇಳಿದ್ನಲ್ಲ ಗ್ರಹಚಾರ ಅಂತ ಏಳರಾಟೆ ಶನಿಕಾಟ ನಡೆಯುವಾಗ ಹೀಗೇ ಕುಗ್ರಾಮವಾಸ, ಇಂಥ ಸಹವಾಸ ಇವೆಲ್ಲಾ ಪರೀಕ್ಷೆ ಈ ದಿನಗಳೂ ಕಳೆಯುತ್ವೆ ಒಳ್ಳೆಯ ದಿನಗಳು ಬಂದೇ ಬರುತ್ವೆ. ಈ ಹಳ್ಳಿಗೆ ಬಂದ್ಮೇಲೆ ತಾನೇ ನಿಂಗೆ ಗಂಡು ಮಗು ಹುಟ್ಟಿದ್ದು. ಆದದ್ದೆಲ್ಲಾ ಒಳ್ಳೇದಕ್ಕೇ ಅಂತ ಅಂದ್ಕೋ..." ಲಕ್ಷ್ಮಿ ಮಾತನ್ನು ಮುಂದುವರೆಸಲಿಲ್ಲ.

* * *

ಮೊದಲ ಮಳೆ ಸುರಿಯುತ್ತಿದ್ದಂತೆಯೇ ಉತ್ತು ಬಿತ್ತನೆಯ ಕೆಲಸ ಪ್ರಾರಂಭ ವಾಗಿತ್ತು. ರೈತಾದಿಗಳನ್ನೂ ನೇಗಿಲನ್ನು ಹೊತ್ತು ಓಡಾಡುವವರನ್ನೂ ನೊಗಕ್ಕೆ ಹೂಡಿದ ಎತ್ತುಗಳನ್ನೂ ಕಾಣುವಂತಾಗಿತ್ತು. ಶಾಸ್ತ್ರಿಯೂ, ಗದ್ದೆಯನ್ನು ಉಳುಸಿ, ಭತ್ತದ ಮಡಿಗಳನ್ನು ಮಾಡಿಸಿದ್ದ.

ತನ್ನ ಕೈಕೆಳಗೆ ಹತ್ತಿಪ್ಪತ್ತು ದಿನಗೂಲಿಯವರನ್ನು ಕೆಲಸಕ್ಕೆ ಇಟ್ಟುಕೊಂಡು ತಾನೇ ಮೇಲ್ವಿಚಾರಣೆ ನಡೆಸುತ್ತಾ ಕೆಲಸ ಮಾಡಿಸುತ್ತಿದ್ದ. ವಾರಕ್ಕೊಮ್ಮೆ ಬಟವಾಡೆ ಕೈಯಲ್ಲಿ ಹಣವಿರಲಿ, ಇಲ್ಲದಿರಲಿ ಸಾಲ ಮಾಡಿಯಾದರು ಕೂಲಿಗಾರರಿಗೆ ಹಣವನ್ನು ಕೊಡಬೇಕಾಗುತ್ತಿತ್ತು. ಸಾಯಂಕಾಲ ದೀಪ ಹಚ್ಚುವ ಸಮಯದಲ್ಲಿ ಸಾಲ ಕೊಟ್ಟವ ರಂತೆ, ಮನೆ ಬಾಗಿಲಲ್ಲಿ ಕಾದು ಕುಳಿತಿರುವ ಕೂಲಿಗಾರರನ್ನು ಕಂಡು ಲಕ್ಷ್ಮಿ ಅಸಹನೆಗೊಳ್ಳುತ್ತಿದ್ದಳು.

"ವರ್ಷಾವಧಿ ಹಬ್ಬದಲ್ಲಿ ಮನೆಮಂದಿಗೆ ಹೊಸ ಸೀರೆ, ಬಟ್ಟೆಗಳಿಲ್ಲ, ಒಡವೆ ವಸ್ತುಗಳಂತೂ ಇಲ್ಲವೇ ಇಲ್ಲ. ಆದರೆ ಈ ಕೂಲಿಗಾರರ ಕೂಲಿಯನ್ನು ಮಾತ್ರ ತಪ್ಪಿಸುವಂತಿಲ್ಲ. ಯಾವ ಜನ್ಮದ ಋಣವೋ ಇಲ್ಲಿ ಬಂದು ತೀರಿಸುತ್ತಿದ್ದೇವೆ."

"ಹೇಗೆ ಮಾತಾಡ್ತೀಯ ನೋಡು. ಅದಕ್ಕೆ ಅವನೂ ಬೈಯೋದು. ಇರ ಬಹುದು ಯಾವುದೋ ಜನ್ಮದ ಕರ್ಮ. ಅದು ಅವನನ್ನು ಇಲ್ಲಿಗೆ ಎಳೆತಂದಿದೆ ಇಲ್ದಿದ್ರೆ ಇಂಥಾ ಒಂದು ಹಳ್ಳಿ ಇದೆ ಅಂತ ಯಾರಿಗಾದ್ರೂ ಗೊತ್ತಿತ್ತಾ ?"

"ನೀವೇ ಹೇಳಿ ಅತ್ಗೆ. ಸಾಲ ಮಾಡಿದ್ದಾಯ್ತು. ಚಿನ್ನ ಬೆಳ್ಳಿ ಮಾರಿದ್ದಾಯ್ತು. ಹೀಗೇ ಮುಂದುವರಿದ್ರೆ, ಮುಂದೆ ನಮ್ಮ ಮಕ್ಕಳ ಗತಿಯೇನು ? ನೋಡ್ತಾ ನೋಡ್ತಾ ನಮ್ಮ ಶಾಂತಂಗಾಗ್ಲೇ ಹದಿನಾಲ್ಕು ವರ್ಷ. ಅವಳ ಹಿಂದೆ ಇನ್ನು ಮೂರು ಹೆಣ್ಣು ಮಕ್ಕಳು. ದೇವ್ರು ನಮ್ಮಂಥೋರಿಗೇ ನಾಲ್ಕು ನಾಲ್ಕು ಹೆಣ್ಣು ಮಕ್ಕಳನ್ನು ಹುಟ್ಟಿಸಿದಾನೆ. ಭಾವನವರ ಮನೇಲೀ ಸಾಲಾಗಿ ಗಂಡು ಮಕ್ಕಳೇ ನಂಗೂ ಬೇಸರ ಆಗಲ್ವಾ ?"

"ನಿಂಗೆ ಬೇಸರ ಆಗುತ್ತೆ ಅಂತ ಸದಾ ಹೆಣ್ಣು ಮಕ್ಕಳ ಮುಂದೆ ಹೀಗೆಲ್ಲಾ ಮಾತಾಡ್ಬೇಡ ಲಕ್ಷ್ಮೀ. ಪಾಪ ಅವುಗಳ ತಪ್ಪೇನು ? ಅವುಗಳೂ ನೊಂದ್ಕೊಳುತ್ವೆ."

"ಹುಟ್ಟಿಸಿದ ದೇವರು ಹೇಗೋ ನಡೆಸ್ತಾನೆ. ನೀನೇನೂ ಆತಂಕ ಪಟ್ಕೋ ಬೇಡ. ಮನಸ್ಸಿಗೆ ಬೇಜಾರಾದಾಗ ನಾಲ್ಕು ದೇವರ ನಾಮಗಳನ್ನಾದ್ರೂ ಹೇಳ್ಕೋ ಮನಸ್ಸಿಗೆ ನೆಮ್ಮದಿ ಸಿಗುತ್ತೆ."

"ನೆಮ್ಮದಿಯೇ ಇಲ್ಲದಾಗ, ದೇವ್ರೂ ಬೇಡ ; ದಿಂಡರೂ ಬೇಡ ಅನ್ನೋವಷ್ಟು ರೋಸಿ ಹೋಗುತ್ತೆ. ಎಲ್ಲಾ ನೀವು ಹೇಳುವಷ್ಟು ಸುಲಭವಲ್ಲ."

"ಹೌದು ಲಕ್ಷ್ಮೀ. ಎಲ್ಲಾ ನಾವುಗಳು ಆಡೋವಷ್ಟು ಸುಲಭವಲ್ಲ. ನನ್ನ ವಿಚಾರವೇ ತಗೋ. ನಾನು ಯಾರಿಗೋಸ್ಕರ ಬದುಕಿದೀನಿ ? ಯಾತಕ್ಕೋಸ್ಕರ ಇದೀನಿ ?

ನಂದೂ ಒಂದು ಜೀವನಾನಾ ? ಜೀವಮಾನವೆಲ್ಲಾ ನಾನು ಹೀಗೇ ಕಳೆಯಬೇಕು ಅಂತ ದೇವರು ನಿರ್ಣಾಯಕ ಮಾಡಿ ಕಳಿಸಿ ಬಿಟ್ಟಿದಾನಲ್ಲ ನಾನು ಹೇಗಿದೀನಿ ಅಂತ ನನಗೆ ಮಾತ್ರ ಗೊತ್ತು." ಪಾತಕ್ಕ ನೊಂದು ನುಡಿದಾಗ ಲಕ್ಷ್ಮಿ ಮೆತ್ತಗಾದಳು. ತಾನು ಹಾಗೆ ಮಾತನ್ನಾಡಬಾರದಾಗಿತ್ತೇನಿಸಿತು.

"ಏನೇನೋ ಆಡಿ, ನಿಮ್ಮ ಮನಸ್ಸಿಗೂ ಬೇಜಾರು ಮಾಡ್ಬಿಟ್ಟೆ. ನಂಗೂ ತಿಳುವಳಿಕೆ ಕಡಿಮೆ ಅವಿವೇಕ ಜಾಸ್ತಿ."

"ಹಾಗೇನಿಲ್ಲ ಲಕ್ಷ್ಮಿ ನೀನು ಜಾಣೆ. ನಿನ್ನ ಜಾಣತನಕ್ಕೆ, ತಿಳುವಳಿಕೆಗೆ ಬೆಲೆ ಇಲ್ಲ ಅವಕಾಶವಿಲ್ಲ. ಸೀತಾರಾಮನ ಹೆಂಡ್ತಿಗಂತೂ ಏನೂ ಬರಲ್ಲ. ಆದರೂ ಸುಖವಾಗಿದಾಳೆ. ಕೆಲವು ಸಲ ಅಜ್ಞಾನ ವರವಾಗಿರುತ್ತೆ. ಯಾವುದನ್ನು ತಲೆಗೆ ಹಚ್ಚಿಕೊಳ್ಳದೇ ಆರಾಮವಾಗಿದಾಳೆ. ಅದಕ್ಕೂ ಎಲ್ಲಾ ಕೇಳ್ಕೊಂಡು ಬಂದಿರಬೇಕು. ಅದಕ್ಕೇ ಹೇಳೋದು ಅವರವರು ಪಡೆದದ್ದು ಅವರವರಿಗೆ."

"ನಾನೇನ್ಮಾಡ್ಲಿ ....ಇದನ್ನೆಲ್ಲ ನೋಡ್ಕೊಂಡು ಸುಮ್ಮನೆ ಇರೋಕ್ಕೆ ಆಗಲ್ಲ ನನ್ನ ಕೈಲಿ" ಮುಂಬಾಗಿಲ ಬಳಿ ಹೆಜ್ಜೆ ಸದ್ದಾಯಿತು.

"ಗುಂಡಣ್ಣ ಬಂದ ಅಂತ ಕಾಣುತ್ತೆ, ಕಾಫೀ ಮಾಡು....ಮಗೀನ ಇತ್ಲಾಗೆ ಕೊಡು. ನಾನು ಮಲಗಿಸ್ತೀನಿ." ಲಕ್ಷ್ಮಿ ಸಾತಕ್ಕನ ತೊಡೆಯ ಮೇಲೆ ಮಗುವನ್ನು ಮಲಗಿಸಿ ಎದ್ದಳು.

* * *

ವೈಕುಂಠ ಮಂಡ್ಯ ಜಿಲ್ಲೆಯವನು. ಕೆಲಸವನ್ನು ಹುಡುಕಿಕೊಂಡು ಈ ಹಳ್ಳಿಗೆ ಬಂದು, ಕೂಲಿ ಕೆಲಸಕ್ಕೆ ಸೇರಿಕೊಂಡಿದ್ದ. ಬಹಳ ಉತ್ಸಾಹಿ ತರುಣ ಅವನನ್ನು ಮನೆಯಲ್ಲೇ ಇರಿಸಿಕೊಂಡು, ಎರಡೂ ಹೊತ್ತು ಊಟ ಹಾಕಿ ಮನೆಯಾಳನ್ನಾಗಿಟ್ಟು ಕೊಂಡರೆ ಅನುಕೂಲವೆಂದು ಶಾಸ್ತ್ರಿ ಆಲೋಚಿಸಿದ. ಎರಡೂ ಹೊತ್ತು ಬಿಸಿ ಬಿಸಿ ರಾಗಿ ಮುದ್ದೆ ಜೊತೆಗೆ ಅನ್ನ ಸಾರು, ಹುಳಿಯ ರುಚಿ, ಅವನು ಪಗಡದಸ್ತಾಗಿ ಊಟ ಹೊಡೆಯುತ್ತಿದ್ದ.

"ಅಮ್ಮಾವ್ರೆ ಬಾಂಬ್ರ ಮನೆಯ ಬೇಳೆ ಸಾರು ಬೋ ಚೆನ್ನ... ಇನ್ನಷ್ಟು ಇಕ್ಕಿ" ಎಂದು ಕೇಳಿ ಹಾಕಿಸಿಕೊಳ್ಳುತ್ತಿದ್ದ. ಸಾರಿನ ಬೇಳೆಯ ಚರಟ ಅವನಿಗೆ ಅತ್ಯಂತ ಪ್ರಿಯವಾದದ್ದು. ಎರಡು ಹೊತ್ತಿನ ಊಟದ ಜೊತೆಗೆ ತಲೆಗೆ ಹಚ್ಚಿಕೊಳ್ಳಲು ಹರಳೆಣ್ಣೆ, ಸ್ನಾನಕ್ಕೆ ಮೈಸೋಪು, ಒಗೆಯಲು ಬಟ್ಟೆ ಸೋಪುಗಳನ್ನು ಕೊಡ ಬೇಕಾಗುತ್ತಿತ್ತು.

ವರ್ಷಕ್ಕೆರಡು ಸಲ ಹೊಸ ಬಟ್ಟೆಗಳು, ತಿಂಗಳಿಗೆ ಹದಿನೈದು ರೂಪಾಯಿ ಸಂಬಳ, ಊರಿಗೆ ಹೋಗಿ ಬರಲು ವರ್ಷಕ್ಕೊಮ್ಮೆ ಬಸ್ ಛಾರ್ಜು ಇತ್ಯಾದಿ ಕೊಡಬೇಕೆಂದು ಮೊದಲೇ ಮಾತಾಗಿತ್ತು.

ಚಿಗುರು ಮೀಸೆಯ ಉತ್ಸಾಹೀ ತರುಣ, ವೈಕುಂಠ ನೋಡಲು ಸುಂದರ ನಾಗಿದ್ದ ಕೆಲವೇ ದಿನಗಳಲ್ಲಿ ಬ್ರಾಹ್ಮಣರ ಮನೆಯ ಕೆಲಸಕಾರ್ಯಗಳ ರೀತಿ ರಿವಾಜುಗಳಿಗೆ ಹೊಂದಿಕೊಂಡು, ಲಕ್ಷ್ಮಿಯ ನೆಚ್ಚಿನ ಬಂಟನಾದ. ದಿನವೂ ಬಾವಿ ನೀರನ್ನು ಸೇದಿಕೊಂಡು ಸ್ನಾನ ಮಾಡಿ, ಹಣೆ ತುಂಬಾ ಪಟ್ಟೆ ವಿಭೂತಿ ಬಳಿದು, ಅಡಿಗೆ ಮನೆಯ ಹೊರತು ಮನೆಯ ಉಳಿದ ಕಡೆಗಳಲ್ಲಿ ಓಡಾಡುವಷ್ಟು ಆಪ್ತನಾಗಿಬಿಟ್ಟ. ಚಿಕ್ಕ ಮಗು ವೆಂಕಟೇಶನನ್ನು ಕಂಡರೆ ಅಕ್ಕರೆ. ಮುದ್ದುಮಾಡಿ ಎತ್ತಿ ಆಡಿಸುತ್ತಿದ್ದ ಸಾತಕ್ಕ ಹೇಳುವ ಕೆಲಸಗಳನ್ನು ಬೇಸರವಿಲ್ಲದೇ ಮಾಡಿಕೊಡುತ್ತಿದ್ದ.

"ಪಾಪ ಬಡ ಮುಂಡೇದು.... ಅಪ್ಪ ಅಮ್ಮನ್ನ ಬಿಟ್ಟು ಬಂದು ಇಲ್ಲಿ ಅನ್ನಕ್ಕಾಗಿ ದುಡೀತಿದೆ" ಎಂದು ಕನಿಕರದಿಂದ, ಮಾಡುವ ತಿಂಡಿಗಳಲ್ಲಿ ಅವನಿಗೆ ಒಂದು ಪಾಲನ್ನು ತೆಗೆದಿರಿಸುತ್ತಿದ್ದಳು.

"ಸಾರಿನ ಚರಟವನ್ನು ತಿನ್ನೋರಿಲ್ದೇ ಪಾತ್ರೆ ತಳದಲ್ಲಿ ಮಿಕ್ಕಿ ಬಿಡುತ್ತಿತ್ತು. ಕರಿಬೇವಿನ ಗಿಡದ ಬುಡಕ್ಕೆ ಸುರೀತಿದ್ವಿ, ವೈಕುಂಠ ಬಂದ್ಮೇಲೆ ಚರಟ ಮಿಗೋದೇ ಇಲ್ಲ ಪಾತ್ರೆ ತಳಾನ ಬಳಿದೂ ಹಾಕಿದರೂ ಸಾಕಾಗುಲ್ಲ" ಅವನಿಗೆ ಲಕ್ಷ್ಮಿ ಹೇಳಿದಳು.

"ಹರೆಯದ ಹುಡುಗ ಚೆನ್ನಾಗಿ ತಿನ್ನುವ ವಯಸ್ಸು. ಮೈ ಬಗ್ಗಿನ ಕೆಲಸ ಮಾಡ್ತಾನೆ. ಸೋಮಾರಿಯಲ್ಲ ಕಳ್ಳತನ, ಸುಳ್ಳತನ ಇಲ್ಲ. ಇಂಥೋನಿಗೆ ಹೊಟ್ಟೆ ತುಂಬಾ ಊಟ ಹಾಕಿದರೆ ಪುಣ್ಯ ಬರುತ್ತೆ. ಇವನಿಗೆ ಮಗೂನ ಕಂಡ್ರೆ ಎಷ್ಟು ಪ್ರೀತಿ ನೋಡು. ಇದೂ ಅಷ್ಟೇ.... ಲೋಟದಲ್ಲಿ ಹಾಲು ಕುಡಿಯೋಕೆ ಎಷ್ಟು ತಕರಾರು ಮಾಡ್ತಿದ್ದ. ಈಗ ವೈಕುಂಠ ಅದೇನು ಮೋಡಿ ಮಾಡ್ತಾನೋ.....ಮುದ್ದು ಮಾಡ್ತಾ ಮಾಡ್ತಾ, ಒಂದು ಲೋಟ ಹಾಲನ್ನು ಕ್ಷಣ ಮಾತ್ರದಲ್ಲಿ ಕುಡಿಸಿ ಬಿಡ್ತಾನೆ" ಸಾತಕ್ಕ ಅಚ್ಚರಿ ಎಂಬಂತೆ ನುಡಿದಳು.

"ವೆಂಕಟೇಶಂಗೆ ಕುಡಿಸ್ತಾನೋ ? ಅಥವಾ ತಾನೇ ಸದ್ದಿಲ್ಲದೇ ಕುಡಿದು ಬಿಡ್ತಾನೋ ಯಾರಿಗೆ ಗೊತ್ತು ?" ಶಾಂತ ನುಡಿದಾಗ ಪಾತಕ್ಕ ಗದರಿದಳು.

"ಹಾಗೆಲ್ಲಾ ಮಾತಾಡ್ಬಾರ್ದು ಶಾಂತ. ನಿಂಗ್ಯಾಕೆ ಇಂಥಾ ಅನುಮಾನ ಬಂತು ?"

"ಮತ್ತಿನ್ನೇನತ್ತೆ? ವೆಂಕಟೇಶ ಹಠಮಾರಿ. ಯಾರಿಗೂ ಬಗ್ಗಲ್ಲ ಅಂತ ನೀವೇ ಹೇಳ್ತೀರಿ. ವೈಕುಂಠ ಹೇಳಿದ ಹಾಗೆ ಕೇಳಿ ಬಿಡ್ತಾನಾ ? ಸಕ್ಕರೆ ಹಾಕಿದ ಹಾಲು ರುಚಿಯಾಗಿರುತ್ತೆ. ಅವನೇ ಯಾಕೆ ಕುಡಿಬಾರ್ದು ?"

"ಏನೋಮ್ಮ, ನಮಗಂತೂ ಈ ಅನುಮಾನ ಬಂದಿರ್ಲಲ್ಲ. ನೀವುಗಳು ಈಗಿನ ಕಾಲ್ದೋರು. ಚುರುಕಾಗಿರ್ತೀರಾ... ಹಾಗಾದ್ರೆ ಒಂದ್ಕೆಲ್ಸ ಮಾಡು ಅವನ ಹಿಂದೆ ಹಿಂದೇನೇ ಓಡಾಡ್ಕೊಂಡು ಹಾಲನ್ನ ಅವನೇ ಕುಡೀತಾನೋ, ಮಗೀಗೆ ಕುಡಿಸ್ತಾನೋ

ನೋಡ್ಕೊಂಡು ಬಂದು ಹೇಳು."

"ಹೋಗಿ ಅತ್ತೆ ನಂಗೇನು ಬೇರೆ ಕೆಲಸ ಇಲ್ವಾ ? ಲಲಿತಂಗ್ಹೇಳಿ"

"ಲಲಿತ ನಿಂಗಿಂತ ಚಿಕ್ಕೋಳು. ಅವಳಿಗೆ ಇದೆಲ್ಲ ಗೊತ್ತಾಗುಲ್ಲ."

"ಯಾಕೆ ಗೊತ್ತಾಗಲ್ಲ, ಅವಳಿಗೂ ಹನ್ನೆರಡು ವರ್ಷ. ಅಲ್ಲಿ ಇಲ್ಲಿ ತಿರುಗ್ತಾಳೆ ಅಂತ ನೀವೇ ಬೈತಿರ್ತೀರಿ ಅವಳಿಗೇ ಹೇಳಿ."

"ಹೋಗೇ ಸುಮ್ನೆ ಕೋತಿಗೆ ಕೆಲ್ಸ್ ಹೇಳಿದ್ರೆ ಅದು ತನ್ನ ಬಾಲಕ್ಕೆ ಹೇಳ್ತಂತೆ, ಹಾಗಾಯ್ತು. ನಿನ್ನ ಕೈಲಾದ್ರೆ ಮಾಡು ಇಲ್ದಿದ್ರೆ ಸುಮ್ನಿರು."

"ನಿಮ್ಗೆ ಲಲಿತನ್ನ ಕಂಡ್ರೆ ಇಷ್ಟ. ನನ್ನನ್ಯಾಕೆ ಕೋತಿ ಅನ್ನೋದು" ಶಾಂತ ಮುಖ ಊದಿಸಿದಳು.

"ಅಯ್ಯೋ ರಾಮಾ, ನಾನೆಲ್ಲಿ ಹಾಗಂದ್ನೆ ? ನಿಮ್ಗೆಲ್ಲಾ ಮುದ್ದು ಜಾಸ್ತಿ ಆಯ್ತು. ನನ್ನನ್ನೇ ಅಂತೀರಾ ? ನಾನು ಇನ್ನು ಇಲ್ಲಿ ಇರುಲ್ಲ. ನಿಮ್ಮಪ್ಪಂಗೆ ಹೇಳಿ ನಾಳೇನೇ ಬೆಂಗಳೂರಿಗೆ ಹೊರಟು ಹೋಗ್ತೀನಿ. ಮತ್ತೆ ಇತ್ಲಾ ಕಡೆಗೆ ತಲೆ ಹಾಕುಲ್ಲ ನಾನು ಹೂಂ" ಸಾತಕ್ಕನೂ ಮುಖವನ್ನು ತಿರುಗಿಸಿ ಕೂತಳು.

"ಅತ್ತೆ.... ಅತ್ತೆ... ಹೋಗ್ಬೇಡಿ ಅತ್ತೆ... ತಪ್ಪಾಯ್ತು." ಗೋಗರೆದಳು.

"ಹಾಗ್ಬ ದಾರಿಗೆ ಇನ್ನಾದ್ರೂ ಮನೆ ಕೆಲ್ಸ, ಅಡಿಗೆ ಕೆಲ್ಸಾನ ಕಲಿತ್ಕೋ ಮುಂದಿನ ವರ್ಷ ನಿನ್ನ ಮದುವೆ ಮಾಡಿ ಕಳಿಸ್ತಾನೆ ನಿಮ್ಮಪ್ಪ ಅತ್ತೆ ಮನೇಲಿ ಹೇಗಿರ್ತೀಯಾ ನಮ್ಗೆಲ್ಲಾ ಕೆಟ್ಟ ಹೆಸ್ರು ತರ್ತೀಯ ಅಷ್ಟೇ."

"ಅತ್ತೇ ಮನೆಗೆ ನಿಮ್ಮನ್ನು ಜೊತೆಗೆ ಕರ್ಕೊಂಡು ಹೋಗ್ತೀನಿ." ಅತ್ತೆಯ ಭುಜಕ್ಕೆ ತಲೆಯನ್ನಾನಿಸಿದಳು.

"ಥೂ ನಾಚಿಕೆಗೆಟ್ಟದ್ದೆ, ಮದ್ವೆ ಅಂದ್ರೆ ಏನೂಂತ ಗೊತ್ತಾ ನಿಂಗೆ? ಅಲ್ಲದೇ ನಿನ್ನ ಗಂಡನ ಮನೆಗೆ ನಾನ್ಯಾಕೇ ಬರ್ಲಿ? ನಿಮ್ಮಪ್ಪನ ಮನೇಲೇ ರಾಮಾ ಕೃಷ್ಣಾ ಅಂತ ಇರ್ತೀನಿ."

"ಅವತ್ತು ನೀವೇ ಹೇಳಿದ್ರಲ್ಲ ಅತ್ತೆ, ನಿಮ್ಮಕ್ಕನ ಮಗ ಗೋಪಾಲನ ಜತೆ ನಂಗೆ ಮದುವೆ ಗೊತ್ತು ಮಾಡಿದಾರೆ ಅಂತ... ಅದು ನಿಮ್ಮಕ್ಕನ ಮನೆ ಅಲ್ಲಿಗೆ ಬರೋಕೆ ನಿಮಗ್ಯಾಕೆ ಸಂಕೋಚ."

"ಶ್ ! ಮೆಲ್ಲಗೆ ಮಾತಾಡು ಹಾಗೆಲ್ಲಾ ಹುಡುಗೀರು ಮದುವೆ ಬಗ್ಗೆ ರಾಜಾರೋಷವಾಗಿ ಮಾತಾಡ್ಲೇ ಬಾರ್ದು. ನಿಮ್ಮಪ್ಪಂಗೆ ಕೇಳ್ಸಿದ್ರೆ ಬೈತಾನೆ ಅಷ್ಟೇ"

"ಸಧ್ಯ ಈ ಮನೆಯಿಂದ ಹೋದ್ರೆ ಸಾಕಾಗಿದೆ. ಸದಾ ಅಪ್ಪ ಬೈತಾರೆ ಅಂತ ಹೆದರಿ ಹೆದರಿ ಸಾಕಾಯ್ತು."

"ಲಕ್ಷ್ಮೀ ಕೇಳಿದ್ಯಾ ನಿನ್ನ ಮಗಳ ಮಾತನ್ನ ? ಮದುವೆ ಮಾತನ್ನು ಎತ್ತುಕ್ಕಿಲ್ಲ

ಆಗ್ಲೇ ಒಂದು ಕಾಲನ್ನೇ ಹೊಸ್ತಿಲಿಂದಾಚೆ ಇಟ್ಟಾಗಿದೆ. ಇನ್ನು ಇವಳಿಗೆ ಆದಷ್ಟು ಬೇಗ ಮೂಗುದಾರ ಹಾಕಿಸ್ಲೇ ಬೇಕು."

"ಇದೆಲ್ಲಾ ನಮ್ಮದೇ ತಪ್ಪು ಅತ್ಗೇ ಸ್ಕೂಲಿಗೆ ಹೋಗಲ್ಲ ಓದಿಲ್ಲ, ಬರಹವಿಲ್ಲ ಸದಾ ನಮ್ಮಿಬ್ಬರ ಮಾತನ್ನು ಆಲಿಸ್ಕೊಂಡು ಕೂತಿರುತ್ವೆ, ಮಕ್ಕಳು ಮಕ್ಕಳಂತೆ ಬೆಳೆಯ ಬೇಕು ಇಲ್ಲಿ ಹಾಗಿಲ್ಲ. ಅದಕ್ಕೇ ತಕ್ಕ ಹಾಗೆ ಈ ಹಳ್ಳಿ. ಹದಿನಾಲ್ಕು ವರ್ಷದ ಹುಡುಗಿ, ಆದರೆ ವಿಪರೀತ ಬೆಳೆದು ಬಿಟ್ಟಿದ್ದಾಳೆ. ನನಗೂ ಅದೇ ದಿಗಿಲು. ನಿಮ್ಮಕ್ಕ ನನಗೂ ಅತ್ತಿಗೆಯೇ, ಅದರೆ ಅವರು ನಿಮ್ಮ ಹಾಗಲ್ಲ. ನನಗೆ ಅವರೊಡನೆ ಸಲುಗೆ ಇಲ್ಲ. ಶಾಂತನ್ನ ಹೇಗೆ ನೋಡ್ಕೋಳ್ತಾರೋ.... ಇವಳು ಹೇಗೆ ಇರ್ತಾಳೋ ಶಿವನೇ ಬಲ್ಲ."

"ಸುಂದರಿ ಬಲು ಸೋಮಾರಿ ನಂಗೆ ಬರೋವಷ್ಟು ಕೆಲಸ ಬರುಲ್ಲ ಅವಳಿಗೆ. ಅದಕ್ಕೇ ಹೇಳಿದ್ದು ಸ್ವಲ್ಪ ಕೆಲಸ ಕಾರ್ರ್ಯಾನ ಕಲಿತ್ಕೋ ಅಂತ. ಮನೇಲೇ ಇದ್ದೂ ಇದ್ದೂ ಸೋಮಾರಿತನ ಹೆಚ್ಚಾಗುತ್ತೆ. "ಶಾಂತಾ ಇಲ್ಬಾರೇ ಇವತ್ನಿಂದ ಅಡ್ಗೆ ಮನೇಲೇ ಕೂತು ಎಲ್ಲಾ ನೋಡ್ಕೋ ತಿಳಿತಾ ?"

"ಹೋಗಿ ಅತ್ತೆ... ಅಡಿಗೆ ಮನೆಲಿ ಬರೀ ಹೊಗೆ ಉಸಿರು ಕಟ್ಟಿದ ಹಾಗಾಗುತ್ತೆ.

"ಏನು ಹೋಗಿ ಅತ್ತೆ... ಮದ್ವೆ ಮಾಡ್ಕೊಂಡು ಈ ಮನೆಯಿಂದ ಹೋಗ್ತಾ ಇರೋಳು ನೀನು; ನಾನಲ್ಲ." ಸಾತಕ್ಕ ತಮಾಷೆಯಾಗಿ ನುಡಿದಾಗ, ಶಾಂತ ಇದ್ದಕ್ಕಿದ್ದಂತೆ ಅಳತೊಡಗಿದಳು. ಅಕೆ ಪೆಚ್ಚಾದಳು ಶಾಂತಳನ್ನು ತನ್ನ ಪಕ್ಕಕ್ಕೆ ಎಳೆದು ಕೂರಿಸಿ ಕೊಂಡಳು.

"ಈಗ ಅಳೋಕೆ ಏನಾಯ್ತು ? ನಾನೇನಂದೆ?"

"ಅತ್ತೇ ನಂಗೆ ಈ ಮದ್ವೇನೇ ಬೇಡ. ನಾನು ನಿಮ್ಮನ್ನೆಲ್ಲಾ ಬಿಟ್ಟು ಎಲ್ಲಿಗೂ ಹೋಗಲ್ಲ."

"ಛೀ, ದಡ್ಡಿ, ಈಗ ಬಾಯಲ್ಲಿ ಹಾಗಂತೀಯ ಅಷ್ಟೇ, ಅದೂ ನಮ್ಮ ಮನೆಯೇ. ಅವರೆಲ್ಲಾ ನಮ್ಮವರೇ. ಸುಂದರಿಯೂ ನನ್ನ ಹಾಗೆ ಸೋದರತ್ತೆಯೇ ಭಯ ಯಾಕೆ ? ಈಗ್ನೋಡು ನೀನು ಅತ್ತಿದ್ದಕ್ಕೆ ನಾನು ಹೆದರಿ, ನಿನ್ನನ್ನ ಮುಟ್ಟಿಕೊಂಡೆ ಮತ್ತೆ ಮಡಿ ಉಟ್ಕೋಬೇಕು."

"ಅತ್ತೇ ನೀವ್ಯಾಕೆ ಸದಾ ಮಡೀಲಿರ್ತೀರಿ ? ಕೆಂಪು ಸೀರೇನೆ ಯಾಕೆ ಉಟ್ಕೋತೀರಿ ? ನಿಮ್ಮ ತಲೆ ಯಾಕೆ ಬೋಳಾಗಿದೆ." ಅವರ ಹತ್ತಿರವೇ ಕುಳಿತಿದ್ದ ಲಲಿತ ಕೇಳಿದಾಗ ಲಕ್ಷ್ಮಿ ಎದ್ದು ಬಂದು, ಮಗಳ ಕೆನ್ನೆಗೆ ಹೊಡೆದಳು.

"ಲಕ್ಷ್ಮಿ ಇದೇನ್ಬಂತೆ ನಿಂಗೆ ? ಇದನ್ಯಾಕೇ ಹೊಡ್ದೆ ?"

"ಮತ್ತೀನೇನು ? ತಲೆ ಹರಟೇನ ತಂದು ? ಇವಳಿಗ್ಯಾಕೆ ಈ ಮಾತು?"

ಲಲಿತ ಏಟಿನ ನೋವಿನೊಂದಿಗೆ, ಬೈಗುಳವೂ ಬಿದ್ದಾಗ ಅಳತೊಡಗಿದಳು. ಪಾತಕ್ಕ ಅವಳನ್ನು ತೊಡೆಯ ಮೇಲಕ್ಕೆ ಎಳೆದುಕೊಂಡು, ಕಣ್ಣು ಮೂಗುಗಳನ್ನು ಒರೆಸಿದಳು.

"ನೀನಿನ್ನೂ ಚಿಕ್ಕೋಳು. ಇನ್ನು ಸ್ವಲ್ಪ ದೊಡ್ಡವಳಾದ್ಮೇಲೆ ನಿಂಗೇ ಒಂದೊಂದಾಗಿ ಅರ್ಥವಾಗುತ್ತೆ." ಈಗ ಆಡ್ಕೋ ಹೋಗು ಸಾತಕ್ಕ ಮುದ್ದಿಸಿ ನುಡಿದಾಗ ಲಲಿತ ಅಳುವುದನ್ನು ನಿಲ್ಲಿಸಿ ಎದ್ದು ಹೋದಳು. ಸಾತಕ್ಕನ ಮನಕಲಕಿ ಹೋಗಿತ್ತು ಪೆಚ್ಚಾಗಿದ್ದಳು.

*   *   *

ಶಾಸ್ತ್ರಿ ಕಟ್ಟಿಸಿಕೊಂಡಿದ್ದ ಮನೆ ವಿಶಾಲವಾಗಿತ್ತು. ಆದರೆ ಹುಲ್ಲಿನ ಛಾವಣಿ. ಆದ್ದರಿಂದ ಮಳೆಗಾಲದಲ್ಲಿ ಅಲ್ಲಲ್ಲಿ ಸೋರುತ್ತಿತ್ತು. ಪ್ರತಿವರ್ಷವೂ ಮಳೆಗಾಲ ಶುರುವಾಗುವ ಮೊದಲು ಕೈಯಾಡಿಸಿ ಸರಿಪಡಿಸಲೇಬೇಕು.

"ಈ ಸಾರಿ ವೈಕುಂಠ ನಿಂತು, ಎಲ್ಲವನ್ನು ಸರಿಯಾಗಿ ಮಾಡಿಸ್ತಾನೆ. ಹಿಂದೆಲ್ಲಾ ಬಂದ ಕೆಲಸಗಾರರು ಪಡಪೋಶಿಗಳು. ಕೈಗೆ ನಾಲ್ಕು ಕಾಸು ಬಿದ್ದ ಕೂಡ್ಲೇ ಪರಾರಿ ಇತ್ತ ಮತ್ತೆ ಸುಳಿಯೋ ಹಾಗೇ ಇಲ್ಲ. ನಿಯತ್ತೇ ಇಲ್ಲ ಬರೀ ಮೋಸಗಾರರು ಕಾಸೂ ಹಾಳೂ ; ತಲೆಯೂ ಬೋಳು.

"ಇಷ್ಟಾದರೂ ನಿಮ್ಮಣ್ಣಂಗೆ ಬುದ್ಧಿ ಮಾತ್ರ ಬಂದಿಲ್ಲ ಕೇಳಿದೋರ್ಗೆ ಮುಂಗಡ ಹಣ ಕೊಟ್ಟು ಬಿಡೋದು... ಪಾಪ ಬಡವ ಮಕ್ಕಳೊಂದಿಗ ಬದುಕಿಕೊಳ್ಳಲಿ ಅಂತ ಕೇಳಿದ ಕೂಡ್ಲೇ ಕೊಟ್ಟು ಬಿಡೋದು. ದಾನ ಶೂರನ ಕರ್ಣನ ವಂಶದವರು.

"ಸ್ವಲ್ಪ ಮೆತ್ತಗೆ ಮಾತಾಡೇ ಲಕ್ಷ್ಮಿ. ಗುಂಡಣ್ಣ ಇಲ್ಲೇ ಕೂತಿದಾನೆ. ಕೇಳ್ಸಿದ್ರೆ ಕೂಗಾಡ್ತಾನೆ.

"ಕೂಗಾಡ್ತಾರೆ ತಾನೇ ? ಅದೇನು ಅಪರೂಪವೇ ? ನೀವೇ ಹೇಳಿ ಅತ್ತಿಗೆ ಯಾವೋನಾದ್ರೂ ಒಬ್ಬ ಬಂದು ಹಣಾನ ವಾಪಸ್ಸು ಕೊಟ್ಟಿದಾನಾ ?"

"ಅವನ್ಹತ್ರ ಇದ್ದಿದ್ರೆ ಬಂದು ಕೊಡ್ತಿದ್ನೇನೋ ? ಜೀವನ ಕಷ್ಟ ಅಲ್ವಾ ?"

"ನೀವೂ ಸರಿಯಾಗಿದೀರಿ. ಅವರಿಗೆ ತಕ್ಕನಾಗಿ ಮಾತಾಡ್ತೀರಿ ನಮಗೆ ತಾನೇ ಎಲ್ಲಿದೇ ಹೇಳೀ ಎಲ್ಲಿಂದ್ಲೋ ಸಾಲ ಮಾಡಿ, ಬಡ್ಡಿ ಕಟ್ತಾರೆ ಇರೋ ಗದ್ದೆ ತೋಟ ಸಹ ಸಾಲಗಾರರ ಕೈಗೆ ಹೋಗುತ್ತೆ ಅಷ್ಟೇ ...." ಸಾತಕ್ಕ ಮರು ನುಡಿಯಲಿಲ್ಲ. ಲಕ್ಷ್ಮಿ ಮುಂದುವರೆಸಿದಳು.

"ಕೆಟ್ಟು ಪಟ್ಟಣ ಸೇರು ಅಂತ ಗಾದೆ ಇದೆ. ಹಳ್ಳಿಯೋರು ಹಳ್ಳೀನ ಬಿಟ್ಟು ಪಟ್ಟಣಕ್ಕೆ ಹೋಗಿ ಸೇರಿಕೊಳ್ತಿದಾರೆ. ಅಂಥಾದ್ದರಲ್ಲಿ, ಕೆಡುಕ್ಕೆ ಅಂತ, ನಾವು ಈ ಹಳ್ಳಿಗೆ ಬಂದು ಬಿದ್ದುದಾಗಿದೆ. ಅದೇನು ಕರ್ಮವೋ? ಇನ್ನೂ ಏನೇನು ಬಾಕಿ ಉಳಿದಿ ದೆಯೋ?" ಅಡಿಗೆ ಮನೆ ಬಾಗಿಲಿಗೆ ಬಂದು ನಿಂತ ಗುಂಡಣ್ಣ ಹೆಂಡತಿಯನ್ನು

ಕೆಕ್ಕರಿಸಿ ನೋಡಿದ. ಲಕ್ಷ್ಮಿ ಮಾತು ನಿಲ್ಲಿಸಿದಳು.

"ನಿಮ್ಮಿಬ್ರಿಗೂ ಬೇರೆ ಕೆಲ್ಸ ಇಲ್ವಾ ? ಸದಾ ಏನಾದ್ರೂ ಗೊಣಗ್ತಾನೇ ಇರ್ತೀರಿ." ಇಬ್ಬರನ್ನೂ ಸೇರಿಸಿ ಬೈದ. "ಶಾಂತಾ ಎಲ್ಲಿ ?" ಪ್ರಶ್ನಿಸಿದ.

"ಇಲ್ಲೇ ಎಲ್ಲೋ ಹಿತ್ತಲಲ್ಲಿ ಇರಬಹುದು ಏನ್ವಿಷಯ ?"

"ಸುಂದರಕ್ಕನಿಗೆ ಹುಷಾರಿಲ್ವಂತೆ ಶಾಂತನ್ನ ನೋಡ್ಬೇಕು ಅಂತ ಅಂದ್ಲಂತೆ ಭಾವ ಕಾಗ್ದ ಬರ್ದಿದಾರೆ."

"ಹೌದಾ ? ಏನಾಗಿದೆಯಂತೆ ? ಎಷ್ಟು ದಿನದಿಂದ ಹುಷಾರಿಲ್ಲ ?"

"ಸಕ್ಕರೆ ಖಾಯಿಲೆಯಂತೆ ಸುಸ್ತಾಗಿ ಬಿಟ್ಟಿದಾಳಂತೆ"

"ಮದುವೆ ಮಾತಾಡುಕ್ಕೆ ಕರೆಸ್ತಾರೆ ಅಂತ ಅಂದ್ಕೊಂಡಿದ್ದೆ"

"ತಕ್ಷಣಕಕ್ಕೆ ಮದುವೆ ಮಾಡ್ಕೊಡಿ ಅಂತಂದ್ರೆ ಹೇಗಾಗುತ್ತೆ ? ಹಣ ಕಾಸು ಹೊಂದಿಸೋದು ಹೇಗೆ ? ಲಕ್ಷ್ಮಿ ಕೇಳಿದಳು.

"ನೀನು ಸುಮ್ನಿರು ಹೇಗೋ ನಡೆಯುತ್ತೆ." ಹೆಂಡತಿಯನ್ನು ಗದರಿಸಿದ.

"ಲಕ್ಷ್ಮಿ ಹೇಳಿದ್ದು ನಿಜ. ಶಾಂತ ಇನ್ನು ಚಿಕ್ಕೋಳು. ಹದಿನೈದು ಇನ್ನು ತುಂಬಿಲ್ಲ. ಅವರ ಅವಾಂತರಕ್ಕೆ ನೀನು ಒಪ್ಕೊಂಡು ಬಿಡ್ಬೇಡ."

"ಸುಂದರಕ್ಕನ ಆಸೆ ಏನಿದೆ ಅಂತ ಹೇಗೆ ಹೇಳೋದು? "

"ಕರ್ಕೊಂಡೋಗಿ ಸೊಸೆನ ತೋರಿಸ್ಕೊಂಡು ಬಾ, ಅಷ್ಟೆ, ಮದುವೆ ಮಾತಿಗೆ ಮಾತ್ರ ಏನೇ ಆದ್ರೂ ಒಪ್ಕೋಬೇಡ."

"ಹಾಗಾದ್ರೆ ನೀನೂ ಬಾ ನಮ್ಮ ಜೊತೆಗೆ"

"ನಾನು ಬರಲ್ಲ, ಇಲ್ಲಿ ಲಕ್ಷ್ಮಿ ಒಬ್ಳೇ ಆಗ್ತಾಳೆ. ಬೇಕಾದ್ರೆ ಲಕ್ಷ್ಮಿನ ಜೊತೆಗೆ ಕರ್ಕೊಂಡ್ಹೋಗು."

"ಬೇಡ ಬೇಡ ನಾವಾದ್ರೆ ಎರಡು ದಿನಗಳಲ್ಲಿ ವಾಪಸ್ಸು ಬಂದು ಬಿಡ್ತೀವಿ ಶಾಂತಂಗೆ ಸಿದ್ಧವಾಗಿರುಕ್ಕೆ ಹೇಳಿ. ಹಾಗೇ ಏನೇನು ಮಾತಾಡ್ಬೇಕು ಹೇಗಿರ್ಬೇಕು ಅಂತ ಹೇಳಿಕೊಟ್ಬಿಡಿ."

"ಹೌದು, ಶಾಂತಂಗೆ ಸ್ವಲ್ಪ ತಯಾರಿಬೇಕೇ ಬೇಕು. ಇಲ್ದಿದ್ರೆ ಏನೇನೋ ಆಡಿ ಬಿಡ್ತಾಳೆ. ಮನೇಲಿ ದೊಡ್ಡೋರ ಮಧ್ಯೆ ಕೂತು ಕಾಲ ಕಳೀತಾಳೆ. ವಿಪರೀತ ಮಾತಾಡ್ತಾಳೆ."

"ನೀನು ಸುಮ್ನಿರು ಲಕ್ಷ್ಮಿ. ಏನೋ ಹುಡುಗು ಬುದ್ಧಿ, ನಾನು ಅವಳಿಗೆ ತಿಳುವಳಿಕೆ ಹೇಳ್ತೀನಿ."

"ಅದೇನು ಮಾಡ್ತೀರೋ ಮಾಡಿ ನಾಡಿದ್ದು ಬೆಳಿಗ್ಗೆ ರೈಲಿಗೆ ಹೊರಟ್ರೆ, ಸಾಯಂಕಾಲದ ಹೊತ್ತಿಗೆ ತುಮಕೂರನ್ನು ಸೇರಬಹುದು.

"ಅವಳ ಹತ್ರ ಒಳ್ಳೆ ಸೀರೆಗಳಿಲ್ಲ ರವಿಕೆಗಳಿಲ್ಲ"

"ನಾನು ನಾಳೇನೇ ಪೇಟೇಗೆ ಹೋಗಿ ಒಂದೆರಡು ಸೀರೆಗಳನ್ನು ಕೊಡ್ಕೊಂಡು ಬರ್ತೀನಿ ನೀನು ಇವತ್ತೇ ರವಿಕೆಗಳನ್ನು ಹೊಲೆದು ಬಿಡು. ಹಾಗೇ ಪೇಟೆಯಿಂದ ಏನಾದ್ರೂ ಸಾಮಾನುಗಳು ಬೇಕಾಗಿದ್ರೆ ಪಟ್ಟಿ ಬರೆದಿಡು ಒಟ್ಟಿಗೇ ತಂದು ಬಿಡ್ತೀನಿ."

ಹಣಕ್ಕೇನು ಮಾಡ್ತೀಯೋ ಗುಂಡಣ್ಣ. ಕೂಲಿಯೋರು ಬಂದು ಹೋದ ಹಾಗಿತ್ತು"

"ಅವರದ್ದೆಲ್ಲಾ ಚುಕ್ತಾ ಆಯಿತು. ನಾಳೆ ಗೋವಿಂದ ಶೆಟ್ಟರ ಹತ್ರ ಸ್ವಲ್ಪ ಸಲ ತರ್ತೀನಿ ಖಂಡೇರಾಯನ ಜವುಳಿ ಅಂಗಡೀಲಿ ಸೀರೆಗಳನ್ನು ತರ್ತೀನಿ ಹೇಗೋ ಆಗುತ್ತೆ. ನೀನು ಚಿಂತಿಸ್ಬೇಡ ನಾನು ಸಂಧ್ಯಾವಂದನೆ ಮಾಡಿ ಬರ್ತೀನಿ ಅಡಿಗೆ ಆಗಿದ್ರೆ ಎಲೆ ಹಾಕಿ ಯಾಕೋ ಇವತ್ತು ಸ್ವಲ್ಪ ಆಯಾಸ ಆಗಿದೆ."

"ಅದಕ್ಕೇ ನಾನು ಹೇಳೋದು." ಲಕ್ಷ್ಮಿಯ ಮಾತುಗಳನ್ನು ಕೇಳಿಸಿಕೊಳ್ಳಲು ಶಾಸ್ತ್ರಿ ಅಲ್ಲಿ ನಿಂತಿರಲಿಲ್ಲ ಬಚ್ಚಲು ಮನೆಗೆ ನಡೆದ."

* * *

"ಹದಿನಾರು ಮೊಳದ ಸೀರೆಗಳನ್ನು ತಂದಿದೀರಲ್ಲ. ಆರುಗಜದ ಈಗಿನ ಕಾಲದೋರು ಉಟ್ಟುಕೊಳ್ಳೋ ಥರದ ಹೊಸ ಸೀರೆಗಳನ್ನು ತರಬೇಕಾಗಿತ್ತು." ಲಕ್ಷ್ಮಿ ಅಸಹನೆಯಿಂದ ಆಕ್ಷೇಪಣೆ ಮಾಡಿದಳು.

"ಏನಾಗಿದೆ ಈ ಸೀರೆಗಳಿಗೆ ಅಂಗಡಿಯವನು ಚೆನ್ನಾಗಿದೆ ಅಂತ ಆರಿಸಿ ಕೊಟ್ಟ. ಅವಳಿಗಾಗ್ದೇ ಇದ್ರೆ ನೀನು ಉಟ್ಕೋ."

"ಈಗ ನಂಗೇನು ಅಗತ್ಯವಿದೆ ? ನಿಮ್ಮ ಜೊತೆ ಬರ್ತಾ ಇರೋಳು ಅವಳು ಅವಳಿಗೆ ಒಪ್ಪುವಂಥ ಸೀರೆಗಳನ್ನು ತರಬೇಕಾಗಿತ್ತು ಅಂತಂದೆ."

"ಅದೆಲ್ಲಾ ನಂಗೇನು ಗೊತ್ತಾಗುತ್ತೇ ನೀನು ಮೊದ್ಲು ಹೇಳುಲ್ಲ, ಆಮೇಲೆ ಕೊಂಕು ಮಾತಾಡ್ತೀಯ ತಂದದ್ದಾಗಿದೆ ಏನ್ಬೇಕಾದ್ರೂ ಮಾಡ್ಕೋಪ್ಪಾ."

"ತರೋದು ಇಂಥ ಪದಾರ್ಥಗಳು ಏನಾದ್ರೂ ಆಡಿದ್ರೆ ಮೂಗಿನ ತುದೀಲೇ ಕೋಪ ಈಗಿನ ಕಾಲಕ್ಕೆ ತಕ್ಕಂತೆ ಚಿಕ್ಕ ಹುಡುಗೀರು ಹುಟ್ಟುಕೊಳ್ಳುವಂಥ ನಾಜೂಕಾಗಿರುವ ಸೀರೆ ಬೇಕು ಅಂತ ಅಂಗಡಿಯುವನನ್ನು ಕೇಳಿದ್ರೆ ತೆಗೆದುಕೊಟ್ಟಿರೋನು.

"ನನ್ನನ್ನು ಈಗೇನ್ಮಾಡ್ಕೊಂತೀಯ ? ಸದಾ ಇದ್ದದ್ದೇ ನಿನ್ನ ಗೋಳು"

"ಹೋಗ್ಲೀ ಬಿಡು ಲಕ್ಷ್ಮಿ ತಂದದ್ದಾಗಿದೆ ಈಗ ಸುಮ್ಮನೇ ಯಾಕೆ ವಾದ? ವಾಪಸ್ಸಂತೂ ಕೊಡುಲ್ಲ. ನನ್ನತ್ರ ಎರಡು ಹಳೇ ರೇಷ್ಮೆ ಸೀರೆಗಳಿವೆ ನಾನು ಹೆಚ್ಚು ಉಟ್ಟಿಲ್ಲ. ಎಂಟು ಗಜದ ಸೀರೆ. ಎರಡು ಗಜದಷ್ಟನ್ನು ಕತ್ತರಿಸಿದರೆ ಆಯ್ತು. ಶಾಂತಂಗೆ

ಕೊಟ್ಟು ಬಿಡ್ತೀನಿ."

"ಬೇಡ ಅತ್ಗೇ. ಎರಡು ಗಜ ಕತ್ತರಿಸಿದರೆ ದಂಡ ಆಗುತ್ತೆ."

"ದಂಡ ಏನೂ ಆಗಲ್ಲ. ಪದ್ಮಿನಿಗೆ, ರಾಗಿಣಿಗೆ ಲಂಗಗಳನ್ನು ಹೊಲಿದು ಬಿಡು."

"ಈಗೇನು ಹಬ್ಬವೇ ಹರಿದಿನವೇ ? ಬೆಳೆಯೋ ಮಕ್ಕಳಿಗೆ ಈಗ ರೇಷ್ಮೆ ಲಂಗ ಯಾಕೆ ? ಮೂರು ದಿನಕ್ಕೆ ಮೇಲಾಗುತ್ತೆ. ಸುಮ್ಮನೇ ದಂಡ."

"ಎಲ್ಲಾ ದಂಡವೇ, ನಮ್ಮ ಬದುಕೇ ಒಂದು ದಂಡ. ಪಾಪ, ಅವನು ಹತ್ತು ಹದಿನೈದು ಮೈಲಿಯಷ್ಟು ಸೈಕಲ್ಲು ತುಳಿದು ಸುಸ್ತಾಗಿದ್ದಾನೆ. ಮೊದಲು ಅವನಿಗೆ ತಿಂಡಿಯೋ ಕಾಫಿಯೋ, ಏನಾದ್ರೂ ಕೊಡು. ನಾನೇ ಸೀರೆಗಳನ್ನು ಕತ್ತರಿಸಿ ಅಂಚು ಹೊಲೆದಿಡ್ತೀನಿ.

"ಎರಡೂ ಸೀರೆಗಳನ್ನು ಒಟ್ಗೇ ಕತ್ತರಿಸ್ಬೇಡಿ. ಸಧ್ಯಕ್ಕೆ ಒಂದೇ ಒಂದು ಸಾಕು ಹಾಗೇ ಶಾಂತನ್ನ ಒಂದ್ಮಾತು ಕೇಳಿ ಆಮೇಲೆ ಅವಳು ಉಟ್ಕೋಳ್ಳೋಲ್ಲ ಅಂತಂದ್ರೆ ಏನ್ಮಾಡೋದು?"

"ಅದೂ ದಿಟ, ಶಾಂತಾ ಬಾರೇ ಇಲ್ಲಿ," ಸಾತಕ್ಕ ಕರೆದಳು.

"ಏನತ್ತೇ....." ಶಾಂತ ರಾಗ ಎಳೆದಳು.

"ನನ್ನ ಪೆಟ್ಟಿಗೇಲಿ ನಾಲ್ಕು ರೇಷ್ಮೆ ಸೀರೆಗಳಿವೆ ತಗೊಂಡ್ಬಾ."

"ಯಾಕತ್ತೇ ? ಎಲ್ಲಿಗಾದ್ರೂ ಹೋಗ್ತಾ ಇದೀರಾ ?"

"ಆಮೇಲೆ ಹೇಳ್ತೀನಿ ಮೊದಲು ನಾನು ಹೇಳಿದ್ದನ್ನು ಮಾಡು." ಶಾಂತಳ ಹಿಂದೆ ಲಲಿತಳೂ ಓಡಿದಳು. ಇಬ್ಬರೂ ಸೇರಿ ಆ ಟ್ರಂಕನ್ನೆ ಎತ್ತಿಕೊಂಡು ಬಂದು ಸಾತಕ್ಕನ ಮುಂದಿಟ್ಟರು. ಪದ್ಮಿನಿ ರಾಗಣಿಯರೂ, ಅತ್ತೆಯ ಪಕ್ಕದಲ್ಲಿ ಕುಳಿತರು ಟ್ರಂಕಿನ ಚಿಲುಕವನ್ನು ತೆಗೆದಾಗ ಅದು ಕುಯ್ ಅಂತ ಸದ್ದು ಮಾಡಿತು. ಇಬ್ಬರೂ ಕಿಸಕ್ಕನೆ ನಕ್ಕರು. ಬಾಗಿಲನ್ನು ಮೇಲುಕ್ಕೆ ಎತ್ತುತ್ತಿದ್ದಂತೆಯೇ, ಇಬ್ಬರೂ ಬಗ್ಗಿ ಇಣುಕಿದರು.

"ಅತ್ಲಾಗೆ ಸರೀರಿ ಹೀಗೆ ಎಲ್ಲರೂ ಅದರ ಮೇಲೆ ಬಿದ್ರೆ ಹೇಗೆ ?"

"ನಿಮ್ಮ ಪೆಟ್ಟಿಗೇಲಿ ಏನೇನಿದೆ ಅಂತ ನೋಡ್ತೀವಿ ಅಷ್ಟೇ. "

"ಏನಿದೆ ಘನವಾದ ಆಸ್ತಿ ?" ಎನ್ನುತ್ತಾ ತನ್ನ ಬಳಿ ಇದ್ದ ಅಚ್ಚು ಕಟ್ಟಾಗಿ ಮಡಿಸಿಟ್ಟಿದ್ದ ಸೀರೆಗಳನ್ನು ಹೊರತೆಗೆದಳು.

"ನೋಡೇ ಶಾಂತಾ.... ಇದ್ರಲ್ಲಿ ನಿಂಗ್ಯಾವ ಸೀರೆ ಇಷ್ಟಾಂತ ಹೇಳು"

"ಯಾಕತ್ತೇ ನಂಗೀಗ ಸೀರೆ ಕೊಡ್ತೀದೀರಾ ? ನಂಗೆ ಯಾವುದೂ ಬೇಡ ನಿಮ್ಮ ಸೀರೆಗಳೆಲ್ಲಾ ತುಂಬಾ ದೊಡ್ಡದು."

"ಚಿಕ್ಕದು ಮಾಡಿ ಕೊಡ್ತಿನಿ. ನೀನು ರೇಷ್ಮೆ ಸೀರೆ ಉಟ್ಟರೆ ಹೇಗೆ ಕಾಣ್ತೀಯ

ಅಂತ ನಾನು ನೋಡ್ಬೇಕು.

"ಈ ಸೀರೆ ಯಾವ್ದೂ ಚೆನ್ನಾಗಿಲ್ಲ, ಬಣ್ಣವಾಗಿಲ್ಲ, ಹಳೇದಿದ್ದಾಗಿದೆ"

"ನನ್ನತ್ರ ಇರೋ ಸೀರೆಗಳೆಲ್ಲಾ ಇಂಥೋವೇ ನೀನು ಬೆಳ್ಳಗಿದೀಯ. ನಿಂಗೆ ಯಾವ ಬಣ್ಣವಾದ್ರೂ ಒಪ್ಪುತ್ತೆ. ಈ ಕಡ್ಡೀ ಅಂಚಿನ ಸೀರೆನ ತಗೋ

"ನಂಗೇ ನಂಗೆ........."ಲಲಿತ ಕೈ ಹಾಕಿ ಎಳೆದಳು.

"ತಡೀ ತಡೀ ಶಾಂತ ದೊಡ್ಡೋಳಲ್ವಾ ?" ಮೊದ್ಲು ಅವಳಿಗೆ ಆಮೇಲೆ ನಿಂಗೆ ಅಷ್ಟರಲ್ಲಿ ಲಲಿತ ಸೀರೆಯ ಮಡಿಕೆಗಳನ್ನು ಬಿಚ್ಚಿ ತನ್ನ ಮೈಗೆ ಸುತ್ತಿಕೊಂಡಿದ್ದಳು

"ಯಾಕೇ ಬಿಚ್ದೇ ? ಎಷ್ಟು ಓರಣವಾಗಿ ಮಡಿಸಿಟ್ಟಿದ್ದೆ ಎಲ್ಲಾ ಸುಕ್ಕು ಸುಕ್ಕಾಯ್ತು." ಲಲಿತ ಪೆಚ್ಚಾಗಿ ಸುತ್ತಿಕೊಂಡಿದ್ದ ಸೀರೆಯನ್ನು ಬಿಚ್ಚಿ ಟ್ರಂಕಿನೊಳಗೆ ಹಾಕಿದಳು.

"ನಂಗೆ ಈ ಸೀರೆ ಬೇಡ್ವೇ ಬೇಡ" ಶಾಂತ ಒರಟಾಗಿ ನುಡಿದಳು.

"ಸರಿ ಏನಾದ್ರೂ ಮಾಡ್ಕೋ ನಾಳೆ ನಿಮ್ಮಪ್ಪ ನಿನ್ನನ್ನ ನಿನ್ನತ್ತೆಯ ಮನೆಗ ಕರ್ಕೊಂಡು ಹೋಗ್ತಿದಾನೆ. ಒಳ್ಳೇ ಸೀರೇನ ಉಟ್ಕೊಳ್ಳಲಿ ಅಂತ ಕೊಡೋಕ್ಕೇ ಬಂದ್ರೆ, ನಿಂಗೆ ಅತೀ ಜಂಭ." ಸಾತಕ್ಕ ಸೀರೆಯನ್ನು ಮತ್ತೆ ಮಡಿಸಿ ಪೆಟ್ಟಿಗೆಯೊಳಗೆ ಜೋಡಿಸಿದಳು. ಶಾಂತ ಮಂಕಾದಳು.

"ಸುಂದರಕ್ಕನಿಗೆ ಹುಶಾರಿಲ್ವಂತೆ. ಮಲಗಿದಾಳಂತೆ ನಿನ್ನನ್ನ ನೋಡ ಬೇಕೂಂತ ಆಸೆ ಪಡ್ತಿದಾಳಂತೆ."

"ಅಲ್ಲಿ ಗೋಪೀನೂ ಇರ್ತಾನಾ ಅತ್ತೆ ?"

"ನಂಗೇನೇ ಗೊತ್ತು ? ಇಷ್ಟರ ಮೇಲೆ ಇದ್ದರೆ ಇದ್ದ.... ಹೇಗೂ ಮುಂದೆ ನಿನ್ನ ಗಂಡನಾಗುವವನು ತಾನೇ ?"

"ನಂಗೆ ನಾಚ್ಕೆ ಆಗುತ್ತೆ ನಾನು ಹೋಗುಲ್ಲ."

"ನಿಮ್ಮಪ್ಪ ಬೈತಾನೆ ಬಲವಂತವಾಗಿ ಎಳ್ಕೊಂಡು ಹೋಗ್ತಾನೆ."

"ಇವಳು ಹೋಗದಿದ್ರೆ ಬೇಡ ನಾನು ಹೋಗ್ತಿನಿ ಲಲಿತ ಎಂದಾಗ ಸಾತಕ್ಕ ಗೊಳ್ಳನೆ ನಕ್ಕಳು. ಶಾಂತ ರೇಗಿದಳು."

"ನೀನ್ಯಾಕೇ ನನ್ನ ಅತ್ತೆ ಮನೆಗೆ, ನನ್ನ ಬದಲಿಗೆ ಹೋಗ್ಬೇಕು ? ಕೋತಿ ಥರ ಎಲ್ಲಾದಕ್ಕೂ ಬಾಯಿ ಹಾಕ್ಕೊಂಡು ಬರ್ತಾಳೆ."

"ಅವ್ರು ನಂಗೂ ಅತ್ತೇನೇ ಅಲ್ವಾ ಅತ್ತೇ ?"

"ಸುಮ್ನೇ ಜಗಳ ಕಾಯ್ಬೇಡಿ, ಶಾಂತಾ ನೀನು ದೊಡ್ಡೋಳು. ಸಧ್ಯದಲ್ಲೇ ಮದುವೆಯಾಗಿ ಗಂಡನ ಮನೆಗೆ ಹೋಗೋಳು. ಅನುಸರಿಸಿಕೊಂಡು ಹೋಗೋದನ್ನ ಕಲೀಬೇಕು."

"ನಂಗೆ ಈಗ್ಲೇ ಮದ್ವೆ ಬೇಡ. ಹಾಗಂತ ಅಣ್ಣಂಗೆ ನೀವೇ ಹೇಳಿ" ಅವಳು

ಅತ್ತೆಯ ಕತ್ತಿಗೆ ಜೋತು ಬಿದ್ದು ನುಡಿದಳು.

"ಆಯ್ತು, ನಾನು ಹೇಳ್ತೀನಿ ಈಗ ನಿಂಗೋಸ್ಕರ ಒಂದು ಸೀರೇನ ಸ್ವಲ್ಪ ಕತ್ತರಿಸಿ, ಚಿಕ್ಕದನ್ನಾಗಿ ಮಾಡಿ ಕೊಡ್ತೀನಿ. ನಿಮ್ಮಮ್ಮ ಒಂದು ರವಿಕೇನ ಹೊಲಿದಿದ್ದಾಳೆ. ಬೆಳಗಿನ ರೈಲಿನ ಹೊತ್ತಿಗೆ ನೀನು ಬೇಗ ಎದ್ದು ಸಿದ್ಧವಾಗಬೇಕು. ನಿಮ್ಮಣ್ಣ ನಿಂಗೋಸ್ಕರ ಹೊಸಾ ಸೀರೆ ಸಹ ತಂದಿದಾನೆ."

"ನಮ್ಗೆಲ್ಲಾ ಹೊಸ ಬಟ್ಟೆ ಇಲ್ವಾ ?" ಲಲಿತ ಮೂತಿ ಉದ್ದ ಮಾಡಿದಳು.

"ನಿಮ್ಮ ಮದುವೆ ಹೊತ್ಗೆ ನಿಮ್ಗೂ ಹೊಸಾ ಸೀರೆ ತರ್ತಾನೆ." ಲಲಿತ ಅಸೂಯೆಯಿಂದ ಶಾಂತಳ ಕೈಯಲ್ಲಿದ್ದ ರೇಷ್ಮೆ ಸೀರೆಯನ್ನು ನೋಡಿದಳು. ತನಗೂ ಬೇಗ ಮದುವೆಯಾದರೆ, ಹೊಸಾ ಸೀರೆ ಬರುತ್ತದೆಂದು ಯೋಚಿಸಿದಳು.

ಎರಡೇ ದಿನಗಳಲ್ಲಿ ಶಾಸ್ತ್ರಿ ಮಗಳೊಂದಿಗೆ ಊರಿಗೆ ವಾಪಸ್ಸಾದ. ಅವನ ಮುಖದ ಮೇಲಿನ ವ್ಯಥೆಯ ಗೆರೆಗಳನ್ನು ಸಾತಕ್ಕ ಗಮನಿಸಿದಳು. ಅಕ್ಕನ ಸ್ಥಿತಿ ಹೇಗಿದೆ ಎಂದು ಕೇಳಲು ಹಿಂಜರಿದಳು. ಅವನಾಗಿಯೇ ಹೇಳಲಿ ಎಂದು ಕಾದಳು. ಪ್ರಯಾಣದ ಆಯಾಸವನ್ನು ಕಳೆದುಕೊಂಡು ಬಿಸಿ ಕಾಫಿಯನ್ನು ಕುಡಿದು ಸುಧಾರಿಸಿಕೊಂಡ ಮೇಲೆ ಶಾಸ್ತ್ರಿ ಮಾತಾಡಿದ.

"ಅಕ್ಕ ಅಂತೂ ತೀರಾ ಹಾಸಿಗೆಗೆ ಅಂಟಿ ಮಲಗಿಬಿಟ್ಟಿದ್ದಾಳೆ ಡಾಕ್ಟರು ಯಾವುದನ್ನು ಸರಿಯಾಗಿ ಹೇಳಿಲ್ಲವಂತೆ ಒಟ್ನಲ್ಲಿ ಸ್ಥಿತಿ ಗಂಭೀರವಾಗಿದೆಯಂತೆ ರೋಗ ಉಲ್ಬಣವಾಗಿದೆ ಒಂದುವಾರ ಗವರ್ನ್‌ಮೆಂಟ್ ಆಸ್ಪತ್ರೆಯಲ್ಲಿದ್ದಳಂತೆ. ಶಾಂತನ್ನ ಮಗ್ಗುಲಲ್ಲಿ ಕೂರಿಸ್ಕೊಂಡು ಏನೋ ಮಾತಾಡ್ತಿದ್ಲು. ಆದರೆ ಅಪ್ಪಿತಪ್ಪಿಯೂ ಮದುವೆ ಸುದ್ದಿಯನ್ನೆತ್ತಲಿಲ್ಲ ಯಾಕೆ ಅಂತ ಗೊತ್ತಾಗ್ಲಿಲ್ಲ."

"ಹೌದಾ ? ಯಾಕೋ.....?"

"ನಾನೂ ಕೇಳ್ಲಿಲ್ಲ ಸುಮ್ಮನಿದ್ಬಿಟ್ಟೆ. ಭಾವ ಕೂಡ ಮಂಕಾಗಿದ್ರು, ಹೆಣ್ಣು ಮಕ್ಕಳು ತಾಯಿಯನ್ನು ನೋಡಲೆಂದು ಬಂದಿದಾರೆ ಸ್ವಲ್ಪ ಅನುಮಾನಾನೇ."

"ಏನೋ ಹೀಗೆ ಹೇಳ್ತಿದೀಯ ?" ಸಾತಕ್ಕನ ದನಿ ನಡುಗಿತ್ತು.

"ನಾನು ಕಂಡಿದ್ದನ್ನು ಹೇಳ್ತೀದೀನಿ. ನೀನೂ ಹೋಗಿ ನಾಲ್ಕುದಿನ ಅಕ್ಕನ ಜೊತೇಲಿ ಇರೋದಾದ್ರೆ ಇದ್ದು ಬಾ. ನಿನ್ನನ್ನು ಬಾಳ ಕೇಳಿದ್ಲು."

"ನಿಂಜೊತೇನೇ ಬಂದಿದ್ರೆ ಚೆನ್ನಾಗಿತ್ತು. ಈಗ ಒಬ್ಳೇ ಹೇಗೆ ಹೋಗ್ಲೀ."

"ಪಾತು ಬರ್ತಾಳಾ ಕೇಳು. ಕಂಠೀನೂ ನಿಮ್ಮ ಜತೆಗೆ ಬರ್ತಾನೆ."

"ನಾನು ಅವರುಗಳ ಜೊತೇಲಿ ಹೋಗುಲ್ಲ. ನಂಗೆ ಸರಿಹೋಗಲ್ಲ."

"ಪಾತೂ, ಕಂಠಿ ಏನು ಹೊರಗಿನೋರಾ ? ಇಲ್ದಿದ್ರೆ ನಾನೇ ಮತ್ತೆ ನಿನ್ನ ಜೊತೆಗೆ ಬರಬೇಕಾಗುತ್ತೆ."

"ಹೋಗ್ಲಿ ಬಿಡು. ಆದರೆ ಹೊದ್ರಾಯ್ತು. ಇಲ್ದಿದ್ರೆ ಸುಮ್ಮನಿದ್ರಾಯ್ತು. ಸಾತಕ್ಕನೇ ಮಾತನ್ನು ನಿಲ್ಲಿಸಿದಳು ಅಡಿಗೆ ಮನೆಯಲ್ಲಿ ಶಾಂತ ತಾಯಿಯೊಡನೆ ಅಲ್ಲಿಯ ವಿಷಯಗಳನ್ನು ಹೇಳುತ್ತಿದ್ದಳು.

"ಅತ್ತೇನ ನೋಡಿದ್ರೆ ಹೆದರಿಕೆ ಆಗುತ್ತಮ್ಮ. ಸಿಕ್ಕಾಪಟ್ಟೆ ದಪ್ಪವಾಗಿ ಬಿಟ್ಟಿದಾರೆ. ಮಲಗಿದ್ದಲ್ಲೇ ಮಲಗಿರ್ತಾರೆ.

"ಕೂತು ಕೂತು ಮೈ ಬೆಳೆಸಿಯೇ ಈ ಖಾಯಿಲೇನ ಹೆಚ್ಚಿಸಿಕೊಂಡಿರೋದು ನಿನ್ನ ಇನ್ನೇನೇನು ಕೇಳಿದ್ರು?"

"ಓದನ್ಯಾಕೆ ಬಿಟ್ಟೆ ? ಸಂಗೀತಾನ ಯಾಕೆ ಕಲಿಯಲಿಲ್ಲ ಅಂತ ಕೇಳಿದ್ರು.

"ನಿಮ್ಮ ತಮ್ಮ, ನಮ್ಮನ್ನೆಲ್ಲಾ ಇಂಥಾ ಹಳ್ಳಿಗೆ ತಂದು ಕೆಡವಿದಾರೆ ಅಂತ ಹೇಳ್ಬೇಕಾಗಿತ್ತು." ಲಕ್ಷ್ಮಿ ರೋಷದಿಂದ ಹೇಳಿದಳು.

"ಹೋಗಮ್ಮ ಹಾಗೆಲ್ಲಾ ಹೇಳುಕ್ಕಾಗುತ್ತಾ ?"

"ಮನೇಲಿ ಯಾರ್‍ಯಾರಿದ್ರು ? ಗೋಪಾಲ ಇದ್ನಾ ?"

"ಹುಂ, ಇದ್ದ ಅಂತ ಕಾಣುತ್ತೇ "

"ನಿನ್ನನ್ನು ಮಾತ್ನಾಡಿಸ್ಲಿಲ್ವಾ ?"

"ಇಲ್ಲ, ಅತ್ತೆಯ ಹೆಣ್ಣು ಮಕ್ಕಳು ಮಾತ್ರ ಮಾತ್ನಾಡ್ಸಿದ್ರು"

"ಮದುವೆ ವಿಚಾರ ಏನದ್ರೂ ಕೇಳಿದ್ರಾ"

"ಅಣ್ಣನ ಹತ್ರ ಏನಾದ್ರೂ ಆಡಿದ್ರೋ ಏನೋ ನಂಗೊತ್ತಿಲ್ಲ

"ತೀರಾ ಮಲಗಿ ಬಿಟ್ಟಿದಾರೇನೋ ? ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ಒಂದು ವರ್ಷ ಮದುವೆ ಮಾತನ್ನಾಡುವಂತಿಲ್ಲ. ಅದಕ್ಕೆ ಸುಮ್ಮನಾಗಿದಾರೇನೋ ಅಂತ ತನ್ನಲ್ಲೇ ಅಂದುಕೊಂಡಳು ಅವರುಗಳು ಅಂದುಕೊಂಡಂತೆಯೇ ಆಗಿತ್ತು. ಒಂದೇ ವಾರದೊಳಗೆ ಸುಂದರಕ್ಕ ತೀರಿ ಹೋದಳು. ಇವರುಗಳಿಗೆ ವಿಷಯ ತಿಳಿ ದದ್ದೇ ಎರಡು ದಿನಗಳ ನಂತರ. ಗುಂಡಣ್ಣನ ತಮ್ಮ ಶ್ರೀನಿವಾಸನ ಮಗ ಕೇಶವ ಬಂದು ಸುದ್ಧಿಯನ್ನು ತಿಳಿಸಿದ." ಸಾತಕ್ಕ ಕಣ್ಣೀರು ಮಿಡಿದಳು.

"ಅಂತೂ ಹೊರಟೇ ಹೋದ್ಲು. ಕಡೇ ಸಾರಿ ನೋಡುಕ್ಕಂತೂ ಆಗ್ಲೇ ಇಲ್ಲ." ಮನದಲ್ಲೇ ವ್ಯಥೆ ತುಂಬಿಕೊಂಡಿತ್ತು. ಕೆಲವೇ ದಿನಗಳ ಹಿಂದೆ ಹೋಗಿ ಬಂದಿದ್ದನಾದ್ದರಿಂದ ಶಾಸ್ತ್ರಿ ಮತ್ತೆ ದಿನಾಕಾಲಕ್ಕೆಂದು ಹೊಗಲಿಲ್ಲ. ಅಕ್ಕನೇ ಇಲ್ಲದ ಮೇಲೆ ಹೋಗದೇ ಇದ್ದರೇನೀಗ ಎಂದುಕೊಂಡು ಪಾತು ಸಹ ಹೊರಡಲಿಲ್ಲ. ಕಂಠಿ ಒಬ್ಬನೇ ಹೊರಟ. ಸಾತಕ್ಕ ಅವನೊಂದಿಗೆ ಹೋಗುವುದಿಲ್ಲವೆಂದಳು.

* * *

"ಬೇಸಗೆ ರಜ ಕಳೆದು ಮತ್ತೆ ಶಾಲೆಗಳು ತೆರೆದಿದ್ದವು. ಶಿವಮೊಗ್ಗಾದ

ಹುಡುಗಿಯರ ಸ್ಕೂಲಿಗೆ ಲಲಿತಳನ್ನು ಏಳನೇ ಕ್ಲಾಸಿಗೆ ಸೇರಿಸಲಾಯಿತು. ರೈಲ್ವೇ ಪಾಸು ತೆಗೆಸಿಕೊಡಲಾಯಿತು. ಲಲಿತ ದಿನವೂ ರೈಲಿನಲ್ಲಿ ಸ್ಕೂಲಿಗೆ ಹೋಗಿ ಬರತೊಡಗಿದಳು. ಅದೇ ಸ್ಕೂಲಿನ ಹೆಡ್ ಮಾಸ್ತರರ ಹತ್ತಿರ ಮಾತನ್ನಾಡಿ ಶಾಂತಳನ್ನು ಎಲ್.ಎಸ್. ಪರೀಕ್ಷೆಗೆ ಕಟ್ಟಿಸುವ ಏರ್ಪಾಡು ಮಾಡಲಾಯಿತು. ಎಲ್.ಎಸ್. ಎಂದರೆ ಮಾಧ್ಯಮಿಕ ನಾಲ್ಕನೆ ತರಗತಿ. ಎಂಟನೇ ಕ್ಲಾಸು ಅದಕ್ಕೆ ಸಂಬಂಧಿಸಿದ ಪಠ್ಯ ಪುಸ್ತಕಗಳನ್ನೆಲ್ಲಾ ತರಿಸಿಕೊಡಲಾಗಿತ್ತು.

"ಈ ವರ್ಷದ ಎಲ್.ಎಸ್. ಪರೀಕ್ಷೆಗೆ ನಿನ್ನನ್ನ ಕಟ್ಟಿಸ್ತಾರೆ. ನೀನು ಚೆನ್ನಾಗಿ ಓದಿ ಪಾಸು ಮಾಡಬೇಕು. ಇಂಗ್ಲೀಷ್ ಹಾಗೂ ಗಣಿತವನ್ನು ನಾನು ಹೇಳಿ ಕೊಡ್ತೀನಿ. ಇನ್ನೆಲ್ಲವನ್ನು ನೀನೇ ಓದ್ಕೋಬೇಕು. ಗೊತ್ತಾಗ್ದೆ ಇದ್ರೆ ಕಂಠಿ ಮಾವನ ಮನೆ ರಾಜನ್ನ ಕೇಳು ಇಂಟರ್‌ಮೀಡಿಯಟ್ ಫೇಲಾಗಿ ಮನೇಲೇ ಕೂತಿದ್ದಾನೆ." ಶಾಸ್ತ್ರಿ ಎಂದ.

"ಥೂ, ಫೇಲಾದೋನ ಹತ್ರ ನಾನು ಪಾಠಾನ ಹೇಳಿಸ್ಕೋಳ್ಳಲ್ಲ. ನಾನೂ ಫೇಲಾಗಿ ಬಿಡ್ತೀನಿ ಅಷ್ಟೇ."

"ಫೇಲಾಗುವಷ್ಟು ದಡ್ಡ ಅವನಲ್ಲ. ಅಟೆಂಡೆನ್ಸ್ ಕಡಿಮೆ ಆದ್ದರಿಂದ ಪರೀಕ್ಷೆಗೆ ಕೂರಿಸಲಿಲ್ಲ. ಅಂತ ಹೇಳಿದ ಕಂಠಿ."

"ಬರೀ ಸುಳ್ಳು. ಇಂಗ್ಲೀಷ್‌ನಲ್ಲಿ ಫೇಲಾಗಿದಾನೆ ಅಂತ ಪಾತು ಹೇಳಿದ್ದಲ್ಲ."

"ಏನೋ ಒಂದು ಒಟ್ನಲ್ಲಿ ಕಾಲೇಜಿಗೆ ಹೋಗ್ತಿಲ್ಲ. ಇವೆಲ್ಲಾ ಅವನು ಓದಿರುವ ವಿಷಯಗಳೇ ಕೇಳಿದರೆ ಹೇಳ್ಕೊಡ್ತಾನೆ ಬೇಡದಿದ್ರೆ ಬೇಡ." ಶಾಸ್ತ್ರಿ ಒರಟಾಗಿ ನುಡಿದು ಅಲ್ಲಿಂದ ಸರಿದು ಹೋದ ಶಾಂತ ಪುಸ್ತಕಗನ್ನು ಹರಡಿಕೊಂಡು ಕುಳಿತಿದ್ದಳು. ಒಂದೂ ಅರ್ಥವಾಗುವಂತಿರಲಿಲ್ಲ. ಅವಳು ಓದಿದ್ದು ಕಲಿತಿದ್ದು ಹಿಂದಿ ಭಾಷೆಯಲ್ಲಿ. ಕನ್ನಡ ಸ್ವಲ್ಪ ಸ್ವಲ್ಪ ಬರುತ್ತಿತ್ತು.."

"ಅತ್ತೇ ನಿಮಗೆ ಕನ್ನಡ ಬರುತ್ತಲ್ಲ, ನೀವೇ ಹೇಳಿಕೊಡಿ."

"ನಂಗಿಂತ ಚೆನ್ನಾಗಿ ನಿಮ್ಮಮ್ಮಂಗೆ ಬರುತ್ತೆ. ಅವಳು ಎಲ್.ಎಸ್. ಪಾಸು ಮಾಡಿದಾಳೆ ಮಣಿ ಪೋಣಿಸಿದಂತೆ ಅಕ್ಷರಗಳನ್ನು ಬರೀತಾಳೆ."

"ಅವಳಿಗೆಲ್ಲಿ ಬಿಡುವಿರುತ್ತೆ ? ಕೇಳಿದ್ರೆ ಬೈತಾಳೆ ಅಷ್ಟೇ."

"ಏನೂ ಬೈಯುಲ್ಲ, ನೀನು ಓದಲಿ ಪಾಸು ಮಾಡಲಿ ಅನ್ನೋ ಆಸೆ ಅವಳಿಗಿರುಲ್ವೇ, ಮಧ್ಯಾಹ್ನದ ಹೊತ್ನಲ್ಲಿ ಹೇಳಿಸ್ಕೋ" ಅತ್ತೆ ಹಾಗೆ ಹೇಳಿದರೂ ಶಾಂತನಿಗೆ ಸಮಾಧಾನವಾಗಿರಲಿಲ್ಲ. ತಾಯಿಯನ್ನು ಪಾಠ ಹೇಳಿಕೊಡುವಂತೆ ಕೇಳಲಿಲ್ಲ.

"ಹಿತ್ತಲ ಗಿಡ ಮದ್ದಲ್ಲ ಅಂತ ಗಾದೇನೇ ಇದೆ. ನಾನು ಹೇಳಿಕೊಡುವ ಪಾಠ ನನ್ನ ಮಕ್ಕಳಿಗೇ ಬೇಕಿಲ್ಲ, ಇವಳನ್ನು ಸ್ಕೂಲಿಗೆ ಸೇರಿಸಿದ್ರೆ ಚೆನ್ನಾಗಿತ್ತು." ಲಕ್ಷ್ಮಿ

ಎಂದಳು.

"ಇವಳ ಓರಗೆಯವರೆಲ್ಲಾ ಹೈಸ್ಕೂಲ್ನಲ್ಲಿ ಓದ್ತಿದಾರೆ, ಇವಳು ಮಿಡ್ಲ್ ಸ್ಕೂಲ್ಗೆ ಸೇರ್ಕೊಂಡ್ರೆ ಆಡ್ಕೊಂಡು ನಗ್ತಾರೆ ಈ ವರ್ಷ ಕಳದ್ರೆ ಎಲ್.ಎಸ್. ಆಗುತ್ತೆ. ಆಮೇಲೆ ಮದುವೆ ಮಾಡಿ ಕಳಿಸ್ಕೊಟ್ರೆ ಅವಳ ಜವಾಬ್ದಾರಿ ಕಳೆಯುತ್ತೆ." ಹೊರ ಬಾಗಿಲಲ್ಲಿ ನಿಂತು ಮಾತುಗಳನ್ನು ಕೇಳಿಸಿಕೊಂಡಿದ್ದ ಕಂಠಿ ಒಳಗೆ ಬಂದು ನುಡಿದಾಗ, ಇಬ್ಬರೂ ಮುಜುಗರಗೊಂಡರು.

"ಏನಯ್ಯಾ ಗುಂಡಾಶಾಸ್ತ್ರಿ ಉಂಡು ಮಲಗಿಬಿಟ್ಯಾ? ಅಹಹಾ... ಗೇಲಿ ಮಾಡುತ್ತಾ ಮಲಗಿದ್ದ ಭಾಮೈದನನ್ನು ತಿವಿದು ಎಬ್ಬಿಸಿದ ಕಂಠಿ."

"ಹುಂ ಈಗ್ತಾನೇ ಉರುಳಿಕೊಂಡೆ ತೋಟಕ್ಕೆ ಹೋಗಬೇಕು. ಲಕ್ಷ್ಮೀ ಕಾಫೀ ಮಾಡಿಕೊಡು ಅಪರೂಪಕ್ಕೆ ಭಾವ ಬಂದಿದ್ದಾನೆ." ಶಾಸ್ತ್ರಿಯೂ ತಮಾಷೆಯಾಗಿ ನುಡಿದು ಎದ್ದು ಕೂತ. ಲಕ್ಷ್ಮಿ ಇಬ್ಬರಿಗೂ ಕಾಫಿಯನ್ನು ತಂದಿಟ್ಟಳು.

"ಮೀನಾಕ್ಷಿಗೆ ಸಂಗೀತ ಪಾಠವನ್ನು ಹೇಳಿಕೊಡಲು ಗುರುಗಳನ್ನು ಗೊತ್ತು ಮಾಡಿದೀನಿ ನರಸಿಂಹಯ್ಯ ಅಂತ. ಶಿವಮೊಗ್ಗಾದಲ್ಲಿದ್ದಾರೆ. ಯಾವುದೋ ಸ್ಕೂಲಲ್ಲಿ ಸಂಗೀತದ ಮೇಷ್ಟ್ರಾಗಿದಾರೆ. ಶನಿವಾರ ಸಾಯಂಕಾಲ ರೈಲ್ನಲ್ಲಿ ಬಂದು, ಭಾನುವಾರ ಸಾಯಂಕಾಲದವರೆಗೂ ಇದ್ದು ಪಾಠ ಹೇಳಿಕೊಟ್ಟು ಹೋಗ್ತಾರೆ. ತಿಂಗಳಿಗೆ ಎರಡು ರೂಪಾಯಿ ಫೀಸು. ಊಟ ತಿಂಡಿ ಕಾಫಿ ಎಲ್ಲಾ ಇಲ್ಲೇ, ಪಾಪ ಬಡವ ಮನೇ ತುಂಬ ಬರೀ ಹೆಣ್ಮಕ್ಕಳು. ನಮ್ಮಿಂದ ನಾಲ್ಕು ಕಾಸು ಸಂಪಾದನೆ ಆಗೋದಾದ್ರೆ ಆಗಲಿ ಅಂತ ಮಾಡ್ದೆ. ನೀನು ನಿನ್ನ ಹೆಣ್ಮಕ್ಕಳಿಗೆ ಪಾಠ ಹೇಳ್ಸು ಹಿಂದೆ ಮುಂದೆ ಯೋಚಿಸ್ಬೇಡ." ಶಾಸ್ತ್ರಿ ಗೊಂದಲಕ್ಕೊಳಗಾದ.

"ಯಾಕೋ ಮಂಕಾಗ್ಬಿಟ್ಟೆ ? ಯಜಮಾನಿತೀನ ಕೇಳ್ಬೇಕಾ? ಈಗ್ಲೇ ಕೇಳಿ ದ್ರಾಯ್ತು. ಲಕ್ಷ್ಮೀದೇವಿ.... ಸ್ವಲ್ಪ ಬರ್ತೀಯಾ?" ತಾನೇ ಕೂಗಿದ. ಶಾಸ್ತ್ರಿಗೆ ಇಷ್ಟ ವಾಗಲಿಲ್ಲ.

"ಅವಳನ್ನೇನು ಕೇಳೋದು ? ಹೆಣ್ಮಕ್ಳು ಸಂಗೀತ ಕಲೀತಾರೇ ಅಂತಂದ್ರೆ ನಂಗೂ ಸಂತೋಷವೇ. ನಡೀಲಿ ಸಂಗೀತಾಭ್ಯಾಸ ನಮ್ಮಿಂದ ಒಬ್ಬ ಬ್ರಾಹ್ಮಣಂಗೆ ಸಹಾಯ ಆಗುತ್ತೆ ಅಂತಂದ್ರೆ ಅದನ್ನು ಬೇಡಾಂತ ಯಾಕನ್ನಲಿ ?"

"ಅದಪ್ಪಾ ಮಾತು. ಈ ಭಾನುವಾರ ದಿನಾ ಚೆನ್ನಾಗಿದೆ ಅವತ್ನಿಂದ ಪಾಠವನ್ನು ಪ್ರಾರಂಭ ಮಾಡುಕ್ಕೇ ಹೇಳಿ ಬಂದಿದೀನಿ. ಸರಿ ನಾನಿನ್ನು ಬರ್ತೀನಿ"

"ಹುಂ, ನಾನೂ ಎದ್ದೆ ತೋಟದ ಕಡೆಗೆ ಹೋಗ್ಬೇಕು"

"ಹೇಗಿದೆ ನಿನ್ನ ವ್ಯವಸಾಯ ? ಪರವಾಗಿಲ್ವೋ ?"ಬೆನ್ನಮೇಲೆ ಕೈಯನ್ನಿಟ್ಟ.

"ಪರವಾಗಿಲ್ಲ, ನಾಟಿ ಕೆಲಸ ಪ್ರಾರಂಭವಾಗ್ಬೇಕು ತೋಟದಲ್ಲಿ ತರಕಾರಿಗಳ

ಬೀಜಗಳನ್ನು ಹಾಕಿಸಿದೀನಿ. ಬಾಳೆಯ ಗಿಡ ನೆಡ್ಸಿದೀನಿ."

"ಭೇಷ್! ಆದ್ರೂ, ನಿನ್ನ ಪಕ್ಕದ ಮನೆಯವನ ಸಲಹೆಯನ್ನು ಕೇಳು, ಅವನು ಕೃಷಿಯಲ್ಲಿ ನುರಿತವನು ಈ ಹಳ್ಳೀಲಿ ಅವನನ್ನು ಹೊಗಳ್ದೇ ಇರೋರು ಯಾರಿಲ್ಲ."

"ಹುಂ, ನಾನೂ ಅವನ ಗದ್ದೆ, ತೋಟಗಳನ್ನು ನೋಡಿದೀನಿ, ಆತನೇ ಕರ್‍ಕೊಂಡ್ಹೋಗಿ ಎಲ್ಲವನ್ನು ತೋರಿಸಿದ. ಎಲ್ಲಾ ಅಚ್ಚು ಕಟ್ಟಾಗಿದೆ ನೆಲಬಾವಿಗೆ ಪಂಪು ಹಾಕ್ಸಿದಾನೆ ಉಳೋದಿಕ್ಕೆ ಟ್ರಾಕ್ಟರನ್ನಿಟ್ಟುಕೊಂಡಿದಾನೆ. ಬಹಳ ಶಿಸ್ತಿನಿಂದ ಕೆಲಸಗಳನ್ನು ಮಾಡಿಸ್ತಾನೆ. ಆತನಿಂದ ಕಲಿಯೋದು ಬೇಕಾದಷ್ಟಿದೆ.

"ಅದಕ್ಕೇ ಹೇಳ್ದೆ, ಈ ಕಸುಬಿಗೆ ನೀನು ಇನ್ನು ಹೊಸಬ ಹಾಗೇ ನೀನು ಒಂದ್ಹತ್ತು ಎಮ್ಮೆಗಳನ್ನು ಹೊಡೆಸ್ಕೊಂಡು ಬಾ ಹಾಲಿನ ವ್ಯಾಪಾರದಲ್ಲಿ ಆದಾಯ ಹೆಚ್ಚು. ಹೋಟೆಲ್ಲಿನವರು ಚೆನ್ನಾಗಿ ದುಡ್ಡು ಕೊಟ್ಟು ಹಾಲನ್ನು ಕೊಂಡುಕೊಳ್ತಾರೆ."

"ಸಧ್ಯಕ್ಕೆ ಬೇಡ ಕಂಠಿ ಭಾವ ಕೊಟ್ಟಿಗೆ ಸರಿಯಾಗಿಲ್ಲ, ಈಗ ಇರೋ ಎರಡು ಹಸು, ಅವುಗಳ ಕರುಗಳನ್ನು ನೋಡ್ಕೋಳ್ಳೋದೇ ಸಾಕಾಗಿದೆ.

"ಕಷ್ಟ ಪಡಬೇಕಾಯ್ಯ, ಕಷ್ಟಪಟ್ಟರೆ ಫಲವುಂಟು ; ಕೈಕೆಸರಾದರೆ ಬಾಯಿ ಮೊಸರು ಅಂತ ಪ್ರೈಮರಿ ಸ್ಕೂಲ್ನಲ್ಲಿ ಪಾಠ ಓದಿದ್ಯೋ ಇಲ್ವೋ ? ನಮ್ಮ ಮನೆಗೆ ಇನ್ನೂ ಎರಡು ಎಮ್ಮೆಗಳನ್ನು ಹೊಡೆಸ್ಕೊಂಡು ಬರ್ತೀದಿನಿ, ಹಾಗೇ ನಿಮ್ಮ ಮನೆಗೂ ಎರಡು ಎಮ್ಮೆಗಳನ್ನು ಹೊಡೆಸ್ಕೊಂಡು ಬರ್ತೀನಿ. ಧಂಡಿಯಾಗಿ ಕರಾವು ಆಗುತ್ತೆ. ನಿನ್ನ ಮಗಳ ಮದುವೆ ಸಮಯಕ್ಕೇ ಬರೋರು ಹೋಗೋರು ಹೆಚ್ಚಾಗ್ತಾರೆ. ಬೀಗರನ್ನು ಮೆಚ್ಚಿಸ್ಬೇಕಯ್ಯ."

"ಸರಿ ನೀನು ಇಷ್ಟು ಹೇಳಿದ್ಮೇಲೆ, ನಾನ್ಯಾಕೆ ಬೇಡ ಅನ್ನಲ್ಲಿ ? ನಿನಗೆ ಅನುಭವವಿದೆ. ಚೆನ್ನಾಗಿ ಹಾಲು ಕರೆಸುವ ಎಮ್ಮೆಗಳನ್ನು ಹೊಡೆಸ್ಕೊಂಡು ಬಾ." ಒಪ್ಪಿಗೆಯನ್ನು ಕೊಟ್ಟ.

"ಮಗಳ ಮದುವೆ ವಿಷಯ ಎಲ್ಲೀವರೆಗೆ ಬಂತು ?"

"ಸಧ್ಯಕ್ಕೆ ಯಾವ ಮಾತು ಇಲ್ಲ. ವರ್ಷ ಕಳೀಬೇಕು"

"ಅದೇ ಗಂಡು ಆಗಬೇಕು ಅನ್ನೋ ಪಟ್ಟು ಯಾಕೆ ? ನಮ್ಮೂರ ಕಡೆ ಬೇಕಾದಷ್ಟು ಗಂಡುಗಳಿವೆ."

"ನಮ್ಮಮ್ಮ ಸುಂದರಕ್ಕ ಮೊದಲೇ ಮಾತಾಡ್ಕೊಂಡು ಶಾಂತನ್ನ ಗೋಪಾಲಂಗೆ ತಂದ್ಕೋಬೇಕು ಅಂತ ಗೊತ್ತು ಮಾಡ್ಕೊಂಡಿದಾರೆ. ಅವರಾಸೆಯಂತೆಯೇ ಆಗಲಿ, ನಾನು ತಪ್ಪಿಸಲ್ಲ. ಅದು ನ್ಯಾಯವೂ ಅಲ್ಲ."

"ಸರಿ ಬಿಡು, ಅದೃಷ್ಟವಂತನಯ್ಯ ನೀನು. ಸುನಾಯಾಸವಾಗಿ ಒಬ್ಬ ಅಳಿಯನನ್ನು ಹುಡುಕಿಕೊಂಡು ಬಿಟ್ಟೆ. ನಿನಗೆ ಅಭ್ಯಂತರವಿಲ್ಲದಿದ್ರೆ ಹೇಳು ಲಲಿತ ನಮ್ಮ

ಮನೆಸೊಸೆಯಾಗಿ ಬರ್ತಾಳೆ"

"ಈಗ್ಲಿಂದ ಆ ಮಾತ್ಯಾಕೆ ? ಆ ಕಾಲ ಬಂದಾಗ ಮಾತೊಡೋಣ ಲಲಿತ ಇನ್ನಾ ತುಂಬಾ ಚಿಕ್ಕೋಳು."

"ನಮಗೂ ಅವಸರವಿಲ್ಲ, ನಮ್ಮ ಮೀನಾಕ್ಷಿಗೆ ಮೊದಲು ಮದುವೆಯಾಗ ಬೇಕು. ಅವಳಿಗೂ, ಹದಿನಾರು ತುಂಬಿತು. ಅವಳದ್ದು ಜೇಷ್ಠಾ ನಕ್ಷತ್ರ ಹುಡುಗ ಹಿರಿಯ ಮಗನಾಗಿರಬೇಕು. ಅಥವಾ ಒಬ್ಬನೇ ಮಗನಾಗಿರಬೇಕು ಇನ್ನಾಲ್ಕು ವರ್ಷ ಬಿಟ್ಟು ರಾಜನಿಗೆ ಮದುವೆ ಮಾಡೋಣ ಅಂತ. ನಿನಗೆ ನಾಲ್ಕು ಜನ ಹೆಣ್ಣು ಮಕ್ಕಳು ನಿನ್ನ ಜವಾಬ್ದಾರೀನ ನಾನೂ ಸ್ವಲ್ಪ ಕಡಿಮೆ ಮಾಡೋಣ ಅಂತ. ನೀನು ಹೂಂ ಅನ್ನು. ಈಗ್ಲೇ ಪಕ್ಕ ಮಾಡ್ಕೋಳ್ಳೋಣ."

"ರಾಜನ್ನ ಒಂದ್ಮಾತು ಕೇಳ್ಬೇಡ್ವೆನಯ್ಯಾ ?"

"ರಾಜ ಒಪ್ದೇ ಇರೋ ಮಾತೇ ಇಲ್ಲ. ಲಲಿತ ಅರಗಿಣಿ ಇದ್ದ ಹಾಗೆ ಇದಾಳೆ ನಂಗೆ ಚಿಕ್ಕ ವಯಸ್ಸಾಗಿದ್ದಿದ್ರೆ, ನಾನೇ ಅವಳನ್ನು ಹಾರಿಸ್ಕೊಂಡು ಹೋಗಿ ಮದುವೆಯಾಗ್ತಿದ್ದೆ. ಹಲ್ಲುಗಳನ್ನು ತೋರಿಸುತ್ತಾ ಕಂಠಿ ನಕ್ಕಾಗ ಶಾಸ್ತ್ರಿಗೆ ಅಸಹ್ಯವೆನಿಸಿತು.

"ನಮ್ಮ ಮನೇಲಿ ಇಂಥ ಕೊಳಕು ಮಾತುಗಳನ್ನಾಡಬೇಡ. ಬರೀ ಹೆಂಗಸರು ಇರುವ ಮನೆ. ಕೇಳ್ಸಿದ್ರೆ ನಿನ್ನ ಬಗ್ಗೆ ಏನಂದುಕೊಳ್ತಾರೆ ? ಅಲ್ಲದೇ ನನ್ನ ಮಗಳ ಬಗ್ಗೆ ನನ್ನ ಎದುರಿಗೇ ಹೀಗೇ ಮಾತಾಡ್ತೀಯಲ್ಲ. ನಾಚಿಕೆ ಆಗಬೇಕು ನಿನಗೆ."

"ತಮಾಷೆ ಮಾಡ್ದೆ ಕಣಯ್ಯ.... ನಿನ್ನ ಮಗಳ ರೂಪವನ್ನು ಹೊಗಳಿದೆ ನಿನ್ನ ತಂಗಿ ರೂಪವಂತೆಯಾದ್ದರಿಂದಲೇ ನಾನು ಅವಳನ್ನು ಮದುವೆಯಾದದ್ದು. ಆ ವಯಸ್ನಲ್ಲಿ ಅವಳು ಲಲಿತಂಗಿಂತ ಚೆನ್ನಾಗಿದ್ಲು."

"ಅವಳನ್ನು ವಯಸ್ಸಿಗೆ ಮೊದಲೇ ಮದುಕಿ ಮಾಡ್ದೋನು ನೀನು ಅವಳನ್ನು ಹೀರಿ ಹಿಪ್ಪೆ ಮಾಡಿದೀಯ."

"ಅವಳು ರೂಪವತಿ, ನಾನು ರಸಿಕ.... ಹೆಂಡತಿಯನ್ನು ಹೇಗೆ ಇಟ್ಟುಕೊಳ್ಬೇಕೋ ಹಾಗೆ ಇಟ್ಕೊಂಡಿದೀನಿ ಪ್ರೀತಿಸ್ತೀನಿ, ಮುದ್ದಿಸ್ತೀನಿ, ರಾಣಿ ತರಹ ಇದಾಳೆ ಅವಳಿಗೇ ಯಾವ ಶಿಕಾಯತ್ತು ಇಲ್ಲ, ಇನ್ನು ನಿಂದೇನಯ್ಯ ? ಗಂಡ ಹೆಂಡತಿಯರ ಸಂಬಂಧ ಹೇಗೆ ಅಂತ ನಿಂಗೂ ಗೊತ್ತಿದೆ. ನೀನೇನು ಕಡಿಮೇ ರಸಿಕನೇ? ನಿಂಗೂ ಐದು ಮಕ್ಕಳು ಹುಟ್ಟಿವೆ. ಏನು ಸುಮ್ನೆ ಹುಟ್ಟಿ ಬಿಟ್ವಾ ?" ಚುಡಾಯಿಸಿದ.

"ನೀನು ಎದ್ಹೋಗು ಇಲ್ದಿದ್ರೆ ಬೈಸ್ಕೋತೀಯ."

"ಸರಿ, ನಿನ್ನ ಮಡಿವಂತಿಕೆಗಿಷ್ಟು ಮನೇಲಿ ಇದನ್ನೆಲ್ಲ ಮಾತನಾಡುಕ್ಕೆ ಇಷ್ಟವಿಲ್ಲದಿದ್ರೆ ಹೇಳು. ನಿನ್ನ ಜೊತೆ ತೋಟಕ್ಕೆ ಬರ್ತೀನಿ."

"ಬೇಡ ತೋಟದಲ್ಲಿ ಹೆಣ್ಣಾಳುಗಳಿರ್ತಾರೆ ನೀನು ಹೀಗೆಲ್ಲಾ ಮಾತಾಡಿದ್ರೆ

ನಾಳೆಯಿಂದ ಕೆಲಸಕ್ಕೇ ಬರುಲ್ಲ."

"ಕೆಲಸದಾಳುಗಳಿಗೆ ಹೆದರ್ತೀಯಲ್ಲೋ ಗುಂಡಣ್ಣ, ಅವರೆಲ್ಲಾ ಎಂಥೋರು ಅಂತ ನಿಂಗೆ ತಿಳೀದು. ಆ ಹೆಣ್ಣಾಳುಗಳೂ ಗಂಡಾಳುಗಳೊಡನೆ ಎಂತೆಂಥ ಮಾತ್ನಾಡ್ತಾರೆ ಅಂತ ನಿಂಗೇನು ಗೊತ್ತು. ?"

"ಗೊತ್ತಾಗಿ ನಂಗೇನೂ ಆಗ್ಬೇಕಾಗಿಲ್ಲ, ನಂಗೆ ಹೊತ್ತಾಯ್ತು, ಮಳೆ ಬಂದ್ರು ಕೆಸರಾಗಿದ್ರೆ ನಡೆಯೋದೇ ಕಷ್ಟ ಆಗುತ್ತೆ." ಶಾಸ್ತ್ರಿ ಶಲ್ಯವನ್ನು ಒದರಿ, ಹೆಗಲ ಮೇಲೆ ಹಾಕಿಕೊಂಡು, ಚಪ್ಪಲಿಗಳನ್ನು ಮೆಟ್ಟಿ, ಬೀದಿಗೆ ಇಳಿದ. ಕಂಠಿ ಹಿಂತಿರುಗಿ ನೋಡುತ್ತಾ ತಾನೂ ಹೊರಬಾಗಿಲನ್ನು ದಾಟಿದ.

* * *

"ವೈಕುಂಠ ಮಗೀಗೆ ಹಾಲು ಕುಡಿಸ್ಕೊಂಡು ಬರ್ತೀನಿ ಅಂತ ಹೋಗಿ ಎಷ್ಟೇ ಹೊತ್ತಾಯ್ತು. ಸಿಕ್ಕಿದ್ದೇ ಸಮಯ ಅಂತ ಎಲ್ಲಿ ಪಟ್ಟಾಂಗ ಹೊಡೀತಾ ಕೂತಿದಾನೋ ಹೋಗೇ ಲಲಿತಾ ನೋಡ್ಕೊಂಬಾರೇ"

"ಹೋಗೀ ಅತ್ತೆ ನಂಗೆ ಸೊಂಟ ನೋಯ್ತಿದೆ."

"ಅಹಹಾ.. ಹುಟ್ಟಿಲ್ಲ, ಬೆಳೆದಿಲ್ಲ, ಸೊಂಟ ನೋವಂತೆ ನಿಮ್ಮಣ್ಣಂಗೆ ಹೇಳಿದ್ರೆ ಸೊಂಟಾನ ಸರಿ ಮಾಡ್ತಾನೆ, ಕರೀಲಾ ?"

"ಏನ್ರೇ ಅದು ? ಎದ್ದು ಬರ್ಲಾ ?" ಶಾಸ್ತ್ರಿ ಕುಳಿತಲ್ಲಿಂದಲೇ ಗುಡುಗಿದ. ಲಲಿತ ಹೊರಕ್ಕೆ ಓಡಿದಳು. ರಸ್ತೆಯ ಬದಿಯಲ್ಲಿದ್ದ ಒಂದು ಮರದ ಕೆಳಗೆ ವೆಂಕಟೇಶನನ್ನು ಕೂರಿಸಿ, ಕಪಿ ಚೇಷ್ಟೆ ಮಾಡಿ ನಗಿಸುತ್ತಾ, ಸ್ವಲ್ಪ ಸ್ವಲ್ಪವೇ ಹಾಲನ್ನು ಕುಡಿಸುತ್ತಿದ್ದ ವೈಕುಂಠನನ್ನು ಕಂಡು ನಿಂತಳು.

"ಬೇಗ್ಬೇಗ ಕುಡುದ್ಬುಡಿ ಅಯ್ನೋರಾ....ದ್ಯಾವ್ರೂ ಬತ್ತೈತೆ ಧಕ್ಕನಕ ಧಕ್ಕನಕ ಅಂತ ಕುಣ್ಯೋವಾ? ಅಂತ ಕುಣಿದು ಕುಪ್ಪಳಿಸುತ್ತಿದ್ದ ಲಲಿತನ್ನ ಕಂಡು ಸುಮ್ಮನೇ ನಿಂತ.

" ವೈಕುಂಠಾ, ಮಗೂನ ಕರ್ಕೊಂಡ್ಬರಬೇಕಂತೆ. ಅಮ್ನೋರು ಕರೀತಿದಾರೆ."

"ಓ... ಬರ್ತೀ ಅಯ್ನೋರಾ. ಅಮ್ನೋರು ಕರೀತಾವ್ರಂತೆ ಇನ್ನು ವಸಿ ಐತೆ. ನೀವು ಓಗಿ ನಾವು ಈಗ ಬಂದ್ಕೋ." ಲಲಿತ ಮತ್ತೆ ಓಡಿದ್ದಳು.

"ಅದ್ಯಾಕೆ ಓಡ್ಬಂದೆ ? ಯಾಪಾಟಿ ಏದುಸಿರು ಬಿಡ್ತೀದಿಯಾ ?"

"ನೀವೇ ಅಂದ್ರಲ್ಲ ಅತ್ತೆ ಬೇಗ್ಹೋಗಿ ಬೇಗ್ಬಾ ಅಂತ...."

"ಸರಿ ಸರಿ, ನನ್ನಾತನ್ನ ನನಗೇ ತಿರುಗಿಸ್ತೀಯಾ ?"

"ಏನೇ ಲಲಿತಾ.... ಅತ್ತೇನ್ಯಾಕೇ ಸತಾಯಿಸ್ತಿದ್ದೀಯಾ ? ಹೋಗು ಓದ್ಕೋ ಹೋಗು." ಲಲಿತ ಮುಖ ಸಿಂಢರಿಸಿದಳು.

"ಹೋಗಮ್ಮ, ಇವತ್ತು ಭಾನುವಾರ ಇವತ್ಯಾರು ಓದ್ತಾರೆ?"

"ತಲೆ ಹರಟೆ ಮಾತು ಮಾತಿಗೆ ಬೆಳೆಸೋದನ್ನು ಮಾತ್ರ ಚೆನ್ನಾಗಿ ಕಲ್ತಿದೀಯ, ಭಾನುವಾರ ಓದ್ಬಾರ್ದು ಅಂತ ಎಲ್ಲೂ ಬರೆದಿಲ್ಲ. ಸೋಮಾರಿತನ ನಿಂಗೆ, ಸುಮ್ನೇ ಹೋಗು. ಓದ್ಕೋ."

"ವೈಕುಂಠ ಎಲ್ಲಿ ? ಎಲ್ಲಿ ಅಡಗಿ ಹೋದ...." ಶಾಸ್ತ್ರಿ ಆರ್ಭಟಿಸಿದ.

"ಮಗೀನ ತಿರುಗಾಡಿಸ್ಕೊಂಡು ಹಾಗೇ ಹಾಲನ್ನು ಕುಡಿಸ್ಕೊಂಡು ಬಾ ಅಂತ ನಾವೇ ಕಳ್ಸಿದೀವಿ.... ಈಗ ಬಂದು ಬಿಡ್ತಾನೆ ಹೋಗಿ ತುಂಬಾ ಹೊತ್ತಾಯ್ತು."

"ಮಗೂನ ಅವನ್ಹತ್ರ ಯಾಕೆ ಕೊಡ್ತೀರಿ ? ಅವನೊಬ್ಬ ಶೊಬಚ ನೀವಿಬ್ರೂ, ಅವನಿಗೆ ತೀರಾ ಸಲುಗೆ ಕೊಟ್ಟಿದೀರಿ ಒಳಗ್ಯಾಕೆ ಸೇರಿಸ್ತೀರಿ ?"

"ದಿನವೂ ಸ್ನಾನ ಮಾಡಿ ಒಗೆದ ಬಟ್ಟೆಗಳನ್ನು ಹಾಕ್ಕೋತಾನೆ ಪ್ರಾಮಾಣಿಕ ವಾಗಿದಾನೆ. ಮಗುವೂ ಅಷ್ಟೇ, ಅವನು ಕುಡ್ಸಿದ್ರೆ ಹಾಲನ್ನು ತಂಟೆ ಇಲ್ಲದೇ ಕುಡೀತಾನೆ. ಇಲ್ದಿದ್ರೆ ಬರೀ ರಗಳೆ."

ಅಷ್ಟರಲ್ಲಿ ವೈಕುಂಠ, ವೆಂಕಟೇಶನನ್ನು ಹೆಗಲ ಮೇಲೆ ಕೂರಿಸಿಕೊಂಡು ಕುಣಿಯುತ್ತಾ ಬಂದ. ಮುಂಬಾಗಿಲಿನಲ್ಲೇ ನಿಂತಿದ್ದ ಶಾಸ್ತ್ರಿಯನ್ನು ಕಂಡು, ಕುಣಿತವನ್ನು ನಿಲ್ಲಿಸಿ ಮಗುವನ್ನು ಹೆಗಲ ಮೇಲಿನಿಂದ ಇಳಿಸಿದ. ವೆಂಕಟೇಶ ಓಡಿ ಬಂದ ತಂದೆಯ ಕಾಲಗಳನ್ನು ಹಿಡಿದುಕೊಂಡು ಮುದ್ದಾಗಿ, ತೊದಲುತ್ತಾ 'ಅಣ್ಣಾ' ಎಂದು ಕರೆದಾಗ ಶಾಸ್ತ್ರಿ ಮೆತ್ತಗಾದ ಮಗುವನ್ನು ಎತ್ತಿಕೊಂಡು ಕೆನ್ನೆಗೆ ಮುತ್ತಿಟ್ಟ. ತಕ್ಷಣವೇ ಇಳಿಸಿದ.

"ಥೂ ಹರಳೆಣ್ಣೆ ನಾತ ಬಡೀತಿದೆ. ಮೊದ್ಲು ಚೆನ್ನಾಗಿ ಸೋಪು ತಿಕ್ಕಿ ಮುಖ ತೊಳೆಯಿರಿ" ಎಂದ ವೈಕುಂಠ ಅಲ್ಲಿಂದ ಮರೆಯಾಗಿದ್ದ.

* * *

ಮನೆಯವರೆಲ್ಲಾ ಶಾಸ್ತ್ರಿಗೆ ಹೆದರುತ್ತಿದ್ದರು. ಆದರೆ, ಅದೇ ಮನೆಯೊಳಗೆ ಗೂಡು ಕಟ್ಟಿ ವಾಸವಾಗಿದ್ದ ಗುಬ್ಬಚ್ಚಿಗಳು ಯಾರಿಗೂ ಹೆದರುತ್ತಿರಲಿಲ್ಲ. ದಿನ ದಿನಕ್ಕೂ ಅವುಗಳ ಸಂತತಿ ಹೆಚ್ಚಾಗಿತ್ತು. ಎಲ್ಲಿ ನೋಡಿದರೂ ಗುಬ್ಬಚ್ಚಿಗಳು ಅವುಗಳದ್ದೇ ಸಾಮ್ರಾಜ್ಯ. ನಿರ್ಭಯದಿಂದ ಹಾರಾಡುತ್ತಾ 'ಕಿಚಿಪಿಚಿ' ಗಲಾಟೆ ಮಾಡುತ್ತಾ ಒಳಗೂ ಹೊರಗೂ ಹಾರಾಡುತ್ತಿದ್ದವು. ಗುಬ್ಬಚ್ಚಿಗಳು ಮನೆಯೊಳಗೆ ಗೂಡು ಕಟ್ಟಿ ಮರಿ ಮಾಡಿದರೆ, ಮನೆಗೇ ಒಳ್ಳೆಯದು. ಮನೆಯಲ್ಲಿ ಶುಭಕಾರ್ಯಗಳು ನಡೆಯುತ್ತವೆ ಎಂಬ ನಂಬಿಕೆ ಇದ್ದುದರಿಂದ ಅವುಗಳ ತಂಟೆಗೆ ಯಾರೂ ಹೋಗುತ್ತಿರಲಿಲ್ಲ. ಅವುಗಳ ಸಂಖ್ಯೆ ಹೆಚ್ಚಾದಷ್ಟು ಅವುಗಳ ಗಲಾಟೆಯೂ ಹೆಚ್ಚಾಗಿತ್ತು.

"ಮಕ್ಕಳನ್ನೇನೋ ಗದರಿಸಿ ಬಾಯಿ ಮುಚ್ಚಿಸಬಹುದಾಗಿತ್ತು. ಆದರೆ, ಮನೆಯ

ತಮ್ಮದು ಎಂಬಂತೆ ಸ್ವಚ್ಛಂದವಾಗಿ ಹಾರಾಡಿಕೊಂಡು ಚಿಲಿಪಿಲಿ ಎಂದು ಕಿರುಚುತ್ತಾ ಎಲ್ಲಿ ಅಂದರೆ ಅಲ್ಲಿ ಪುರ್ ಎಂದು ಭರ್ರನೆ ಹಾರುವ ಗುಬ್ಬಚ್ಚಿಗಳಿಗೆ ಯಾರ ಭಯವೂ ಇರಲಿಲ್ಲ. ಗದ್ದೆಯಿಂದ ಬಂದು, ಊಟ ಮಾಡಿ, ನಂತರ ಒಂದರ್ಧ ಗಂಟೆ ಮಲಗುವ ಹವ್ಯಾಸ ಶಾಸ್ತ್ರಿಗೆ ಅವನಿಗೆ ನಿದ್ದೆ ಹತ್ತಿದ ಸಮಯದಲ್ಲಿ ಈ ಗುಬಚ್ಚಿಗಳ ಸಂಭಾಷಣೆ ಪ್ರಾರಂಭವಾಗುತ್ತಿತ್ತು. ಮಾತಿಗೆ ಮಾತು, ಮಾತಿನ ಮಧ್ಯೆ ಜಗಳ, ಕಿತ್ತಾಟ, ಒಂದನ್ನೊಂದು ಅಟ್ಟಿಕೊಂಡು ಹೋಗುವ ಆಟದ ರಭಸ, ಹಾರಾಟ, ಚೀರಾಟ... ಕಿತ್ತಾಟ ! ಅದಕ್ಕೆ ಕೊನೆಯೇ ಇಲ್ಲ.

ಮಲಗಿದ್ದಲ್ಲಿಂದಲೇ ಕಣ್ಣು ಬಿಡದೇ ಶಾಸ್ತ್ರಿ ಕೂಗು ಹಾಕುತ್ತಿದ್ದ. "ಓಡಿಸ್ರ ಅವುಗಳನ್ನ, ಅದೇನು ಗಲಾಟೆ ಮಾಡುತ್ವೆ ? ಒಂದುಗಳಿಗೆ ಕಣ್ಣು ಹತ್ತಕ್ಕೆ ಬಿಡುಲ್ಲ" ಅಂತ. ಹಾಗೆ ಓಡಿಸಿದರೆ, ಹೀಗೆ ಬಂದು ಕುಳಿತು ಮತ್ತೆ ಸಂಭಾಷಣೆಯನ್ನು ಪ್ರಾರಂಭಿಸುತ್ತಿದ್ದವು. ಗೂಡು ಕಟ್ಟುವ ಸಂಭ್ರಮದಲ್ಲಿ ಎಲ್ಲೆಲ್ಲಿಂದಲೋ ಹೊತ್ತು ತರುವ ಕಸ ಕಡ್ಡಿಗಳು ಎಲ್ಲೆಂದರಲ್ಲಿ ಬೀಳುತ್ತಿದ್ದವು. ಮರಿಗಳು ಗೂಡಿನಲ್ಲಿ ಕುಳಿತು ತಾಯಿ ತಂದು ಕೊಡುವ ಕಾಳುಗಳಿಗಾಗಿ ಬಾಯಿಯನ್ನು ತೆರೆದು, 'ಚೀಂವ ಚೀಂವ್' ಎಂದು ಸಣ್ಣದನಿಯಲ್ಲಿ ಅರಚುತ್ತಿದ್ದವು. ಸ್ವಲ್ಪ ರೆಕ್ಕೆ ಪುಕ್ಕ ಬೆಳೆಯುತ್ತಿದ್ದಂತೆಯೇ ಗೂಡಿನಿಂದ ಹಾರಬರಲು ಹವಣಿಸಿ, ಕೆಳಗೆ ಬಿದ್ದು ಬಿಡುತ್ತಿದ್ದವು. ಮೊಟ್ಟೆ ಒಡೆದು ಮರಿಯಾಗುವ ಸಮಯದಲ್ಲಿ ಗೂಡಿನಿಂದ ಹೊರ ಹೊಮ್ಮುವ ವಿಚಿತ್ರ ವಾಸನೆ ಯೆಲ್ಲಾ ಮನೆಯೊಳಗೆ ತುಂಬಿಕೊಂಡಿರುತ್ತಿದ್ದವು. ಅವುಗಳ ಹಾವಳಿಯನ್ನು ಸಹಿಸಿಕೊಳ್ಳ ಬೇಕಾಗುತ್ತಿತ್ತು.

"ಮನೆಯ ಕಸ ಗುಡಿಸಿ ಒರೆಸುವಾಗ ಲಕ್ಷ್ಮಿ ಬೇಸರಿಸಿಕೊಳ್ಳುತ್ತಿದ್ದಳು. ಕಸ ಕಡ್ಡಿ, ಕಾಳು, ರೆಕ್ಕೆಪುಕ್ಕ, ಜೊತೆಗೆ ಎಲ್ಲೆಂದರಲ್ಲಿ ಬಿದ್ದಿರುವ ಹಿಕ್ಕೆಗಳು...ಇದೆಲ್ಲಿಯ ಕರ್ಮ ?" ಎಂದು ಗೊಣಗುತ್ತಿದ್ದಳು.

ಅವುಗಳಿಗೆ ಎಷ್ಟು ಸಲೀಸಾಗಿತ್ತೆಂದರೆ, ಅಂಗಳದಲ್ಲಿ ಹರವಿದ ಬೇಳೆ ಕಾಳುಗಳನ್ನು ಗುಂಪು ಗುಂಪಾಗಿ ಹಾರಿ ಬಂದು, ಕ್ಷಣ ಮಾತ್ರದಲ್ಲಿ ಕೊಕ್ಕಿನಲ್ಲಿ ಎತ್ತಿಕೊಂಡು ತಿಂದು, ರಂಪ ಮಾಡಿ, ಅಲ್ಲಿಯೇ ಹೇಸಿಗೆಯನ್ನು ಮಾಡಿ ಹಾರಿ ಹೋಗುತ್ತಿದ್ದವು. ಮಕ್ಕಳಿಗೆಂದು ತಟ್ಟೆಗೆ ಬಡಿಸಿದ್ದ ಅನ್ನಕ್ಕೆ ಬಾಯಿ ಹಾಕಿ ಅಗುಳುಗಳನ್ನು ಎತ್ತಿಕೊಂಡು ಹಾರಿ ಹೋಗುತ್ತಿದ್ದವು. ಇದನ್ನೆಲ್ಲ ಸಹಿಸುವುದು ಅಸಾಧ್ಯ ಎನಿಸತೊಡಗಿತ್ತು ಲಕ್ಷ್ಮಿಗೆ. ಏನಾದರೂ ಉಪಾಯವನ್ನು ಕಂಡು ಹಿಡಿಯಲೇಬೇಕೆಂದು ನಿಶ್ಚಯಿಸಿದಳು. ವೈಕುಂಠನನ್ನು ತನ್ನ ಸಹಾಯಕ್ಕೆ ಸೇರಿಸಿಕೊಂಡಳು. ಇಬ್ಬರೂ ಸೇರಿ, ಹಳೆಯದಾಗಿದ್ದ ಒಂದು ಸೊಳ್ಳೆ ಪರದೆಯನ್ನು ಬಲೆಯಂತೆ ಸಿದ್ಧಪಡಿಸಿದರು. ನಾಲ್ಕು ಕಡೆಗೆ, ಹುರಿ ಯನ್ನು ಕಟ್ಟಿದಳು. ಸೊಳ್ಳೆಯ ಪರದೆಯ ಮೇಲ್ಭಾಗವನ್ನು ನೆಲಕ್ಕೆ ಹಾಸಿ ಅದರ

ಮೇಲೆ ಅಕ್ಕಿಯನ್ನು ಹರವಿದಳು. ಪರದೆಯ ಎರಡು ಭಾಗವನ್ನು ಎರಡು ಕಂಬಗಳಿಗೆ ಕಟ್ಟಿ, ಉಳಿದ ಭಾಗವನ್ನು ಹಾಗೇ ಸುಮ್ಮನೇ ಸಿಕ್ಕಿಸಿದ್ದಳು. ದೊಡ್ಡದಾಗಿ ಹಾಕಿದ್ದ ಪರದೆಯ ಮೇಲಿದ್ದ ಅಕ್ಕಿಯನ್ನು ತಿನ್ನಲು ಹಿಂಡು ಹಿಂಡಾಗಿ ಗುಬ್ಬಚ್ಚಿಗಳು ಹಾರಿ ಬಂದು ಕುಳಿತವು. ಸಿಹಿಯಾಗಿದ್ದ ಅಕ್ಕಿಯನ್ನು ಕೊಕ್ಕಿನಲ್ಲಿ ಹೆಕ್ಕಿಹೆಕ್ಕಿ ತಿನ್ನುವ ಕೆಲಸ ದಲ್ಲಿ ಮಗ್ನವಾಗಿದ್ದಾಗ ಲಕ್ಷ್ಮಿ ಹಾಗೂ ವೈಕುಂಠ ಬಂದು ಅತಿವೇಗವಾಗಿ, ಸೊಳ್ಳೆಯ ಪರದೆಯ ನಾಲ್ಕು ಭಾಗಗಳನ್ನು ಸೇರಿಸಿಬಿಟ್ಟರು. ಕ್ಷಣಮಾತ್ರದಲ್ಲಿ ಗುಬ್ಬಚ್ಚಿಗಳಿಗೆ ಏನಾಯ್ತು ಎಂದು ತಿಳಿಯುವಷ್ಟರಲ್ಲಿ ಬಂಧಿಗಳಾಗಿದ್ದವು. ಹಾಗೂ ಚುರುಕಾಗಿದ್ದ ಕೆಲವು ಗುಬ್ಬಚ್ಚಿಗಳು ಭಯದಿಂದ ತಪ್ಪಿಸಿಕೊಳ್ಳಲು ಅತ್ತಿತ್ತ ಹಾರಾಡಿ ಚೀರಾಡಿ ವಿಫಲಗೊಂಡು, ಒಂದರ ಮೇಲೊಂದು ಬಿದ್ದು ಉರುಳಿದವು. ಗುಬ್ಬಚಿಗಳನ್ನು ಬಂಧಿಸಿದ್ದ ಬಲೆಯನ್ನು ವೈಕುಂಠ ಧೀರನಂತೆ ಎತ್ತಿಕೊಂಡು ಹೋಗಿ ಒಂದು ದೊಡ್ಡ ಗೋಣಿಚೀಲದೊಳಗೆ ಹಾಕಿಟ್ಟ ಅಪಾಯಕ್ಕೆ ಸಿಕ್ಕಿ ಬಿದ್ದಿರುವನೆಂಬ ಅರಿವಾದ ಗುಬ್ಬಚ್ಚಿಗಳು ಕಿಚಿಕಿಚಿ ಗಲಾಟೆ ಮಾಡತೊಡಗಿದ್ದವು. ಸಿಕ್ಕಿ ಬೀಳದೇ ಹೊರಗೆ ಉಳಿದ ಗುಬ್ಬಚ್ಚಿಗಳು, ತಮ್ಮ ಸಂಗಾತಿಯ ಅಪಾಯವನ್ನು ಗಮನಿಸಿ ಪರದಾಡುತ್ತಿದ್ದವು. ಕೆಲವು ಗುಬ್ಬಚ್ಚಿಗಳು ಚೀಲದ ಬಳಿಗೆ ಬಂದು ಕೊಕ್ಕಿನಿಂದ ಕುಕ್ಕಿ ಕುಕ್ಕಿ, ಬಂಧಿತ ಹಕ್ಕಿಗಳನ್ನು ಪಾರು ಮಾಡಲು ಪ್ರಯತ್ನಿಸುತ್ತಿದ್ದವು.

ಶಾಸ್ತ್ರಿ ಮನೆಯಿಂದ ಹೊರಕ್ಕೆ ಹೋಗಿದ್ದ ಸಮಯದಲ್ಲಿ ಇಷ್ಟೂ ಕೆಲಸ ನಡೆದಿತ್ತು. ಪಾತಕ್ಕ ಮನೆಯಲ್ಲಿ ಇಲ್ಲದಿದ್ದುದರಿಂದ ಅನುಕೂಲವಾಗಿತ್ತು.

ಮಧ್ಯಾಹ್ನ ಊಟಕ್ಕೆ ಬಂದ ಸಮಯದಲ್ಲಿ ಮನೆಯೊಳಗೆ ನೆಲೆಸಿದ್ದ ವಿಚಿತ್ರ ನಿಶ್ಯಬ್ಧ ಶಾಸ್ತ್ರಿಯನ್ನು ಸ್ವಾಗತಿಸಿತು. ಆದರೆ ಆ ನಿಶ್ಯಬ್ಧ ಯಾವುದೆಂದು ಅವನಿಗೆ ಅರಿವಾಗಲಿಲ್ಲ. ಊಟ ಮಾಡಿ ಮಲಗಿದವನಿಗೆ ನಿದ್ದೆಯೂ ಹತ್ತಿರ ಸುಳಿಯಲಿಲ್ಲ. ಏನೋ ವಿಚಿತ್ರ ಅನುಭವ, ಅತ್ತಿತ್ತ ಹೊರಳಾಡಿ ಎದ್ದ. ನೀರವ ಮೌನದಿಂದ ಚಡಪಡಿಸಿದ.

"ಯಾಕೋ ನಿದ್ದೇನೇ ಹತ್ತುತ್ತಿಲ್ಲ, ಕಾಫಿನಾದ್ರೂ ಕೊಡು ತೋಟದ ಕಡೆಗೆ ಹೋಗಿ ಬರ್ತೀನಿ." ಮನದೊಳಗೆ ಏನೋ ಖಾಲಿ ಖಾಲಿ ಎನಿಸಿತ್ತು.

"ಯಾಕೇ ನಿಮ್ಮಕ್ಕ ಮನೇಲಿಲ್ಲವಲ್ಲ ಮನೆ ಭಣ ಭಣ ಅಂತಿದೆಯಲ್ಲ ಅದಕ್ಕೆ ನಿದ್ದೆ ಬರಲಿಲ್ಲವೇನೋ"

"ಇರಬಹುದು, ನಾಳೇನೇ ಹೋಗಿ ಕರ್‍ಕೊಂಡು ಬರ್ತೀನಿ. ಪದ್ಮಿನಿ ರಾಗಿಣಿ ಯರು ಎಲ್ಲಿ ? ಶಾಂತ ಎಲ್ಲಿ ? ಯಾರದ್ದೂ ಸದ್ದೇ ಇಲ್ಲ."

"ಶಾಂತ ಓದ್ಕೊತಾ ಇದಾಳೆ. ಅವಳನ್ನು ಹಿಂಸೆ ಮಾಡದಿರಲಿ ಅಂತ ಅವರಿಬ್ಬರನ್ನು ನಾನೇ ನಿಮ್ಮ ತಂಗಿಯ ಮನೆಗೆ ಕಳ್ಸಿದೀನಿ"

"ನಮಗೆ ತೊಂದರೆ ಆಗುತ್ತೆ ಅಂತ ಮಕ್ಕಳನ್ನು ಅವರಿವರ ಮನೆಗೆ ಕಳಿಸಬೇಡ ಲಕ್ಷ್ಮೀ. ಕಂಠಿ ಏನಂದ್ಕೋಳ್ತಾನೆ"

"ನಿಮ್ಮ ಭಾವ ಮನೇಲಿಲ್ಲ, ತಿಪಟೂರಿಗೆ ಹೋಗಿದಾರಂತೆ, ಪಾತು ಹೇಳಿದ್ಲು, ಯಾಕೆ ನಿಮಗೆ ಗೊತ್ತಿಲ್ವಾ ?

"ಹುಂ, ಎಂದೋ ಹೇಳಿದ್ದ ಮರೆತುಬಿಟ್ಟಿದ್ದೆ. ನಾನು ತೋಟಕ್ಕೆ ಹೋಗ್ತಿನಿ ಅವರಿಬ್ಬರನ್ನು ಮನೆಗೆ ಕರಿ ಲಕ್ಷ್ಮಿ ಮುಂಬಾಗಿಲಿಗೆ ಹೋದಳು. ಶಾಸ್ತ್ರಿ ನಿಂತಲ್ಲಿಂದಲೇ ಮನೆಯನ್ನೊಮ್ಮೆ ವೀಕ್ಷಿಸಿದ. ಏನೋ ವ್ಯತ್ಯಾಸವಾಗಿದೆ ನಿತ್ಯದಂತೆ ಇಲ್ಲ. ಆದರೆ ಅದೇನೆಂದು ತಿಳಿದುಕೊಳ್ಳುವ ವ್ಯವಧಾನ ಅವನಿಗಿರಲಿಲ್ಲ. ಕಾಫಿಯನ್ನು ಕುಡಿದು ಹೊರನಡೆದ.

ಶಾಸ್ತ್ರಿ ಅತ್ತ ಹೊರಟ ಕೂಡಲೇ, ವೈಕುಂಠ ಎತ್ತಿನ ಗಾಡಿಯನ್ನು ಹೂಡಿ, ಹಕ್ಕಿಗಳನ್ನು ಬಂಧಿಸಿಟ್ಟಿದ್ದ ಚೀಲವನ್ನು ಹಗುರವಾಗಿ ಎತ್ತಿ ಗಾಡಿಯಲ್ಲಿಟ್ಟ. ನಾಗಾಲೋಟದಲ್ಲಿ ಗಾಡಿಯನ್ನು ಓಡಿಸಿದ. ಸಮೀಪದಲ್ಲಿಯೇ ಇದ್ದ ದಟ್ಟವಾದ ಕಾಡಿನ ಪ್ರದೇಶದಲ್ಲಿ ಗಾಡಿಯನ್ನು ನಿಲ್ಲಿಸಿದ. ನಿಧಾನವಾಗಿ ಗೋಣಿಚೀಲವನ್ನು ಇಳಿಸಿ, ಬಲೆಯನ್ನು ಆಚೆ ತೆಗೆದು ಅದಕ್ಕೆ ಬಿಗಿದಿದ್ದ ಕಟ್ಟನ್ನು ಬಿಚ್ಚಿದ. ಮೊದಲಿಗೆ, ಪಿಳಿ ಪಿಳಿ ನೋಡುತ್ತಾ ಮುದುಡಿ ಕುಳಿತಿದ್ದ ಗುಬ್ಬಚ್ಚಿಗಳನ್ನು "ಪುರ್" ಎಂದು ಉಸುರಿ ಹೆದರಿಸಿದ. ಸತ್ತೆವೋ ಕೆಟ್ಟೆವೋ ಎಂಬಂತೆ, ಒಂದನ್ನೊಂದು ತಳ್ಳಿಕೊಂಡು, ಗುಬ್ಬಚ್ಚಿಗಳು ಮೇಲಕ್ಕೆ ಹಾರಿದವು. ಕ್ಷಣ ಮಾತ್ರದಲ್ಲಿ ಅಲ್ಲಿಯ ಮರಗಿಡ, ಪೊದೆಗಳ ಮೇಲೆ ಎಲೆಗಳ ಮರೆಯಲ್ಲಿ ಅಡಗಿ ಕುಳಿತವು. ಪೊಟರೆಗಳನ್ನು ಸೇರಿಕೊಂಡವು. ವೈಕುಂಠ ಗೆಲುವಿನ ಸಿಳ್ಳೆಯನ್ನು ಹೊಡೆಯುತ್ತಾ... ಗಾಡಿಯನ್ನು ಹತ್ತಿದ. ಹುರ್ರಾ... ಎನ್ನುತ್ತಾ ಎತ್ತಿನ ಬಾಲವನ್ನು ತಿರುಚಿದ. ಮತ್ತೆ ಅದೇ ವೇಗದಲ್ಲಿ ಗಾಡಿಯನ್ನು ಮನೆಯ ದಿಕ್ಕಿಗೆ ಓಡಿಸಿದ.

ಅವನಿಗಾಗಿಯೇ ಕಾಯುತ್ತಿದ್ದ ಲಕ್ಷ್ಮಿ ಅವಸರದಿಂದ ಪಿಸುದನಿಯಲ್ಲಿ ಕೇಳಿದಳು. "ಎಲ್ಲಾವ್ನೂ ಎಲ್ಲಿ ಬಿಟ್ಬಂದೆ ?"

"ದೂರ....ದೂರ..... ಕಾಡೊಳ್ಗೆ... ಇಲ್ಲಿಂದ ನಾಲ್ಕೈದು ಮೈಲಿಗಳ ಆಚೆ. ಇನ್ನವು ಮತ್ತೆ ಇತ್ಲಾಗೆ ಬರಾಕಿಲ್ಲ ಬುಡಿ" ಹೆಮ್ಮೆಯಿಂದ ಹೇಳಿದ.

"ಇನ್ನೊಂದೆರ್ಡು ದಿನ ಬಿಟ್ಟು ಉಳಿದುದನ್ನು ಹಾಗೇ ಹಿಡಿದು ಕಾಡಿಗೆ ಓಡಿಸೋಣ."

"ದೊಡ್ಡವ್ರಾರು ಇದ್ದಿದ್ರೆ ಚೆಂದಾಗಿ ಉಗಿದಿರೋರು. ಅಯ್ನೋರ್ಗೆ ಗೊತ್ತಾಗ್ಲೀ ಇನ್ನೂ..." ಬೈತಾರೋ ಏನೋ ?" ಕೈ ಕೈ ಹೊಸಕಿದ.

"ಇನ್ನು ಇಲ್ಲ ಗೊತ್ತಾದ್ರೆ ಗೊತ್ತಾಗ್ಲಿ ಬಿಡು. ಇದ್ರಲ್ಲಿ ತಪ್ಪೇನಿದೆ? ನಾವೇನು

ಕೊಂದು ಹಾಕಿದ್ವೆ ? ಕಾಡಿಗೆ ಬಿಟ್ಟು ಬಂದರೆ ಯಾರು ಯಾಕೆ ಬೈತಾರೆ ! ಆದ್ರೆ ಈಗ್ಲೇ ಯಾರ್ಗೂ ಹೇಳ್ಬೇಡ ತೋಟಕ್ಕೆ ಹೋಗು." ಲಕ್ಷ್ಮಿ, ವೈಕುಂಠನನ್ನು ಅವಸರಿಸಿ ತೋಟಕ್ಕೆ ಕಳಿಸಿ, ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಳು.

"ಕತ್ತಲಾಗುವ ಮೊದಲೇ ಶಾಸ್ತ್ರಿ ಮನೆಗೆ ಬಂದ. ಕೈ ಕಾಲುಗಳನ್ನು ತೊಳೆದು, ಸಂಧ್ಯಾವಂದನೆಗೆ ಕುಳಿತ. ಆದರೆ ಜಪ ಮಾಡುವಾಗ ದಿನದಂತೆ ಏಕಾಗ್ರತೆ ಇಲ್ಲ. ಮನೆಯಲ್ಲಿ ಏನೋ ಮಹತ್ತರವಾದ ಬದಲಾವಣೆ ಆಗಿದೆ ಅಂತ ಅನ್ನಿಸ್ತಿದೆ. ದೇವರಿಗೆ ದೀಪವನ್ನು ಹಚ್ಚುವಾಗ ಧಡಕ್ಕನೆ ಜ್ಞಾನೋದಯವಾಯಿತು. ಮನೆಯಲ್ಲಾ 'ಬಿಕೋ ಬಿಕೋ' ಎನ್ನುತ್ತಿದೆ. ಅಸಹನೀಯ ನಿಶ್ಯಬ್ಧ ಆವರಿಸಿದೆ. ಚಿಲಿಪಿಲಿ ಕಲರವ ಮಾಡುವ, ಚೀಂವ್ ಚೀಂವ್ ಸಮಭಾಷಣೆ ನಡೆಸುವ, ಪುರ್ ಪುರ್ ಎಂದು ಭರ್ರನೆ ಹಾರಾಡುವ ಗುಬ್ಬಚ್ಚಿಗಳು ಮಾಯವಾಗಿವೆ. ಇದ್ದಕ್ಕಿದ್ದಂತೆ ಏನಾದವು? ಎಲ್ಲಿಗೆ ಹೋದವು ಏನನ್ನೋ ಕಳೆದುಕೊಂಡವನಂತೆ ತಳಮಳ ಕ್ಕೊಳಗಾದ.

"ಲಕ್ಷ್ಮಿ" ಎತ್ತರದ ಸ್ವರದಲ್ಲಿ ಕೂಗು ಹಾಕಿದ. ಲಕ್ಷ್ಮಿ ಅಂಜುತ್ತಲೇ ಅವನಿದ್ದೆಡೆಗೆ ಬಂದಳು. "ಎಲ್ಲಿ ಹೋದ್ವೇ ಗುಬ್ಬಚ್ಚಿಗಳು ! ಒಂದೇ ಒಂದೂ ಕಾಣುತ್ತಿಲ್ಲ. ಏನಾಯ್ತು ಅವಕ್ಕೇ?" ಲಕ್ಷ್ಮಿ ಬೆಚ್ಚಿದಳು. ನಿಧಾನವಾಗಿ ತಾನು ಮಾಡಿದ ಕಾರ್ಯವನ್ನು ತಿಳಿಸಿದಳು. ಶಾಸ್ತ್ರಿಯ ಕೋಪ ನೆತ್ತಿಗೇರಿತು.

"ಅಧಿಕಪ್ರಸಂಗಿ ! ನಾಚ್ಕೆ ಆಗುಲ್ಲ ನಿಂಗೆ ! ಗುಬ್ಬಚ್ಚಿಗಳನ್ನು ಹಿಡಿದು ಊರಾಚೆ ಬಿಟ್ಟು ಬರೋಕೆ ನಿಂಗ್ಯಾರು ಅಧಿಕಾರವನ್ನು ಕೊಟ್ರು ? ನಮಗಿಂತ ಮೊದಲೇ ಎಷ್ಟೋ ವರ್ಷಗಳಿಂದ ಅವುಗಳು ಈ ಹಳ್ಳಿಯಲ್ಲಿ ವಾಸ ಮಾಡುತ್ತಿವೆ... ನೀ ಹೇಳ್ದೇ; ಅವನು ಕೇಳ್ದ ಇಬ್ಬರೂ ಸರಿಯಾಗಿದೀರಿ. ನಾಚಿಕೆಗೆಟ್ಟೋನು ಮನೆಗೆ ಬರಲಿ, ಎಕ್ಕಡದಿಂದ ಹೊಡೆದು ಮನೆಯಿಂದಾಚೆ ದಬ್ತೀವಿ ಶಾಸ್ತ್ರಿ ಎತ್ತರದ ದನಿಯಲ್ಲಿ ಕಿರುಚಾಡಿದಾಗ ಲಕ್ಷ್ಮಿ ತತ್ತರಿಸಿದಳು. ಮಾತನ್ನಾಡಲು ದನಿಯೇ ಇಲ್ಲದಂತಾಯಿತು ಬೆಪ್ಪಾಗಿ ನಿಂತಳು. ವೈಕುಂಠ ಕಣ್ಣಿಗೆ ಬಿದ್ದರೆ ಕೋಪದಲ್ಲಿ ಏನು ಮಾಡಿ ಬಿಡುವರೋ ಇವತ್ತು ಏನು ಅನಾಹುತ ಜರುಗಿ ಬಿಡುವುದೋ ಎಂಬ ಭಯದಿಂದ, ದೇವರಲ್ಲಿ ಕ್ಷಣ ಕ್ಷಣವೂ ಏನೂ ಆಗದಿರಲಿ ಎಂದು ಬೇಡಿದಳು.

ಅಲ್ಲಿ ಇಲ್ಲಿ ತಿರುಗಾಡಿ, ಕಡ್ಲೆ ಪುರಿ ತಿಂದು, ನೀರು ಕುಡಿದು, ತಲೆಗೆ ಟವೆಲ್ಲನ್ನು ಸುತ್ತಿಕೊಂಡು ಊಟದ ಹೊತ್ತಿಗೆ ವೈಕುಂಠ ಮನೆಗೆ ಬಂದ. ಅವನ ಬರವನ್ನೇ ಎದುರು ನೋಡುತ್ತಿದ್ದ ಲಕ್ಷ್ಮಿ, ಅವನನ್ನು ಗುಟ್ಟಾಗಿ, ಹಿಂಬಾಗಿಲಿಗೆ ಬರುವಂತೆ ಸಂಜ್ಞೆ ಮಾಡಿದಳು. ವೈಕುಂಠ ತನ್ನ ಅಲ್ಯೂಮಿನಿಯಂ ತಟ್ಟೆ ಲೋಟಗಳನ್ನು ಹಿಡಿದು, ತಾನು ಊಟಕ್ಕೆ ಕೂರುವ ಜಾಗಕ್ಕೆ ಬಂದು ಕುಳಿತ.

"ನಾವು ಹೀಗ್ಮಾಡ್ಬಾರ್ದಾಗಿತ್ತು ವೈಕುಂಠ. ಅಯ್ಯೋರ್ಗೆ ಶಾನೇ ಕೋಪ

ಬಂದಿದೆ. ಬಾಯಿಗೆ ಬಂದಂತೆ ನಿನ್ನನ್ನ ಬೈದರು. ನೀನು ನಾಳೆ ಬೆಳಗ್ಗೇನೇ ಹೋಗಿ, ಆ ಗುಬ್ಬಚ್ಚಿಗಳನ್ನು ಹಿಡ್ಕೊಂಡು ಬಂದು ಬಿಡು. ಈಗ ಬೇಗ ಊಟ ಮಾಡಿ ಎದ್ಹೋಗು ಅವರ ಕಣ್ಣಿಗೆ ಬೀಳ್ಬೇಡ.

ವೈಕುಂಠ ಗೊಳ್ಳನೆ ನಕ್ಕ. "ಅದೇಂಗಾದೀತು ಅಮ್ಮಾರೇ.... ಎತ್ಲಾಗೆ ಓದ್ವೋ ನಾನೇನ್ಬಲ್ಲೇ ?" ಲಕ್ಷ್ಮಿಯ ಆತಂಕದ ಮುಖವನ್ನು ಕಂಡು ಅವನೂ ಗಂಭೀರನಾದ. ತಟ್ಟೆಗೆ ರಾಗಿಮುದ್ದೆ, ಸಾರನ್ನು ನೀಡಿಸಿಕೊಂಡು "ನಾನು ಕೊಟ್ಗೇಲೇ ಉಣ್ತೀನಿ" ಎನ್ನುತ್ತಾ ತಟ್ಟೆ ಬಟ್ಟಲುಗಳನ್ನೆತ್ತಿಕೊಂಡು ಎದ್ದ.

ಮಕ್ಕಳಿಗೆ ಹಾಸಿಗೆಗಳನ್ನು ಹಾಸಿಕೊಟ್ಟು, ಅಡಿಗೆ ಮನೆಯ ಕೆಲಸಗಳನ್ನು ಮುಗಿಸಿ, ಲಾಂದ್ರವನ್ನು ಹಿಡಿದು, ಹಿಂಬಾಗಿಲು, ಮುಂಬಾಗಿಲುಗಳನ್ನು ಭದ್ರಪಡಿಸಿ ಮಲಗಲೆಂದು ಬಂದಳು. ಶಾಸ್ತ್ರಿ ಮಲಗಿ ಬಿಟ್ಟಿದ್ದ. ನಿದ್ದೆ ಬಂದಿತ್ತೋ ಇಲ್ಲವೋ ಗೊತ್ತಾಗುವಂತಿರಲಿಲ್ಲ. ಲಾಂದ್ರದ ಬತ್ತಿಯ ಉರಿಯನ್ನು ಕಡಿಮೆ ಮಾಡಿ, ವೆಂಕಟೇಶನನ್ನು ಸರಿಯಾಗಿ ಮಲಗಿಸಿ, ತಾನೂ ಅವನ ಪಕ್ಕ ಮಲಗಿದಳು. ಎಷ್ಟು ಹೊತ್ತಾದರೂ ನಿದ್ದೆ ಹತ್ತುವ ಸೂಚನೆಯೇ ಇಲ್ಲ. ಗಂಡನ ಅಬ್ಬರವೇ ಕಿವಿಯಲಿ ಗುಂಯ್‌ಗುಟ್ಟುತ್ತಿತ್ತು. ತಾನೇನೋ ಘನವಾದ ತಪ್ಪು ಮಾಡಿಬಿಟ್ಟೆನೆಂಬ ಅಪರಾಧಿ ಮನೋಭಾವ ಕಾಡತೊಡಗಿತ್ತು. ವೆಂಕಟೇಶನನ್ನು ಬಲವಾಗಿ ತಬ್ಬಿಕೊಂಡಳು.

ರಾತ್ರಿಯ ವೇಳೆ ಆಗಾಗ್ಗೆ ಹತ್ತಿರದಲ್ಲಿ ದೂರದಲ್ಲಿ ನಾಯಿಗಳು ಬೊಗಳುವ ಸದ್ದಿನ ಹೊರತು ಬೇರೆ ಯಾವ ಶಬ್ದವೂ ಕೇಳಿಸುವುದಿಲ್ಲ. ಆದರೆ ಈದಿನ ? ಏನೋ 'ಪರಪರ' ಎನ್ನುವ ಸದ್ದು ಪದೇ ಪದೇ ಕೇಳಿಸಿದಾಗ ಮೈ ನಡುಗಿತು. ಆದರೂ ಅನುಮಾನದಿಂದ ಮತ್ತೆ ಮತ್ತೆ ಆಲಿಸಿದಳು. ಎದ್ದು ನೋಡಲೇ ಅಂತಂ ಕೊಂಡರೂ, ಭಯವೂ ಇಣುಕಿತ್ತು. ಗೊರಕೆ ಹೊಡೆಯುತ್ತಿದ್ದ ಗಂಡನನ್ನು ಎಬ್ಬಿಸುವ ಮನಸ್ಸಾಗಲಿಲ್ಲ. ಎತ್ತಕಡೆಯಿಂದ ಸದ್ದು ಬರುತ್ತಿರಬಹುದೆಂದು, ಮೈಯೆಲ್ಲಾ ಕಿವಿಯಾಗಿಸಿ ಆಲಿಸಿದಳು. ಎಲ್ಲಾ ದಿಕ್ಕುಗಳಿಂದಲೂ ಅದೇ ಸದ್ದು ಕೇಳಿಬರುತ್ತಿದೆ ಎಂದೆನಿಸಿತು. ಏನಿರಬಹುದು? ನೋಡುವ ಧೈರ್ಯ ಸಾಲದೇ, ಮನದಲ್ಲೇ ದೇವರ ಸ್ಮರಣೆ ಮಾಡಿದಳು. ಕ್ರಮೇಣ ಆ ಸದ್ದು ಅಡಗಿತೋ, ಅಥವಾ ಇವಳಿಗೇ ನಿದ್ದೆ ಆವರಿಸಿತೋ... ಬೆಳಗಿನ ಝಾವದಲ್ಲಿ ಎಚ್ಚರವಾಗುವವರೆಗೂ ನಿದ್ರಿಸಿದಳು.

ಎಂದಿನಂತೆ, ಹಕ್ಕಿಗಳ ಕಲರವ ಕೇಳಿಬರುತ್ತಿದೆ. ಬೆಳಗಿನ ಝಾವದ ಹಿತವಾದ ತಂಗಾಳಿ ಬೀಸುತ್ತಿದೆ. ಆಕಳಿಸುತ್ತಾ ಎದ್ದು ಕೈಗಳನ್ನು ಹೊಸೆದು, "ಕರಾಗ್ರೆ ವಸತೇ ಲಕ್ಷ್ಮೀ... ಶ್ಲೋಕವನ್ನು ಹೇಳಿಕೊಂಡು ಕರಗಳನ್ನು ನೋಡಿಕೊಂಡು ಕಣ್ಣಿಗೆ ಒತ್ತಿಕೊಂಡಳು. ನಿದ್ದೆಯ ಮಂಪರು ಕಳೆದು ಪೂರಾ ಎಚ್ಚರವಾಯಿತು. ಹಿಂದಿನ ರಾತ್ರಿ, ನಿದ್ದೆ ಬರುವ ಮೊದಲು ಕೇಳಿಸಿದ ಸದ್ದಿನ ನೆನಪಾಯಿತು. ಏನಿರಬಹುದು?

ಹೇಗೂ ಬೆಳಕಾಗಿದೆ. ಗಂಡನನ್ನು ಎಬ್ಬಿಸಿ ಹೇಳಿದರಾಯ್ತು ಎಂದುಕೊಂಡು ಅವನ ಮೈ ಮುಟ್ಟಿ ಎಬ್ಬಿಸಿದಳು.

"ಏನು ? ಏನು ?" ಅವನು ಬೆಚ್ಚಿ ಬಿದ್ದು ಕಣ್ಣರಳಿಸಿ ಕೇಳಿದ.

"ಏನಿಲ್ಲ, ರಾತ್ರಿಯೆಲ್ಲಾ ಏನೋ ಪರಪರ ಸದ್ದಾಗಿತ್ತು. ಎದ್ದು ಏನೂಂತ ಸ್ವಲ್ಪ ನೋಡ್ತೀರಾ ?"

"ಇಲಿಯೋ, ಹೆಗ್ಗಣವೋ, ನಾಯಿಯೋ ಬೆಕ್ಕೋ, ಏನೋ ಒಂದು ಸೇರ್ಕೊಂಡಿರುತ್ತೆ. ಅದಕ್ಯಾಕಿಷ್ಟು ತವಕ ? ಗಂಟೆ ಎಷ್ಟಾಯ್ತು ?

"ಏನೋ ಗೊತ್ತಿಲ್ಲ, ಬೆಳಗಾಗ್ತಿದೆ, ನೋಡ್ತೀನಿ ಎನ್ನುತ್ತಾ ಲಾಂದ್ರದ ಬೆಳಕನ್ನು ಹೆಚ್ಚು ಮಾಡಿ, ಗಡಿಯಾರವನ್ನಿಟ್ಟಿದ್ದ ಗೂಡಿನ ಕಡೆಗೆ ಬೆಳಕನ್ನು ಹರಿಸಿದಳು. ಐದೂವರೆಯ ಸಮಯವಾಗಿತ್ತು. ಗಡಿಯಾರದ ಹಿಂದೆ ಏನೋ ಫಳ ಫಳ ಹೊಳೆದಂತಾಯಿತು. ಎದೆ ಗುಂಡಿಗೆ ನಿಂತಂತಾಯಿತು. ಎರಡು ಹೆಜ್ಜೆ ಹಿಂದೆ ಸರಿದಳು ಮತ್ತೆ ಮುಂದೆ ಬಾಗಿ ಗಡಿಯಾರದ ಕಡೆಗೆ ದೃಷ್ಟಿಸಿ ನೋಡಿದಳು ಅವಳ ತಲೆಯನ್ನು ಸವರಿಕೊಂಡು ಏನೋ ಹಾರಿ ಹೋದಂತಾಯಿತು. ಹೆದರಿ ಚೀರಿದಳು ಕೈಯಿಂ ಲಾಂದ್ರ ಜಾರಿತು ಚಿಮಣಿ ಒಡೆದು 'ಠಳ್' ಎಂದ ಸದ್ದಿಗೆ ಶಾಸ್ತ್ರಿ ಎದ್ದು ಬಂದ.

"ಏನಾಯ್ತು ? ಲಾಂದ್ರ ಯಾಕೆ ಬಿತ್ತು ? ನೀನ್ಯಾಕೆ ಕಿರುಚಿದೆ ?"

"ಅಲ್ಲಿ... ಅಲ್ಲಿ.... ಗಡಿಯಾರದ ಹಿಂದೆ ಏನೋ ಕೂತಿತ್ತು... ನನ್ನ ತಲೆಯ ಮೇಲೆ ಹಾರಿ ಹೋಯ್ತು....ಗೂಬೇನೋ ಏನೋ.......ಭಯ ಆಗ್ತಿದೆ"

"ಗೂಬೆಯೂ ಅಲ್ಲ ; ಗುಬ್ಬಚ್ಚಿಯೂ ಅಲ್ಲ, ನಿನ್ನ ಭ್ರಮೆ ಅಷ್ಟೇ ...."

"ಇಲ್ಲ, ಏನೋ ಹಾರಿ ಹೋಯ್ತು......."

"ಏನಿದೆ ಹಾರಿ ಹೋಗೋಕೆ ? ಗುಬ್ಬಿಚ್ಚಿಗಳನ್ನು ಕಾಡಿಗೆ ಬಿಟ್ಟಿದೀರಿ" ರೋಷದಿಂದ ಹೇಳಿದ. ತಕ್ಷಣವೇ ಅವಳಿಗೆ ಮನದಟ್ಟಾಯಿತು

"ಹೌದು, ಅದು ಗುಬ್ಬಚ್ಚೀನೆ, ನಂಗೀಗ ಗೊತ್ತಾಯ್ತು." ಹೇಳಿದಳು.

"ಇರಬಹುದು, ಒಂದೋ ಎರಡೋ ಉಳಿದುಕೊಂಡಿರಬಹುದು. ನಿನ್ನ ನೋಡಿ ಅದೂ ಹೆದರಿ ಓಡಿ ಹೋಗಿದೆ ಅಂತ ಹೇಳಿ ಮೇಲೆ ಮೇಲ್ಭಾವಣಿಯ ಕಡೆ ನೋಡಿದ. ಅಷ್ಟು ಹೊತ್ತಿಗಾಗಲೇ ಚೆನ್ನಾಗಿ ಬೆಳಕಾಗಿತ್ತು. ಆದರೆ ಅವನ ಮನಸ್ಸಿಗೆ ಮೋಡ ಕವಿದಂತಾಗಿತ್ತು. ಇದು ಬೆಳಕಾದ ಸೂಚನೆಯೇ ಅಲ್ಲ. ಎಂದಿನಂತೆ ಗುಬ್ಬಚ್ಚಿಗಳ ಕಲರವ ಇಲ್ಲ, ಹಾರಾಟ ಇಲ್ಲ, ಆದರೆ ? ಅದೇ ಇದೇನಿದು ? ಅಲ್ಲೊಂದು ಇಲ್ಲೊಂದು ಗುಬ್ಬಚ್ಚಿಗಳು ಭಾವಣಿಯ ಗೂಡುಗಳಿಂದ ಇಳಿದುಬರುತ್ತಿ ನೋಡುತ್ತಾ ಹೋದಂತೆ ಗುಬ್ಬಚ್ಚಿಗಳ ಸಂಖ್ಯೆ ಹೆಚ್ಚಾಯಿತು. ಎಂದಿನಂತೆ, ಚಿಲಿಪಿಲಿ ಗುಟ್ಟುತ್ತಾ, ಒಂದನ್ನೊಂದು ಅಟ್ಟಿಸಿಕೊಂಡು ಹಾರಾಡುತ್ತಿರುವ ಗುಬ್ಬಚ್ಚಿಗಳು! ಶಾಸ್ತ್ರಿಗೆ

ತಾನು ನೋಡುತ್ತಿರುವುದು ಕನಸೋ ನನಸೋ, ಎಂಬ ಅನುಮಾನ ಉಂಟಾಯಿತು.

"ಲಕ್ಷ್ಮಿ ಬಾಯಲ್ಲಿ.... ನೋಡು.... ಅಲ್ಲಿ ಕಾಣುತ್ತಿರುವುದು ಗುಬ್ಬಚ್ಚಿಗಳೇ ತಾನೇ? ಅಥವಾ ನಾನು ಭ್ರಮೆಯಲ್ಲಿದೇನೋ ಅಂತ....." ಅವಳು ಮೇಲೆ ಕೆಳಗೆ ಸುತ್ತಲೂ ಕಣ್ಣು ಹಾಯಿಸಿದಳು. ಪ್ರತಿಮೆಯಂತೆ ಗಲ್ಲಕ್ಕೆ ಕೈಕೊಟ್ಟು ನಿಂತವಳನ್ನು ಶಾಸ್ತ್ರಿ ಅಲುಗಾಡಿಸಿದ.

"ಹೌದ್ರೀ....ಅವು ಗುಬ್ಬಚ್ಚಿಗಳೇ, ಎಲ್ಲಾ ವಾಪಸ್ಸು ಬಂದುಬಿಟ್ಟಿವೆ."

"ಹಾಗಂತೀಯ ? ಅದ್ಹೇಗೇ ಸಾಧ್ಯ ?"

"ಹೌದು, ನೋಡಿ, ಹೇಗೆ ಸ್ವಚ್ಛಂದವಾಗಿ ಎಂದಿನಂತೆ ಹಾರಾಡುತ್ತಿವೆ. ಇವು ನಮ್ಮ ಮನೆಯ ಗುಬ್ಬಚ್ಚಿಗಳೇ "

"ನೋಡಿದ್ಯಾ ಅವುಗಳ ನಿಷ್ಠೇನಾ? ಅವು ಹುಟ್ಟಿ ಬೆಳೆದ ಜಾಗಾನ ಖಂಡಿತಾ ಮರೆಯುವುದಿಲ್ಲ, ಐದಲ್ಲ, ಐವತ್ತು ಮೈಲಿಗಳಾಚೆ ಬಿಟ್ಟು ಬಂದಿದ್ರೂ ತಮ್ಮ ಸ್ವಸ್ಥಾನಕ್ಕೆ ಮರಳುತ್ತವೆ ಎನ್ನೋದಕ್ಕೇ ಇದೇ ಸಾಕ್ಷಿ. ಈಗ ನನ್ನ ಮನಸ್ಸಿಗೆ ನಿರಾಳವಾಯಿತು. ಜೀವಮಾನವೆಲ್ಲಾ ಪಾಪ ಪ್ರಜ್ಞೆಯಿಂದ ನರಳುವುದು ತಪ್ಪಿತು. ಇನ್ನು ಮುಂದೆ ಇಂತಹ ಪಾಪದ ಕೆಲಸಕ್ಕೆ ಕೈ ಹಾಕಬೇಡ. ನಿನ್ನ ಪಾಪದಲ್ಲಿ ನನ್ನನ್ನು ಭಾಗಿಯನ್ನಾಗಿ ಮಾಡಬೇಡ. ನಿನ್ನ ಬದುಕಿಗೆ ಇರುವಷ್ಟು ಮಹತ್ವವನ್ನು ಪ್ರಾಣಿ ಪಕ್ಷಿಗಳಿಗೂ ಕೊಡಬೇಕು ಅನ್ನೋದನ್ನ ಕಲಿ" ಎಂದು ಉಪದೇಶವನ್ನು ನೀಡಿದ.

"ಹೋದೆಯಾ ಪಿಶಾಚಿ ಅಂದ್ರೆ, ಬಂದೇ ಗವಾಕ್ಷೀಲಿ" ಎನ್ನುವಂತೆ ಮಧ್ಯಾಹ್ನ ಬಿಟ್ಟು ಬಂದ ಗುಬ್ಬಚ್ಚಿಗಳು, ಮಧ್ಯರಾತ್ರಿಯ ಹೊತ್ತಿಗೆ ಮರಳಿ ಬಂದಿವೆ. ಅದೇ ಸದ್ದು, ನನಗೆ ಕೇಳಿಸಿದ್ದು, ಭಂಡ ಮುಂಡೇವು ಮತ್ತೆ ಬಂದು ಸೇರಿಕೊಂಡಿವೆ. ಹಾವಳಿ ಮಾಡೋಕೆ" ಎಂದು ತನ್ನಲ್ಲೇ ಗೊಣಗುತ್ತಾ ಒಡೆದ ಗಾಜಿನ ಚೂರುಗಳನ್ನು ಹೆಕ್ಕಿ ತೆಗೆದು, ಕಾಣದಂಥ ಗಾಜಿನ ಚೂರುಗಳನ್ನು ಸೆಗಣಿಯ ಉಂಟೆಯಿಂದ ಒತ್ತಿ ಒತ್ತಿ ಒತ್ತಿ ಎಲ್ಲವನ್ನು ತಿಪ್ಪೆಗೆ ಬಿಸಾಡಿದಳು.

* * *

ಗದ್ದೆಯ ಹಾಳೆ ಭತ್ತದ ಸಸಿಗಳನ್ನು ನಾಟಿ ಮಾಡಿಸಿದ್ದಾಗಿತ್ತು. ಹಾಳೆಗಳಿಗೆ ದಿನವೂ ನೀರನ್ನು ಹಾಯಿಸಬೇಕಾಗಿತ್ತು. ಮಳೆ ಚೆನ್ನಾಗಿ ಬಂದರೆ ಹಳ್ಳ,ಕೊಳ್ಳ, ಕೆರೆ, ಬಾವಿಗಳು ನೀರಿನಿಂದ ತುಂಬಿಕೊಳ್ಳುತ್ತಿದ್ದವು. ಇಲ್ಲದಿದ್ದರೆ ಬೆಳೆಗೆ ನೀರೇ ಇಲ್ಲ. ತೋಟದಲ್ಲಿ ಎರಡು ನೆಲ ಬಾವಿಗಳಿದ್ದವು. ಏತದ ಬಾನಿನಿಂದ ನೀರನ್ನು ಎತ್ತಿ, ಗದ್ದೆಗಳಿಗೆ, ತೋಟದ ಗಿಡಗಳಿಗೆ ನೀರನ್ನು ಹಾಯಿಸುವ ಅನುಕೂಲವನ್ನು ಮಾಡಿಸಿದ್ದ. ನಂಜನಗೂಡಿನಿಂದ ತರಿಸಿದ್ದ ರಸಬಾಳೆಯ ಸಸಿಗಳನ್ನೂ ಬೇರೆ ಬೇರೆ ತರಕಾರಿಗಳ ಸಸಿಗಳನ್ನು ನೆಡೆಸಿದ್ದ. ನೆಲಬಾವಿಯ ದಡದಲ್ಲಿ ಮೂರು

ಮಾವಿನ ಮರಗಳು ಇದ್ದವು. ತನಗೆ ತಾನೇ ಹುಟ್ಟಿಕೊಂಡು ಬೆಳೆದು ಮರವಾಗಿ, ಈಗ ಫಲವನ್ನು ಕೊಡುತ್ತಿರುವ ಮರಗಳು.

ಒಂದು ಜೀರಿಗೆ ಮಾವಿನ ಕಾಯಿಯ ಮರ, ಉಪ್ಪಿನಕಾಯಿಗೆ ಎತ್ತಿದ ಕೈ. ಅದಕ್ಕೇ ಒಂದು ವಿಶಿಷ್ಟವಾದ ಸ್ವಾದ, ತೋಟದ ಆಳುಗಳು ಮರವನ್ನು ಹತ್ತಿ ಗೊಂಚಲುಗಳನ್ನು ಇಡಿಯಾಗಿ ಇಳಿಸಿ, ಕಾಯಿಗಳಿಗೆ ಪೆಟ್ಟಾಗದಂತೆ ಕೊಯ್ದು ಕೊಡುತ್ತಿದ್ದರು. ಎರಡು ಮೂರು ಜಾಡಿಗಳಲ್ಲಿ ವರ್ಷಾಕಾಲಕ್ಕೆ ಆಗುವಂತೆ ಮಿಡಿ ಉಪ್ಪಿನಕಾಯಿ ಸಿದ್ಧವಾಗುತ್ತಿತ್ತು.

"ಮಿಡಿ ಉಪ್ಪಿನ ಕಾಯಿಯನ್ನು ನಿನ್ನ ಹಾಗೆ ಯಾರು ಹಾಕುಲ್ಲ ಲಕ್ಷ್ಮೀ... ನಿನ್ನ ಕೈ ಹದ ತುಂಬಾ ಚೆನ್ನಾಗಿದೆ." ಪಾತಕ್ಕ ಹೊಗಳುತ್ತಿದ್ದಳು.

"ಇದನ್ನೆಲ್ಲ ಕಲಿತಿದ್ದು ನಿಮ್ಮಿಂದಲೇ, ಅಮ್ಮನ ಮನೆಯಲ್ಲಿ ಇದನ್ನೆಲ್ಲಾ ಕಲಿಯಲಿಲ್ಲ. ನಿಮಗೇ ಗೊತ್ತಲ್ಲ ಮದುವೆಯಾದಾಗ ನನಗೆ ಏನೇನು ಬರ್ತಿತ್ತು ಅಂತ. ಅಲ್ಲದೇ ಈ ಜೀರಿಗೆ ಮಾವಿನಕಾಯಿ ಅಪರೂಪ. ಬಯಲು ಸೀಮೆಯಲ್ಲಿ ಸಿಗುಲ್ಲ, ಮಲೆನಾಡಿನಲ್ಲಿ ಮಾತ್ರ ಸಿಗುತ್ತೆ."

"ಹೌದು ಕಣೇ ಈ ರುಚಿಯನ್ನು ತಿಂದವರೇ ಬಲ್ಲರು. ಅಂತೂ ಈ ಹಳ್ಳೀಲಿ ಒಂದಾದ್ರು ನಿನಗೆ ಇಷ್ಟವಾಯ್ತಲ್ಲ."

"ಬರೀ ಉಪ್ಪಿನಕಾಯಿ ಒಂದಿದ್ರೆ ಆಯ್ತೇನತ್ಗೇ ? ಬೇರೆ ಪದಾರ್ಥಗಳು ಬೇಕಲ್ಲ......"

"ಉಪ್ಪಿನಕಾಯಿ ಇದ್ದರೆ ಊಟದ ರುಚಿ ಹೆಚ್ಚುತ್ತೇ, ಈ ಹಳ್ಳೀಲಿ ಕವಳೇಕಾಯಿ ಅಂತ ಸಿಗುತ್ತಂತೆ, ಲಂಬಾಣಿ ಹೆಂಗಸ್ರು ಕಾಡ್ನಿಂದ ಕಿತ್ತು ತಂದು ಮಾರ್ತಾರಂತೆ ನಾಲ್ಕಾಣೆಗೆ ಪಂಚೇರು ಕೊಡ್ತಾರಂತೆ ಅದರ ಉಪ್ಪಿನಕಾಯಿ ತುಂಬಾ ಚೆನ್ನಾಗಿರುತ್ತಂತೆ" ಪಾತು ಹೇಳ್ತಿದ್ಲು.

"ಅದನ್ನು ಕೊಂಡು ಹಾಕಿದ್ರಾಯ್ತು, ಆದರೆ ದುಬಾರಿ ಅಲ್ವಾ ಅತ್ಗೇ.... ಬೆಳೆಸುಲ್ಲ, ಕೊಂಡುತರುಲ್ಲ, ಅದಕ್ಕೇ ಯಾಕೆ ಇಷ್ಟು ಬೆಲೆ ?"

"ಕಾಡ್ನಲ್ಲಿ ಮುಳ್ಳುಗಿಡಗಳಿಂದ ಕಿತ್ತು ತರೋದು ಅಂದ್ರೆ ಕಷ್ಟಾನೇ ಅಲ್ಲಿಂದ ಹೊತ್ತು ತಂದು ಮಾರ್ತಾರೆ. ಆದಾಯ ಬೇಡ್ವಾ ? ಚೌಕಾಸಿ ಮಾಡಿದ್ರೆ ಕಡಿಮೆಗೂ ಕೊಡಬಹುದು."

"ಇಲ್ಲಿ ಒಳ್ಳೆಯ ನಿಂಬೆ ಹಣ್ಣುಗಳು ಸಿಗುಲ್ಲ, ಇಲ್ದಿದ್ರೆ ನಿಂಬೆಕಾಯಿಯ ಉಪ್ಪಿನಕಾಯಿಯನ್ನು ಹಾಕಬಹುದು."

"ಈ ವರ್ಷ ಬೇಸಗೇಲಿ ಹಪ್ಪಳ, ಸಂಡಿಗೆ, ಬಾಳಕ ಯಾವುದನ್ನು ಮಾಡ್ಲೇ ಇಲ್ಲ. ಮುಂದಿನ ಬೇಸಗೆಗಾದ್ರು ಮಾಡ್ಲೇ ಬೇಕು. ಶಾಂತನ ಮದುವೆಯ ದಿನಗಳಿಗೆ

ಆಗುತ್ತೆ."

"ಹೌದು ಅತ್ಗೇ, ಹುರುಳಿ ಹಪ್ಪಳಗಳನ್ನು ತಿಂದು ವರ್ಷದ ಮೇಲಾಯ್ತು. ನಿಮ್ಮ ಅಣ್ಣಂಗೆ ಹಪ್ಪಳ ಅಂದ್ರೆ ಭಾಳ ಇಷ್ಟ. ಸುಟ್ಟ ಹಪ್ಪಳಕ್ಕೆ ತುಪ್ಪ ಹಚ್ಚಿಕೊಟ್ಟರೆ ಕಾಫಿ ಜೊತೆಗೆ ಅದೇ ಸಾಕು."

"ಹೌದು, ಅವನ್ಗೆ ಚಿಕ್ಕ ವಯಸ್ನಿಂದ್ಲೂ, ಹಪ್ಪಳ ಸಂಡಿಗೆ, ಅದರಲ್ಲೂ ಬಾಳಕ ಅಂತಂದ್ರೆ ಪ್ರಾಣ."

"ಅದನ್ನೆಲ್ಲ ಮಾಡೋರ ರಟ್ಟೆ ಗಟ್ಟಿಯಾಗಿರ್ಬೇಕು. ಬಾವಿಯಿಂದ ನೀರನ್ನು ಸೇದಿ, ಸೇದಿ, ರಟ್ಟೆ ಬಿದ್ದು ಹೋಗುತ್ತೆ. ಸೊಂಟನೋವು ಬರುತ್ತೆ."

"ನೀನೂ ಅಷ್ಟೆ, ಬೇಡಾಂದ್ರೂ ಬಚ್ಚಲು ಮನೆಗೆ, ನೀನೇ ಸೇದಿ ತಂದು ಹಂಡೇನ ತುಂಬಿಸ್ತೀಯ, ವೈಕುಂಠಂಗೆ ಹೇಳಿದ್ರೆ ಸೇದಿ ಹಾಕ್ತಾನೆ."

"ನಿಮ್ಮ ಮಡಿಗೆ ಆಗ್ಬರುತ್ತಾ ? ಆಗೋದಾದ್ರೆ ಹೇಳಿ"

"ಹೋಗ್ಲೀ, ಶುಕ್ರವಾರ, ಶನಿವಾರದ ದಿನಗಳಲ್ಲಾದ್ರೂ ಅವನೇ ಹಂಡೇನ ತುಂಬಿಸಲಿ, ಮಕ್ಕಳಿಗೆ ಎಣ್ಣೆ ನೀರು ಹಾಕಾದ್ಮೇಲೆ, ನಾನು ಅಡಿಗೆ ಮನೆಯ ಒಲೆಯ ಮೇಲೇ ಒಂದು ತಪ್ಪಲೆ ನೀರನ್ನು ಕಾಯಿಸ್ಕೊಂಡು ಹುಯ್ಕೋತೀನಿ.

"ತಪ್ಪಲೆ ನೀರು ಸಾಕಾಗುತ್ಯೇ ?....... ನಿಮಗೇ ಕಷ್ಟ."

"ನಿಮ್ಮ ಮನೇಲಿ ನನಗೆ ಯಾವತ್ತೂ ಯಾವುದಕ್ಕೂ ಕೊರತೆ ಇಲ್ಲ ಲಕ್ಷ್ಮೀ. ಏನೋ ಲಕ್ನೋದಲ್ಲಿ ಸ್ವಲ್ಪ ಬಿಸಿಲು, ಶೆಕೆ ಅಂತ ಒದ್ದಾಡಿದ್ದುಂಟು. ನನಗೆ ಗುಂಡಣ್ಣ ಯಾವುದಕ್ಕೂ ಕಡಿಮೆ ಮಾಡಿಲ್ಲ. ಒಂದು ದಿನ ಒಂದು ಬಿರುಸು ನುಡಿ ನುಡಿದಿಲ್ಲ. ಇಲ್ದಿದ್ರೆ ನಾನು ಹೇಗೆ ಜೀವಿಸಬೇಕಾಗಿತ್ತು ನೀನೇ ಹೇಳು. ಚಿಕ್ಕ ವಯಸ್ನಲ್ಲಿ ನಾನು ಎಷ್ಟು ನೋವನ್ನನುಭವಿಸಿದೀನಿ ಅಂತ ನನಗೆ ಮಾತ್ರ ಗೊತ್ತು. ಉಟ್ಟು ತೊಟ್ಟು, ಸಿಂಗರಿಸಿಕೊಂಡು ಇರಬೇಕಾದ ವಯಸ್ನಲ್ಲಿ ತಲೆ ಬೋಳಿಸಿ ಕೊಂಡು ಕೆಂಪು ಸೀರೆಯುಟ್ಟು ವಿರಾಗಿನಿಯಂತೆ ದಿನಗಳನ್ನು ಕಳೆದೀದೀನಿ. ಸುಮಂಗಲಿಯರು ಮಾಡುವ ಪೂಜೆ, ವ್ರತ ಯಾವುದೂ ನನಗಿಲ್ಲ. ಒಪ್ಪತ್ತಿನ ಊಟ, ಏಕಾದಶಿಯ ನಿಟ್ಟುಪವಾಸ, ದಿನಾ ತಲೆಗೆ ಸ್ನಾನ ಇದನ್ನೆಲ್ಲ ನಾನು ಆಸೆ ಯಿಂದ ಮಾಡ್ತೀನಾ ? ನನ್ನ ಕರ್ಮಕ್ಕೆ ಮಾಡ್ತೀನಿ. ಎಂಥಾ ಹೀನ ಸ್ಥಿತಿ ನನಗೇ ಯಾಕೆ ಒದಗಿತು ಅಂತ ಹಗಲೂ ರಾತ್ರಿ ಕಣ್ಣೀರು ಸುರಿಸಿದೀನಿ ಯಾರ ಕೈಲಿ ಹೇಳಿಕೊಂಡರೂ, ನನ್ನ ಜೀವನ ಇಷ್ಟೇ ಏನೂ ಬದಲಾಗುಲ್ಲ. ನಂಗೊತ್ತು."

"ಲಕ್ಷ್ಮಿಗೆ ಪಾತಕ್ಕನ ನೋವು ಅರ್ಥವಾಗಿತ್ತು. ಮಾತು ಎಲ್ಲಿಂದ ಎಲ್ಲಿಗೋ ಹೋಗಿತ್ತು. ಗಂಡ, ಮಕ್ಕಳು ಅಂದರೆ ಏನು ಅಂತ ಅರಿಯದವರು, ಆದರೆ, ಎಲ್ಲರ ಕಷ್ಟ ಸುಖಕ್ಕೆ ಆದವರು, ಅನುಭವಿಗಳು.......ಏನೇ ದುಃಖವಿದ್ದರೂ ಅದನ್ನು

ಬಾಯಲ್ಲಿ ಪದೇ ಪದೇ ಕೇಳಿಕೊಂಡು ಎಂದೂ ಅತ್ತಿದ್ದು ಇಲ್ಲ. ಅಸೂಯೆಯಿಂದ ಮಾತನಾಡಿದ್ದಿಲ್ಲ ಇವರಂತೆ ದೊಡ್ಡ ಗುಣದವರಾಗಿರಬೇಕಾದರೆ, ಇನ್ನೊಂದು ಜನ್ಮವನ್ನೆತ್ತಿ ಬರಬೇಕು ಅಂತಂದುಕೊಂಡಳು.

"ನೀವು ಹೇಳೋದು ಸರಿ ಅತ್ತಿಗೆ ನಾವುಗಳು ಎಷ್ಟೇ ಪರದಾಡಿದರೂ, ಅದೇನೇನು ಆಗಬೇಕೋ ಅದು ಆಗಿಯೇ ತೀರುತ್ತೆ ಆದರೆ, ನಿಶ್ಚಿಂತೆಯಿಂದ ಇರಕ್ಕೇ ಆಗಲ್ಲವಲ್ಲ..... ಏನ್ಮಾಡ್ಲೀ ?

"ದೇವರ ಮೇಲೆ ಭಾರ ಹಾಕು. ಅವನು ಇರೋದು ಯಾತಕ್ಕೆ ? ನಮ್ಮಂಥ ಭಕ್ತರ ಸಹಾಯಕ್ಕೆ ತಾನೇ ಅವನು ನೋಡ್ಕೋತಾನೆ ಅಂತ ಅವನಿಗೇ ಬಿಡು." ಪಾತಕ್ಕ ಮುಗುಳ್ನಕ್ಕು ನುಡಿದಾಗ, ಲಕ್ಷ್ಮಿ ಸುಮ್ಮನೇ ನೋಡದಳು.

* * *

"ಅತ್ತೇ....ಅತ್ತೇ...." ಇದ್ದಕ್ಕಿದಂತೆ ಲಲಿತಾ ಕಿರುಚಿದಾಗ ಸಾತಕ್ಕ ದಿಗಿಲುಗೊಂಡಳು. "ಅತ್ತೇ ಇಲ್ಲಿ ನೋಡ್ಬನ್ನಿ ಎಷ್ಟು ಉದ್ದದ ಹಾವು ರಸ್ತೇಲಿ ಮಲಗಿದೆ" ಲಲಿತಾ ಸಾತಕ್ಕನ ಕೈ ಹಿಡಿದು ಎಳೆದುಕೊಂಡು ರಸ್ತೆಯ ಕಡೆಗೆ ಕರೆತಂದಳು. ಹತ್ತು ಹನ್ನೆರಡು ಅಡಿಯ ರಸ್ತೆಯಲ್ಲಿ ರಸ್ತೆಯಷ್ಟೇ ಅಗಲಕ್ಕೆ ಮೈಯನ್ನು ಚೆಲ್ಲಿ ಅಲುಗಾಡದೇ ಮಲಗಿರುವ ಹಾವನ್ನು ಕಂಡು ಸಾತಕ್ಕನ ಮೈ ಜುಂ ಎಂದಿತು

"ವೈಕುಂಠನ್ನ ಕರಿ ಲಲಿತಾ..... ಓಡಾಡುವ ರಸ್ತೇಲಿ ಹಾವು ಅಡ್ಡವಾಗಿ ಮಲಗಿದೆ, ಅತ್ಲಾಗೆ ಹೆದರಿಸಿ ಓಡಿಸಲಿ."

"ಇರಲಿ ಬಿಡಿ ಅತ್ತೇ..... ಓಡಾಡೋರೆಲ್ಲಾ ಹೆದರ್‍ಕೊಂಡು ಓಡ್ತಾರೆ. ಒಂಥರಾ ಮಜವಾಗಿರುತ್ತೆ." ಮುಗುಳ್ನಗುತ್ತಾ ನುಡಿದಳು.

"ಏನು ಮಜಾ ? ಓಡಾಡೋರು ಹೆದರಿ ಕಂಗಾಲಾದ್ರೆ ಮಜವಾಗಿರುತ್ತಾ ನಿಂಗೆ? ರಾಧ ನಿನ್ನನ್ನ ಅಟ್ಟಿಸ್ಕೊಂಡು ಬರ್ತಾಳಲ್ಲ. ಆಗ ನಿನಗೆ ಹೆದರಿಕೆ ಆಗಲ್ವಾ? ಅದು ನಮಗೆ ಮಜವಾಗಿ ಕಾಣಿಸುತ್ತಾ ! ಲಲಿತ ಪೆಚ್ಚಾದಳು ಮಾತಿಲ್ಲದೇ ನಿಂತಳು."

"ಹೋಗು, ವೈಕುಂಠನ್ನ ಕರಿ, ಮೊದಲು ಇದನ್ನು ಓಡಿಸಲಿ, ಇಲ್ದಿದ್ರೆ ಯಾವ್ದಾದ್ರೂ ಎತ್ತಿನಗಾಡಿ ಇದರ ಮೇಲೆ ಹರಿದೀತು.

"ಎಷ್ಟೋ ಹೊತ್ನಿಂದ ಹೀಗೇ ಮಲಗಿದೆ ಅತ್ತೇ.... ಸತ್ತೇ ಹೋಗಿದ್ಯೋ ಏನೋ ಬಿಡಿ ಅತ್ತೇ...."

"ಏನೇ ಆಗ್ಲಿ, ಕರಿ ಅಂದ್ರೆ ಕರೆದು ಬರ್ಬೇಕು ಸತ್ತಿದ್ರೂ ಅದೇನು ಮಾಡ್ಬೇಕೋ ಅದನ್ನು ಅವನು ಬಂದು ಮಾಡ್ಲಿ." ಅವಳ ಹಿಂದೆ ಬಂದು ನಿಂತಿದ್ದ ವೈಕುಂಠ ತನ್ನಲ್ಲೇ ನಗುತ್ತಿದ್ದ, ಸರ್‍ರನೆ ತಿರುಗಿದ ಸಾತಕ್ಕನಿಗೆ ಡಿಕ್ಕಿ ಹೊಡೆದ.

"ಥೂ ಮುಂಡೇದೇ ಮುಟ್ಟಿ ಬಿಟ್ಯಾ ? ದೂರ ನಿಲ್ಬಾರ್ದು? ಮತ್ತೆ ಸ್ನಾನ

ಮಾಡ್ಬೇಕಲ್ಲೋ.... " ಪಾತಕ್ಕ ಅವನ ಮೇಲೆ ರೇಗಿದಳು.

"ನಾನು ಒತ್ತಾರೇನೇ ಸಾನ ಮಾಡಾಯ್ತು ಅವ್ವಾವ್ರೇ..... " ಅವನು ಕಿಸ ಕಿಸ ನಗುತ್ತಾ ನುಡಿದ.

"ಆಯ್ತು, ಆಯ್ತು...... ನನ್ಹತ್ರ ನಿನ್ನ ತಮಾಷೆ ಬೇಡ. ಅತ್ಲಾಗೆ ಒಂದು ಹಾವು ಮಲಗಿದೆ. ಏನಾಗಿದೆ ಅಂತ ಹೋಗಿ ನೋಡು ವೈಕುಂಠ ಒಳಗೊಳಗೇ ನಗುತ್ತಾ ತನ್ನ ಕೈಗೆ ಸುತ್ತಿಕೊಂಡಿದ್ದ ದಾರವನ್ನು ನಿಧಾನವಾಗಿ ತನ್ನ ಕಡೆಗೆ ಎಳೆದುಕೊಂಡ. ಮಲಗಿದ್ದ ಹಾವು ನಿಧಾನವಾಗಿ ಇವರ ಕಡೆಗೆ ಹರಿದು ಬಂತು ಸಾತಕ್ಕ ಹೆದರಿ, ನಾಲ್ಕು ಹೆಜ್ಜೆ ಹಿಂದೆ ಸರಿದಳು. ವೈಕುಂಠ ಮತ್ತೆ ನಕ್ಕ.

"ನೋಡೇ ಲಕ್ಷ್ಮಿ, ಇವನ ಹುಡುಗಾಟಾನ. ಸತ್ತ ಹಾವಿನ ಬಾಯಿಗೆ ದಾರ ಪೋಣಿಸಿ, ರಸ್ತೆ ಮಧ್ಯೆ ಮಲಗಿಸಿದಾನೆ ಇವನಿಗೆ ತಮಾಷೆ. ನನ್ನನ್ನ ಹೆದರಿಸುಕ್ಕೆ ನೋಡ್ತಿದಾನೆ. ನಿನ್ನ ಸಲುಗೆ ಹೆಚ್ಚಾಯಿತು ಇವನಿಗೆ ಇವತ್ತು ಗುಂಡಣ್ಣ ಬರಲಿ. ಇವನಿಗೆ ಇದೆ ತಕ್ಕ ಶಾಸ್ತಿ ತಾನುಟ್ಟಿದ್ದ ಸೀರೆಯಿಂದ ಮುಖವನ್ನು ಒರೆಸಿಕೊಳ್ಳುತ್ತಾ ರೋಷದಿಂದ ಅವನನ್ನು ನೋಡಿದಳು.

"ವೈಕುಂಠಾ........ನಿನ್ನ ತಮಾಷೆಗೆ ಒಂದು ಇತಿ ಮಿತಿ ಬೇಡ್ವಾ ? ಅವತ್ತೇನೋ ಗುಬ್ಬಚ್ಚಿಗಳು ವಾಪಸ್ಸು ಬಂದಿದ್ರಿಂದ ಅಯ್ಯೋರು ಸುಮ್ನಾದ್ರು ಇವತ್ತು ಬೆನ್ನಿಗೆ ಎಣ್ಣೆ ಸವರಿಕೊಂಡು ಕೂತ್ಕೋ.....ನಿನಗಿದೆ ದೊಣ್ಣೆ ಪೂಜೆ ವೈಕುಂಠನ್ನ ಹೆದರಿಸಿ, ಲಲಿತಳ ಕಿವಿ ಹಿಂಡಿದಳು ಲಕ್ಷ್ಮಿ.

"ಇವನ ಜೊತೆ ಸೇರಿ ಅತ್ತೇನ ಕೀಟಲೆ ಮಾಡಿ, ಕಿಸಿ ಕಿಸಿ ಅಂತ ನಗ್ತೀಯಾ ಅಣ್ಣಂಗೆ ಗೊತ್ತಾದ್ರೆ ಸಿಗಿದು ತೋರಣ ಕಟ್ತಾರೆ ಹುಶಾರ್" ಲಲಿತ ಕೆಂಪಾದ ಕಿವಿಯನ್ನು ಕೈಯಿಂದ ಉಜ್ಜಿಕೊಂಡಳು. ವೈಕುಂಠ ಅರೆಜೀವವಾಗಿದ್ದ ಕೆರೆ ಹಾವನ್ನು ಲಾಂಟಾನ ಗಿಡಗಳ ಪೊದೆಯೊಳಗೆ ಅಡಗಿಸಿಟ್ಟು ಬಂದ. ಉಟ್ಟ ಸೀರೆಯಲ್ಲೇ ತಣ್ಣೀರ ಸ್ನಾನ ಮಾಡಿ ಹೊರ ಬಂದ ಸಾತಕ್ಕನ ಕಾಲಿಗೆ ಬಿದ್ದ.

"ತೆಪ್ಪಾತವ್ವ.... ಇನ್ಮೇಲೆ ಇಂಗೆಲ್ಲಾ ಮಾಡಾಕಿಲ್ಲ. ಒಟ್ಟೆಗಾಕ್ಕೊಳ್ಳಿ."

"ಏಳು ಪ್ರಾರಬ್ಧವೇ ನಾನೇನು ನಿಂಜೊತೆ ಆಟ ಆಡೋ ಹುಡ್ಗಿ ಅಂತ ಅಂದ್ಕೊಂಡ್ಯಾ ? ನಾನು ಮತ್ತೆ ತಣ್ಣೀರು ಹುಯ್ಕೋ ಬೇಕಾಯ್ತಲ್ಲ. ಅಲ್ಲಾ ನಿಂಗೇನು ಬಂತೋ ಕೇಡುಗಾಲ ! ಮೂಕ ಪ್ರಾಣಿಗಳನ್ನು ಹಿಡಿದು, ಕೊಂದು ಹಿಂಸೆ ಮಾಡ್ತೀಯಲ್ಲ, ಈಗೇನು ಮಾಡ್ದೆ ಅದನ್ನ ?

"ಪೊದೆಯೊಳ್ಗೆ ಇಟ್ಟಿವ್ನಿ, ಕೆರೆ ಆವು ಅವ್ವಾವ್ರೇ.... ಅದೇನ್ಮಾಡೀತು.... ಕಚ್ಚಾಕಿಲ್ಲ..."

"ಕೆರೆ ಹಾವೋ.. ನೀರು ಹಾವೋ.... ಅದೂ ಒಂದು ಪ್ರಾಣಿ ಹಾಗೆಲ್ಲಾ ಪ್ರಾಣಿ ಹಿಂಸೆ ಮಾಡ್ಬಾರ್ದು"

"ಆಯ್ತವ್ವಾ..... ನಿಮ್ಮಾತನ್ನ ನೆಪ್ಪಾಗಿಟ್ಕೊಳ್ತೀನಿ..... ಬಿಂದಿಗೇನ ಇತ್ತಾಗೆ ವಗಾಸಿ ಅಂಡೆಗೆ ನೀರು ತುಂಬಾಕ್ತೀನಿ."

"ಏನು ವಗಾಸೋದು ? ಅದು ತಾಮ್ರದ ಕೊಡ. ನಿನ್ನ ಕೈಗೆ ಸಿಕ್ಕಿ ಬಿದ್ದು ತೆಗ್ಗಿ ನುಗ್ಗೇಕಾಯಾಗಿದೆ. ಮಣ್ಣಿನ ಕೊಡ ಆಗಿದ್ದಿದ್ರೆ, ಇಷ್ಟು ಹೊತ್ತಿಗೆ ಅದೆಷ್ಟು ಬೇಕಾಗ್ತಿತ್ತೋ....." ವೈಕುಂಠ ಕಿಸ ಕಿಸ ನಗುತ್ತಾ ಆಕೆ ಇತ್ತ ಇಟ್ಟ ಬಿಂದಿಗೆಯನ್ನೆತ್ತಿ ಕೊಂಡು ಬಾವಿಯ ಕಡೆಗೆ ನಡೆದ.

ಪೊದೆಯಲ್ಲಿದ್ದ ಕೆರೆಹಾವು, ನಿಧಾನವಾಗಿ ಹರಿದು ಬಂದು, ರಸ್ತೆಯ ಒಂದು ಬದಿಗೆ ಬಂದು ಮಲಗಿತ್ತು, ಓಡಾಡುವವರೆಗೆ ಕಾಣಿಸುತ್ತಿತ್ತು. ಒಂದುಗಳಿಗೆ ಹೆದರಿ ನಿಂತು, ಅದರಿಂದ ತಮಗೆ ಅಪಾಯವಿಲ್ಲ ಎಂದು ಅರಿತು ಮುಂದೆ ಸರಿಯುತ್ತಿದ್ದರು. ಊಟಕ್ಕೆ ಬಂದ ಶಾಸ್ತ್ರೀಯೂ ಹಾವನ್ನು ಕಂಡ. ಅಲುಗಾಡದೇ ಮಲಗಿರುವುದನ್ನು ಕಂಡು ವೈಕಂಠನನ್ನು ಕರೆದ.

"ಪೊರೆಯ ಹತ್ರ ಒಂದು ಕೆರೆ ಹಾವು ಸತ್ತು ಬಿದ್ದಿದೆ. ಅದನ್ನು ಎತ್ತಿ ದೂರ ಎಲ್ಲಾದ್ರೂ ಬಿಸ್ಹಾಕಿ ಬಾ....."

"ಆಯ್ತು ಸಾಮೇರಾ....." ಕತ್ತಿಗೆ ಸುತ್ತಿದ್ದ ಟವೆಲನ್ನು ಬಾಯಿಗೆ ಇಟ್ಟು ನಗುತ್ತಾ ನುಡಿದಾಗ ಶಾಸ್ತ್ರಿಗೆ ರೇಗಿತ್ತು."

"ಅದ್ರಲ್ಲಿ ನಗೋದೇನಿದೆ ! ನಂಗೊತ್ತು ಅದು ನಿಂದೇ ಕಿತಾಪತಿ ಅಂತ ನಿಮ್ಮಪ್ಪಂಗೆ ಕಾಗ್ದ ಬರ್ದು ಹಾಕಿ ಕರೆಸ್ತೀನಿ. ನಿನ್ನ ಸಂಬಳಾನ ಚುಕ್ತಾ ಮಾಡಿ ನಿಮ್ಮೂರಿಗೆ ಅಟ್ತೀನಿ......"

"ಬ್ಯಾಡಾ ಬುದ್ಯೋರಾ.......ತೆಪ್ಪಾತು......." ಕೈ ಮುಗಿದ.

"ತೆಪ್ಪಾತು ತೆಪ್ಪಾತು ಅಂತ ತಪ್ಪನ್ನು ಮಾಡ್ತಾನೇ ಇರ್ತೀಯಲ್ಲೋ ಯಾವಾಗ್ಲೋ ತಿದ್ಕೋಳ್ಳೊದು....ನಿಂಗೆ ನಿಮ್ಮಪ್ಪನೇ ಸರಿ. ಮುಖ ಮುಸುಡಿ ನೋಡ್ದೇ ಚರ್ಮ ಸುಲಿಯೋ ಹಾಗೆ ಬಡೀತಾನೆ. ಬಡಿಸ್ಕೋ......"

"ಇಲ್ಲ ಬುದ್ಧಿ ಅಂಗ್ಮಾಡ್ಬ್ಯಾಡಿ. ನನ್ನ ತೆಪ್ಪನ್ನ ಒಟ್ಟೆಗಾಕ್ಕೊಳ್ಳಿ ಇನ್ನ್ಯಾಕ ಇಂಗೆಲ್ಲಾ ಮಾಡಾಕಿಲ್ಲ. ನಮ್ಮೂರ ದೇವರ್ಮೇಲಾಣೇ." ತನ್ನ ತಲೆಯ ಮೇಲೆ ಕೈಯನ್ನಿಟ್ಟು ಕೊಂಡ.

"ಹುಂ, ಅತ್ಲಾಗೆ ಸರ್ಕೊಂಡು ನಿಂತ್ಕೋ, ಇನ್ಮುಂದೆ ಇಂಥಾ ಕಿತಾಪತಿ ಮಾಡಿದ್ದನ್ನ ಕಂಡ್ರೆ ಭೂಗತ ಮಾಡಿಬಿಡ್ತೀನಿ" ಶಾಸ್ತ್ರಿ ವೈಕುಂಠನ ಕಡೆ ಬೊಟ್ಟು ಮಾಡಿ ಹೆದರಿಸಿ, ಒಳ ಬಂದ. ಒಳ ಬಾಗಿಲಲ್ಲಿ ನಿಂತಿದ್ದ ಸಾತಕ್ಕ, ಲಕ್ಷ್ಮಿ ಇಬ್ಬರೂ ವೈಕುಂಠನನ್ನು ವಿಚಿತ್ರವಾಗಿ ನೋಡಿದರು ವೈಕುಂಠ ತಲೆಯನ್ನು ಕೆರೆದುಕೊಳ್ಳುತ್ತ ಪೊದೆಯ ಕಡೆಗೆ ನಡೆದ.

* * *

ಗೌರಿ ಗಣೇಶನ ಹಬ್ಬದ ಹೊತ್ತಿಗೆ ಮಕ್ಕಳಿಗೆ ಹೊಸ ಬಟ್ಟೆಯನ್ನು ಹೊಲಿಯಬೇಕು. ಬಿಡುವೇ ಆಗುಲ್ಲ. ಸದಾ ಈ ಮನೆಯ ಕೆಲಸವೇ ಆಗ್ಹೋಯ್ತು." ಲಕ್ಷ್ಮಿ ಗೊಣಗಿದಳು. ಮನೆಯ ಕೆಲಸದ ಜೊತೆಗೆ ದನದ ಕೊಟ್ಟಿಗೆಯ ಕೆಲಸಗಳು, ಇನ್ನು ಎರಡ್ಮು ಹಸುಗಳು ಬಂದು ಸೇರಿದ್ದವು. ಆದರೆ ಅವು ರಾಧೆಯಂತಲ್ಲ, ಹಸುಗಳು ಹಸುಗಳೇ ! ಲಕ್ಷ್ಮಿಯೇ ಕರುಗಳನ್ನು ಬಿಟ್ಟು ಹಾಲನ್ನು ಕರೆಯುವುದನ್ನು ಅಭ್ಯಾಸ ಮಾಡಿಕೊಂಡಿದ್ದಳು. ಹಾಗೇ ಮೂರು ಎಮ್ಮೆಗಳನ್ನು ಹೊಡೆಸಿಕೊಂಡು ಬಂದುದಾಗಿತ್ತು.

"ಎಮ್ಮೆಗಳು ಬಂದ ಮೇಲೆ, ಕೊಟ್ಟಿಗೆಯೆಲ್ಲಾ ಸಗಣಿ ತೊಪ್ಪೆಯಿಂದ ತುಂಬಿ ಹೋಗಿದೆ. ಎಮ್ಮೆಗಳದ್ದು ಗಲೀಜು ಜಾಸ್ತಿ. ತಿನ್ನೋದೂ ಅಷ್ಟೇ ಎಮ್ಮೆ ಗೊಂತನಂತೂ ನೋಡುಕ್ಕೇ ಅಸಹ್ಯವಾಗುತ್ತೆ. ಎಲ್ಲೆಲ್ಲೂ ಸಗಣಿ ತೊಪ್ಪೆಯೇ ಕೊಟ್ಟೆಗೆಯಲ್ಲಾ ವಾಸನೆ." ಲಕ್ಷ್ಮಿ ಮುಖ ಸಿಂಡರಿಸಿದಳು.

"ಗೊಬ್ಬರದ ಗುಂಡಿಗಳಂತೂ ಬೇಗ ಬೇಗ ತುಂಬಿ ಹೋಗುತ್ವೇ. ಹಿತ್ತಲಲ್ಲಿ ಅದೆಷ್ಟು ಗೊಬ್ಬರದ ಗುಂಡಿಗಳು? ಜಾಗ ಇದೇಂತ."

"ಹಸುವಿನ ಸೆಗಣೀಲಿ ಬೆರಣಿ ತಟ್ಟೋದು ಸುಲಭ. ಎಮ್ಮೆ ಸೆಗಣಿಯಂತೆ ನೀರಾಗಿರುಲ್ಲ, ಗಟ್ಟಿಯಾಗಿರುತ್ತೆ."

"ನೀನು ಬೆರಣಿ ಅನ್ನುತ್ಲು ನೆನಪಿಗೆ ಬಂತು ಲಕ್ಷ್ಮಿ ಒಂದಿಷ್ಟು ವಿಭೂತಿ ಮಾಡಬೇಕಲ್ಲ, ಅದಕ್ಕೆ ನೀನೇ ಸರಿ. ಸರಿಯಾದ ಹಸುವಿನ ಸಗಣಿಯನ್ನೇ ಆರಿಸಿ, ಒಲೆಯೊಳಗೆ ಹಾಕಿರ್ತೀಯ ವಿಭೂತಿಯಂತೂ ನಯವಾಗಿ ಹದವಾಗಿರುತ್ತೇ."

"ಅತ್ತೇ.....ನೀವ್ಯಾಕೆ ವಿಭೂತೀನ ಹಚ್ಕೋತೀರಿ ಅಮ್ಮ ಯಾಕೆ ಹಚ್ಕೊ ಳ್ಳೋಲ್ಲ." ಪದ್ಮಿನಿ ಕೇಳಿದಾಗ ಸಾತಕ್ಕ ಗದರಿದಳು.

"ಥೂ ಬಿಡ್ತು ಅನ್ನು."

"ತಲೆ ಹರಟೆಗಳಾ..... ಬಾಯ್ಮುಚ್ಕೊಂಡು ಎದ್ಹೋಗು." ಲಕ್ಷ್ಮಿ ಬೈದಳು

"ಅದಕ್ಕೇನು ಗೊತ್ತಾಗುತ್ತೇ ! ಯಾಕೆ ಬೈತೀಯ ?"

"ಮಕ್ಕಳು ಮಕ್ಕಳ ಹಾಗಿರ್ಬೇಕು, ದೊಡ್ಡ ಮಾತುಗಳನ್ನಾಡಬಾರ್ದು" ಪದ್ಮಿನಿ ಸಿಟ್ಟಿನಿಂದ ತಾಯಿಯ ಕಡೆ ನೋಡಿದಳು. ಸಾತಕ್ಕ ಅವಳ ಕೆನ್ನೆಯನ್ನು ಸವರಿದಳು.

"ನಿನ್ನ ತಂಗೀನ ಕರಿ ಕಲ್ಲು ಸಕ್ರೆ ಇದೆ. ಇಬ್ರಿಗೂ ಕೊಡ್ತೀನಿ."

"ಅವಳು ಅತ್ತೆ ಮನೆಗೆ ಹೋಗಿದಾಳೆ"

"ಅಲ್ಲೇನು ಕೆಲ್ಸ ಅವಳ್ಗೆ ! ಯಾಕೆ ಹೋದ್ಲು ?" ಲಕ್ಷ್ಮಿ ರೇಗಿದಳು.

"ನಂಗೇನ್ಗೊತ್ತು ? ಬಂದ್ಮೇಲೆ ಅವಳ್ನೇ ಕೇಳು"

"ನೋಡಿದ್ರಾ ಅತ್ಗೆ ? ಹೇಗೆ ಮಾತಾಡ್ತಾಳೆ ? ಪಾಠ, ಓದು, ಶಿಸ್ತು ಯಾವುದೂ ಇಲ್ಲ, ಅವರಿವರ ಮನೆ ತಿರುಗೋದು. ದೊಡ್ಡ ದೊಡ್ಡ ಮಾತನ್ನಾ ಡೋದು. ನಿಮ್ಮಣ್ಣಂಗೆ ಹೇಳಿ, ನಿಮ್ಮಿಬ್ರನ್ನು ಶಿವಮೊಗ್ಗಾದ ಸ್ಕೂಲಿಗೆ ಸೇರಿಸುವಂತೆ ಹೇಳ್ತೀನಿ. ಬೆಳಿಗ್ಗೆ ಮನೆ ಬಿಟ್ಟು ಹೋದ್ರೆ, ರಾತ್ರಿಯೇ ಮನೆಗೆ ಬರ್ಬೇಕು. ಆಗ್ಲೇ ನಿಮ್ಗೆ ಬುದ್ಧಿ ಬರೋದು."

"ಗುಂಡಣ್ಣ ಹೇಳ್ತಿದ್ದ ಇಲ್ಲಿಗೇ ಬಂದು ಪ್ರೈಮರಿ ಸ್ಕೂಲು ಸಧ್ಯದಲ್ಲೇ ಬರಬಹುದು ಅಂತರಂದ. ಮೀಟಿಂಗ್‌ನಲ್ಲಿ ಪಟೇಲ್ರು ಹೇಳಿದ್ರಂತೆ."

ಸಧ್ಯ ! ಒಂದು ಸ್ಕೂಲು ಅಂತ ಶುರುವಾದ್ರೆ ಸಾಕಾಗಿದೆ. ಬೆಳೆಯೋ ಮಕ್ಕಳಿಗೆ ವಿದ್ಯಾಭ್ಯಾಸವೇ ಇಲ್ಲದಿದ್ರೆ ಹೇಗೆ ! ನಮ್ಮಂಥೋರಿಗೆ ವಿದ್ಯೇನೇ ಮುಖ್ಯ. ಅದನ್ನೆಲ್ಲ ನಿಮ್ಮಣ್ಣ ತಾವಾಗಿಯೇ ಹೇಳೋದೇ ಇಲ್ಲ. ನಾನೇ ಮತ್ತೆ ಮತ್ತೆ ಕೇಳಿ ಬೈಯಿಸಿಕೊಳ್ಳಬೇಕು."

"ಅಣ್ಣ ಬಂದ್ರು !.... ಅಣ್ಣ ಬಂದ್ರು.... ರಾಗಿಣಿ ಚಪ್ಪಾಳೆ ತಟ್ಟುತ್ತಾ ಹೊರಗಿನಿಂದ ಓಡಿ ಬಂದಳು. ವೆಂಕಟೇಶನೂ ಚಪ್ಪಾಳೆ ತಟ್ಟಿ ಕಿಲ ಕಿಲನೆ ನಕ್ಕು, ಕುಣಿದ.

"ಏನೋ ನೀನ್ಯಾಕೋ ಕುಣಿತೀದೀಯಾ ? ಲಕ್ಷ್ಮಿ ಅವನನ್ನ ಎತ್ತಿಕೊಂಡು ಕೆನ್ನೆಗಳಿಗೆ ಲೊಚ ಲೊಚನೆ ಮುತ್ತಿಟ್ಟಳು. ಏನೇ ರಾಗಿಣಿ, ಅತ್ತೇ ಮನೆಗೆ ಯಾಕೇ ಹೋಗಿದ್ದೆ ಸುಮ್ಮಸುಮ್ನೆ ? ಅಣ್ಣಂಗೆ ಹೇಳ್ಲಾ ?" ಮಗಳ ಕಡೆ ತಿರುಗಿ ಗದರಿದಳು.

"ಮಾವಯ್ಯ ಕರೆದಿದ್ರು, ನಾನೇನು ಸುಳ್ಳು ಹೇಳ್ತಿಲ್ಲ. ಹೇಳ್ಕೋ ನಾನೇನು ಹೆದ್ರುಲ್ಲ....." ಅಷ್ಟರಲ್ಲಿ ಶಾಸ್ತ್ರಿ ಒಳಗೆ ಬಂದ.

"ಏನ್ರೇ ಅದು ಗಲಾಟೆ ?" ಎಂದು ಕೇಳುತ್ತಾ 'ಹುಶ್' ಎಂದು ಉಸಿರು ಬಿಟ್ಟು, ಶಲ್ಯದಲ್ಲಿ ಗಾಳಿಯನ್ನು ಬೀಸಿಕೊಳ್ಳುತ್ತಾ, ಅಲ್ಲಿದ್ದ ಒಂದೇ ಒಂದು ಮರದ ಕುರ್ಚಿಯ ಮೇಲೆ ಕುಳಿತ. "ಒಂದ್ಲೋಟ ತಣ್ಣೀರನ್ನು ತಂದ್ಕೊಡು.... ಹಾಗೇ ಒಂದು ದೊಡ್ಡ ಬಕೆಟ್‌ನಲ್ಲಿ ನೀರನ್ನು ತಂದಿಡಿ, ಯಾರಾದ್ರು.."

"ಒಂದು ಬಕೆಟ್ ನೀರು ! ಯಾಕೋ ಗುಂಡಣ್ಣಾ....." ಸಾತಕ್ಕ ಪ್ರಶ್ನಿಸಿದಳು.

"ಇಲ್ನೋಡು" ಎನ್ನುತ್ತಾ ತನ್ನ ಕೈಯಲ್ಲಿದ್ದ ಬಟ್ಟೆಯ ಚೀಲದೊಳಗಿಂದ ಒಂದು ಆಮೆಯ ಮರಿಯನ್ನು ತೆಗೆದು ನೆಲದ ಮೇಲೆ ಬಿಟ್ಟ.

"ಆಮೆ ಮರಿ ! ಇದೆಲ್ಲಿ ಸಿಕ್ತೋ ?" ಸಾತಕ್ಕ ಕಣ್ಣುಗಳನ್ನರಳಿಸಿದಳು.

"ತೋಟದ ಬಾವಿಯ ಬಳಿ ಇರುವ ಕಾಲುದಾರಿಯಲ್ಲಿ ಮಲಗಿತ್ತು. ಮನೆಯ ಬಾವಿಗೆ ಬಿಡೋಣ. ನೀರು ಶುದ್ಧಿಯಾಗುತ್ತೆ ಅಂತ ಎತ್ಕೊಂಡ್ಬಂದೆ. ಸಧ್ಯಕ್ಕೆ ಬಕೆಟ್‌ನಲ್ಲಿ ಇಟ್ಟಿರೋಣ."

"ಈಗಾಗ್ಲೇ ಬಾವಿಯಲ್ಲಿ ಜಾತಿ ಮೀನುಗಳಿವೆಯಲ್ಲ ಮತ್ತಿದ್ಯಾಕೆ ? "

"ಮೀನು ಇದ್ದರೆ, ಆಮೆ ಇರ್ಬಾರ್ದು ಅಂತೇನಿಲ್ಲ ಎರಡೂ ಇರಲಿ ನೀರು ಹೆಚ್ಚು ಶುಚಿಯಾಗುತ್ತೆ."

ಆಮೆ ಮರಿ ಕಲ್ಲಿನಂತೆ ಅಲುಗಾಡದೇ ಮಲಗಿತ್ತು. ಪದ್ಮಿನಿ ರಾಗಿಣಿ ಅದನ್ನ ಮುಟ್ಟಿದರೂ ಅದು ಚಲಿಸಿರಲಿಲ್ಲ.

"ಸತ್ಹೋಗಿದೆ ಅಲುಗಾಡ್ತಾನೇ ಇಲ್ಲ." ಇಬ್ಬರೂ ಒಟ್ಟಿಗೇ ನುಡಿದರು.

"ಅದು ಹಾಗೇನೇ, ತನ್ನ ಚಿಪ್ಪಿನೊಳಗೆ ಕೈ ಕಾಲುಗಳನ್ನು ಮುಖವನ್ನು ಮುಚ್ಚಿಟ್ಟುಕೊಂಡಿರುತ್ತೆ. ನೀರಿನಲ್ಲಿ ಬಿಟ್ಟ ಮೇಲೆ ತನ್ನನ್ನು ಯಾರೂ ನೋಡ್ತಿಲ್ಲಾ ಅಂತ ಗೊತ್ತಾದ ಮೇಲೆ ಚಿಪ್ಪಿನಿಂದ ಹೊರಕ್ಕೆ ತಲೆಯನ್ನು ಹಾಕುತ್ತೆ"

"ನಿಮಗೆ ಹೇಗೆ ಗೊತ್ತು ?"

"ನಮ್ಮೂರ ಕಡೆ, ಕೆರೆಗಳಲ್ಲಿ ನದಿಗಳಲ್ಲಿ ಆಮೆಗಳು ವಾಸ ಮಾಡುತ್ವೆ. ಅದಕ್ಕೇ ನಂಗೊತ್ತು ಸುಮ್ನೇ ಮುಟ್ತಾನೇ ಇರ್ಬೇಡಿ ಅದಕ್ಕೆ ಹೀಗೆ ಆಗುತ್ತೆ."

"ಅತ್ತೇ ಅತ್ತೇ..... ಒಂದೇ ಒಂದ್ಸಲ" ಗೋಗರೆದಳು.

"ಬೇಡಾಂದ್ಮೇಲೆ ಬೇಡ. ಅಷ್ಟೋ ಗೊತ್ತಾಗುಲ್ವಾ ? ಅತ್ಲಾಗೆ ಸರೀರಿ" ಎನ್ನುತ್ತಾ ಆಮೆಯ ಮರಿಯನ್ನು ಬಕೇಟಿನೊಳಗೆ ಇಳಿಬಿಟ್ಟ ಅದು ತಳದಲ್ಲಿ ಕಲ್ಲಿನಂತೆ ಕುಳಿತುಕೊಂಡಿತು. ಶಾಂತಳೂ ಬಂದು ಸೇರಿಕೊಂಡಳು. ಪದ್ಮಿನಿ ರಾಗಿಣಿಯರಂತೂ, ಅದೆಂದಿಗೆ ಚಿಪ್ಪಿನಿಂದ ಹೊರಕ್ಕೆ ತಲೆ ಹಾಕುವುದೋ ಎಂದು ಕಾಯುತ್ತಾ ಕುಳಿತಿದ್ದರು ಶಾಂತ ಇಣುಕಿದಳು.

"ಓ.... ಆಮೆ ಮರಿ ! ಎಷ್ಟು ಚಿಕ್ಕದಾಗಿದೆ, ಬೆಳೆಯುತ್ತಾ ?"

"ಬೆಳೀದೇ ಏನು ?"

"ನಮ್ಮನೆಯ ಬಾವಿಯ ಅಗಲಕ್ಕೂ ಬೆಳೆದು ಬಿಟ್ರೆ ?"

"ಅಷ್ಟೊಂದು ದೊಡ್ಡದಾಗುಲ್ಲ, ಹಾಗೇನಾದ್ರೂ ಬೆಳೆದ್ರೆ, ತೋಟದ ಬಾವಿಗೆ ಬಿಟ್ಟರಾಯ್ತು. ಸುಮ್ನೇ ಅದನ್ನೇ ನೋಡ್ತಿರ್ಬೇಡಿ. ಹೆದರಿಕೊಳ್ಳುತ್ತೆ."

"ಹುಂ ಅದು ಚಿಪ್ಪಿನಿಂದ ಹೊರಕ್ಕೇ ಬಂದಿಲ್ಲ. ಸ್ವಲ್ಪ ಹೊತ್ತು ನಾವೆಲ್ಲಾ ದೂರ ಇದ್ದರೆ, ಅದಕ್ಕೆ ಭಯ ಕಡಿಮೆ ಆಗಿ, ಹೊರಕ್ಕೆ ತಲೆ ಇಡುತ್ತೆ." ಸಾತಕ್ಕ ಎಲ್ಲರನ್ನ ಅತ್ತ ಕಳಿಸಿದಳು ಊಟಕ್ಕೆ ಬಂದ ವೈಕುಂಠನಿಗೂ ವಿಷಯ ತಿಳಿಯಿತು ಕುತೂಹಲದಿಂದ ಬಗ್ಗಿ ನೋಡಿ, ಒಂದು ಕಡ್ಡಿ ತಗೊಂಡು ಆಮೆಯನ್ನು ತಿವಿದು ಅಲುಗಾಡಿಸಿದ.

"ಏಯ್, ಸುಮ್ನಿರೋ ಕ್ಯಾತೇ ಪ್ರಾಣಿಗಳನ್ನ ಹಿಂಸೆ ಮಾಡ್ದೇ ಇದ್ರೆ ನಿಂಗೆ ತಿಂದ ಅನ್ನ ಅರಗುಲ್ಲ" ಅಂತ ಕಾಣುತ್ತೇ ಸಾತಕ್ಕ ಗದರಿದಳು.

"ಏ ಬುಡಿ ನಾನು ತಿನ್ನೋದು ರಾಗಿ ಮುದ್ದೆ ಅಲ್ಲವ್ರಾ ! ನಾನೆಲ್ಲಿ ಅನ್ನ

ತಿಂತೀನಿ ?" ಜಾಣನಂತೆ ಕೇಳಿದ.

"ಎಂಥದೋ ಒಂದು ಹೊಟ್ಟೆಗೆ ಹೋಗೋದೆಲ್ಲ ಅನ್ನವೇ....."

"ಅದೆಂಗಾಯ್ತದೆ ? ಕುಡ್ಯೋ ನೀರು ಅನ್ನ ಆದೀತಾ ?"

"ಜಾಣನ್ಹಾಗೆ ಮಾತಾಡ್ಬೇಡ ಈ ಆಮೆ ಮರಿಯನ್ನು ನಿಧಾನವಾಗಿ ಬಾವಿಯೊಳಕ್ಕೆ ಬಿಡು 'ದಪ್' ಅಂತ ಮೇಲಿಂದ ಎಸೀಬೇಡ.

"ನಾನು ಬಾವಿಯೊಳಕ್ಕೆ ಇಳಿದು, ಬಿಟ್ಟು ಬರ್ತೀನಿ."

"ಏನೂ ಬೇಡ ಬಾವಿಗ್ಯಾಕೆ ಇಳೀಬೇಕು ಶೂರನ ಹಾಗೆ. ಬಕೇಟ್‌ಗೆ ಹಗ್ಗ ಕಟ್ಟಿ ಇಳಿಸು, ಆಮೆ ತಾನಾಗಿಯೇ ನೀರಿನೊಳಕ್ಕೆ ಸೇರಿಕೊಳ್ಳುತ್ತೆ." ವೈಕುಂಠ ದಿಗ್ವಿಜಯಕ್ಕೆ ಹೊರಟವನಂತೆ, ಬಕೆಟ್‌ನ್ನು ಭುಜದ ಮೇಲೆ ಹೊತ್ತು ಹೊರಟ ಅವನ ಹಿಂದೆ, ಶಾಂತ, ಪದ್ಮಿನಿ, ರಾಗಿಣಿಯರೂ ನಡೆದರು. ವೆಂಕಟೇಶ ತಾನೂ ಹೋಗುವುದಾಗಿ ಹಠ ಮಾಡಿದ. ಆದರೆ ಲಕ್ಷ್ಮಿ ಅವನನ್ನು ಸೊಂಟದಿಂದ ಕೆಳಕ್ಕೆ ಇಳಿಸಲಿಲ್ಲ.

"ಹುಶಾರು ಕಣ್ರೇ.....ಶಾನೇ ಬಗ್ಗಬೇಡಿ....."

"ನಾನಿದೀನಿ ಅತ್ತೇ..... ನಾನು ನೋಡ್ಕೋತೀನಿ." ಶಾಂತ ತಂಗಿಯರಿಬ್ಬರ ಕೈಗಳನ್ನು ಹಿಡಿದಳು.

ವೈಕುಂಠ ಎಚ್ಚರಿಕೆಯಿಂದ ಆಮೆಯ ಮರಿಯನ್ನು ಬಾವಿಗೆ ಇಳಿಸಿದ. "ಎಲ್ರೂ ಜೈ ಎನ್ನಿ ಎಂದು ನುಡಿದಾಗ ಶಾಂತ ಸುಮ್ಮನೇ ನಕ್ಕಳು ಪದ್ಮಿನಿ ರಾಗಿಣಿಯರೂ 'ಜೈ' ಎಂದರು.

"ಶಾಂತವ್ವಾ...... ಮರೀಗೆ ಏನು ಎಸ್ರು ಇಡೋವಾ ?"

"ಅದಕ್ಯಾಕೋ ಹೆಸ್ರು ? ಹೆಸ್ರು ಗಿಸ್ರು ಏನೂ ಬೇಡ"

"ಕೂರ್ಮಪ್ಪ ಅಂತ ಇಡೋವಾ.........." ಉತ್ಸಾಹದಿಂದ ಹೇಳಿದ.

"ಕೂರ್ಮ ಅಂದ್ರೇ ಆಮೆ..... ಅಂತ ಅದೆಂಥಾ ಹೆಸ್ರು ?"

"ನಮ್ಮೂರ್ನಾಗೆ ಅರಿಕತೆ ಏಳುವಾಗ ಅಯ್ನೋರು ದಸಾವತಾರದ ಕತೇನ ಯೋಳ್ತಿದ್ರು, ನಮ್ಮಪ್ಪ ಕೂರ್ಮನ ಅವತಾರಾನ ಎತ್ತಿದ್ನಂತೆ ಆ ಕತೆ ನೆಪ್ಪಿಗೆ ಬಂತು." ಶಾಂತ ನಕ್ಕಳು.

"ಸರಿ ಕೂರ್ಮ ಅಂತ ಕರೆದ್ರೇ ಆಯ್ತು ನಡೀರಿ ಎಲ್ರೂ ಹೋಗೋಣಾ. ಇಲ್ಲೇ ನಿಂತಿದ್ರೆ ಅದು ಮೇಲಕ್ಕಂತೂ ಬರುಲ್ಲ."

"ಅವ್ವಾವ್ರೇ..... ನೀವು ಲಗ್ನ ಆಗಿ ಒಂಟೋದ್ರೆ ನಮ್ಮಪ್ಪಂಗೆ ಬ್ಯಾಸ್ರ ಆಗುಲ್ಲವ್ರಾ?" ಶಾಂತ ನಕ್ಕಳು.

"ನನ್ನ ಮದುವೆ ಆದ್ರೆ ನಿಮ್ಮಪ್ಪಂಗೆ ಯಾಕೆ ಬೇಸರಾನೋ? ನಾನು ಅವನ ಮುಖಾನೇ ನೋಡಿಲ್ಲ."

"ನಾನು ಈವಪ್ಪನ ವಿಸ್ಯ ಏಳ್ದೆ. ಬಾವಿಯ ಕಡೆ ಕೈ ತೋರಿದ."

"ಸರ್‍ಯಾಗಿ ಮಾತ್ನಾಡು ಏನೇನೋ ಆಡ್ತೀಯಾ...ಬಂದು ಇಷ್ಟು ದಿನಗಳಾದ್ರೂ ಸರ್‍ಯಾಗಿ ಮಾತ್ನಾಡೋದನ್ನೇ ಕಲಿತಿಲ್ಲ ನೀನು."

"ನಂಗೂ ವಸಿ, ಬರ್‍ಯಾಕೆ ಓದಾಕೆ ಹೇಳ್ಕೋಡಿ ಸಾಂತವ್ವಾರೇ.... ಹೆ.... ಹೆ....." ಎಂದು ಪೆಚ್ಚಾಗಿ ನಗುತ್ತಾ ಕೇಳಿದ.

"ನಮ್ಮ ಹಳ್ಳೀಗೆ ಓಂದು ಪ್ರೈಮರಿ ಸ್ಕೂಲು ಬರುತ್ತಂತೆ ನೀನೂ ಸ್ಕೂಲ್ಗೆ ಸೇರ್‍ಕೋ, ಇವರಿಬ್ರೂ ನಿನ್ನ ಜತೆಗಿರ್ತಾರೆ" ಶಾಂತ ರೇಗಿಸಿದಳು.

"ಥೂ, ಇಷ್ಟು ದೊಡ್ಡೋನು..... ನಮ್ಮ ಜತೆ ಓದ್ತಾನಾ ?" ಪದ್ಮಿನಿ ರಾಗಿಣಿಯರು ರಾಗವಾಗಿ ಕೇಳಿದರು.

"ಬೇಡ್ರವ್ವಾ ನಂಗೆ ಇಸ್ಕೂಲು ಬೇಡ ನನ್ನ ಎಸ್ರನ್ನ ಎಂಗೆ ಬರ್‍ಯೋದು ಅಂತ ಏಳ್ಕೋಡಿ ಬೋ ಆಯ್ತದೆ"

"ಸರಿ ಸಾಯಂಕಾಲದ ಹೊತ್ನಲ್ಲಿ ಹೇಳಿಸ್ಕೋ, ಅದ್ಸರಿ, ಇದ್ದಕ್ಕಿದ್ದಂತೆ ನಿಂಗ್ಯಾಕೆ ಈಗ ಈ ಆಸೆ ಬಂತು ?"

"ಏನೋ ನಂಗೊತ್ತಿಲ್ಲ, ನಾನೀಗ ಕಲಿತ್ರೆ ತೆಪ್ಪಾಯ್ತದಾ ?"

"ತಪ್ಪೇನಿಲ್ಲ, ನಮ್ಮ ಅಪ್ಪಂಗೆ, ಅತ್ತೆಗೆ ತುಂಬಾ ಸಂತೋಷವಾಗುತ್ತೇ. ನೀನು ಕಲಿತು ಜಾಣನಾಗ್ತಿದೀಯ ಅಂತ."

"ನಮ್ಮಪ್ಪ, ಸದಾ ದಡ್ಡ ದಡ್ಡ ಅಂತ ಉಗೀತಾನೆ. ಅವನಿಗೆ ನಾನೇ, ನನ್ನ ಕೈಯಾರ ಒಂದು ಕಾಜಗ ಬರದಾಕ್ಬೇಕು. ಅವನ್ಗೆ ಓದ್ದುಕ್ಕೇ ಬರುಲ್ಲ ಬೆರೆಯೋರ ಕೈಲಿ ಓದಿಸ್ತಾನೆ." ಗಹಗಹಿಸಿ ನಕ್ಕ.

"ಎಲ್ಲಾ ಕಲಿತೋನ ಥರ ನಗ್ಬೇಡ ಮೊದಲು ಕಲಿತ್ಕೋ.......ಅಪ್ಪನ್ನ ಕಂಡ್ರೆ ಮರ್‍ಯಾದೆ ಬೇಡ್ವಾ ನಿಂಗೆ?"

"ನಮ್ಮಪ್ಪಂಗೆ ಕ್ವಾಪ ಜಾಸ್ತಿ. ಎಕ್ಕಡದಾಗೆ ಬಡ್ದಿದಾನೆ."

"ನೀನು ಏನೋ ಮಾಡಿರ್ಬೇಕು ಇಲ್ದಿದ್ರೆ ಯಾಕೆ ಹೊಡೀತಾನೆ.....?"

"ಹೂಂ ನಾನೂ ವಸಿ ಕಿತಾಪತಿ ಮಾಡ್ತಿದ್ದೆ. ಯಾರೋ ಏಳಿದ ಚಾಡಿ ಮಾತನ್ನ ಕೇಳ್ಕೊಂಡು ಒಡೆದ. ನಾನು ಮನೆ ಬಿಟ್ಟು ಒಂಟೋಗಿದ್ದೆ. ಉಡಿಕ್ಕೊಂಡು ಬಂದು "ಬಾರೋ ಮಗನೇ ಅಂತ ಎಳ್ಕೊಂಡು ಓದ."

"ಸರ್‍ಯಾಗಿದೀರಿ ಅಪ್ಪ ಮಗ ಇಬ್ರೂ.....ಅತ್ತೇ ಅದಕ್ಕೇ ಬೈಯೋದು."

"ಏನೇ ಅನ್ನಿ, ನಿಮ್ಮ ಅತ್ತೇವ್ವ ಬಾಳ ಒಳ್ಳೋರು." ಹೊಗಳಿದ.

* * *

"ಸಂಗೀತದ ಮೇಷ್ಟ್ರು ಬಂದಿದಾರೆ ಬರ್ಬೇಕಂತೆ ಮಾವಯ್ಯಾ."

ರಾಜ ಮುಂಬಾಗಿಲಿನಲ್ಲೇ ನಿಂತು ಹೇಳಿದ.

"ಹೂಂ ಈಗ್ಬಂದೆ ಅಂತ ಹೇಳು." ಶಾಸ್ತ್ರಿ ಅವನನ್ನು ಕಳಿಸಿ ಶಾಂತ, ಲಲಿತರನ್ನು ಅವಸರಪಡಿಸಿದ. "ನಾನು ನೆನ್ನೇನೆ ಹೇಳಿದ್ದೆ ಬೆಳಿಗ್ಗೆ ಬೇಗ ಎದ್ದು ಸಿದ್ಧವಾಗಿರಿ ಅಂತ ಇನ್ನೂ ಜಷ್ಟೇ ಥರ ಕೂತಿದೀರಲ್ಲ.." ಮಕ್ಕಳ ಮೇಲೆ ರೇಗಿದ.

"ಒಳ್ಳೆ ಕೆಲಸಕ್ಕೆ ಹೊರಟಾಗ ಯಾಕೆ ರೇಗ್ತೀಯೋ ಗುಂಡಣ್ಣಾ..... ಅವರಿನ್ನೂ ಈಗ ಬಂದಿರ್ತಾರೆ ಸ್ವಲ್ಪ ಸುಧಾರಿಸಿಕೊಳ್ತಾರೆ. ಕೈಕಾಲು ತೊಳೆದು ಹಾಲೋ, ಕಾಫೀನೋ ಕುಡಿದ ನಂತರವೇ ಪಾಠಾನ ಶುರುಮಾಡ್ತಾರೆ. ಬೆಳೆಗ್ಗೇನೇ ಹೂ ಕೊಯ್ದು ಕಟ್ಟಿಟ್ಟಾಗಿದೆ. ಶಾಂತ ಹೂವು ಹಣ್ಣಿನ ಬುಟ್ಟಿನ ತಗೋ. ಪುಸ್ತಕ ಪೆನ್ನು ತಗೊಳ್ಳಿ, ಸರಿಯಗಿ ಗಮನವಿಟ್ಟು ಕಲೀರಿ. ಮನೆ ದೇವರಿಗೆ ನಮಸ್ಕಾರ ಮಾಡ್ಬಿಟ್ಟು ಹೋಗಿ."

"ಮೂರು ಜನ ಆಗುತ್ತೆ, ವೆಂಕಟೇಶನ್ನು ಕರ್ಕೊಂಡು ಹೋಗಿ." ಲಕ್ಷ್ಮಿ ಹೇಳಿದಳು.

"ಅಮ್ಮಾ ನಾವು ಹೋಗ್ತಿವಮ್ಮ." ಲಲಿತಳ ಕೈ ಹಿಡಿದು ಪದ್ಮಿನಿ ನುಡಿದಾಗ, ಲಲಿತ ತಳ್ಳಿದಳು.

"ಏನೂ ಬೇಡ ಎಲ್ರೂ ಹೋದ್ರೆ ಮಾವಯ್ಯ ಏನಾದ್ರೂ ಅಂತಾರೆ."

"ನೀನು ಮುಂದೆ ಹೋಗು ಗುಂಡಣ್ಣ. ಇವರಿಬ್ರೂ ಒಂದು ಗಳಿಗೆ ಬಿಟ್ಟು ಬರ್ತಾರೆ ಗುಂಡಣ್ಣ. ಶಲ್ಯವನ್ನು ಸರಿಯಾಗಿ ಹೊದ್ದು ಹೊರಟ ಕಂಠಿ ಅವನನ್ನು ಬಾಗಿಲಲ್ಲೇ ಎದುರ್ಗೊಂಡ.

"ಯಾಕಯ್ಯ, ತಡ? ಒಳ್ಳೆ ಗಳಿಗೇಲಿ ಪಾಠಾನ ಶುರು ಮಾಡಿದರೆ ಮಕ್ಕಳಿಗೆ ವಿದ್ಯೆ ಹತ್ತುತ್ತೆ." ಎಲ್ಲಿ ನಿನ್ನ ಕುಮಾರಿಯರು ?

"ಬರ್ತಿದಾರೆ ನಾನು ಒಂದುಗಳಿಗೆ ಮುಂದೆ ಬಂದೆ ಅಷ್ಟೆ......" ಎನ್ನುತ್ತಾ ಕಾಠಿಯೊಂದಿಗೆ ಒಳಕ್ಕೆ ಬಂದ.

"ಇವರೇ ನರಸಿಂಹಯ್ಯ ಅಂತ ಸಂಗೀತ ಕಲಾವಿದರು ವಿದ್ವಾಂಸರು ಇವನು ನನ್ನ ಭಾಮೈದ ಗುಂಡಾಶಾಸ್ತ್ರಿ ಅಂತ. ಶಾಸ್ತ್ರ ಸಂಪ್ರದಾಯ ಎಲ್ಲಾ ತಿಳಿದಿರೋನು... ಇಬ್ಬರನ್ನು ಪರಿಚಯಿಸಿದ. ಇಬ್ಬರೂ ಪರಸ್ಪರ ಕೈ ಮುಗಿದು 'ನಮಸ್ಕಾರ' ಎಂದರು. ಲಲಿತ, ಶಾಂತಳೂ ಬಂದು ಸೇರಿದರು. ಮೀನಾಕ್ಷಿ ಹೊಸಾ ಕಲಾಬತ್ತಿನ ಸೀರೆಯನ್ನುಟ್ಟಿದ್ದಳು. ಲಲಿತಾ ಶಾಂತ, ಗಮನಿಸಿದರು ಅವರ ಮುಖ ಪೆಚ್ಚಾಗಿತ್ತು. ಶಾಂತ ತಾನುಟ್ಟಿದ್ದ ಸಾಧಾರಣವಾದ ಹೊಸ ಸೀರೆಯ ಸೆರಗನ್ನು ಸರಿಪಡಿಸಿಕೊಂಡಳು. ಲಲಿತ ಹೊಸ ಲಂಗ ಜಂಪರನ್ನು ಧರಿಸಿದ್ದಳು. ಅಡಿಗೆ ಮನೆಯ ಗೋಡೆಗೆ ಒರಗಿ ನಿಂತಿದ್ದ ರಾಜ ಅಕ್ಕತಂಗಿಯರನ್ನೇ ಕುತೂಹಲದಿಂದ ನೋಡುತ್ತಿದ್ದ.

ದೊಡ್ಡದಾಗಿದ್ದ ಸರಸ್ವತಿಯ ಪಟದ ಮುಂದೆ ದೀಪಗಳನ್ನು ಹಚ್ಚಿಡಲಾಗಿತ್ತು.

ದೊಡ್ಡ ಹೂವಿನ ಹಾರವನ್ನು ಹಾಕಿದ್ದರು. ಊದುಕಡ್ಡಿ ಕರ್ಪೂರ, ನೈವೇದ್ಯಕ್ಕೆ ಹಣ್ಣು ಎಲ್ಲವೂ ಸಿದ್ಧವಾಗಿತ್ತು.

"ನರಸಿಂಹಯ್ನೋರೇ ವಾಗ್ದೇವಿಗೆ ಪೂಜೆ ಪ್ರಾರಂಭವಾಗಲಿ" ಕಂಠಿ ಅಪ್ಪಣೆ ಕೊಡಿಸಿದ. ನರಸಿಂಹಯ್ಯ "ಶುಕ್ಲಾಂಬರಧರಂ ವಿಷ್ಣುಂ" ಎಂದು ಪ್ರಾರ್ಥಿಸಿ ಸರಸ್ವತಿ ಪೂಜೆಯನ್ನು ನೇರವೇರಿಸಿದರು. ಹೂವುಗಳಿಂದ ಪೂಜಿಸಿ ಊದಿನ ಕಡ್ಡಿಯನ್ನು ಹಚ್ಚಿ, ಹಣ್ಣುಗಳನ್ನು ನೈವೇದ್ಯ ಮಾಡಿದರು. ಕರ್ಪೂರದ ಮಂಗಳಾರತಿಯನ್ನು ಬೆಳಗಿಸಿದರು. ಎಲ್ಲರೂ ಭಕ್ತಿಯಿಂದ ಕೈ ಮುಗಿದು ಕಣ್ಣಿಗೊತ್ತಿಕೊಂಡರು. "ಸರಸ್ವತಿ ನಮಸ್ತುಭ್ಯಂ...." ಎಂದು ಹೇಳಿ ನಮಸ್ಕರಿಸಿ, ಎಲ್ಲರೂ ಸರಸ್ವತಿ ದೇವಿಯನ್ನು ಪ್ರಾರ್ಥಿಸಿದರು. ನರಸಿಂಹಯ್ಯ ತಮ್ಮೊಡನೆ ತಂದಿದ್ದ ಶೃತಿ ಪೆಟ್ಟಿಗೆಯನ್ನು ಕಣ್ಣಿಗೊತ್ತಿಕೊಂಡು, ನಾದವನ್ನು ಹೊರಡಿಸಿದರು.

"ಮೀನಾಕ್ಷಿ, ಶಾಂತ, ಲಲಿತಾ ಮೂವರೂ ಪೂರ್ವದಿಕ್ಕಿಗೆ ಮುಖವನ್ನು ಮಾಡಿಕೊಂಡು ಮೇಷ್ಟ್ರ ಎದುರಿಗೆ ಕುಳಿತರು "ಇದು ಶೃತಿ.....ಇದಕ್ಕೆ ಸ್ವರವನ್ನು ಸೇರಿಸಿ, ನಾನು ಹೇಳಿಕೊಟ್ಟಂತೆ ಹೇಳ್ಬೇಕು" ಮೂವರೂ ತಲೆಯಾಡಿಸಿದರು. "ಸಂಗೀತ ಒಂದು ಮಹಾನ್ ವಿದ್ಯೆ, ಸಂಗೀತ ಶಾರದೆ ಒಲಿಯಬೇಕಾದರೆ, ಶ್ರದ್ಧೆ, ಭಕ್ತಿ ಎರಡೂ ಮುಖ್ಯ. ಶಾಸ್ತ್ರೀಯ ಸಂಗೀತದಲ್ಲಿ ಸಾಹಿತ್ಯ ರಾಗ, ತಾಳ ಲಯ ಶಾರೀರ ಎಲ್ಲವೂ ಮುಖ್ಯ. ಸಾಧನೆಯೂ ಅಷ್ಟೇ ಮುಖ್ಯ ಸರಿಯಾಗಿ ಅಭ್ಯಾಸ ಮಾಡಿದರೆ ನೀವುಗಳೆಲ್ಲರೂ ಗಾನ ಸರಸ್ವತಿಯರಾಗುತ್ತೀರಿ" ನರಸಿಂಹಯ್ಯ ಪೀಠಿಕೆಯನ್ನು ಕೊಟ್ಟರು.

"ಮೊದಲು ಶಾರದಾದೇವಿಗೆ ನಮಸ್ಕರಿಸಿ.... ನಂತರ ಗುರುಗಳಿಗೂ ನಮಸ್ಕರಿಸಿ...." ಕಂಠಿ ನುಡಿದ ಮೂವರೂ ಸರಸ್ವತಿಯ ಪಟಕ್ಕೆ ಬಾಗಿ ನಮಸ್ಕರಿಸಿ ಗುರುಗಳಿಗೆ ತಾಂಬೂಲದೊಂದಿಗೆ ಗುರುದಕ್ಷಿಣೆಯನ್ನು ಕೊಟ್ಟು ನಮಸ್ಕರಿಸಿದರು.

"ಶಾರದಾ ಮಾತೆ ನಿಮ್ಮೆಲ್ಲರಿಗೂ ಒಲಿಯಲಿ, "ಆತ ಆರ್ಶೀವದಿಸಿದರು. ಮತ್ತೇ ಮೂವರೂ ಶಿಷ್ಯೆಯರೂ ಕುಳಿತರು ರಾಜ ಗೋಡೆಗೊರಗಿ ನಿಂತು ನಸುನಕ್ಕ.

"ಸಾ......ಪಾ......ಸಾ......" ಆತ ಶೃತಿಯನ್ನು ಸೇರಿಸಿ ಹಾಡಿದರು. ಮೂವರೂ ಒಟ್ಟಿಗೇ ಸಾ......ಪಾ.....ಸಾ.... ಅಂತ ಹಾಡಿದರು.

"ಒಬ್ಬೊಬ್ಬರಿಗೇ ಹೇಳ್ಕೊಡಿ.... ಮೇಷ್ಟ್ರೇ ಒಟ್ಟಾಗಿ ಕೂಗಿಸಿದರೆ ಹಾಗೇ ಅಭ್ಯಾಸವಾಗಿ ಬಿಡುತ್ತೇ" ಕಂಠಿ ಮಧ್ಯೆ ಬಾಯಿ ಹಾಕಿದ. ನರಸಿಂಹಯ್ಯ ಒಬ್ಬೊಬ್ಬರಿಗೇ ಸಾ..... ಪಾ.... ಸಾ...... ಕೂಗಿಸಿದರು.

"ಇವತ್ತಿಗೆ ಇಷ್ಟು ಪಾಠ ಸಾಕು" ಎಂದು ಹೇಳಿ ಮತ್ತೇ ಸಾಪಾಸಾ ಕೂಗಿಸಿ ಶೃತಿ ಪೆಟ್ಟಿಗೆಯನ್ನು ಮುಚ್ಚಿದರು.

"ನಾನಿನ್ನು ಬರ್ತೀನಿ ಅಪ್ಪಣೆಯಾಗಲಿ ಕಂಠಿಗೆ ಕೈ ಮುಗಿದರು" "ಕಾಫಿಯಾಗಲಿ ಆಮೇಲೆ ಹಳ್ಳಿಯನ್ನು ಒಂದು ಸುತ್ತು ಹಾಕಿ ಬನ್ನಿ. ಆಮೇಲೆ ಶಾಸ್ತ್ರಿಯ ಮನೆಯಲ್ಲಿ ಊಟ. ಅವನ ಹೆಂಡ್ತಿ ತುಂಬಾ ಚೆನ್ನಾಗಿ ಅಡಿಗೆ ಮಾಡ್ತಾಳೆ." ಶಾಸ್ತ್ರಿಯ ಕಡೆ ನೋಡಿ ಮಿಂಚಿನ ನಗೆಯನ್ನು ನಕ್ಕ ಶಾಸ್ತ್ರಿ ತಬ್ಬಿಬ್ಬಾದ.

"ನಾಳೆ ಮತ್ತೆ ಬರ್ತೀನಿ ದ್ವತೀಯ ವಿಘ್ನವಾಗಬಾರದು ಮನೇಲಿ ಹೇಳಿಲ್ಲ," ಎನ್ನುತ್ತಾ ನರಸಿಂಹಯ್ಯ ಎದ್ದುದರು. ಆದರೆ ಕಂಠಿ ಬಿಡಲಿಲ್ಲ ಒತ್ತಾಯದಿಂದ ತಿಂಡಿಯನ್ನು ತಿನ್ನಿಸಿ ಕಾಫಿಯನ್ನು ಕುಡಿಸಿದ.

"ನಮ್ಮ ಮನೆ ಎಮ್ಮೆ ಹಾಲು ಭಾಳಗಟ್ಟಿ, ಕಾಫಿ ಬಹಳ ಚೆನ್ನಾಗಿ ಆಗುತ್ತೆ" ಎಂದು ತಾನೇ ಹೊಗಳಿಕೊಂಡ ಎಲ್ಲರಿಗೂ ಅಲ್ಲೇ ತಿಂಡಿ ಕಾಫಿ ಆಯಿತು.

"ಶಾಸ್ತ್ರಿ, ಲಕ್ಷ್ಮಿಗೆ ಹೇಳಿ, ಪಾಯಸದ ಅಡಿಗೆ ಮಾಡಿಸು ನಾನೂ ಊಟಕ್ಕೆ ಬರ್ತೀನಿ ಮೇಷ್ಟ್ರೀಗೆ ಸಂಕೋಚ" ಮೇಷ್ಟರು ವಿಧಿ ಇಲ್ಲದೇ ಕಂಠಿಯ ಮಾತಿಗೆ ಒಪ್ಪಿಕೊಳ್ಳಬೇಕಾಯ್ತು. ಅವರು ಅಲ್ಲಿಯೇ ಕುಳಿತು ಮಾತನಾಡುವಾಗ ಶಾಸ್ತ್ರಿ ಮನೆಗೆ ಬಂದು ಲಕ್ಷ್ಮಿಗೆ ವಿಷಯವನ್ನು ತಿಳಿಸಿದ ಲಕ್ಷ್ಮಿ ಸಾತಕ್ಕನ ಕಡೆ ನೋಡಿದಳು.

"ಕಂಠೀದೆಲ್ಲಾ ಇದೇ ಕಿತಾಪತಿ....." ಸಾತಕ್ಕ ಗೊಣಗಿದಳು.

"ಮಾಡೂದಂತೂ ಮಾಡ್ತೀರಿ ಯಾಕೆ ಗೊಣಗ್ತೀರಿ ? ಒಬ್ಬ ಬ್ರಾಹ್ಮಣಂಗೆ ಊಟ ಹಾಕಿದ್ರೆ ನಮಗೆ ಬಡತನ ಏನೂ ಬರುಲ್ಲ.

"ಹಾಗಲ್ವೋ ಗುಂಡಣ್ಣ ಮೊದಲೇ ಹೇಳಿದಿದ್ರೆ ಅಂತ ಅಷ್ಟೇ........"

"ಬೇಗ್ಬೇಗ ಮಾಡಿ ನಾನು ತೋಟಕ್ಕೆ ಹೋಗಿ ಬಾಳೆ ಎಲೆಗಳನ್ನು ಕುಯ್ಯಿಸಿ ಕಳಿಸ್ತೀನಿ ವೈಕುಂಠನ್ನ ಕಳಿಸಿ." ಎನ್ನುತ್ತಾ ತೋಟದ ಕಡೆಗೆ ನಡೆದ.

"ಏನು ಹೇಳ್ಕೊಟ್ರೆ ಮೇಷ್ಟ್ರು." ಸಾತಕ್ಕ ಲಲಿತಳನ್ನು ಕೇಳಿದಳು.

"ಸರಳೆಯ ಮೊದಲ ಪಾಠ ಹೇಳ್ಕೊಟ್ರೂ ಅತ್ತೇ.....ಹೇಳ್ಲಾ ?"

"ಈಗ್ಬೇಡ ಕೇಳುಕ್ಕೆ ಬಿಡುವಿಲ್ಲ ಏನು ತಿಂಡಿ ಮಾಡಿದ್ಲು ಪಾತು !"

"ಉಪ್ಪಿಟ್ಟು ಸಜ್ಜಿಗೆ ಇಷ್ಟಿಷ್ಟೇ ಕೊಟ್ಟಿದ್ರು ಅತ್ತೆ. ಸಾಕಾಗ್ಲೇ ಇಲ್ಲ."

"ಥೂ ಹಾಗೆಲ್ಲಾ ಹೇಳ್ಬಾರ್ದು ಪಾಪ ಅವಳು ತಾನೇ ಏನ್ಮಾಡ್ತಾಳೆ ಎಲ್ರಿಗೂ ಆಗ್ಬೇಕಲ್ಲ."

"ಅತ್ತೇ.......ನಮ್ಮನೇಲೂ ಸಜ್ಜಿಗೆ ಮಾಡಿ..."

"ಇವತ್ತು ಬೇಡ ಪಾಯಸದ ಅಡಿಗೆ ಮಾಡ್ತೀನಿ..ಇನ್ನು ನೀನು ಹೊರಕ್ಕೆ ಹೋಗು" ಸಾತಕ್ಕ ಲಲಿತಳನ್ನು ಹೊರಕ್ಕೆ ಕಳಿಸಿ, ಒಲೆಯ ಮುಂದೆ ಕುಳಿತು ಉರಿಯನ್ನು ಸರಿ ಮಾಡಿದಳು. ಅಡಿಗೆ ಮುಗಿಯುವ ಹಂತದಲ್ಲಿದ್ದಾಗ, ಶಾಸ್ತ್ರಿ ಮನೆಗೆ ವಾಪಸ್ಸಾದ. ವೈಕುಂಠ ಬಾಳೆ ಎಲೆಯ ಕಟ್ಟನ್ನು ಅಡಿಗೆ ಮನೆಯ ಬಾಗಿಲ

ಬಳಿ ಇಟ್ಟ

"ದೊಡ್ಡಮ್ಮಾರೇ ಎಲೇನ ತೊಳ್ದು ವರ್ಸಿ ತಕ್ಕೊಂಡ್ಬಂದೀನಿ."

"ಒಳ್ಳೆ ಕೆಲ್ಸ ಮಾಡ್ದೆ ಬಿಡು........"

"ಅವ್ವಾವ್ರೆ, ಇವತ್ತು ನಾನು ಅನ್ನ ಉಣ್ತೀನಿ...."

"ಹಾಗೇ ಮಾಡು ನಿಂಗೊಸ್ಕರ ಹಿಟ್ಟು ತೊಳೆಸೋಕೇ ಬಿಡುವಿಲ್ಲ." ಅವಳ ಮಾತು ಮುಗಿಯುತ್ತಿದ್ದಂತೆಯೇ ಕಂಠಿ ಧ್ವನಿ ಕೇಳಿಸಿತು. ವೈಕುಂಠ ಹಿಂಬಾಗಿಲಿನಲ್ಲಿ ಮರೆಯಾದ.

"ಅಡ್ಗೆ ಆಗಿದ್ರೆ ಎಲೆ ಹಾಕ್ಸಯ್ಯಾ, ಇಂಗಿನ ಒಗ್ಗರಣೆ ವಾಸನೆ ಬೀದೀಗೇ ಹೊಡೀತಿದೆ." ಕಂಠಿ ಜೋರಾಗಿ ನಗುತ್ತಾ ಒಳ ಬಂದ.

"ಪಾತೂನೂ ಕರೀಬೇಕಾಗಿತ್ತು ಕಣೇ ಲಕ್ಷ್ಮಿ........"

"ನಾವು ಕೂತ್ಕೋಳ್ಳುವಾಗ ಪಾತೂನ್ನೂ ಮೀನಾಕ್ಷಿನೂ ಕರೆಯೋಣ.

"ಶಾಂತಾ, ಲಲಿತಾ ಇಬ್ಬರೂ ಸೇರಿ, ಬಾಳೆಯ ಎಲೆಗಳನ್ನು ಹಾಕಿ ನೀರಿನ ಲೋಟಗಳನ್ನು ಇಟ್ಟರು. ಊಟದ ಚಾಪೆಗಳನ್ನು ಹಾಸಿದರು. ಶಾಸ್ತ್ರೀ ನರಸಿಂಹಯ್ಯ ಹಾಗೂ ಕಂಠಿ ಊಟಕ್ಕೆ ಕುಳಿತರು. ಲಕ್ಷ್ಮಿ ಒಂದೊಂದಾಗಿ ಪರಿಕರ ಗಳನ್ನು ಬಡಿಸಿದಳು. ಊಟ ಮುಂದುವರೆಯಿತು.

"ನಿನ್ನ ಹೆಂಡ್ತಿ ಅಡ್ಗೇನ ಚೆನ್ನಾಗಿ ಮಾಡ್ತಾಳಯ್ಯ....ಅದಕ್ಕೇ ಮೇಷ್ಟ್ರನ್ನು ನಿಮ್ಮ ಮನೆಗೆ ಊಟಕ್ಕೆ ಕರೆತಂದೆ.......ಹೇಗಿದೆ ಮೇಷ್ಟ್ರೇ ಅಡಿಗೆಯೆಲ್ಲಾ." ಕಂಠಿ ಹೇಳಿದ.

"ದಿವಿನಾಗಿದೆ ಸಾಕ್ಷಾತ್ ಅನ್ನಪೂರ್ಣೇಶ್ವರಿಯೇ ಕರೆದು ಊಟ ಬಡಿಸಿದ್ದಂತಿದೆ. ಸಾರು ಬಹಳ ಚೆನ್ನಾಗಿದೆ ತಾಯೀ.....ಅಮೃತ..ಅಮೃತ ಇದ್ದ ಹಾಗಿದೆ" ಲಕ್ಷ್ಮಿ ಸಂಕೋಚಗೊಂಡಳು.

"ನನ್ನ ತಂಗಿ ಮಾಡಿದ್ದು...ಅಡಿಗೆ ಮಾಡುವುದರಲ್ಲಿ ಅವಳದ್ದು ಪಳಗಿದ ಕೈ" ಗುಂಡಣ್ಣನೆಂದ

"ಯಾಕೆ ಸುಳ್ಳು ಹೇಳ್ತೀಯೋ ಶಾಸ್ತ್ರಿ, ಸಾವಿತ್ರಿ ಹೇಗೆ ಅಡ್ಗೆ ಮಾಡ್ತಾಳೆ ಅಂತ ನಂಗೆ ಗೊತ್ತಿಲ್ವಾ..... ಪಾತು ಅವಳ ತಂಗಿ..." ಕಂಠಿ ನಗುತ್ತಾ ನುಡಿದಾಗ ಶಾಸ್ತ್ರಿ ಪೆಚ್ಚಾದ.

"ಒಟ್ನಲ್ಲಿ ಅಡಿಗೆ ತುಂಬಾ ಸೊಗಸಾಗಿದೆ ತಾಯೀ..." ನರಸಿಂಹಯ್ಯ ಮನಃ ಪೂರ್ವಕವಾಗಿ ಹೊಗಳಿದರು. ಸಾತಕ್ಕ ಕಂಠಿಯನ್ನು ಮನದಲ್ಲೇ ಬೈದುಕೊಂಡಳು.

"ಒಂದುಗಳಿಗೆ ಸುಧಾರಿಸಿಕೊಂಡು ಹೊರಡಿ ಮೇಷ್ಟ್ರೇ.....ಎಲೆ ಅಡಿಕೆ ಹಾಕ್ಕೊಳ್ಳಿ ಊಟ ಆದ ತಕ್ಷಣ ಸೈಕಲ್ಲು ತುಳಿಯೋಕೆ ಆಗುಲ್ಲ."

"ಅದು ಬಾಡಿಗೆ ಸೈಕಲ್ಲು ಹೆಚ್ಚು ಹೊತ್ತು ಇಟ್ಟುಕೊಂಡಷ್ಟು ಹೆಚ್ಚು ಬಾಡಿಗೆ

ಕೊಡಬೇಕಾಗುತ್ತೆ. ನಿಧಾನಕ್ಕೆ ತುಳಿತೀನಿ" ನರಸಿಂಹಯ್ಯ ಹೊರಟರು.

"ನಾಳೇನೂ ಇದೇ ಹೊತ್ತಿಗೆ ಬಂದು ಬಿಡಿ ಕಂಠಿ" ನೆನಪಿಸಿದ.

"ಏನಮ್ಮ ಲಕ್ಷ್ಮಿ ಮಾಡಿದ ಅಡಿಗೆ ಏನಾದ್ರೂ ಮಿಕ್ಕಿದೆಯೋ ಹೇಗೆ ?" ಕಂಠಿ ಅಡಿಗೆ ಮನೆಯ ಬಾಗಿಲಲ್ಲಿ ಇಣುಕಿ ಕೇಳಿದ.

"ಹೋಗೇ ಲಲಿತಾ ಅತ್ತೇನ ಮೀನಾಕ್ಷೀನ ಕರೆದು ಬಾರೇ...." ಸಾತಕ್ಕ ಕಂಠಿಗೆ ಕೇಳುವಂತೆ ಹೇಳಿದಳು. ಲಲಿತಾ ಓಡಿದಳು ಕಂಠಿ ಪೆಚ್ಚಾದ ಊಟ ಹೆಚ್ಚಾಗಿ ಹೊಟ್ಟೆ ಭಾರವಾಗಿತ್ತು ಮನೆಗೆ ನಡೆದ.

"ಈ ಭಾವಂಗೆ ಹಂಗಿಸಿ ಆಡ್ದೇ ಇದ್ರೆ ಆಗೋದೇ ಇಲ್ಲ." ಲಕ್ಷ್ಮಿ ಪಿಸುಗುಟ್ಟಿದಳು.

"ಅದಕ್ಕೇ ಅವನನ್ನು ಎಲ್ರೂ ದೂರ ಮಾಡಿರೋದು."

"ನಿಮ್ಮಣ್ಣನೂ ಅವರು ಹೇಳಿದ ಹಾಗೆ ಕೇಳ್ತಾರಲ್ಲ?"

"ಇಲ್ಲಿಂದ ಈ ಬಾಂಧವ್ಯವನ್ನು ಕಳಚಿಕೊಂಡು ಯಾವಾಗ ಹೋಗ್ತೀವೋ ಸಾಕಾಗಿದೆ."

"ಶನಿಕಾಟ ಕಳೀದೇ ಇಲ್ಲಿಂದ ಬಿಡುಗಡೆ ಇಲ್ಲ..... ಅಲ್ಲೀನವರೆಗೂ ಎಲ್ಲವನ್ನೂ ಸಹಿಸಿಕೊಳ್ಳಲೇಬೇಕು. ಪಾತು ಬಂದ್ಲು... ಎಲೆ ಹಾಕು." ಸಾತಕ್ಕ ತನ್ನ ಎಲೆಗೆ ಬೇಕಾದುದನ್ನೆಲ್ಲ ಬಡಿಸಿಕೊಂಡಳು. ಉಳಿದವರಿಗೆ ಶಾಂತ ಬಡಿಸಿದಳು ಎಲ್ಲರೂ ಸಾವಕಾಶವಾಗಿ ಊಟ ಮಾಡಿದರು.

* * *

ಪಟೇಲರ ಮನೆಯ ಮುಂದಿನ ಅಂಗಳವನ್ನು ಸಗಣಿ ಹಾಕಿ ಸಾರಿಸಿ ಶುಚಿಗೊಳಿಸಿ, ದೊಡ್ಡ ದೊಡ್ಡ ರಂಗೋಲಿಗಳನ್ನು ಬರೆಸಿದ್ದರು. ವಿಶಾಲವಾಗಿ ಚಪ್ಪರ ಹಾಕಿಸಿ, ನಾಲ್ಕಾರು ಕುರ್ಚಿಗಳನ್ನು ಹಾಕಿಸಿದ್ದರು. ದೊಡ್ಡ ಜಮಖಾನವನ್ನು ಹಾಸಿದ್ದರು. ಮಾವಿನ ಸೊಪ್ಪಿನ ತೋರಣವನ್ನು ಕಟ್ಟಿ ಎಲ್ಲರೂ ಸಿದ್ಧರಾಗಿದ್ದರು.

ಶಿವಮೊಗ್ಗಾ ತಾಲೂಕಿಗೆ ಸೇರಿದ ಹಳ್ಳಿಗೆ ಒಂದು ಪ್ರಾಥಮಿಕ ಶಾಲೆಯನ್ನು ಸರ್ಕಾರದವರು ಮಂಜೂರು ಮಾಡಿದ್ದರು. ಶಾಲೆಯ ಕಟ್ಟಡ ತಕ್ಷಣಕ್ಕೆ ಇರಲಿಲ್ಲವಾದುದರಿಂದ ಪಟೇಲರ ಮನೆಯ ಮುಂದಿನ ದೊಡ್ಡ ಕೋಣೆಯಲ್ಲೇ ಶಾಲೆಯನ್ನು ಪ್ರಾರಂಭಿಸಲು ಎಲ್ಲ ಸಿದ್ಧತೆ ಆಗಿತ್ತು. ಮಕ್ಕಳಿಗೆ ಕುಳಿತುಕೊಳ್ಳಲು ಕಾಲ್ಮಣೆಗಳು, ಗೋಡೆಗೆ ತಗಲು ಹಾಕುವ ಕಪ್ಪು ಹಲಗೆ, ಹಾಜರಿ ಪುಸ್ತಕ, ಸೀಮೆ ಸುಣ್ಣ ಎಲ್ಲವೂ ಬಂದಿತ್ತು. ಪ್ರಾಥಮಿಕ ತರಗತಿಗಳ ಪಾಠಗಳನ್ನು ಹೇಳಿಕೊಡಲು ಒಬ್ಬ ಶಿಕ್ಷಕರನ್ನು ನೇಮಿಸಲಾಗಿತ್ತು. ಆತನ ಹೆಸರು ರಂಗನಾಥ. ತಲೆಗೆ ಕರಿಯ ಟೋಪಿ, ಬಿಳಿಯ ಜುಬ್ಬಾ, ಪೈಜಾಮ ಧರಿಸಿ ಹಣೆಗೆ ಹುಬ್ಬುಗಳ ನಡುವೆ ಇಟ್ಟ ಸಾದು...ಯುವಕನಾದರೂ ಗಂಭೀರವದನನಾಗಿದ್ದ. ಈಗಾಗಲೇ ಹಳ್ಳಿಗೆ ಒಂದೆರಡು

ಬಾರಿ ಬಂದುದರಿಂದ ಕೆಲವರಿಗೆ ಪರಿಚಿತನಾಗಿದ್ದ ಪ್ರಾಥಮಿಕ ಶಿಕ್ಷಣ ಇಲಾಖೆಯ ಕಡೆಯಿಂದ ಕೆಲವು ಗಣ್ಯರು ಬರುವವರಿದ್ದರು. ಅವರಿಂದ ಈ ದಿನ ಪ್ರಾಥಮಿಕ ಶಾಲೆಯ ಉದ್ಘಾಟನಾ ಮಹೋತ್ಸವ ಕಾರ್ಯಕ್ರಮವಿತ್ತು. ಈ ವಿಷಯ ಹಳ್ಳಿಯವರಿಗೆಲ್ಲಾ ತಿಳಿದಿತ್ತು. ಸ್ಕೂಲಿಗೆ ಕಳಿಸುವ ವಯಸ್ಸಿನ ಮಕ್ಕಳನ್ನು ಸಜ್ಜುಗೊಳಿಸಿದ್ದರು. ಸ್ನಾನಮಾಡಿ, ಶುಭ್ರವಾದ ಬಟ್ಟೆಯನ್ನು ಧರಿಸಿ, ಮಕ್ಕಳು ಜಮಖಾನದ ಮೇಲೆ ಸಾಲಾಗಿ ಕುಳಿತಿದ್ದರು.

ಛೇರ್‌ಮನ್ ವೆಂಕಟಾಚಲಯ್ಯ ಶಾಸ್ತ್ರಿ, ನಾಗಪ್ಪಭಟ್ಟರು, ಪಟೇಲರು ಎಲ್ಲರೂ ಗಣ್ಯರನ್ನು ಸ್ವಾಗತಿಸಲು ಕಾಯುತ್ತಾ ಕುಳಿತಿದ್ದರು. ಮಳೆಗಾಲವಾದುದರಿಂದ ಸಣ್ಣದಾಗಿ ಮಳೆ ಸುರಿಯುತ್ತಿಲೇ ಇತ್ತು. ಕಡೆಗೂ ಒಂದು ಜೀಪಿನಲ್ಲಿ ಅಧಿಕಾರಿಗಳು ಬಂದು ಇಳಿದರು. ಗ್ರಾಮ ಪಂಚಾಯ್ತಿಯ ಮುಖ್ಯಸ್ಥರೆಲ್ಲಾ ಅವರುಗಳನ್ನು ಆದರದಿಂದ ಸ್ವಾಗತಿಸಿದರು. ಛೇರ್‌ಮನ್ ವೆಂಕಟಾಚಲಯ್ಯ ಗ್ರಾಮಕ್ಕೆ ಸಂಬಂಧಿಸಿದಂತೆ, ಕೆಲವು ಮಾತುಗಳನ್ನಾಡಿದರು. ಪಟೇಲರು ಹಳ್ಳಿಯ ಅಭಿವೃದ್ಧಿಗೆ ಶಾಲೆ ಬೇಕಾಗಿತ್ತು ಎಂದು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ಧನ್ಯವಾದಗಳನ್ನು ಅರ್ಪಿಸಿದರು.

ಬಂದ ಗಣ್ಯರಲ್ಲಿ ಮುಖ್ಯಾಧಿಕಾರಿಗಳಾಗಿದ್ದವರು ಶಾಲೆಯ ಉದ್ಘಾಟನೆ ಯನ್ನು ನೆರವೇರಿಸಿದರು. ಮಕ್ಕಳಾದಿಯಾಗಿ ನೆರೆದಿದ್ದವರು ಚಪ್ಪಾಳೆ ತಟ್ಟಿದರು. ಅಧಿಕಾರಿಗಳು ಶಾಲೆಗೆ ಸಂಬಂಧಿಸಿದಂತೆ ಮಕ್ಕಳನ್ನು ಕುರಿತು ಕೆಲವು ಮಾತುಗಳನ್ನಾಡಿ ದರು. ಪಟೇಲರು ತಾನೇ ತರಿಸಿದ್ದ ಮಿಠಾಯಿಯನ್ನು ಎಲ್ಲರಿಗೂ ಹಂಚಿದರು. ಕೆಲವೇ ಘಂಟೆಗಳಲ್ಲಿ ಕಾರ್ಯಕ್ರಮ ಮುಗಿಯಿತು. ಆ ದಿನ ಹಳ್ಳಿಯ ಇತಿಹಾಸದಲ್ಲಿ ಒಂದು ಸುದಿನ. ಹಳ್ಳಿಯ ಜನತೆ ಹೆಮ್ಮೆಯಿಂದ ಬೀಗಿದರು.

ವೆಂಕಟಾಲಯ್ಯನ ಮನೆಯಲ್ಲಿ ಅಧಿಕಾರಿಗಳಿಗೆ ಊಟಕ್ಕೆ ವ್ಯವಸ್ಥೆ ಮಾಡ ಲಾಗಿತ್ತು. ಶಾಸ್ತ್ರಿ, ನಾಗಪ್ಪಭಟ್ಟರು, ಪಟೇಲರು ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡಿದರು. ಇಷ್ಟಾದರೂ ಈ ಸಂಭ್ರಮದಲ್ಲಿ ಕಂಠಿ ಪಾಲುಗೊಳ್ಳಲಿಲ್ಲ ಮೊದಲೇ ಗೊತ್ತಿದ್ದರೂ, ಆದಿನ ಅವನು ಬೇರೆ ಊರಿಗೆ ಹೊರಟು ಹೋಗಿದ್ದ. ಅವನಿಗ ವೆಂಕಟಾಚಲಯ್ಯನ್ನ ಕಂಡರೆ ಅಷ್ಟಕ್ಕಷ್ಟೇ ಈ ವಿಷಯ ಹಳ್ಳಿಯವರಿಗೆಲ್ಲಾ ಗೊತ್ತಿದ್ದೇ.

ಪ್ರೈಮರಿ ಶಾಲೆಗೆ ಸಧ್ಯಕ್ಕೆ ಇದ್ದುದು ಒಂದೇ ಕೊಠಡಿ. ಒಬ್ಬರೇ ಮೇಷ್ಟು. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯ ಮಕ್ಕಳೆಲ್ಲಾ ಒಟ್ಟಿಗೇ ಕೂರಬೇಕಾಗಿ ದ್ದುದು ಅಲ್ಲೇ ಹಾಗೇ ಎಲ್ಲಾ ತರಗತಿಗಳಿಗೂ ಅವರೊಬ್ಬರೇ ಪಾಠವನ್ನು ಹೇಳಿ ಕೊಡಬೇಕಾಗಿತ್ತು. ಒಂದನೆಯ ತರಗತಿಗೆ ಎಂಟು ಹತ್ತು ಮಕ್ಕಳು ಹೆಸರನ್ನು ಬರೆಸಿದ್ದರು. ಎರಡನೆಯ ತರಗತಿಗೆ ಐದಾರು ಜನ ಮಕ್ಕಳ ಹೆಸರಿತ್ತು. ಮೂರನೇ ಕ್ಲಾಸಿಗೆ, ರಾಗಿಣಿ ನಾಲ್ಕನೇ ಕ್ಲಾಸಿಗೆ ಪದ್ಮಿನಿ ಅಷ್ಟೆ. ಎಲ್ಲರಿಗೂ ಪಠ್ಯ ಪುಸ್ತಕಗಳನ್ನು ತರಿಸಿಕೊಡಲಾಗಿತ್ತು. ಎಲ್ಲರಿಗೂ ಬರೆಯಲು ಸ್ಲೇಟು ಹಾಗೂ ಬಳಪಗಳೂ ಇದ್ದವು.

ಪದ್ಮಿನಿ ರಾಗಿಣಿಯರು ಅಕ್ಷರಗಳನ್ನು ಬರೆಯಲು ಓದಲು ಕಲಿತಿದ್ದುದರಿಂದ ಅವರಿಗೆ ಉಳಿದ ಮಕ್ಕಳ ಜತೆಯಲ್ಲಿ ಸರಿ ಹೋಗುತ್ತಿರಲಿಲ್ಲ. ಒಟ್ಟು ಹತ್ತು ಹದಿನೈದು ಮಕ್ಕಳನ್ನು ಸಂಭಾಳಿಸುವುದು ಸಹ ಮೇಷ್ಟರಿಗೂ ಕಷ್ಟವಾಗತೊಡಗಿತ್ತು. ಹಾಗಾಗಿ ಪದ್ಮಿನಿ, ರಾಗಿಣಿಯರಿಗೆ ಆತ ಮನೆಯಲ್ಲೇ ಬಂದು ಪಾಠ ಹೇಳಿಕೊಡುವುದಾಗಿ ಹೇಳಿದ. ಹಾಜರಿ ಪುಸ್ತಕದಲ್ಲಿ ಅವರ ಹೆಸರನ್ನು ಬರೆಸಿದ್ದರೂ ಅವರು ಶಾಲೆಗೆ ಹೋಗಬೇಕಾಗಿರಲಿಲ್ಲ.

ಬೆಳಿಗ್ಗೆ ರೈಲಿನಲ್ಲಿ ಬಂದಿಳಿದ ರಂಗನಾಥ ಸೀದಾ ಶಾಸ್ತ್ರಿಯ ಮನೆಗೆ ಬರುತ್ತಿದ್ದ ಕಾಫಿ ತಿಂಡಿ ಇಲ್ಲೇ ಆಗುತ್ತಿತ್ತು. ಮತ್ತೆ ಸಾಯಂಕಾಲ ರೈಲಿಗೆ ವಾಪಸ್ಸು ಹೋಗುವವರೆಗೂ ಸ್ಕೂಲಿನ ವೇಳೆಯ ನಂತರ ಇವರ ಮನೆಗೆ ಬರುತ್ತಿದ್ದ ಸಾಯಂಕಾಲದ ಕಾಫಿ ಕುಡಿದು, ಮತ್ತೆ ಪಾಠವನ್ನು ಹೇಳಿಕೊಡುತ್ತಿದ್ದ.

"ಸ್ಕೂಲು ಇಲ್ಲಿ ಇಲ್ಲ ಅಂತ ಇದುವರೆಗೂ ಪೇಚಾಡುತ್ತಿದ್ದುದ್ದಾಯ್ತು. ಈಗ ಬಂದರೂ ನಮಗೆ ಉಪಯೋಗವಿಲ್ಲ... ಎರಡು ಹೊತ್ತೂ ಮನೇಲೇ ಪಾಠ ಅಂತ ಮನೇಲೇ ಕೂತಿರುತ್ವೆ. ಇದೆಂಥಾ ವಿದ್ಯಾಭ್ಯಾಸ ?" ಲಕ್ಷ್ಮಿ ಬೇಸರಿಸಿದಳು.

"ಹೋಗ್ಲಿ ಬಿಡು ಲಕ್ಷ್ಮಿ ಇಷ್ಟಾದರೂ ವ್ಯವಸ್ಥೆ ಆಯ್ತಲ್ಲಾ ಹೇಗೂ ಐದನೇ ಕ್ಲಾಸಿಗೆ ಪೇಟೆಗೇ ಹೋಗಲೇಬೇಕಲ್ಲ."

"ಈ ಹುಡುಗನೋ ಎರಡು ಹೊತ್ತೂ ಸಮಯಕ್ಕೆ ಸರಿಯಾಗಿ ಹಾಜರಾಗಿ ಬಿಡ್ತಾನೆ ಸಂಕೋಚವೇ ಇಲ್ಲ."

"ಸಂಕೋಚಗೊಂಡರೆ ಅಲ್ಲೇ ಪಟೇಲರ ಮನೆ ಜಗುಲಿ ಮೇಲೆ ಒಣಗಿಕೊಂಡು ಕೂತಿರ್ಬೇಕಾಗುತ್ತೆ. ಎರಡು ಹೊತ್ತು ಕಾಫಿ, ಒಂದು ತಿಂಡಿ ಇದರಿಂದ ನಮಗೇನೂ ನಷ್ಟವಿಲ್ಲ. ಯಾಕೆ ಹೀಗೆ ಮಾತಾಡ್ತೀಯ ?"

"ಅದೇನೋ ಸರಿ ಆದರೂ ಈ ವ್ಯವಸ್ಥೆ ಸರಿಯಿಲ್ಲ. ಅಂತನ್ನಿಸ್ತು. ಕಂಠಿ ಭಾವ ಇದನ್ನೆಲ್ಲ ಹಚ್ಚಿಕೊಳ್ಳಲೇ ಇಲ್ಲ ಅವರ ಮಕ್ಕಳನ್ನು ಇಲ್ಲಿಯ ಸ್ಕೂಲಿಗೆ ಸೇರಿಸುವುದಿಲ್ಲವಂತೆ.

"ಅವನೊಬ್ಬ ವಿಚಿತ್ರ ಪ್ರಾಣಿ ನಾಲ್ಕು ಜನರಿಗೆ ಆಗೋದು ಅವನಿಗೆ ಬೇಡ, ಎಲ್ಲಾ ಗಂಡು ಮಕ್ಕಳೇ ಅವನಿಗೆ ಚಿಂತೆಯಿಲ್ಲ." ಅದೇ ಜಂಭ ಅವನಿಗೆ.

"ಮತ್ತೆ ಪಾತು, ಮೈಕೈ ತುಂಬಿಕೊಂಡಿದಾಳೆ ಏನೋ ವಿಶೇಷ ಇರಬೇಕು."

"ಇರಬಹುದೇನೋ, ಇಂದಲ್ಲ ನಾಳೆ ಗೊತ್ತಾಗಿಯೇ ಆಗುತ್ತಲ್ಲ. ಪಾಪ ಮೀನಾಕ್ಷಿಗೆ ಕಷ್ಟ." ಲೊಚಗುಟ್ಟಿದಳು.

"ಅವಳು ನಮ್ಮ ಶಾಂತಂಗಿಂತ ದೊಡ್ಡೋಳು ಸಂಗೀತಾನಾ ಚೆನ್ನಾಗಿ ಅಭ್ಯಾಸ ಮಾಡ್ತಾಳೆ ಅತ್ಗೇ.........ಗಂಟಲು ತುಂಬಾ ಚೆನ್ನಾಗಿದೆ"

"ಅದೇ ಜಂಭ ಅದಕ್ಕೆ, ಎಲ್ಲಾ ಅಪ್ಪನ ಬುದ್ಧೀನೇ ನಮ್ಮ ಪಾತುಗೆ ಭಾಳ ಕಷ್ಟ. ಈ ಹಳ್ಳಿಯ ಜೀವನ, ಕಂಠಿಯಂತ ಗಂಡ........ಮನೆ ತುಂಬಾ ಗಂಡು ಮಕ್ಕಳು ಅವಳಿಗೆ ಸುಖವಿಲ್ಲ....." ಸಾತಕ್ಕ ವ್ಯಥೆಗೊಂಡಳು.

* * *

ಮನೆಯಲ್ಲೇ ಅಪ್ರಯೋಜಕನಾಗಿ ಬೆಳೆದು ನಿಂತಿದ್ದ ದತ್ತನನ್ನು ಸ್ಕೂಲಿಗೆ ಸೇರಿಸಬೇಕೆಂಬ ಆಸೆ ಮೊಳೆಯಿತು ಪಾತುಗೆ. ಊಟಕ್ಕೆ ಬಡಿಸುವಾಗ ಗಂಡನಿಗೆ ಹೇಳಿದಳು.

"ಈಗ ಹೇಗೂ ಇಲ್ಲಿಗೇ ಸ್ಕೂಲು ಬಂದಿದೆ. ದತ್ತನ್ನ ಎಲ್ರೂ ನೋಡಿದಾರೆ. ಮನೇಲಿ ಹೀಗೆ ಕಾಲ ಕಳೆಯುವ ಓದಲು ಸ್ಕೂಲಿಗೆ ಹೋಗಿ ನಾಲ್ಕಕ್ಷರವನ್ನಾದರೂ ಕಲಿಯಲಿ.

"ನಿನ್ನ ಮಗನಿಗೆ ಗಡ್ಡ ಮೀಸೆ ಬೆಳೆದಿದೆ. ಚಿಕ್ಕ ಮಕ್ಕಳ ಜೊತೆ ಕೂತು ಏನೂ ಕಲೀತಾನೆ ? ಅವೆಲ್ಲಾ ಆಡ್ಕೊಂಡು ನಗುತ್ವೆ... ಏನೂ ಬೇಡ ತೆಪ್ಪಗೆ ಮನೇಲಿ ಬಿದ್ದಿರಲಿ."

"ಮೊದಲ್ನಿಂದ ಅವನ ಆರೋಗ್ಯ ಚೆನ್ನಾಗಿಲ್ಲ ಅಂತ ಎಲ್ಲಾ ಥರದಲ್ಲೂ ಮೂಲೆ ಗುಂಪು ಮಾಡಿದ್ರಿ ಈಗ್ಲಾದ್ರೂ ಓದು ಬರಹಾನ ಕಲೀಲಿ. ನಾವು ಫೀಸು ಸಹ ಕಟ್ಟಬೇಕಾಗಿಲ್ಲ."

"ಫೀಸು ಕೊಡಬೇಕಾಗಿಲ್ಲ ದಿಟ ಆದರೆ ನಿನ್ನ ಮಗನ ತಲೇಲಿ ಮೆದುಳೇ ಇಲ್ಲ. ದಡ್ಡ ಅವನು ಅವನಿಗೆ ವಿದ್ಯೆ ಹತ್ತೋದೂ, ಒನಕೆ ಚಿಗುರೋದು ಎರಡೂ ಒಂದೇ. ನಿನ್ನ ಆಸೆಗೆ ತಲೆ ಚಚ್ಕೋಬೇಕು."

"ಅಪ್ಪನಾಗಿ ನೀವೇ ಹೀಗೆ ಅಂದ್ರೆ ಹೇಗೆ ? ಏನೋ ಅವನ ದುರಾದೃಷ್ಟ ಅವನ ಆರೋಗ್ಯ ಚೆನ್ನಾಗಿಲ್ಲ ನಾನು ಎಷ್ಟು ಹೇಳಿದೆ. ಡಾಕ್ಟರಿಗೆ ತೋರಿಸೋಣ ಅಂತ. ನಾನ್ಮಾತನ್ನ ಕೇಳ್ಲಿಲ್ಲ ನೀವು."

"ಏನು ? ನಾನು ನಿನ್ಮಾತನ್ನ ಕೇಳ್ಬೇಕಾಗಿತ್ತಾ ? ಹೆಂಗಸಿನ ಮಾತನ್ನಾ ಕೇಳಿದ ಯಾವ ಗಂಡಸೂ ಉದ್ಧಾರವಾಗಿಲ್ಲ. ಅವನ ಪಾಡಿಗೆ ಅವನಿರಲಿ ನಿನ್ನ ಬಾಯ್ಮುಚ್ಚಿ ಕೊಂಡಿರು. ಮತ್ತೆ ಈ ವಿಷಯಾನ ಎತ್ಬೇಡ."

"ನಾನು ಹೇಳಿದ್ರಲ್ಲಿ ತಪ್ಪೇನಿದೆ ? ಚಿಕ್ಕೋನಾಗಿದ್ದಾಗ್ಲೇ ಈ ಮೂರ್ಛೆ ರೋಗಕ್ಕೆ ಔಷಧೀನ ಕೊಡಿಸಬೇಕಾಗಿತ್ತು. ಮೂರ್ಛೇ ಬಿದ್ದಾಗಲೇ ತಲೆಗೆ ಏಟು ಬಿದ್ದು ಮಾತು ಬರಲಿಲ್ಲ. ಔಷಧ, ಚಿಕಿತ್ಸೆ ಕೊಡಿಸಿದ್ರೆ ಖಂಡಿತಾ ಸರಿಯಾಗಿರ್ತಿದ್ದ. ನೀವು ಉದಾಸೀನ ಮಾಡ್ಬಿಟ್ರಿ..... ಯಾರಾದ್ರೂ ಸ್ವಂತ ಮಕ್ಕಳನ್ನು ಹೀಗೆ ಕಡೆಗಾಣಿಸ್ತಾರಾ?" ಅವಳೂ ರೋಷದಿಂದ ಹೇಳಿದಳು.

"ಮುಚ್ಚು ಬಾಯಿ ನನ್ನನ್ನ ಕೆರಳಿಸ್ಬೇಡ" ಎನ್ನುತ್ತಾ ಕಂಠಿ ಪಾತು ಕೆನ್ನೆಗೆ ಹೊಡೆದ. ಪಾತು ತತ್ತರಿಸಿ ಪಕ್ಕಕ್ಕೆ ಬಿದ್ದಳು. ದೂರದಲ್ಲಿ ನಿಂತು ನೋಡುತ್ತಿದ್ದ ದತ್ತು ತಾಯಿ ಕೆಳಕ್ಕೆ ಬಿದ್ದೊಡನೆ, ಹೆದರಿ ಬಳಿಗೆ ಬಂದ. "ತೊಲಗೋ ಅತ್ಲಾಗೆ ಎಲ್ಲಾ ನಿನ್ನಿಂದ್ಲೆ" ಎನ್ನುತ್ತಾ ಊಟದ ಎಲೆಯನ್ನು ಸರಿಸಿ ಎದ್ದ. ಮೂಲೆಯಲ್ಲಿ ಬಿದ್ದಿದ್ದ ನೀರು ಸೇದುವ ಹಗ್ಗವನ್ನೆತ್ತಿಕೊಂಡು ರಪರಪನೆ ಮಗನನ್ನು ಹೊಡೆದ.

"ಹೊಡೀಬೇಡಿ.. ಎನ್ನುತ್ತಾ ಸಾತು ಎದ್ದು ಕುಳಿತಳು. ಕಂಠಿ ರೋಷದಿಂದ ಅವಳಿಗೂ ನಾಲ್ಕೇಟು ಹಾಕಿದ. ದತ್ತನ ರೋದನವನ್ನು ಕೇಳಿ ಬೀದಿಯಲ್ಲಿ ತಿರುಗುತ್ತಿದ್ದ ಒಂದಿಬ್ಬರು ಹಳ್ಳಿಗರು ಕಂಠಿಯ ಮನೆಯ ಬಾಗಿಲಲ್ಲಿ ನಿಂತು ಇಣುಕಿದರು.

"ಏನ್ರೋ....... ಏನು ನೋಡ್ತಿದೀರೋ......ಬನ್ನಿ ನೋಡ್ಬನ್ನಿ.......ನನ್ನ ಮಗನ್ನ ನಾನು ಹೊಡೀತೀನಿ.....ಬಡೀತೀನಿ.....ಕೊಂದುಹಾಕ್ತೀನಿ...." ಮತ್ತೆ ಹೊಡೆತಗಳು ಬಿದ್ದವು. ಅಷ್ಟರಲ್ಲಿ ಓಡಿ ಬಂದ ಶಾಸ್ತ್ರಿ ಕಂಠಿಯ ಕೈಯಿಂದ ಹಗ್ಗವನ್ನು ಕಿತ್ತುಕೊಂಡು ಅತ್ಲಾಗೆ ಎಸೆದ.

"ನಿನಗೇನಾದ್ರೂ ಹುಚ್ಚು ಗಿಚ್ಚು ಹಿಡ್ದಿದೆಯಾ ಹೇಗೆ ? ಏನೂ ತಿಳಿದೋನ್ನ ಅದ್ಯಾಕೆ ಹಾಗೆ ದನ ಬಡಿದ ಹಾಗೆ ಬಡೀತಿದೀಯ ? ಅವನು ನಿನ್ನ ಸ್ವಂತ ಮಗ; ಶತ್ರುವಲ್ಲ."

"ಇಲ್ಲ ಇಂಥ ನಾಲಾಯಕ್ಕು ನನ್ನ ಮಗನಾಗುಕ್ಕೆ ಸಾಧ್ಯವಿಲ್ಲ. ನನಗೆ ನಿನ್ನ ತಂಗಿ ಮೇಲೆ ಅನುಮಾನ. ಇವಳು ನನಗೆ ಮೋಸ ಮಾಡಿದಾಳೆ" ಶಾಸ್ತ್ರಿ ಕಂಠಿಯ ಮಾತಿಗೆ ಅಸಹ್ಯಗೊಂಡು ಅವನಿಂದ ದೂರ ನಿಂತ. ಕಂಠಿ ಹೆಂಡತಿಯ ಬೆನ್ನ ಮೇಲೆ ಗುದ್ದಿದ.

"ಬೊಗಳು..... ನಿಜ ಏನೂಂತ ಬೊಗಳು.... ಯಾರ ಸಹವಾಸ ಮಾಡಿದ್ದೆ ನಾಚಿಕೆಗೆಟ್ಟವಳೇ."

"ಏನ್ ಶಾಸ್ತ್ರೀಗಳೇ ಸುಮ್ನೆ ನೋಡ್ತಾ ನಿಂತು ಬಿಟ್ರಲ್ಲ... ಈವಯ್ಯ ಇವರಿಬ್ರನ್ನು ಕೊಂದೇ ಆಕಿ ಬಿಡ್ತಾನೆ. ವಸಿ ಬಿಡಿಸ್ಕಳ್ಳಿ."

"ಈಗ ಇವನ ತಲೆ ಸರಿ ಇಲ್ಲ. ಪಿತ್ತ ನೆತ್ತಿಗೇರಿದೆ. ನಾವುಗಳು ಇಲ್ಲೇ ನಿಂತಿದ್ದರೆ, ಇವನು ಹೀಗೇ ಆಡ್ತಾನೇ ಇರ್ತಾನೆ. ಅತ್ಲಾಗೆ ನಡೀರಿ. ಇದು ಗಂಡ ಹೆಂಡಿರ ಜಗಳ. ಅವರವರೇ ಸರಿ ಮಾಡ್ಕೊಳ್ಳಲಿ." ಶಾಸ್ತ್ರಿ ಅವರುಗಳನ್ನು ಅಲ್ಲಿಂದ ಹೊರಡಿಸಿ ತಾನೂ ಕದಲಿದ.

"ಏನದು? ಏನ್ ಗಲಾಟೆ ? ಅವರ್ಮನೆ ಮುಂದೆ ಜನ ಸೇರಿದ್ರಲ್ಲ ನೀವೂ ಓಡಿ ಹೋದ್ರಿ..." ಲಕ್ಷ್ಮಿ ಕುತೂಹಲದಿಂದ ಕೇಳಿದಳು.

"ಅಯ್ಯೋ.... ಇದ್ದದ್ದೇ ಬೇನೆ ಕಂಠೀದು. ಅವನಿಗೆ ಯಾಕೆ ಕರುಣೆ ಇಲ್ವೋ?

ಆ ಹುಡುಗನ್ನ ನೀರು ಸೇದೋ ಹಗ್ಗ ತಗೊಂಡು ಸದೆ ಬಡಿದ. ಬಿಡಿಸೋಕೆ ಹೋದ ಪಾತೂನ ಹೊಡೆದಿದ್ದೂ ಅಲ್ದೇ ಬಾಯಿಗೆ ಬಂದ ಹಾಗೆ ಬೈದ. ಅಸಹ್ಯವಾಗುತ್ತೆ ಹೇಳುಕ್ಕೆ. ಕೋಪ ಇಳಿದ್ಮೇಲೆ ಅವನೇ ಶಾಂತನಾಗ್ತಾನೆ. ಮಧ್ಯೆ ಬಾಯಿ ಹಾಕ್ಕೊಂಡು ಹೋಗೋರಿಗೆ ಮರ್ಯಾದೆ ಇಲ್ಲ ಅಷ್ಟೇ."

"ಕೈ ಹಿಡಿದ ಹೆಂಡ್ತಿನ ಹೊಡೀತಾನಲ್ಲ ಅವನ ಕೈ ಸೇದಿಹೋಗ ಪಾಪ ಆ ದತ್ತನೋ ? ಅದೇನು ಮಾಡ್ತು ? ಏನೋ ಪೂರ್ವಾರ್ಜಿತ ಕರ್ಮ ಅನುಭವಿಸ್ತಿದೆ. ಅದು ಅದರ ತಪ್ಪೇ ? ಇವನಿಗ್ಯಾಕೆ ತಿಳಿಯೋದಿಲ್ವೋ ? ಒಟ್ನಲ್ಲಿ ನಮ್ಮ ಪಾತುಗೆ ಸುಖವಿಲ್ಲ" ಸಾತಕ್ಕ ವ್ಯಥೆಯಿಂದ ನುಡಿದಳು.

"ಹೀಗೇ ಆಡ್ತಿದ್ರೆ ಒಂದಿನ ಜೈಲಿಗೆ ಹೋಗ್ತಾನೆ ಅಷ್ಟೇ." ಶಾಸ್ತ್ರಿ ನುಡಿದ.

* * *

ಕೆಲವೇ ತಿಂಗಳೊಳಗೆ ಮೀನಾಕ್ಷಿಗೆ ಮದುವೆ ನಿಶ್ಚಯವಾಗಿತ್ತು. ವರನ ಕಡೆಯವರು ಭಾರಿ ಶ್ರೀಮಂತರು. ಮೀನಾಕ್ಷಿಯ ಫ಼ೋಟೋ ನೋಡಿಯೋ ಒಪ್ಪಿಗೆ ಕೊಟ್ಟಿದ್ದರು. ಪಾತು ಸಾತಕ್ಕನಿಗೆ ಹೆಮ್ಮೆಯಿಂದ ಹೇಳಿಕೊಂಡಳು.

"ಒಳ್ಳೇ ವಿಷಯಾವೇ ತಿಳಿಸ್ದೆ. ಶ್ರೀಮಂತರು ಅಂತ ಅಂತೀಯ ಅವರ ಅಂತಸ್ತಿಗೆ ತಕ್ಕಂತೆ ಮದುವೆ ಮಾಡಿಕೊಡಬೇಕಾಗುತ್ತೆ ಇಲ್ದಿದ್ರೆ ಮುಂದೆ ಮಾತು ಬರುತ್ತೆ.

"ಅದನ್ನೆಲ್ಲ ಮಾತನ್ನಾಡಿಕೊಂಡೇ ಬಂದಿದಾರೆ ಅವರುಗಳು ಎಂದೋ ಮೀನಾಕ್ಷಿಯನ್ನು ನೋಡಿದ್ದರಂತೆ ಸೊಸೆ ಅಂತ ಆಗಲೇ ತೀರ್ಮಾನಿಸಿ ಬಿಟ್ಟಿದ್ದರಂತೆ ಮೀನಾಕ್ಷಿ ಅದೃಷ್ಟ ಮಾಡಿದ್ಲು. ಒಳ್ಳೆ ಮನೆ ಸೇರ್‍ತಾಳೆ. ಇಲ್ಲಿ ಮನೆ ಕೆಲಸ ತಪ್ಪಿದ್ದೇ ಇಲ್ಲ. ಅಲ್ಲಿ ಹಾಯಾಗಿ ಕುಳಿತಿರಬಹುದಂತೆ.... ಕೈಗೊಬ್ಬರು, ಕಾಲಿಗೊಬ್ಬರು ಆಳಂತೆ."

ನಿನ್ನ ಗಂಡನ ಜಂಭಕ್ಕೆ ಇನ್ನೊಂದು ಗರಿ ಸೇರಿಸಿದಂತಾಯಿತು. ಮೀನಾಕ್ಷೀನ ಕಳಿಸು ದೊಡ್ಡಮ್ಮನ್ನ ಬಂದು ಮಾತಾಡಿಸ್ಕೊಂಡು ಹೋಗಲಿ."

"ನೀನೇ ಬಾ ಪಾತು... ನಮ್ಮ ಮನೆಗೆ ಬರೋದೇ ಇಲ್ಲ ನೀನು ಗುಂಡಣ್ಣ ಹೋಗ್ಬೇಡ ಅಂತ ಹೇಳಿದಾನಾ ?"

"ಛೇ, ಛೇ ಗುಂಡಣ್ಣ ಅಂಥೋನಲ್ಲ, ನಾನೇ ಎಲ್ಲಿಗೂ ಹೋಗಲ್ಲ ಅಷ್ಟೇ......." ಪಾತು ಸುಮ್ಮನಾದಳು ಅವಳು ಅತ್ತ ಹೋದ್ಮೇಲೆ ಸಾತಕ್ಕ ಲಕ್ಷ್ಮಿಗೆ ಕೇಳುವಂತೆ ಗೊಣಗಿದಳು ಬರುಲ್ಲ ಅಂತ ಆಕ್ಷೇಪಣೆ ಮಾಡ್ತಾಳೆ. ಕಂಠೀನೋ ಇಡೀ ದಿನವೆಲ್ಲಾ ಮನೇಲಿರ್ತಾನೆ ನನಗೆ ಮುಜುಗರವಾಗುತ್ತೆ ಅವಳೇ ಬಂದರೆ ಆಯ್ತಪ್ಪಾ."

"ಈಗ ಪಾರ್ವತಿಗೆ ಎಷ್ಟೋ ಬಿಡುವು ಇರ್ತಿತ್ತು. ಮೀನಾಕ್ಷಿಯೂ ಮದುವೆ ಮಾಡ್ಕೊಂಡು ಹೊರಟು ಹೋದ್ರೆ ಇವರಿಗೆ ಕಷ್ಟವೇ. ಮನೆ ತುಂಬ ಚಿಕ್ಕ ಚಿಕ್ಕ

ಮಕ್ಕಳು." ಲಕ್ಷ್ಮಿಯೂ ಮಾತನ್ನು ಸೇರಿಸಿದಳು.

"ಮನೆ ತುಂಬಾ ಮಕ್ಕಳಿದಾರೆ ಅನ್ನೋ ಪರಿವೆಯೇ ಇಲ್ಲದೆ ಆ ಕಂಠಿ ಆಡೋ ರೀತಿ ಅಸಹ್ಯವಾಗುತ್ತೆ. ಈ ಪಾತೂನೂ ಅಷ್ಟೆ. ಹೊತ್ತಿಲ್ಲ ಗೊತ್ತಿಲ್ಲ ಅವನ ತಾಳಕ ತಕ್ಕಂತೆ ಕುಣೀತಾಳೆ. ಅವಳಿಗಾದ್ರೂ ತಿಳುವಳಿಕೆ ಬೇಡ್ವೇ ?" ಲಕ್ಷ್ಮಿ ಸಾತಕ್ಕನ ಮಾತಿಗೆ ಮನದಲ್ಲೇ ನಕ್ಕಳು.

"ಕಂಠಿ ಮಾವನ ಸ್ವಭಾವವೇ ಹಾಗೆ ಪಾರ್ವತಿ ಹೆದರ್ತಾರೆ"

"ಹೆದರಿಕೆ ಎಂಥದು ! ನಾಚಿಕೆಗೇಡು ಹಗಲು ಹೊತ್ನಲ್ಲೂ ಸರಸ ಅದೇನು ಚೆನ್ನ ! ದತ್ತಂಗಂತೂ ತಿಳುವಳಿಕೆ ಸಾಲದು ನಿಜ. ಮೀನಾಕ್ಷಿ ಬೆಳೆದು ನಿಂತಿರುವ ಹುಡುಗಿ ರಾಜನೂ ವಯಸ್ಸಿಗೆ ಬಂದಿದಾನೆ ಛೀ, ಛೀ ಬಂದ ಹೊಸದರಲ್ಲಿ ತಂಗಿ ಮನೆ ಅಂತ ಸದರದಿಂದ ಒಂದೆರಡು ಬಾರಿ ಹೋದೆ ಆಮೇಲೆ ಅರ್ಥವಾಯ್ತು. ನನ್ನಂಥೋಳು ಹಾಗೆಲ್ಲಾ ಹೋಗಲೇಬಾರದು ಅಂತ." ಅಷ್ಟರಲ್ಲಿ ಶಾಸ್ತ್ರಿ ಬಂದುದರಿಂದ ಮಾತು ನಿಂತಿತು.

"ಅದೇನು ಇವತ್ತು ಬೇಗನೇ ಬಂದು ಬಿಟ್ರಲ್ಲಾ ಅಡಿಗೆ ಆಗಿಯೇ ಇಲ್ಲ."

"ಏನಾಗಿದೆಯೋ ಅದನ್ನೇ ಬಡಿಸು. ಬಾಳೆಗೊನೆಗಳನ್ನು ಇಳಿಸಿದ್ದಾಗಿದೆ. ಗಾಡಿ ಕಟ್ಟಿಸಿ, ಸಂತೆಗೆ ಹಾಕ್ಬೇಕು....ಪೇಟೆಗೆ ಹೋಗ್ಬೇಕು."

"ಮೊದ್ಲೇ ಹೇಳ್ಬಾರ್ದಾಗಿತ್ತಾ ? ಈಗ ಪೇಟೇಗೆ ಹೋದರೆ ಬರೋದು?"

"ಇನ್ನೂ ಒಂದೆರಡು ಗಾಡಿಗಳು ಹೊರಟಿವೆ. ನಾನು ಸೈಕಲ್ನಲ್ಲಿ ಗಾಡಿಯ ಹಿಂದೇನೇ ಹೋಗ್ತೀನಿ ಗೊನೆಗಳೆಲ್ಲಾ ಮಾಗುವ ಬಣ್ಣಕ್ಕೆ ತಿರುಗಿವೆ. ಕೋತಿಗಳ ಕಣ್ಣಿನಿಂದ ಇದುವರೆಗೆ ಇದ್ದದ್ದೇ ಹೆಚ್ಚು. ಹಿಂಡು ಹಿಂಡಾಗಿ ಬಂದು ಹಾವಳಿ ಮಾಡುತ್ವೆ."

"ಭಾಗೀರಥಮ್ಮ ಹೇಳ್ತಿದ್ರು ಅವರ ಮಗ ಬಂದೂಕನ್ನು ಇಟ್ಕೊಂಡಿದಾರಂತೆ ಕೋತಿಗಳನ್ನು ಹೆದರಿಸಿ ಓಡಿಸ್ತಾರಂತೆ."

"ಅಯ್ಯೋ, ಅವನನ್ನು ಬಿಡು ಲೈಸೆನ್ಸ್ ತಗೊಂಡು ಬಂದೂಕನ್ನು ಇಟ್ಕೊಂಡಿದಾನೆ ಕಾಡು ಪ್ರಾಣಿಗಳನ್ನು ಕೊಲ್ಲೋಕೆ ಅಂತ. ಅವನಿಗೆ ಪ್ರಾಣಿದಯೆ ಕಿಂಚಿತ್ತೂ ಇಲ್ಲ. ತಲೆಗೆಲ್ಲ ಒಂದೇ ಮಂತ್ರ ಬಂದೂಕಿನಿಂದ 'ಢಂ' ಅಂತ ಗುಂಡು ಹಾರಿಸ್ತಾನೆ. ಕೋತಿ, ಹಾವು, ಮುಂಗುಸಿ, ಕಿರುಬ ಯಾವುದನ್ನು ಬಿಡುಲ್ಲ.... ಪಾಪಿ....."

"ಇದರಲ್ಲಿ ಪಾಪ ಏನು ? ಪ್ರಾಣಿಗಳಿಂದ ಆಗೋ ತೊಂದರೇನ ಈ ರೀತಿ ನಿವಾರಿಸಿಕೊಳ್ತಾರೆ. ಒಂದ್ಸಾರಿ ಹಾರಿಸಿದ ಗುಂಡಿನ ಸದ್ದಿಗೆ ಎಷ್ಟೋ ದಿನ ಯಾವ ಪ್ರಾಣಿಗಳೂ ಅತ್ತ ಸುಳಿಯಲ್ವಂತೆ."

"ಹಾಗಂತ ಅವುಗಳ ಮೇಲೆ ಗುಂಡು ಹಾರಿಸೋದು ತಪ್ಪು."

"ಅದು ಅವನ ಕರ್ಮ ಅದನ್ನು ನಾವುಗಳು ಆಡಿಕೊಂಡು ಪಾಪಿಗಳ್ಯಾಕೆ ಆಗ್ಬೇಕು." ಸಾತಕ್ಕ ಮಾತನ್ನು ಮೊಟಕುಗೊಳಿಸಿದಳು.

"ಬೇಗ ಬಡಿಸಿ ಹೊತ್ತಾಯ್ತು. ಎನ್ನುತ್ತಾ ಊಟದ ಚಾಪೆಯನ್ನು ಹಾಕಿಕೊಂಡು ಕುಳಿತ ಮಕ್ಕಳ್ನೆಲ್ಲಾ ಕರಿ..... ಅವುಗಳಿಗೂ ತಟ್ಟೆ ಹಾಕು."

"ಇರಲಿ ಬಿಡು ಅವುಗಳಿಗೆ ತಿಂಡಿ ಆಗಿದೆ. ನಿಧಾನವಾಗಿ ಊಟ ಮಾಡಲಿ. ನಿನಗೀಗ ಹೊತ್ತಾಗುತ್ತೆ. ನೀನು ಊಟ ಮಾಡು." ಲಕ್ಷ್ಮಿ ತಟ್ಟೆಯನ್ನು ನೀರಿನ ಲೋಟವನ್ನು ಇಟ್ಟು, ಬಿಸಿ ಬಿಸಿ ಅನ್ನವನ್ನು ತಂದು ಬಡಿಸಿದಳು. ಶಾಸ್ತ್ರಿ ಪರಿಶಿಂಚನೆ ಮಾಡಿ, ಊಟವನ್ನು ಪ್ರಾರಂಭಿಸಿದ.

"ಬಿಸಿ ಬಿಸಿ ಅನ್ನ ಸಾರೂ ಬಿಸಿ, ನಿಧಾನವಾಗಿ ಊಟ ಮಾಡು" ಸಾತಕ್ಕನ ಮಾತು ಕೇಳಿಸದವನಂತೆ ಶಾಸ್ತ್ರಿ ಆತುರಾತುರವಾಗಿ ಊಟವನ್ನು ಮುಗಿಸಿ, ತಟ್ಟೆಯಲ್ಲೇ ಕೈ ತೊಳೆದು ಎದ್ದು ಶರಟನ್ನು ಧರಿಸಿ ಸಿದ್ಧನಾದ.

" ನಾನು ಬರುವುದು ಎಷ್ಟು ಹೊತ್ತಾಗುತ್ತೋ ಏನೊ ! ಮನೆ ಕಡೆ ಜ್ಞಾಪಾನ.... ವೈಕುಂಠನೂ ಇರುಲ್ಲ." ಎಂದು ಹೇಳಿ ಸೈಕಲನ್ನೇರಿದ.

"ಅಣ್ಣಾ..... ಅಣ್ಣಾ....." ಶಾಂತ ಹಿಂದಿನಿಂದ ಕರೆದಳು.

"ಹೊರಗೆ ಹೊರಟೋರ್ನ ಹಾಗೆ ಹಿಂದಿನಿಂದ ಕರೆದು ನಿಲ್ಲಿಸಬಾರ್ದು ಶಾಂತಾ...... ನಿಂಗೇನು ಬೇಕು ಈಗ ? "

"ನಂಗೊಂದಿಷ್ಟು ಬರೆಯೋಕೆ ಎಕ್ಸೈಸ್ ಪುಸ್ತಕ, ಪೆನ್ನಿಗೆ ನಿಬ್ಬು, ನೀಲಿ ಇಂಕು, ಎಲ್ಲಾ ಬೇಕು ತಂದು ಕೊಡ್ತೀರಾ ? "

"ಈಗ ಹೇಳ್ತೀಯಲ್ಲ, ಲಲಿತಂಗೆ ಹೇಳಿದ್ರೆ ತಂದು ಕೊಡ್ತಿದ್ಲು. "

"ಅಮ್ಮ ಅವಳಿಗೆ ದುಡ್ಡನ್ನು ಕೊಡ್ಲಿಲ್ಲ, ಅವಳು ತರುಲ್ಲ ಅಂದ್ಬಿಟ್ಲು. "

"ಅಮ್ಮ ದುಡ್ಡು ಕೊಡ್ಲಿಲ್ಲ ಅಂತ ಚಾಡಿ ಹೇಳ್ತೀಯಲ್ಲ, ನನ್ನ ಹತ್ರ ಎಲ್ಲಿದೆ ದುಡ್ಡು ? ನಿಮ್ಮಪ್ಪ ನನ್ನ ಕೈಗೆ ಎಂದಾದ್ರೂ ದುಡ್ಡು ಕೊಟ್ಟಿದಾರಾ ? "

"ಸಾಕು ಸಾಕು ಅನಗತ್ಯ ಮಾತು. ನಾನು ತಂದುಕೊಡ್ತೀನಿ." ಶಾಸ್ತ್ರಿ ಸೈಕಲ್ಲನ್ನು ಬೀದಿಗೆ ತಿರುಗಿಸಿದ. ಲಕ್ಷ್ಮಿ ಮಗಳ ಮೇಲೆ ಉರಿಗಣ್ಣು ಬೀರಿದಳು.

"ನೀನೇನು ಹೆದರಿಸ್ಬೇಡ, ನಿನ್ಹತ್ರ ದುಡ್ಡಿಲ್ಲ ಅಂತ ಸುಳ್ಯಾಕೆ ಹೇಳ್ತೀಯ ! ಸಾಸುವೆ, ಬೇಳೆ ಡಬ್ಬದಲ್ಲಿ ಇಟ್ಟಿರೋ ಚಿಲ್ರೆ ಯಾವುದು ?"

"ಅದನ್ನೆಲ್ಲಾ ನೀನ್ಯಾಕೇ ನೋಡ್ದೆ ? "

"ಅದೆಲ್ಲಿಂದ ಬಂತು ಮೊದಲು ಹೇಳು."

"ಸಮಯ ಅಂತಂದ್ರೆ, ಮನೇಲಿ ನಾಲ್ಕು ಕಾಸು ಇರ್ಲಿ ಅಂತ ಡಬ್ಬಿಯಲ್ಲಿ ಹಾಕಿಟ್ಟಿರ್ತೀನಿ, ನಿಮ್ಮಗಳ ಪುಸ್ತಕ ಪೆನ್ಸಿಲಿಗಲ್ಲ"

"ಹೋಗ್ಲಿ ಬಿಡೇ ಶಾಂತಾ. ಯಾಕೆ ಮಾತಿಗೆ ಮಾತು ಬೆಳೆಸ್ತೀಯ. ನಿಮ್ಮಣ್ಣ ತಂದು ಕೊಡ್ತೀನಿ ಅಂತ ಅಂದಿದಾನಲ್ಲ ಅಡಿಗೆ ಮನೆ ಡಬ್ಬಿಗಳಲ್ಲಿರುವ ಚಿಲ್ರೆ, ಸಮಯ ಅಂದ್ರೆ ಬೇಕಾಗುತ್ತೆ...."

"ಅಣ್ಣ ಪೇಟೆಯಿಂದ ಎಲ್ಲಾ ಸಾಮಾನುಗಳನ್ನು ತಂದು ಹಾಕ್ತಾರೆ. ಈ ಹಳ್ಳೀಲಿ, ಯಾವ ಅಂಗಡಿಯೂ ಇಲ್ಲ. ಅತ್ತೆ ಕೂಡಾ ಆಗಾಗ್ಗೆ ಸಾಲಕ್ಕೆ ಹೇಳಿ ಕಳಿಸ್ತಾರೆ.... ನಮ್ಮ ಮನೇಲಿ ಯಾವಾಗ್ಲೂ ಸಾಮಾನುಗಳಿರುತ್ವಲ್ಲ."

"ಅವೆಲ್ಲಾ ನಿಂಗ್ಯಾಕೆ ಶಾಂತಾ... ನಿನ್ನ ಕೆಲಸ ಎಷ್ಟೋ, ಅಷ್ಟರ ಮೇಲೆ ಗಮನ ಇಟ್ಕೋ.... ಇವೆಲ್ಲಾ ಬೇಡ..."

"ಯಾಕತ್ತೆ ನೀವೂ ನಂಗೆ ಬುದ್ಧಿ ಹೇಳ್ತೀರಲ್ಲ. ಅಮ್ಮ ಸುಳ್ಳು ಹೇಳಿದ್ಲು.... ದುಡ್ಡು ಮುಚ್ಚಿಟ್ಟಿದಾಳೆ ಅದು ತಪ್ಪು ಅಂತ ಅನ್ನಿಸುಲ್ವಾ ?"

"ಇಲ್ಲ ಶಾಂತಾ.... ಅದು ತಪ್ಪಲ್ಲ. ನಿಂಗೂ ಮದುವೆಯಾಗಿ, ನಿನ್ನ ಗಂಡನ ಮನೆಗೆ ಹೋಗಿ ಸಂಸಾರ ಶುರು ಮಾಡ್ತೀಯಲ್ಲ..... ಆಗ ನಿನಗೆ ಎಲ್ಲಾ ಅರ್ಥವಾಗುತ್ತೆ. ಈಗ ಏನೇ ಹೇಳಿದ್ರೂ ನಿಂಗೆ ಅರ್ಥವಾಗುಲ್ಲ."

"ಬಿಡಿ ಅತ್ತೆ..... ನಿಮಗೆ ನನ್ನನ್ನು ಕಂಡ್ರೆ ಇಷ್ಟವೇ ಇಲ್ಲ." ಅಂತ ಅರೆಕೋಪದಿಂದ, ಅಲ್ಲಿಂದ ಹೋದಳು."

"ನೋಡಿದ್ರಾ ಅತ್ಗೆ ..... ಹೇಗೆ ಮಾತಾಡ್ತಾಳೆ ! ಈಗ್ಲೇ ಹೀಗೇ.... ಗಂಡನ ಮನೆಗೆ ಹೋದ್ಮೇಲೆ ಇನ್ಹೇಗೋ.......?"

"ಬಿಡು ಲಕ್ಷ್ಮೀ.... ಅವಳಿಗೇನು ತಿಳುವಳಿಕೆ ಇದೆ ? ಅನ್ನಿಸಿದ್ದನ್ನ ಆಡಿದಾಳೆ. ಹೆಣ್ಣು ಮಕ್ಕಳಿಗೆ ಅಪ್ಪನ ಮೇಲೆ ಪ್ರೀತಿ ಜಾಸ್ತಿ ಅಮ್ಮನ್ನ ಕಂಡ್ರೆ ಸ್ವಲ್ಪ ಹೀಗೇ...."

"ಯಾಕೋ... ಹೊತ್ತು, ಹೆತ್ತು, ಬೆಳೆಸ್ದೋಳು ನಾನೇ ತಾನೇ......."

"ಅದು ಈಗ ಅರ್ಥವಾಗುಲ್ಲ. ಅವಳಿಗೂ ಮಕ್ಕಳಾಗಲಿ... ಆಗ ತಾಯಿಯ ಸ್ಥಾನ ಅಂತಂದ್ರೆ ಏನಂತ ಅರ್ಥವಾಗುತ್ತೇ..."

"ನೀವೂ ಅವುಗಳ ಪರ ವಹಿಸ್ಕೊಂಡು ಮಾತಾಡ್ತೀರಿ ಅತ್ಗೇ.... ಚೆನ್ನಾಗಿ ಬೈದು ಬುದ್ಧಿ ಹೇಳ್ಬೇಕಾಗಿತ್ತು ನೀವು."

"ಏನು ಪ್ರಯೋಜನ ! ಅತ್ತೆ ಕೆಟ್ಟೋರು ಅಂತ ಅಂದಿರೋಳು........"

"ನೀವು ಮಹಾನುಭಾವರು ಎಲ್ಲರಿಗೂ ಒಳ್ಳೆಯೋರೆ......" ಮನಸಾರೆ ಹೊಗಳಿದಳು.

ಮೀನಾಕ್ಷಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನು ಕೊಡಲು ದಂಪತಿಗಳಿಬ್ಬರೂ ಮೊದಲು ಶಾಸ್ತ್ರಿಯ ಮನೆಗೆ ಬಂದರು.

"ಬೆಂಗಳೂರಿನಲ್ಲಿ ಮದುವೆ ಎಲ್ಲರೂ ಎರಡು ದಿನ ಮುಂಚಿತವಾಗಿಯೇ

ಬಂದು, ಮಂಗಳ ಕಾರ್ಯದಲ್ಲಿ ಭಾಗವಹಿಸ್ಬೇಕು. ವಧೂ ವರರನ್ನು ಆಶೀರ್ವದಿಸಬೇಕು" ಕಂಠಿ ಎದೆ ಉಬ್ಬಿಸಿ ಮಾತಾಡಿದ.

ಶಾಸ್ತ್ರಿ ತಕ್ಷಣಕ್ಕೆ ಉತ್ತರಿಸಲಿಲ್ಲ. ಹುಡುಗಿಯ ಸೋದರಮಾವ ನೀನು. ಮೀನಾಕ್ಷೀನ ಧಾರೆ ಮಂಟಪಕ್ಕೆ ಕರೆದುಕೊಂಡು ಬರುವ ಅಧಿಕಾರ ನಿನ್ನದೇ.... ಮತ್ತೆ ನಕ್ಕು ನುಡಿದ.

"ಪಕ್ಕಾ ಮಳೆಗಾಲವಲ್ಲಯ್ಯಾ......." ಶಾಸ್ತ್ರಿ ರಾಗ ಎಳೆದ.

"ಮಳೆ ಆದ್ರೇನಂತೆ ಮಳೆ ಪಾಡಿಗೆ ಮಳೆ. ಮದುವೆ ಪಾಡಿಗೆ ಮದುವೆ. ಅವರು ಅಲ್ಲೇ ಮಾಡ್ಕೊಡಿ ನಾವು ಎಲ್ಲಾ ಸಿದ್ಧತೆಗಳನ್ನು ಮಾಡಿರ್ತೀವಿ ಅಂತ ಹೇಳಿದ್ದಕ್ಕೆ ಒಪ್ಕೊಂಡೆ ಇಲ್ದಿದ್ರೆ.... ಶಿವಮೊಗ್ಗಾದಲ್ಲಿ ಮಾಡಬೇಕಾಗಿತ್ತು. ಆಗ ನಂಗೆ ಕಷ್ಟ ಆಗ್ತಿತ್ತು...."

"ಒಳ್ಳೇ ಸಂಬಂಧಾನೇ ಹುಡುಕಿದೀಯ.... ನಿಂಗೆ ಸುಲಭ ಖರ್ಚು, ಶ್ರಮ ಎರಡೂ ಉಳಿಯಿತು.."

"ಅಲ್ಲದೇ ಈ ಹಳ್ಳೀಲಿ ನಿಂಗೇ ಗೊತ್ತಲ್ಲ.... ಒಂದಾದ್ರೆ ಬಂದಿಲ್ಲ.... ನನ್ನ ಕಡೆ ಓಡಾಡಿ ಮಾಡೋರಿಲ್ಲ ಸಧ್ಯ ಪರದಾಡುವುದು ತಪ್ಪಿತು."

"ಯಾಕೋ ಭಾವ.... ನಮ್ಮನ್ನೆಲ್ಲ ಮರೆತು ಬಿಟ್ಯಾ !"

"ಬಿಡು.... ಸೀತಾರಾಮ ಯಾವ ಮಾತಿಗೂ ಬರೋನೇ ಅಲ್ಲ. ನಿನಗೋ ನಿನ್ನ ಕೆಲಸವೇ ಜಾಸ್ತಿ.... ಇನ್ನು ಆ ಶ್ರೀನಿವಾಸ, ಆಟಕ್ಕುಂಟು ಲೆಖ್ಖಕ್ಕಿಲ್ಲ ಅನ್ನೋಹಾಗೆ. ನಮ್ಮ ದತ್ತು ಒಬ್ಬ ಸರಿಯಾಗಿದ್ದಿದ್ರೆ, ನಾನು ಯಾರನ್ನು ಕೇಳಿಕೊಳ್ಳಬೇಕಾಗಿರಲಿಲ್ಲ. ರಾಜ ಚಿಕ್ಕವನು, ಅಲ್ಲದೇ ಜವಾಬ್ದಾರಿ ಕಡಿಮೆ, ಷೋಕಿ ಜಾಸ್ತಿ. ಕೈಯಲ್ಲಿ ಹಣ ಬಿದ್ದರೆ ಸಾಕು, ಹೋಟೆಲ್ಲು ಸಿನಿಮಾ ಅಂತ ಮುಗಿಸಿ ಬಿಡ್ತಾನೆ. ಅದನ್ನೆಲ್ಲ ಯೋಚಿಸಿ, ಎಲ್ಲಾ ಅವರಿಗೇ ವಹಿಸಿ ಬಿಟ್ಟೆ, ಅವರಿಗೆ ಸೊಸೆ ಬೇಕು..ಅವರೇ ಖರ್ಚು ಮಾಡಿ ಮನೆ ತುಂಬಿಸಿಕೊಳ್ತಾರೆ. ಮಾಡಲಿ ಬಿಡು ಅಲ್ವೇನಯ್ಯಾ....?"

"ನಿನ್ನ ತರ್ಕ ನಿನಗೇ ಸರಿ.... ಆದರೂ ಸ್ವಲ್ಪ ವಿಚಿತ್ರ ಅಂತನ್ನಿಸುತ್ತೆ."

"ವಿಚಿತ್ರ ಅಲ್ಲ.... ಜಾಣತನ ನನ್ನದೊಂದು ಮಾತು. ನೀನೂ ಹಾಗೇ ಮಾಡು. ಹೇಗೂ ಸಂಬಂಧ ಹೊರಗಿನದಲ್ಲ. ಸುಂದರಿಯ ಮಗನೇ ಈಗ ಅವಳೂ ಇಲ್ಲ. ಆಸೆ, ಆಸಕ್ತಿ, ಅಕರಾಸ್ತೆ ಯಾರಿಗಿದೆ ? ಒಂದು ಪಾಯಸದ ಅಡಿಗೆ ಮಾಡಿ, ಮಗಳನ್ನು ಧಾರೆ ಎರೆದುಕೊಡು. ಖರ್ಚು, ಶ್ರಮ ಎರಡೂ ಉಳಿಯುತ್ತೆ. ನಿನಗೋ ಸಾಲಾಗಿ ನಾಲ್ಕು ಜನ ಹೆಣ್ಣುಮಕ್ಕಳು."

"ಇಂಥದ್ದನ್ನೆಲ್ಲಾ ನನ್ನ ಕಿವಿಗೆ ತುಂಬಬೇಡ..... ಆಮೇಲೆ ಆಕ್ಷೇಪಣೆ ಬರುವುದು ನನ್ನ ಮೇಲೆ ನನ್ನ ಹೆಣ್ಣು ಮಕ್ಕಳು ನನಗೆ ಭಾರವಲ್ಲ. ಸಾಲ ಮಾಡಿ ಮದುವೆ

ಮಾಡ್ತೀನಿ....." ಶಾಸ್ತ್ರಿ ಸ್ವಲ್ಪ ಖಾರವಾಗಿಯೇ ನುಡಿದ.

"ಏನಾದ್ರೂ ಮಾಡ್ಕೋ, ಸಾಲ ಮಾಡೋನು ನೀನು, ಬಡ್ಡಿ ಕಟ್ಟೋನೂ ನೀನೇ. ನನಗ್ಯಾಕೆ ಚಿಂತೆ ? ಅದುಬಿಡು, ಮದುವೆಗೆ ಬರೋದನ್ನ ಮಾತ್ರ ತಪ್ಪಿಸಬೇಡ. ಶುಕ್ರವಾರ ದೇವರ ಸಮಾರಾಧನೆ ಮನೇಲೇ, ಎಲ್ಲರೂ ಬನ್ನಿ ಸಾವಿತ್ರೀನ ಒಂದೆರಡು ದಿನ ಮುಂಚಿತವಾಗಿ ಕಳಿಸು, ಮದುವೆ ಮನೆಯ ಕೆಲಸಕ್ಕೆ ಸಹಾಯಕರು ಬೇಕು ಪಾರ್ವತಿಗೆ ಏನೇನೂ ತಿಳಿಯದು ಶಾಸ್ತ್ರಿ ತಲೆಯಾಡಿಸಿದ ಅಷ್ಟೇ.

ಅವರಿಬ್ಬರಿಗೂ ಕಾಫಿಯನ್ನು ಕೊಟ್ಟು, ಪಾರ್ವತಿಗೆ ಅರಿಶಿನ ಕುಂಕುಮ ದೊಂದಿಗೆ, ರವಿಕೆ ಖಣವನ್ನಿಟ್ಟುಕೊಟ್ಟಳು ಲಕ್ಷ್ಮಿ.

"ಲಕ್ಷ್ಮೀ.... ಮರೀಬೇಡ.... ನಿನ್ನ ಮಕ್ಕಳ ಮದುವೆಗೆ ನಾವು ಬಂದು ಓಡಾಡ ಬೇಕೋ ಬೇಡ್ವೋ.....? ಖಂಡಿತ ಬರಲೇಬೇಕು." ಲಕ್ಷ್ಮಿ 'ಹೂಂ' ಎಂದು ಹೇಳಿ ಗಂಡನ ಕಡೆ ನೋಡಿದಳು. ಅವರಿಬ್ಬರು ಹೊರಟರು. ಅವರುಗಳು ಮರೆಯಾದ ಕೂಡಲೇ ಸಾತಕ್ಕ ನುಡಿದಳು.

"ನಾನು ಅವರ ಮನೆಗೆ ಹೋಗುಲ್ಲ, ಅಲ್ಲಿ ಮಡಿ ಮೈಲಿಗೆ ಒಂದೂ ಸರಿ ಹೋಗುಲ್ಲ. ಅಲ್ಲದೇ ನಿಂಗೇ ಗೊತ್ತಲ್ಲ. ಕಂಠಿಯ ಸ್ವಭಾವ ಮಾತಿನಲ್ಲೇ ಅಟ್ಟಕ್ಕೆ ಹತ್ತಿಸುತ್ತಾನೆ. ಬೇಡವಾದಾಗ ಬೀಳಿಸುತ್ತಾನೆ ನಾನು ಏನು ಬೇಕೋ ಇಲ್ಲಿಂದ್ಲೇ ಸಹಾಯ ಮಾಡ್ತೀನಿ ಅಲ್ಲಿ ಹೋಗಿರುಕ್ಕೆ ಮಾತ್ರ ಆಗುಲ್ಲ."

"ಅದನ್ನು ನೀನು ಪಾರ್ವತಿಗೆ ಹೇಳು, ಸಮಯ ಅಂತಂದ್ರೆ ಬಂದು ಸಹಾಯ ಮಾಡ್ಲಿಲ್ಲ ಅನ್ನೋ ಅಪವಾದ ಬರುತ್ತೆ ಅಷ್ಟೇ. ನಮ್ಮ ಮನೆಯಲ್ಲೂ ಮದುವೆಗಳು ನಡೆಯಬೆಕಾಗಿದೆ. ಆಗ ಹಂಗಿಸಿ ಅನ್ನದೇ ಇರುವವನಲ್ಲ ಕಂಠಿ...." ಶಾಸ್ತ್ರಿ ಎಚ್ಚರಿಸು ವವನಂತೆ ನುಡಿದ.

"ಒಟ್ನಲ್ಲಿ ಈ ಕಂಠಿಗೆ ಹೆದರೋ ಕಾಲ ಬಂತು. ನನ್ನ ಪಾಡಿಗೆ ನಾನು ಹಾಯಾಗಿರುಕ್ಕೂ ಬಿಡಲ್ಲ.... ನಾನು ಈ ಹಳ್ಳಿಗೆ ಬಂದುದೇ ತಪ್ಪು"

"ಹಳ್ಳಿ, ಹಳ್ಳೀ, ಯಾರು ಬಲವಂತ ಮಾಡಿದ್ರು ?" ಶಾಸ್ತ್ರಿ ರೇಗಿ ನುಡಿದಾಗ ಸಾತಕ್ಕ ಪೆಚ್ಚಾದಳು.

"ನನ್ನ ಸ್ಥಿತಿ ನಿಂಗೂ ಅರ್ಥವಾಗಲ್ಲ ರೇಗ್ತೀಯ.. ನಾನೇನ್ಮಾಡ್ಲೀ !" "ಸರಿಗೆ ಉಪ್ಪು ಸಾಲದು, ತಂದ್ಹಾಕು." ಶಾಸ್ತ್ರಿ ರೇಗಿದ.

"ಸರಿ ಬಿಡು, ಏನಾದ್ರೂ ಒಂದು ಕಾರಣಾನ ಹೇಳಿ ತಪ್ಪಿಸಿಕೊಂಡರೆ"

"ಊಟಕ್ಕೆ ಮೇಲೆ ಉಪ್ಪು ಹಾಕ್ಕೊಂಡು ಊಟ ಮಾಡ್ತೀಯ ಅದಕ್ಕೇ ನಿಂಗೆ ಬಾಯಾರಿಕೆ ಜಾಸ್ತಿ."

"ಉಪ್ಪು ಹೆಚ್ಚು ತಿಂದ್ರೆ ಕೋಪ ಜಾಸ್ತಿ ಅಂತ ಹೇಳ್ತಾರೆ. ಅದು ಇವರ

ವಿಷಯದಲ್ಲಿ ದಿಟವೇ ಯಾವಾಗ ನೋಡಿದ್ರೂ ಸಿರ್ ಅಂತಿರ್ತಾರೆ." ಶಾಂತ ಪುಸ್ತಕ ಪೆನ್ಸಿಲ್ಲುಗಳೊಂದಿಗೆ ಬಂದು ಕೂತಳು.

"ಹೂಂ ಕೂತ್ಕೋ...." ಶಾಸ್ತ್ರಿ ಪುಸ್ತಕವನ್ನು ತೆಗೆದು ನೋಡಿದ.

"ಒಂದ್ಗಳ್ಗೇ ಮಲಗ್ಲಿ ಬಿಡೇ ಬೆಳಗ್ನಿಂದ ಗದ್ದೇಲಿ ತಿರುಗಾಡಿರ್ತಾನೆ ರಾತ್ರಿ ಹೇಳಿಸ್ಕೊಂಡ್ರಾಗಲ್ವಾ ?"

"ರಾತ್ರಿ ಸೀಮೆಎಣ್ಣೆ ದೀಪದಲ್ಲಿ ಏನೂ ಸರಿಯಾಗಿ ಕಾಣುಲ್ಲ ಅತ್ತೆ. ಬೆಳಕೇ ಸಾಲದು ಅಲ್ದೇ ಸೀಮೆಎಣ್ಣೆಯ ವಾಸನೆಗೆ ತಲೆನೋವು ಬರುತ್ತೆ. ಕಣ್ಣು ಉರಿಯುತ್ತೇ."

"ಎಲ್ರೂ ಓದೋದು ಅದೇ ಬೆಳಕ್ನಲ್ಲಿ ತಾನೇ ?"

"ನಂಗೇನಂತೆ ನಾನು ಫೇಲಾಗ್ತೀನಿ ಅಷ್ಟೇ."

"ಪರೀಕ್ಷೆಗೆ ಕಟ್ಟಿಲ್ಲ, ಫೇಲಾಗೋ ಮಾತ್ಯಾಕೆ ? ನೀನು ಇತ್ಲಾಗೆ ತಿರುಗಿವಾದಿ ಸ್ಬೇಡ." ಶಾಸ್ತ್ರಿ ಮಗಳನ್ನು ಗದರಿದ.

* * *

ಮೀನಾಕ್ಷಿಯ ಮದುವೆಗೆ ಶಾಸ್ತ್ರಿ ಶಾಂತಳನ್ನು ಕರೆದುಕೊಂಡು ಹೊರಟ. ಮನೆಯಲ್ಲಿ ದನಕರುಗಳೂ, ಮಕ್ಕಳ ಸ್ಕೂಲು ಎಲ್ಲವನ್ನು ಸಾತಕ್ಕ ಒಬ್ಬಳೇ ನಿಭಾಯಿಸುಕ್ಕೆ ಆಗುವುದಿಲ್ಲವೆಂದು ಲಕ್ಷ್ಮಿ ಹೋಗಲು ಇಷ್ಟ ಪಡಲಿಲ್ಲ. ಅಲ್ಲದೇ ಬೇರೆ ವಿಷಯವೂ ಇತ್ತು.

"ನನ್ನ ಹತ್ರ ಒಳ್ಳೆಯ ರೇಷ್ಮೆ ಸೀರೆಗಳಿಲ್ಲ. ಯಾವುದೋ ನನ್ನ ಮದುವೇಲಿ, ನನ್ನಪ್ಪನ ಮನೇಲಿ ಕೊಟ್ಟ ಸೀರೆಗಳು ಉಟ್ಟೂ ಉಟ್ಟೂ ಹಳೇದಾಗಿದೆ.......ಒಡವೆಗಳಿಲ್ಲ ಸರ, ಬಳೆಗಳನ್ನೆಲ್ಲಾ ಮಾರಿದ್ದಾಗಿದೆ. ಬಿಚ್ಚೋಲೆ ಗೌರಮ್ಮನ ಥರ ನಂಗೆ ಹೋಗೋಕೆ ಇಷ್ಟವಿಲ್ಲ." ಸಾತಕ್ಕನಿಗೆ ಲಕ್ಷ್ಮಿಯ ಅಳಲು ಅರ್ಥವಾಗಿತ್ತು.

"ಮದುವೆ ಮನೆ ಉಟ್ಟು ತೊಟ್ಟು ಶೃಂಗಾರ ಮಾಡ್ಕೊಬೇಕು ಬಂದ ಹೆಂಗಸರು ಒಬ್ಬರನ್ನೊಬ್ಬರು, ಅಳೆಯುವುದೇ ಉಡುಗೆ ತೊಡುಗೆಯನ್ನು ನೋಡಿ ಮನಸ್ಸಿಗೆ ಮುಜುಗರವಾಗೋದು ನಿಜ ಎಂದನಿಸಿತ್ತು. ಆದರೆ ಅದನ್ನು ಆಡಲಿಲ್ಲ. ತನ್ನಲ್ಲಿದ್ದ ಒಂದೆಳೆ ಅವಲಕ್ಕಿ ಸರವನ್ನು ಶಾಂತಳ ಕತ್ತಿಗೆ ಹಾಕಿದ್ದಳು.

"ಮದುವೆ ಗೊತ್ತಾಗಿರುವ ಹುಡುಗಿ ನೀನು, ನಿನ್ನ ಮೇಲೆ ಎಲ್ಲರ ದೃಷ್ಟಿ ಇರುತ್ತೆ." ಎಂದು ಹೇಳಿ ತನ್ನ ರೇಷಿಮೆ ಸೀರೆಗಳನ್ನು ಕತ್ತರಿಸಿ ಚಿಕ್ಕದನ್ನು ಮಾಡಿ ಕೊಟ್ಟಿದ್ದಳು.

"ಅಮ್ಮ ಯಾಕೆ ಬರಲಿಲ್ಲ ಅಂತ ಕೇಳಿದ್ರೆ ಏನು ಹೇಳ್ಲಿ ?"

"ಅವಳು ಒಳಗಿರಲಿಲ್ಲ, ಅಂತ ಪಾತು ಕೈಲಿ ಹೇಳು."

"ನಂಗೆ ನಾಚ್ಕೆ ಆಗುತ್ತೆ ಅತ್ತೆ."

"ಇದ್ರಲ್ಲಿ ನಾಚ್ಕೆ ಏನು ? ನಂಗೊತ್ತಿಲ್ಲ ಅನ್ನು.. ನಾನೇ ಪಾತುಗೆ ಆಮೇಲೆ ಹೇಳ್ತೀನಿ."

"ನೀವ್ಯಾಕೆ ಬರ್ಲಿಲ್ಲ ಅಂತ ಕೇಳಿದ್ರೆ ?"

"ಏನೂ ಕೇಳುಲ್ಲ ನಾನು ಪಾತೂಗೆ ಹೇಳಿದೀನಿ ಅಲ್ಲಿ ನನ್ನಂಥೋರಿಗೆ ಏನು ಕೆಲ್ಸ ?" ಸಾತಕ್ಕ ಅಹಿತವಾದ ಧ್ವನಿಯಲ್ಲಿ ಹೇಳಿದಳು.

"ಹಾಗಾದ್ರೆ ನಾನೂ ಹೋಗುಲ್ಲ, ಅಣ್ಣ ಒಬ್ಬರೇ ಹೋಗಿರಬರಲಿ."

"ಸುಂದರಿಯ ಮಗಳು ಕಾಗದ ಬರೆದಿದಾಳೆ ಶಾಂತನ್ನ ಕರ್‍ಕೊಂಡು ಬನ್ನಿ ಅಂತ ಅವರ ಮನೆಯವರೆಲ್ಲಾ ಬಂದೇ ಬರ್‍ತಾರೆ ನಿನ್ನನ್ನ ಕರ್‍ಕೊಂಡು ಹೋಗದಿದ್ರೆ ಆಕ್ಷೇಪಣೆ ಮಾಡ್ತಾರೆ." ಶಾಂತ ಮನಸ್ಸಿಲ್ಲದ ಮನಸ್ಸಿನಿಂದ ತಂದೆಯ ಜೊತೆ ಹೊರಟಿದ್ದಳು.

ಮದುವೆಯ ಮಂಗಳ ಕಾರ್ಯವನ್ನು ಮುಗಿಸಿಕೊಂಡು, ಕಂಠಿ ದಂಪತಿಗಳು ಸಂಸಾರ ಸಮೇತರಾಗಿ ಹಿಂತಿರುಗಿದ್ದರು. ಸ್ವಲ್ಪ ಬಿಡುವು ಮಾಡಿಕೊಂಡು ಪಾರ್ವತಿ ಮದುವೆ ತಿಂಡಿಗಳನ್ನು ತೆಗೆದುಕೊಂಡು ಅಣ್ಣನ ಮನೆಗೆ ಬಂದಳು.

"ಲಕ್ಷ್ಮೀ.... ಸಾತು, ಪಾತು ಬಂದಿದಾಳೆ ನೋಡ್ರೇ....." ಶಾಸ್ತ್ರಿ ಮುಂಬಾಗಿಲಿನಲ್ಲೇ ಕೂಗು ಹಾಕಿದ.

"ಬಾರೇ ಪಾತು.... ಯಾವಾಗ ಬಂದ್ರಿ ? ಬಿಡುವು ಮಾಡಿಕೊಂಡು ಬಂದು ಬಿಟ್ಟಿದೀಯ...." ಸಾತಕ್ಕ ಮುಗುಳ್ನಗುತ್ತಾ ಕೇಳಿದಳು.

"ಹೂಂ ಇನ್ನೇನ್ಮಾಡ್ಲೀ ನೀವುಗಳಂತೂ ಮದುವೆಗೆ ಬರಲಿಲ್ಲ. ಅರಿಶಿನ ಕುಂಕುಮ, ಹಾಗೆ ಮದುವೆ ಮನೆಯ ತಿಂಡಿಯನ್ನು ಮಕ್ಕಳಿಗೆ ಕೊಟ್ಟು ಹೋಗೋಣ ಅಂತ ಬಂದೆ....." ಎನ್ನುತ್ತಾ ಅಲ್ಲಿ ಹಾಸಿದ್ದ ಚಾಪೆಯ ಮೇಲೆ ಕುಳಿತಳು.

"ಉಂಡೆ ಚಕ್ಕುಲಿ, ತಿಂಡಿಗಳನ್ನು ಯಾರು ಮಾಡಿಸಿದ್ರು ?"

"ಅವರೇ ಎಲ್ಲಾ ಮಾಡ್ಸಿದ್ರು ಸಾತು...ನಮ್ಮದೇನೂ ಇಲ್ಲ. ಗಂಡಿನವರಂತೆ ನಾವು ಕೈ ಬೀಸಿಕೊಂಡು ಹೋಗಿ, ಮಗಳನ್ನು ಧಾರೆ ಎರೆದುಕೊಟ್ಟು ಬಂದೆವು."

" ಮೀನಾಕ್ಷಿನ್ನೂ ನಿಮ್ಮ ಜತೇಲಿ ಕರ್‍ಕೊಂಡು ಬಂದಿದೀರಿ...ಯಾಕೆ?"

" ಹೂಂ. ಮನೆ ತುಂಬಿಸಿಕೊಟ್ಟಿಲ್ಲ ಇನ್ನೂ."

"ಹೌದಾ ! ಹಾಗೇಕೆ ಮಾಡಿದ್ರಿ ?" ಲಕ್ಷ್ಮಿ ಕೇಳಿದಳು.

"ಬೀಗರೇ ಹಾಗೆ ಹೇಳಿದ್ರು... ವರ್ಷದೊಳಗೆ ಮೂರು ತಲೆ ಆಗೋದು ನಮಗೆ ಸಮ್ಮತವಿಲ್ಲ, ಮೂರು ತಿಂಗಳು ಕಳೆಯಲಿ ಆಮೇಲೆ ನಿಷೇಕ ಪ್ರಸ್ಥ ಮಾಡಿ ಮಗಳನ್ನು ನಮ್ಮ ಮನೆ ತುಂಬಿಸಿಕೊಡಿ ಅಂತ ಹೇಳಿದಾರೆ."

" ಯಾಕಂತೋ?"

"ಏನೋ ಗೊತ್ತಿಲ್ಲ ಆ ಮಾತು ಬರ್ಲಿಲ್ಲ ನಾವು ಹೇಗೆ ಕೇಳೊದು ? ಈ ಬಾರಿಯಾದ್ರೂ ನಾವು ಖರ್ಚುಗಳನ್ನು ವಹಿಸಿಕೊಳ್ಳದಿದ್ರೆ ಏನು ಚೆನ್ನ ನೀನೇ ಹೇಳು"

"ಹೌದು..... ಅದು ಸರಿಯಲ್ಲ ಮಗಳೂ ಅಳಿಯಂಗೆ ಏನಾದ್ರೂ ಭಾರಿ ಭಾರಿ ಉಡುಗೊರೆಗಳನ್ನು ಕೊಡ್ಲೇಬೇಕು."

"ದೀಪಾವಳಿ ಹಬ್ಬ ಬೇರೆ ಬರುತ್ತಲ್ಲ ಮಧ್ಯದಲ್ಲಿ ಮೊದಲನೇ ವರ್ಷ. ಅಳಿಯನ್ನ ಕರೆದು ಉಡುಗೊರೆ ಉಪಚಾರ..ನಡೀಬೇಕು.

"ಹೌದ, ಸಾತು ಹಣಾನ ಹೇಗೆ ಹೊಂದಿಸೋದು ಅಂತ ನನಗೆ ದಿಗಿಲಾಗ್ತಿದೆ. ಹಗಲು ರಾತ್ರಿ ನಿದ್ದೇನೇ ಇಲ್ಲ."

"ಅದಕ್ಕೇ ಹೇಳೋದು.... ಅಂತಸ್ತು ನೋಡಿ ಮದುವೆ ಮಾಡ್ಬೇಕು ಅಂತ. ಕಂಠಿ ಹೋಗಿ ನೋಡಿ, ಮದುವೇನ ನಿಶ್ಚಯ ಮಾಡ್ಕೊಂಡೇ ಬಂದ. ಯಾರನ್ನೂ ಕೇಳಲಿಲ್ಲ ; ಯಾರ್ಗೂ ಹೇಳಲಿಲ್ಲ, ನೀನೂ ಸುಮ್ಮನಿದ್ಯಲ್ಲಾ?"

"ನನ್ನ ಮಾತನ್ನು ಎಲ್ಲಿ ಕೇಳ್ತಾರೆ ಸಾತು ?"

"ಅವನು ಹೇಳ್ದ ಹಾಗೆ ನೀನು ಕುಣಿಯುಲ್ವಾ ? ಒಂದ್ಸಾರಿಯಾದ್ರೂ ಮಾತಾಡ್ಬೇಕು.ಇದು ನಿನ್ನ ಮಗಳ ಜೀವನದ ಪ್ರಶ್ನೆ... ಹೋಗ್ಲೀ.... ಬೀಗರ ಸ್ವಭಾವ, ನಡೆವಳಿಕೆ ಏನನ್ನಿಸ್ತು?"

"ಒಳ್ಳೋರ ಥರ ಕಾಣ್ತಾರೆ, ಮೀನಾಕ್ಷಿಯ ಹಣೇಲಿ ಹೇಗೆ ಬರೆದಿದೆಯೋ ಹಾಗೇ ನಡೆಯುತ್ತೆ. ನಾನೀಗ ಏನು ಮಾಡುಕ್ಕೇ ಆಗುತ್ತೆ?"

"ಮೀನಾಕ್ಷಿಗೆ ಚೆನ್ನಾಗಿ ತಿಳುವಳಿಕೆ ಹೇಳು ಹೊಂದಿಕೊಂಡು ಹೋಗ್ಬೇಕು ಅಂತ ಬುದ್ಧಿ ಮಾತು ಹೇಳು. ಕಂಠಿ ಥರ ಆಡಿದ್ರೆ ಅವಳಿಗೇ ಕಷ್ಟ. ಶ್ರೀಮಂತರ ಸಹವಾಸ ಕಷ್ಟ."

"ನೀನೇ ಅವಳ ಹತ್ರ ಮಾತ್ನಾಡು. ನಾನು ಅವಳನ್ನು ಕಳಿಸ್ತೀನಿ."

"ಚೆನ್ನಾಗಿದೆ ನನಗೆ ಯಾವ ಅತ್ತೆ ಮನೇಲಿದ್ದ ಅನುಭವ ಇದೆ ? ನಿನ್ನ ಕಷ್ಟ ನೋಡಿ ಹಾಗೆ ಹೇಳ್ದೆ.

"ಆದ್ರೂ ತಾಯಿ ನಾನು.... ನನ್ನ ಹತ್ರ ಮಾತ್ನಾಡೋಕ್ಕೂ ನಿನ್ಹತ್ರ ಮಾತ್ನಾಡೋಕೂ ವ್ಯತ್ಯಾಸ ಇರುತ್ತೆ."

"ಇರಬಹುದು. ಬರಲಿ ಕಳಿಸು ಮದುಮಗಳನ್ನು ನೋಡಿದ ಹಾಗೂ ಆಗುತ್ತೆ. ಮಾತನಾಡಿಸಿದ ಹಾಗೂ ಆಗುತ್ತೆ. ಊಟಕ್ಕೆ ಕಳಿಸು...." ಲಕ್ಷ್ಮಿ ಪಾರ್ವತಿಗೆ ಅರಿಶಿನ ಕುಂಕುಮದೊಂದಿಗೆ, ರವಿಕೆ ಖಣವನ್ನಿಟ್ಟು ಕೊತೆಗೆ ಇಪ್ಪತ್ತು ರೂಪಾಯಿ ಗಳನ್ನು ಇಟ್ಟುಕೊಟ್ಟಳು.

"ಇಷ್ಟೆಲ್ಲಾ ಈಗ್ಯಾಕೆ ಲಕ್ಷ್ಮಿ....?"

"ಇರಲಿ ತಗೊಳ್ಳಿ, ಇದೇನು ಮಹಾ ಮದುವೆಗೆ ಸೀರೇನೇ ತರಬೇಕು ಅಂತ ಅಂದ್ಕೊಂಡಿದ್ದು... ಏನೂ ಆಗಲೇ ಇಲ್ಲ ನೀವೇ ಈ ಹಣದಲ್ಲಿ ನಿಮಗಿಷ್ಟವಾದ ಸೀರೆಯನ್ನು ತಗೊಳ್ಳಿ....." ಎಂದಳು. ಪಾರ್ವತಿ ಸಂತಸದಿಂದ ಸ್ವೀಕರಿಸಿದಳು.

"ನೀವುಗಳೆಲ್ಲ ಮದುವೆಗೇ ಬಂದಿದ್ರೆ ಚೆನ್ನಾಗಿತ್ತು. ಏನೋ ಒಂದು ನೆವ ಹೇಳಿ ತಪ್ಪಿಸ್ಕೊಂಡ್ರಿ...." ಆಕ್ಷೇಪಣೆ ಮಾಡಿದಳು.

"ಗುಂಡಣ್ಣ ಬಂದಿದ್ನಲ್ಲ. ಶಾಂತನೂ ಜೊತೇಲಿ ಬಂದಿದಲ್ಲ.... ಏನ್ಮಾಡೋದು? ಇಲ್ಲಿಯ ಕೆಲಸಗಳು ಜಾಸ್ತಿ..... ಯಾರಿಗೆ ವಹಿಸಿ ಬರುಕ್ಕೆ ಆಗುತ್ತೇ ? ಲಕ್ಷ್ಮಿ ಬೇರೆ ರಜ ತಗೊಂಡಿದ್ಲು."

"ಸರಿಯಪ್ಪ ಹೆಂಗಸರಿಗೆ ಇದೊಂದು ಎಲ್ಲಾದಕ್ಕೂ ಅಡ್ಡ ಬರುತ್ತೆ. ನಾನಿನ್ನು ಬರ್ತೀನಿ." ಎನ್ನುತ್ತಾ ಪಾತು ಎದ್ದಳು.

*　　*　　*

"ಅವ್ವಾವ್ರೇ ಗೌಡ್ರ ಮನೆ ಓರಿ ಕರೂನ ಉಚ್ಚು ನಾಯಿ ಕಡಿದೈತಂತೆ. ಎಂಗೆಂಗೋ ಆಡ್ತೈತಂತೆ" ವೈಕುಂಠ ಬಂದು ಸುದ್ದಿಯನ್ನು ತಿಳಿಸಿದಾಗ ಬೆದರಿದಳು.

"ಹೌದೇನೋ ವೈಕುಂಠ ? ನಿಂಗ್ಯಾರು ಹೇಳಿದ್ರು ? ಯಾವುದು ಅದೇ ಬೆಳ್ಳಗೆ ದಷ್ಟಪುಷ್ಟವಾಗಿ ಬೆಳೆದಿತ್ತಲ್ಲ ಅದಾ ? ಈಗೆಲ್ಲಿದೆ ? ಕೊಟ್ಟಿಗೇಲಿ ಕಟ್ಟಿ ಹಾಕಿದಾರೆ ತಾನೇ ?"

"ಹೂಂ, ಅದೇ ಓರಿ ಕರ. ದೊಡ್ಡೀಲಿ ಕಟ್ಟಿ ಆಕವ್ರಂತೆ. ಎಲ್ದು ಕಿತ ಗೂಟಾನ ಕಿತ್ಕೊಂಡು ಓಯ್ತಂತೆ ಎಂಗೋ ಇಡಿದು ಈಗ ಬಲವಾದ ಗೂಟಕ್ಕೆ ಕಟ್ಟವ್ರಂತೆ. ಆದ್ರೂ ಅಳ್ಳೀ ಜನ್ರೆಲ್ಲಾ ಉಸಾರಾಗಿರಿ ಅಂತ ಪಟೇಲ್ರು ಹೇಳಿದಾರಂತೆ. ತಳವಾರನ ಕೈಲಿ ಬೀದೀಲಿ ಕೂಗಿಸ್ತಾರಂತೆ ಬೆಳಗ್ನೊತ್ತು ಪರ್ವಾಗಿಲ್ಲ. ರಾತ್ರಿಯಾದ್ಮೇಲೆ ಯಾವ ದಿಕ್ಕಿಂದ ಓಡಿ ಬತ್ತೈತೋ ಎಂಗೆ ಏಳಾರು ?"

"ಅದೇ ಭಯ ನಮ್ಗೆ. ಪೇಟೆಯಿಂದ ರೈಲು ಬರುವುದೇ ಕತ್ತಲಾದ ಮೇಲೆ. ಅಯನೋರು ಸಹ ಕತ್ಲಾದ್ಮೇಲೇನೇ ಮನೆಗೆ ಬರೋದು. ಪಾಪ ಯಾಕೆ ಹೀಗಾಯ್ತೋ! ಲಕ್ಷ್ಮಿ ಲೊಚಗುಟ್ಟಿದಳು.

ಒಳಗ್ನಿಂದ ಬಂದ ಸಾತಕ್ಕನಿಗೆ ವೈಕುಂಠ ಮತ್ತೊಮ್ಮೆ ಎಲ್ಲವನ್ನು ವಿಶದವಾಗಿ ತಿಳಿಸಿದ.

"ಹುಚ್ಚು ನಾಯಿ ಕಚ್ಚಿದೆ ಅಂತ ಹೇಗೆ ಗೊತ್ತಾಯ್ತಂತೆ. "

"ಮುಂಗಾರು ಮಳೆ ಬಿದ್ದಾಗ್ನಿಂದ ಎಂಗೆಂಗೋ ಅಡ್ತೈತಂತೆ. ಅಂತಂತ ಅವರ್ಮನೆ ಆಳು ಎಳ್ದ."

"ಮುಂಗಾರು ಮಳೆ ಶುರುವಾಗಿ ಮೂರು ತಿಂಗಳಾಗ್ತಾ ಬಂತು. ಇದು ವರೆಗೂ ಗೊತ್ತಿರಲಿಲ್ವಂತಾ ?"

"ಏನೋ ನಂಗೊತ್ತಿಲ್ರವ್ವಾ ಬುಡು ಬುಡಿಕೆಯವನು ಬಂದೋನು ಅಂಗೇ ಏಳಿದ್ನಂತೆ ಬುಡುಬುಡಿಕೆ ಸಾಸ್ತ್ರ ನಿಜ ಅಲ್ಲವ್ರಾ ?"

"ಯಾವ್ದುಕ್ಕೂ ಹುಶಾರಾಗಿರಬೇಕು. ಮೇಯೋಕೆ ಹೋದ ಕಡೆ ನಾಯಿ ಕಚ್ಚಿರಬಹುದು. ದನಕರುಗಳನ್ನು ಎಚ್ಚರದಿಂದ ನೋಡ್ಕೋಬೇಕು.....ನಾಯಿಗಳನ್ನು ಓಡಿಸ್ಬೇಕು."

"ಇಲ್ಲ ಅವ್ವಾವ್ರೆ, ಅವ್ರ ಮನೆ ದನಗಳನ್ನ ಓಡ್ಕೊಂಡು ಓಗೋ ತಾವೇ ಬ್ಯಾರೆ.... ನಮ್ಮನೆ ದನಿಗಳನ್ನು ಒಯ್ಯೋ ತಾವೇ ಬ್ಯಾರೆ. ಈ ಓರಿ ಕರ ಮನಸ್ರನ್ನ ಕಚ್ಚಿದ್ರೆ ಅವ್ರಿಗೂ ಉಚ್ಚು ಇಡೀತೈತಾ !"

"ಏನೋ ಗೊತ್ತಿಲ್ಲ ಕಣೋ ವೈಕುಂಠ ಅಯ್ಯಾರು ಬಂದ್ಮೇಲೆ ಕೇಳೋಣ. ತಳವಾರನ ತಮಟೆ ಸದ್ದು ಕೇಳ್ಸಿದ್ರೆ ನಮಗೂ ಹೇಳೂ ವೈಕುಂಠನ್ನ ಅತ್ಲಾಗೆ ಕಳಿಸಿ ಒಳಕ್ಕೆ ಬಂದಳು.

"ನೋಡಿದ್ರಾ ಅತ್ಗೆ ಒಂದಲ್ಲ ಒಂದು ಆತಂಕ ಬಂದೊದಗುತ್ತಲ್ಲಾ.... ಹೇಗೆ ನೆಮ್ಮದಿಯಿಂದ ಇರೋದು ?" ಲಕ್ಷ್ಮಿ ಆತಂಕಗೊಂಡಿದ್ದಳು.

"ಇವನೇನು ನಿಜ ಹೇಳ್ತೀದಾನೋ ತಮಾಷೆ ಮಾಡ್ತಿದಾನೋ ಹೇಗೆ ಗೊತ್ತು? ಅವನನ್ನು ನಂಬೋದು ಹೇಗೆ

"ಆದ್ರೂ.... ದನಕ್ಕೆ ಹುಚ್ಚು ಹಿಡಿಯೋದು ಅಂತಂದ್ರೆ, ಭಯ ಆಗುತ್ತೆ. ಯಾವುದೇ ನಾಯಿ ಕಚ್ಚಿದರೂ, ಮನುಷ್ಯರು, ಹದಿನಾಲ್ಕು ಇಂಜೆಕ್ಷನ್‌ಗಳನ್ನು ತಗೊಳ್ಳಲೇಬೇಕು." ಪಾಪ ಇದೋ ಮೂಕಪ್ರಾಣಿ. ಯಾವ ನಾಯಿ ಯಾವಾಗ ಕಚ್ತೋ.... ? ಈ ಹೋರಿ ಕರು, ಯಾರನ್ನೂ ಕಚ್ದೇ ಇರಬಹುದು. ಆದರೂ ಅದರಿಂದ ಅಪಾಯ ಆಗಬಹುದು ಅಲ್ವಾ ? ಬೀದೀಲಿ ತಿರುಗಾಡೋರ್ಗೆ ಭಯ ಆಗ್ದೇ ಇರುತ್ತಾ ?"

"ನೋಡೋಣ ದೇವರಿದಾನೆ, ಸಮಸ್ಯೆಗಳನ್ನು ಆತಂಕಗಳನ್ನು ತಂದು ಒಡ್ಡುವ ಭಗವಂತ ಅವನೇ ಪರಿಹಾರವನ್ನು ಸೂಚಿಸುತ್ತಾನೆ ನಮ್ಮ ಕೈಲಿ ಏನಿದೆ?"

"ಹಾಗಲ್ಲ ಅತ್ಗೇ...." ಲಕ್ಷ್ಮಿ ಆತಂಕದಿಂದ ಏನನ್ನೋ ಹೇಳಹೊರಟಳು.

"ಹೇಳಿದ್ನಲ್ಲ ದೇವರ ಮೇಲೆ ಭಾರ ಹಾಕು ಅಂತ. ನನ್ನ ಜಪಮಣಿ ಮಾಲೆಯನ್ನು ತಂದುಕೊಡು" ಲಕ್ಷ್ಮಿ ಮಾಲೆಯನ್ನು ತಂದಿಟ್ಟಳು. ಕೈಯಲ್ಲಿ ಮಾಲೆಯನ್ನು ಹಿಡಿದು, ಕಣ್ಣುಮುಚ್ಚಿ, ಜಪದ ಮಂತ್ರವನ್ನು ಉಚ್ಚರಿಸತೊಡಗಿದಳು. ಲಕ್ಷ್ಮಿ ಒಂದುಗಳಿಗೆ ದಿಟ್ಟಿಸಿನೋಡಿ ಅತ್ತಲಿಂದ ಸರಿದಳು.

"ರೈಲು ಬರುವ ಹೊತ್ತಾಯ್ತು, ಗಾಡಿಯನ್ನು ಹೊಡ್ಕೊಂಡು ಹೋಗಿ ಎಲ್ಲರ ಮನೆಯ ಮಕ್ಕಳನ್ನು ಬೇಗ ಬೇಗ ಅವರವರ ಮನೆ ತಲುಪಿಸ್ಬಿಡು ಎಲ್ಲರಿಗೂ ವಿಷಯ ಗೊತ್ತಿದೆಯೋ ಇಲ್ವೋ....."

"ಎಲ್ರಿಗೂ ಗೊತ್ತಿರಬೈದು...."

"ಹೇಳಿದಷ್ಟನ್ನು ಕೇಳು. ಮಳೆ ಬೇರೆ ಬರ್ತಿದೆ."

"ಆಯ್ತವ್ವಾ ಬಿಸಿ ಬಿಸಿ ಕಾಫಿ ಕಾಯಿಸ್ಕೊಟ್ಬಿಡಿ, ಯಾಕೋ ಚಳಿ ಚಳಿ ಅನ್ನಿಸ್ತೈತೆ" ವೈಕುಂಠ ಬಲವಾಗಿ ಕೈಗಳನ್ನು ಕಟ್ಟಿ ಬೆನ್ನುಬಾಗಿಸಿ ನಿಂತ

"ಹುಶಾರಾಗಿದೀಯೇನೋ.... ಮಳೇಲಿ ಚೆನ್ನಾಗಿ ನೆಂದಿದೀಯ ಅಂತ ಕಾಣುತ್ತೇ ಈಗ ತಂದ್ಕೊಡ್ತೀನಿ" ಜಪಮಣಿಗಳನ್ನು ಬೆರಳು ಸರಿಸುತ್ತಿದ್ದರೂ ಈ ಸಂಭಾಷಣೆಗಳು ಸಾತಕ್ಕನ ಕಿವಿಯನ್ನು ತಲುಪಿದ್ದವು.

"ದೇವರೇ ಏನೂ ಅನಾಹುತವಾಗದಿರಲಿ ದೇವರಲ್ಲಿ ಪ್ರಾರ್ಥಿಸಿದಳು." ವೈಕುಂಠ ಬಿಸಿ ಕಾಫಿಯನ್ನು ಸೊರ ಸೊರ ಹೀರಿ, ಗಾಡಿಯನ್ನು ಹೂಡಿದ. ಬೀದಿಗೆ ಇಳಿಯುವಷ್ಟರಲ್ಲಿ ಶಾಸ್ತ್ರಿ ಎದುರಾದ.

"ನಾನೇ ಹೇಳೋಣ ಅಂತ ಬೇಗ ಬಂದೆ. ಹಳ್ಳೀಲೆಲ್ಲಾ ಡಂಗೂರ ಹೊಡೆಸ್ತಿದಾರಂತೆ. ಹುಶಾರಾಗಿ ನೋಡ್ಕೊಂಡು ಓಡಿಸು. ಮಕ್ಕಳನ್ನು ಜೋಪಾನವಾಗಿ ಕರ್ಕೊಂಡು ಬಾ" ವೈಕುಂಠ ಗಾಡಿಯನ್ನು ರೈಲು ನಿಲ್ದಾಣಕ್ಕೆ ಓಡಿಸಿದ.

"ಡಬ್ಬ ಡಬಾ..... ಡಬ್ ಡಬಾ....." ತಳವಾರನ ತಮಟೆಯ ಸದ್ದನ್ನು ಕೇಳಿ ಎಲ್ಲರ ಮನೆಯವರೂ ಅವರವರ ಮನೆಯ ಮುಂಬಾಗಿಲಿಗೆ ಬಂದರು.

"ಕೇಳ್ರಪ್ಪೋ ಕೇಳಿ, ಪಟೇಲ್ರ ಮನೆ ಓರಿ ಕರೂಗೆ ಉಚ್ಚು ನಾಯಿ ಕಚ್ಚಿ ಉಚ್ಚು ಇಡಿದೈತೆ. ದೊಡ್ಡಿಯಿಂದ ತಪ್ಪಿಸ್ಕಂಡಿದೆ ಎಲ್ರೂ ಉಸಾರಾಗಿರ್ಬೇಕು....." ತಳವಾರ ಡಂಗೂರ ಸಾರಿದ. ಕೇಳಿಸಿಕೊಂಡವರ ಎದೆ ಢಂ ಢಂ ಎಂದು ಹೊಡೆದು ಕೊಂಡಿತು. ಸರ್ರನೆ ಬಾಗಿಲನ್ನು ಭದ್ರ ಪಡಿಸಿದರು.

"ತಪ್ಪಿಸ್ಕೊಂಡ ಹೋರಿ ಈಗ ಎಲ್ಲಿದೆಯೋ? ...." ಭಯ ಆವರಿಸಿ ಕೊಂಡಿತ್ತು.

"ಯಾವ ಕೊಟ್ಟಿಗೆಗೆ ಬಂದು ಸೇರಿಕೊಳ್ಳುತ್ತದೋ, ಯಾವ ದನವನ್ನು ಕಚ್ಚಿ ಬಿಡುತ್ತದೋ ?" ಶಾಸ್ತ್ರಿ ಲಾಂದ್ರವನ್ನೆತ್ತಿಕೊಂಡು ಕೊಟ್ಟಿಗೆಗೆ ಹೋಗಿ ಕೊಟ್ಟಿಗೆಯ ತಟ್ಟಿ ಬಾಗಿಲನ್ನು ಭದ್ರಪಡಿಸಿ ಮರದ ಕೊರಡುಗಳನ್ನು ಅಡ್ಡವಾಗಿ ಇರಿಸಿದ. ಮನೆಯ ಮುಂಬಾಗಿಲಿಗೆ ಬಂದು, ಬಾಗಿಲನ್ನು ತೆರೆದು ಅಲ್ಲೇ ನಿಂತ.

ಅಷ್ಟರೊಳಗೆ ಎತ್ತುಗಳ ಕೊರಳಿನ ಗಂಟೆಯ ಸದ್ದು ಕೇಳಿಸಿತು. ಆ ಸದ್ದಿಗೆ ಸೇರುವಂತೆ, ಜನಪದ ಗೀತೆಯೊಂದನ್ನು ಜೋರಾಗಿ ಹೇಳುತ್ತಾ ಗಾಡಿಯನ್ನು ಓಡಿಸಿಕೊಂಡು ಬಂದ ವೈಕುಂಠ, ಹೋಯ್.... ಹೋಯ್.... ಎಂದು ಕೂಗಿ,

ಗಾಡಿಯನ್ನು ನಿಲ್ಲಿಸಿ ಎತ್ತುಗಳ ಕೊರಳನ್ನು ಸವರಿದ. ಗಾಡಿಯಿಂದ ಧುಮಿಕಿದ ಲಲಿತ, ಸರ್ರನೆ ಮನೆಯೊಳಕ್ಕೆ ತೂರಿಕೊಂಡಳು. ಉಣುಗೋಲುಗಳನ್ನು ಭದ್ರಪಡಿಸಿ, ಬೇಲಿಯನ್ನೊಮ್ಮೆ ಅಲ್ಲಾಡಿಸಿ ಪರೀಕ್ಷಿಸಿದ ವೈಕುಂಠ.

"ಇನ್ಯಾರ ಮನೆ ಮಕ್ಳೂ ಬರ್ಲಿಲ್ವಾ ! ಅಥವಾ ಅಲ್ಲೇ ಬಿಟ್ಟು ಬಂದ್ಯಾ?"

"ಅಯ್..... ತೆಗೀರಿ, ನಾ ಅಂಗೆ ಮಾಡೀನಾ ! ಎಲ್ಲರ ಮನ್ಯೋರೂ ಗಾಡಿ ಕಟ್ಟಿಸ್ಕೊಂಡು ಬಂದಿದ್ರು. ಟೇಸನ್ ಮೇಷ್ಟ್ರ ಮನೆ ಮಕ್ಳನ್ನ, ನಾನೆ ಕರ್ದು ಗಾಡಿಗೆ ಅತ್ತಿಸ್ಕೊಂಡು ಅವ್ರ ಮನೆ ತಾವ ಬಿಟ್ಟು ಬಂದೆ ಕಣ್ರವ್ವೋ....."

"ಸರಿ.... ಎತ್ತುಗಳನ್ನು ಹಿತ್ಲಲ್ಲಿ ಹುಲ್ಲಿನ ಬಣವೆ ಹತ್ರ ಕಟ್ಟಾಕಿ ಗೊಂತಿನಲ್ಲಿ ಹುಲ್ಲು ಹಾಕಿ, ನೀರು ಕುಡಿಸಿ ಬಾ....." ಶಾಸ್ತ್ರಿ ಮಧ್ಯೆ ಬಾಯಿ ಹಾಕಿ ವೈಕುಂಠನನ್ನು ಅವಸರಿಸಿದ. ಎಲ್ರೂ ಬೇಗ ಬೇಗ ಊಟ ಮುಗಿಸಿ ಬಿಡಿ. ವೈಕುಂಠಂಗೂ ಬೇಗ ಊಟ ಹಾಕಿ, ಕೊಟ್ಟಿಗೆ ಬಾಗಿಲು ದನಕರುಗಳನೇಲ್ಲಾ ಒಂದ್ಸಾರಿ ಸರಿಯಾಗಿ ನೋಡಿ ಮಲಕ್ಕೋ ಅಂತ ಹೇಳು" ಶಾಸ್ತ್ರಿ ಹೆಂಡತಿಗೆ ಹೇಳಿ, ತಾನು ಒಳ ಬಂದ.

ಏನಿಲ್ಲದೇನೆ ಹಳ್ಳಿಯಲ್ಲಿ ಕತ್ತಲಾದ ಮೇಲೆ ನಿಶ್ಯಬ್ಧ. ಈ ರಾತ್ರಿಯಂತೂ, ಎಲ್ಲರೂ ಆತಂಕದಿಂದ ಜೋರಾಗಿ ಮಾತನಾಡಲು ಹೆದರುವವರಂತೆ ಬೇಗ ಬೇಗ ಊಟ ಮುಗಿಸಿ ಮಕ್ಕಳನ್ನು ಮಲಗಿಸಿ ಅವ್ಯಕ್ತ ಭಯ ಆತಂಕಗಳಿಂದ ನಿಟ್ಟುಸಿರು ಬಿಡುತ್ತಿದ್ದರು. ಮಕ್ಕಳಿಗೆ ಕೆಲವು ಹಿರಿಯರಿಗೆ ನಿದ್ದೆ ಹತ್ತಿತ್ತು. ನಿದ್ದೆ ಬಂದವರಿಗೆ, ದಷ್ಟಪುಷ್ಟವಾದ ಆ ಹೋರಿಯೇ ಎದುರು ಬಂದು ನಿಂತಂತಾಗುತ್ತಿತ್ತು. ಆ ಹೋರಿ ಈಗ ಎಲ್ಲಿದೆಯೋ ! ಇನ್ನೂ ಎಷ್ಟು ದಿನ ಆತಂಕ, ಭಯದ ಕ್ಷಣಗಳನ್ನು ಎದುರಿಸ ಬೇಕೋ....? ಕಣ್ಣಿಗೆ ಕಾಣಿಸದಂತೆ ಹೋರಿ, ಎಲ್ಲಾದರೂ ಹೋಗಿಬಿಡಬಾರದೇ !

ಮಧ್ಯರಾತ್ರಿ ಕಳೆದಿತ್ತು... ಒಂದು ಹೊತ್ನಲ್ಲಿ ಹಳ್ಳಿಯ ನಾಯಿಗಳೆಲ್ಲಾ ಏಕಕಾಲದಲ್ಲಿ ಬೊಗಳಲು ಪ್ರಾರಂಭಿಸಿದಾಗ ತೂಕಡಿಸುತ್ತಿದ್ದವರು ಬೆಚ್ಚಿ ಬಿದ್ದು ಎದ್ದರು. ನಿದ್ರಿಸುತ್ತಿದ್ದವರು ಎಚ್ಚರಗೊಂಡರು. ರಾತ್ರಿಯ ಹೊತ್ತಿನಲ್ಲಿ ನಾಯಿಗಳು ಆಗಾಗ್ಗೆ ಅಲ್ಲಲ್ಲಿ ಬೊಗಳುವುದು ಸರ್ವೇಸಾಮಾನ್ಯ. ಆದರೆ ಈ ದಿನದ ಬೊಗಳು ವಿಕೆಯಲ್ಲಿ ಏನೋ ವ್ಯತ್ಯಾಸ ಇದೆ ಎಂದೆನಿಸಿತ್ತು. ಜೊತೆಗೆ ಆಗೊಮ್ಮೆ ಈಗೊಮ್ಮೆ ಯಾವುದೋ ಪ್ರಾಣಿ, ವಿಚಿತ್ರ ರೀತಿಯಲ್ಲಿ ಅರಚಿಕೊಳ್ಳುವ ಧ್ವನಿಯೂ ಕೇಳಿಸುತ್ತಿತ್ತು. ಇದು ಆ ಹೋರಿ ಕರು ಅರಚಿಕೊಳ್ಳುತ್ತಿರುವ ದನಿ ಇರಬಹುದೇ ಎಂಬ ಅನುಮಾನ ಬಂದರೂ ಯಾರಿಗೂ ಹೊರಗೆ ಬಂದು ನೋಡುವ ಧೈರ್ಯವಿರಲಿಲ್ಲ. ಕೆಲವರು, ರಸ್ತೆ ಬದಿಗಿದ್ದ ಕಿಟಕಿಯನ್ನು ತೆಗೆದು ನೋಡಿದರೂ ಏನೂ ಕಾಣಲಿಲ್ಲ. ಮತ್ತೆ ಕಿಟಕಿಗಳನ್ನು ಮುಚ್ಚಿದ್ದರು.

ಕಿಟಕಿಯ ಬಳಿ ಕತ್ತಲೆಯಲ್ಲಿ ನಿಂತು ನೋಡುತ್ತಿದ್ದ ಕಂಠಿ, ಧಿಮ ಧಿಮ

ಎಂದು ನೆಗೆ ನೆಗೆಯುತ್ತಾ ಬಾಲವನ್ನು ಎತ್ತಿಕೊಂಡು ಅರಚುತ್ತಾ ಓಡಿ ಹೋದ ಬಿಳಿ ಹೋರಿ ಕರುವನ್ನು ಕಂಡ. ಅದು ಪಟೇಲರ ಮನೆಯ ದಿಕ್ಕಿನತ್ತ ಓಡಿತ್ತು. ಕಂಠಿ ನಿಂತಲ್ಲೇ ಬೆವತು ಹೋದ. ಅದರ ಹೃದಯ ವಿದ್ರಾವಕ ಆಕ್ರಂದನ ಕೇಳಿ ಬರುತ್ತಲೇ ಇತ್ತು. ಈ ಹೋರಿ, ಇಲ್ಲೇ ಇದೇ ಬೀದಿಯಲ್ಲಿ ಸುತ್ತಾಡುತ್ತಿದೆ. ಜಲಬಾಧೆ ಗೆಂದು ಪೊದೆಗಳ ಬಳಿಗೆ ಬಂದಿದ್ದ ಕೆಲವರು ಅಲುಗಾಡದೇ ಹಾಗೇ ನಿಂತಿದ್ದರು. ಹೋರಿ ಅತ್ತ ಮರೆಯಾದ ಕೂಡಲೇ ಓಡಿ ಹೋಗಿ ತಮ್ಮ ಮನೆಗಳನ್ನು ಸೇರಿ ಕೊಂಡಿದ್ದರು. ಅಂತೂ ಈ ಹೋರಿ ಇಲ್ಲೇ ತಿರುಗುತ್ತಿದೆ ಇನ್ನು ಎಷ್ಟು ದಿನ ಈ ಆತಂಕದಲ್ಲಿ ಕಳೆಯಬೇಕು ಬೆಳಗಾಗಲಿ ಎಲ್ಲರೂ ಪಟೇಲರ ಮನೆಯ ಮುಂದೆ ಪಂಚಾಯಿತಿ ನಡೆಸಿ ಏನಾದರೊಂದು ತೀರ್ಮಾನಕ್ಕೇ ಬರಬೇಕೆಂದು ಕೆಲವರು ಅಂದುಕೊಂಡರು.

ಬೆಳಕು ಚೆನ್ನಾಗಿ ಹರಿಯುವವರೆಗೂ, ಎಚ್ಚರಗೊಂಡರೂ ಯಾರೂ ಹೊರಕ್ಕೆ ಎದ್ದು ಬಂದಿರಲಿಲ್ಲ. ಕೊಟ್ಟಿಗೆಯಲ್ಲಿ ಕಟ್ಟಿದ್ದ ದನಕರುಗಳು ಆಗೊಮ್ಮೆ ಈಗೊಮ್ಮೆ 'ಅಂಬಾ' ಎನ್ನುತ್ತಿದ್ದವು. ಎಂದಿನಂತೆ, ಹಳ್ಳಿಯ ಜನರ ಕೆಲಸ ಕಾರ್ಯಗಳು ಪ್ರಾರಂಭ ವಾಗಿರಲಿಲ್ಲ.

"ಕಂಠಿ, ಕಿಟಕಿಯ ಬಳಿ ನಿಂತು, "ಶಾಸ್ತ್ರಿ ಶಾಸ್ತ್ರಿ" ಎಂದು ಏರಿದ ಧ್ವನಿಯಲ್ಲಿ ಕೂಗುಹಾಕಿದ.

"ಕಂಠಿ ಕೂಗಿದಾನೆ ಕಣೋ ಗುಂಡಣ್ಣಾ....." ಸಾತಕ್ಕ ಹೇಳಿದಳು.

"ಹೋರಿ ಅವರ್ಮನೆ ಹಿತ್ಲಗೇನಾದ್ರೂ ನುಗ್ಗಿರ್‍ಬಹುದೇ ?" ಲಕ್ಷ್ಮೀ ಆತಂಕವನ್ನು ಹೊರಗೆಡವಿದಳು.

"ತಡೀ ನೋಡೋಣ...." ಎನ್ನುತ್ತಾ ತನ್ನ ಮನೆಯ ಬಾಗಿಲನ್ನು ಅರ್ಧ ತೆಗೆದು, ರಸ್ತೆಯ ಎರಡೂ ಬದಿಗೆ ಕಣ್ಣುಹಾಯಿಸಿ "ಏನೋ ಕಂಠಿ" ಎಂದು ಜೋರಾಗಿ ಕೇಳಿದ.

"ಪಟೇಲ್ರರ ಮನೆ ಹೋರಿ ಕರು.... ಅವರ್ಮನೇ ದಿಕ್ಕಿಗೇ ಓಡಿದ್ದನ್ನ ನಾನು ನೋಡ್ದೇ.... ಈಗೇನ್ಮಾಡೋದು ?" ಅಲ್ಲಿಂದಲೇ ಕಂಠಿ ಹೇಳಿದ.

"ಅವರ್ಗೆ ಗೊತ್ತಾಗ್ದೇ ಇರುತ್ತಾ ? ಚೆನ್ನಾಗಿ ಬೆಳಕಾಗಲಿ... ಆಳು ಕಾಳುಗಳು ಹೊರ ಬರಲಿ ಆಮೇಲೆ ಏನಾದ್ರೂ ಮಾಡೋಣ."

"ರೈಲು ಬರೋ ವೇಳೆ ಹೊತ್ಗೆ, ಹಾಲನ್ನು ಕರೆಸ್ಬೇಕು. ಆಳುಗಳೂ ಬರ್‍ದೇ ಇದ್ರೇ..." ರಾಗ ಎಳೆದ.

"ಏನ್ಮಾಡೋದು? ನೀನೇ ಹೇಳು. ಅಷ್ಟರಲ್ಲಿ ತಳವಾರನ ತಮಟೆಯ ಸದ್ದು ಕೇಳಿಸಿತು. ಇಬ್ಬರೂ ಮಾತನ್ನು ನಿಲ್ಲಿಸಿದರು. ಹೇಗೂ ಅವನು ಬೀದಿಗೆ ಬಂದಿದಾನೆ

ಏನೂ ಅಪಾಯವಿಲ್ಲ ಎಂದುಕೊಂಡು ಕೆಲವರು ಬಾಗಿಲನ್ನು ತೆರೆದು ರಸ್ತೆಯ ಬದಿಗೆ ಬಂದು ನಿಂತರು....ತಳವಾರ ಸಾರುತ್ತಿದ್ದ.

"ಗೌಡ್ರ ಮನೆ ಓರಿ ಕರ, ಕೆರೆ ಬದೀಲಿರೋ ಮರದ ಕೆಳಗೆ ಮನಗೈತೆ, ಗಂಡಸ್ರೆಲ್ಲಾ ಕೋಲು, ದೊಣ್ಣೆ ತಕ್ಕಂಡು ಅತ್ತಕಡೆ ಓಗಿ ದೂರ ಒಡೆದು ಓಡಿಸ್ಬೇಕಂತೆ. ಗೌಡ್ರೇ ಅಪ್ಪಣೆ ಕೊಡಿಸವ್ರೆ....." ಡಬ್ಬ ಡಬಾ..... ಡಬ್ಬ ಡಬಾ...." ತಮಟೆಯನ್ನು ಬಡಿಯುತ್ತಾ ಅವನು ಮುಂದೆ ಸಾಗಿದ. ಹಳ್ಳಿಯ ಬೀದಿಯಲ್ಲಿ ಸಾರಿದ ಎಲ್ಲರೂ ಕೇಳಿಸಿಕೊಂಡರು. ಆದರೂ ಕೆಲವರಿಗೆ ಅನುಮಾನ, ಕೆಲವರಲ್ಲಿ ಸಂದಿಗ್ಧ.... ಕೆಲವು ದೈರ್ಯಸ್ಥ ಗಂಡಾಳುಗಳು ಕೈಯಲ್ಲಿ ದೊಣ್ಣೆಗಳನ್ನು, ಕೋಲುಗಳನ್ನು ಹಿಡಿದು, ಒಟ್ಟಾಗಿ ಸೇರಿದರು. ವೈಕುಂಠನೂ ಎದ್ದು ಬಂದು ಅವರನ್ನು ಕೂಡಿಕೊಂಡ. ಎಲ್ಲರೂ, ಜೋರಾಗಿ ಕೂಗುತ್ತಾ, ವೀರಾವೇಶದಿಂದ ಕೆರೆಯ ದಿಕ್ಕಿಗೆ ವೇಗವಾಗಿ ನಡೆದರು. ಕೆರೆಯ ಬಳಿಗೆ ಬಂದರು. ಆದರೆ ಅಲ್ಲಿದ್ದ ಒಂದೇ ಒಂದು ಮರದ ಕೆಳಗೆ ಯಾವ ಹೋರಿ ಕರುವೂ ಕಾಣಲಿಲ್ಲ. ಕೆಲವರಿಗೆ ನಿರಾಸೆಯಾಯಿತು. ಕೆಲವರಲ್ಲಿ ಅನುಮಾನ ಕಾಡಿತು. ಇದರಲ್ಲಿ ಪಟೇಲರ ಕುತಂತ್ರ ಏನಾದರೂ ಇರಬಹುದೇ.... ಎಂದುಕೊಳ್ಳುವಷ್ಟರಲ್ಲಿ "ಢಮಾರ್" ಎಂಬ ಬಂದೂಕಿನ ಸದ್ದು ಆ ಪ್ರದೇಶದಲ್ಲಿ ಪಸರಿಸಿ ಎಲ್ಲರನ್ನು ಬೆಚ್ಚಿಸಿತು. ಎಲ್ಲರೂ ತಟಸ್ಥರಾಗಿ ನಿಂತರು. ಮತ್ತೊಮ್ಮೆ ಗುಂಡಿನ ಸದ್ದು ಕೇಳಿದಾಗ ಎಲ್ಲರೂ ಎಚ್ಚರಗೊಂಡರು. ಸದ್ದು ಕೇಳಿ ಬಂದ ಕಡೆಗೆ ಕೆಲವರು ಓಡಿದರು.

ಅಲ್ಲಿ ವೆಂಕಟಾಚಲಯ್ಯ ಕೋವಿ ಹಿಡಿದು ನಿಂತಿದ್ದಾನೆ. ಅವನಿಂದ ಹದಿನೈದು ಇಪ್ಪತ್ತು ಅಡಿ ದೂರದಲ್ಲಿ ಹೋರಿ ಕರು ನೆಲದ ಮೇಲೆ ಬಿದ್ದಿದೆ. ನೆರೆದಜನರನ್ನು ಕಂಡು, ವೆಂಕಟಾಚಲಯ್ಯ ಮಾತಾಡದೆ, ಕೋವಿಯನ್ನು ಹೆಗಲಿಗೇರಿಸಿ, ಕಾಲುದಾರಿಯಲ್ಲಿ ಮರೆಯಾದ.... ಒಂದುಗಳಿಗೆ ಹಾಗೇ ನಿಂತಿದ್ದ ಜನ ಸಮೂಹ ಅಂಜುತ್ತಾ ಹೋರಿ ಕರು ಬಿದ್ದ ಕಡೆಗೆ ತಿರುಗಿತು. ಅಲುಗಾಡದೇ ಬಿದ್ದಿದ್ದನ್ನು ಕಂಡು ಭಯ ಕಡಿಮೆ ಆಗಿತ್ತು. ಗುಂಡಿನೇಟು ಬಿದ್ದ ಕಡೆ ರಕ್ತ ಒಸರುತ್ತಿತ್ತು. ಹೋರಿ ಕರುವಿನ ಪ್ರಾಣ ಹೋಗಿದೆ ಎಂದು ಖಚಿತವಾಗಿತ್ತು. ತಕ್ಷಣವೇ ಏನು ಮಾಡಬೇಕೆಂದು ಯಾರಿಗೂ ಹೊಳೆಯಲಿಲ್ಲ. ವೈಕುಂಠ ಓಡಿ ಬಂದು ಶಾಸ್ತ್ರಿಗೆ ಸುದ್ಧಿಯನ್ನು ಮುಟ್ಟಿಸಿದ. ಪಟೇಲರ ಮನೆಯ ಆಳುಗಳು ಪಟೇಲರಿಗೆ ವರದಿಯನ್ನು ಒಪ್ಪಿಸಿದರು. ಕೆಲವೇ ನಿಮಿಷಗಳಲ್ಲಿ ಹಳ್ಳಿಯ ಮುಖ್ಯಸ್ಥರು ವೆಂಕಟಾಚಲಯ್ಯನ ಮನೆಯ ಜಗುಲಿಯಲ್ಲಿ ಸೇರಿದರು. ಬೀದಿಯಲ್ಲಿ ಜನರು ಕುತೂಹಲದಿಂದ ಜಮಾಯಿಸಲಾರಂಭಿಸಿದರು. ವೆಂಕಟಾಚಲಯ್ಯ ಒಳಗಿನಿಂದ ಬಂದು, ಆದರದಿಂದ ಎಲ್ಲರಿಗೂ ಕೈ ಮುಗಿದ. ಪಟೇಲರು ಮಾತನಾಡದೇ ಸುಮ್ಮನೇ ನಿಂತಿದ್ದರು. ಅವರೇನಾದರೂ ಆಡುವ

ಮೊದಲೇ ನೆರೆದಿದ್ದವರಲ್ಲಿ ನಾಯಕರ ಪೈಕಿಯವನು ಕೇಳಿದ.

"ನೀವು ಹೀಗೆ ಮಾಡ್ಬೋದಾ ಛೇರ್‌ಮನ್ನರೇ....?"

"ತಡಿಯಪ್ಪಾ ನೀನೇನು ಮಧ್ಯೆ ಮಾತ್ನಾಡೋದು ? ಪಟೇಲರು ಮಾತಾಡ್ಲಿ, ಅದು ಪಟೇಲರ ಮನೆಯ ಹೋರಿಕರು." ಪಟೇಲರು ಭುಜದ ಮೇಲಿದ್ದ ಟವೆಲ್ಲನ್ನು ಸರಿಪಡಿಸಿಕೊಂಡು ಮುಂದೆ ಬಂದರು. ವೆಂಕಟಾಚಲಯ್ಯ ವಿಧೇಯತೆಯಿಂದ ಮಾತಾಡಿದ.

"ನಾನು ಮಾಡಿದ್ದು ತಪ್ಪೋ ಸರಿಯೋ ನೀವೇ ಹೇಳಿ ಪಟೇಲರೆ"

"ತೆಪ್ಪು ಕಣಪ್ಪೋ..... ಅಂಗೆಲ್ಲಾ ಪ್ರಾಣಿ ಅತ್ಯೆ ಮಾಡು ಅಂಗಿಲ್ಲ" ಪಟೇಲರಿಗೆ ಮಾತನಾಡಲು ಅವಕಾಶ ಕೊಡದಂತೆ, ಬೇರೊಬ್ಬ ನುಡಿದ.

"ಪಟೇಲ್ರು ಮಾತಾಡ್ಲಿ.....ಅವರು ಹೇಳ್ದ ಹಾಗೆ ನಾನು ಕೇಳ್ತೀನಿ."

"ಇದು ಪಟೇಲರಿಗೆ ಒಬ್ಬರಿಗೇ ಸೇರಿದ ವಿಷಯ ಅಲ್ಲ. ಅವರು ಒಬ್ರೇ ಏನೂ ಏಳೂ ಅಂಗಿಲ್ಲ....." ಪಟೇಲರು ಸುಮ್ಮನೆ ನಿಂತಿದ್ದರು.

"ಯಾಕೋ ಪಟೇಲ್ರು ಮಾತಾಡ್ಲಿಲ್ಲ. ಸರಿ ನೀವುಗಳೇ ಹೇಳ್ಬಿಡಿ. ಏನು ದಂಡ ತೆರಬೇಕು ಅಂತ ಹೇಳಿ.... ನಾನು ಈಗ್ಲೇ ಕೊಟ್ಬಿಡ್ತೀನಿ."

"ಅದು ಅಂಗೆಲ್ಲಾ ಆಗುಲ್ಲ. ಈಗ್ಲೇ ಏನೂ ಏಳಕ್ಕಾಗ್ದು. ಪಂಚಾಯ್ತಿ ನಡೀಲಿ.... ಪಂಚಾಯ್ತೀಲಿ ಎಲ್ರೂ ನಿಂಗೆ ಏಳ್ತಾರೋ ಅಂಗೇ ಮಾಡುವಾ" ಮತ್ತೊಬ್ಬ ವ್ಯಕ್ತಿ ನುಡಿದ. ವೆಂಕಟಾಚಲಯ್ಯ ಬೇಸರಗೊಂಡಿದ್ದ ಪಟೇಲರ ಕಡೆ ತಿರುಗಿ ನುಡಿದ.

"ಪಟೇಲ್ರೇ ನಾನು ಈ ಗ್ರಾಮ ಪಂಚಾಯ್ತಿಯ ಛೇರ್‌ಮನ್ ಆದ್ರೆ ಹಾಗಂತ ಮನಸ್ಸಿಗೆ ಬಂದಂತೆ ಕೆಲ್ಸ ಮಾಡೋ ಹಕ್ಕು ನನಗೆ ಇಲ್ಲ. ನಾನು ಮಾಡಿದ ಕೆಲ್ಸದಿಂದ ಗ್ರಾಮಕ್ಕೆ ಒಳ್ಳೆದಾಯ್ತೋ, ಕೆಟ್ಟದಾಯ್ತೋ ಅದನ್ನು ನೀವುಗಳು ನಿರ್ಧರಿಸಿ ನಾನು ಛೇರ್‌ಮನ್ ಕುರ್ಚಿಗೆ ರಾಜೀನಾಮೆ ಕೊಟ್ಬು ಬಿಡ್ತೀನಿ. ಆದರೆ ಅದಕ್ಕೆ ಮೊದಲು ನನ್ನದೊಂದು ವಿನಂತಿ...."

"ಹುಂ, ಹೇಳಿ ಛೇರ್‌ಮನ್ ಸಾಹೇಬ್ರೇ....." ಪಟೇಲರು ಈಗ ಮಾತ ನಾಡಿದ್ದರು.

"ಆ ಹೋರಿಕರು ನಿಮ್ಮದು. ನಿಮ್ಮ ಮನೆಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದದ್ದು. ಈಗ ಅದು ಹತವಾಗಿದೆ. ಮೊದಲು ಅದರ ಅಂತ್ಯ ಸಂಸ್ಕಾರವನ್ನು ಮಾಡಿಸಿ. ಹಾಗೇ ಕೊಳೆಯಲು ಬಿಡಬೇಡಿ. ಅದರಿಂದ ಎಲ್ಲರಿಗೂ ನೆಮ್ಮದಿ ಸಿಗುತ್ತೆ. ಹಾಗೇ ಗ್ರಾಮದ ಆರೋಗ್ಯಕ್ಕೂ ಒಳ್ಳೆಯದು.... ಯಾಕೇಂದ್ರೆ ಹುಚ್ಚುನಾಯಿ ಕಚ್ಚಿ ಅದರಿಂದ ಸತ್ತಿದೆ. ಆದಷ್ಟು ಬೇಗ ಈ ಕಾರ್ಯವನ್ನು ಮುಗಿಸಿ. ಆಮೇಲೆ ಮುಂದಿನ ಮಾತುಕತೆ ಆಗಲಿ.

"ಸರಿ, ನೀವು ಹೇಳಿದ ಮಾತನ್ನು ಒಪ್ಪಬೇಕಾದದ್ದೇ. ಆ ಕೆಲಸ ಮೊದಲು ಆಗಬೇಕು. ರಾತ್ರಿ ಒಂಭತ್ತು ಗಂಟೆಗೆ ಎಲ್ರೂ ಪಂಚಾಯ್ತಿ ಕಟ್ಟೆಯಲ್ಲಿ ಸೇರೋಣ. ಹಳ್ಳೀಲಿ ಡಂಗೂರ ಸಾರಿಸಿಬಿಡಿ." ಪಟೇಲರು ಅಪ್ಪಣೆ ಕೊಟ್ಟು ಛೇರ್‌ಮನ್‌ರಿಗೆ ಕೈ ಮುಗಿದು ತೆರಳಿದರು. ನೆರೆದಿದ್ದ ಜನ ಸಮೂಹವೂ ಕರಗಿತು. ಶಾಸ್ತ್ರಿ ವೆಂಕಟಾಲಯ್ಯನ ಬಳಿಗೆ ಬಂದ.

"ಅಲ್ಲಾ.... ವೆಂಕಟಾಚಲಯ್ಯ ನೀವ್ಯಾಕೆ ಇಂಥ ಕೆಲಸ ಮಾಡೋಕೆ ಹೋದ್ರಿ! ಈಗ ನೋಡಿ ಸುಮ್ಮನೇ ಪಂಚಾಯ್ತಿ... ನಿಮಗೆ ಕೆಟ್ಟ ಹೆಸರು."

"ನಾನು ಮಾಡಿದ್ದು ತಪ್ಪು ಅಂತ ನಿಮಗೂ ಅನ್ನಿಸುತ್ತಾ ಶಾಸ್ತ್ರಿಗಳೇ ಹೇಗೂ ರಾತ್ರಿ ಪಂಚಾಯ್ತಿ ಕಟ್ಟೇಲಿ ಎಲ್ರೂ ಸೇರ್ತೀವಲ್ಲ, ಆಗ ಎಲ್ಲರ ಪ್ರಶ್ನೆಗಳಿಗೂ ಉತ್ತರ ಹೇಳ್ತೀನಿ ಒಳಗೆ ಬನ್ನಿ ಕಾಫಿ ಕುಡಿದು ಹೋಗೋರಂತೆ.

"ಮತ್ತೆಂದಾದ್ರೂ ಬಂದು ಕಾಫಿ ಕುಡೀತೀನಿ. ಈಗ ಅಪ್ಪಣೆ ಕೊಡಿ ತೋಟಕ್ಕೇ ಹೋಗ್ಬೇಕು" ಎಂದು ಕೈ ಮುಗಿದು ತನ್ನ ಮನೆಗೆ ಬಂದ. ಅಷ್ಟರಲ್ಲಾಗಲೇ ವೈಕುಂಠ ಓಡಿ ಬಂದು ತಾನು ಕೇಳಿಸಿಕೊಂಡಷ್ಟು ವಿಷಯಗಳನ್ನು ಸಾತಕ್ಕನಿಗೆ ಹೇಳಿದ್ದ. ಸಾತಕ್ಕ ಗುಂಡಣ್ಣನನ್ನು ತಾನೇ ಕೇಳಿದಳು.

"ಅಲ್ಲಾ ಭಾಗೀರಥಮ್ಮನ ಮಗ ಹೀಗ್ಯಾಕೆ ಮಾಡೋಕೆ ಹೋದ್ನೋ ?"

"ಹೌದು....ಅವರೇ ಇಂಥ ಕೆಲ್ಸಾನ ಮಾಡ್ಬಾರ್ದಾಗಿತ್ತು. ನಂಜುಂಡೇಶ್ವರ ಅವರ ಮನೆ ದೇವರು ನಂದಿ ಈಶ್ವರನ ವಾಹನ" ಲಕ್ಷ್ಮಿ ಎಂದಳು.

"ಏನೋ ಅವನು ಮಾಡಿದ್ದಾಯ್ತು. ಮಾಡಿದೋರ ಪಾಪ ಆಡಿದೋರ ಬಾಯಲ್ಲಿ ಅಂತ. ಮಕ್ಕಳೆದುರಿಗೆ ಆಡೋದೇ ಬೇಡ."

"ಇವತ್ತು ರಾತ್ರಿ ಪಂಚಾಯ್ತಿ ಕಟ್ಟೇಲಿ, ಎಲ್ಲರೆದುರಿಗೆ ಪಂಚಾಯ್ತಿ ನಡೆಯುತ್ತೇ. ಆಗ ಅವನು ಸಮಸ್ತ ಜನ ಹೇಳಿದ್ಹಾಗೇ ಮಾಡ್ಬೇಕಾಗುತ್ತೆ ಅವನೇ ಛೇರ್‌ಮನ್ ತಪ್ಪು ಮಾಡಿದಾನೆ ಗ್ರಾಮಸ್ಥರು ಸುಮ್ಮನಿರುಲ್ಲ. ಇಂಥಾ ಸಮಯಕ್ಕಾಗೇ ಕಾಯ್ತಾ ಇರ್ತಾರೆ ರಾತ್ರಿ ಎಲ್ಲಾ ನಿರ್ಧಾರವಾಗುತ್ತೆ."

ಕೆಲವೇ ಗಂಟೆಗಳಲ್ಲಿ ತಳವಾರ ಮತ್ತೆ ತಮಟೆಯನ್ನು ಬಡಿಯುತ್ತಾ ಹಳ್ಳಿಯ ಬೀದಿಯಲ್ಲಿ ಸಾಗಿದ. ಅವನು ಡಂಗೂರ ಸಾರಿದ್ದನ್ನು ಕಂಠಿ ಕಿವಿಯಿಟ್ಟು ಕೇಳಿಕೊಂಡು ಶಾಸ್ತ್ರಿಯ ಮನೆಗೆ ಧಾವಿಸಿ ಬಂದ. ವೆಂಕಟಾಚಲಯ್ಯನ ತಪ್ಪುಗಳನ್ನು ಎತ್ತಿ ಹಿಡಿಯಲು ಅವಕಾಶ ಸಿಕ್ಕಿತ್ತು.

"ಇವತ್ತು ಆ ವೆಂಕಟಾಚಲಂಗೆ ಎಲ್ಲರೆದುರಿಗೆ ಚೆನ್ನಾಗಿ ಛೀ ಮಾರಿ ಹಾಕ್ತೀನಿ, ನಾನು ಸುಮ್ನಿರುಲ್ಲ."

"ಸುಮ್ನಿರೋ ಭಾವ ಹಿಂದೊಂದ್ಸಾರಿ ಹೀಗೇ ಅವನ ಮುಖಕ್ಕೆ ಮಸಿ ಬಳಿತೀನಿ

ಅಂತ ಹೋಗಿ, ನೀನೇ ಮಣ್ಣು ಮುಕ್ಕಿದ್ದೆಯಂತೆ."

"ಈ ಗ್ರಾಮ ಪಂಚಾಯ್ತಿ, ಅದರ ಸದಸ್ಯರು, ಮುಖಂಡರು ಯಾರೂ ಸರಿ ಇಲ್ಲ. ಎಲ್ರೂ ಅವನಿಗೆ ಹೆದರ್ತಾರೆ. ಅಂಥಾದ್ದೇನು ಅಂತ ? ನಾನು ಯಾರಿಗೂ ಹೆದರುಲ್ಲ. ಅಲ್ಲಾ ಆ ಮೂಕ ಪ್ರಾಣೀನ ಗುಂಡು ಹೊಡೆದು ಕೊಲ್ಲುಕ್ಕೆ ಇವನಿಗೇನು ಹಕ್ಕು ಅಂತ. ದಬಾಯಿಸಿ ಕೇಳ್ತೀನಿ. ನಾನು ಅವನನ್ನು ಬಿಡುಲ್ಲ" ಕಂಠಿ ಭುಸು ಗುಟ್ಟುತ್ತಾ ತನ್ನ ಮನೆಗೆ ಮರಳಿದ.

ರಾತ್ರಿಯ ಊಟ ಮುಗಿಸಿ, ಹಳ್ಳಿಯ ಜನರೆಲ್ಲರೂ ಪಂಚಾಯ್ತಿ ಕಟ್ಟೆಯ ಕಡೆಗೆ ನಡೆದರು. ವೈಕುಂಠನೂ ಬೇಗ ಕೆಲಸ ಮುಗಿಸಿ ಹೊರಟುನಿಂತ.

"ನೀನು ಅಲ್ಲಿ ನಿದ್ದೆ ಮಾಡಿ ಬಿಡ್ಬೇಡ ಅಲ್ಲಿ ಏನು ಮಾತುಕತೆ ನಡೀತು ಅಂತ ನಂಗೆ ಎಲ್ಲಾ ಹೇಳ್ಬೇಕು. ಲಕ್ಷ್ಮಿ ವೈಕುಂಠನಿಗೆ ಹೇಳಿದ್ದಳು. ಪಂಚಾಯ್ತಿ ಯಾವಾಗ ಪ್ರಾರಂಭವಾದೀತು ಅಂತ ಎಲ್ಲರೂ ಕುತೂಹಲದಿಂದ ಕಾಯುತ್ತಾ ಕುಳಿತಿದ್ದರು. ನಾಯಕ ಜನಾಂಗದಲ್ಲಿ ಸ್ವಲ್ಪ ಓದು ಬರಹ ಬಲ್ಲವನಾದ ರೂಪ್ಲಾ ನಾಯಕ ಕಮಿಟಿ ಮೆಂಬರ್ ಆಗಿದ್ದ. ಕಂಠಿ ಹಾಗೂ ಶಾಸ್ತ್ರಿ ಒಟ್ಟಾಗಿ ಅಲ್ಲಿಗೆ ಬಂದರು. ಛೇರ್‌ಮನ್ ವೆಂಕಟಾಚಲಯ್ಯ ಸಮಯಕ್ಕೆ ಸರಿಯಾಗಿ ಬಂದು ತನ್ನ ಆಸನದಲ್ಲಿ ಕುಳಿತಿದ್ದ. ಕೆಲವರು ಗುಸುಗುಸು ಪಿಸುಪಿಸು ಮಾತಾಡಿಕೊಂಡರು. ಪಟೇಲರು ಎದ್ದು ನಿಂತು ಜನ ಸಮೂಹವನ್ನು ಉದ್ದೇಶಿಸಿ, ತಾವು ಅಲ್ಲಿ ಸೇರಿರುವ ಕಾರಣವನ್ನು ಸಂಕ್ಷಿಪ್ತವಾಗಿ ಹೇಳಿದರು. ಛೇರ್‌ಮನ್ ಎದ್ದು ನಿಂತು ಮಾತಿಗೆ ಆರಂಭಿಸಿದರು.

"ಮಿತ್ರ ಬಾಂಧವರೇ, ಈ ದಿನ ಏನು ನಡೆದಿದೆ, ನಾವುಗಳು ಇಲ್ಲಿ ಯಾಕೆ ಸೇರಿದ್ದೇವೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ನಾನು ಪ್ರಾಣಿ ಹತ್ಯೆ ಮಾಡಿದ್ದೇನೆ ಅದು ನಿಜ ಆದರೆ ಆ ಹತ್ಯೆಯಿಂದ ಪಟೇಲರಿಗಾಗಲೀ, ಹಳ್ಳಿಯ ಜನರಿಗಾಗಲೀ ಯಾವ ನಷ್ಟವೂ ಆಗಿಲ್ಲ ಎನ್ನುವ ಮಾತೂ ಸಹ ನಿಜ. ಮೊದಲನೆಯದಾಗಿ, ಆ ಹೋರಿ ಕರುವಿಗೆ ಹುಚ್ಚು ನಾಯಿ ಕಚ್ಚಿ ಹುಚ್ಚು ಹಿಡಿದಿತ್ತು. ಅದು ವಾಸಿಯಾಗುವ ಸ್ಥಿತಿಯಲ್ಲಿರಲಿಲ್ಲ. ಉಲ್ಬಣಗೊಂಡಿತ್ತು. ಕೆಲವೇ ದಿನಗಳಲ್ಲಿ ಹೋರಿ ಖಂಡಿತಾ ಸಾಯುತ್ತಿತ್ತು. ಅದನ್ನು ಕಟ್ಟಿ ಹಾಕಲು ಸಾಧ್ಯವಿರಲಿಲ್ಲ. ಗೂಟವನ್ನೇ ಕಿತ್ತುಕೊಂಡು ಬಂದು ಜನರಲ್ಲಿ ಭೀತಿಯನ್ನು ಹುಟ್ಟಿಸಿತ್ತು. ಯಾರಿಗೊ ಏನು ಅಪಾಯ ವಾಗುತ್ತಿತ್ತೋ.... ಹೇಗೆ ಹೇಳುಕ್ಕಾಗುತ್ತಿತ್ತು? ಆದ್ದರಿಂದಲೇ ನಾನು ಅದನ್ನು ಗುಂಡಿಟ್ಟು ಕೊಲ್ಲಬೇಕಾಯಿತು. ಅ ಪ್ರಾಣಿಗೆ ಈ ಜೀವನದಿಂದ ಮುಕ್ತಿಯನ್ನು ಕೊಟ್ಟೆ ಅದು ತಪ್ಪಲ್ಲ ಅಂತ ನನ್ನ ಭಾವನೆ." ಅಷ್ಟರಲ್ಲೇ ಕಂಠಿ ಬಾಯಿ ಹಾಕಿದ.

"ಯಾಕಯ್ಯಾ ತಪ್ಪಲ್ಲ ? ಗೋಹತ್ಯೆ ಮಾಡಿದೀಯ. ಅದು ಮಹಾ ಪಾಪ.

ಶತಾಪರಾಧ. ಅದಕ್ಕೆ ನೀನು ದಂಡವನ್ನು ತೆರಲೇಬೇಕು." ಕಂಠಿ ಎಲ್ಲರಿಗೂ ಕೇಳುವಂತೆ ಕಿರುಚಿದ. "ನೀನು ಕ್ಷಮಾಪಣೆ ಕೇಳಲೇಬೇಕು ಹೂಂ"

"ಶ್ರೀಕಂಠಪ್ನೋರೆ, ಗೌರವದಿಂದ ಮಾತ್ನಾಡಿ, ಅವರು ಛೇರ್‌ಮನ್ನರು." ಪಟೇಲರು ನುಡಿದರು.

"ಪರವಾಗಿಲ್ಲ ಬಿಡಿ ಪಟೇಲರೇ..... ಅವರು ನನಗಿಂತ ಹಿರಿಯರು. ಅವರಿಗೆ ಅನ್ನಿಸಿದ್ದನ್ನು ಹೇಳಿದಾರೆ. ಹಾಗೇ ನಾನು ಮಾಡಿದ್ದು ತಪ್ಪು ಅಂತ ಅನ್ನಿಸುವನಲ್ಲ ಕೈ ಎತ್ತಿ ಛೇರ್‌ಮನ್ನರನ್ನು ಕಂಡರಾಗದ ಹತ್ತಾರು ಕೈಗಳು ಮೇಲೆತ್ತಿದ್ದವು. ಆದರೆ ಪಟೇಲರಾಗಲೀ ಅವರ ಮಕ್ಕಳಾಗಲೀ ಕೈ ಎತ್ತಿರಲಿಲ್ಲ. ಶಾಸ್ತ್ರಿಯೂ ಕೈ ಕಟ್ಟಿ ಕುಳಿತಿದ್ದ. ಕಂಠಿ ಹುಬ್ಬೇರಿಸಿದ.

"ಯಾಕೆ ಪಟೇಲರೇ.... ಕೈ ಎತ್ತುಲ್ವಾ! ಹೋರಿಕರು ನಿಮ್ಮದು ಅನ್ಯಾಯ ವಾಗಿರೋದು ನಿಮಗೆ ದಂಡ ವಿಧಿಸಿ ಸುಮ್ಮನಿದ್ರೆ ಹೇಗೆ ?"

"ಇಲ್ಲ, ಶ್ರೀಕಂಠಪ್ಪ. ನಂಗೆ ಹಾಗೆನ್ನಿಸ್ತಿಲ್ಲ. ಹೋರಿ ಕರು ಎಷ್ಟು ದಿನ ಬದುಕಿದ್ರೂ, ಅದರಿಂದ ನನಗೆ ಯಾವ ಪ್ರಯೋಜನವೂ ಇರಲಿಲ್ಲ. ಅದರಿಂದ ಸಂತಾನ ಬೆಳೆಯುತ್ತಿರಲಿಲ್ಲ. ಗಾಡಿಗಾಗಲಿ, ಉಳುವುದಕ್ಕಾಗಲೀ, ಹೂಡುವುದಕ್ಕೆ ಆಗ್ತಿರಲಿಲ್ಲ. ಹೋಗಲಿ ಅಂತಂದರೆ ಪ್ರೀತಿಯಿಂದ ಅದರ ಬಳಿಗೆ ಹೋಗಲು ಸಹ ಹೆದರುತ್ತಿದ್ದೆವು. ಅದರ ಆಯಸ್ಸು ಇಷ್ಟೇಯ ಅಂತ ಅಂದ್ಕೋಳ್ತೀನಿ. ಛೇರ್‌ಮನ್ನರದು ಖಂಡಿತಾ ತಪ್ಪಿಲ್ಲ."

"ಹಾಗೆಲ್ಲಾ ಸುಮ್ಮನೇ ಬಿಡಬಾರ್ದು ಪಟೇಲ್ರೇ.... ತಪ್ಪು ತಪ್ಪೇ. ನಾವು ಮಾಡಿದರೂ ತಪ್ಪೇ, ಛೇರ್‌ಮನ್ ಸಾಹೇಬ್ರು ಮಾಡಿದರೂ ತಪ್ಪೇ.... ನಂದಿಯ ಸಮಾನವಾಗಿದ್ದ ಹೋರಿಯನ್ನು ಕೊಂದು ಮಹಾ ಪಾತಕವನ್ನೇ ಮಾಡಿದಾರೆ ನಮ್ಮ ಛೇರ್‌ಮನ್ನರು. ನಂದಿ ಈಶ್ವರನ ವಾಹನ ಅಂತ ಗೊತ್ತಲ್ವಾ? ಅವರಿಗೆ" ಕಂಠಿ ವ್ಯಂಗ್ಯವಾಗಿ ಕೇಳಿದ.

"ಆಯ್ತು, ನಾನು ದಂಡ ಕೊಡೋಕೆ ಸಿದ್ಧವಾಗಿದೀನಿ. ಏನು ಮಾಡ್ಬೇಕು?" ಹೇಳಿ ಎಲ್ಲರನ್ನು ಉದ್ದೇಶಿಸಿ ಕೇಳಿದರು ಛೇರ್‌ಮನ್ನರು

"ಹೇಳಿ ಪಟೇಲ್ರೇ..... ಏನು ದಂಡ ವಿಧಿಸೋಣ ?"

"ನಾನು ಆ ಬಗ್ಗೆ ಯೋಚಿಸೇ ಇಲ್ಲ ಶ್ರೀಕಂಠಪ್ಪ." ಎಲ್ರೂ ನಿಧಾನವಾಗಿ ಯೋಚಿಸ್ಬಿಟ್ಟು ಇನ್ನೊಂದಿನ ತೀರ್ಮಾನ ಹೇಳೋಣ.

"ಏನೂ ಬೇಡ, ಈಗ್ಲೇ ತೀರ್ಮಾನವಾಗ್ಬೇಕು." ಕಂಠಿ ಕೈಕುಟ್ಟಿದ.

"ಆಗ್ಲಿ.. ಈಗ್ಲೇ ಏನು ತೀರ್ಮಾನ ಅಂತ ಹೇಳ್ಬಿಡಿ ಶ್ರೀಕಂಠಯ್ಯಾ ನಾನು ಸಿದ್ಧನಾಗಿದೀನಿ ವೆಂಕಟಾಚಲಯ್ಯ ಹೇಳಿದಾಗ, ಶ್ರೀಕಂಠಯ್ಯ ತಬ್ಬಿಬ್ಬಾದ. ತನ್ನನ್ನೇ

ನೇರವಾಗಿ ಪ್ರಶ್ನೆ ಕೇಳಬಹುದು ಎಂದುಕೊಂಡಿರಲಿಲ್ಲ.

'ಮಾತಾಡೋ ಶಾಸ್ತ್ರಿ ಯಾಕೆ ಬೆಪ್ಪನಂತೆ ಕೂತಿದೀಯ.... ?" ಶಾಸ್ತ್ರಿಯನ್ನು ಮಾತಿನಲ್ಲೇ ತಿವಿದ.

"ನಂಗಿದೆಲ್ಲ ಗೊತ್ತಿಲ್ಲ ಕಂಠಿ ನಾನು ಈ ಹಳ್ಳಿಗೆ ಹೊಸಬ. ನೀನುಂಟು....... ಈ ಪಂಚಾಯ್ತಿ ಉಂಟು."

"ಸಮಯದಲ್ಲಿ ಕೈ ಕೊಡೋದ್ರಲ್ಲಿ ನಿಸ್ಸೀಮ ನೀನು"

"ಭಾವ ಭಾಮೈದ ಮನೇಲಿ ಮಾತಾಡ್ಕಳ್ಳಿ. ಈಗ ಇಲ್ಲಿ ಏನು ಮಾಡೋದು ಅಂತ ಏಳಿ." ಯಾರೋ ನುಡಿದರು. ಕೆಲವರು ಗೊಳ್ಳನೆ ನಕ್ಕರು.

"ಈಶ್ವರನ ದೇವಸ್ಥಾನದ ಹುಂಡಿಗೆ ನೂರು ರೂಪಾಯಿ ಕಾಣಿಕೆ ಹಾಕಿ ಮುಂದೆ, ಕೈ ತೋಟ ಮಾಡಿಸಿ ಹೂಗಿಡಗಳನ್ನು ಬೆಳೆಸ್ಬೇಕು."

"ಶ್ರೀಕಂಠಪ್ಪ, ಪಟ್ಟಿ ಬೆಳಿತಾನೇ ಐತೆ.... ಎಚ್ಚಾಗ್ಲಿಲ್ವಾ ?"

"ಕೊಡುವಾಗ ಕೊಡ್ಲಿ.... ಮಾಡಿಲ್ವಾ ತಪ್ಪಾ ?" ಯಾರೋ ನುಡಿದರು.

"ಆಯ್ತು ಬಿಡಿ. ನಾನು ಸಿದ್ಧ ನಾನು ಎಲ್ಲಾ ಹಣವನ್ನು ನಿಮ್ಮ ಕೈಗೇ ಕೊಡ್ತೀನಿ. ಅದೇನೇನು ಮಾಡ್ಬೇಕೋ ಎಲ್ಲಾ ಮಾಡಿಸ್ಬಿಡಿ....."

"ಬೇಡಪ್ಪಾ ಬೇಡ. ನನಗೆ ಹಣದ ಸಹವಾಸವೇ ಬೇಡ. ಪಟೇಲರ ಕೈಗೇ ಕೊಟ್ಬಿಡಿ" ಕಂಠಿ ಜಾರಿಕೊಳ್ಳುವ ಮಾತನಾಡಿದ.

"ನಂಗೆ ಬೇಡ ಶ್ರೀಕಂಠಪ್ಪ. ನಮ್ಮನೆ ಹೋರಿ ಕರು ಕೆಟ್ಟ ಖಾಯಿಲೆಯಿಂದ ನರಳುತ್ತಿತ್ತು. ಅದಕ್ಕೆ ದಯಾಮರಣವನ್ನು ಛೇರ್‌ಮನ್ನರು ಕೊಟ್ಟು ಆ ಜೀವಕ್ಕೆ ಮುಕ್ತಿಯನ್ನು ಕೊಟ್ಟಿದಾರೆ. ಅದು ಶಿವನ ಇಚ್ಛೆ. ನಾನು ಯಾವ ದಂಡದ ಹಣ ವನ್ನು ಮುಟ್ಟುವುದಿಲ್ಲ." ಅವರೂ ನಿರಾಕರಿಸಿದರು.

"ನೀವು ಹೀಗೆ ಸಡಿಲ ಬಿಟ್ರೆ, ಜನ ದಿನಕ್ಕೊಂದು ಹತ್ಯೆ ಮಾಡ್ತಾರೆ ಪಟೇಲ್ರೇ...." ನೆರೆದಿದ್ದವರ ಪೈಕಿ ಒಬ್ಬ ದನಿ ಎತ್ತಿದ.

"ಸುಮ್ಸುಮ್ನೆ ಯಾರೂ ಯಾವ ಹತ್ಯೆಯನ್ನು ಮಾಡುವುದಿಲ್ಲ. ಹೆಡೆ ಎತ್ತಿ ಭುಸ್ ಎನ್ನುವ ಹಾವುಗಳನ್ನು ಕೊಲ್ತೀವಿ. ಡೈನಾಮೆಟ್‌ಗಳನ್ನಿಟ್ಟು ಮಿಗಗಳನ್ನು ಕೊಲ್ತೀವಿ. ಕುರಿಗಳನ್ನು, ಕೋಣಗಳನ್ನು ಬಲಿ ಕೊಡ್ತೀವಿ. ಮೀನು, ಮೊಲಗಳನ್ನು ಹಿಡಿದು ಅಡಿಗೆ ಮಾಡಿ ತಿಂತೀವಿ. ಅದೂ ಎಲ್ಲಾ ಪಾಪವೇ ಅಲ್ವಾ ? ಶ್ರೀಕಂಠಪ್ಪಾ ಕುಳಿತಿದ್ದವರ ಪೈಕಿ ಒಬ್ಬ ಎದ್ದು ನಿಂತು ನುಡಿದಾಗ ಕಂಠಿ ಕೆರಳಿದ.

"ಸರ್ಪಗಳಿಗೆ ಸಂಸ್ಕಾರ ಮಾಡ್ತೀವಿ. ಕುರಿ ಕೋಣಗಳನ್ನು ದೇವಿಗೆ ಬಲಿ ಕೊಡ್ತಾರೆ. ಮೀನು, ಮೊಲಗಳನ್ನು ಅಡಿಗೆ ಮಾಡಿ ತಿನ್ನಬಾರದು ಅಂತ ಎಲ್ಲಿಯೂ ಹೇಳಿಲ್ಲ. ಕಿರುಬ ಕಾಡು ಪ್ರಾಣಿ ದನ, ಕರು, ಎಮ್ಮೆಗಳಿಗೆ ಅದರಿಂದ ಅಪಾಯ

ಅಂತ ತಾನೇ ಕೊಲ್ಲೋದು? ಇದು ಗೋಹತ್ಯೆ.... ಹಿಂದೂಗಳು ಗೋಪೂಜೆ ಮಾಡ್ತಾರೆ. ಗೋಮಾಂಸವನ್ನು ತಿನ್ನಬಾರದು ಅಂತ ಹಿಂದೂ ಧರ್ಮ ಹೇಳುತ್ತೇ... ಇದು ಘೋರ ಪಾಪ...." ಮತ್ತೆ ಕಿರುಚಿದ.

"ಕಂಠಿಯ ಮಾತನ್ನು ಮುರಿದು ಮತ್ತೊಬ್ಬ ನುಡಿದ. ಕುದುರೆಗಳುಕಾಲು ಮುರಿದುಕೊಂಡು ನಿಷ್ಪ್ರಯೋಜಕವಾಗಿ ಬಿದ್ದಾಗ, ಅವುಗಳನ್ನು ಗುಂಡಿಟ್ಟು ಕೊಲ್ತಾರೆ. ಅದು ಪಾಪವೇ ಅಲ್ಲ. ಹಾಗೇ ಈ ಹೋರಿ ಕರುವಿನಿಂದ ಉಪಯೋಗವೇ ಇಲ್ಲದಿರುವಾಗ ಇದು ಪಾಪವೇ ಅಲ್ಲ........."

"ನೀವು ಸುಮ್ಮನಿರಿ.... ಯಾಕಿಷ್ಟು ಚರ್ಚೆ ಮಾಡ್ತೀರಿ ?" ಮತ್ತೊಬ್ಬ ವ್ಯಕ್ತಿ ನುಡಿದ.

"ನಾನೇ ಸುಮ್ಮನಿರುವಾಗ ಇಷ್ಟ್ಯಾಕೆ ಎಗರಾಡ್ತೀರಿ ಶ್ರೀಕಂಠಪ್ಪಾ" ಎಂದು ಬಿಟ್ಟರು ಪಟೇಲರು. ಕೆಲವರು ಕಿಸಕ್ಕನೆ ನಕ್ಕರು. ಕಂಠಿಯ ಮೈ ಬಿಸಿಯಾಯಿತು. ಅನುಮಾನದಿಂದ ಕುಪಿತನಾದ. ಕೆಂಡದಂಥ ಕಣ್ಣುಗಳಿಂದ ಎಲ್ಲರನ್ನು ಒಮ್ಮೆ ನೋಡಿ, ದುರ್ದಾನ ತೆಗೆದುಕೊಂಡವನಂತೆ ಕುಳಿತವರ ನಡುವೆ, ದುಡು ದುಡನೆ ನಡೆದು ಬಿಟ್ಟ.

"ಶ್ರೀಕಂಠಪ್ಪಾ ನಿಲ್ಲಿ....." ಪಟೇಲರು ಕರೆದರೂ, ಕೇಳಿಸದವನಂತೆ ಹಿಂತಿರುಗಿ ನೋಡದೆ ಬಿರಬಿರನೆ ನಡೆದು ತನ್ನ ಮನೆಯನ್ನು ಸೇರಿಕೊಂಡ. ಗಂಡನಿಗೆ ಅಸಾಧ್ಯ ಕೋಪಬಂದಿದೆ ಎಂದು ಅರಿತ ಪಾರ್ವತಿ ಅವನನ್ನು ಮಾತನಾಡಿಸಲು ಹೆದರಿದಳು.

"ನಿನ್ನ ಅಣ್ಣ ಗಂಡಸೇ ಅಲ್ಲ. ಬಾಯಿ ಕಳೆದುಕೊಂಡವನಂತೆ ಕುಕ್ಕರು ಬಡಿದಿದ್ದ. ನಾನು ಅವನ ಭಾವ..... ಎಲ್ಲರ ಎದುರಿಗೆ ನನಗೆ ಅವಮಾನವಾಗು ತ್ತಿದ್ದರೂ, 'ಕಂ, ಕಿಂ' ಎನ್ನಲಿಲ್ಲ. ನನ್ನ ಪರವಹಿಸಲಿಲ್ಲ. ಇನ್ನೊಂದ್ಸಾರಿ ಬಾವ ಅಂತ ಕರೀಲಿ, ಕೆನ್ನೆಗೆ ಬಾರಿಸ್ತೀನಿ ಆವೇಶ ಇಳಿಯುವವರೆಗೂ ಕಂಠಿ ಕಿರುಚುತ್ತಲೇ ಇದ್ದ. ಅವನ ಕೂಗಾಟ ಶಾಸ್ತ್ರಿಯ ಮನೆಯ ಕೇಳಿಸುತ್ತಿತ್ತು.

ವೈಕುಂಠ ಮೊದಲೇ ಓಡಿ ಬಂದು ಏದುಸಿರು ಬಿಡುತ್ತಾ ನಡೆದುದನ್ನೆಲ್ಲಾ ವರದಿ ಒಪ್ಪಿಸಿದಾಗ, ಸಾತಕ್ಕ ಹಣೆಗಟ್ಟಿಸಿಕೊಂಡಳು.

"ಈ ಕಂಠಿಯ ಹಣೇಬರಹವೇ ಇಷ್ಟು...... ಇಷ್ಟಕ್ಕೂ ಇವನಪ್ಪನ ಮನೆಯ ಗಂಟೇನು ಅಂತ ಹಾಗಾಡ್ದ ? ಒಟ್ನಲ್ಲಿ ಕಾಲಿ ಕೆರೆದುಕೊಂಡು ಹೋಗ್ತಾನೆ ಜಗಳ ಆಡುಕ್ಕೆ."

"ನೀವೇ ಏಳಿ ಅವ್ರಾವ್ರೇ ಥೇರ್‌ಮನ್ನರು ಮಾಡಿದ್ದು ಸರಿಯೋ ತೆಪ್ಪೋ?"

"ನಿಂಗೇನ್ನನಿಸುತ್ತೋ ವೈಕುಂಠ ?"

"ಸರಿ ಅನ್ಸುತ್ತೆ ಅವ್ವಾವ್ರೇ. ಉಚ್ಚು ಇಡಿದ ಓರಿ.... ಆರನ್ನಾದ್ರೂ ಕಚ್ಚಿದ್ರೆ ಅವ್ರಿಗೂ ಉಚ್ಚು ಇಡೀತಿತ್ತು ಅಲ್ಲವ್ವಾ ?"

"ಕಚ್ತಿತ್ತೋ ಇಲ್ಲವೋ ಗೊತ್ತಿಲ್ಲ ಆದ್ರೆ ಅಪಾಯ ಅಂತೂ ಇತ್ತು. ಅಲ್ದೇ ಆ ಮೂಕ ಪ್ರಾಣಿ ನೋವನ್ನು ಅನುಭವಿಸ್ಬೇಕಾಗಿತ್ತು. ವೆಂಕಟಾಚಲಯ್ಯ ಮಾಡಿದ್ದು ಸರಿಯೇ. ಆದರೆ ಪಟೇಲರಿಗೆ ಮೊದ್ಲೇ ಒಂದ್ಮಾತನ್ನು ತಿಳಿಸಬೇಕಾಗಿತ್ತು. ಈಗೇನೋ ಪಟೇಲ್ರು ಸುಮ್ಮನಿದಾರೆ ಬ್ರಾಹ್ಮಣನಾಗಿ ಹೀಗ್ಮಾಡ್ದ ಅಂತ ಜನ ಆಡ್ಕೊಂಡು ನಗೋ ಹಾಗಾಯ್ತು."

"ಅವರಷ್ಟು ಧೈರ್ಯ ಯಾರ್ಗೂ ಇಲ್ಲ ಅತ್ಗೆ. ಇಲ್ದಿದ್ರೆ ಇಂಥ ಕಾಡ್ನಲ್ಲಿ ವಾಸ ಮಾಡುಕ್ಕೆ ಆಗುತ್ತಾ? ಅವರು ಮಾಡಿದ್ದು ಸರಿಯೇ ಜನ ನಿರ್ಭೀತಿಯಿಂದ ಓಡಾಡ್ಬಹುದು. ಮಕ್ಕಳು ಮರಿ ಓಡಾಡೋ ಬೀದೀಲಿ ಎದುರಿಗೆ ಓಡಿ ಬಂದರೆ, ಎದುರಿಸುಕ್ಕೆ ಆಗ್ತಿತ್ತಾ ? ಅಥವಾ ಅದಕ್ಕೆ ಹೆದರಿ ಯಾರೂ ಬೀದೀಲಿ ಓಡಾಡ್ದೆ ಮನೇಲೇ ಇರೋಕೆ ಆಗ್ತಿತ್ತಾ !" ಲಕ್ಷ್ಮಿ ಎಂದಳು.

"ಸ್ವಾಮೇರು ಬಂದ್ರು.... ನಾನು ಓಯ್ತಿನಿ" ವೈಕುಂಠ ಶಾಸ್ತ್ರಿಯ ಚಪ್ಪಲಿಯ ಸದ್ದು ಕೇಳಿ ಅಲ್ಲಿಂದ ಎದ್ದ. ಒಳ ಬಂದ ಶಾಸ್ತ್ರಿ ಕೈಕಾಲು ತೊಳೆದು ತನ್ನ ಪಾಡಿಗೆ ತಾನು ಮಲಗಲೆಂದು ಹೊರಟ. ಪಂಚಾಯ್ತಿ ಕಟ್ಟೆಯಲ್ಲಿ ಏನು ನಡೀತು ಅಂತ ಇವರುಗಳೂ ಕೇಳಲಿಲ್ಲ. ಅವನೂ ಹೇಳಲಿಲ್ಲ. ಮಲಗಿದವನಿಗೆ ನಿದ್ದೆ ಹತ್ತಲಿಲ್ಲ. ಕಣ್ಣ ಮುಂದೆ ಆ ಹೋರಿ ಕರು ಬಂದು ನಿಲ್ಲುತ್ತಿತ್ತು. ಅದರ ಆಕ್ರಂದನ ಕಿವಿಗೆ ಅಪ್ಪಳಿಸಿದಂತಾಗುತ್ತಿತ್ತು. ಮತ್ತೆ ಮತ್ತೆ ಮಗ್ಗುಲು ಬದಲಾಯಿಸಿದ.

* * *

ಒಂದೆರಡು ವಾರದವರೆಗೂ ಕಂಠಿ ಶಾಸ್ತ್ರಿಯೊಡನೆ ಮಾತನಾಡಲಿಲ್ಲ. ಎದುರಿಗೆ ಕಂಡರೂ ಮುಖವನ್ನು ಅತ್ತ ತಿರುಗಿಸ್ಕೊಂಡು ಹೋಗುತ್ತಿದ್ದ ಶಾಸ್ತ್ರಿಯೂ ಮಾತನಾಡಿಸಲಿಲ್ಲ. ಕಂಠಿಯ ಸ್ವಭಾವ, ಶಾಸ್ತ್ರಿಗೆ ಹೊಸದೇನಲ್ಲ. ಆ ಕಡೆ ಹೆಚ್ಚು ಗಮನವನ್ನು ಕೊಡಲಿಲ್ಲ.

ಮೀನಾಕ್ಷಿ ಮದುವೆಯಾದ ನಂತರ, ಸಂಗೀತಾಭ್ಯಾಸವನ್ನು ಬಿಟ್ಟು ಬಿಟ್ಟಿದ್ದಳು. ನರಸಿಂಹಯ್ಯ ಭಾನುವಾರ ಬೆಳಗಿನ ರೈಲಿಗೆ ಬಂದು, ಶಾಸ್ತ್ರಿಯ ಮನೆಯಲ್ಲೇ ಇದ್ದು, ಕಾಫಿ ತಿಂಡಿಯ ನಂತರ, ಲಲಿತ, ಶಾಂತಳಿಗೆ ಪಾಠವನ್ನು ಹೇಳಿಕೊಟ್ಟು ಮತ್ತೆ ಊಟದ ನಂತರ, ಅಭ್ಯಾಸವನ್ನು ಮಾಡಿದ, ಸಾಯಂಕಾಲದ ರೈಲಿಗೆ ವಾಪಸ್ಸು ಹೋಗುತ್ತಿದ್ದರು.

"ಸಂಗೀತ ಮೇಷ್ಟ್ರನ್ನು ಗೊತ್ತು ಮಾಡ್ದೋನು ಈ ಕಂಠಿ ಮೀನಾಕ್ಷಿಗೆ ಮದುವೆ ಆದ್ರೇನಂತೆ, ಗಂಡನ ಮನೆಗೆ ಹೋಗೋವರ್ಗೂ ಎಷ್ಟಾಗುತ್ತೋ ಅಷ್ಟನ್ನ ಕಲೀತಿದ್ಲು.

ಕಂಠೀದೆಲ್ಲಾ ಇಂಥದೇ ಆಟ ಯಾರ್ಗೂ ಅರ್ಥವಾಗುಲ್ಲ." ಶಾಸ್ತ್ರಿ ಸಾವಿತ್ರಿಯೊಡನೆ ಹೇಳಿದ. ಆ ಮಾತನ್ನು ಕೇಳಿಸಿಕೊಂಡ ನರಸಿಂಹಯ್ಯ ನುಡಿದರು.

"ಹೋಗ್ಲಿ ಬಿಡಿ ಅವರ ಮನೆ ಪಾಠ ತಪ್ಪಿದ್ದೇ ಒಳ್ಳೇದಾಯ್ತು. ಸುಮ್ಮನೇ ತಪ್ಪುಗಳನ್ನು ಹುಡುಕಿ ಪಾಠಕ್ಕೆ ತೊಂದರೆ ಮಾಡುತ್ತಿದ್ದರು. ಮೀನಾಕ್ಷಿಗೂ ಅಷ್ಟೇ.... ಸ್ವಲ್ಪ ಅಹಂಕಾರ, ಕಂಠ, ಶಾರೀರ ತುಂಬಾ ಚೆನ್ನಾಗಿದೆ. ಕಲಿಯುವ ಯೋಗ ಆ ಹುಡುಗಿಗಿಲ್ಲ, ಹೇಳಿ ಕೊಡುವ ಭಾಗ್ಯ ನನಗಿಲ್ಲ."

"ವೆಂಕಟಾಚಲಯ್ಯನಿಗೂ ಇಬ್ಬರು ಹೆಣ್ಣು ಮಕ್ಕಳಿದಾರೆ ಕೇಳಿ ನೋಡ್ತಿನಿ ನಿಮಗೂ ಇಬ್ಬರು ಶಿಷ್ಯೆಯರು ಸ್ಕಿಕ್ಕಿದಂತಾಗುತ್ತೆ."

"ನಿಮ್ಮ ಕಷ್ಟ ನನಗೂ ಅರ್ಥವಾಗುತ್ತೆ. ಆದರೆ ನಮ್ಮ ಮಕ್ಕಳಿಗೆ ಪಾಠ ಹೇಳೋದನ್ನ ದಯವಿಟ್ಟು ನಿಲ್ಲಿಸಬೇಡಿ."

"ನಿಮ್ಮ ಮಗಳಿಗೂ ಮದುವೆ ಗೊತ್ತಾಗಿದೆಯಂತೆ, ಆಮೇಲೆ ಲಲಿತ ಒಬ್ಬಳಿಗೋಸ್ಕರ ಬರಬೇಕಾಗುತ್ತಲ್ಲ."

"ಆಗ ನೋಡೋಣ. ಭಾನುವಾರದಂದು ಲಲಿತನ್ನೇ ನಿಮ್ಮ ಮನೆಗೆ ಬಂದು ಕಲಿಯುವ ವ್ಯವಸ್ಥೆ ಮಾಡ್ತಿನಿ. ಅಲ್ಲೇ ದುರ್ಗೀಗುಡೀಲಿ ನನ್ನ ತಮ್ಮನ ಮನೆ ಇದೆ..."

"ಹೌದು ಗೊತ್ತು ಅವರ ಪರಿಚಯ ನನಗೂ ಇದೆ. ಅವರಿಂದಲೇ ಶ್ರೀಕಂಠಯ್ಯನ ಪರಿಚಯವಾದದ್ದು. ನಿಮ್ಮ ಮಕ್ಕಳಿಗೆ ಬಂದು ತಂಬೂರಿಯನ್ನು ತಂದು ಕೊಡಿ. ತಂಬೂರಿಯ ಶೃತಿಯ ಜತೆ ಅಭ್ಯಾಸ ಮಾಡಿದರೆ ಚೆನ್ನಾಗಿರುತ್ತದೆ. ನಿಮ್ಮ ಧ್ವನಿ ಬಹಳ ಗಟ್ಟಿಯಾಗಿದೆ." ಕಂಚಿನ ಕಂಠ ನರಸಿಂಹಯ್ಯನ ಹೊಗಳಿಕೆಗೆ ಶಾಸ್ತ್ರಿ ತಲೆದೂಗಿದ.

* * *

ವೆಂಕಟಾಚಲಯ್ಯ ತಾನು ನುಡಿದಂತೆ, ಈಶ್ವರನ ದೇವಸ್ಥಾನದಲ್ಲಿ ನೂರು ರೂಪಾಯಿ ದಂಡವನ್ನು ಕಾಣಿಕೆಯನ್ನಾಗಿ ಸಲ್ಲಿಸಿ, ರುದ್ರಾಭಿಷೇಕದ ವ್ಯವಸ್ಥೆಯನ್ನು ಮಾಡಿಸಿದ. ದೇವಸ್ಥಾನದ ಸುತ್ತ ಮುತ್ತಲಿನ ಜಾಗದಲ್ಲಿ ತೋಟದ ವ್ಯವಸ್ಥೆಯನ್ನು ಮಾಡಿಸಿದ. ದೇವಸ್ಥಾನದ ಸುತ್ತ ಮುತ್ತಲಿನ ಜಾಗದಲ್ಲಿ ಹೂವಿನ ಗಿಡಗಳನ್ನು, ಸಸಿಗಳನ್ನು ನಡೆಸಿದ. ತಿಪಟೂರಿನಿಂದ ತರಿಸಿದ ಎರಡು ತೆಂಗಿನ ಸಸಿಗಳನ್ನು ಹಾಕಿಸಿದ. ಕಂಠಿ ಮಾತಿಲ್ಲದವನಾಗಿದ್ದ ಹಳ್ಳಿಯವರು ವೆಂಕಟಾಚಲಯ್ಯನ ಉದಾರತೆಯನ್ನು ಹೊಗಳಿದ್ದರು. ಹೋರಿ ಕರುವಿನ ಬೆಲೆಯೇ ಹತ್ತೋ ಹದಿನೈದೋ ಇಪ್ಪತ್ತೋ.... ಅಂಥಾದ್ರಲ್ಲಿ ಕಂಠಿಯ ಮಾತನ್ನು ಕೇಳಿಕೊಂಡು, ವೆಂಕಟಾಚಲಯ್ಯನ ಹತ್ತಿರ ಇಷ್ಟೊಂದು ವಸೂಲು ಮಾಡಬಾರದಾಗಿತ್ತು ಎನಿಸಿತ್ತು ಪಟೇಲರಿಗೆ.

"ಛೇರ್‌ಮನ್ನರೇ..... ಏನೋ ದಡ್ಡತನವಾಗಿ ಹೋಯ್ತು. ನಿಮಗೆ ಖರ್ಚು ಹೆಚ್ಚಾಯಿತು" ಕಳಕಳಿಯಿಂದ ನುಡಿದಿದ್ದರು.

"ಆಯ್ತು ಬಿಡಿ ಛೇರ್‌ಮನ್ನನಾಗಿ, ಜನತೆಯ ಮಾತಿಗೆ ಬೆಲೆ ಕೊಡಬೇಕಾದುದು ನನ್ನ ಧರ್ಮ ನಾನು ಮಾಡಿದ್ದು ನಮ್ಮ ಹಳ್ಳಿಯ ದೇವರ ಗುಡಿಗೇ ತಾನೇ .... ? ಈ ನೆವದಲ್ಲಿ ನಾನೂ ಉದ್ಧಾರವಾದೆ." ಗತ್ತಿನಿಂದ ನಕ್ಕ.

"ಹೌದು, ಅದೇನೋ ಸರಿ ಈ ಕಾರಣದಿಂದ ನಮ್ಮೂರ ದೇವಸ್ಥಾನಕ್ಕೆ ವಿಶೇಷ ಕಳೆ ಬಂತು. ಹಳ್ಳಿಯ ಜನತೆ ಎಂದೆಂದಿಗೂ ನಿಮ್ಮ ಈ ಉದಾರತೆಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತೆ...." ಕೈ ಮುಗಿದರು.

"ಬಹಳ ದೊಡ್ಡ ಮಾತಾಯಿತು ಪಟೇಲರೆ.... ನೀವು ನಿಮ್ಮ ಮನೆಯ ಹೋರಿ ಕರುವನ್ನು ಕಳೆದುಕೊಂಡ ವ್ಯಥೆಯಲ್ಲಿದೀರಿ.... ಆನೆನಪಿಗಾಗಿ ಒಂದು ಸಮಾಧಿಯನ್ನು ಕಟ್ಟಿಸಿಬಿಡಿ."

"ಆ ನಮ್ಮ ಬಸವನ್ನ ನಾನು ಮರೆಯುವಂತೆಯೇ ಇಲ್ಲ. ನೀವು ಹೇಳಿದಂತೆ ಕೆರೆಯ ಆ ದಡದಲ್ಲಿ ದೇಹವನ್ನು ಹೂಳಿಸಿದ್ದಾಗಿದೆ. ಅಲ್ಲಿಗೆ ನಮ್ಮ ಅವನ ಋಣ ತೀರಿತು. ಹೀಗೆಲ್ಲಾ ಯಾಕಾಯ್ತೋ ಅಂತ ಅನ್ನಿಸಿದಾಗ, ನಮ್ಮ ಕೈಲೇನಿದೆ. ಎಲ್ಲಾ ಶಿವನಿಚ್ಛೆ ಅಂತ ಹೇಳ್ತಾಳೆ, ಗೌಡಿತಿ. ಸಮಾಧಿ ಕೆಲಸವನ್ನು ಶುರುಮಾಡಿಸ್ತೀನಿ."

"ಹೌದು ಪಟೇಲರೆ, ಎಲ್ಲಾ ಆ ಭಗವಂತನ ಇಚ್ಛೆ.... ಆದರೆ ನಡೆಯೋದೆಲ್ಲಾ ನಮ್ಮ ಕೈಯಲ್ಲಿ ಇಲ್ಲವಲ್ಲ, ಅದಕ್ಕೇನು ಮಾಡೋದು ?"

"ಅದೇನೋ ದಿಟ..ಈ ಸಾರಿಯ ಮಹಾನವಮಿ ಹಬ್ಬಾನ ಜೋರಾಗಿ ಮಾಡ್ಬೇಕು ಛೇರ್‌ಮನ್ನರೇ ಹಳ್ಳೀಲಿ ಉತ್ಸವ ಮಾಡಿಸ್ಬೇಕು."

"ನಿಮ್ಮ ಮನಸ್ನಲ್ಲಿ ಬಂದರೆ ಅದು ನಡದೇ ನಡೆಯುತ್ತೆ.... ಹಳ್ಳಿಯವರೆಲ್ಲಾ ಒಂದಾಗ್ಬೇಕು ಅಷ್ಟೇ."

"ಎಲ್ರನ್ನ ಒಪ್ಪಿಸಬಹುದು..... ಈ ಶ್ರೀಕಂಠಪ್ಪನೇ ಸ್ವಲ್ಪ ತರಲೆ."

"ಶಾಸ್ತ್ರಿ ಹತ್ರ ಮಾತಾಡ್ತೀನಿ. ಭಾವನ್ನ ಒಪ್ಪಿಸಲಿ."

"ಹುಂ ಹಾಗೇ ಮಾಡಿ, ನಾನಿನ್ನು ಬರ್ಲಾ ಛೇರ್‌ಮನ್ನರೇ..." ಪಟೇಲರು ಕೈ ಮುಗಿದು ತೆರಳಿದರು. ವೆಂಕಟಾಚಲಯ್ಯ ತೋಟಕ್ಕೆ ಹೊರಟಿದ್ದ. ಶಾಸ್ತ್ರಿ ಎದುರಿಗೆ ಸಿಕ್ಕಿದ. ಶಾಸ್ತ್ರಿ ಸೈಕಲ್ಲಿನಿಂದ ಇಳಿದು 'ನಮಸ್ಕಾರ' ಎಂದ.

"ಪಟೇಲರು ಬಂದಿದ್ರು, ಶ್ರೀಕಂಠಯ್ಯ ಇನ್ನು ಕೋಪದಲ್ಲಿದಾರಾ ಹೇಗೆ ಅಂತ ವಿಚಾರಿಸಿದರು. ನನ್ನ ತಪ್ಪು ಅಷ್ಟೂ ದೊಡ್ಡದಾ ಶಾಸ್ತ್ರಿಗಳೇ." ವೆಂಕಟಾಚಲಯ್ಯ ನಗುತ್ತಾ ಪ್ರಶ್ನಿಸಿದ.

"ಸ್ವಲ್ಪ ನಮ್ಮ ಭಾವನ ಸ್ವಭಾವವೇ ಹಾಗೇ. ನನ್ನ ಮೇಲೂ ಕೋಪ, ಹದಿನೈದು

ದಿನಗಳಿಂದ ನನ್ನನ್ನ ಮಾತನಾಡಿಸಿಲ್ಲ."

"ಪಟೇಲರು ಹೇಳಿದ್ದನ್ನು ವೆಂಕಟಾಚಲಯ್ಯ ಹೇಳಿದ. ನಿಮ್ಮ ಭಾವ ಇರೋದು ಈ ಹಳ್ಳೀಲಿ ಆದರೆ ತನಗೂ ಹಳ್ಳಿಗೂ ಏನೂ ಸಂಬಂಧ ಇಲ್ಲಿ ಅನ್ನೋ ಥರ ಕೆಲವು ಸಾರಿ ವರ್ತಿಸುತ್ತಾರೆ ಪಂಚಾಯ್ತಿಯ ನಿರ್ಣಯಕ್ಕೆ ಬೆಲೆ ಇಲ್ಲ. ಛೇರಮನ್ ರನ್ನಾಗಲೀ ಪಟೇಲರನ್ನಾಗಲೀ ಕಂಡರೆ ಗೌರವ ಇಲ್ಲ. ಯಾಕೇ ಅಂತ ?"

"ನಂಗೂ ಗೊತ್ತಿಲ್ಲ ವೆಂಕಟಾಚಲಯ್ಯ ಸ್ವಲ್ಪ ಅತಿರೇಕ ನನಗೂ ಈಗಲೇ ಹೆಚ್ಚು ಹೆಚ್ಚು ಅವನ ಸ್ವಭಾವದ ಪರಿಚಯವಾಗ್ತಿರುವುದು. ನಾನೂ ನನ್ನ ತಂಗಿಗೋಸ್ಕರ ಸಹಿಸಿಕೊಂಡಿದೀನಿ. ಇಲ್ದಿದ್ರೆ ನಾನೂ ತಿರುಗಿಸಿ ನಾಲ್ಕು ಮಾತನ್ನಾಡಬಹುದಾಗಿತ್ತು."

"ಅವಧಿ ಮುಗಿದ ಕೂಡಲೇ ನಾನು ನನ್ನ ಛೇರ್‌ಮನ್ ಪಟ್ಟಕ್ಕೆ ರಾಜೀನಾಮೆ ಕೊಡ್ತೀನಿ. ನೀವು ಛೇರ್‌ಮನ್ ಆಗಿ..... ನೀವೂ ಸಮಾಜ ಸೇವೆ ಮಾಡಿ..." ನಸು ನಕ್ಕ.

"ಬೇಡಪ್ಪಾ... ನಂಗಿದೆಲ್ಲಾ ತಿಳೀದು"

"ನಿಮ್ಮ ಭಾವನ್ನ ಕೇಳಿ, ಅವರು ಛೇರ್‌ಮನ್ ಆಗ್ತಾರ ಅಂತಾ ?"

"ತಮಾಷೆ ಮಾಡ್ತಿದೀರ ವೆಂಕಟಾಚಲಯ್ಯ? "

"ತಮಾಷೆ ಅಲ್ಲ ಅವರಿಗೂ ಒಂದು ಅವಕಾಶ ಕೊಟ್ಟು ನೋಡೋಣ ಅಂತ ಏನು ಹೇಳ್ತೀರಿ"

"ನಾನೇನು ಹೇಳ್ಲಿ! ಒಂದಂತೂ ನಿಜ. ಗ್ರಾಮಾಡಳಿತವನ್ನು ಬದಲಾಯಿಸುವು ದಂತೂ ನಿಜ...." ಇಬ್ಬರೂ ನಕ್ಕರು. ವೆಂಕಟಾಚಲಯ್ಯ ಜೇಬಿನಿಂದಹೊಗೆ ಸೊಪ್ಪಿನ ಎಲೆಯನ್ನು ತೆಗೆದು ಅಂಗೈಗೆ ಹಾಕಿಕೊಂಡು ಪುಡಿ ಮಾಡಿ, ಒಂದು ಚಿಟಿಕೆ ಸುಣ್ಣವನ್ನು ಬೆರೆಸಿ, ಹೆಬ್ಬೆರಳಿನಲ್ಲಿ ಉಜ್ಜಿ, ಬಾಯಿಗೆ ಹಾಕಿಕೊಂಡು ದವಡೆಗೆ ಒತ್ತಲಿಸಿದ.

"ಇದೇನಿದು ! ಈ ಅಭ್ಯಾಸ ನಿಮಗಿದೆ ಅಂತ ಗೊತ್ತಿರಲಿಲ್ಲ.... "

"ನನ್ನ ಚಿಕ್ಕಪ್ಪನಿಂದ ಕಲಿತದ್ದು... ಹೊಗೆಸೊಪ್ಪು ದವಡೇಲಿದ್ರೆ ಒಂಥರಾ ಚೇತನ ನೀವೂ ಹಾಕ್ಕೊಳ್ಳಿ...."

"ಚಟ ಆಗಿ ಬಿಡುತ್ತಲ್ಲ ಆಮೇಲೆ ಕಷ್ಟ."

"ಬಿಡು ಅಂತ ಯಾರು ಒತ್ತಾಯ ಮಾಡ್ತಾರೆ ಶಾಸ್ತ್ರಿಗಳೇ ಸ್ವಲ್ಪ ರುಚಿ ನೋಡಿ" ಒಂದು ಚಿಟಿಕಯಷ್ಟು ಹೊಗೆಸೊಪ್ಪಿನ ಮಿಶ್ರಣವನ್ನು ಮಾಡಿ ಶಾಸ್ತ್ರಿಯ ಕೈಗಿತ್ತ. "ರಸವನ್ನು ನುಂಗಬೇಡಿ ಉಗುಳ್ತಾ ಇರಬೇಕು. ರಸ ಹೊಟ್ಟೆಗೆ ಹೋದ್ರೆ ನಶೆ ತಲೆ ಗೇರುತೇ ತಲೆ ಸುತ್ತಿ ಬರುತ್ತೆ."

"ಹಾಗಾದ್ರೆ ಇದೆಲ್ಲಾ ಬೇಡಪ್ಪಾ...." ಹಾಗೆ ಹೇಳಿದರು. ಹೊಗೆಸೊಪ್ಪಿನ ಮಿಶ್ರಣ ದವಡೆಯನ್ನು ಸೇರಿತ್ತು. ಮೊದಲಿಗೆ ಘಾಟು ಎನಿಸಿತ್ತು. ಒಂದೆರಡು ಬಾರಿ

ರಸವನ್ನು ಉಗುಳಿದ ಮೇಲೆ ಸಮಾಧಾನವಾಗಿತ್ತು. ಮಜವಾಗಿದೆ ಅಂತೆನಿಸಿತ್ತು.

"ತಗೊಳ್ಳಿ, ಇಷ್ಟನ್ನು ನಿಮ್ಮ ಬಳಿ ಇಟ್ಕೊಳ್ಳಿ.... ಸ್ವಲ್ಪ ಸ್ವಲ್ಪವನ್ನೇ ಹಾಕ್ಕೊಳ್ಳಿ, ಏನಾದ್ರೂ ಹೆಚ್ಚು ಕಡಿಮೆ ಮಾಡ್ಕೊಂಡು ಆಮೇಲೆ ನನ್ನ ಬೈಯಬೇಡಿ."

"ಹೊಗೆಸೊಪ್ಪು ಎಲ್ಲಿ ಸಿಗುತ್ತೇ ?"

"ಗಾಂಧಿ ಬಜಾರಿನಲ್ಲಿ ಎಲೆ ಅಡಿಕೆ ಸಿಗುವ ಅಂಗಡೀಲೇ ಸಿಗುತ್ತೆ. ಎಲೆ ಅಡಿಕೆ ಹಾಕೋ ಅಭ್ಯಾಸ ಇದೆ ತಾನೇ?"

"ಹೂಂ ಊಟ ಆದ್ಮೇಲೆ ತಾಯ ತಾಂಬೂಲ ಬೇಕೇ ಬೇಕು. ಇಲ್ಲದಿದ್ರೆ ಊಟ ಜೀರ್ಣವಾಗಬೇಕಲ್ಲ ನೀವೂ ಹಾಕ್ಕೊಳ್ತೀರಲ್ಲ."

"ಹುಂ..... ರಾತ್ರಿಯ ಹೊತ್ತಂತೂ ಮರೀದೇ ಹಾಕ್ಕೋತೀನಿ ಇಲ್ದಿದ್ರೆ ಭಾಗವತ ಓದೋಕೆ ಸ್ಫೂರ್ತಿಬೇಕಲ್ಲ."

"ಹುಂ ತುಂಬಾ ಚೆನ್ನಾಗಿ ಓದ್ತೀರಿ ಕೇಳೀಸ್ತಾ ಇರುತ್ತೆ." ಹೊಗಳಿದ.

"ಅದೂ ನನ್ನ ಚಿಕ್ಕಪ್ಪನೇ ಕಲಿಸಿದ್ದು, ಅವರು ಭಾಳ ರಸಿಕರಾಗಿದ್ದರು" ವೆಂಕಟಾಚಲಯ್ಯ ನಗುತ್ತಾ ನುಡಿದ. ಶಾಸ್ತ್ರಿ ದನಿಗೂಡಿಸಿದ.

ಶಾಸ್ತ್ರಿ ನೆನೆಪಿಸಿಕೊಂಡವನಂತೆ ಕೇಳಿದ. "ನರಸಿಂಹಯ್ಯ ಅಂತ ಒಬ್ರು ಪೇಟೆ ಯಿಂದ ಬಂದು ನನ್ನ ಮಕ್ಕಳಿಗೆ ಸಂಗೀತ ಹೇಳಿಕೊಡ್ತಾರೆ... ನೀವೂ ನಿಮ್ಮ ಮಕ್ಕಳಿಗೆ ಹೇಳಿಸ್ತೀರೇನು ?" ವೆಂಕಟಾಚಲಯ್ಯ ಒಂದು ಗಳಿಗೆ ಯೋಚಿಸಿದವನಂತೆ ನುಡಿದ.

"ಮನೇಲಿ ವಿಚಾರಿಸಿ ಹೇಳ್ತೀನಿ...." ಅಲ್ಲಿಗೆ ಅವರಿಬ್ಬರ ಮಾತುಕತೆ ಮುಗಿದಿತ್ತು. ಇಬ್ಬರೂ ಅವರವರ ದಾರಿಯನ್ನು ಹಿಡಿದರು.

* * *

ಕಂಠಿಯ ಬೀಗರು ಪತ್ರ ಹಆಕಿದ್ದರು. ಕಾರ್ತೀಕ ಮಾಸದಲ್ಲಿ ಸೊಸೆಯನ್ನು ಮನೆ ತುಂಬಿಸಿಕೊಳ್ಳುವುದಾಗಿ ತಿಳಿಸಿದ್ದರು. ಕಂಠಿಗೆ ಸ್ವಲ್ಪ ಆತಂಕವಾಗಿತ್ತು. ಹದಿನೈದು ಇಪ್ಪತ್ತು ಮಂದಿಗಳು ಬರುವುದಾಗಿ ಬರೆದಿದ್ದರು. ಹಳ್ಳಿಯಲ್ಲೇ 'ನಿಷೇಕ ಪ್ರಸ್' ವನ್ನು ಮಾಡಿಕೊಡಬೇಕೆಂದುಕೊಂಡ. ಈಗ ಭಾಮೈದನ ಹೆಂಡತಿಯ ತವರಿನ ಸಹಕಾರ ಬೇಕೇಬೇಕು. ಪಾರ್ವತಿಯನ್ನು ಅಣ್ಣನ ಮನೆಗೆ ಕಳಿಸಿದ.

ಎಷ್ಟೋ ದಿನಗಳ ನಂತರ ಮನೆಗೆ ಬಂದ ತಂಗಿಯನ್ನು ಗುಂಡಣ್ಣ ಆದರದಿಂದ ಸ್ವಾಗತಿಸಿದ. ಸಾತು ನೋಡು..... ನಿನ್ನ ತಂಗಿ ಬಂದಿದಾಳೆ. ಏನಂತಾನೆ ನನ್ನ ಭಾವ ? ನಗುತ್ತಾ ಕೇಳಿದ.

"ನಿನ್ನ ಭಾವ ನಿಂಗೆ ಗೊತ್ತಿಲ್ವೋರ್ಾ? ಅವರಿಗೆ ಎಲ್ಲರೂ ಬೇಕಾದಾಗ ಬೇಕು, ಬೇಡವಾದಾಗ ಬೇಡ. ಬಿಡು ಅವರ ವಿಚಾರಾನ? ಏನೇ ಸಾತಕ್ಕ ಹೇಗಿದೀಯ? ಲಕ್ಷ್ಮಿ ಏನ್ಮಾಡ್ತಿದ್ದಾಳೆ?"

"ಕೂತ್ಕೋ ಬಾಳ ಅಪರೂಪವಾಗಿದೀಯ ಕಣ್ಣಿಗೂ ಬೀಳಲ್ಲ," ನೀನು.

"ಏನ್ಮಾಡ್ಲೀ ಮನೆಕೆಲಸ ಕಿತ್ತಾಡುವ ಮಕ್ಕಳು ಇರುತ್ತಲ್ಲ ಸಂಸಾರ ತಾಪತ್ರಯ ಮೀನಾಕ್ಷಿಯ ಮಾವ ಕಾಗದ ಬರೆದಿದಾರೆ ದೀಪಾವಳಿ ಹಬ್ಬ ಆಗ್ತಿದ್ದ ಹಾಗೇ ಮನೆ ತುಂಬಿಸಿಕೊಡಬೇಕಂತೆ. ಹೇಗಪ್ಪಾ ಎಲ್ಲಾ ನಡೆಯುತ್ತೆ ಅಂತ ದಿಗಿಲಾಗುತ್ತೆ."

"ದಿಗಿಲ್ಯಾಕೆ ? ಎಲ್ಲಾ ಸುಸೂತ್ರವಾಗಿ ನೆರವೇರುತ್ತೆ, ಭಯ ಯಾಕೆ ?"

"ಇಲ್ಲೇ ನಮ್ಮ ಮನೇಲೇ ಸಮಾರಂಭವನ್ನು ಇಟ್ಕೊಳ್ಳೊಣಾಂತ ಹೇಳ್ತಿದಾರೆ ನೀರಿಲ್ಲ, ದೀಪವಿಲ್ಲ, ಅವರೆಲ್ಲಾ ದೊಡ್ಡ ಊರಿನವರು, ಇಲಿ ಹೇಗೆ ಆಗುತ್ತೇ? ಆಡ್ಕೊಂಡು ನಗ್ತಾರೆ ಅಷ್ಟೇ."

"ಇದ್ನೆಲ್ಲಾ ಮುಂಚೇನೇ ಯೋಚಿಸ್ಬೇಕಾಗಿತ್ತು. ಪಾತು... ನಿನ್ನ ಗಂಡ ಸ್ವಲ್ಪ ಎಡವಟ್ಟು ಯಾರ ಮಾತನ್ನು ಕೇಳದ ಅವಿವೇಕಿ ಅವನು ನಿರ್ಧರಿಸಿ ಆಗಿದೆ ಅಂದ್ಮೇಲೆ ಅದನ್ನು ಬದಲಾಯಿಸುಕ್ಕೆ ಆಗಲ್ಲ, ದೇವರ ಮೇಲೆ ಭಾರ ಹಾಕು. ನಾವು ಇಲ್ಲೇ ಎದುರಿಗೇ ಇದೀವಿ. ಏನು ಸಹಾಯ ಬೇಕಾದ್ರೂ ಕೇಳು." ಅಲ್ಲಿಯೇ ಕುಳಿತಿದ್ದ ಗುಂಡಣ್ಣ ಹೇಳಿದ.

"ಸಮಯ ಅಂದ್ರೆ ತವರು ಮನೆಯವರನ್ನಲ್ಲದೇ ಇನ್ಯಾರನ್ನು ಕೇಳಲಿ? ಈಗ ಮನಸ್ಸಿಗೆ ಸಮಾಧಾನ ಆಯ್ತು. ನಾನು ಬರ್ಲಾ ?"

"ಊಟ ಮಾಡ್ಕೊಂಡು ಹೋಗಿ ಪಾರ್ವತಿ. ಅಡಿಗೆ ಆಗಿದೆ."

"ಮನೇಲಿ ಅಡಿಗೆ ಮಾಡಿಟ್ಟು ಬಂದಿದೀನಿ. ಮಿಕ್ಕರೆ ಸುಮ್ಮನೆ ಬೈತಾರೆ ಇನ್ನೆಂದಾದ್ರೂ ಬರ್ತೀನಿ."

"ಲಕ್ಷ್ಮಿ ಪಾತೂಗೆ ಕುಂಕುಮ ಕೊಡು... ಎನ್ನುತ್ತಾ ಗುಂಡಣ್ಣ ತನ್ನ ಜೇಬಿನಿಂದ ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಟ್ಟ, ಲಕ್ಷ್ಮಿ ಅವನನ್ನೇ ವಿಚಿತ್ರವಾಗಿ ನೋಡಿದಳು. ಅವಳ ಮನವನ್ನು ಓದಿದವನಂತೆ ನುಡಿದ." ಈಗ ಅವಳಿಗೆ ಹಣದ ಅಗತ್ಯವಿದೆ ಗೌರಿ ಗಣೇಶನ ಹಬ್ಬದ ಮಂಗಳ ದ್ರವ್ಯಕ್ಕೆ ಹೇಗೂ ಕೊಡ್ಬೇಕು. ಲಕ್ಷ್ಮಿ ತಟ್ಟೆಯಲ್ಲಿ ಅರಿಶಿನ ಕುಂಕುಮ, ತೆಂಗಿನಕಾಯಿ, ಬಾಳೆಹಣ್ಣುಗಳನ್ನಿಟ್ಟು, ಎಲೆ ಅಡಿಕೆಯೊಂದಿಗೆ ಇಪ್ಪತ್ತು ರೂಪಾಯಿಗಳನ್ನು ಇಟ್ಟುಕೊಟ್ಟಳು.

"ಸುಮ್ಸುನ್ನೆ ಇಷ್ಟಲ್ಲಾ ಈಗ್ಯಾಕೆ ? ಎಂದೂ ಕಾಣೆ.. ವ್ಯಂಗ್ಯ ಬೆರೆತ ಸಂತಸದೊಂದಿಗೆ ತೆಗೆದುಕೊಂಡಳು.

"ಗೌರಿ ಹಬ್ಬದ ಮಂಗಳದ್ರವ್ಯ ಕೊಡ್ತಿದಾನೆ. ಅವನಿಗೆ ಅನುಕೂಲ ಇದ್ದಾಗ ಕೊಡ್ತಾನೆ. ಅದಕ್ಕೆ ವ್ಯಂಗ್ಯ ಯಾಕೆ" ಸಾತಕ್ಕ ದಬಾಯಿಸಿದಳು ಪಾರ್ವತಿ ಪೆಚ್ಚಾದಳು ಮೀನಾಕ್ಷೀನೂ ಕಳಿಸಿಕೊಡು. ಹೊಸದಾಗಿ ಮದುವೆಯಾದವಳು ಅವಳಿಗೂ ಗೌರಿ ಹಬ್ಬದ ಮಂಗಳದ್ರವ್ಯಗಳನ್ನು ಕೊಟ್ಟು ಆಶೀರ್ವಾದ ಮಾಡೋಣ. ಕೆಲವೇ ತಿಂಗಳು

ಗಳಲ್ಲಿ ಗಂಡನ ಮನೆಗೆ ಹೊರಟು ಹೋಗ್ತಾಳೆ."

"ಆಯ್ತು ಕಳಿಸಿಕೊಡ್ತೀನಿ" ಪಾರ್ವತಿ ಎದ್ದಳು. ಕೆಲವೇ ನಿಮಿಷಗಳ ನಂತರ ಮೀನಾಕ್ಷಿ ಸಂಕೋಚದಿಂದ ಇವರ ಮನೆಗೆ ಬಂದಳು.

"ಏನೇ ಮೀನಾಕ್ಷಿ ? ಯಾಕೇ ಇಷ್ಟು ನಾಚ್ಕೆ ? ನಾಚ್ಕೆ ಲಜ್ಜೆ ಎಲ್ಲವನ್ನು ನಿನ್ನ ಗಂಡನ ಮನೆಗೆ ಇಟ್ಕೋ. ನಾವೇನು ನಿನಗೆ ಹೊಸಬರೇನೆ ! ಬಾ ಕೂತ್ಕೋ" ಲಕ್ಷ್ಮಿ ಆದರದಿಂದ ಕರೆದು ಕೂರಿಸಿದಳು.

"ಒಂದು ದೇವರ ನಾಮವನ್ನು ಹೇಳು ಕೇಳೋಣ. ಸಂಗೀತ ಮೇಷ್ಟ್ರಂತೂ ನಿನ್ನನ್ನ ತುಂಬಾ ಹೊಗಳುತ್ತಿದ್ರು."

"ಎಲ್ಲಾ ಮರೆತು ಹೋಗಿದೆ ದೊಡ್ಡಮ್ಮಾ."

"ಅದೇನೇ ಮದುವೆ ಆಗ್ತಿದ್ದ ಹಾಗೇ ಹಾಡು ಹಸೆ ಎಲ್ಲಾ ಮರೆತು ಹೋಯ್ತಾ? ನಾಚಿಕೆ ಗೇಡು, ಕ್ರಮೇಣ ನಮ್ಮೆಲ್ಲರನ್ನೂ ಮರೆತು ಬಿಡ್ತೀಯಾ ಹಾಗಾದ್ರೆ?" ಮೀನಾಕ್ಷಿಯ ಮುಖ ಕೆಂದಾವರೆ ಆಯಿತು.

"ಇಲ್ಲ ದೊಡ್ಡಮ್ಮಾ, ನಿಮ್ಮನ್ನೆಲ್ಲಾ..... ಈ ಹಳ್ಳಿಯನ್ನು ನಾನು ಮರೆಯೋಕೆ ಆಗುತ್ತಾ ?"

"ಅದೇನೋ, ನೀನೇ ಹೇಳ್ಬೇಕು ಅದಿರ್ಲಿ ನಿನ್ನ ಗಂಡನ ಹೆಸರೇನು ?"

"ನಂಗೊತ್ತಿಲ್ಲ" ನಾಚಿಕೆಯಿಂದ ಮುಖವನ್ನು ಮುಚ್ಚಿಕೊಂಡಳು."

"ನಂಗೊತ್ತಿಲ್ಲ ಇದೆಂಥಾ ಹೆಸರೇ ?" ಸಾತಕ್ಕ ಕೀಟಲೆ ಮಾಡಿದಳು

"ದೊಡ್ಡಮ್ಮಾ....." ಅವಳು ಮೂಗಿನಲ್ಲಿ ರಾಗ ಎಳೆದಳು

"ದೊಡ್ಡಮ್ಮಾ ಅಂತ ಅವನ್ಯಾಕೆ ಹೆಸರನ್ನಿಟ್ಟುಕೊಂಡ ಹೆಸರು ಚೂರೂ ಚೆನ್ನಾಗಿಲ್ಲ." ಸೆರಗಿನಿಂದ ಬಾಯನ್ನು ಮುಚ್ಚಿಕೊಂಡು ನಕ್ಕಳು.

"ಥೂ, ನೀವು ಹೀಗೆಲ್ಲಾ ಮಾತಾಡಿದ್ರೆ, ನಾನು ಎದ್ದು ಹೊರಟು ಹೋಗ್ತೀನಿ ಅಷ್ಟೇ."

"ಮತ್ತೆ ? ಸರಿಯಾಗಿ ಮಾತ್ನಾಡು, ನಿನ್ನ ಗಂಡನ ಮನೇಲಿ, ಮೈದುನ ನಾದಿನಿಯರು ಹೀಗೇ ಕೀಟಲೆ ಮಾಡ್ತಾರೆ. ಆಗ ಎಲ್ಲಿಗೆ ಹೋಗ್ತೀಯ?" ಆ ಮಾತಿಗೆ ಮೀನಾಕ್ಷಿ ಉತ್ತರಿಸದೇ, ಮೌನವಾಗಿ ಆಳಲಾರಂಭಿಸಿದಳು. ಸಾತಕ್ಕನಿಗೆ ಕೆಡುಕೆನಿಸಿತು. ತನ್ನ ತಮಾಷೆ ಹೆಚ್ಚಾಯಿತೆನಿಸಿತು.

"ಅಯ್ಯೋ.... ಹುಚ್ಚು ಹುಡುಗಿ ಅಳೋದ್ಯಾಕೆ ? ಸುಮ್ಮನೇ ತಮಾಷೆ ಮಾಡ್ದೆ. ನಿನ್ನ ಗಂಡ ನಿನ್ನ ಕಡೆಗಿದ್ದರೆ, ನಿನ್ನನ್ನ ಯಾರೂ ಸತಾಯಿಸುಲ್ಲ."

ಮೀನಾಕ್ಷಿ ಕಣ್ಣುಗಳನ್ನು ಒರೆಸಿಕೊಂಡಳು. "ನಂಗೆ ಅಮ್ಮಂದೇ ಭಾಳ ಚಿಂತೆ ದೊಡ್ಡಮ್ಮ ಅಪ್ಪನ ಬೈಯಾಟ, ದತ್ತನ ಮೊಂಡಾಟ, ಮಕ್ಕಳ ಸೇವೆ ಮನೆ ಕೆಲಸಗಳು

ಸತ್ತು ಹೋಗ್ತಾಳೆ ಅಷ್ಟೇ."

"ಥೂ ಬಿಡ್ತು ಅನ್ನು ನಿಮ್ಮಮ್ಮಂಗೆ ಅದೆಲ್ಲಾ ಅಭ್ಯಾಸವಾಗಿ ಹೋಗಿದೆ. ಅಲ್ದೇ ನಾವುಗಳೂ ಇಲ್ಲೇ ಎದುರಿಗೇ ಇರ್ತೀವಿ. ದಿನಾಲು ವಿಚಾರಿಸಿಕೊಳ್ತೀವಿ. ನೀನು ಇದನ್ನೆಲ್ಲಾ ಇಲ್ಲೇ ಬಿಟ್ಟಿಡು. ಗಂಡನ ಜೊತೆ ನಗುನಗ್ತಾ ಚೆನ್ನಾಗಿರ್ಬೇಕು. ನಮಗೆಲ್ಲಾ ಪತ್ರ ಬರೆದು ನಿಮ್ಮಗಳ ಯೋಗಕ್ಷೇಮವನ್ನು ತಿಳಿಸ್ತಿರಬೇಕು. ಮೀನಾಕ್ಷಿ 'ಹೂಂ' ಎಂದು ತಲೆಯಾಡಿಸಿದಳು. ಸಕ್ಕರೆ ಹಾಕಿದ, ಚೆನ್ನಾಗಿ ಕಾಯಿಸಿದ ಹಸು ವಿನ ಹಾಲನ್ನು ತಂದಿತ್ತಳು ಲಕ್ಷ್ಮಿ.

"ಹಾಲನ್ನು ಕುಡಿದು ಬಿಡು ಅರಿಶಿನ ಕುಂಕುಮ ಕೊಡ್ತೀನಿ. ನಿಮ್ಮಪ್ಪ ಯಾವಾಗ ಕೂಗು ಹಾಕ್ತಾರೋ"

"ಅತ್ತೆ ನಂಗೆ ಒಂದೆರಡು ಉರುಟಣೆಯ ಹಾಡುಗಳನ್ನು ಹೇಳ್ಕೊಡಿ"

"ನಂಗೆ ಎಲ್ಲಾ ಮರೆತು ಹೋಗಿದೆ ಕಣೇ ಮೀನಾಕ್ಷಿ"

"ಜ್ಞಾಪಿಸಿಕೊಂಡು ಹೇಳಿಕೊಡ್ತಾಳೆ. ಹಬ್ಬ ಕಳೆಯಿತ್ತು ಬಾ, ನಿಂಗೇನು ನೀನು ಜಾಣೆ ಒಂದೇ ಸಲಕ್ಕೆ ಕಲಿತು ಬಿಡ್ತೀಯ. ಲಕ್ಷ್ಮೀ ಇಲ್ಲ ಅನ್ಬೇಡ ನಿಂಗೆ ಬರೋದನ್ನ ಹೇಳಿ ಕೊಡ್ಬೇಕು. ಹಾಗೇ ಶಾಂತಂಗೂ ಹೇಳಿಕೊಡು ಅವಳೂ ಕಲಿತಿರಲಿ."

"ನಂಗೆ ಬೇಡಪ್ಪಾ ನಾನು ಕಲಿಯುಲ್ಲ ಅದೆಲ್ಲಾ ಅಮ್ಮಂಗೇ ಇರ್ಲಿ" ಅದುವರೆಗೂ ಸುಮ್ಮನಿದ್ದ ಶಾಂತ, ತಕ್ಷಣವೇ ನುಡಿದಳು ಮೀನಾಕ್ಷಿ ನಕ್ಕಳು.

"ಸುಮ್ನೆ ನೀನೂ ಕಲಿತ್ಕೋ.... ನನ್ನ ಜೊತೆಗೆ ನೀನೂ ಹೇಳುವಂತೆ ಚೆನ್ನಾಗಿರುತ್ತೆ."

"ನೀನ್ಯಾಕೆ ಸಂಗೀತಾನ ಕಲಿಯೋದು ಬಿಟ್ಟಿಟ್ಟೆ ?"

"ಮದುವೆಯಾದ್ಮೇಲೆ ಇನ್ಯಾಕೆ ಸಂಗೀತ ಅಂತ ಅಪ್ಪ ಬಿಡಿಸಿಬಿಟ್ರು, ಹೋಗ್ಲಿ ನನ್ನ ವಿಷಯ ಬಿಡು ನೀನು ಮಾತ್ರ ಅರ್ಧಕ್ಕೇ ನಿಲ್ಲಿಸಬೇಡ. ನಿನ್ನ ಗಂಡನ ಮನೆ ಯವರು ಹೊರಗಿನವರಲ್ಲ, ನಂಗಾದ್ರೆ ಹಾಗಲ್ಲ." ಮೀನಾಕ್ಷಿ ಬೇಜಾರು ಮಾಡಿಕೊಂಡು ನುಡಿದಳು.

"ನಮ್ಮ ವೆಂಕಟೇಶ ಸ್ವಲ್ಪ ದೊಡ್ಡೋನಾಗಿದ್ದಿದ್ರೆ, ಲಕ್ಷ್ಮೀನ ಒಪ್ಪಿಸಿ ನಿನ್ನನ್ನ ಈ ಮನೆಗೆ ಸೊಸೆಯಾಗಿ ಬಾ ಅಂತ ಹೇಳ್ತಿದ್ದೆ. ಏನ್ಮಾಡೋದು ? ಇವನಿಗೋ ಇನ್ನು ಹಲ್ಲುಗಳೇ ಸರಿಯಾಗಿ ಹುಟ್ಟಿಲ್ಲ." ಗೋಡೆಯ ಬಳಿ ಕುಳಿತು ಆಟವಾಡುತ್ತಿದ್ದವ ನನ್ನು ತೋರಿ ನಕ್ಕಳು ಎಲ್ಲರೂ ಕಿಸ ಕಿಸ ನಕ್ಕರು.

"ಪರವಾಗಿಲ್ಲ ದೊಡ್ಡಮ್ಮಾ ನೀವೂ ಚೆನ್ನಾಗಿ ತಮಾಷೆ ಮಾಡ್ತೀರಿ."

"ಮತ್ತೀನೇನು ಮಾಡ್ಲೀ ? ನನಗೂ ದಿನಗಳು ಕಳೆಯಬೇಕಲ್ಲ." ಸಾತಕ್ಕ ಅರೆ ವೈರಾಗ್ಯದಿಂದ ನುಡಿದಳು ಲಕ್ಷ್ಮಿ ಮೀನಾಕ್ಷಿಗೆ ರವಿಕೆ ಖಣದೊಂದಿಗೆ ಸೋಬಲಕ್ಕಿ

ಯನ್ನಿಟ್ಟು ಮಡಿಲು ತುಂಬಿದಳು. ಒಂದು ಬೆಳ್ಳಿಯ ಬಟ್ಟಲನ್ನು ಉಡುಗೊರೆಯನ್ನಾಗಿ ಕೊಟ್ಟಳು ಮೀನಾಕ್ಷಿ ಹಿರಿಯರಿಗೆ ನಮಸ್ಕರಿಸಿದಳು.

"ಮುತ್ತೈದೆ ಸಾವಿತ್ರಿಯಾಗಿ, ಹತ್ತು ಮಕ್ಕಳ ತಾಯಿಯಾಗಿ ಸುಖವಾಗಿರು ಸಾತಕ್ಕ ಬಾಯಿ ತುಂಬಾ ಹರಿಸಿದಳು. ಮೀನಾಕ್ಷಿ ನಾಚಿದಳು ಮತ್ತೊಮ್ಮೆ ಎಲ್ಲರಿಗೂ ಹೇಳಿ ಹೊರಟಳು.

* * *

ನಿಷೇಕ 'ಪ್ರಸ' ದ ಶಾಸ್ತ್ರವನ್ನು ಹಳ್ಳಿಯಲ್ಲೇ ನಡೆಸುವುದೆಂದು ನಿರ್ಧರಿಸಿ ಆಗಿತ್ತು. ಮುಹೂರ್ತವನ್ನು ಗೊತ್ತು ಮಾಡಿ, ತಯಾರಿಗಳನ್ನು ನಡೆಸಿದ್ದರು. ಪಾರ್ವತಿ, ಸಾತಕ್ಕ ಲಕ್ಷ್ಮಿಯರ ಸಹಕಾರ ಸಹಾಯದೊಂದಿಗೆ, ಉಂಡೆ ಚಕ್ಕುಲಿ ಇತ್ಯಾದಿ ತಿಂಡಿಗಳನ್ನು ತಯಾರಿಸಿಟ್ಟಿದ್ದಾಗಿತ್ತು. ತಮ್ಮ ಕೈಲಾದ ಮಟ್ಟಿಗೆ ಖರ್ಚು ಮಾಡಿ ಜವುಳಿ ಅಂಗಡಿಯಿಂದ ಬೀಗರ ಮನೆಯವರಿಗೆ ಸೀರೆಗಳನ್ನು, ಪಂಚೆಗಳನ್ನು ತಂದಿದ್ದರು. ಅಳಿಯನಿಗೆ ಒಂದು ಚಿನ್ನದ ಉಂಗುರವನ್ನು ಸೂಟಿನ ಬಟ್ಟೆಗಳನ್ನು ಮಗಳಿಗೆ ಒಂದು ಉತ್ತಮ ರೇಷ್ಮೆಸೀರೆಯನ್ನು ಕೊಂಡು ತಂದಿದ್ದರು. ಪೇಟೆಯಿಂದ ಅಡಿಗೆಯವರನ್ನು ಕರೆಸಿದ್ದರು. ಔತಣದ ಅಡಿಗೆಗೆ ಬೇಕಾದ ಸಕಲ ಸಮಸ್ತ ಸಾಮಾನು ಗಳೂ ಮನೆಗೆ ಬಂದಿದ್ದವು. ಲಾಡು ಊಟವನ್ನು ಹಾಕಿಸಲು, ಬಂದವರಿಗೆ ತಾಂಬೂಲ ದೊಂದಿಗೆ ಕೊಡಲು ಸಿದ್ಧವಾಗುತ್ತಿದ್ದವು.

ಶ್ರೀಕಂಠಯ್ಯನ ಬೀಗರು, ತಮ್ಮ ಕುಟುಂಬದವರೊಂದಿಗೆ, ಕೆಲವು ಆಪ್ತ ರೊಂದಿಗೆ ಹಿಂದಿನ ದಿನವೇ ಬಂದಿಳಿದರು. ದೊಡ್ಡ ಪಟ್ಟಣದಿಂದ ಬಂದ ಕೆಲವರಿಗೆ ಹಳ್ಳಿಯ ವಾತಾವರಣ ಬಹಳ ಹಿಡಿಸಿತ್ತು. ಪರಿಸರ ಸೊಗಸಾಗಿ ಕಂಡಿತ್ತು. ಹುಲ್ಲು, ಪೊದೆ, ಮರಗಿಡಗಳು, ಹೂವು ಹಣ್ಣುಗಳು ಎಲ್ಲವೂ ರಮಣೀಯವಾಗಿ ಕಂಡಿದ್ದವು. ಅವರ ಪೈಕಿ ಒಂದಿಬ್ಬರು ಬೊಂಬಾಯಿಯಿಂದ ಬಂದವರು ಅವರುಗಳಂತೂ ದನ ಕರುಗಳನ್ನು ದೂರದಿಂದಲೇ ನೋಡಿ ನೋಡಿ, ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ಆನಂದಿಸುತ್ತಿದ್ದರು. ಅವರುಗಳಿಗೆಲ್ಲಾ ಹಳ್ಳಿ ಸ್ವರ್ಗದಂತೆ ಮನೋಹರವಾಗಿತ್ತು.

ಆ ರಾತ್ರಿ ಶ್ರೀಕಂಠನ ಮನೆಯಲ್ಲಿ ಬೀಗರಿಗೆ ಭಾರಿ ಭೋಜನ ಶಾಸ್ತ್ರಿಯ ಮನೆಯವರೆಲ್ಲರಿಗೂ ಅವರ ಮನೆಯಲ್ಲೇ ಊಟವಾಗಿತ್ತು. ಊಟದ ನಂತರ ಕೆಲವರು, ಶಾಸ್ತ್ರಿಯ ಮನೆಗೆ ಮಲಗಲೆಂದು ಬಂದರು. ಲಕ್ಷ್ಮಿ ಅವರುಗಳಿಗೆ ಹಾಸಿಗೆ, ದಿಂಬು ಹೊದಿಕೆಗಳನ್ನು ಹೊಂದಿಸಿ ಕೊಟ್ಟಳು.

ಬಂದವರೆಲ್ಲಾ ಗಂಡಸರೇ, ಹರಟುತ್ತಾ, ಇಸ್ಪೀಟು ಆಟ ಆಡುತ್ತಾ ಮಧ್ಯ ರಾತ್ರಿಯವರೆಗೂ ಕಾಲ ಕಳೆದು ನಂತರ ನಿದ್ರಿಸಿದರು. ಚಳಿಗಾಲವಾದುದರಿಂದ ಹಾಸಿಗೆ, ಹೊದಿಕೆಗಳನ್ನು ಹೊಂದಿಸುವುದು ಕಷ್ಟವೇ ಆಗಿತ್ತು. ಬೆಳಿಗ್ಗೆ ಇವರ ಮನೆ

ಯಲ್ಲೇ ಮೊದಲ ಕಾಫಿ, ನಂತರ ಬಿಸಿನೀರಿನ ಸ್ನಾನ. ಮತ್ತೊಮ್ಮೆ ಕಾಫಿಯನ್ನು ಕುಡಿದು, ಹೂತೋಟವನ್ನು ನೋಡಿ, ಎಲ್ಲರೂ ಶ್ರೀಕಂಠಯ್ಯನ ಮನೆಗೆ ನಡೆದರು. ನಾಗಪ್ಪಭಟ್ಟರು ತಮ್ಮ ಊರ ಕಡೆಯಿಂದ ಒಂದಿಬ್ಬರು ಪುರೋಹಿತರನ್ನು ಕರೆಸಿದ್ದರು. ನಾಗಪ್ಪಭಟ್ಟರ ಮನೆಯಲ್ಲೇ ಹೋಮಹವನಗಳನ್ನು ನಡೆಸಲು ಸಿದ್ಧತೆಗಳನ್ನು ಮಾಡಲಾಗಿತ್ತು. ಶ್ರೀಕಂಠಯ್ಯನ ಮನೆಯಲ್ಲಿ ಬೆಳಗಿನ ಉಪಹಾರದ ನಂತರ ಎಲ್ಲರೂ ನಾಗಪ್ಪಭಟ್ಟರ ಮನೆಗೆ ನಡೆದರು. ಶಾಸ್ತ್ರೀಯ ಮನೆಗೆ ಎಲ್ಲರಿಗೂ ಆಗುವಷ್ಟು ಉಪಹಾರವನ್ನು ಕಳಸಿಕೊಟ್ಟಿದ್ದರು.

"ಹತ್ತು ಗಂಟೆಗೆ, ಶಾಸ್ತ್ರಗಳು ಪ್ರಾರಂಭವಾಗುತ್ತೆ. ಬೇಗ ಬೇಗ ಸ್ನಾನ ಮಾಡಿ ಹೊರಡಿ ಹತ್ತಿರದಲ್ಲೇ ಇದ್ದುಕೊಂಡು, ತಡವಾಗಿ ಹೋದರೆ ಏನು ಚೆನ್ನ!" ಶಾಸ್ತ್ರಿ ಅವಸರಿಸಿದ.

"ನಾನು ಬರಲ್ಲ ನಾನು ಅಲ್ಲಿ ಬಂದು ಏನು ಮಾಡಬೇಕಾಗಿದೆ. ಅಲ್ಲದೇ ಮಡಿಯೂ ಸರಿ ಹೋಗುಲ್ಲ" ಸಾವಿತ್ರಿ ಎಂದಳು.

"ಭಾಗಿರಥಮ್ಮನೂ ಬರಬಹುದು ಮಡೀಲಿ ಅಡಿಗೆ ಮಾಡಿಸ್ತಾರಂತೆ. ಸುಮ್ಮನೇ ನೀನು ಏನೋ ನೆವ ಹೇಳ್ಬೇಡ."

"ಯಾರೇ ಬರಲಿ ಬಿಡಲಿ, ನಾನು ಬರಲ್ಲ ಅಂದ್ರೆ ಬರುಲ್ಲ."

"ಹೋಗ್ಲೀ ಬಿಡಿ ಸುಮ್ನೇ ಅವರನ್ಯಾಕೆ ಬಲವಂತ ಮಾಡ್ತೀರಿ ?"

"ನಂಗೂ ಬರುಕ್ಕೆ ಬೇಜಾರು ಅತ್ತೆ ಜೊತೇಲಿ ನಾನೂ ಮನೇಲೇ ಇರ್ತೀನಿ" ಶಾಂತ ಎಂದಳು.

"ಚಿಕ್ಕೋಳು ಪುಟ್ಟೋಳು ಹೊಸಾ ಸೀರೆ ಉಟ್ಕೊಂಡು ಗರಾಗರಿಕೆಯಾಗಿ ಓಡಾಡೋದು ಬಿಟ್ಟು ಮನೇಲಿರ್ತಾಳಂತೆ. ಸುಮ್ಮನೇ ಹೊರಡು." ಸಾತಕ್ಕ ಗದರಿದಳು.

"ಏನತ್ತೆ, ನನ್ನನ್ಯಾಕೆ ಬಲವಂತ ಮಾಡ್ತೀರಿ ?"

"ಸರಿ ಸರಿ ನಾ ಬರುಲ್ಲ ತಾ ಬರುಲ್ಲ ಅಂತ ಕಸಿವಿಸಿ ಹತ್ಕೊಂಡು ಮನೇಲೆ ಕೂತಿರಿ ಕಂಠಿ ಬಂದು ಗಲಾಟೆ ಎಬ್ಬಿಸ್ತಾನೆ. ನಾ ಹೋಗ್ತೀನಿ" ಗರಿಗರಿಯಾದ ಸಂಕಲ್ಕೇ ಪಂಚೆ ಉಟ್ಟು, ಹೊಸಾ ಷರಟನ್ನು ಧರಿಸಿ, ಮೇಲೆ ಶಲ್ಯವನ್ನು ಹೊದ್ದು ಶಾಸ್ತ್ರಿ ಹೊರಟ.

"ನೋಡಿದ್ರಾ ಅತ್ಗೆ ? ತಂಗಿಯ ಮನೆಗೆ ಹೇಗೆ ಠಾಕು ಠೀಕಾಗಿ ಹೊರಟು ಬಿಟ್ರು ? ಯಾವ ಸಮಾರಂಭಕ್ಕೂ ಇಷ್ಟು ಸಂಭ್ರಮ ಪಟ್ಟಿದ್ದು ಕಾಣೆ. ನಾನು" ಲಕ್ಷ್ಮಿ ಮೂಗಿನ ಮೇಲೆ ಬೆರಳನ್ನಿಟ್ಟಳು.

"ಯಾವಾಗ ನೋಡಿದ್ರೂ, ಎಲೆ ಅಡಿಕೆ ರಸದ ಕಲೆಯ ಷರಟು ಪಂಚೆ

ಪಕ್ಕಾ ರೈತನ ಥರ ಕಾಣ್ತಿದ್ದ. ಇವತ್ತು ನೋಡು ಅವನೇ ಮದುಮಗನಂತೆ ಕಾಣ್ತಿದಾನೆ." ಸಾತಕ್ಕನೂ ಮೆಚ್ಚುಗೆ ಸೂಸಿದಳು.

"ಪದ್ಮಿನೀ, ರಾಗಿಣೀ ಬನ್ರೇ.... ತಲೆ ಬಾಚ್ತೀನಿ. ಸ್ನಾನ ಮಾಡಿದ್ಮೇಲೆ ನಾನು ಮತ್ತೇ ಮೈಲಿಗೆ ಮುಟ್ಟುಕ್ಕಾಗುಲ್ಲ," ಇಬ್ಬರೂ ಓಡಿ ಬಂದು ತೊಡೆಯ ಮೇಲೆ ಹೇರಿಕೊಂಡರು. "ಮೊದಲು ಚಿಕ್ಕೋರು ಯಾರೋ ಅವರಿಗೆ ಬಾಚ್ತೀನಿ." ಪದ್ಮಿನಿ ಅತ್ತ ಸರಿದಳು. ರಾಗಿಣಿ ಅವಳ ಮುಂದೆ ಕುಳಿತಳು. ಸಿಕ್ಕನ್ನು ಬಿಡಿಸಿ ಮಧ್ಯಕ್ಕೆ ಬೈತಲೆ ತೆಗೆದು, ಕೂದಲನ್ನು ಇಬ್ಭಾಗ ಮಾಡಿ ಎರಡು ಜಡೆಯನ್ನು ಹೆಣೆದು ರಿಬ್ಬನನ್ನು ಸೇರಿಸಿ ಬಿಗಿಯಾಗಿ ಕಟ್ಟಿ ಮುಂದಲೆಯನ್ನು ತೀಡಿದಳು.

"ಈಗ ಪದ್ಮಿನಿಯ ಸರದಿ. "ಅತ್ತೇ ನೀವು ತುಂಬಾ ಬಿಗಿಯಾಗಿ ಜಡೆ ಹಾಕ್ತೀರಿ ಸ್ವಲ್ಪ ಅಳ್ಳಕವಾಗಿ ಹಾಕಿ...."

"ಸುಮ್ನೇ ಕೂತ್ಕೋ ನಂಗೆಲ್ಲ ಗೊತ್ತು. ಬಿಗಿಯಾಗಿದ್ರೆ ಬೇಗ ಬಿಚ್ಚಿ ಹೋಗುಲ್ಲ. ಕೂದಲೂ ಕೆದರುಲ್ಲ ನಿಮ್ಮ ಕುಣಿತದಲ್ಲಿ, ಜಡೆ ಅಳ್ಳಕವಾಗಿದ್ರೆ, ನಿಮಿಷದಲ್ಲಿ ಕೂದಲು ಪೊರಕೆ ಥರ ಆಗುತ್ತೆ. ನಿಂಗೆ ಗೊತ್ತಾಗುಲ್ಲ ಎನ್ನುತ್ತಾ ತೀಡಿ ತೀಡಿ ಬಾಚಿ, ಬಿಗಿಯಾಗಿ ಎರಡು ಜಡೆಗಳನ್ನು ಹೆಣೆದು ರಿಬ್ಬನ್‌ಗಳನ್ನು ಬಿಗಿದಳು. ನೀರನ್ನು ಹಚ್ಚಿ ಮುಂದಲೆಯನ್ನು ತೀಡಿ ಬಾಚಿದಳು.

"ಶಾಂತಾ....... ಲಲಿತಾ....ಬನ್ರೇ ಎಲ್ಲಿದೀರಿ ?"

"ಅತ್ತೇ, ನಂಗೆ ಒಂದು ಜಡೆ ಹಾಕಿ" ಲಲಿತ ಕೂರುವ ಮೊದಲೇ ತನ್ನ ಆಸೆಯನ್ನು ಪ್ರಕಟಿಸಿದಳು.

"ಒಂದು ಜಡೆ ಹಾಕ್ಕೊಂಡ್ರೆ ದೊಡ್ಡೋಳ ಥರ ಕಾಣ್ತೀಯ ನಿನ್ನ ಕೂದಲು ಒತ್ತಾಗಿದೆ. ಎರಡು ಜಡೆ ಸರಿಯಾಗಿರುತ್ತೆ. ಸೀರೆ ಉಡೋರಿಗೆ ಒಂದು ಜಡೆ ಒಪ್ಪುತ್ತೆ." ಲಲಿತ ಸುಮ್ಮನಾದಳು.

"ಅತ್ತೇ ನಾನೇ ಜಡೆ ಹಾಕ್ಕೋತೀನಿ." ನೀವು ಸ್ನಾನಕ್ಕೆ ಹೋಗಿ ಕನ್ನಡಿಯ ಮುಂದೆ ನಿಂತ ಶಾಂತ ನುಡಿದಳು

"ಅಹಾ....... ಸೊಗಸುಗಾತಿ, ನಿನಗೆ ಈಗ್ಲೇ ಜಂಭ ಬಂದಂತಿದೆ ಶಾಂತ ಉತ್ತರಿಸದೇ ಮುಂಗುರುಗಳನ್ನು ತೀಡಿಕೊಂಡು ಸರಿಮಾಡಿಕೊಂಡಳು." ಎಲ್ಲರೂ ಸಿದ್ಧರಾಗಿ, ಸಮಾರಂಭಕ್ಕೆ ಹೊರಟರು.

"ವೈಕುಂಠ ಇಲ್ಲೇ ಮುಂಬಾಗಿಲ್ನಲ್ಲೇ ಕೂತಿರ್ತಾನೆ. ನಿಮಗೆ ಏನಾದ್ರೂ, ಬೇಕಾದ್ರೆ ಅವನ್ಹತ್ರ ಹೇಳಿ ಕಳ್ಸಿ." ಲಕ್ಷ್ಮಿ ನುಡಿದು ಮಕ್ಕಳೊಂದಿಗೆ ಹೊರಟಳು.

ಬಿಗುಮಾನವನ್ನು ಬಿಟ್ಟು ವೆಂಕಟಾಚಲಯ್ಯ ಪತ್ನೀ ಸಮೇತನಾಗಿ ಸಮಾರಂಭಕ್ಕೆ ಆಗಮಿಸಿದ. ಲಾಜಾಹೋಮ, ಗೃಹಪ್ರವೇಶದ ಕಲಾಪಗಳು ಸಾಂಗವಾಗಿ

ನೆರವೇರಿದವು. ಮೀನಾಕ್ಷಿ ತಾನು ಕಲಿತ ಉರುಟಣೆಯ ಹಾಡುಗಳನ್ನು ಹಾಡಿ ಎಲ್ಲರನ್ನು ಮುದಗೊಳಿಸಿದಳು. ಮನೆ ತುಂಬಿಸಿಕೊಡುವಾಗ ಬಿಡದಿ ಮನೆಯ ಬಾಗಿಲಲ್ಲಿ ಹೆಂಗೆಳೆಯರು ಕಿಸಿಕಿಸಿ ನಗುತ್ತಾ ನಿಂತರು. ಅಡ್ಡಗಟ್ಟಿ ನಿಂತವರ ಮಧ್ಯೆ ಇದ್ದ ತಂಗಿ ಅಣ್ಣನ ಎದುರಿಗೆ ಬಂದಳು.

"ಅತ್ತಿಗೆಯ ಹೆಸರನ್ನು ಹೇಳಿದರೆ ಮಾತ್ರ ನಿಮ್ಮನ್ನು ಒಳಕ್ಕೆ ಹೋಗೋಕೆ ಬಿಡ್ತೀವಿ."

"ಮೀನಿನಂತೆ ಕಣ್ಣುಳ್ಳುವಳು ನನ್ನ ಮುದ್ದಿನಾ ಮಡದಿಯಾಗಿ ಬಂದವಳು ಇವಳು ನನ್ನ ಪ್ರೀತಿಯ ಮೀನಾಕ್ಷಿ." ಎನ್ನುತ್ತಾ ಅವಳ ಭುಜವನ್ನು ಬಳಸಿದ. ಮೀನಾಕ್ಷಿ ನಾಚಿ ಕತ್ತನ್ನು ಬಗ್ಗಿಸಿದಳು. ಮುಖ ಕೆಂದುಲಾಬಿಯಾಗಿತ್ತು.

"ಅತ್ಗೇ.... ಈಗ ನೀವು ಅಣ್ಣನ ಹೆಸರನ್ನು ಹೇಳಲೆಬೇಕು." ಮೀನಾಕ್ಷಿ ತಲೆಯನ್ನು ಎತ್ತದೆ ಉಂಗುಷ್ಠದಿಂದ ನೆಲವನ್ನು ಉಜ್ಜತೊಡಗಿದಳು.

"ಬೇಗ ಹೇಳಿಬಿಡು, ನಿಂತೂ ನಿಂತೂ ಕಾಲ್ಗಳು ನೋಯ್ತಿವೆ." ಹೆಂಡತಿಯ ಕಿವಿಯಲ್ಲಿ ಉಸುರಿದ... ಮದುಮಗ.

"ಅದೇನದು ಗುಟ್ಟು ? ನಂಗೂ ಹೇಳೋ?" ಎಲ್ಲರೂ ನಕ್ಕರು. ಅವನು ತಂಗಿಯ ಕೆನ್ನೆಯನ್ನು ಹಿಂಡಿದ. ಅವಳು 'ಹ್ಹಾಂ' ಎಂದಳು ಮೀನಾಕ್ಷಿ ತಲೆ ಎತ್ತಿದಳು ನಾದಿನಿ ನಕ್ಕಳು

"ಮಡಿಕೇರಿಯಲ್ಲಿ ಇರುವವನು ; ಬಿಸಿಲಲ್ಲಿ ಕರಗುವವನು ಈ ಮಂಜು ನಾಥನೇ ನನ್ನ ಪತಿಯೆಂದು ನಾ ಹೇಳಬೇಕೇನು?" ಪ್ರಾಸಬದ್ಧವಾಗಿ ಇದಿಷ್ಟನ್ನು ಹೇಳುವಷ್ಟರಲ್ಲಿ ಮೀನಾಕ್ಷಿ ಸುಸ್ತಾಗಿದ್ದಳು. ಎಲ್ಲರೂ 'ಹೋ' ಎಂದರು.

"ಸಾಕು ಸಾಕು ಇನ್ನು ಸತಾಯಿಸ್ಬೇಡಿ ಹೋಮದ ಹೊಗೆಯನ್ನು ಕುಡಿದು, ಗಂಟಲು ಒಣಗಿದೆ. ಇಬ್ಬರಿಗೂ ಹಾಲನ್ನು ತಂದಿದೀನಿ ಹಿರಿಯ ಮುತ್ತೈದೆ ಒಬ್ಬಳು ಅವಸರಿಸಿದಳು. ಎಲ್ಲರೂ ಅತ್ತಸರಿದು ಜಾಗವನ್ನು ಬಿಟ್ಟರು. ನವದಂಪತಿಗಳು ಒಳಗೆ ಬಂದು ದೇವರ ಮುಂದೆ ಹಾಕಿದ್ದ ಹಸೆಮಣೆಯ ಮೇಲೆ ಕುಳಿತರು. ಹಾಲನ್ನು ಕುಡಿದರು.

"ಲಕ್ಷ್ಮಿ ಹೆಣ್ಣನ್ನು ಒಪ್ಪಿಸಿ ಕೊಡುವ ಹಾಡನ್ನು ಹೇಳೇ.... ಯಾರೋ ಹೇಳಿದರು ಲಕ್ಷ್ಮಿ ಹಾಡನ್ನು ಪ್ರಾರಂಭಿಸಿದಳು. ಪಾರ್ವತಿ ಮಗಳನ್ನು ಒಪ್ಪಿಸಿ ಕೊಡುವಾಗ ಬಿಕ್ಕಿ ಬಿಕ್ಕಿ ಅತ್ತಳು. ಅವಳ ಜೊತೆಗೆ ಕೆಲವು ಹೆಂಗಸರು ಸಹ ಅಳುತ್ತಾ ಕಣ್ಣೀರನ್ನು ಒರೆಸಿಕೊಂಡರು.

"ಸಾಕು ಸಾಕು ಇಲ್ಲಿ ಮಳೆಯ ನೀರೇ ಬೇಕಾದಷ್ಟು ನಿಂತಿದೆ. ಅದಕ್ಕೆ ನಿಮ್ಮ ಕಣ್ಣೀರವನ್ನು ಸೇರಿಸಬೇಡಿ ಯಾರೋ ಹಾಸ್ಯದ ಚಟಾಕಿಯನ್ನು ಹಾರಿಸಿದರು. ಆ

ಸಮಯದಲ್ಲೂ ಕಣ್ಣೊರೆಸಿಕೊಂಡು ಮೆಲುವಾಗಿ ನಕ್ಕರು. ಲಕ್ಷ್ಮಿ ವಧೂವರರವನ್ನು ಹಸೆಗೆ ಕರೆದ ಹಾಡುಗಳನ್ನೂ ಉರುಟಣೆಯ ಹಾಡುಗಳನ್ನೂ ಆರತಿ ಎತ್ತಿದ ಹಾಡನ್ನು ಹೇಳಿದಳು. ಹಿರಿಯ ಮುತ್ತೈದೆಯರು ನವದಂಪತಿಗಳಿಗೆ ಆರತಿಯನ್ನೆತ್ತಿ, ರಕ್ಷೆಯನ್ನಿಟ್ಟು ಆಶೀರ್ವದಿಸಿದರು. ಉಡುಗೊರೆಗಳನ್ನು ತಂದಿದ್ದವರು, ಶುಭವನ್ನು ಹಾರೈಸಿ ಉಡುಗೊರೆಗಳನ್ನು ಕೊಟ್ಟರು ಆಹ್ವಾನಿತರಿಗೆ, ದಕ್ಷಿಣೆಯೊಂದಿಗೆ ಫಲ ತಾಂಬೂಲಗಳನ್ನು ಕೊಟ್ಟರು. ನಂತರ ಎಲ್ಲರೂ ಭೋಜನಕ್ಕೆ ಎದ್ದರು. ಒಬ್ಬರಿಗೊಬ್ಬರು ಉಪಚಾರವನ್ನು ಹೇಳಿಕೊಂಡು, ಬಲವಂತ ಮಾಡುತ್ತಾ ಭಕ್ಷ್ಯಗಳನ್ನು ಹಾಕಿಸಿಕೊಂಡು ಆನಂದದಿಂದ ಸವಿಯಾದ ಸಹಿಊಟವನ್ನು ಮಾಡಿದರು.

"ನವದಂಪತಿಗಳಿಗೆ ಭೂಮದ ಎಲೆಗಳನ್ನು ಹಾಕಿ, ಕಾಲು ದೀಪಗಳನ್ನು ಹಚ್ಚಿಟ್ಟು, ಎಲೆಯ ಮುಂದೆ ರಂಗೋಲಿಯ ಚಿತ್ತಾರವನ್ನು ಬಿಡಿಸಿ, ಉಂಡೆ ಚಕ್ಕುಲಿ ಮುಂತಾದ ಬಗೆ ಬಗೆಯ ತಿಂಡಿಗಳನ್ನು ಭಕ್ಷ್ಯಗಳನ್ನು ಬಡಿಸಿದರು. ಮಂಜುನಾಥ ತನ್ನ ಮಡದಿಗೆ, ಎಂಜಲನ್ನು ತಿನ್ನಿಸುವ ಉತ್ಸಾಹವನ್ನು ತೋರಿದ. ಆದರೆ ಮೀನಾಕ್ಷಿ ತಲೆಯನ್ನು ತಗ್ಗಿಸಿ ಕೂತಿದ್ದಳು. ಗಂಡಿನ ಕಡೆಯವರೂ, ಹೆಣ್ಣಿನ ಕಡೆಯವರೂ, ಸ್ಪರ್ಧೆಯನ್ನು ನೋಡುವವರಂತೆ ಸೇರಿ ಗುಲ್ಲೆಬ್ಬಿಸುತ್ತಿದ್ದರು. ಸಂಭ್ರಮ, ಮೀನಾಕ್ಷಿಯ ನಾಚಿಕೆಗಳ ನಡುವೆ ಕಾರ್ಯಕ್ರಮ ಸಾಗಿತು.

ಭೂಮದ ಎಲೆಗೆ ಪಾಯಸವನ್ನು ಬಡಿಸಲು ಬಂದ ಅತ್ತೆಯ ಕೈಯನ್ನು ಅಳಿಯ ಸಡಗರದಿಂದ ಹಿಡಿದ. ಪಾರ್ವತಿ ನಾಚಿ, ಬಿಡಿಸಕೊಳ್ಳಲು ಪ್ರಯತ್ನಿಸಿದಳು. ಆದರೆ ಅವನ ಹಿಡಿತ ಬಿಗಿಯಾಗಿತ್ತು. ಗಂಡನ ಹೆಸರನ್ನು ಹೇಳಿಸುವ ಸಡಗರ...

"ಅಣ್ಣನ ಹೆಸರನ್ನು ಬೇಗ ಹೇಳಿಬಿಡಿ ಅತ್ತಿಗೇ, ಅಳಿಯಂದ್ರು ಕೈ ಬಿಡ್ತಾರೆ...." ಪಾರ್ವತಿಯ ನಾದಿನಿಯೂ ಹೇಳಿದಳು

"ಶ್ರೀಕಂಠಯ್ಯ...." ಅವಳ ಧ್ವನಿ ಅವಳಿಗೇ ಕೇಳುವಂತಿರಲಿಲ್ಲ.

"ಸ್ವಲ್ಪ ಜೋರಾಗಿ ಹೇಳಿ, ನಂಗೆ ಕೇಳಿಸಲಿಲ್ಲ", ಅಳಿಯನೆಂದ ನಗುತ್ತಾ.

"ಶ್ರೀಕಂಠಯ್ಯ" ದನಿ ಏರಿಸಿ ನುಡಿದಳು. ಅಲ್ಲೇ ನಿಂತಿದ್ದ ಕಂಠಿ ಉತ್ತೇಜಿತನಾದ.

"ಏನೇ ಕರೆದ್ಯಾ ?" ಎನ್ನುತ್ತಾ ಕಂಠಿ ಬಂದು ಅವಳ ಮಗ್ಗುಲಲ್ಲಿ ಕುಳಿತ. ಎಲ್ಲರೂ 'ಹೋ' ಎಂದು ನಕ್ಕರು. ಅಳಿಯ ಕೈ ಬಿಟ್ಟೊಡನೆ ಪಾರ್ವತಿ ಪಾಯಸದ ತಪ್ಪಲೆಯನ್ನು ಅಲ್ಲೇ ಬಿಟ್ಟು ಎದ್ದು ನಿಂತಳು.

"ಕಂಠೀ..... ನಿನ್ನ ಹಂಡ್ತಿಯ ಹೆಸರನ್ನು ಹೇಳೋ....." ಒಕ್ಕೊರಲು ಕೇಳಿಸಿತು.

"ನನ್ನ ಹೆಂಡ್ತಿಲೀನ ನಾನು ಹತ್ತಾರು ಹೆಸರ್ನಲ್ಲಿ ಕರೀತೀನಿ. ಯಾವ ಹೆಸರನ್ನು ಹೇಳಲಿ?" ಪಾರ್ವತಿಯ ಸೆರಗನ್ನು ಎಳೆದು ನಕ್ಕ.

"ಒಂದೊಂದಾಗಿ ಎಲ್ಲವನ್ನು ಹೇಳು ನೀನು ಅತಿರಸಿಕ ಅಂತ ನಮಗೆಲ್ಲಾ ಗೊತ್ತು." ಮತ್ತೆ ಅಲ್ಲಿ ನೆರೆದಿದ್ದವರು ನಕ್ಕರು.

"ಹೇಳ್ತಾ ಹೋದ್ರೆ, ರಾತ್ರಿ ಆಗುತ್ತೆ ನಮ್ಮದ್ಯಾರದ್ದೂ ಊಟ ಆಗಿಲ್ಲ." ಏನ್ಮಾಡೋದು.

"ಸರಿ ಹಾಗಾದ್ರೆ ಒಂದು ಹೆಸರನ್ನಾದ್ರೂ ಹೇಳು ಕಂಠಿ ಸರ್ರನೆ ತನ್ನ ಹೆಂಡತಿಯ ಕೈ ಹಿಡಿದು ತನ್ನಲ್ಲಿಗೆ ಎಳೆದು, ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಅವಳ ಗಲ್ಲವನ್ನು ಹಿಡಿದೆತ್ತಿದ. ಎಲ್ಲರೂ 'ಹೋ' ಎಂದು ಕೂಗಿದರು. ಪಾರ್ವತಿ ನಾಚಿ ಪಾಯಸದ ಕೈಯಲ್ಲೇ ತನ್ನ ಮುಖವನ್ನು ಮುಚ್ಚಿಕೊಂಡಳು. "ಕೈಲಾಸ ವಾಸಿ ಶ್ರೀಕಂಠನ ಪತ್ನಿಯೂ ಪಾರ್ವತಿ ಈ ಶ್ರೀಕಂಠನ ಪತ್ನಿಯೂ ಪಾರ್ವತಿ....... ಎಂದು ಎಲ್ಲರಿಗೂ ಕೇಳಿಸುವಂತೆ ಎತ್ತರದ ದನಿಯಲ್ಲಿ ಹೇಳಿದ. ಮತ್ತೊಮ್ಮೆ ಎಲ್ಲರೂ ನಕ್ಕರು. ಮುಂಜುನಾಥ ಮಾವನ ಸರಸವನ್ನು ಕಂಡು ಬೆರಗಾದ ಮೀನಾಕ್ಷಿಯ ಕಡೆ ಕಳ್ಳನೋಟ ಬೀರಿದ. ಅವಳು ನಾಚಿ ಕೆಂಪಾಗಿದ್ದಳು.

ಆ ರಾತ್ರಿ ನವ ಜೋಡಿಗಳಿಗಾಗಿ, ನಾಗಪ್ಪಭಟ್ಟರು ತಮ್ಮ ಮನೆಯ ಕೋಣೆ ಯೊಂದನ್ನು ಬಿಟ್ಟು ಕೊಟ್ಟಿದ್ದರು. ಹೆಂಗಸರು, ಆ ಕೋಣೆಯನ್ನು ಅಲಂಕರಿಸಿದ್ದರು. ಹೂ ಮಾಲೆಗಳನ್ನು ಇಳಿ ಬಿಟ್ಟಿದ್ದರು. ಹಣ್ಣುಗಳನ್ನು ತಿಂಡಿಗಳನ್ನು ಒಂದು ಕಡೆ ಜೋಡಿಸಿಟ್ಟಿದ್ದರು. ಹಸುವಿನ ಹಾಲವನ್ನು ಹದವಾಗಿ ಕಾಯಿಸಿ, ಕೇಸರಿ, ಬಾದಾಮಿ, ಸಕ್ಕರೆಯನ್ನು ಬೆರೆಸಿ, ಬೆಳ್ಳಿಯ ಲೋಟಗಳಿಗೆ ಹಾಕಿ ವಧೂವರರಿಗೆ ಕುಡಿಯಲು ಇಟ್ಟಿದ್ದರು. ಹೊಸ ಹಾಸಿಗೆ, ದಿಂಬು, ಹೊದಿಕೆಗಳನ್ನು ಹಾಸಿ ದಂಪತಿಗಳನ್ನು ಕೂರಿಸಿ ತಾಂಬೂಲವನ್ನು ತಿನ್ನಲು ಕೊಟ್ಟು ಆರತಿಯನ್ನೆತ್ತಿದರು. ಹೆಂಗಳೆಯರು ಪಿಸು ಮಾತುಗಳನ್ನಾಡುತ್ತಾ ತಮ್ಮಲ್ಲೆ ನಗುತ್ತಾ ತಮ್ಮ ಮದುವೆಯ ಮೊದಲ ರಾತ್ರಿಯನ್ನು ನೆನೆಪಿಸಿಕೊಳ್ಳುತ್ತಾ ಕೋಣೆಯಿಂದ ಹೊರಬಂದರು.

* * *

ಸಾಯಂಕಾಲವೇ ಸಣ್ಣ ಮಳೆ ಪ್ರಾರಂಭವಾಗಿದ್ದುದ್ದರಿಂದಲೂ, ಕಾರ್ತೀಕ ಮಾಸವಾದುದರಿಂದಲೂ ಬೇಗನೇ ಕತ್ತಲಾಗಿತ್ತು. ರಾತ್ರಿಯ ಔತಣದ ಊಟ ಭಾರಿ ಯಾಗಿತ್ತು. 'ಪ್ರಸ್ಥದ' ಕೋಣೆಗೆ ನವದಂಪತಿಗಳನ್ನು ಕಳಿಸಿಯಾದ ಮೇಲೆ ಹೆಂಗಸರೆಲ್ಲಾ ಕಂಠಿಯ ಮನೆಗೆ ಮಲಗಲೆಂದು ಬಂದರು. ಹಿಂದಿನ ರಾತ್ರಿಯಂತೆ, ಗಂಡಸರುಗಳೆಲ್ಲ ಶಾಸ್ತ್ರಿಯ ಮನೆಗೆ ಮಲಗಲು ಬಂದರು. ಹೆಚ್ಚು ಹರಟೆ ಹೊಡೆಯದೇ, ಇಸ್ಪೀಟು ಎಲೆಗಳನ್ನು ಹಿಡಿಯದೇ, ಎಲ್ಲರೂ ಹಾಸಿಗೆಯ ಮೇಲೆ ಉರುಳಿಕೊಂಡರು. ಕೆಲವೇ ನಿಮಿಷಗಳಲ್ಲಿ ಎಲ್ಲರಿಗೂ ಗಾಢವಾದ ನಿದ್ದೆ ಆವರಿಸಿಕೊಂಡಿತು.

ಒಂದು ಹೊತ್ತಿನಲ್ಲಿ, ಹಿತ್ತಿಲಿನಲ್ಲಿ ಕೆಲವು ನಾಯಿಗಳು ಬೊಗಳಲು

ಪ್ರಾರಂಭಿಸಿದವು. ಆದರೂ ಯಾರಿಗೂ ಎಚ್ಚರವಾಗಲಿಲ್ಲ. ಹಿತ್ತಿಲಿನ ಪೊದೆಯಲ್ಲಿ ಅವಿತುಕೊಂಡಿದ್ದ ಕಳ್ಳರು ಮನೆಯ ಬಳಿಗೆ ಬಂದು, ಮೊದಲು ಹಿಂಬಾಗಿಲು, ಮುಂಬಾಗಿಲುಗಳನ್ನು ಹೊರಗಿನಿಂದ ಭದ್ರಪಡಿಸಿ, ಎತ್ತಿನ ಗಾಡಿಯ ಚಕ್ರದ ಕೀಲಿ ಗಳನ್ನು ಸಿಕ್ಕಿಸಿದರು. ನಾಯಿಗಳಿಗೆ ತಮ್ಮಲ್ಲಿದ್ದ ರೊಟ್ಟಿಗಳನ್ನು ಎಸೆದರು. ನಾಯಿಗಳು ಬೊಗಳುವುದನ್ನು ನಿಲ್ಲಿಸಿ ತಿನ್ನುವುದರಲ್ಲಿ ಮಗ್ನವಾದವು. ಕಳ್ಳರು ಸಾವಕಾಶವಾಗಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಮಳೆ ಬಿದ್ದು, ಹಸಿಯಾಗಿದ್ದ ಮಣ್ಣಿನ ಗೋಡೆಯಲ್ಲಿ ಕನ್ನವನ್ನು ಕೊರೆಯಲು ಕಳ್ಳರಿಗೆ ಕಷ್ಟವಾಗಲಿಲ್ಲ. ಒಬ್ಬ ವ್ಯಕ್ತಿ ಸುಲಭವಾಗಿ ತೂರಬಹುದಾದಷ್ಟು ಅಗಲದ ಕನ್ನವನ್ನು ಕೊರೆದು ಒಳಗಿನ ಕೋಣೆಗೆ ತೂರಿಕೊಂಡು ಬಂದರು. ಅದು ಕತ್ತಲು ಕೋಣೆ. ಬಾಣಂತಿಯ ಕೋಣೆ. ಅಲ್ಲಿ ಬಾಣಂತನದ ಸಮಯದಲ್ಲಿ ಬಾಣಂತಿಯ ಹೊರತು ಉಳಿದವರು ಯಾರೂ ಮಲಗುತ್ತಿರಲಿಲ್ಲ. ಕಳ್ಳರಿಗೆ ಅನುಕೂಲವೇ ಆಗಿತ್ತು. ಬೆಂಕಿಯ ಕಡ್ಡಿಯನ್ನು ಹೊತ್ತಿಸಿ ಸುತ್ತಲೂ ನೋಡಿ ದಾಗ ಅಲ್ಲಿದ್ದ ಸೀಮೆಎಣ್ಣೆಯ ಬುಡ್ಡಿಯನ್ನು ಕಂಡರು. ಅದನ್ನು ಹತ್ತಿಸಿಟ್ಟುಕೊಂಡು, ಆ ಕೋಣೆಯಲ್ಲಿ ಏನೇನಿದೆ ಅಂತ ಗಮನವಿಟ್ಟು ನೋಡಿದರು. ಅಲ್ಲಿದುದು ಒಂದೇ ಒಂದು ಕರಿಯ ಬಣ್ಣದ ತಗಡಿನ ಟ್ರಂಕು. ಅದಕ್ಕೆ ಬೀಗ ಹಾಕಿರಲಿಲ್ಲ. ಚಿಲುಕಗಳೇ ಇರಲಿಲ್ಲ. ಸದ್ದಾಗದಂತೆ ತೆಗೆದು ನೋಡಿದರು. ಒಂದು ಸಣ್ಣ ಬಟ್ಟೆಯ ಚೀಲದಲ್ಲಿ ಚಿಲ್ಲರೆ ಕಾಸುಗಳಿದ್ದವು. ಆ ಚೀಲವನ್ನು ತೆಗೆದಿಟ್ಟುಕೊಂಡರು. ಒಂದು ಸಣ್ಣ ಟಾರ್ಚ್ ಇತ್ತು ಅದನ್ನು ಹಚ್ಚಿಸಿ ಮೋಟುಗೋಡೆಯ ಮೇಲಿಂದ ಇತ್ತ ಇಣುಕಿದರು. ಸಾಲಾಗಿ ಮಲಗಿದ್ದವರಲ್ಲಿ ಯಾರೂ ಮಿಸುಕಾಡಿರಲಿಲ್ಲ. ಟಾರ್ಚಿನ ಬೆಳಕನ್ನು ಬಿಟ್ಟು ನೋಡಿದರು ಆದರೂ ಯಾರಿಗೂ ಎಚ್ಚರವಾಗಿರಲಿಲ್ಲ. ಕೋಣೆಯ ಬಾಗಿಲನ್ನು ಇತ್ತಲಿಂದ ಭದ್ರ ಪಡಿಸಿದ್ದುದರಿಂದ ಅವರಿಗೆ ಹೊರಬರಲಾಗಿರಲಿಲ್ಲ. ಪೆಟ್ಟಿಗೆಯ ಮೇಲೆ ಹತ್ತಿ ನಿಂತು, ಅಲ್ಲಿದ್ದ ದೊಡ್ಡ ಛತ್ರಿಯ ಸಹಾಯದಿಂದ, ಈ ಬದಿಯ ಗೋಡೆಯ ಮೊಳೆಗಳಿಗೆ ಸಿಕ್ಕಿಸಿದ್ದ ಷರಟುಗಳನ್ನು ಪ್ಯಾಂಟುಗಳನ್ನು ಎತ್ತಿಕೊಂಡು, ಅದರ ಜೇಬು ಗಳನ್ನು ತಡಕಾಡಿದರು. ಯಾವ ಜೇಬಿನಲ್ಲೂ ಏನೂ ಸಿಗಲಿಲ್ಲ ಬಟ್ಟೆಗಳನ್ನು ದಿಕ್ಕಾ ಪಾಲಾಗಿ ಎಸೆದರು. ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ತಾವೇ ಕೊರೆದಿದ್ದ ಕನ್ನದಿಂದ ಆಚೆಗೆ ಹೊರಬಿದ್ದರು. ತಮ್ಮೊಂದಿಗೆ ದೊಡ್ಡ ಛತ್ರಿಯನ್ನು, ಟಾರ್ಚನ್ನು ಒಯ್ದಿದ್ದರು. ಇಷ್ಟೆಲ್ಲಾ ನಡೆದರೂ, ಅಲ್ಲಿ ಮಲಗಿದ್ದವರಲ್ಲಿ ಒಬ್ಬರಿಗಾದರೂ ಎಚ್ಚರವಾಗಿರ ಲಿಲ್ಲ. ಒಂದು ಅತ್ಯಾಶ್ಚರ್ಯದ ಸಂಗತಿ ಎಂದರೆ, ಮಲಗಿದ್ದ ಗಂಡಸರ ಪೈಕಿ ಒಬ್ಬರು ಪೋಲೀಸ್ ಅಧಿಕಾರಿ !

ಬೆಳಗಾಯಿತು ಒಬ್ಬೊಬ್ಬರಾಗಿ ಎದ್ದರು. ಬಚ್ಚಲು ಮನೆಯಲ್ಲಿ ಮುಖವನ್ನು ತೊಳೆದು, ಬಿಸಿ ಬಿಸಿ ಕಾಫಿಯನ್ನು ಕುಡಿದರು. ಬಚ್ಚಲು ಮನೆಯ ಸೌದೆ ಉರಿಯ

ಮುಂದೆ ಕುಳಿತು, ಮೈ ಕಾಯಿಸಿಕೊಂಡರು. ಚಳಿಗೆ ಹಿತವಾಗಿತ್ತು. ಹಿತ್ತಲ ಬಾಗಿಲನ್ನು ತೆಗೆಯಲು ನೋಡಿದ ಲಕ್ಷ್ಮಿಗೆ ಬಾಗಿಲು ಆ ಕಡೆಯಿಂದ ಹಾಕಲ್ಪಟ್ಟಿದೆ ಎಂದು ತಿಳಿದಾಗ ಶಾಸ್ತ್ರಿಗೆ ಹೇಳಿದಳು. ಶಾಸ್ತ್ರಿಗೂ ಬಾಗಿಲನ್ನು ತೆಗೆಯಲು ಆಗದಿದ್ದಾಗ, ಮುಂಬಾಗಿಲನ್ನು ತೆಗೆಯಲು ನೋಡಿದ. ಅದನ್ನು ತೆಗೆಯಲು ಆಗಲಿಲ್ಲ. ಅಲ್ಲಿಂದಲೇ ವೈಕುಂಠನನ್ನು ಕರೆದ ಗಾಢ ನಿದ್ರೆಯಲ್ಲಿದ್ದ ವೈಕುಂಠನಿಗೆ ತಕ್ಷಣಕ್ಕೆ ಎಚ್ಚರವಾಗಲಿಲ್ಲ. ಶಾಸ್ತ್ರಿಯ ಧ್ವನಿಯನ್ನು ಕೇಳೀ ಹಸುಗಳು 'ಅಂಬಾ' ಎಂದವು ಕರುಗಳು ಮಾರ್ದನಿ ಕೊಟ್ಟವು. ವೈಕುಂಠ ಎದ್ದು ಬಂದ. ಮುಂಬಾಗಿಲ ಬಾಗಿಲಿನ ಚಿಲಕಕ್ಕೆ ಗಾಡಿಯ ಚಕ್ರದ ಕೀಲಿ ಕೈಯನ್ನು ಸಿಕ್ಕಿಸಲಾಗಿತ್ತು. ಅನುಮಾನ ಬಂದ ವೈಕುಂಠ ಹಿಂಬಾಗಿಲ ಕಡೆಗೆ ಓಡಿದ. ಆ ಬಾಗಿಲಿನ ಚಿಲುಕಕ್ಕೂ ಇನ್ನೊಂದು ಕೀಲಿ ಕೈಯನ್ನು ಸಿಕ್ಕಿಸಲಾಗಿತ್ತು. "ಅವ್ವಾವೇ ಕಳ್ಳರು ನುಗ್ಗಿರಬೇಕು ತನ್ನ ಅನುಮಾನವನ್ನು ವ್ಯಕ್ತಪಡಿಸಿ, ಮನೆಯ ಸುತ್ತ ಬರುವಾಗ ಕತ್ತಲೆ ಕೋಣೆಯ ಬದಿಯ ಗೋಡಯ ಬಳಿ ಕೊರೆದು ಹಾಕಿದ್ದ ಮಣ್ಣಿನ ಗುಡ್ಡೆಯನ್ನು ಕಂಡು, ಹಾಗೇ ಕಿಂಡಿಯನ್ನೂ ನೋಡಿದ. ಲಕ್ಷ್ಮಿಯನ್ನು ಕರೆದು ತೋರಿಸಿದ. "ರಾತ್ರಿ ಕಳ್ಳರು ಕನ್ನ ಆಕವ್ರೇ.... ಆರೆಯಿಂದ ಅಗೆಯುವಾಗ ಸದ್ದಾಗ್ಲಿಲ್ವಾ ? ಯಾರ್ಗೂ ಎಚ್ಚರ ಆಗಿಲ್ವಾ ?" ಕೇಳಿದ. ಅಲ್ಲಿದ್ದ ಗಂಡಸರಿಗೆ ವಿಷಯ ತಿಳಿದು ಎಲ್ಲರಿಗೂ ಅಚ್ಚರಿ. ತಾವುಗಳು ಮಲಗಿದ್ದ ಪಕ್ಕದ ಕೋಣೆಯಲ್ಲಿ ಕಳ್ಳರು ಕನ್ನ ಕೊರೆದಿದಾರೆ. ತಮಗ್ಯಾರಿಗೂ ಎಚ್ಚರವಾಗಿಲ್ಲ.... ಎಲ್ಲರೂ ಮುಖ ಮುಖ ನೋಡಿಕೊಂಡರು. ಪೋಲಿಸ್ ಅಧಿಕಾರಿಯ ಮುಖದ ಬಣ್ಣ ಬದಲಾಗಿತ್ತು. ತಾನು ರಜೆಯ ಮೇಲಿದ್ದೆ. ಅಲ್ಲದೇ ಈ ಹಳ್ಳಿ ತನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ತನಗೆ ತಾನೇ ಹೇಳಿಕೊಂಡಿರಬೇಕು. ಸ್ವಲ್ಪ ಹೊತ್ತು ಅದೇ ವಿಷಯ ಅದೇ ಗುಜು ಗುಜು.... ಅದೇ ಚರ್ಚೆ..... "ಭಟ್ಟರ ಮನೆಗಾಗಲೀ, ಕಂಠಿಯ ಮನೇಗಾಗಲೀ ನುಗ್ಗದೇ, ಕಳ್ಳರು ತಮ್ಮ ಮನೆಯಲ್ಲಿ ಏನಿದೆ ಅಂತ ಕನ್ನ ಹಾಕಿದ್ದೇಕೆ ಲಕ್ಷ್ಮಿ ಚಿಂತಿಸುತ್ತಲೇ ಇದ್ದಳು. ಕಳ್ಳ ಹೊಕ್ಕ ಮನೆಗೆ ಎಣ್ಣೆ ದಂಡ ಎಂಬಂತೆ ರಾತ್ರಿಯೆಲ್ಲಾ ಉರಿದ ಸೀಮೆ ಎಣ್ಣೆಯ ದೀಪ ನಂದಿತು. ಹಾಗೇ ಕತ್ತಲೆ ಕೋಣೆಯಲ್ಲಿ ಕನ್ನದಿಂದ ತೂರಿಬಂದ ಸೂರ್ಯನ ಬೆಳಕು ಕಂಡಿತು. ನೆಂಟರೆಲ್ಲಾ ಹೊರಟು ಹೋಗಿದ್ದರು.

"ಮೊದಲು ಆ ಕನ್ನವನ್ನು ಮುಚ್ಚಿಬಿಡು..... ನಾಯಿ, ಬೆಕ್ಕು ಬಂದು ಒಳಗೆ ಸೇರಿಕೊಂಡೀತು" ಶಾಸ್ತ್ರಿ ವೈಕುಂಠನಿಗೆ ಹೇಳಿದ. ವೈಕುಂಠ ಕಲ್ಲುಗಳನ್ನಿಟ್ಟು ಮಣ್ಣನ್ನು ಮೆತ್ತಿ ಕನ್ನವನ್ನು ಮುಚ್ಚಿದ. ಕಳ್ಳರನ್ನು ಪತ್ತೆ ಹಚ್ಚಿಯೇ ತೀರುತ್ತೇನೆಂದು ಅನೇಕ ಬಾರಿ ಹೇಳಿದ. ಆದರೆ, ದಿನಗಳು ಕಳೆದರೂ ಕಳ್ಳರು ಯಾರೆಂದು ಪತ್ತೆಯಾಗಲೇ ಇಲ್ಲ. ಕ್ರಮೇಣ ಆ ವಿಷಯ ಹಳೆಯದಾಯಿತು.

* * *

ನಮ್ಮ ಮನೆಯ ನಾಯಿಗೆ ಧೈರ್ಯವೇ ಸಾಲದು. ಕಳ್ಳರು ಬಂದರೆ ಬೊಗಳುವುದನ್ನು ಬಿಟ್ಟು ಅವರಿಗೆ ಹೆದರಿ ದೂರ ಎಲ್ಲೋ ನಿಂತಿತ್ತು ಅಂತ ಕಾಣುತ್ತೆ. ಒಂದು ಗಂಡು ನಾಯಿ ಮರಿಯನ್ನು ತಂದು ಬೆಳೆಸಬೇಕು. ಲಕ್ಷ್ಮಿ, ಹೇಳಿದಳು. ಲಲಿತ ತಕ್ಷಣವೇ ನುಡಿದಳು, "ನಾಯಿ ಯಾವುದಾದರೇನು? ಅದಕ್ಕೂ ಭಯ ಇರುಲ್ವೇನಮ್ಮ?"

"ಸಾಕು ಸುಮ್ನಿರು, ನಿನ್ನಿಂದ್ಲೇ ಇಷ್ಟೆಲ್ಲಾ ಆದದ್ದು. ನಾನು ಅವತ್ತೇ ಹೇಳ್ದೆ. ಹೆಣ್ಣು ನಾಯಿ ಮರಿ ಬೇಡವೇ ಬೇಡ ದೂರ ಎಲ್ಲಾದ್ರೂ ಬಿಟ್ಟು ಬಾ ಅಂತ ಕೇಳಿದ್ಯಾ? ಎರಡು ಸಾರಿ ಮರಿಗಳನ್ನು ಹಾಕಿದ್ರೂ, ಒಂದು ಮರಿಯೂ ಉಳಿಯಲಿಲ್ಲ."

"ಗಂಡು ಮರಿಗಳನ್ನು ಯಾರೋ ಕದ್ದರು. ಹೆಣ್ಣು ಮರಿಗಳನ್ನೆಲ್ಲಾ ವೈಕುಂಠ ಆಚೆ ದೂರ ಎಲ್ಲೋ ಬಿಟ್ಟು ಬಂದ ಅಂತ ನೀನೇ ಹೇಳ್ದೆ."

"ಯಾರೋ ಮರಿಗಳನ್ನು ಕದ್ದರೂ, ಊರಾಚೆ ಬಿಟ್ಟು ಬಂದರೂ ಈ ಮಹಾ ತಾಯಿ ನೋಡ್ಕೊಂಡು ಸುಮ್ಮನಿತ್ತಲ್ಲ ಇದೆಂಥಾ ನಾಯಿ !" ಶಾಂತ ವ್ಯಂಗ್ಯವಾಗಿ ನುಡಿದಳು.

"ನೀನು ಸುಮ್ನಿರು, ನಮ್ಮ ಜಾನೀನ ಏನೂ ಅನ್ಬೇಡ ಇನ್ನೇನಾಡುತ್ತೇ ? ಹೋಗಿ ಕಿತ್ಕೋಳ್ಳೋಕೆ ಆಗುತ್ತಾ ? ಅದಕ್ಕೆ ಎಷ್ಟು ದುಃಖ ಆಗಿದೆಯೋ ? ಪಾಪ"

"ನೀನು ಸುಮ್ನೆ ಪಾಪ ಪಾಪ ಅನ್ಬೇಡ. ನಾವು ಸಾಕುವ ನಾಯಿಗಳು ಸಾಕಿದವರ ಮನೆಯನ್ನು ಕಾಯ್ಬೇಕು. ಕಳ್ಳರನ್ನು ಹೆದರಿಸಬೇಕು. ಅದು ಬಿಟ್ಟು ದೂರ ಓಡಿ ಹೋದ್ರೆ ?"

"ಅಂಗಾದ್ರೆ, ನಮ್ಮ ಜಾನೀನೂ ಕಾಡ್ನಾಗೆ ಬಿಟ್ಟು ಬರ್ಲಾ ಅವ್ವಾವ್ರೇ...." ವೈಕುಂಠ ಮಧ್ಯೆ ಬಾಯಿ ಹಾಕಿದ.

"ಸುಮ್ನಿರು ವೈಕುಂಠ, ನೀನೇನಾದ್ರೂ ನಮ್ಮ ಜಾನಿಯ ತಂಟೆಗೆ ಹೋದ್ರೆ, ನಿನ್ನ ಕೈ ಕತ್ತರಿಸಿ ಹಾಕಿ ಬಿಡ್ತೀನಿ."

"ಲಲಿತಾ ಇದೇನೆ ? ಇಂಥಾ ಮಾತನ್ನೆಲ್ಲಿ ಕಲಿತೆ ? ಅತಿಯಾಯ್ತು ನಿಂದು ಬಿಟ್ಟು ಬಂದ ಆದರೆ, ಅವುಗಳಿಗೆ ಹಾರುಕ್ಕೆ ಬರುಲ್ಲವಲ್ಲ. ಚಿರತೇನೋ ಕಿರುಬಾನೋ ತಿಂದು ಹಾಕಿರುತ್ತೆ. " ಲಲಿತಳ ಕಣ್ಣಿನಿಂದ ನೀರು ಇಳಿಯಿತು.

"ಅಳೋದ್ಯಾಕೆ? ಈಗ, ಜಾನಿನೇನು ಮನೆಯಿಂದಾಚೆ ಓಡ್ಸಿದೀವಾ? ಇನ್ನೊಂದು ಗಂಡು ನಾಯೀನೂ ತಂದು ಸಾಕಿದ್ರೆ ಆಯ್ತು" ಸಾತಕ್ಕ ನುಡಿದಳು.

"ಹುಂ ಗಂಡು ನಾಯಿ ಮನೇನ ಕಾಯುತ್ತೆ. ಹೆಣ್ಣು ನಾಯಿ ಮರಿಗಳನ್ನು ಹಾಕುತ್ತೆ. ಮನೆ ತುಂಬಾ ನಾಯಿಯೋ ನಾಯಿ..." ಲಕ್ಷ್ಮಿ ಸಹುಕೋಪದಿಂದ ನುಡಿದಾಗ, ವೈಕುಂಠ ಕಿಸ ಕಿಸನೆ ನಕ್ಕ. ಸಾತಕ್ಕ ಕಣ್ಣುಗಳನ್ನು ಬಿಟ್ಟು ಹೆದರಿಸಿದಳು.

"ಎದ್ಹೋಗು, ನಿಂಗೆ ಸಲುಗೆ ಹೆಚ್ಚಾಯಿತು. ಸದಾ ಹೆಂಗಸರ ಎದುರಿಗೆ ನಿನ್ನ ಬಡಾಯಿ.... ಉತ್ತರನ ಪೌರುಷ ಒಲೆ ಮುಂದೆ ಅನ್ನೋ ತರಹ...."

"ಅವ್ವಾವ್ರೇ.... ಅವ್ವಾವ್ರೇ.... ಆ ಪರಸಂಗ ಏಳ್ರೀ ಅವ್ವಾವ್ರೇ...." ಅವನು ಸರಿಯಾಗಿ ಚಕ್ಕಲಮಟ್ಟಿಗೆ ಹಾಕಿ ಕುಳಿತ.

"ಈಗ ಯಾವ ಪ್ರಸಂಗವೂ ಬೇಕಿಲ್ಲ. ನಮ್ಮ ಮನೇಲೇ ಒಂದಲ್ಲ ಒಂದು ಪ್ರಸಂಗ ಜರುಗುತ್ತಿರುತ್ತೆ. ಅಷ್ಟೇ ಸಾಕು. ಎದ್ದು ಕೆಲ್ಸ ನೋಡು."

ಸಾತಕ್ಕ ಗದರಿದರೂ ಅವನು ಎದ್ದು ಹೋಗಲಿಲ್ಲ.

"ಅವ್ವಾವ್ರೇ.. ನಾನು ಬರ್ಯೋದನ್ನ ಕಲಿತಿವ್ನಿ.... ವೈಕುಂಠ ಅಂತ ಬರ್ದು ತೋರಿಸ್ಲಾ ?" ಅಲ್ಲಿದ್ದ ಸ್ಲೇಟು ಬಳಪವನ್ನು ಕಂಡು ಹೇಳಿದ.

"ತಲೆ ಹರಟೆ" ಅಂತ ಬರೆದು ತೋರಿಸು ನೋಡೋಣ...." ಶಾಂತ ಕೆಣಕಿದಳು.

"ನಂಗೆಲ್ಲಿ ಬಂದಾತು ! ನಾನು ಬರ್ಯೋದು ವೈಕುಂಠ ಅಂತ ಮಾತ್ರ"

"ತಲೆಗೆಲ್ಲ ಒಂದೇ ಮಂತ್ರ. ನಿನ್ನ ಹೆಂಡ್ತಿ ಹೆಸ್ರನ್ನು ಬರೀ ಅಂತಂದ್ರೆ ಆಗ್ಲೂ ವೈಕುಂಠ ಅಂತ್ಲೇ ಬರೀತೀಯಾ ?" ಎಲ್ಲರೂ ನಕ್ಕರು ಅವನು ಮೆತ್ತಗೆ ಎದ್ದ. ತಲೆಯನ್ನು ಕೆರೆದುಕೊಳ್ಳುತ್ತಾ ಅಲ್ಲಿಂದ ಹೊರಕ್ಕೆ ನಡೆದ.

* * *

"ಕೆಲವೇ ತಿಂಗಳುಗಳಲ್ಲಿ ಜಾನಿ ಮತ್ತೆ ಮೂರು ಮರಿಗಳನ್ನು ಹಾಕಿತು ಎರಡು ಗಂಡು, ಒಂದು ಹೆಣ್ಣು. ಜಾನಿಯ ಸ್ವಭಾವ ಎಲ್ಲಾ ನಾಯಿಯಂತೆ ಅಲ್ಲ ಯಾರಾದ್ರೂ ಮರಿಗಳನ್ನು ನೋಡಲು ಬಂದರೆ ಬೊಗಳುತ್ತಿರಲಿಲ್ಲ. ಹೆದರಿಸುತ್ತಿರಲಿಲ್ಲ. ದೂರ ನಿಂತು ಬಾಲವನ್ನು ಅಲ್ಲಾಡಿಸಿ ಸಂತಸಪಡುತ್ತಿತ್ತು."

"ನಮ್ಮ ಮನೆ, ರಾಧೆ, ಇದರಿಂದ ಕಲಿತ್ಕೋಬೇಕು. ಕರುವನ್ನು ಒಂದು ದಿನವಾದ್ರೂ ಪ್ರೀತಿಯಿಂದ ಮುಟ್ಟಗೊಡಿಸುತ್ತಿರಲಿಲ್ಲ" ಸಾತಕ್ಕ ಎಂದಳು.

"ಅತ್ತೇ, ಹತ್ತಿರದಿಂದ ನೋಡ್ಬನ್ನಿ ಮರಿಗಳು ಎಷ್ಟು ಮುದ್ದಾಗಿವೆ."

"ಪಾಪ, ಅವುಗಳು ಕಣ್ಣು ಸಹ ಬಿಟ್ಟಿರುಲ್ಲ, ಸುಮ್ಮನೇ ಮುಟ್ಟಿ ಮುಟ್ಟಿ ಹಿಂಸೆ ಮಾಡ್ಬೇಡಿ, ದೊಡ್ಡೋವಾದ್ಮೇಲೆ ಅವೇ ಬಾಗಿಲತನಕ ಬರುತ್ವೆ, ಆಗ ನೋಡಿದ್ರಾಯ್ತು."

"ನಾನು ಎತ್ಕೊಂಡು ಬರ್ಲಾ ಅವ್ವಾವ್ರೇ....."

"ಏನೂ ಬೇಡ.... ನೀನೊಬ್ಬ, ಈ ಮಕ್ಕಳಿಗಿಂತ ಹೆಚ್ಚಾಗಿ ಆಡ್ತೀಯ ಶೊಬಚ... ನಿನ್ನಿಂದ ನನ್ನ ಮಡಿ ಎಲ್ಲಾ ಎಗರಿ ಹೋಯ್ತು."

"ದೂರದಿಂದ ನೋಡ್ತೋರಂತೆ ಅವ್ವಾವ್ರೇ....."

"ನನ್ನ ಹತ್ರಕ್ಕೆ ನಾಯಿ ಮರಿಗಳನ್ನೇನಾದ್ರೂ ತಂದರೆ, ನಿಂಗೆ ಶಾಪ ಕೊಟ್ಟು ಬಿಡ್ತೀನಿ ಅಷ್ಟೆ...." ವೈಕುಂಠ ಬಾಯಿಗೆ ಟವೆಲ್ಲನ್ನು ಇಟ್ಟು ನಕ್ಕ.

"ನಿಮ್ಗೆ ಶಾಪ ಗೀಪ ಏನ್ನೂ ಕೊಡೋಕೆ ಬರುಲ್ಲ. ಅವ್ವಾವ್ರೇ... ಭಾಳ ಸಾದು ಮನುಷ್ಯರು ನೀವು"

"ಮತ್ತೇ ! ನನ್ನಂಥೋಳನ್ನ ಸತಾಯಿಸ್ತೀಯಲ್ಲ, ನಾಚಿಕೆ ಆಗೋಲ್ವಾ ನಿಂಗೆ?"

"ನಾಚ್ಕೆ ಯಾಕ್ರವ್ವಾ... ನೀವು ತಾಯಿ ಇದ್ದಂಗೆ ನಾನು ಮಗ ಇದ್ದಂಗೆ"

"ಹೀಗೆಲ್ಲಾ ಮಾತ್ನಾಡಿ ನನ್ನನ್ನ ಮರಳು ಮಾಡ್ಬೇಡ ನೋಡು. ನಂಗೆ ಸುತರಾಂ ಇಷ್ಟವಾಗುಲ್ಲ." ಹಾಗೆ ಬಾಯಿ ನುಡಿದರೂ, ಕಣ್ಣಾಲಿಗಳು ತುಂಬಿ ಬಂದಿದ್ದವು. ಇದು ಯಾವ ಜನ್ಮದ ನಂಟೋ, ಎಂಥಾ ಬಂಧನವೋ. ಆ ಪರ ಮಾತ್ಮನಿಗೇ ಗೊತ್ತು ಎಂದುಕೊಂಡು ಕಣ್ಣುಗಳನ್ನು ಮುಚ್ಚಿದಳು.

"ನೀನು ಸುಮ್ನೆ ಹೋಗು ನಮ್ಮ ಅತ್ತೆಗೆ ಬೇಜಾರು ಮಾಡ್ಬೇಡ." ಶಾಂತ ರೇಗಿದಳು.

"ತೆಪ್ಪಾತ್ರವ್ವಾ" ವೈಕುಂಠ ಸರ್‍ರನೆ ಸಾತಕ್ಕನ ಕಾಲುಗಳನ್ನು ಹಿಡಿದ ಸಾತಕ್ಕ ಕಾಲುಗಳನ್ನು ಹಿಂದಕ್ಕೆಳೆದುಕೊಂಡಳು.

"ಮತ್ತೆ ಮುಟ್ಟದ್ಯಲ್ಲೋ ಪಾಪಿ...." ವಾತ್ಸಲ್ಯದಿಂದ ಗದರಿದಳು.

"ಅತ್ತೆ ಇವನನ್ನು ಇವನ ಊರಿಗೆ ವಾಪಸ್ಸು ಕಳ್ಸಿ ಬಿಡೋಣ. ಸುಮ್ನೆ ನಿಮ್ಮನ್ನು ಗೋಳು ಹೊಯ್ದು ಕೊಳ್ತಾನೆ" ಶಾಂತ ನುಡಿದಳು.

"ಇಲ್ರವ್ವಾ...... ನಾನು ಈ ಅಳ್ಳಿ ಬಿಟ್ಟು ನಿಮ್ಮನ್ನೆಲ್ಲಾ ಬಿಟ್ಟು ಇನ್ನೆಲ್ಲೂ ಓಗಾಕಿಲ್ಲ" ಎಂದ ಅವನು ಕಣ್ಣುಗಳನ್ನು ಒರೆಸಿಕೊಳ್ಳುತ್ತಾ

"ಗಂಡು ಹುಡ್ಗನಾಗಿ ಅಳ್ಬೇಡ. ಹೋಗು ದನಕರುಗಳಿಗೆ ಹುಲ್ಲು ನೀರು ಇದೆಯೋ ಇಲ್ವೋ ನೋಡು ಮಾತಾಡ್ತಾ ಕೂತ್ರೆ ನಿಂಗೆ ಕೆಲ್ಸಾನೇ ಮರೆತು ಹೋಗುತ್ತೆ" ವೈಕುಂಠ ವಿಧೇಯನಾಗಿ ಎದ್ದು ಹೋದ. ಸಾತಕ್ಕ ಇತ್ತ ತಿರುಗಿ ನುಡಿದಳು. "ಹೋಗ್ರೇ ನೀವುಗಳೂ ಎದ್ದು ಹೋಗಿ ಕೈ ಕಾಲು ತೊಳೆದು ದೇವರಿಗೆ ನಮಸ್ಕಾರ ಮಾಡಿ ಸ್ತೋತ್ರಗಳನ್ನು ಹೇಳ್ಕೊಳ್ಳಿ. ಮಗ್ಗೀ ಪಾಠವನ್ನು ಗಟ್ಟು ಮಾಡಿ. ನಿಮ್ಮಣ್ಣ ಬರೋ ಹೊತ್ತಾಯ್ತು." ಎಲ್ಲರನ್ನೂ ಕಳಿಸಿ ತಾನು ಯೋಚಿಸುತ್ತಾ ಕುಳಿತಳು.

* * *

ಶಿವಮೊಗ್ಗಾದ ದೊಡ್ಡ ಬಸ್‌ಸ್ಟ್ಯಾಂಡ್ ಪಕ್ಕದ ದೊಡ್ಡ ಮೈದಾನದ ಆವರಣದಲ್ಲಿ "ಕಮಲಾ ತ್ರೀರಿಂಗ್ ಸರ್ಕಸ್"ನವರು ಡೇರೆ ಹಾಕಿದ್ದರು. ದಿನದಲ್ಲಿ ಎರಡು ಬಾರಿ ಪ್ರದರ್ಶನಗಳು ಶನಿವಾರ, ಭಾನುವಾರದಂದು. ಮಧ್ಯಾಹ್ನ ಮ್ಯಾಟಿನಿ ಷೋ ಉಳಿದಂತೆ ಸಾಯಂಕಾಲ ಆರು ಗಂಟೆಗೆ, ಹಾಗೂ ರಾತ್ರಿ ಹತ್ತು ಗಂಟೆಗೆ ಎರಡು ಪ್ರದರ್ಶನಗಳು ಪ್ರತಿದಿನ ರಾತ್ರಿ ಎಂಟು ಗಂಟೆಗೆ ಸರಿಯಾಗಿ ನಾಲ್ಕೂ ದಿಕ್ಕಿಗೆ ಕಾಣಿಸುತ್ತಿದ್ದ ದೊಡ್ಡ ಸರ್ಚ್ ಲೈಟಿನ ಬೆಳಕನ್ನು ನೋಡಲು ಮಕ್ಕಳು ಮನೆಯಿಂದ

ಹೊರಗೆ ಬಂದು ಕಾಯುತ್ತಿದ್ದರು. ಕಾತುರದಿಂದ, ಆಕಾಶದಲ್ಲಿ ಹರಿದು ಬರುವ ಆ ಬೆಳಕಿನ ಪ್ರವಾಹವನ್ನು ನೋಡಿ, ಸರ್ಕಸ್ ನೋಡಲು ಹೋಗಿ ಬಂದಷ್ಟೇ ಸಂತಸವನ್ನು ಪಡೆಯುತ್ತಿದ್ದರು.

ಮೀನಾಕ್ಷಿಯೂ ಗಂಡನ ಮನೆಗೆ ಹೊರಟು ಹೋದಳು. ಮನೆಯಂತೂ 'ಬಿಕೋ' ಅಂತಿದೆ ಎಲ್ಲಾದ್ರೂ ಹೋಗಿ ಬರೋಣ ಅಂತಂದ್ರೆ ಈ ಸಂಸಾರದ ಗೋಜಲು ಸದಾ ಮನೆಗೆ ಅಂಟಿಕೊಂಡಿರುವುದೇ ಆಗಿದೆ" ಪಾರ್ವತಿ ಬೇಸರದಿಂದ ಸಾತಕ್ಕನೊಡನೆ ನುಡಿದಳು.

"ಶಿವಮೊಗ್ಗಾದಲ್ಲಿ ಭಾರಿ ಸರ್ಕಸ್ ನಡೀತಿದೆಯಂತೆ. ಗುಂಡಣ್ಣ ಮಕ್ಕಳನ್ನೆಲ್ಲಾ ಕರ್ಕೊಂಡು ಹೋಗ್ಬೇಕೂಂತ ಇದಾನೆ. ನೀನೂ ನಿನ್ನ ಮಕ್ಕಳೊಡನೆ ಹೊರಡು. ಗಾಡಿಯನ್ನು ಕಟ್ಟಿಸ್ಕೊಂಡು ಹೋಗಿ ಬರ್ತಾರೆ"

"ನನ್ನ ಯಜಮಾನ್ರನ್ನ ಕೇಳ್ದೆ ಹೇಗೆ ಹೊರಡ್ಲಿ ? ಏನಂತಾರೋ ?"

"ಹಾಗಾದ್ರೆ ನಿನ್ನ ಗಂಡನ್ನೇ ಕರ್ಕೊಂಡು ಹೋಗಿ ಅಂತ ಕೇಳು"

"ಸಧ್ಯ ರಾತ್ರಿಯ ನಿದ್ದೆಯನ್ನು ಬಿಟ್ಟು, ಸರ್ಕಸ್‌ಗೆಲ್ಲಿ ಹೋಗ್ತಾರೆ. ಹಳ್ಳಿಯಲ್ಲಿ ಅಪರೂಪಕ್ಕೊಮ್ಮೆ ನಡೆಯುವ ನಾಟಕಗಳಿಗೇ ಕರೆದುಕೊಂಡು ಹೋಗುಲ್ಲ. ನಾನಂತೂ ಒಂದೇ ಒಂದು ನಾಟಕವನ್ನು ನೋಡಿಲ್ಲ.

"ನಿಮ್ಮಣ್ಣ ಇನ್ನೇನು ? ತಾನೂ ನಾಟಕಗಳನ್ನು ನೋಡುಲ್ಲ. ನಮ್ಮಗಳನ್ನು ಕಳಿಸುಲ್ಲ. ನಮ್ಮಪ್ಪಂಗೆ ಪಾಸುಗಳು ಸಿಗುತ್ತಿದ್ದವು. ಎಂತೆಂಥಾ ಭಾರಿ ಭಾರಿ ನಾಟಕ ಗಳಿಗೆ ನಮ್ಮಪ್ಪ ಕರ್ಕೊಂಡು ಹೋಗ್ತಿದ್ದ." ಲಕ್ಷ್ಮೀ ನೆನೆಪಿಸಿಕೊಂಡಳು, ಬಾಲ್ಯದ ದಿನಗಳನ್ನು.

"ಒಂದ್ಸಾರಿ, ಮಂಡ್ಯದಲ್ಲಿದ್ದಾಗ, ಇವರೆಲ್ಲ ನಾಟಕ ನೋಡೋಕೆ ಅಂತ ಹೋಗಿದ್ರು, ಆಗ ಏನಾಯ್ತು ಗೊತ್ತಾ?" ಸಾತಕ್ಕ ನಗುತ್ತಾ ವಿವರಿಸಿದಳು. ಗುಂಡಣ್ಣನಿಗೆ ಸೆಕೆಂಡ್ ಷಿಫ್ಟ್ ಇತ್ತು, ಮಧ್ಯಾಹ್ನ ಮೂರುವರೆಗೆ ಮನೆ ಬಿಟ್ಟರೆ, ರಾತ್ರಿ ಮನೆ ಸೇರುತ್ತಿದ್ದುದು ಮಧ್ಯರಾತ್ರಿಯ ನಂತರವೇ. ಯಾವುದೋ ನಾಟಕ ಮಂಡಳಿಯವರು ಹತ್ತಿರದಲ್ಲೇ ಎಲ್ಲೋ ಬಿಡಾರ ಹಾಕಿದ್ದರು. ಪ್ರತಿದಿನ, ನಾಟಕದ ಹಾಡುಗಳು ಸಂಭಾಷಣೆಗಳು ಕೇಳಿ ಬರುತ್ತಿದ್ದವು. ಲಕ್ಷ್ಮಿಗೆ ನಾಟಕಕ್ಕೆ ಹೋಗಿ ಬರುವ ಆಸೆ, ಗುಂಡಣ್ಣನಿಗೆ ನಾಟಕದ ಹೆಸರನ್ನು ಕೇಳಿದರೇ ಆಗ್ತಿರಲಿಲ್ಲ.

ಹಾಸನದಿಂದ ಸೀನ ಅಪ್ಪನ ತಿಥಿಗೆ ಅಂತ ಬಂದಿದ್ದವನು ಒಂದೆರಡು ದಿನ ಗಳ ಮಟ್ಟಿಗೆ ಉಳಿದುಕೊಂಡ. ಸಮೀಪದಲ್ಲಿದ್ದ ನಾಟಕದ ಟೆಂಟ್‌ಗೆ ಹೋಗಿ ಟಿಕೆಟ್ಟುಗಳನ್ನು ಕೊಂಡು ತಂದ. ಆಗ ಶಾಂತ ಇನ್ನು ಕೈಗೂಸು ಲಕ್ಷ್ಮೀ, ಸೀನ, ಅವನ ಹೆಂಡತಿ ನಾಗು, ಅವಳ ಚಿಕ್ಕ ತಮ್ಮ ಎಲ್ಲರೂ ಹೊರಟರು. ನನಗೆ ನಾಟಕ

ನೋಡುವ ಮನಸ್ಸಿರಲಿಲ್ಲವಾದ್ದರಿಂದ ರಾತ್ರಿಯ ಅಡಿಗೆಯನ್ನು ಮಾಡುವ ನೆಪ ಹೇಳಿ ಮನೆಯಲ್ಲೇ ಉಳಿದುಕೊಂಡೆ, ಅಡಿಗೆಯನ್ನು ಮಾಡಿ ತೆಗೆದಿಟ್ಟು ನಾನು ಫಲಾಹಾರವನ್ನು ತೆಗೆದುಕೊಂಡೆ,

ಹೊಟ್ಟೆಗೆ ಆಹಾರ ಬಿದ್ದ ಸ್ವಲ್ಪ ಹೊತ್ತಿನ ಮೇಲೆ ತೂಕಡಿಕೆ ಪ್ರಾರಂಭ ವಾಯಿತು. ಮಲಗಿದೆ ಚೆನ್ನಾಗಿ ನಿದ್ದೆ ಹತ್ತಿಬಿಟ್ಟಿತು. ನಾಟಕ ಮುಗಿಸಿಕೊಂಡು ಇವರುಗಳು ಬಂದು ಬಾಗಿಲನ್ನು ಬಡಿದರೂ ನನಗೆ ಎಚ್ಚರವಿಲ್ಲ. ನನ್ನನ್ನುಕೂಗಿ ಕರೆದರೂ ಎಚ್ಚರವಾಗಲಿಲ್ಲ. ಮಧ್ಯರಾತ್ರಿಯ ವೇಳೆಯಲ್ಲಿ ಮನೆ ಬಾಗಿಲ ಬಳಿ ನಿಂತು ಬಾಗಿಲು ಬಡಿದ ಸದ್ದು, ಮಗುವೂ ಭಯದಿಂದ ಅಳಲು ಪ್ರಾರಂಭಿಸಿತ್ತು. ಹೊರಗೆ ನಿಂತವರಿಗೆ ಚಡಪಡಿಕೆ, ಅಸಹನೆ, ನನಗೆ ಮಾತ್ರ ಸುಖನಿದ್ರೆ ಕಡೆಗೆ ಸೀನ ಮನೆಯ ಮೇಲೆ ಹತ್ತಿ, ಹೆಂಚನ್ನು ತೆಗೆದು, ಒಳಗೆ ಇಳಿದು ಬಂದು ನನ್ನನ್ನು ಎಬ್ಬಿಸಿದಾಗ, ನಾನು ಭಯದಿಂದ ನಿದ್ದೆ ಗಣ್ಣಿನಲ್ಲಿ "ಕಳ್ಳ, ಕಳ್ಳ ಅಂತ ಕಿರುಚಿಕೊಂಡೆ. ಅವನೇ ಮುಂಬಾಗಿಲನ್ನು ತೆಗೆದ. ಎಲ್ಲರೂ ಒಳಗೆ ಬಂದರು ಎಲ್ಲರೂ ನನ್ನನ್ನು ಚುಡಾಯಿಸು ವವರೇ.... ಮತ್ತೆ ಮತ್ತೆ ಅದೇ ಮಾತು ಗುಂಡಣ್ಣ ಷಿಪ್ಟ್ ಮುಗಿಸಿಕೊಂಡು ಬಂದರೂ ಯಾರೂ ಮಲಗಿರಲಿಲ್ಲ. ಅವನಿಗೆ ದಿಗಿಲು, ವಿಷಯ ತಿಳಿದರೆ ಬೈಯುವನೆಂದು ಯಾರೂ ಏನನ್ನು ಹೇಳಿರಲಿಲ್ಲ. ಆದರೆ ಅಡಿಗೆ ಮನೆಯಲ್ಲಿ ಊಟಕ್ಕೆ ಕೂತಿದ್ದಾಗ ಮಾಡಿನ ಹೆಂಚುಗಳನ್ನು ತೆಗೆದಿರುವುದನ್ನು ಕಂಡು ಏನೋ ಜರುಗಿದೆ ಎಂದು ಒತ್ತಾಯಮಾಡಿ ಕೇಳಿದಾಗ, ಹೇಳಲೇಬೇಕಾಗಿ ಬಂತು. ಎಲ್ಲರೂ ಚೆನ್ನಾಗಿ ಬೈಸಿ ಕೊಂಡು ಪೆಚ್ಚು ಮುಖ ಹಾಕಿಕೊಂಡಿದ್ದು ಆಯಿತು. ಅವತ್ನಿಂದ ನಾವ್ಯಾರೂ ನಾಟಕದ ವಿಷಯವನ್ನೇ ಮಾತನಾಡುಲ್ಲ.... ಹೀಗಾಯ್ತು ನಾಟಕದ ಕಥೆ" ಸಾತಕ್ಕ ಆ ದಿನವನ್ನು ನೆನೆಪಸಿಕೊಂಡು ನಕ್ಕಳು.

"ಇಲ್ಲೂ, ಆಗ ಈಗ ನಾಟಕದ ಮಂಡಳಿ ಬಂದು, ತಿಂಗಳಾನುಗಟ್ಟಳೆ ನಾಟಕ ಆಡ್ತಾರೆ. ಪ್ರತಿ ರಾತ್ರಿಯೂ ಹನ್ನೊಂದರ ಮೇಲೆ ಶುರುವಾಗಿ, ಬೆಳಗಿನ ಝಾವದ ತನಕ ಆಡುತ್ತಿದ್ದರು. ಯಾರು ಹೋಗಲಿ ಬಿಡಲಿ, ನಾಟಕದ ವೇಷಭೂಷಣ ಗಳಿಗೆ ಸಂಭಾಷಣೆ, ಹಾಡುಗಳಿಗೆ ಮಾರು ಹೋದ ಯುವಕರು, ನಿದ್ದೆಗೆಟ್ಟು ಕೂತಿರುತ್ತಿದ್ದರಂತೆ, ರಾತ್ರಿ ನಾಟಕ, ಬೆಳಗಿನ ಹೊತ್ತು ನಿದ್ದೆ, ಯುವಕರಲ್ಲಿ ಸೋಮಾರಿ ತನ ಹೆಚ್ಚುತ್ತಿದೆ ಅಂತ ಹಿರಿಯ ಗ್ರಾಮಸ್ಥರ ದೂರು. ಪಟೇಲರು ನಾಟಕ ಮಂಡಳಿ ಯವರನ್ನು ಕರೆಸುವುದನ್ನೇ ಕ್ರಮೇಣ ನಿಲ್ಲಿಸಿದರು. ಈ ಹಳ್ಳಿಯ ಜನರಿಗಿದ್ದ ಆ ಮನೋರಂಜನೆಯೂ ಇಲ್ಲವಾಯಿತು." ಪಾರ್ವತಿ ವ್ಯಥೆಯಿಂದ ಹೇಳಿದಳು.

"ಜನರಿಗೆ ಮನೋರಂಜನೆ ಬೇಕು. ಆದರೆ ಅದು ಮಿತಿ ಮೀರಿ ಕರ್ತವ್ಯವನ್ನು ಮರೆಯಬಾರದು. ಎಂತೆಂಥಾ ಒಳ್ಳೊಳ್ಳೆಯ ನಾಟಕದ ಕಂಪೆನಿಗಳಿವೆ. ಮಹಾ

ಭಾರತ, ರಾಮಾಯಣ, ದಶಾವತಾರದಂಥ ಪೌರಾಣಿಕ ನಾಟಕಗಳನ್ನಾಡಿಸಿ ಜನರನ್ನು ಮೆಚ್ಚಿಸಿದ್ದಾರೆ." ಲಕ್ಷ್ಮಿ ಪ್ರಶಂಸೆ ಮಾಡಿದಳು.

ಕಂಠಿಯ ತಂಗಿ, ತನ್ನ ಎರಡು ಮಕ್ಕಳೊಂದಿಗೆ ಒಂದೆರಡು ದಿನಗಳು ಅಣ್ಣನ ಮನೆಯ್ಲಿರಲೆಂದು ಬಂದಿದ್ದಳು. ಆ ಸಮಯದಲ್ಲಿ ಹಾಗೂ ಹೀಗೂ ಮೀನಾ ಮೇಷ ಧ್ವಣಿಸಿ, ಕಡೆಗೂ ಸರ್ಕಸ್ ನೋಡಿ ಬರುವ ಕಾರ್ಯಕ್ರಮವನ್ನು ಹಾಕಿಕೊಂಡರು ಎರಡೂ ಮನೆಯವರೂ ಹೋಗಿ ಬರಲು ಅನುಕೂಲವಾಗುವಂತೆ ಎರಡು ಎತ್ತಿನ ಗಾಡಿಗಳನ್ನು ಹೂಡಿದರು. ಮೇಲೆ ಕಮಾನು ಹಾಕಿ ಹೊದೆಸಿ ಒಳಗೆ ಜಖಾನವನ್ನು ಹಾಸಿ, ಮೆತ್ತೆಗಳನ್ನು ಹಾಸಿ ಕೂರಲು ಕಷ್ಟವಾಗದಂತೆ ಸಿದ್ಧಪಡಿಸಿದರು. ವೈಕುಂಠ ತಾನೂ ಬರುವ ಆಸೆಯನ್ನು ವ್ಯಕ್ತಪಡಿಸಿದ.

"ನೀನೂ ನಮ್ಮ ಜೊತೇಲಿ ಬಂದು ಬಿಟ್ರೆ ಮನೆ ಕಡೆ ಯಾರೋ.... ?" ಲಕ್ಷ್ಮಿ ಆಕ್ಷೇಪವನ್ನೆತ್ತಿದಳು. ವೈಕುಂಠ ನಿರಾಸೆಯ ಮುಖ ಮಾಡಿದ.

"ಎಲ್ಲೋ ಪಟೇಲ್ರ ಮನೆಯ ಆಳುಗಳು ಹೋಗಿ ನೋಡ್ಕೊಂಡು ಬಂದಿರಬೇಕು. ಅದಕ್ಕೇ ಇವನಿಗೂ ಆಸೆ. ಸರ್ಕಸ್ ಏನಿದ್ದರೂ ಚಿಕ್ಕ ಮಕ್ಕಳಿಗೆ ದೊಡ್ಡೋರಿಗೆ ಏನಿರುತ್ತೆ ?" ವೈಕುಂಠ ಕೆಟ್ಟದಾಗಿ ತಲೆಯನ್ನು ಕೆರೆದುಕೊಂಡ.

"ನಾಳೆ ನಾಡಿದ್ದರಲ್ಲಿ ನೀನೂ ಹೋಗಿ ಬರೂವಂತೆ. ಅಯ್ಯಾರಿಗೆ ಹೇಳಿ ನಿನ್ನನ್ನು ಕಳಿಸಿಕೊಡ್ತೀನಿ. ಕೆಟ್ಟ ಮುಖ ಹಾಕ್ಕೋಬೇಡ. ಮನೆ ಕಡೆ ಜೋಪಾನ. ದನಕರುಗಳ ಮೇಲೆ ನಿಗಾ ಇಡು..... ಕೊಟ್ಟಿಗೆ ಬಾಗಿಲನ್ನು ಸರಿಯಾಗಿ,ಹಾಕ್ಕೋ."

"ಆಯ್ತು ಅವ್ವಾವ್ರೆ...." ವೈಕುಂಠ ಆಸಕ್ತಿಯಿಂದ ಎತ್ತುಗಳನ್ನು ಅಲಂಕರಿಸಿದ್ದ. ಮಧ್ಯಾಹ್ನವೇ ಚೆನ್ನಾಗಿ ಮೈಯನ್ನು ತಿಕ್ಕಿ ತಿಕ್ಕಿ ಸ್ನಾನ ಮಾಡಿಸಿ, ಕೋಡುಗಳಿಗೆ ಕೆಮ್ಮಣ್ಣು, ಸುಣ್ಣವನ್ನು ಬಳಿದು, ಕೊರಳಿಗೆ ಹೊಸ ಗಂಟೆಗಳನ್ನು ಕಟ್ಟಿದ್ದ. ಎತ್ತುಗಳಿಗೆ ದೃಷ್ಟಿ ಆಗದಿರಲಿ ಅಂತ, ದಪ್ಪನೆಯ ಕಂಬಳಿದಾರವನ್ನು ಹೊಸೆದು ಕೊರಳಿಗೆ ಕಟ್ಟಿದ್ದ. ಕೋಡಿನ ತುದಿಗಳಿಗೆ, ಜಾತ್ರೆಯಿಂದ ಕೊಂಡು ತಂದಿದ್ದ ಬಣ್ಣದ ಕುಚ್ಚುಗಳನ್ನು ಕಟ್ಟಿದ್ದ.

"ಇವುಗಳಿಗೆ ಯಾಕೋ ಇಷ್ಟು ಅಲಂಕಾರ ? ನಿಂದು ಅತೀ ಅತಿ......" ಲಕ್ಷ್ಮಿ ಹೇಳಿದಳು.

"ಇರ್ಲಿ ಬಿಡ್ರವ್ವಾ, ಸರ್ಕಸ್ ಟೆಂಟ್ ಹತ್ರ, ಪೇಟೆಗೆ ಬರೋ ಗಾಡಿಗಳು ಎಲ್ಲಿಲ್ಲಿಂದ್ಲೋ ಬರುತ್ವೆ... ಎಲ್ಲಾ ಸಿಂಗರಿಸಿಕೊಂಡು ಬಂದಿರುತ್ವೆ, ಅವುಗಳು ಮಧ್ಯೆ ನಮ್ಮ ಸಿವಾ ಸಂಕರಾ ಚಂದಾಗಿ ಕಾಣೋದು ಬೇಡ್ರಾ ?"

"ಎತ್ತುಗಳಿಗೆ ಎಂಥಾ ಚೆಂದ !, ಗಾಡಿಗೆ ಹೂಡುವ ಹಾಗಿದ್ರೆ ಸಾಕು."

"ಸಿವಾ ಸಂಕರಾ ಇಬ್ಬರೂ ನಂಗೆ ಗೆಣೇರು ಇದ್ದಂಗೆ. ಅವ್ರು ಚೆಂದಾಕಿದ್ರೆ ನಂಗೆ ಬೋ ಕುಸಿ."

"ಏನು ಖುಷಿಯೋ, ಏನು ಕುಣಿತವೋ, ಸದಾ ಈ ದನಕರುಗಳಿಗೆ ಅಲಂಕಾರ ಮಾಡೋದ್ರಲ್ಲೇ ಸಮಯ ಕಳೀತೀಯ. ವಾಲಗ ಊದುಕ್ಕೆ ಬಂದಿದ್ದರೆ ಕೋಲೇ ಬಸವನ ವೇಷ ಹಾಕ್ಕೊಂಡು ಬೀದಿ ಬೀದಿ ಅಲೆಯಬಹುದಾಗಿತ್ತು ನೀನು." ಎಲ್ಲರೂ ನಕ್ಕಿದ್ದರು.

"ಕೋಲೇ ಬಸವ ಅನ್ನೊತ್ತಲ್ಲ ನೆಪ್ಪಾತು. ಈ ಸಾರಿ ಸಂಕ್ರಾಂತಿ ಅಬ್ಬಕ್ಕೆ ನಮ್ಮ ವಿನಾಯಕಂಗೆ ಕೋಲೇ ಬಸವನ ವೇಸ ಹಾಕೋವಾ?" ಉತ್ಸಾಹದಿಂದ ಹೇಳಿದ.

"ರಾಧೆ, ನಿನ್ನನ್ನ ಅಟ್ಟಿಸ್ಕೊಂಡು ಬರ್ತಾಳೆ ಅಷ್ಟೆ"

"ಏಯ್ ಬುಡಿ ಸಾಂತವ್ವಾ.... ಮಗೀಗೆ ಅಲಂಕಾರ ಮಾಡಿದ್ರೆ ತಾಯಿಗೆ ಕ್ವಾಪ ಬತ್ತದಾ ?"

"ಶಾಂತಾ... ಇತ್ಲಾಗೆ ಬಾ.... ಅವನ್ಗಂತೂ ಕೆಲ್ಸ ಇಲ್ಲ...." ಶಾಂತ ಒಳ ನಡೆದಳು

ಸಾಯಂಕಾಲ ಏಳೂವರೆಯ ಹೊತ್ತಿಗೆ ಎಲ್ಲರೂ ಊಟ ಮುಗಿಸಿ ಸಿದ್ಧರಾದರು. ಎಂಟಕ್ಕೆ ಮನೆ ಬಿಟ್ಟರೆ, ಒಂಭತ್ತೂವರೆಯ ಹೊತ್ತಿಗೆ ಸೇರಬಹುದು ಅಂತ ಶಾಸ್ತ್ರಿ ಮೊದಲೇ ಹೇಳಿದ್ದ. ಕುಡಿಯಲು ನೀರು, ಪ್ಲಾಸ್ಕಿನಲ್ಲಿ ಕಾಫಿ, ಮಕ್ಕಳಿಗೆ ತಿನ್ನಲು ತಿಂಡಿ, ಹಣ್ಣು, ಇತ್ಯಾದಿಗಳನ್ನು ಕೈ ಚೀಲಗಳಲ್ಲಿ ಹಾಕಿಕೊಂಡು ಗಾಡಿಯಲ್ಲಿ ಇಟ್ಟಿದ್ದಾಗಿತ್ತು. ಗಾಡಿಯ ಮೂಕಿಗೆ ಲಾಂದ್ರವನ್ನು ಹಚ್ಚಿ ಕಟ್ಟಿದ್ದಾಗಿತ್ತು.

ಒಂದರ ಹಿಂದೆ ಇನ್ನೊಂದು, ಎರಡೂ ಗಾಡಿಗಳು ಚಲಿಸಲಾರಂಭಿಸಿದವು. ಗಾಡಿ ಹೊಡೆಯುವ ಚೆಲುವಂಗೆ ಲಕ್ಷ್ಮಿ ಹೇಳಿದಳು. "ನಿಧಾನವಾಗಿ ಓಡ್ಸಪ್ಪ ನಮಗ್ಯಾರಿಗೂ ಎತ್ತಿನ ಗಾಡೀಲಿ ಕೂತು ಅಭ್ಯಾಸವಿಲ್ಲ.... ಮೈಕೈ ನೋಯುತ್ತೆ."

"ಜಟಕಾ ಗಾಡೀಲಿ ಇಷ್ಟು ಮೈ ಕೈ ಕುಲಕಲ್ಲ." ಸರೋಜ ನುಡಿದಳು

"ಕುದುರೆಯ ಓಟವೇ ಹಾಗೆ. ಆದರೆ ಜಟಕಾ ಗಾಡೀಲಿ ನಾಲ್ಕು ಜನಕ್ಕಿಂತ ಹೆಚ್ಚು ಜನ ಕೂರುಕ್ಕಾಗಲ್ಲ. ಗಾಡಿ ಹೊಡೆಯೋನು, ಇನ್ನು ಮುಂದೆ ಬನ್ನಿ ಬನ್ನಿ ಅಂತ ಹೇಳ್ತಾನೇ ಇರ್ತಾನೆ. ಆದರೂ ಕೂತೋರೆಲ್ಲಾ ಜಾರಿ ಜಾರಿ ಹಿಂದಕ್ಕೆ ಹೋಗ್ತಿರ್ತೀವಿ." ಲಕ್ಷ್ಮಿ ನುಡಿದಳು.

"ಎರಡಾಣೆ ಕೊಟ್ಟರೆ, ಇಡೀ ಮೈಸೂರನ್ನೆಲ್ಲಾ ಸುತ್ತಿ ಬರಬಹುದು" ಸಾತಕ್ಕ ಎಂದಳು.

"ಆಣೆ ಕಾಲ ಹೋಗ್ತಾ ಇದೆ ಅತ್ತಿಗೆ, ಸರಕಾರದವರು, ಹೊಸ ನಯಾ ಪೈಸೆಗಳನ್ನು ಚಲಾವಣೆಗೆ ತರ್ತಾ ಇದಾರೆ. ಇನ್ನು ಮುಂದೆ, ಮೂರು ಕಾಸು, ಒಂದ್ಹಾಣೆ, ಎರಡಾಣೆಯ ನಾಣ್ಯಗಳೇ ಇರುವುದಿಲ್ಲ."

"ಈಗ ಇರೋದನ್ನೆಲ್ಲ ಏನು ಮಾಡ್ತಾರೆ ?"

"ಕ್ರಮೇಣ ಚಲಾವಣೇನ ನಿಲ್ಲಿಸ್ತಾರೆ. ಒಂದು ಪೈಸೆ, ಎರಡು ಪೈಸೆ, ಐದುಪೈಸೆ, ಹತ್ತುಪೈಸೆಯ ನಾಣ್ಯಗಳು ಚಲಾವಣೆಗೆ ಬರುತ್ವೆ"

"ಹಾಗಾದ್ರೆ, ಒಂದು ರೂಪಾಯಿಗೆ ಎಷ್ಟು ಪೈಸೆಗಳು ಆಗುತ್ವೆ ?"

"ನೂರು ಪೈಸೆಗೆ ಒಂದು ರೂಪಾಯಿ. ಹದಿನಾರಾಣೆಗೆ ಸಮ."

"ಹಾಗೆಲ್ಲ ಬದಲಾವಣೆ ಆದ್ರೆ, ನಾವು ಲೆಖ್ಖ ಕಲಿಯೋದು ಹೇಗೆ ?" ಗಣಿತದ ಪುಸ್ತಕದಲ್ಲಿ ಕಾಸು, ಆಣೆ ರೂಪಾಯಿ ಅಂತಲೇ ಇದೆ."

"ಅದನ್ನೆಲ್ಲಾ ನಿಧಾನವಾಗಿ ಬದಲಾಯಿಸ್ತಾರೆ. ಹೊಸ ಪಠ್ಯಪುಸ್ತಕಗಳಲ್ಲಿ ಲೆಖ್ಖದ ರೀತಿಯೇ ಹೊಸದಾಗಿರುತ್ತೆ. ನಾಲ್ಕಾಣೆಗೆ ಇಪ್ಪತ್ತೈದು ಪೈಸೆ, ಎಂಟಾಣೆಗೆ ಐವತ್ತು ಪೈಸೆಗಳು, ಹದಿನಾರಾಣೆಗೆ ನೂರು ಪೈಸೆಗಳು. ಅಂದರೆ ಒಂದು ರೂಪಾಯಿ....."

"ಎಪ್ಪತ್ತೈದು ಪೈಸೆಯ ನಾಣ್ಯ ಇಲ್ವಾ ?"

"ಒಂದು ಐವತ್ತು ಪೈಸೆಯ ನಾಣ್ಯದ ಜೊತೆಗೆ ಇಪ್ಪತ್ತೈದು ಪೈಸೆಯ ನಾಣ್ಯವನ್ನು ಸೇರಸಿದರೆ ಎಪ್ಪತ್ತೈದು ಪೈಸೆ ಆಗುತ್ತೆ....."

"ಏನು ಪೈಸೆಗಳೋ ? ಗೊಂದಲವಾಗಿ ಕಾಣುತ್ತಮ್ಮ."

"ಕ್ರಮೇಣ ಎಲ್ಲಾ ಅರ್ಥವಾಗುತ್ತೆ ಅತ್ತಿಗೇ.. ಗಣಿತದ ಪಾಠಗಳಲ್ಲಿ ಸರಿಯಾಗಿ ಹೇಳಿ ಕೊಡ್ತಾರೆ."

'ಮೊದಲು ಮೇಷ್ಟ್ರುಗಳು ಎಲ್ಲವನ್ನು ಸರಿಯಾಗಿ ಕಲಿಯಬೇಕಲ್ಲ. ಮೊದಲೇ ಗಣಿತಶಾಸ್ತ್ರ ಅಂತಂದ್ರೆ ಕಬ್ಬಿಣದ ಕಡಲೆ. ಬರೀ ಕೂಡಿ, ಕಳೆಯುವ ಲೆಖ್ಖ ಅಲ್ಲ. ಆದಾಯ, ವ್ಯಯ, ಅಸಲು, ಲಾಭ, ಸರಳ ಬಡ್ಡಿ, ಚಕ್ರಬಡ್ಡಿ, ಒಂದೇ ಎರಡೇ ಎಲ್ಲವನ್ನು ಕಲಿಯಬೇಕಲ್ಲ."

"ಹೌದು ಕಲಿಯಲೇ ಬೇಕು. ಇಲ್ದಿದ್ರೆ ಪರೀಕ್ಷೇಲಿ ಪಾಸಾಗುವುದು ಕಷ್ಟ, ವ್ಯವಹಾರ ಮಾಡುವುದೂ ಕಷ್ಟ"

"ಸಧ್ಯ, ನನ್ನ ಪರೀಕ್ಷೆ ಮುಗಿದ ಮೇಲೆ, ಗಣಿತದ ಹೊಸ ಪಠ್ಯ ಪುಸ್ತಕಗಳು ಬರಲಿ," ಶಾಂತ ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಿದಳು.

"ನಿಂಡ್ಯಾವುದೇ ಪರೀಕ್ಷೆ, ನಿಂಗೆ ಮದುವೆ ಗೊತ್ತಾಗಿದೆ ಅಂತ ಅತ್ತಿಗೆ ಹೇಳ್ತಿದ್ರು"

"ಎಲ್.ಎಸ್. ಪರೀಕ್ಷೆಗೆ ಕಟ್ಟಿದೀನಿ ಸರೋಜ"

"ಪ್ರೈವೇಟ್‌ನಲ್ಲಿ ಕಟ್ಟಿದೀಯ. ಪಾಠಾನ ಯಾರು ಹೇಳಿ ಕೊಡ್ತಾರೆ ?"

"ಅಣ್ಣಾನೇ ಹೇಳಿ ಕೊಡ್ತಾರೆ."

"ನಿಮ್ಮ ಹಳ್ಳಿಯ ಸ್ಕೂಲಿನ ಮೇಷ್ಟ್ರ ಹತ್ತರ ಹೇಳಿಸ್ಕೋ... ಅವರು ಎಸ್.ಎಸ್.ಎಲ್.ಸಿ ಪಾಸು ಮಾಡಿರ್ತಾರೆ. ನಿಮ್ಮಣ್ಣಂಗೆ ಬಿಡುವು ಎಲ್ಲಿರುತ್ತೆ ?"

"ಅಣ್ಣ ಏನಂತಾರೋ ?....." ಅವರನ್ನ ಕೇಳ್ಬೇಕು

"ನಿಮ್ಮಣ್ಣಂಗೆ ಯಾಕೆ ಹೇಳ್ಬೇಕು ? ನೀನೇ ಕೇಳಿ ನೋಡು. ಹೇಗೂ ನಿನ್ನ ತಂಗೀರ್ಗೆ ಪಾಠ ಹೇಳಿ ಕೊಡೋಕೆ ನಿಮ್ಮ ಮನೆಗೆ ಬರ್ತಾರಂತೆ."

"ನಂಗೆ ಮುಜುಗರ ಆಗುತ್ತೆ." ಶಾಂತ ತಲೆ ಆಡಿಸಿದಳು.

"ನೀನು ಸುಮ್ನಿರು ಸರೋಜ. ಇದು ಮೈಸೂರಲ್ಲ ಹಳ್ಳಿ. ಅಣ್ಣ ಒಪ್ಪೊಲ್ಲ. ಮದುವೆ ಗೊತ್ತಾಗಿರೋ ಹುಡುಗಿ. ಅವನೋ ಗಂಡು ಹುಡುಗ. ಹಳ್ಳಿ ಜನ ಆಡ್ಕೋತಾರೆ."

"ಸಂಗೀತ ಕಲೀತಾಳಲ್ಲ. ಆ ಮೇಷ್ಟ್ರು ಗಂಡಸ್ರೇ ತಾನೆ ?"

"ಆತಂಗೆ ಮದುವೆಯಾಗಿದೆ. ನಾಲ್ಕು ಮಕ್ಕಳಿವೆ. ಆತ ವಾರಕ್ಕೆ ಒಂದು ದಿನ ಬರ್ತಾರೆ. ಬೆಳಿಗ್ಗೆ ಬಂದು ಸಾಯಂಕಾಲ ವಾಪಸ್ಸು ಹೊರಟು ಹೋಗ್ತಾರೆ."

"ಸರೋಜ ಒಂದೆರಡು ಹಾಡು ಹೇಳೇ..." ಯಾಕೋ ಮಾತು ಸಾಕಾಯ್ತು.

"ಶಾಂತ ಹೇಳಲಿ ಅವಳೀಗ ಹೊಸದಾಗಿ ಸಂಗೀತ ಕಲೀತಿದಾಳಲ್ಲ.......... ನಾನು ಎಂದೋ ಕಲಿತದ್ದು. ಈಗ ಎಂಥದೂ ಇಲ್ಲ." ಬೇಸರದಿಂದ ನುಡಿದಳು.

"ಶಾಂತಂಗೆ ಒಂದೋ ಎರಡೋ ಕೀರ್ತನೆಗಳಾಗಿವೆ ಅಷ್ಟೆ. ನೀನಾದ್ರೆ ಎಷ್ಟೊಂದು ದೇವರ ನಾಮಗಳನ್ನು ಕಲ್ತಿದೀಯ."

"ನಾನೂ ಮೈಸೂರ್ನಲ್ಲಿದ್ದರೆ, ಬೇಕಾದಷ್ಟು ದೇವರ ನಾಮಗಳನ್ನು ಕಲಿಯ ಬಹುದಾಗಿತ್ತು. ಈ ಕೊಂಪೇಲಿ ಏನೂ ಇಲ್ಲ." ಶಾಂತ ಎಂದಳು.

"ಶಾಂತ, ಹಾಗೆಲ್ಲಾ ಮಾತಾಡ್ಬಾರ್ದು. ನಿಮ್ಮಣ್ಣಂಗೆ ಕೇಳಿಸಿದ್ರೆ ಬೈದೇ ಇರ್ತಾನಾ? ನಿನ್ನ ಗಂಡ ಒಪ್ಪಿದರೆ, ನೀನು ಅಲ್ಲಿ ಸಂಗೀತ ಪಾಠವನ್ನು ಮುಂದು ವರೆಸಬಹುದು."

"ಹೋಗಲಿ, ಉರುಟಣೆಯ ಹಾಡುಗಳನ್ನು ಹೇಳು. ನಿಮ್ಮಮ್ಮ ಹೇಳಿ ಕೊಟ್ಟಿ ದಾರಂತಲ್ಲ" ಸರೋಜ ಗೇಲಿ ಮಾಡಿದಳು.

"ಥೂ, ಹೋಗ್ರೀ ಸರೋಜ."

"ಸರೋಜ ಅಂತ ಕರೀಬೇಡ ಅವಳು ವಯಸ್ನಲ್ಲಿ ನಿಂಗಿಂತ ದೊಡ್ಡೋಳು ವಾವೇಲಿ ನಿಂಗೆ ಚಿಕ್ಕಮ್ಮ ಆಗ್ಬೇಕು." ಸಾತಕ್ಕ ಶಾಂತನಿಗೆ ಹೇಳಿದಳು.

"ಪರವಾಗಿಲ್ಲ ಬಿಡಿ ಅತ್ಗೆ. ಅದೆಲ್ಲಾ ಹಳ್ಳಿ ಕಡೆ. ದೊಡ್ಡ ದೊಡ್ಡ ಊರು ಗಳಲ್ಲಿ, ಅಕ್ಕ, ಚಿಕ್ಕಮ್ಮ ಅತ್ತೆ ಅಂತ ಕರೆಯೋದೆಲ್ಲ ಕಡಿಮೆ ಆಗ್ತಿದೆ."

"ಆದ್ರೂ ಅದನ್ನೆಲ್ಲ ತಿಳ್ಕೊಂಡಿರ್ಬೇಕು ಸರೋಜ. ಆಮೇಲೆ ಅತ್ತೆ ಮನೆಯೋರು ನಮ್ಮನ್ನೇ ದೂಷಿಸ್ತಾರೆ."

"ಯಾರು ದೂಷಿಸ್ತಾರೆ ಅತ್ಗೇ ? ಅತ್ತೇನೇ ಇಲ್ಲ, ಅತ್ತಿಗೆಯರು ಮದುವೆಯಾಗಿ ಅವರವರ ಮನೇಲಿದಾರೆ. ಓರಗಿತ್ತಿಯರು ಬೇರೆ ಬೇರೆ ಇದಾರೆ. ಯಾವ

ತಾಪತ್ರಯವೂ ಇಲ್ಲ, ಹಾಯಾಗಿರ್ತಾಳೆ. ಶಾಂತ ಹಾಡೇ....." ಪುಸಲಾಯಿಸಿದಳು.

"ಮೊದಲು ನೀವು ಹೇಳಿ" ಸರೋಜ ಗಂಟಲನ್ನು ಸರಿ ಪಡಿಸಿಕೊಂಡು ಹಾಡಲು ಪ್ರಾರಂಭಿಸಿದಳು.

"ಗಜವದನಾ ಬೇಡುವೇ..... ಗೌರಿತನಯಾ" ಅವಳು ದಾಸರ ದೇವರ ನಾಮವನ್ನು ಪ್ರಾರಂಭಿಸುತ್ತಿದ್ದಂತೇ, ಹಿಂದಿನ ಗಾಡಿಯಲ್ಲಿ ಹರಟುತ್ತಿದ್ದವರು. ಮಾತು ನಿಲ್ಲಿಸಿ, ಹಾಡನ್ನು ಆಲಿಸಿದರು.

"ನಿನ್ನ ಹೆಂಡ್ತಿ ಹಾಡುತ್ತಿರುವ ಹಾಗಿದೆ" ಕಂಠಿ ಎಂದ.

"ಅಲ್ಲ, ಇದು ಲಕ್ಷ್ಮಿಯ ಧ್ವನಿಯಲ್ಲ, ಶಾಂತನೂ ಅಲ್ಲ."

"ಸಾವಿತ್ರಿ ಹಾಡ್ತಿದಾಳಾ ?" ಕುತೂಹಲದಿಂದ ಕೇಳಿದ.

"ಸಾವಿತ್ರಿಗೆ ದೇವರನಾಮಗಳು ಬರುಲ್ಲ.... ಏನಿದ್ರೂ ರಾಮಚರಿತ್ರೆ, ಶನಿಮಹಾತ್ಮೆ, ಶ್ರೀನಿವಾಸಕಲ್ಯಾಣ, ತುಳಸೀ ಮಹಾತ್ಮೆ ಇತ್ಯಾದಿ ಅಷ್ಟೇ ಅವಳ ಜಾಣತನ."

"ಹಾಗಂದ್ಕೋಬೇಡ. ಸಾವಿತ್ರಿ ಬೂದಿ ಮುಚ್ಚಿದ ಕೆಂಡ ಇದ್ದ ಹಾಗೆ. ಅವಳಿಗೆ ಗೊತ್ತಿಲ್ಲದ ಜಾಣತನ ಇಲ್ಲ. ಗಂಡ ಮಕ್ಕಳು ಅಂತ ಒಂದು ಸಂಸಾರ ಇದ್ದಿದ್ದರೆ ಹೇಗಿರುತ್ತಿದ್ಲೋ?" ಮಾದರಿ ಹೆಂಸಾಗಿರುತ್ತಿದ್ಲು.

"ಪೂರ್ವಾರ್ಜಿತ ಕರ್ಮ. ಅವಳ ಹಣೆಯಲ್ಲಿ ಈ ಯೋಗಗಳು ಇರಲಿಲ್ಲ. ನಾವೇನು ಮಾಡೋಕೆ ಆಗುತ್ತೇ ?"

"ನಿಮ್ಮಪ್ಪ ತುಂಬಾ ತಪ್ಪು ಮಾಡಿ ಬಿಟ್ರು ಶಾಸ್ತ್ರಿ. ಸಾವಿತ್ರಿ ಎಂಥಾ ರೂಪವಂತೆ, ಅಂಥೋಳ್ಗೇ ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿ, ಮಡಿ ಮಾಡಿ, ರೂಪವನ್ನೇ ಕೆಡಿಸಿ ಬಿಟ್ರು. ಅನ್ಯಾಯ ಮಾಡಿಬಿಟ್ರು."

"ಬಿಡು ಆ ಮಾತೆಲ್ಲಾ ಈಗ್ಯಾಕೆ ?" ಶಾಸ್ತ್ರಿಗೆ ಆ ಮಾತು ಹಿಡಿಸಲಿಲ್ಲ. ಸ್ವಲ್ಪ ಒರಟಾಗಿಯೇ ನುಡಿದ.

"ಸಾವಿತ್ರೀನ ಹೊಗಳಿದಾಗಲೆಲ್ಲಾ ನೀನು ಗುರ್ ಅಂತೀಯ ಯಾಕೆ ?" ಕಂಠಿಯ ಮಾತು ಅವನನ್ನು ಮತ್ತೂ ರೇಗಿಸಿತು. ಗಾಡಿಯಿಂದ ಧುಮುಕಿದ

"ನಾನು ಸ್ವಲ್ಪ ನೀರು ಕುಡಿದು ಬರ್ತೀನಿ ನಿಂಗೂ ಬೇಕಾ ?"

"ಏನೂ ಬೇಡ ಬಿಡು......" ಶಾಸ್ತ್ರಿ ಮುಂದಿನ ಗಾಡಿಯ ಬಳಿಗೆ ಬಂದ ಸರೋಜ ಹಾಡುವುದನ್ನು ನಿಲ್ಲಿಸಿದಳು.

"ಯಾಕೆ ನಿಲ್ಲಿಸಿಬಿಟ್ಟೆ ಹೇಳು ಮುಂದುವರೆಸು, ಲಕ್ಷ್ಮಿ ಸ್ವಲ್ಪ ಇತ್ಲಾಗೆ ನೀರು ತತ್ತಾ?" ಲಕ್ಷ್ಮಿ ಕಂಚಿನ ರೈಲು ಚೊಂಬಿನಿಂದ ಕಂಚಿನ ಲೋಟಕ್ಕೆ ನೀರನ್ನ ಬಗ್ಗಿಸಿ ಕೊಟ್ಟಳು. ಶಾಸ್ತ್ರಿ ಗಟಗಟನೆ ತಣ್ಣೀರನ್ನು ಕುಡಿದ. ಆದರೂ ಅವನ ಮನಸ್ಸು ತಣ್ಣಗಾಗಲಿಲ್ಲ. ಈಗ ಶಾಂತ ಹಾಡಲು ಪ್ರಾರಂಭಿಸಿದಳು. "ಓಡಿ ಬಾರಯ್ಯ ವೈಕುಂಠ

ಪತಿ ನಿನ್ನ .... ನೋಡುವೆ....." ಶಾಸ್ತ್ರಿ ಹಾಡನ್ನು ಆಲಿಸುತ್ತಾ ಗಾಡಿಯ ಹಿಂದೆ ಹಿಂದೆ ಹೆಜ್ಜೆ ಹಾಕಿದ.

"ಮೀನಾಕ್ಷಿಯೂ ಇದ್ದಿದ್ರೆ ಚೆನ್ನಾಗಿರ್ತಿತ್ತು.... ಅವಳೂ ಚೆನ್ನಾಗಿ ಹಾಡ್ತಿದ್ಲು" ಲಕ್ಷ್ಮಿ ಮೀನಾಕ್ಷಿಯನ್ನು ನೆನೆಪಿಸಿಕೊಂಡಳು. ಪಾರ್ವತಿಗೂ ಮಗಳ ನೆನಪಾಗಿ ಗಂಟಲು ಕಟ್ಟಿತು.

"ಅವಳಿಂದ ಕಾಗದವೇ ಬಂದಿಲ್ಲ, ಹೇಗಿದಾಳೋ ಏನೋ ?"

"ಹೇಗೇ ಇದ್ರೂ ಅದು ಅವಳ ಮನೆ ನಿನ್ನ ಮಗಳಿಗೆ ಸರಿಯಾಗಿ ತಿಳುವಳಿಕೆ ಹೇಳಿ ಕಳಿಸಿದೀಯ ತಾನೇ ?"

"ಹುಂ ಹೇಳ್ದೇ ಇರ್ತೀನಾ ? ಅವಳಿಗೆ ಮುಂಗೋಪ ಜಾಸ್ತಿ. ನಂಗೆ ಅದೇ ಚಿಂತೆ" ಪಾರ್ವತಿ ಆತಂಕದಿಂದ ನುಡಿದಳು.

"ಅವಳ ಗಂಡ ಮೂಗುದಾರ ಹಾಕಿ, ಮುಂಗೋಪವನ್ನು ಕಡಿಮೆ ಮಾಡ್ತಾನೆ ಬಿಡಿ ಅತ್ತಿಗೇ....." ಸರೋಜ ನಸು ನಕ್ಕು ನುಡಿದಾಗ, ಎಲ್ಲರೂ ಮುಗುಳ್ನಕ್ಕರು ಆದರೆ ಕತ್ತಲೆಯಲ್ಲಿ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣುವಂತಿರಲಿಲ್ಲ. "ಅಬ್ಬಾ....... ಹೊರಗೆ ಎಷ್ಟು ಕತ್ತಲೆ, ಆಕಾಶದ ತುಂಬಾ ಬರೀ ನಕ್ಷತ್ರಗಳೇ ಫಳಫಳ ಅಂತ ಹೊಳೆಯುತ್ತಿವೆ. ಎಷ್ಟು ಚೆನ್ನಾಗಿದೆ ಅಲ್ವಾ ?" ದಾರಿ ಸವೆದುದೇ ಗೊತ್ತಾಗಲಿಲ್ಲ. ಗಾಡಿಗಳು ಪೇಟೆಯ ಬೀದಿಗೆ ಬಂದಿದ್ದವು. ಡೇರೆಯ ಬಳಿ ನಿಂತವು.

"ಪದ್ಮಿನಿ, ರಾಗಿಣಿ ಏಳ್ರೇ.... ಪೇಟೆ ಬಂತು" ಲಲಿತ ಕಣ್ಣುಜ್ಜಿಕೊಳ್ಳುತ್ತಾ ಅವರಿಬ್ಬರನ್ನು ಎಬ್ಬಿಸಿದಳು. ಪಾರ್ವತಿ ದತ್ತನನ್ನು ಎಬ್ಬಿಸಿದಳು ಕವುಚಿಕೊಂಡು ಮುದುರಿ ಮಲಗಿದ್ದವನನ್ನು ಎಬ್ಬಿಸುವುದೇ ಕಷ್ಟವಾಗಿತ್ತು.

"ದತ್ತಾ ಏಳೋ, ಸರ್ಕಸ್ ನೋಡೂವಂತೆ ಏಳು"

"ಅವನು ಇಲ್ಲೇ ಬಿದ್ದುಕೊಂಡಿರಲಿ ಬಿಡು ಎಬ್ಬಿಸಬೇಡ"

"ಒಬ್ಬನನ್ನೇ ಗಾಡೀಲಿ ಬಿಟ್ಟು ಹೋಗೋದಾ ? ಅವನಿಗೇನು ತಿಳಿಯುತ್ತೇ?" ದತ್ತಾ ದತ್ತಾ ಏಳೋ....ಏಳದೇ ಇದ್ರೆ ಅಪ್ಪಯ್ಯ ಹೊಡೀತಾರೆ ಅಷ್ಟೇ." ದತ್ತ ಬೆಚ್ಚಿ ಎದ್ದು ಕೂರಲು ಪ್ರಯತ್ನಿಸಿದ.

"ಎದ್ದೇಳೋ ಕತ್ತೆ ಭಡವಾ...." ಅಪ್ಪನ ಧ್ವನಿ ಕೇಳಿ, ಗಾಬರಿಯಿಂದ ಏಳಲು ಹೋಗಿ ಗಾಡಿಯಿಂದ ನೆಲಕ್ಕೆ ಉರುಳಿ ಬಿದ್ದ.

"ಕಣ್ಣು ಕಾಣುಲ್ವಾ ? ಇಳಿ ಅಂತ ಯಾರು ಹೇಳಿದ್ರು.... ಹಾಕ್ತಿನಿ ನೋಡು" ಕಂಠಿ ಕೈ ಎತ್ತಿದ.

"ಸುಮ್ನೇ ಇರ್ಬಾರ್ದಾ ? ಎಲ್ರೂ ನಿಮ್ಮನ್ನೇ ನೋಡ್ತಿದಾರೆ."

"ನೋಡ್ಲಿ ಬಿಡು, ನಾನು ಯಾರ್ಗೂ ಹೆದರಬೇಕಾಗಿಲ್ಲ," ಅದುವರೆಗೂ ಸುಮ್ಮನಿದ್ದ

ರಾಜ ಗೊಣಗಿದ.

"ಇದಕ್ಕೇ ನಾನು ನಿಮ್ಮಗಳ ಜೊತೆಯಲ್ಲಿ ಎಲ್ಲಿಗೂ ಬರುಲ್ಲ. ಯವಾಗ ನೋಡಿದರೂ ಜಗಳ.........ಜಗಳ....... ತುಥ್" ರಾಜ ಕೆಕ್ಕರಿಸಿ ನೋಡಿದ.

"ಸುಮ್ನೆ ಇಳಿದು ಬಾ..... ಇನ್ನು ನೀನು ಶುರು ಮಾಡ್ಬೇಡ" ಗಾಡಿಯಿಂದ ಇಳಿದ ಸರೋಜ ರಾಜನ ಬಳಿಗೆ ಬಂದಳು.

"ರಾಜಾ.... ಇನ್ನು ಇಲ್ಲೇ ನಿಂತಿದೀಯಾ ? ಬೇಗ ಹೋಗಿ ಟಿಕೆಟ್ ತಗೊಂಡು ಬಾ....." ರಾಜಾ ಅಪ್ಪನ ಕಡೆ ನೋಡಿದ.

"ಅಪ್ಪಯ್ಯ ದುಡ್ಕೊಡಿ....."

"ನನ್ನತ್ರ ಇಲ್ಲ, ನಾನು ತಂದಿಲ್ಲ, ನಿನ್ನ ಮಾವನ ಹತ್ರ ಇಸ್ಕೋ..."

"ಯಾಕಣ್ಣಾ ಹೀಗಾಡ್ತೀಯ ಅವರ್‍ಯಾಕೆ ಕೊಡ್ಬೇಕು?" ಸರೋಜ ಪ್ರಶ್ನಿಸಿದಳು.

"ಕೊಡ್ಲಿ ಬಿಡು....ನನ್ನತ್ರ ಈಗ ಏನಿಲ್ಲ. ಮದುವೆ, ಪ್ರಸ್ಥ ಅಂತ ಖರ್ಚು ಮಾಡಿ ಬರಿಗೈಯವನಾಗಿದೀನಿ. ಸರ್ಕಸ್‌ಗೆ ನಾನೇನೂ ಯಾರನ್ನು ಹೊರಡಿಸ್ಲಿಲ್ಲ...."

"ಅಂತೂ ನೀನು ಮಾತ್ರ ಈ ಜನ್ಮದಲ್ಲಿ ಬದಲಾಗುಲ್ಲ" ಸರೋಜ ಅರೆ ಸಿಟ್ಟಿನಿಂದ ಕಂಠಿಯನ್ನು ಆಕ್ಷೇಪಣೆ ಮಾಡುತ್ತಿರುವಾಗಲೆ, ಶಾಸ್ತ್ರಿ ತಾನೇ ಹೋಗಿ, ಎಲ್ಲರಿಗೂ ಟಿಕೆಟ್‌ನ್ನು ಖರೀದಿಸಿದ. ತಣ್ಣನೆಯ ಚಳಿಗಾಳಿಗೆ, ಮುದುರಿ ಸೆರಗನ್ನು ಬಿಗಿಯಾಗಿ ಹೊದ್ದು ನಿಂತ ಸಾತಕ್ಕನಿಗೆ ಕಂಠಿಯ ಸಣ್ಣತನ ಅಸಹ್ಯವಾಯಿತು. "ಗಂಡನ ಈ ಬುದ್ಧಿಯನ್ನು ತಿಳಿದೂ, ಪಾರ್ವತಿ ಮಕ್ಕಳೊಡನೆ ಹೊರಡಬಾರದಾಗಿತ್ತು ಗಂಡನ ಈ ತರಹದ ನಾಟಕಗಳಲ್ಲಿ ಪಾರ್ವತಿ, ತಿಳಿದೋ, ತಿಳಿಯದೆಯೋ ಭಾಗಿಯಾಗ್ತಾಳೆ" ಎಂದುಕೊಂಡಳು.

"ಎಲ್ಲಾ ಒಂದೇ ಕಡೆ ಇರಿ.... ಎಲ್ಲೆಲ್ಲೋ ಓಡ್ಬೇಡಿ. ಶಾಂತಾ, ನೀನು ಅತ್ತೆಯ ಜೊತೇನೇ ಇರು.... ಪಾರ್ವತಿ, ಸರೋಜಾ ಎಲ್ರೂ ನಿಮ್ಮ ನಿಮ್ಮ ಮಕ್ಕಳ ಕೈ ಬಿಡಬೇಡಿ. ಲಲಿತಾ, ಪದ್ಮಿನಿ ರಾಗಿಣಿಯರ ಕೈ ಹಿಡ್ಕೋ.... ಎಂದು ಹೇಳುತ್ತಾ ಲಕ್ಷ್ಮಿ ವೆಂಕಟೇಶನನ್ನು ಸೊಂಟದಲ್ಲಿ ಕೂರಿಸಿಕೊಂಡು ಶಾಸ್ತ್ರಿಯ ಹಿಂದೆ ಹಿಂದೆಯೇ ಇದ್ದಳು. ಪಾರ್ವತಿ ದತ್ತನ ಕೈಯನ್ನು ಬಿಗಿಯಾಗಿ ಹಿಡಿದು ನಿಂತಿದ್ದಳು. ರಾಜಾ ಮುಬ್ಬುಗಂಟಿಕ್ಕಿಕೊಂಡಿದ್ದ. ಕಂಠಿ ಎಲ್ಲರಿಗಿಂತ ಹಿಂದೆ ಸಾಲಿನಲ್ಲಿ ಕಡೆಯವನಾಗಿ ನಿಂತಿದ್ದ ಎಲ್ಲರೂ ಒಳಗೆ ಬಂದು, ಸರಿಯಾದ ಜಾಗವನ್ನು ಹುಡುಕಿ ಕುಳಿತರು. ಮಕ್ಕಳು ಕುತೂಹಲದಿಂದ, ಆಶ್ಚರ್ಯದಿಂದ ವಿಶಾಲವಾಗಿದ್ದ ಸರ್ಕಸ್ ಡೇರೆಯ ಒಳಭಾಗವನ್ನು ಕತ್ತೆತ್ತಿ ನೋಡಿದರು. ಕೆಲವು ಕಡೆ ಬಣ್ಣ ಬಣ್ಣದ ದೀಪಗಳು ಉರಿಯುತ್ತಿದ್ದವು. ಕೆಲವು ಕಡೆ ಕತ್ತಲೆ ತುಂಬಿಕೊಂಡಿತ್ತು. ಮೇಲೆಲ್ಲೋ, ಆರ್ಕೆಸ್ಟ್ರಾದವರು, ಸಿನಿಮಾ ಹಾಡುಗಳನ್ನು ನುಡಿಸುತ್ತಿದ್ದರು. ಪ್ರದರ್ಶನದ ಸಮಯ ಪ್ರಾರಂಭವಾಯಿತು.

ಜೋರಾಗಿ ಗಂಟೆ ಬಾರಿಸಿತು. ವೀಕ್ಷಕರು ಸರಿಯಾಗಿ ಕುಳಿತು, ಮೈಯೆಲ್ಲಾ ಕಣ್ಣಾಗಿ, ಕಾರ್ಯಕ್ರಮಗಳು ನಡೆಯುವ ಸ್ಥಳದ ಕಡೆ ಗಮನ ಹರಿಸಿದರು. ಒಬ್ಬೊಬ್ಬರಾಗಿ ಕಲಾವಿದರುಗಳು ಬಂದು ತಮ್ಮ ತಮ್ಮ ಕಲೆಯನ್ನು ಪ್ರದರ್ಶಿಸತೊಡಗಿದರು.

ಮೊದಲಿಗೆ ಸೈಕಲ್ ಸವಾರರ ತಂಡವೊಂದು ಆಗಮಿಸಿತು. ವಿವಿಧ ನಮೂನೆಯ ಸೈಕಲ್‌ಗಳು, ಸೈಕಲ್ ಸವಾರರು, ಕುಳಿತು ನಿಂತು, ಮಲಗಿ ಸೈಕಲ್‌ಗಳನ್ನು ಓಡಿಸಿದರು. ಒಂದೊ ಒಂದು ಸೈಕಲ್ ಮೇಲೆ ಓಡುತ್ತಾ ಓಡುತ್ತಾ ಹತ್ತಿ, ನಾಲ್ಕೈದು ಜನರು ಸವಾರಿ ಮಾಡುವಾಗ ಅದ್ಭುತ ಎನಿಸಿತ್ತು. ಒಂದೇ ಚಕ್ರದ ಸವಾರನೊಬ್ಬ ವಿವಿಧ ರೀತಿಯಲ್ಲಿ ಸೈಕಲನ್ನು ಓಡಿಸಿದ. ಪ್ರೇಕ್ಷಕರು ಹರ್ಷೋದ್ಗಾರ ಮಾಡಿದರು. ವಿವಿಧ ಭಂಗಿಗಳಲ್ಲಿ ಒಟ್ಟಿಗೇ ಹತ್ತಾರು ಜನ ಸವಾರರು ಒಬ್ಬರಿಗೊಬ್ಬರು ಢಿಕ್ಕಿ ಕೊಡದೇ ಅತಿ ಜಾಣತನದಿಂದ ಅನೇಕ ಸುತ್ತುಗಳನ್ನು ಗೊಂದಲ ಹುಟ್ಟಿಸುವಂತೆ ಓಡಿಸಿದರು. ಎಲ್ಲರೂ ಚಪ್ಪಾಳೆಯನ್ನು ತಟ್ಟಿದರು. ಯುವತಿಯೊಬ್ಬಳು ಎತ್ತರದಲ್ಲಿ ಕಟ್ಟಿದ್ದ ತಂತಿಯ ಮೇಲೆ ನಡೆದು ಬರುವಾಗ, ಎಲ್ಲಿ ಬಿದ್ದು ಬಿಡುವಳೋ ಎಂಬಂತೆ ಉಸಿರು ಬಿಗಿ ಹಿಡಿದು ಅವಳ ಚಲನವನ್ನೇ ನೋಡುತ್ತಿದ್ದರು. ಒಂದೇ ಕಾಲಲ್ಲಿ ನಿಂತು, ಚಮತ್ಕಾರ ಗಳನ್ನು ಮಾಡಿ ತೋರಿಸಿದಳು. ಮತ್ತೊಬ್ಬಳು, ಕೆಳಗೆ ಇದ್ದ ಬಫೂನ್ ಕೊಡುವ ಕಪ್ ಹಾಗೂ ಸಾಸರ್‌ಗಳನ್ನು, ತಂತಿಯ ಮೇಲೆ ನಿಂತುಕೊಂಡೇ, ಕಾಲಿನಲ್ಲಿ ಎತ್ತಿ ಎತ್ತಿ ಎಸೆದುಕೊಳ್ಳುತ್ತಾ ತಲೆಯ ಮೇಲೆ ಒಂದರ ಮೇಲೆ ಒಂದನ್ನು ಜೋಡಿಸಿದಳು. ಮಧ್ಯೆ ಮಧ್ಯೆ ಬಫೂನ್‌ಗಳು ಬಂದು ಚೇಷ್ಟೆಮಾಡಿ ನಗಿಸುತ್ತಿದ್ದರು. ಅವರ ವಿಚಿತ್ರ ವೇಷ ಅವರ ಹಾವಭಾವ, ಕುಣಿದು, ಕುಪ್ಪಳಿಸಿ ಆಡುವ ರೀತಿ ಮಕ್ಕಳನ್ನು ರಂಜಿಸು ತ್ತಿದ್ದವು.

ನಂತರ ವಿವಿಧ ಪ್ರಾಣಿಗಳು ಪ್ರದರ್ಶನಗಳ್ನು ನೀಡಿದವು. ನಾಯಿಗಳು ಕರಡಿಗಳು ಸೈಕಲನ್ನು ಓಡಿಸಿದವು. ಆನೆಗಳು ತಮ್ಮ ಮೈ ಭಾರವನ್ನೆಲ್ಲಾ ಒಂದುಗೂಡಿಸಿ, ಒಂದು ಕಾಲಿನ ಮೇಲೆ ನಿಂತು, ಹಿಂಗಾಲುಗಳ ಮೇಲೆ ನಿಂತು ಸೊಂಡಿಲನ್ನು ಆಡಿಸಿ ಘೀಳಿಟ್ಟವು. ಒಂದರ ಬಾಲವನ್ನು ಒಂದು ಹಿಡಿದು ನಾಲ್ಕಾರು ಸುತ್ತು ನಡೆದವು. ಆರ್ಕೆಷ್ಟ್ರಾದವರು ನುಡಿಸುವ ವಾದ್ಯಮೇಳಗಳಿಗೆ ತಕ್ಕಂತೆ, ತಮ್ಮ ಆಟವನ್ನು ಕಲಾವದರು ಪ್ರದರ್ಶಿಸುತ್ತಿದ್ದರು.

ಪಳಗಿಸಿದ ಹುಲಿ, ಸಿಂಹಗಳನ್ನು ಬೋನಿನಲ್ಲಿಟ್ಟುಕೊಂಡು ತಳ್ಳಿಕೊಂಡು ಬಂದು ಮಧ್ಯದಲ್ಲಿಟ್ಟರು. ರಿಂಗ್ ಮಾಸ್ಟರ್ ಪ್ರಾಣಿಗಳನ್ನು ಹೊರಬಿಟ್ಟು ಹತ್ತುವ ಇಳಿಯುವ, ಧುಮುಕುವ, ಉರಿವ ಪಂಜಿನ ಮಧ್ಯೆ ತೂರಿ ಹೋಗುವ, ಜಿಗಿಯುವ ಮೊದಲಾದ ಆಟಗಳನ್ನು ಆಡಿಸಿದ. ಪ್ರೇಕ್ಷಕರ ಚಪ್ಪಾಳೆಯ ದನಿ ಆಕಾಶವನ್ನು ಮುಟ್ಟಿತು, ಕೆಲವೊಮ್ಮೆ ಪ್ರಾಣಿಗಳು ಸಿಟ್ಟಿನಿಂದ ಘರ್ಜಿಸುವಾಗ ಪ್ರೇಕ್ಷಕರು ಭಯಗೊಳ್ಳುತ್ತಿದ್ದರು.

ಮೇಲೆ ತೂಗಾಡುತ್ತಿದ್ದ ಝೀಕು ಉಯ್ಯಾಲೆಗಳನ್ನು ಹಿಡಿದು ನಿಂತಿದ್ದ ಕಲಾಕಾರರು, ತಮ್ಮ ಪ್ರದರ್ಶನವನ್ನು ಪ್ರಾರಂಭಿಸಿದರು. ವೇಗವನ್ನು ಹೆಚ್ಚಿಸುತ್ತಾ ಉಯ್ಯಾಲೆಯನ್ನು ಝೀಕುತ್ತಾ, ಮತ್ತೊಂದು ಉಯ್ಯಾಲೆಗೆ ಜಿಗಿಯುತ್ತಿದ್ದರು. ತಲೆಕೆಳಗಾಗಿ, ಒಬ್ಬರ ಕಾಲನ್ನು ಇನ್ನೊಬ್ಬರು ಹಿಡಿದು, ಇನ್ನೊಬ್ಬರ ಕೈಯನ್ನು ಮತ್ತೊಬ್ಬರು ಹಿಡಿದು, ಉಸಿರು ಕಟ್ಟಿಸುವ ರೀತಿಯಲ್ಲಿ ವಿವಿಧ ಬಗೆಯಲ್ಲಿ ಪ್ರದರ್ಶನ ವನ್ನು ನೀಡಿ, ಅಬ್ಬಾ ! ಎಂಥಾ ಸಾಹಸ ಎಂದು ಅಚ್ಚರಿ ಪಡುವಂತೆ ಮಾಡಿದರು.

ಮಧ್ಯೆ ಮಧ್ಯೆ ಮಕ್ಕಳಿಗೆ ಮುದ ನೀಡುವ ಜೋಕರ್‌ಗಳು ಬಂದು ವಿಧ ವಿಧವಾಗಿ ಕುಣಿದು ಕುಪ್ಪಳಿಸಿ, ನಗೆ ಚಟಾಕಿಗಳನ್ನು ಹಾರಿಸಿ ತೂಕಡಿಸುವ ಮಕ್ಕಳು ಎಚ್ಚರಗೊಳ್ಳುವಂತೆ ನಗುವಂತೆ ಮಾಡುತ್ತಿದ್ದರು.

ಹೀಗೆ ಹತ್ತು ಹಲವಾರು ಪ್ರದರ್ಶನಗಳ ನಂತರ ಮೃತ್ಯು, ಪಂಜರದಲ್ಲಿ ಮೋಟಾರ್ ಬೈಕ್‌ನ್ನು ವೇಗವಾಗಿ ಓಡಿಸುವ ಪ್ರದರ್ಶನ ಪ್ರಾರಂಭವಾಯಿತು. ಗೋಲಾಕಾರದ ದೊಡ್ಡ ಮೃತ್ಯು ಪಂಜರದೊಳಗೆ, ಮೊದಲಿಗೆ ಒಬ್ಬ ಸವಾರ ನಾಲ್ಕಾರು ಸುತ್ತು ಸುತ್ತುವ ವೇಳೆಗೆ, ಮತ್ತೊಬ್ಬ ಸವಾರ ಅವನನ್ನು ಸೇರಿಕೊಂಡ. ಒಬ್ಬರಿಗೊಬ್ಬರು ಢಿಕ್ಕಿ ಹೊಡೆಯದಂತೆ, ವೇಗವಾಗಿ, ಗೋಲಾಕಾರದಲ್ಲಿ ಬೈಕ್‌ನಲ್ಲಿ ಸುತ್ತುವ ಚಮತ್ಕಾರ ಉಸಿರನ್ನು ಬಿಗಿ ಹಿಡಿಯುವಂತೆ ಮಾಡಿತ್ತು. ಅಷ್ಟರಲ್ಲಿ ಮತ್ತೂ ಒಬ್ಬ ಬೈಕ್ ಸವಾರ, ಆ ಪಂಜರದೊಳಗೆ ಧುಮುಕಿ ಸೇರಿಕೊಂಡ. ಮೂರು ಜನ ಬೈಕ್ ಸವಾರರು ಎಚ್ಚರದಿಂದ ಚಮತ್ಕಾರಯುತವಾಗಿ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ಆಕರ್ಷಿಸಿದರು. ಕ್ರಮೇಣ ವೇಗವನ್ನು ಕಡಿಮೆ ಮಾಡುತ್ತಾ, ಸವಾರರು ಒಬ್ಬೊಬ್ಬರಾಗಿ ಹೊರಬಂದು ವೀಕ್ಷಕರೆದುರು ಮತ್ತೊಂದು ಸುತ್ತು ಬಂದು, ಅವರುಗಳ ಮಧ್ಯೆಯೇ ಡೇರೆಯಿಂದ ಹೊರಕ್ಕೆ ಜಿಗಿದು ಹೊರಟು ಹೋದರು. ಪ್ರೇಕ್ಷಕರ ಚಪ್ಪಾಳೆ ಮುಗಿಲನ್ನು ಮುಟ್ಟುವಂತಿತ್ತು. ಆರ್ಕೆಸ್ಟ್ರಾದವರು ರಾಷ್ಟ್ರಗೀತೆಯನ್ನು ನುಡಿಸಿದರು. ಪ್ರೇಕ್ಷಕರು ಎದ್ದು ನಿಂತು ಗೌರವವನ್ನು ಸಲ್ಲಿಸಿದರು. ಅಲ್ಲಿಗೆ ಪ್ರದರ್ಶನ ಮುಕ್ತಾಯಗೊಂಡಿತ್ತು.

ಮಧ್ಯರಾತ್ರಿ ಮೀರಿ ಹೋಗಿತ್ತು. ಹೊರಗಿನ ಚಳಿಗಾಳಿ ಮೈಯನ್ನು ಕೊರೆಯುವಂತಿತ್ತು. ಡೇರೆಯ ಒಳಗಿನಿಂದ ಹೊರಬಂದವರು, ಅಲ್ಲಿಂದ ತಮ್ಮ ತಮ್ಮ ಮನೆಯ ದಾರಿಯನ್ನು ಹಿಡಿಯುವ ಆತುರದಲ್ಲಿದ್ದರು. ನೂಕು ನುಗ್ಗಲುಗಳಲ್ಲಿ ತೂರಿಕೊಂಡು ಒಂದು ಕಡೆಗೆ ಬಂದು ನಿಂತಾಗ, ಪಾರ್ವತಿಗೆ ದತ್ತ ತಮ್ಮೊಡನೆ ಇಲ್ಲ. ಎಲ್ಲೋ ತಪ್ಪಿಸಿಕೊಂಡಿದಾನೆಂಬ ಅರಿವಾಗಿ, ಅವಳ ಎದೆ ಢವಗುಟ್ಟಿತು. ದಿಕ್ಕು ತೋಚದಂತೆ ಅಳತೊಡಗಿದಳು. ಕಂಠಿ ಕೋಪದಿಂದ ಅವಳ ಮೂತಿಯನ್ನು ತಿವಿದ. "ನಾನು ಬೇಡ ಅಂತ ಹೇಳ್ದಾಗ ಕೇಳ್ಲಿಲ್ಲ. ನಂಗೊತ್ತಿತ್ತು ಹೀಗೇನಾದ್ರೂ ಎಡವಟ್ಟು ಆಗುತ್ತೆ

ಅಂತ. ಅನುಭವಿಸು...." ಬೈದ.

"ಈ ಜಾಗ ಬಿಟ್ಟು ಇನ್ನೆಲ್ಲಿಗೆ ಹೋಗ್ತಾನೆ ! ಇಲ್ಲೇ ಎಲ್ಲಾದ್ರೂ ಮಲಗಿರಬಹುದು. ಹುಡುಕಿದರೆ ಆಯ್ತು... ನೀನು ಗಾಬರಿ ಆಗ್ಬೇಡ...." ಸಾತಕ್ಕ ಪಾರ್ವತಿಗೆ ಸಮಾಧಾನ ವನ್ನು ಹೇಳಿದಳು.

"ನೀನು ಸುಮ್ನಿರು ಸಾವಿತ್ರಿ. ನಿಂಗೂ ಇಂಥಾ ಒಬ್ಬ ದಡ್ಡ ಮಗ ಇದ್ದಿದ್ರೆ, ನಮ್ಮ ಕಷ್ಟ ಏನೂಂತ ಗೊತ್ತಾಗ್ತಿತ್ತು." ಸಾವಿತ್ರಿಗೆ ಹೇಳಿದ

"ಶ್ರೀಕಂಠಾ, ಏನಾಯ್ತು ಅಂತ ಹೀಗಾಡ್ತಿಯ ? ಇಂಥಾ ಗೊಂದಲದಲ್ಲಿ ಮಕ್ಕಳು ಕಳೆದು ಹೋಗುವುದು ಸಹಜ. ನೀನು ಎಲ್ಲರನ್ನೂ ದೂಷಿಸಬೇಡ ಒಳಗೆ ಹೋಗಿ ಮ್ಯಾನೇಜರ್‌ಗೆ ಹೇಳಿದ್ರೆ, ಮೈಕ್‌ನಲ್ಲಿ ಕೂಗಿಸ್ತಾರೆ. ಎಲ್ಲಿದ್ರೂ ಬರ್ತಾನೆ" ಸರೋಜ ಅಣ್ಣನ ಬದಿಗೆ ಬಂದು ನಿಂತು ನುಡಿದಳು.

"ಹುಂ.... ಬರ್ತಾನೆ ಎಲ್ಲಿ ಗೊರಕೆ ಹೊಡ್ಕೊಂಡು ಬಿದ್ದಿದಾನೋ! ಇನ್ನು ಬೆಳಿಗ್ಗೇನೇ ಏಳೋದು ಅಲ್ಲೀವರ್ಗೂ ಬಿದ್ದಿರ್‍ತಾನೆ. ನಿಗವಾಗಿ ಆತನನ್ನು ನೋಡ್ಕೋ ಳ್ಳೋಕೆ ಆಗದಿದ್ಮೇಲೆ ಅವನನ್ಯಾಕೆ ಕರ್‍ಕೊಂಡು ಬರ್ಬೇಕು ಇವಳು? ಅವನೊಬ್ಬ ಪ್ರಾರಬ್ಧ ಇವಳೊಬ್ಬ ಮೂದೇವಿ... "

"ಕಂಠಿ, ಹೀಗೆ ಸದಾ ಕಹಿಯಾಗಿ ಯಾಕೆ ಮಾತಾಡ್ತೀಯ? ಒಳಗೆ ಹೋಗಿ ವಿಚಾರಿಸೋಣ ನಡೀ..... ನೀವುಗಳೆಲ್ಲಾ ಹೋಗಿ ಗಾಡಿಯಲ್ಲಿ ಕೂತಿರಿ. ನಾವು ಅವನನ್ನು ಹುಡುಕಿಕೊಂಡು ಬರ್ತೀವಿ" ಶಾಸ್ತ್ರಿ ಕಂಠಿಯನ್ನು ಕರೆದ.

"ಸರೋಜ, ನಂಗೆ ತುಂಬಾ ಭಯ ಆಗ್ತಿದೆ ಕಣೇ. ಮೂರ್ಛೆ ಬಂದು ಎಲ್ಲಾದ್ರು ಬಿದ್ದು, ಏನಾದ್ರು ಹೆಚ್ಚು ಕಡಿಮೆ ಆಗಿ ಹೋಗಿದ್ರೇ?" ಪಾರ್ವತಿ ಅತ್ತಳು.

"ಹಾಗೇನೂ ಆಗಿರುಲ್ಲ, ನೀವ್ಯಾಕೆ ಭಯ ಪಡ್ತೀರಿ ಅತ್ತಿಗೆ? ನೀವು ಸುಮ್ನೆ ಅಳ್ಬೇಡಿ... ಅಣ್ಣ, ಭಾವ ಇಬ್ರೂ ಹೋಗಿದಾರೆ ಹುಡುಕಿ ಕರ್‍ಕೊಂಡು ಬರ್ತಾರೆ.... ನಿಮ್ಮ ಜೊತೇಲೇ ಇದ್ನಲ್ಲ. ಅದ್ಹೇಗೆ ತಪ್ಪಿಸ್ಕೊಂಡ ?"

"ನಂಗೆ ಅದೇ ಗೊತ್ತಾಗ್ತಿಲ್ಲ.... ಯಾವಾಗ ತಪ್ಪಿಸ್ಕೊಂಡ್ನೋ? ಎಲ್ಲಿ ಹೋದ್ನೋ? ಒಂದು ವೇಳೆ ಹುಲಿಯೋ ಸಿಂಹವೋ ಅವನನ್ನು ತಿಂದು ಹಾಕಿ ಬಿಟ್ಟಿದ್ರೆ. ಏನ್ಗತಿ?"

"ಕಾಟ ಕಳೀತು ಅಂತ ಅಂದ್ಕೊ...... ದಿನ ದಿನ ಅವನ ಬೀಳಾಟ, ಅಪ್ಪನ ಹೊಡೆಯಾಟ, ಎಲ್ಲವನ್ನು ನೋಡಿ ನೋಡಿ ಸಾಕಾಗಿದೆ" ರಾಜ ನುಡಿದ.

"ಥೂ ಬಿಡ್ತು ಅನ್ನು ಅಮ್ಮನ ಹತ್ರ ಹೀಗಾ ಮಾತಾಡೋದು? ಹೆತ್ತ ಕರುಳಿನ ಸಂಕಟ ನಿಂಗೇನು ಅರ್ಥವಾಗುತ್ತೇ ? ನೀನೂ ನಿಮ್ಮಪ್ಪನ ಹಾಗೆ ಕಟುಕನ ಥರ ಮಾತಾಡ್ಬೇಡ. ಸರೋಜ ಬೈದಳು.

"ಅಲ್ಲಾ ನೀವೇ ಹೇಳಿ ಅತ್ತೆ, ಅವನೋ ಮೊದಲೇ ಖಾಯಿಲೆಯವನು.

ಸರ್ಕಸ್ ಯಾಕೆ ಅವನಿಗೆ? ಅವನನ್ನು ಕರ್ಕೊಂಡು ಬಂದ್ದೇ ತಪ್ಪು. ನಾನು ಎಲ್ಲರ ಜೊತೆಯಲ್ಲಿ ಬಂದದ್ದು ಇನ್ನೂ ತಪ್ಪು." ಎಂದ ರಾಜ.

"ಜವಾಬ್ದಾರಿ ಇರೋ ಹುಡುಗ ಮಾತಾಡೋ ರೀತೀನ ಇದು ? ತಿಳುವಳಿಕೆ ಇದ್ದೂ ಹೀಗಾಡ್ತೀಯಲ್ಲ ರಾಜಾ.... ಯಾಕಪ್ಪಾ ?"

"ಬಿಡಿ ಅತ್ತೆ, ಹೇಳೋರಿಗೆ ಸುಲಭ ಅನುಭವಿಸೋರಿಗೆ ಗೊತ್ತು."

ಪಾರ್ವತಿ ಮಗನ ಕೆನ್ನೆಗೆ ಹೊಡೆಯಲೆಂದು ಕೈ ಎತ್ತಿದಳು. ಸರೋಜ ಅತ್ತಿಗೆಯನ್ನು ತಡೆದಳು. "ಒಬ್ಬ ಮಗ ತಪ್ಪಿಸ್ಕೊಂಡಿದಾನೆ ಈಗ ಇವನೂ ಸಿಟ್ಟು ಮಾಡ್ಕೊಂಡು ಎಲ್ಲಾದ್ರು ಹೊರಟು ಹೋದ್ರೆ, ಯಾರನ್ನ ಅಂತ ಹುಡುಕ್ತಿರಿ? ಬನ್ನಿ ನಾವುಗಳು ಗಾಡೀಲಿ ಕೂತಿರೋಣ.... ದೇವರ ಧ್ಯಾನ ಮಾಡಿ.

"ನಮ್ಮ ದತ್ತನಿಗೆ ಏನೂ ಆಗದಿರಲಿ, ಬೇಗ ಸಿಗಲಿ ಪಾರ್ವತಿ ಎಲ್ಲರಿಗೂ ಕೇಳುವಂತೆ ಪ್ರಾರ್ಥಸಿದಳು. ಪ್ರಾರ್ಥನೆ ದೇವರನ್ನು ತಲುಪಿರಬೇಕು... ಕಂಠಿ ದತ್ತನನ್ನು ದರದರನೆ ಎಳೆದುಕೊಂಡು ಬಂದ. ದತ್ತ ಕೆಟ್ಟದಾಗಿ ಕಿರುಚಿ ಅಳುತ್ತಿದ್ದ. ಇಂತಾ ಮಗನ್ನ ಹೆತ್ತಿದೀಯಲ್ಲ, ನಿನ್ನನ್ನ ಎಡಗಾಲ ಎಕ್ಕಡದಲ್ಲಿ ಹೊಡೀಬೇಕು. ಪಾರ್ವತಿ, ಅಸಹನೆಯಿಂದ ದತ್ತನ ಕೆನ್ನೆಗೆ ರಪರಪನೆ ಹೊಡೆದಳು. ಶಾಸ್ತ್ರಿ ದತ್ತನನ್ನು ಹಿಂದಕೆ ಎಳೆದುಕೊಂಡ.

"ನಿನಗೂ ಹುಚ್ಚು ಹಿಡೀತಾ ಹೇಗೆ ? ತಿಳುವಳಿಕೆ ಇಲ್ಲದ ಹುಡುಗನ್ನ ನೀನೂ ಹೊಡಿತೀಯಲ್ಲ. ನಿಂಗೆ ವ್ಯಥೆ ಆಗುಲ್ವಾ ?"

"ಮತ್ತೇನು ಮಾಡ್ಲೀ? ಸದಾ ನನ್ನ ಹೊಟ್ಟೆನ ಉರಿಸ್ತಾನೆ ಪಾಪಿ. ಸದಾ ಮನೇಲೇ ದಿಂಡ ಪಿಂಡವಾಗಿ ಬಿದ್ದಿರ್ತಾನಲ್ಲ ಅಂತ ಕರ್ಕೊಂಡು ಬಂದ್ರೆ, ಇಲ್ಲಿಯೂ ನಂಗೆ ನೆಮ್ಮದಿಯೇ ಇಲ್ಲದಾಗಿದೆ. ಎಲ್ಲಿ ಅಡಗಿ ಹೋಗಿದ್ದ ?"

"ಅದ್ನೆಲ್ಲಾ ನಿಧಾನವಾಗಿ ಹೇಳ್ತೀನಿ. ಈಗ ಎಲ್ಲರೂ ಗಾಡೀಲಿ ಕೂತ್ಕೊಳ್ಳಿ, ಈಗಾಗ್ಲೇ ಎರಡು ಗಂಟೆಯಾಗಿದೆ." ಎಲ್ಲರೂ ಗಾಡಿಯನ್ನೇರಿದರು ಗಾಡಿ ಚಲಿಸ ಲಾರಂಭಿಸಿತು. ಹೆದರಿದ್ದ ಚಿಕ್ಕ ಮಕ್ಕಳು, ಅಲ್ಲಲ್ಲೇ ಮುದುಡಿ, ಮಲಗಿ ನಿದ್ರಿಸಿದವು. ದೊಡ್ಡವರಿಗೆ ಯಾವ ಮಾತುಕತೆ ಬೇಕಿರಲಿಲ್ಲ. ನೆಮ್ಮದಿ ನೆಲಸಮವಾಗಿತ್ತು. ಸರ್ಕಸ್ ನನ್ನು ವೀಕ್ಷಿಸಿದ ಸಂಭ್ರಮವಾಗಲೀ, ಉತ್ಸಾಹವಾಗಲೀ ಉಳಿದಿರಲಿಲ್ಲ.

"ತುಥ್ ಇನ್ಮೇಲೆ ಇಂಥಾ ಕಡೆಗೆಲ್ಲಾ ಬರಲೇಬಾರದು. ಒಂದುವೇಳೆ ಬಂದರೂ, ಕಂಠಿ ನಮ್ಮ ಜೊತೆ ಬರಬಾರದು." ಸಾತಕ್ಕ ಕುಗ್ಗಿದ ಮನಸ್ಸಿನಲ್ಲಿ ತನ್ನಲ್ಲೇ ನುಡಿದು ಕೊಂಡಳು. ಯಾವುದಾದರೂ ನೆಪದಲ್ಲಿ ಕಂಠಿ ನನ್ನನ್ನು ಹಂಗಿಸದೇ ಇರುವುದಿಲ್ಲ. ಇವನಿಗೆ ನಾನೇನು ಮಾಡಿದೀನಿ ? ನನ್ನ ಪಾಡಿಗೆ ನಾನು ರಾಮ ಕೃಷ್ಣಾ ಅಂತ ನನ್ನ ಅಣ್ಣನ ಮನೇಲಿದಿನಿ. ನನ್ನ ಮೇಲೇನು ಹಗೆ ಇವನಿಗೆ? ಇವನ ಕಣ್ಣಿಗೇ

ಬೀಳಬಾರದು ನಾನು." ಸಾತಕ್ಕ ತನ್ನಲ್ಲೇ ಅಂದುಕೊಂಡಳು.

ಬೆಳಗಿನ ಝಾವ ನಾಲ್ಕು ಗಂಟೆಯ ಹೊತ್ತಿಗೆ ಗಾಡಿಗಳು ಹಳ್ಳಿಯನ್ನು ತಲುಪಿದವು. ಮನೆ ಸೇರಿ, ಎಲ್ಲರೂ ವಿಶ್ರಾಂತಿಗೆಂದು ಮಲಗಿದರು.

* * *

ಚೆನ್ನಾಗಿ ಬೆಳಕಾದ ಮೇಲೆ, ಮೈ ಮುರಿಯುತ್ತಾ ಒಬ್ಬೊಬ್ಬರಾಗಿ ಎದ್ದು ಬಂದರು. ಪ್ರತಿದಿನದಂತೆ ದಿನಚರಿ ಪ್ರಾರಂಭವಾಗಿತ್ತು. ಚಿಕ್ಕ ಮಕ್ಕಳ ಹೊರತು ಉಳಿದವರ್‍ಯಾರೂ ಸರ್ಕಸ್ ಬಗ್ಗೆ ಯಾವ ಮಾತುಗಳನ್ನಾಡಲಿಲ್ಲ. ಸ್ನಾನ ತಿಂಡಿ ಮುಗಿಸಿ, ಕಂಠಿ ಹೊರಗೆಲ್ಲೋ ಹೊರಟು ಹೋದ. ಆ ಸಮಯಕ್ಕೆ ಕಾದಿದ್ದ ಸರೋಜ, ಶಾಸ್ತ್ರಿಯ ಮನೆಗೆ ಬಂದಳು. ಮನೆಯಲ್ಲೇ ಇದ್ದ ಶಾಸ್ತ್ರಿ ಹೆಂಡತಿಯನ್ನು ಕರೆದ.

"ಲಕ್ಷ್ಮಿ ಸರೋಜ ಬಂದಿದಾಳೆ ನೋಡು"

"ಭಾವ ರಾತ್ರಿ ನಮ್ಮ ದತ್ತ ಎಲ್ಲಿ ಸಿಕ್ಕಿದ ? ಅಣ್ಣನ್ನ ಕೇಳುಕ್ಕೆ ಇಷ್ಟವಾಗಲಿಲ್ಲ. ದತ್ತಂಗೆ ಹೇಳುಕ್ಕೆ ತಿಳಿಯುಲ್ಲ."

"ಹೇಗೆ ತಪ್ಪಿಸ್ಕೊಂಡ? ಯಾರ ಹಿಂದೆ ಹೋದ ಅಂತ ಯಾರಿಗೂ ತಿಳಿಯದು. ಆದರೆ ಹುಡುಕಾಡಿದಾಗ ಅವನು ಸಿಕ್ಕಿದ್ದು ಎಲ್ಲಿ ಗೊತ್ತೇ ? ಆನೆಗಳ ಲಾಯದಲ್ಲಿ..... ಸರ್ಕಸ್ ಡೇರೆಯ ಹಿಂಭಾಗದಲ್ಲಿ......"

"ಲಾಯದಲ್ಲಿ ? ಅಲ್ಲಿಗೆ ಹೇಗೆ ಹೋದ ಅವನು ?"

"ಹೇಗೆ ಹೋದ್ನೋ? ಶಿವನೇ ಬಲ್ಲ. ನಾವು ಮ್ಯಾನೇಜರ್ ಬಳಿ ಮಾತನಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು, ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿದ ಅವನು ತಲೆ ಆಡಿಸಿ ಅವನನ್ನು ಕಳಿಸಿ, ಸರ್ಕಸ್ ಡೇರೆಯೊಳಗೆ ದೀಪವನ್ನು ಹಾಕಿಸಿ ಹುಡುಕಿಸಿದ. ದತ್ತ ಎಲ್ಲಿಯೂ ಕಾಣಲಿಲ್ಲ. ನಿಮಿಷ ನಿಮಿಷಕ್ಕೂ ಕಂಠಿಯ ರೋಷ ಹೆಚ್ಚಾಗುತ್ತಿತ್ತು. ಮ್ಯಾನೆಜರ್ ಅವನ ಕಡೆ ತಿರುಗಿ ನುಡಿದ.

"ನಿಮ್ಮ ಹುಡುಗ ಇಲ್ಲಿ ಎಲ್ಲೂ ಇಲ್ಲ. ಹೊರಗೆ ಎಲ್ಲೋ ತಪ್ಪಿಸಿಕೊಂಡಿರಬಹುದು. ನೀವುಗಳು ಹೊರಡಿ ನಮಗೂ ಹೊತ್ತಾಗ್ತಿದೆ."

"ನಮ್ಮ ಮಗ ಸಿಗದೇ ನಾವು ಇಲ್ಲಿಂದ ಹೋಗುಲ್ಲ." ಕಂಠಿ ಗುಡುಗಿದ.

"ಹೋಗ್ದೇ ಇದ್ರೆ ಕತ್ತು ಹಿಡಿದು ಆಚೆಗೆ ದಬ್ಬಿಸಬೇಕಾಗುತ್ತೆ."

"ನಮ್ಮನ್ನು ಕತ್ತು ಹಿಡಿದು ಆಚೆಗೆ ದಬ್ಬಿಸೋಕೆ ನೀನ್ಯಾರು? ನಿನ್ನ ಸರ್ಕಸ್ ಟೆಂಟ್‌ನಲ್ಲಿ ನನ್ನ ಮಗ ಕಳೆದು ಹೋಗಿದಾನೆ. ಅವನನ್ನು ಹುಡುಕಿಸಿ ಕೊಡುವ ಜವಾಬ್ದಾರಿ ನಿನ್ನದು ಇಲ್ದಿದ್ರೆ ಪೋಲಿಸ್ ಕಂಪ್ಲೆಂಟ್ ಕೊಡ್ತೀನಿ. ನಿನ್ನ ಸರ್ಕಸ್ ಕಂಪೇನಿನ ಮುಚ್ಚಿಸ್ತೀನಿ." ಕಂಠಿಯ ಆರ್ಭಟಕ್ಕೆ ಮ್ಯಾನೆಜರ್ ಹೆದರಿದ.

"ಬನ್ನಿ ನೋಡೋಣ" ಎನ್ನುತ್ತಾ ನಮ್ಮಿಬ್ಬರನ್ನು ಸೀದಾ ಪ್ರಾಣಿಗಳನ್ನು ಕಟ್ಟಿದ್ದ

ಸ್ಥಳಕ್ಕೆ ಕರೆದುಕೊಂಡು ಬಂದ. ಅಲ್ಲಿ ಧತ್ತ ಒಂದು ಆನೆಯ ಮೇಲೆ ಕುಳಿತಿದ್ದ. ಯಾರೋ ಹತ್ತಿಸಿರಬೇಕು ಮ್ಯಾನೇಜರ್, "ಉಸೆ ನೀಚೆ ಉಥಾರೋ...." ಅಂತಂದ. ದತ್ತನನ್ನು ಕೆಳಗಿಳಿಸಿದರು. ಕಂಠಿ ಮಗನ ಬೆನ್ನ ಮೇಲೆ ದಬದಬನೆ ಗುದ್ದಿದ. ದತ್ತ 'ಲಬೋ.... ಲಬೋ' ಅಂತ ಅತ್ತ. ನಾನು ಬಿಡಿಸಿದೆ. ಮ್ಯಾನೇಜರ್ ಕಂಠಿಗೆ ಕೈ ಮುಗಿದ.

"ಇದು ನಮ್ಮ ಕಂಪೆನಿ.... ಇಲ್ಲಿ ಹೊಡೆದಾಟ ಬೇಡ. ನಿಮಗೆ ಮತ್ತೆ ಹೇಳ್ತೀನಿ. ನಿಮ್ಮ ಮನೆಗೆ ಕರ್ಕ್ಕೊಂಡು ಹೋಗಿ, ಏನು ಬೇಕಾದ್ರೂ ಮಾಡ್ಕೊಳ್ಳಿ ಅಂತಂದ. ನಾನು ದತ್ತನನ್ನು ಹೊರಕ್ಕೆ ಕರೆತಂದೆ. ಕಂಠಿ ಮ್ಯಾನೇಜರ್ ಮೇಲೆ ಕೂಗಾಡಿದ.

"ನೀವುಗಳೆಲ್ಲಾ ಎಂಥೋರು ಅಂತ ನನಗೆ ಚೆನ್ನಾಗಿ ಗೊತ್ತು. ತಿಳುವಳಿಕೆ ಇಲ್ಲದ ನನ್ನ ಮಗನ್ನ ಅಪಹರಿಸಿ, ಬಚ್ಚಿಟ್ಟೀದ್ದೀರಿ ಅಂತ ನಾನು ಪೋಲಿಸ್‌ರಿಗೆ ಕಂಪ್ಲೆಂಟ್ ಕೊಡ್ತೀನಿ. ನಿಮ್ಮ ಕಂಪೆನಿಗೆ ಬೀಗ ಹಾಕಿಸ್ತಿನಿ. ನಿಮ್ಮಂಥೊರನ್ನ ಎಷ್ಟೋ ಜನರನ್ನ ನಾನು ಕಂಡಿದೀನಿ."

ಮ್ಯಾನೇಜರ್ ಮಾತಾಡಲಿಲ್ಲ. ಅಲ್ಲಿದ್ದವರಿಗೆ ಸಂಜ್ಞೆ ಮಾಡಿದ. ಅವರು ಕಂಠಿಯನ್ನು ಬಲವಂತವಾಗಿ ಹೊರಕ್ಕೆ ಕರೆತಂದು ಬಿಟ್ಟರು. ನಾವುಗಳು ಸರ್ಕಸ್ಸಿನ ಹಿಂಬಾಗಿಲಿನಿಂದ ಹೊರಕ್ಕೆ ಬಂದು, ಸುತ್ತು ಹಾಕಿ ಗಾಡಿ ನಿಲ್ಲಿಸಿದ್ದ ಕಡೆಗೆ ಬಂದೆವು."

"ಯಾಕೆ ಹೀಗಾಗುತ್ತೋ? ಅಪರೂಪಕ್ಕೆ ಮನೆ ಬಿಟ್ಟು ಎಲ್ಲಾದ್ರೂ ಹೊರಗೆ ಹೋದರೆ, ಹೀಗೆ ಹಗರಣ ಆಗಿಯೇ ಆಗುತ್ತೆ ಅಂತ. ಅತ್ತಿಗೆ ಅಳ್ತಾನೇ ಇದಾರೆ. ಅಣ್ಣ ಪೋಲಿಸ್ ಗೀಲೀಸ್ ಅಂತ ಹಗರಣ ಮಾಡಿದರೆ ?"

"ಇನ್ಯಾಕೆ ಮಾಡ್ತಾನೆ ! ದತ್ತ ಸಿಕ್ಕಿದಾನಲ್ಲ." ಶಾಸ್ತ್ರಿ ಎಂದ.

"ಆದ್ರೂ ಅವನಿಗೆ ಕೆಟ್ಟ ಕೋಪ."

"ಎರಡು ದಿನ ಕಳದ್ರೆ ಕೋಪ ತಾನಾಗಿಯೇ ಕಡಿಮೆ ಆಗುತ್ತೆ. ಇದೆಲ್ಲಾ ಯಾರಿಗೂ ಹೊಸದಲ್ಲವಲ್ಲ" ಸಾತಕ್ಕನೆಂದಳು.

"ಹೌದು, ಎಲ್ಲಿ ಹೋದ್ರು ಕೆಟ್ಟೋನು ಅಂತ ಅನ್ನಿಸ್ಕೊಂಡು ಬರ್ತಾನೆ. ಮಗಳಿಗೆ ಮದುವೆ ಮಾಡಿದ್ರೂ ಬದಲಾಗಲಿಲ್ಲ. ಬೀಗರ ಹತ್ರ ಎಂದು ಜಗಳ ಆಡ್ತಾನೋ..... ಅತ್ತಿಗೆಗೆ ಅದೇ ಆತಂಕ"

"ಜಗಳ ಆಡಿದ್ರೆ ಇವನ ಮಾನಾನೇ ಹೋಗೋದು. ಇವನೇನು ವರದಕ್ಷಿಣೆ ಕೊಟ್ಟಿದಾನಾ ? ವರೋಪಚಾರ ಮಾಡಿದಾನಾ ? ಅವರ ಋಣವೇ ಇವನ ಮೇಲಿದೆ. ಮೀನಾಕ್ಷಿಯ ಅದೃಷ್ಟ ಚೆನ್ನಾಗಿತ್ತು ಇಲ್ಲಿಂದ ಪಾರಾದಳು."

"ಆದ್ರೆ ಅತ್ತಿಗೇನ ನೋಡಿದ್ರೆ ವ್ಯಥೆ ಆಗುತ್ತೆ. ತಿಳುವಳಿಕೆ ಇಲ್ಲದ ಮಗನೂ ನೋಯಿಸ್ತಾನೆ. ತಿಳುವಳಿಕೆ ಇದ್ದೂ ಅಣ್ಣ ನೋಯಿಸ್ತಾನೆ.

"ಹೇಗೂ ಬಂದದೀಯಲ್ಲ, ಇನ್ನು ಕೆಲವು ದಿನ ಇಲ್ಲಿದ್ದು ಅವನಿಗೆ ತಿಳುವಳಿಕೆ ಹೇಳು..... ನಿನ್ನನ್ನು ಬೈಯಲಾರ....."

"ಅಯ್ಯೋ ಅವನೊಂದು ಥರಾ ಧೂರ್ತ ನನಗೆ ಬುದ್ಧಿ ಹೇಳೋದಾದ್ರೆ ನಮ್ಮ ಮನೇಲಿ ಒಂದು ಕ್ಷಣವೂ ಇರ್ಬೇಡ. ಈಗ್ಲೇ ಹೋಗು ಅಂತ ಬಾಗಿಲಿಂದಾಚೆ ತಳ್ಳಿದ್ರೂ ತಳ್ಳಿದನೇ.... ಆಮೇಲೆ ನನ್ನ ಗಂಡ ಅಪ್ಪಿ ತಪ್ಪಿಯೂ ಇಲ್ಲಿಗೆ ಕಳಿಸುಲ್ಲ." ಸರೋಜ ವ್ಯಥೆಯಿಂದ ನುಡಿದು ನಕ್ಕಂತೆ ಮಾಡಿದಳು.

"ಪಾರ್ವತೀನ ನಿಮ್ಮ ಮನೆಗೆ ಒಂದ್ನಾಲ್ಕು ದಿನಕ್ಕೆ ಅಂತ ಕರ್ಕೊಂಡು ಹೋಗು..... ಅವನಿಗೂ ಬುದ್ಧಿ ಬರುತ್ತೆ."

"ಅವರು ಬರೋದಾದ್ರೆ ಖಂಡಿತಾ ಕರ್ಕೊಂಡು ಹೋಗ್ತೀನಿ, ಆದರೆ ಅವರು ಅಣ್ಣ ಒಪ್ಪದೇ ಒಂದು ಹೆಜ್ಜೆ ಸಹ ಆಚೆಗಿಡುಲ್ಲ

"ಸರಿ ಬಿಡು, ಇದು ಆಗದ ಹೋಗದ ವಿಚಾರ, ಅವಳ ಹಣೇಬರಹ ಹೇಗಿದೆಯೋ ಹಾಗಾಗುತ್ತೆ. ಎಷ್ಟಾಗಲೀ ನೀನೀಗ ಬೇರೆ ಮನೆಗೆ ಸೇರಿದವಳು ನೀನ್ಯಾಕೆ ಮಾತಾಡಿ, ಕೆಟ್ಟೋಳು ಅಂತ ಅನ್ನಿಸಿಕೊಳ್ತೀಯ ?"

"ನಾನೇನೋ ನಾಲ್ಕು ದಿನ ಇದ್ದು ನನ್ನ ಮನೆಗೆ ವಾಪಸ್ಸು ಹೊರಟು ಹೋಗ್ತೀನಿ ಇವನ ಕಾಟ ತಡೀಲಾರದೇ ಅತ್ತಿಗೆ ಎಂದು ಏನು ಮಾಡಿಕೊಂಡು ಬಿಡ್ತಾರೋ ಅಂತ ನನಗೆ ಭಯ"

"ಕೆಟ್ಟದ್ದನ್ನು ಯೋಚಿಸಬೇಡ. ಹಾಗೆಲ್ಲಾ ಏನೂ ಆಗುಲ್ಲ. ಅವಳಿಗೆ ಅವನ ಸ್ವಭಾವ ಅಭ್ಯಾಸವಾಗಿ ಹೋಗಿದೆ. ಅವನು ಹೇಳಿದ ಹಾಗೆ ಕೇಳಿದರಾಯ್ತು, ಅಷ್ಟೇ ನನ್ನ ಬದುಕು ಅಂತ ತಿಳಿದುಕೊಂಡು ಬಿಟ್ಟಿದಾಳೆ. ನೀನೇನೂ ಭಯ ಪಡ್ಬೇಡ" ಸಾತಕ್ಕ ಹೇಳಿದಾಗ ಸರೋಜಳ ಕಣ್ಣುಗಳಿಂದ ನೀರಹನಿ ಉದುರಿತು.

"ಹಿಂದೆ ಮುಂದೆ ನೋಡ್ದೆ, ಅವನು ನಿಮಗೂ ಬೇಸರವಾಗುವ ಮಾತಾಡ್ತಾನೆ ಅತ್ತಿಗೆ, ಅವನಿಗೆ ಯಾವ ಹಕ್ಕಿದೆ ಅಂತ ಹೀಗಾಡ್ತಾನೋ ?"

"ಅಂದರೆ ಅಂತಾನೆ.... ನಾನೇ ಅದನ್ನು ತಲೆಗೆ ಹಚ್ಚಿಕೊಳ್ಳಲ್ಲ. ಈ ಕಿವೀಲಿ ಕೇಳಿ ಆ ಕಿವೀಲಿ ಬಿಟ್ಟು ಬಿಡ್ತಿನಿ."

"ನಿಜ ಹೇಳಿ ಅತ್ತಿಗೆ, ನಿಮಗೆ ಖಂಡಿತಾ ಬೇಸರವಿಲ್ವಾ ?

"ಬೇಸರವಾಗದೇ ಇರುತ್ತಾ ಸರೋಜ ವಯಸ್ನಲ್ಲಿ ನಿಮ್ಮಣ್ಣನಿಗಿಂತ ಚಿಕ್ಕವರಿರ ಬಹುದು. ಆದರೆ ವರಸೆಯಲ್ಲಿ ಅತ್ತಿಗೆ ಸಮಾನ. ಹೆಂಡತಿಯ ಅಕ್ಕ ಆ ಗೌರವವಾದ್ರೂ ಬೇಡ್ವಾ ? ಮೊದಲೇ....." ಲಕ್ಷ್ಮಿಯ ಮಾತನ್ನು ಸಾತಕ್ಕ ತುಂಡರಿಸಿದಳು.

"ಬಿಡು ಲಕ್ಷ್ಮಿ ಆ ಸೌಜನ್ಯ ಕಂಠಿಗೆ ಇಲ್ಲ ಅಂತ ತಿಳಿದೂ ಮಾತನಾಡಿ ಏನೂ ಪ್ರಯೋಜನ ! ನನಗೆ ಅವನು ಗೌರವ ಕೊಡದಿದ್ದರೆ ಅದು ಅವನ ಸಣ್ಣತನವನ್ನು

ತೋರಿಸುತ್ತದೆ. ನನಗೆ ಯಾವ ತೊಂದರೆ ಇಲ್ಲವಲ್ಲ."

"ನೆನ್ನೆ ನನ್ನಣ್ಣ ಆಡಿದ ಮಾತಿಗೆ ನಾನು ನಿಮ್ಮನ್ನು ಕ್ಷಮೆ ಕೇಳ್ತೀನಿ ಅತ್ತಿಗೆ, ಸಮಯ ಸಂದರ್ಭ ಒಂದನ್ನು ನೋಡದೆ, ತೋಚಿದ್ದನ್ನ ಆಡ್ತಾನೆ. ನಿಮ್ಮ ಮನಸ್ಸಿಗೆ ನೋವಾಗುತ್ತೆ ಅನ್ನೋ ಜ್ಞಾನಾನಾದ್ರೂ ಬೇಡ್ವಾ?"

"ನನ್ನ ಮನಸ್ಸಿಗೆ ನೋವಾಗ್ಲೀ ಅಂತ಼್ೇ ಹಾಗೆ ಮಾತಾಡ್ತಾನೆ" ಅಂತ ಹೇಳಬೇಕೆಂದು ಕೊಂಡರೂ ಹೇಳಲಿಲ್ಲ. ಕಂಠಿ ಯಾಕೆ ಹಾಗೆ ಮಾತಾಡ್ತಾನೆ ಅಂತ ಅವಳಿಗೆ ತಿಳಿದದ್ದೇ. ಆದರೆ ಅದನ್ನು ಸರೋಜಳಿಗೆ ಹೇಗೆ ಹೇಳುವುದು. ಸುಮ್ಮನಾಗಿ ಬಿಟ್ಟಳು.

* * *

"ಹೋಗೇ ಲಲಿತಾ.... ಪಾರ್ವತಿ ಅತ್ತೆ ಹತ್ರ ಒಂದು ಒಳಲೆ ಎದೆ ಹಾಲನ್ನು ಇಸ್ಕೊಂಡು ಬಾರೇ...."

"ಒಂದು ಒಳಲೆ ಎಮ್ಮೆ ಹಾಲಾ? ಎಮ್ಮೆ ಹಾಲು ನಮ್ಮ ಮನೇಲೇ ಇದೆಯಲ್ಲಮ್ಮ" ಲಲಿತ ಹುಬ್ಬುಗಂಟಿಕ್ಕಿದಳು.

"ತಲೆ ಹರಟೆ, ಎಮ್ಮೆ ಹಾಲಲ್ಲ, ಎದೆ ಹಾಲು, ಅತ್ತೆಗೆ ಹೇಳು ಕೊಡ್ತಾರೆ ಯಾಕೋ ಕಣ್ಣುರಿ, ಕಡಿತ...... ಉಷ್ಣ ಆಗಿದೆ. ಎದೆ ಹಾಲನ್ನು ಎರಡು ಹನಿ ಕಣ್ಣಿಗೆ ಹಾಕ್ಕೊಂಡ್ರೆ ತಂಪಾಗುತ್ತೆ."

"ಥೂ, ಹೋಗಮ್ಮ ಅದನ್ನೆಲ್ಲ ಯಾರು ಕೇಳ್ತಾರೆ. ನಾಚ್ಕೆ ಆಗುತ್ತೆ. ತಣ್ಣೀರ್ನಲ್ಲಿ ಕಣ್ಣುಗಳನ್ನು ತೊಳ್ಕೋ ಉರಿ ಕಡಿಮೆ ಆಗುತ್ತೆ." ಶಾಂತ ಎಂದಳು.

"ನಾಲ್ಕು ಸಾರಿ ತೊಳ್ಕೊಂಡಾಯ್ತು ಯಾಕೋ ಕಡಿಮೇನೇ ಆಗಿಲ್ಲ"

"ಅಡಿಗೆ ಮನೇಲಿ ಸದಾ ಹೊಗೆ, ಅಲ್ದೇ ಹೊತ್ತಿಲ್ಲ ಗೊತ್ತಿಲ್ಲ ಬಟ್ಟೆಗಳನ್ನು ಹೊಲೀತೀಯ ಕಣ್ಣೀಗೆ ಹಿಂಸೆ ಆಗ್ದೇ ಇನ್ನೇನಾಗುತ್ತೇ ? ನಿನ್ನಲ್ಲೇ ಹಾಲು ಇಲ್ವಾ ಲಕ್ಷ್ಮೀ? ವೆಂಕಟೇಶಂಗೆ ಇನ್ನೂ ಕುಡಿಸ್ತೀಯಲ್ಲ." ಲಕ್ಷ್ಮಿ ಸುಮ್ಮನ್ನೇ ನಕ್ಕಳು.

"ಮಗೂಗೆ ಕುಡಿಯೋಕೆ ಏನಿದೆ ? ಚಪಲಕ್ಕೆ ಚೀಪ್ತಾನೆ ಅಷ್ಟೇ."

"ಬಾಣಂತನವನ್ನು ಸರಿಯಾಗಿ ಮಾಡ್ಕೊಳ್ಳಲಿಲ್ಲ. ಹಾಲು ತುಪ್ಪದ ಆರೈಕೆ ಮಾಡ್ಕೊಳ್ಳಲಿಲ್ಲ. ವಿಶ್ರಾಂತಿ ಇರ್ಲಿಲ್ಲ. ಮನೆ ಕೆಲಸಕ್ಕೆ ಅಂತ ಎರಡು ತಿಂಗಳಿಗೇ ಎದ್ದು ಬಿಟ್ಟೆ. ಇನ್ನೇನಾಗುತ್ತೆ ? ಹಾಲು ಇಂಗಿಹೋಗಿದೆ."

"ನನ್ನ ದೇಹಗುಣವೇ ಹಾಗೆ. ಯಾವತ್ತೂ ಹಾಲು ಕಡಿಮೇನೇ ಅದೇ ಪಾರ್ವತಿಗಾದ್ರೆ, ಒಳ್ಳೆ ಜಾತಿ ಎಮ್ಮೆಗಿರುವಂತೆ ವಿಪರೀತ ಹಾಲು. ಕೈ ಕೂಸಿನ ಜತೆ ಜತೆಗೆ, ಮೇಲಿನ ಮಗು ಸಹ ಕುಡಿಯುತ್ತಂತೆ"

"ಅದಕ್ಕೇ ಅವಳ ಹತ್ರ ಒಂಥಾರಾ ವಾಸನೆ. ಶಿಂಡೂನಾಥ"

"ಕೆಲಸದವಳು ಬಾವಿ ನೀರಿನಲ್ಲಿ ಬಟ್ಟೆಗಳನ್ನು ಹಿಂಡಿ ಹಾಕ್ತಾಳೆ. ಸರಿಯಾಗಿ, ಚೆನ್ನಾಗಿ ಜಾಲಾಡಿ, ಬಿಸಿಲ್ನಲ್ಲಿ ಹರವಿದರೆ ಎಂಥಾ ವಾಸನೆಯೂ ಇರುಲ್ಲ"

ಅಷ್ಟರಲ್ಲಿ ಲಲಿತಾ, ಒಂದು ಸಣ್ಣ ಬೆಳ್ಳಿಯ ಬಟ್ಟಲಿನ ತುಂಬಾ ಹಾಲನ್ನು ಎಚ್ಚರಿಕೆಯಿಂದ ಚೂರು ಚೆಲ್ಲದಂತೆ ಹಿಡಿದು ತಂದಳು "ಅಯ್ಯೋ ಅದ್ಯಾಕೆ ಇಷ್ಟು ಸೂಸ ತಂದಿದೀಯ.... ಮಕ್ಕಳು ಕುಡಿಯುವ ಹಾಲು ನೆಲದ ಮೇಲೆ ಚೆಲ್ಲಬಾರದು."

"ನಂಗೇನಮ್ಮ ಗೊತ್ತು ! ಅತ್ತೇನ ಹಾಲು ಬೇಕು ಅಂತ ಕೇಳ್ದೆ. ಗೋಡೆ ಕಡೆಗೆ ತಿರುಗಿ, ಬೆಳ್ಳಿ ಬಟ್ಟಲಿನ ತುಂಬಾ ಹಾಲನ್ನು ತುಂಬಿಸಿಕೊಟ್ಟರು."

"ಮತ್ತೆ ಒಳಲೆ ? ಬೆಳ್ಳಿಯ ಒಳಲೇನ ಎಲ್ಲಿ ಬೀಳಿಸ್ದೆ?"

"ನಾನು ತಗೊಂಡೇ ಹೋಗಿರ್ಲಿಲ್ಲ." ಕೈ ಆಡಿಸಿದಳು

"ಅತ್ತೆ ಮನೆಗೆ ಹೋಗುಕ್ಕೆ ಅಷ್ಟು ಆತುರ. ರಾಜನ್ನ ಮದುವೆಯಾದ್ರೆ ಸದಾ ಅಲ್ಲೇ ಇರಬಹುದು.ಏನಂತೀಯ?" ಶಾಂತ ಗೇಲಿ ಮಾಡಿದಳು.

"ನೋಡಮ್ಮ ಇವಳನ್ನ.... ಏನೇನೋ ಆಡ್ತಾಳೆ."

"ಸದಾ ನಿಮ್ಮನ್ನೆಲ್ಲಾ ನೋಡ್ತಾನೇ ಇರ್ತೀನಿ. ಆದಕ್ಕೇ ಕಣ್ಣುಗಳಲ್ಲಿ ಹಿಂಸೆ, ಒಳಲೆಗೆ ಸ್ವಲ್ಪ ಹಾಲನ್ನು ಹಾಕಿಕೊಂಡು ಒಳಲೆಯ ಮೂತಿಯಿಂದ ಕಣ್ಣುಗಳಿಗೆ ಕಡಿತ. ಹನಿ ಹನಿ ಹಾಕ್ಕೋಬಹುದು. ಇನ್ನಾರಾದ್ರೂ ಹಾಕಿಸಿಕೊಳ್ಳೋದಾದ್ರೆ ಬನ್ನಿ ಹಾಕ್ತೀವಿ." ಕರೆದಳು.

"ಥೂ, ನಮಗ್ಯಾರಿಗೂ ಬೇಡ..."

"ಥೂ ಅಂತ ಅನ್ನೋದ್ಯಾಕೆ? ಎದೆ ಹಾಲ್ನಲ್ಲಿ ಔಷದೀಯ ಗುಣಗಳು ತುಂಬಿವೆ. ಕಣ್ಣಿನೊಳಗೆ ಸೇರಿಕೊಂಡಿರುವ ಧೂಳು, ಕಸ, ಎಲ್ಲವನ್ನು ಹೊರಕ್ಕೆ ಹಾಕಿ ಕಣ್ಣುಗಳನ್ನು ತಂಪಾಗಿ ಇಡುತ್ತೆ. ನಿಮಗ್ಯಾರಿಗೂ ಬೇಡ್ದೆ ಇದ್ರೆ ದಂಡ ಯಾಕೆ ಮಾಡ್ಬೇಕು ಇನ್ನುತ್ತಾ, ಅಲ್ಲಿಯೇ ಕೂತಿದ್ದ ವೆಂಕಟೇಶನನ್ನು ಎಳೆದು ತೊಡೆಯ ಮೇಲೆ ಮಲಗಿಸಿಕೊಂಡು, ಬಾಯನ್ನು ಬಿಡಿಸಿ, ಹಾಲನ್ನು ಕುಡಿಸಿದಳು. ಗಾಬರಿಗೊಂಡ ವೆಂಕಟೇಶ ಎಲ್ಲಿ ಉಗುಳಿ ಬಿಡುವನೋ ಅಂತ ಅವನ ಬಾಯನ್ನು ಮುಚ್ಚಿ ಬಲವಂತವಾಗಿ ನುಂಗಿಸಿ ದಳು. ಶಾಂತ ನಕ್ಕು ಸಾತಕ್ಕನ ಕಡೆ ನೋಡಿದಳು.

"ಎದೆ ಹಾಲನ್ನು ಚೆಲ್ಲಬಾರದು ಹಿಂದಿನ ಕಾಲದಲ್ಲಿ ಏನು ಮಾಡ್ತಿದ್ದರಂತೆ ಗೊತ್ತಾ? ತಾಯಿ ಇಲ್ಲದ ಚಿಕ್ಕ ಮಕ್ಕಳಿಗೆ, ಬೇರೆ ಬಾಣಂತಿಯರು ತಮ್ಮ ಎದೆ ಹಾಲನ್ನು ಕುಡಿಸುತ್ತಿದ್ದರಂತೆ. ಆ ಕಾಲದಲ್ಲಿ ಜನರು ಎಷ್ಟು ಅನ್ಯೋನ್ಯವಾಗಿರು ತ್ತಿದ್ದರು ಈಗ ಬರ್ತಾ ಬರ್ತಾ ಜನಗಳಿಗೆ ದುರ್ಬುದ್ಧಿ ಹೆಚ್ಚುತ್ತಿದೆ." ಸಾತಕ್ಕ ಸುಮ್ಮನೇ ನಕ್ಕಳು.

"ಅತ್ತಿಗೆ, ನೀವೂ ಕಣ್ಣಿಗೆ ಒಂದ್ಹನಿ ಹಾಕ್ಕೋತಿದ್ರಾ ? ನಾನು ಕೇಳ್ಲೇ ಇಲ್ಲ

ಎಲ್ಲಾ ಇವನಿಗೆ ಕುಡಿಸ್ಬಿಟ್ಟೆ."

"ಇಲ್ಲ ಲಕ್ಷ್ಮೀ, ನಂಗೆ ಇಂಥಾದೆಲ್ಲ ಅಭ್ಯಾಸವಿಲ್ಲ. " ಎನ್ನುತ್ತಾ ಗೋಡೆಯ ಕಡೆಗೆ ತಿರುಗಿ ಮಲಗಿದಳು. ಖಾಲಿ ಗೋಡೆಯ ಮೇಲೆ ದೃಷ್ಟಿ ಹರಿಯಿತು. ನನ್ನ ಬಾಳು ಈ ಬಿಳೀ ಗೋಡೆಯಂತೆ ಬೇರೆ ಬಣ್ಣಗಳೇ ಇಲ್ಲ. ಮದುವೆ ಆದದ್ದು ಗೊತ್ತು. ಆದರೆ ಒಂದು ದಿನವೂ ಗಂಡನ ಮನೆಗೆ ಹೋಗಲಿಲ್ಲ. ಆ ಸಂಸಾರ ಸುಖ ಹೇಗಿರುತ್ತೇ ಅನ್ನೋ ಅನುಭವ ನನಗಿಲ್ಲ. ಬಸಿರು ಬಾಣಂತನ ಒಂದನ್ನು ಕಂಡಿಲ್ಲ. ಈ ಎಲ್ಲಾ ಸುಖಗಳಿಂದ ವಂಚಿತಳು... ಆದರೆ ? ದಿನ ಬೆಳಗಾದರೆ, ಮದುವೆ, ಪ್ರಸ್ಥ, ಸೀಮಂತ, ಹೆರಿಗೆ, ಬಾಣಂತನ ಈ ಮಾತುಗಳು ಕಿವಿಗೆ ಬೀಳುತ್ತಲೇ ಇರುತ್ತವೆ. ನಾನೋ, ಯಾವ ಶುಭ ಸಮಾರಂಭಗಳಿಗೆ ಹೋಗಿ ಮುಂದೆ ನಿಲ್ಲುವಂತಿಲ್ಲ. ಬಾಗಿಲ ಮರೆಯಲ್ಲಿ ನಿಂತು ನೋಡಬಹುದಾಗಿತ್ತು. ಹೊಸದರಲ್ಲಿ, ಸಿಟ್ಟು, ಅಳು ಬರುತ್ತಿತ್ತು. ಕ್ರಮೇಣ ಎಲ್ಲಾ ಸರಿ ಹೋಯಿತು. ಭಾವನೆಗಳು ಸುಟ್ಟು ಕರಕಲಾಯಿತು. ಆಸೆಗಳನ್ನು ಅದುಮಿಟ್ಟು, ಸಂಪ್ರದಾಯದ ಕಟ್ಟುಪಾಡುಗಳಿಗೆ ಬದ್ಧಳಾಗಿ, ಎಲ್ಲಾದಕ್ಕೂ ಹೊಂದಿಕೊಳ್ಳಬೇಕಾಯ್ತು. ಈಗ ಭಾವನೆಗಳೇ ಇಲ್ಲದೇ ತಟಸ್ಥಳಾಗಿದೀನಿ.

ಅಕ್ಕ ತಂಗಿಯರಿಗೆ ಅತ್ತಿಗೆ, ನಾದಿನಿಯರಿಗೆ, ಮಕ್ಕಳು ಹುಟ್ಟಿದಾಗ ಬಾಣಂತನ ಮಾಡುವ ಪರಿಸ್ಥಿತಿ ಒದಗಿ ಬರುತ್ತಿತ್ತು. ಬಾಣಂತಿಯ ಸೇವೆ ಮಾಡಿದರೆ, ಮುಂದಿನ ಜನ್ಮದಲ್ಲಿ ಸಂಸಾರ ಸುಖ ಸಿಗುತ್ತೆ ಅಂತ ಹಿರಿಯರು ಹೇಳುತ್ತಿದ್ದರು. ಮುಂದಿನ ಜನ್ಮ ಯಾಕೆ ಬೇಕು? ಮುಂದಿನ ಜನ್ಮದಲ್ಲಿ ಏನಾಗ್ತೀವೋ, ಎಲ್ಲಿರ್ತೀವೋ ಹೇಗಿರ್ತೀವೋ ಯಾರು ಬಲ್ಲರು? ಬರೀ ಒಣವೇದಾಂತ ಈ ಜನ್ಮದ್ದು ಈ ಜನ್ಮಕ್ಕೆ ಅಷ್ಟೆ."

"ಬಸಿರಿಗೆ, ಬಯಕೆಯಾದಾಗ, ಕೇಳಿದ ತಿಂಡಿಗಳನ್ನು ಮಾಡಿ ಕೊಟ್ಟಿದೀನಿ. ವಾರ ವಾರ, ಎಣ್ಣೆ ಬತ್ತಿ ನೀರು ಹಾಕಿ ಆರೈಕೆ ಮಾಡಿದೀನಿ. ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾ, ಬೆನ್ನುನೋವು, ಸೊಂಟನೋವು ಅಂತ ಒದ್ದಾಡಿದವರಿಗೆ ಪುರಾಣ ಪುಣ್ಯ ಕತೆಗಳನ್ನು ಓದಿ ಹೇಳಿ ಸಾಂತ್ವನವನ್ನು ಹೇಳಿದೀನಿ. ಹೆರಿಗೆ ನೋವಿನಿಂದ ನರಳುವವಳ ಬಳಿ ಕುಳಿತು ಧೈರ್ಯ ಹೇಳಿದೀನಿ. ಹೊಲೆ ಮನೆಯ ಬಾಣಂತಿಯನ್ನು ಎಬ್ಬಿಸಿ ಕೂರಿಸಿ, ಹಸು ಗೂಸಿಗೆ ಹಾಲು ಕುಡಿಯಲು ಸಹಾಯ ಮಾಡಿದೀನಿ ಇಷ್ಟೆಲ್ಲಾ ನೋಡಿ ಮಾಡಿದರೂ, ನಾನು ನಿರ್ಲಿಪ್ತೆ. ನನ್ನನ್ನು ಅರಿತೋ ಏನೋ, ಎಲ್ಲರೂ ನಿಸ್ಸಂಕೋಚದಿಂದ ನನ್ನೊಡನೆ ಬೆರೆಯುತ್ತಾರೆ.

ಪ್ರತಿರಾತ್ರಿಯೂ ಗಂಡ ಪೀಡಿಸಿದರೂ, ಹಗಲು ರಾತ್ರಿ ಚಿಕ್ಕ ಮಕ್ಕಳು ರಗಳೆ ಮಾಡಿ ನಿದ್ದೆ ಕೆಡಿಸಿದರೂ, ಪಾರ್ವತಿಯೇ ಆಗಲಿ, ಲಕ್ಷ್ಮಿಯೇ ಆಗಲಿ, ನಾವೂ ನಿಮ್ಮ ಹಾಗೆ ಇದ್ದಿದ್ದರೆ ಸುಖವಾಗಿರುತ್ತಿದ್ದೆವು ಅಂತ ಬಾಯಿ ತಪ್ಪಿಯೂ ಹೇಳಿಲ್ಲ. ಈ ಹಿಂಸೆಗಳು ಅವರಿಗೂ ಅಪ್ರಿಯವಾದುದಲ್ಲ....

ನನಗೂ ಎಷ್ಟೋ ರಾತ್ರಿ ನಿದ್ದೆ ಬರುವುದಿಲ್ಲ. ಹೊರಳಾಡುತ್ತಾ ರಾತ್ರಿಯನ್ನು ಕಳೆದಿದೀನಿ. ಆದರೂ ಯಾರೂ ಏನನ್ನು ಪ್ರಶ್ನಿಸುವುದಿಲ್ಲ. ಉಪವಾಸ, ಒಪ್ಪಿತ್ತಿನ ಊಟ, ಮಡಿ ಈ ಕಟ್ಟು ಪಾಡೆಲ್ಲಾ ಹೆಂಗಸಿಗೇ ಏಕೆ ? ಗಂಡಸಿಗೆ ಏಕೆ ಇಲ್ಲ ? ಹುಟ್ಟಿನಲ್ಲಿ, ಗಂಡು ಹೆಣ್ಣು ಎಲ್ಲಾ ಒಂದೇ ಆದರೆ ಬೆಳೆದಂತೆ ವ್ಯತ್ಯಾಸ ಗಂಡು ಪುಷ್ಕಳವಾಗಿ ಎರಡು ಹೊತ್ತು ಊಟ ಮಾಡಬಹುದು. ನನ್ನಂಥ ಹೆಂಗಸಿಗೆ ? ಗಂಡು ಎರಡು ಮೂರು ಮದುವೆಯಾಗಬಹುದು. ವಿಧವೆ ಹೆಂಗಸಿಗೆ ? ಗಂಡು ಬೇರೆ ಹೆಣ್ಣಿನ ಸಹವಾಸ ಮಾಡಬಹುದು. ಥೂ ರಾಮ... ರಾಮ.... ಇವತ್ತು ಏನಾಗಿದೆ ನನಗೆ ? ಹೀಗೆಲ್ಲಾ ಕೊಳಕು ಆಲೋಚನೆ ಯಾಕೆ ಬರ್ತಿದೆ ?" ಸಾತಕ್ಕ ಎದ್ದು ಕೂತು, ಸೀರೆಯ ಸೆರಗಿನಿಂದ ಗಾಳಿಯನ್ನು ಬೀಸಿಕೊಂಡಳು.

"ಯಾಕತ್ತೇ ಶೆಖೇನಾ ? ಗಾಳಿ ಬೀಸ್ಲಾ ?" ಎನ್ನುತ್ತಾ ಶಾಂತ ಬೀಸಣಿಗೆ ಯಿಂದ ಗಾಳಿಯನ್ನು ಬೀಸತೊಡಗಿದಳು.

" ಸಾಕು ನಿಲ್ಸು, ಪಟಪಟ ಅಂತ ದೂರದಲ್ಲೆಲ್ಲೋ ಬೀಸಿದ್ರೆ ಗಾಳಿ ತಗಲುತ್ತಾ?" ಸಿಡುಕಿದಳು.

"ಯಾಕತ್ತೇ ಸಿಡುಕ್ತೀರಿ ! ಮೈ ತಗುಲಿದರೆ ಸುಮ್ಮನಿರ್ತೀರಾ ! "

"ನನಗೇ ಎದುರು ವಾದಿಸ್ತೀಯ..... ತಡೀ ನಿಮ್ಮಣ್ಣಂಗೆ ಹೇಳ್ತೀನಿ" ಸಾತಕ್ಕನ ಕಣ್ಣುಗಳು ವಿನಾ ಕಾರಣ ಕೋಪದಿಂದ ಕೆಂಪಾಗಿತ್ತು.

"ಹೋಗೇ ಲಲಿತಾ..... ಅತ್ತೆ ಮನೆಗೆ ಹೋಗಿ ಇನ್ನೊಂದು ವಳಲೆ ಹಾಲು ಇಸ್ಕೊಂಡು ಬಾ..... ನೋಡು ಅತ್ತೆಯ ಕಣ್ಣು ಹೇಗೆ ಕೆಂಪಾಗಿದೆ!" ಶಾಂತ ತಮಾಷೆ ಮಾಡುತ್ತಾ ಹೇಳಿದಾಗ ಸಾತಕ್ಕನಿಗೆ ಮತ್ತೂ ಕೋಪ ಬಂದಿತು.

"ಇನ್ನು ನಾನು ಈ ಮನೇಲಿರುಲ್ಲ. ಇವತ್ತೇ, ರಾತ್ರಿಯ ರೈಲಿಗೆ ಶೀನನ ಮನೆಗೆ ಹೊರಟು ಹೋಗ್ತೀನಿ. ಅತ್ತೇ... ಬನ್ನಿ ಬನ್ನಿ, ಅಂತ ಕಾಲು ಹಿಡಿದು ಬೇಡಿಕೊಂಡ್ರೂ ನಾನು ಮತ್ತೇ ಬರುಲ್ಲ" ಸಾತಕ್ಕ ರೋಷದಿಂದ ಹೇಳಿದಾಗ ಲಕ್ಷ್ಮಿ ಎಚ್ಚರಗೊಂಡಳು.

"ಯಾಕ್ರೇ ಅತ್ತೇನ ರೇಗಿಸ್ತೀರಿ? ಮಲಗಿದೋರ್ಗೇ ತೊಂದರೆ ಕೊಡಬಾರ್ದು ಮುಂದಿನ ಜನ್ಮದಲ್ಲಿ ತಿಗಣೆಯಾಗಿ ಹುಟ್ತೀರಿ...."

"ಆಂ ತಿಗಣೇನಾ? ಥೂ ದರಿದ್ರ ವಾಸನೆ" ಲಲಿತ ಅಸಹ್ಯಸಿದಳು. ಕೋಪದಿಂದ ಎದ್ದ ಸಾತಕ್ಕ ಬಿಂದಿಗೆಯನ್ನು ತೆಗೆದುಕೊಂಡು ಬಾವಿಯ ಕಡೆಗೆ ನಡೆದಳು. ಅವರಿಬ್ಬ ರನ್ನು ಸಂಶಯದಿಂದ ನೋಡುತ್ತಾ ಲಕ್ಷ್ಮಿ ವೆಂಕಟೇಶನನ್ನು ಪಕ್ಕಕ್ಕೆ ಸರಿಸಿ ಎದ್ದಳು.

"ಅತ್ತೇನ ಮುಟ್ಟಿ ಮೈಲಿಗೆ ಮಾಡಿದ್ರೇನೆ ? ಎನ್ನುತ್ತಾ ಸಾತಕ್ಕನ ಹಿಂದೆಯೇ ಬಂದಳು. ಅತ್ಗೇ ಮೈಲಿಗೆ ಆಯ್ತಾ ? ಈಗ್ಯಾಕೆ ಸ್ನಾನ ?"

"ಇಲ್ಲ, ಲಕ್ಷ್ಮಿ.... ಮನಸ್ಸು ಯಾಕೋ ಸರಿ ಇಲ್ಲ. ಅಸಹ್ಯ ಅಂತನ್ನಿಸ್ತು. ತಣ್ಣೀರನ್ನು ತಲೆ ಮೇಲೆ ಹುಯ್ಕೊಂಡ್ರೆ ಸರಿ ಹೋಗುತ್ತೇನೋ ಅಂತ. ಸಾತಕ್ಕನ್ನನ್ನೇ ಸುಮ್ಮನೇ ದಿಟ್ಟಿಸಿದಳು. ಸಾತಕ್ಕನ ಸೌಮ್ಯವಾದ ಮುಖ ಎಂದಿನಂತೆ ಇರದೆ, ಈ ಹೊತ್ತು ಧುಮುಗುಟ್ಟುತ್ತಿದೆ. ಹೀಗೆ ಮುಖ ಧುಮುಗುಟ್ಟುವುದು, ಕ್ಷೌರಿಕ ಬಂದು ಕೇಶಮುಂಡನ ಮಾಡಿ ಹೋದ ದಿನದಲ್ಲಿ ಕಂಡಿದ್ದಳು. ಮನೆಗೇ ಬರುತ್ತಿದ್ದ ಕ್ಷೌರಿಕನ ಮುಂದೆ ಕೊಟ್ಟಿಗೆಯಲ್ಲಿ ಮುದುರಿ ಕೂತು ತಲೆ ಬೋಳಿಸಿಕೊಳ್ಳುತ್ತಿದ್ದಳು. ಆಗ ಅಲ್ಲಿ ಯಾರೂ ನೋಡುವಂತಿರಲಿಲ್ಲ. ತಲೆಗೆ ಲಕ್ಷ್ಮಿಯೇ ನೀರನ್ನು ಹುಯ್ಯುತ್ತಿದ್ದಳು. ಸಾತಕ್ಕನ ಮುಖ ಕೋಪದಿಂದ ಕೆಂಪಾಗಿ, ಅಸಹ್ಯದಿಂದ ಕಪ್ಪಾಗಿ ಧುಮುಗುಟ್ಟುತ್ತಿತ್ತು. ಸಾತಕ್ಕನ ಮನಸ್ಸು ಕೆಟ್ಟು ಹೋಗಿರುತ್ತಿತ್ತು. ದಿನವಿಡೀ ಮೌನವೇ ಆ ಕ್ಷೌರಿಕನೂ ಒಬ್ಬ ಗಂಡಸು. ಇತರೇ ಜಾತಿಯ ಗಂಡಸೊಬ್ಬನಿಂದ ಅವನಿಗೆ ಅತಿ ಸಮೀಪದಲ್ಲಿ, ಯಾರಿಗೂ ಕಾಣದಂತೆ, ಕೊಟ್ಟಿಗೆಯಲ್ಲಿ ಕೂತು ಕೂದಲನ್ನು ತೆಗೆಸಿಕೊಳ್ಳುವ ಹೀನಸ್ಥಿತಿಗಿಂತ ಹೇಯವಾದ ಸ್ಥಿತಿ ಬೇರೆ ಯಾವುದು ಇದೆ ! ಹೇಯವಾದ ಕೆಲಸಕ್ಕೆ ಮತ್ತೆ ತಲೆಯನ್ನು ಒಡ್ಡುವಂತೆ ಆಗದಿರಲಿ ದೇವರೇ ಎಂದು ಬೇಡುತ್ತಿದ್ದಳು. ಆದರೆ ಕೆಲವೇ ತಿಂಗಳುಗಳಲ್ಲಿ ಕೂದಲು ಮತ್ತೆ ಬೆಳೆದು, ಕ್ಷೌರಿಕನಿಗೆ ಹೇಳಿ ಕಳಿಸಬೇಕಾಗುತ್ತಿತ್ತು. ಹಿತ್ತಲಿನಲ್ಲಿ ಪೊದೆಯ ಬಳಿ ಕೂರಿಸಿ, ತಲೆಗೆ ನೀರನ್ನು ಸುರಿಯುವಾಗ ಲಕ್ಷ್ಮಿಗೂ ವ್ಯಥೆ ಆಗುತ್ತಿತ್ತು. ಯಾವ ಹೆಂಗಸಿಗೂ ಇಂಥ ದುಃಸ್ಥಿತಿ ಬರಬಾರದು ಇದಕ್ಕಿಂತ ಬೇರೆ ನರಕ ಇನ್ನೊಂದಿಲ್ಲ. ಆದುದರಿಂದಲೇ ಹೆಂಗಸರು ಸೆರಗೊಡ್ಡಿ ಮುತ್ತೈದೆ ಸಾವನ್ನು ಬೇಡುವುದು.....ಈ ದಿನ ಅತ್ತಿಗೆಯ ಮನಸ್ಸಿಗೆ ಏನೋ ವ್ಯಥೆ ಆಗಿದೆ. ಇಲ್ಲದಿದ್ದರೆ ಸುಮ್ಮನೇ ಹೀಗೆ ಎಂದೂ ಆಡಿದ್ದಿಲ್ಲ."

"ಯಾಕೆ ಅತ್ಗೇ ? ಯಾರಾದ್ರೂ ಏನಾದ್ರೂ ಅಂದ್ರೇನು ?"

" ಆ ಕಂಠಿ.... ಅವನಾಡುವ ಮಾತುಗಳನ್ನು ನೆನೆಸ್ಕೊಂಡ್ರೆ ಮೈಯೆಲ್ಲಾ ಉರಿದು ಹೋಗುತ್ತೆ."

"ಕಂಠಿ ಭಾವ ಏನಂದ್ರೂ ? ಇತ್ಲಾಗಿ ಬನ್ನಿ, ನಾನು ನೀರನ್ನು ಸೇದ್ತೀನಿ." ಎನ್ನುತ್ತಾ ಬಿಂದಿಗೆಯ ಕೊರಳಿಗೆ ಹಗ್ಗದ ಕುಣಿಕೆಯನ್ನು ಎಳೆದು ಬಿಗಿಮಾಡಿ, ಬಾವಿಗೆ ಇಳಿಬಿಟ್ಟು ಬಗ್ಗಿ ನೋಡಿದಳು. "ಅಬ್ಬಾ.... ನೀರು ಎಷ್ಟು ಆಳಕ್ಕೆ ಇಳಿದು ಹೋಗಿದೆ" ಎನ್ನುತ್ತಾ ನೀರು ತುಂಬಿದ ಕೊಡವನ್ನು ಮೇಲಕ್ಕೆ ಎಳೆದಳು. "ಇಷ್ಟೊತ್ನಲ್ಲಿ ತಲೆಗೆ ನೀರು ಸುರಿದುಕೊಂಡ್ರೆ ಮೈಗಾಗುತ್ತಾ ? ಶೀತ ಆದ್ರೆ ?"

"ಶೀತವೂ ಆಗಲ್ಲ, ವಾತವೂ ಆಗಲ್ಲ, ನನ್ನದು ಭಂಡ ಜೀವ. ನಂಗೆ ಏನೂ ಆಗುಲ್ಲ," ಎನ್ನುತ್ತಾ ಕೊಡವನ್ನೆತ್ತಿ ನೀರನ್ನು ಸುರಿದುಕೊಂಡಳು. ಎರಡು ಮೂರು ಬಿಂದಿಗೆ ನೀರನ್ನು ತಲೆಗೆ ಸುರಿದುಕೊಂಡು, ಒದ್ದೆ ಸೀರೆಯಲ್ಲೇ ಒಳಬಂದು,

ಗಳುವಿನ ಮೇಲೆ ಒಣಗಿ ಹಾಕಿದ್ದ ಮಡಿ ಸೀರೆಯನ್ನು ತೆಗೆದು ಉಟ್ಟುಕೊಂಡಳು. ಲಕ್ಷ್ಮಿ ಮಾತಿಲ್ಲದೇ, ಇದ್ದಿಲು ಒಲೆಯನ್ನು ಹಚ್ಚಿಕೊಟ್ಟಳು. ಸಾತಕ್ಕ ಕಾಫಿಯನ್ನು ತಯಾರಿಸಿದಳು. 'ಘಂ' ಎನ್ನುವ ತಾಜಾ ಕಾಫಿಯ ವಾಸನೆ ಮನೆಯಲ್ಲಿ ಹರಡಿತು. ಶಾಂತಾ, ಲಲಿತಾ, ಅಡಿಗೆ ಮನೆಯ ಬಾಗಿಲಿಗೆ ಬಂದರು. ಸಾತಕ್ಕ ಎಲ್ಲರಿಗೂ ಕಾಫಿಯನ್ನು ಬಗ್ಗಿಸಿಕೊಟ್ಟಳು ತಾನೂ ಬಿಸಿ ಬಿಸಿಯಾಗಿ ಕುಡಿದು ಮನಕ್ಕೆ, ದೇಹಕ್ಕೆ ಚೈತನ್ಯವನ್ನು ತುಂಬಿಕೊಂಡಳು ಉದ್ವೇಗ ಮರೆಯಾಗಿತ್ತು. ಮನಸ್ಸು ತಹಬಂದಿಗೆ ಬಂದಿತ್ತು.

* * *

"ಬಾವಿ ನೀರು ಪಾತಾಳಕ್ಕೆ ಇಳಿದು ಹೋಗಿದೆ. ಸೇದಿ ಸೇದಿ ಅಂಗೈಯೆಲ್ಲಾ ಕಿತ್ತು ಹೋಗಿದೆ. ಹೂಳು ತೆಗೆಸಿದ್ರೆ ಹೊಸಾ ನೀರು ಬರುತ್ತೇನೋ ?" ಲಕ್ಷ್ಮಿ ನುಡಿದಳು.

"ಮಳೆ ಇಲ್ಲ, ನೀರಿನ ಸೆಲೆ ಇಲ್ಲ, ಬಾವಿಗೆ ನೀರು ಎಲ್ಲಿಂದ ಬರುತ್ತೇ ?" ಶಾಸ್ತ್ರಿ ಎಂದ.

"ಹೂಳು ತೆಗೆಸಿದ್ರೆ ಬರುತ್ತೆ ಅಂತ ಭಾಗೀರಥಮ್ಮ ಹೇಳ್ತಿದ್ರು."

"ಆಗ್ಲಿ.... ಲಕ್ಷ್ಯಾ ಬೋವಿನ ಕಂಡಾಗ ಬರೋಕೆ ಹೇಳ್ತೀನಿ."

"ಅವನ ಮುಂಡಾ ಮೋಚ್ತು, ಪಡಪೋಶಿ ಕೆಲಸ ಅವನದ್ದು, ಬಾವಿಕಟ್ಟೆಯನ್ನು ಸರಿಯಾಗಿ ಕಟ್ಟಲಿಲ್ಲ. ಅರ್ಧಕ್ಕೆ ಕೆಲಸವನ್ನು ಬಿಟ್ಟು ದುಡ್ಡನ್ನು ತಿಂದ್ಕೊಂಡು ಹೋದ. ಅವನನ್ನು ಕರಿಬ್ಯಾಡಿ."

"ಇನ್ಯಾರಿದಾರೆ.......ಬಾವಿಗೆ ಇಳಿಯೋಕೆ ಯಾರು ಸಿಗುಲ್ಲ."

"ನೀರೇ ಇಲ್ಲ, ಭಯ ಪಡೋಕೆ ಇನ್ನೇನು ?"

"ಅವ್ವಾವ್ರೇ ಕಟ್ಟೆಯ ಒಳಗೆ ಸಂದೀಲಿ ಒಂದು ಆವು ಸೇರ್ಕೊಂಡೈತೆ ತಲೇನ ಒರಕ್ಕೆ ಆಕ್ಕೊಂಡು ನೋಡ್ತಿರ್ತೈತೆ. ನಮ್ಮ ನೆಳ್ಳು ಬಿದ್ಕೊಡ್ಲೆ ಅಂಗೇ ತಲೇನ ಇಂದಕ್ಕೆ ಎಳ್ಕೊಂತೈತೆ." ವೈಕುಂಠ ಮಧ್ಯೆ ಬಾಯಿ ಹಾಕಿದ.

"ನೋಡಿದ್ರಾ? ಅವನು ಕಟ್ಟೇನ ಸರಿಯಾಗಿ ಕಟ್ಟಿಲ್ಲ. ಬರೀ ಸಂದುಗೊಂದುಗಳೇ ನೀನ್ಯಾಕೋ ಮುಂಚೇನೆ ಹೇಳ್ಲಿಲ್ಲ." ಊಟಕ್ಕೆ ಕುಳಿತಿದ್ದ ವೈಕುಂಠ ಬಾಯಿ ಬಿಟ್ಟ ಕೂಡಲೇ ಲಕ್ಷ್ಮಿ ಬೈದಳು.

"ಎಲ್ರಿಗೂ ಭಯ ಆಗ್ತೈತೆ ಅಂತ ಏಳ್ಲಿಲ್ಲ... ಕಣ್ರವ್ವಾ "

"ಹುಂ... ಆಯ್ತಪ್ಪಾ......... ಆಯ್ತು....ವೈಕುಂಠ, ಯಾರಾದ್ರೂ ಬಾವಿಗೆ ಇಳ್ಯೋರಿದ್ರೆ ಕರ್ಕೊಂಡ್ಬಾ..." ಶಾಸ್ತ್ರಿ ಹೇಳಿದ.

"ಆಯ್ತು ಅಯ್ನೋರಾ....." ಅವನು ಊಟ ಮುಗಿಸಿ ಎದ್ದ.

"ವೈಕುಂಠ ವೈಕುಂಠಾ ಹಾವು ಎಲ್ಲಿದೆ ಅಂತ ತೋರ್ಸೋ....." ಪದ್ಮಿನಿ ಅವನನ್ನು ಗೋಗರೆದಳು.

"ಹಾವೂ ಇಲ್ಲ ; ಹಲ್ಲಿಯೂ ಇಲ್ಲ ಬಾವಿ ಹತ್ರ ಯಾರೂ ಹೋಗ್ಬೇಕಾಗಿಲ್ಲ ಶಾಸ್ತ್ರಿ ಗುಡುಗಿದ." ಎಲ್ಲರೂ ಮೆತ್ತಗಾದರು. ಆದರೂ ಶಾಸ್ತ್ರಿಗೆ ತಿಳಿಯದಂತೆ ವೈಕುಂಠನನ್ನು ಸತಾಯಿಸಿ, ಅವನೊಂದಿಗೆ ಬಾವಿಯ ಬಳಿಗೆ ಬಂದರು.

"ಅತ್ಲಾಗ್ನೋಡಿ" ವೈಕುಂಠ ಪಿಸುಗುಟ್ಟಿದ. ಎಲ್ಲರೂ ಒಟ್ಟಿಗೇ ಬಗ್ಗಿದರು. ನೆರಳು ಬಿದ್ದೊಡನೆ ಹಾವು ತಲೆಯನ್ನು ಹಿಂದಕ್ಕೆ ಎಳೆದುಕೊಂಡಿತ್ತು. ಆ ನಂತರ ಆಗ ಈಗ ಬಾವಿಯ ಬಳಿಗೆ ಹೋಗಿ ಹಾವು ಎಲ್ಲಿದೆ ಅಂತ ನೋಡುವುದೇ ಚಿಕ್ಕವರ ಆಟವಾಗಿತ್ತು. ಒಮ್ಮೆಯಂತೂ ಕಲ್ಲುಗಳ ಸಂದಿಯಿಂದ ಹಾವು ಬಾಲವೊಂದನ್ನು ಬಿಟ್ಟು, ಉಳಿದ ದೇಹವನ್ನು ಆಚೆಗೆ ತಂದಿದ್ದನ್ನು ಕಂಡರು. ಸುಮಾರು ನಾಲ್ಕು ಐದು ಅಡಿ ಉದ್ದದ ಹಾವು, ಕಪ್ಪೆಯನ್ನು ಹಿಡಿದು ತಿನ್ನಲೆಂದು ಹೊರಕ್ಕೆ ಬಂದಿತ್ತು. ಮಕ್ಕಳು ನೋಡಿ ಹೆದರಿದ್ದರು.

"ಅಬ್ಬಾ ಎಷ್ಟುದ್ದದ ಹಾವು ! ಎಂಥಾ ಹಾವೋ ವೈಕುಂಠಾ?"

"ಕೆರೆ ಆವ್ರವ್ವಾ, ಏನೂ ಮಾಡಾಕಿಲ್ಲ ಬುಡಿ.."

"ಮೇಲೆ ಹತ್ತಿ, ನಮ್ಹತ್ರಕ್ಕೆ ಬಂದ್ಬಿಟ್ರೆ ?"

"ಅಂಗೇನಾದ್ರೂ ಬಂದ್ರೆ, ಅಂಗೆ ಇಡಿದ್ಬಿಟ್ಟು, ಅವತ್ತು ಮಾಡಿದ್ನಲ್ಲ ಅಂಗೇ ಮೂಗಿಗೆ ಪಿನ್ನು ಚುಚ್ಚಿ, ದಾರ ಕಟ್ಟಿ ಬೀದಿಗೆ ಬುಡ್ತೀನಿ"

"ಇನ್ಮೇಲೆ ಹೀಗೆಲ್ಲಾ ಮಾಡುಲ್ಲ ಅಂತ ಅತ್ತೆಗೆ ಮಾತು ಕೊಟ್ಟಿದೀಯ? "

"ಔದಲ್ವಾ ? ಅಂಗಾರೆ ಏನು ಮಾಡೋವಾ ?" ಕೆನ್ನೆಗೆ ಬೆರಳನ್ನಿಟ್ಟು ಯೋಚಿಸಿದ. ತಕ್ಷಣಕ್ಕೆ ಯಾವ ಉಪಾಯವೂ ಹೊಳೆಯಲಿಲ್ಲ.

ಶಾಂತಳ ಹೊರತು, ಉಳಿದವರ ಪರೀಕ್ಷೆ ಮುಗಿದು ರಜ ಪ್ರಾರಂಭವಾಗಿತ್ತು. ಅವಳಿಗೂ ಓದಿ ಓದಿ ಬೇಸರವಾಗುತ್ತಿತ್ತು. ಪರೀಕ್ಷೆ ಬೇಗ ಮುಗಿಯಬಾರದೇ ಅಂತ ತವಕದಿಂದ ಕಾಯುತ್ತಿದ್ದಳು.

ಮಟ ಮಟ ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯ. ಶಾಸ್ತ್ರಿ ಇನ್ನೂ ಊಟಕ್ಕೆ ಬರುವ ಸಮಯವಾಗಿರಲಿಲ್ಲ. ಲಕ್ಷ್ಮಿ, ಸಾತಕ್ಕ ಇಬ್ಬರೂ ಅಡಿಗೆ ಮನೆಯಲ್ಲಿದ್ದರು. ಏದುಸಿರು ಬಿಡುತ್ತಾ ಓಡಿಬಂದ ಲಲಿತಾ ಶಾಂತಳನ್ನು ಪಿಸುದನಿಯಲ್ಲಿ ಕರೆದಳು.

"ಶಾಂತಾ ಬೇಗ್ಬಾ..... ಒಂದು ತಮಾಷೆ ತೋರಿಸ್ತೀನಿ."

"ಏನೇ ಅದು ? ನಾನು ಓದ್ಕೋತಾ ಇದೀನಿ, ಕಾಣ್ತಿಲ್ವಾ?"

"ಬಾವಿಯ ಒಳಗೆ ಏನೋ ಬಿದ್ದಿದೆ. ಫಳ ಫಳ ಅಂತ ಹೊಳೀತಿದೆ.

ನೋಡೂವಂತೆ ಬೇಗ್ಬಾ" ಶಾಂತ ಪುಸ್ತಕಗಳನ್ನು ಬದಿಗೆ ಸರಿಸಿ ಎದ್ದಳು. ಅಕ್ಕತಂಗಿಯರಿಬ್ಬರೂ, ಬಾವಿಯ ಬಳಿಗೆ ಬಂದರು. ಸೂರ್ಯನ ಕಿರಣ, ನೇರವಾಗಿ ಬಾವಿಯೊಳಕ್ಕೆ ಬೀಳುತ್ತಿತ್ತು. ಹೆಚ್ಚು ನೀರಿಲ್ಲದ ಕಾರಣ ನೀರು ಪಾರದರ್ಶಕವಾಗಿತ್ತು. ಇಬ್ಬರೂ ಬಗ್ಗಿ ನೋಡಿದರು. " ಅಲ್ನೋಡು ಬಾವಿ ತಳ ಕಾಣ್ತಿದೆ ಅಲ್ವಾ?"

"ನೋಡಲ್ಲಿ, ತಳದಲ್ಲಿ ಏನೋ ವಸ್ತು ಕಾಣ್ತಿದೆ ಅಲ್ವಾ ?"

"ಹೌದು, ಅಲ್ಲಿ ಆಮೆ ಮಲಗಿದೆ. ಅದೇನೇ ಅದು ಉದ್ದಕ್ಕೆ ಕೋಲಿನ ಥರ ಬಿದ್ದಿದೆ ? ಹೊಳೀತಾ ಇದೆ ಅಲ್ವಾ ?"

"ಹೂಂ. ಅದನ್ನೇ ತೋರಿಸುಕ್ಕೆ ಕರೆದದ್ದು ನಾನು ಚಿನ್ನದ ಕೋಲು ಇದ್ದ ಹಾಗೆ ಕಾಣುತ್ತೆ ಅಲ್ವಾ ?"

"ಚಿನ್ನದ ಕೋಲು ಬಾವಿಯೊಳಗೆ ಹೇಗೆ ಬರುತ್ತೆ ? ಅತ್ತೆಗೆ ಹೇಳಿದರೆ, ಏನೂಂತ ಗೊತ್ತಾಗುತ್ತೆ "

"ಅತ್ತೇ ಬೈತಾರೆ ಅಷ್ಟೇ. ಅವತ್ತೇ ಬಾವಿಯ ಹತ್ರ ಯಾರೂ ಹೋಗ್ಬೇಡಿ ಅಂತ ಅಣ್ಣ ಬೈದಿರಲಿಲ್ವಾ ? ಆಮೆ ನೋಡು, ಎಷ್ಟು ದೊಡ್ಡದಾಗಿ ಬೆಳೆದಿದೆ. ಇದು ದೊಡ್ಡ ನದಿಯಲ್ಲಿ ವಾಸ ಮಾಡುವ ಆಮೆ ಅಂತೆ ವೈಕುಂಠ ಹೇಳ್ದ ಅವರ ಊರ ನದೀಲಿ ನೋಡಿದಾನಂತೆ."

"ನದಿಯ ಆಮೆ ಇಲ್ಲಿಗೆ ಹೇಗೆ ಬಂತು! ಇಲ್ಲಿ ಹತ್ರ ಯಾವ ನದಿ ಇದೆ? ಎಷ್ಟು ಬೇಗ ಎಷ್ಟು ದೊಡ್ಡದಾಗಿ ಬೆಳೆದಿದೆ. ಯಾವಾಗ ನೋಡಿದ್ರೂ ನೀರಿನಲ್ಲಿ ಮುಳುಗಿ ಮಲಗಿರ್ತಿತ್ತು. ಈಗ ಸಾಕಷ್ಟು ನೀರೇ ಇಲ್ಲ."

"ಇಲ್ಲೇನೇ ಮಾಡ್ತಿದೀರಿ ಇಬ್ರೂ... ಮಧ್ಯಾಹ್ನದ ಹೊತ್ತು ಬಿಸಿಲ್ನಲ್ಲಿ ಬಾವಿಯ ಹತ್ರ ಹೆಂಗಸ್ರು ಬರ್ಲೇ ಬಾರ್ದು."

"ಈಗ ನೀವು ಬಂದಿದೀರಲ್ಲ ಅತ್ತೆ."

"ನಾನು ದೊಡ್ಡ ಹೆಂಗಸು.... ಅಲ್ದೇ ಮಡಿ ನೀರು ಬೇಕಾಗಿತ್ತು. ಅತ್ಲಾಗೆ ಸರಿದು ನಿಂತ್ಕೊಳ್ಳಿ."

"ಅತ್ತೇ.... ಅತ್ತೇ..... ತಡೀರಿ ಬಿಂದಿಗೇನ ಬಿಡ್ಬೇಡಿ ಸ್ವಲ್ಪ ಬಗ್ಗಿ ನೋಡಿ ಬಾವಿಯ ತಳದಲ್ಲಿ ಚಿನ್ನದ ಕೋಲು ಕಾಣ್ತಿದೆ."

"ಏನೇ ಹಾಗಂದ್ರೆ ? ಚಿನ್ನದ ಕೋಲು ಎಲ್ಲಿಂದ ಬರ್ಬೇಕು ? ಯಾವುದೋ ಮರದ ಕೊಂಬೆಯೋ... ಹುಲ್ಲೋ ಬಿದ್ದಿರಬೇಕು.."

"ಇಲ್ಲ ಅತ್ತೇ ನೀವೇ ನೋಡಿ. ಹೇಗೆ ಫಳ ಫಳಾಂತ ಹೊಳೀತಿದೆ ಸಾತಕ್ಕ ಬಗ್ಗಿ ನೋಡಿದಳು. ನಿಚ್ಚಳವಾದ ನೀರಿನ ಅಡಿಯಲ್ಲಿ ಕೋಲಿನಂತೆ ಏನೋ ಬಿದ್ದಿರುವುದನ್ನು ಕಂಡಳು "ಹೌದು ಹೊಳೆಯುತ್ತಿದೆ ಏನಿರಬಹುದು?" ಹೆಚ್ಚು ತಲೆ

ಕೆಡಿಸಿಕೊಳ್ಳದೇ ಮಡಿನೀರನ್ನು ಸೇದಿಕೊಂಡು ನಡೆದಳು.

ಮಧ್ಯಾಹ್ನ ಎಲ್ಲರೂ ಊಟಕ್ಕೆ ಕುಳಿತಿದ್ದಾಗ ಲಲಿತ, ತಂದೆಗೆ, ಬಾವಿಯಲ್ಲಿ ಚಿನ್ನದಕೋಲು ಬಿದ್ದಿರುವುದನ್ನು ತಿಳಿಸಿದಳು. ಶಾಸ್ತ್ರಿ ರೇಗಿದ.

"ಚಿನ್ನದ ಕೋಲಂತೆ ಚಿನ್ನದ ಕೋಲು ಬೇಡಾಂತ ಹೇಳಿದ್ರೂ ಬಾವಿಯ ಹತ್ರ ಯಾಕೆ ಹೋಗಿದ್ರಿ ?"

"ಆಮೇನ, ಹಾವನ್ನ ನೋಡೋಕೆ ಅಂತ ಹೋಗಿದ್ವಿ."

"ಇದೆಲ್ಲಾ ಆ ವೈಕುಂಠನ ಕಿತಾಪತಿ. ಹಳದಿ ಬಣ್ಣ ಬಳಿದ ಕೋಲನ್ನು ಬಾವಿಗೆ ಎಸೆದಿದಾನೆ ತರಲೇನ ತಂದು......."

"ಹೌದು ಅವನದ್ದೇ ಕಿತಾಪತಿ. ಬಾವಿ ಹತ್ರ ಏನೋ ಮಾಡ್ತಾನೆ ಇರ್ತಾನೆ ಇವುಗಳನ್ನು ಕರ್ಕೊಂಡು ಹೋಗ್ತಾನೆ. ಮೀಸೆ ಬೆಳೆದಿದ್ರೂ ಹುಡುಗು ಬುದ್ಧಿ ಮಾತ್ರ ಹೋಗಿಲ್ಲ."

"ತೋಟಕ್ಕೆ ಕೆಲಸಕ್ಕೆ ಹಾಕ್ಕೊಂಡ್ರೆ ದಾರಿಗೆ ಬರ್ತಾನೆ. ಮನೆಯ ಕೆಲಸಕ್ಕೆ ಒಬ್ಬ ಆಳು ಇರಲಿ ಅಂತ ಬಿಟ್ರೆ, ಅವನ ತಲೆಹರಟೆ ಹೆಚ್ಚಾಯ್ತು ಎಲ್ಲಿ ಕರೀರಿ ಅವನನ್ನು..."

"ವೈಕುಂಠಾ...ವೈಕುಂಠಾ. ಅಯ್ನೋರು ಕರೀತಿದಾರೆ ಬರ್ಬೇಕಂತೆ" ಲಲಿತ ಹಿಂಬಾಗಿಲ ಹೊಸ್ತಿಲ ಮೇಲೆ ನಿಂತು ಕೂಗಿದಳು.

"ಆಬ್ಬಬ್ಬಾ.... ಅದೆಂಥಾ ಧ್ವನಿ ? ಇಲ್ಲಿಂದ್ಲೇ ಏನು ಕೂಗೋದು? ಮೊದಲು ಹೊಸ್ತಿಲ ಮೇಲ್ನಿಂದ ಕಾಲುತೆಗಿ. ಅದರ ಮೇಲೆ ನಿಲ್ಲಬಾರದು."

"ನಿಂತ್ರೆ ಏನಾಗುತ್ತೆ ?" ಲಲಿತ ಕಾಲು ತೆಗೆದು ನಿಂತಳು

"ನಿನ್ತಲೆ ಹೋಳಾಗುತ್ತೆ. ಬೇಡಾಂದ್ರೆ ಬೇಡ. ನಿಂತ್ಕೊಬೇಡ."

ಹೂವಿನ ಗಿಡಗಳಿಗೆ ಪಾತಿ ಮಾಡುತ್ತಿದ್ದ ವೈಕುಂಠ ಬಂದ. ಅವನ ಕೈಗಳಿಗೆ ಮಣ್ಣು ಮೆತ್ತಿಕೊಂಡಿದ್ದವು. ತಲೆಗೆ ಟವೆಲನ್ನು ಸುತ್ತಿದ್ದ.

"ಏನ್ಮಾಡ್ತಿದ್ಯೋ ?.....ಗಿಡಗಳಿಗೆ ಪಾತಿ ಮಾಡಿದ್ದು ಮುಗೀತಾ ?"

"ಇಲ್ಲ ಅಯ್ನೋರೆ......."

"ಮೊದ್ಲು ತಲೆ ಮೇಲಿನ ಲಪೇಟಾನ ಬಿಚ್ಹಾಕು. ನಾಳೆಯಿಂದ ನನ್ನ ಜೊತೇಲಿ ತೋಟಕ್ಕೆ ಬಾ..... ಇಲ್ಲಿಯ ಕೆಲಸವನ್ನು ನೀನು ಬೇಗ ಮಾಡಿ ಮುಗಿಸಲ್ಲ. ಗಿಡಗಳಿಗೆ ಹಾಕೋಕೆ ಬಾವೀಲಿ ನೀರಿಲ್ಲ. ಇನ್ನು ಪಾತಿ ಏಕೆ !" ವೈಕುಂಠ ಪೆಚ್ಚಾಗಿದ್ದ. ತಲೆಗೆ ಸುತ್ತಿದ್ದ ಟವೆಲ್ಲನ್ನು ಬಿಚ್ಚಿ, ಕೈಯಲ್ಲಿ ಉಂಡೆಯಾಗಿ ಸುತ್ತಿಟ್ಟುಕೊಂಡ.

"ಬಾವಿಗೆ ನೀನೇನಾದ್ರೂ, ಬಣ್ಣ ಬಳಿದ ಕೋಲನ್ನೇನಾದ್ರೂ ಹಾಕಿದೀಯಾ! ಮೊದ್ಲೇ ನೀರಿಲ್ಲ. ಎಂತೆಂಥದೋ ಬಣ್ಣ ಗಿಣ್ಣನ್ನೆಲ್ಲಾ ನೀರಿಗೆ ಯಾಕೆ ಹಾಕೋದು?"

ಗದರಿದ.

"ಇಲ್ರಾ ನಾನು ಯಾವ ಬಣ್ಣದ ಕೋಲನ್ನು ಆಕಿಲ್ರಾ..."

"ನೀನಲ್ಲದೇ ಇನ್ಯಾರು ಇಂಥಾ ಕೆಲ್ಸ ಮಾಡ್ತಾರೆ ?" ಸಾತಕ್ಕ ಎಂದಳು.

"ಇಲ್ಲಾ ಅವ್ವಾವ್ರೇ....... ನಂತಾವ ಯಾವ ಬಣ್ಣದ ಕೋಲೈತೆ ಎಸೆಯೋಕೆ! ಎಲ್ಲೈತೆ ತೋರ್ಬನ್ನಿ"

"ತೋರೋದೂ ಬೇಡ. ನೋಡೋದು ಬೇಡ. ಮಕ್ಕಳಿಗಿಂತ ಹೆಚ್ಚಾಗಿ ಆಟ ಆಡೋನು ನೀನು. ಎಂದೋ ಎಸೆದಿದೀಯ... ಈಗ ನೀರು ಕಡಿಮೆ ಆಗಿದೆಯಲ್ಲ ಕಾಣಿಸ್ತಾ ಇದೆ."

"ಇಲ್ರಾ.... ನಾನು ಏನನ್ನು ಎಸೆದಿಲ್ಲ. ದೇವರ ಸತ್ಯ."

"ನಿಂಗೆ ಸತ್ಯ ಸುಳ್ಳು ಎಲ್ಲಾ ಒಂದೇ. ಬಿಡು ಅತ್ಲಾಗೆ. ಬಾವಿಗೆ ಇಳಿಯೋರು ಸಿಕ್ಕಿದ್ರಾ ? ಹೂಳು ತೆಗೆಸ್ಬೇಕು ಅಂತ ಹೇಳಿದ್ನಲ್ಲಾ...." ಶಾಸ್ತ್ರಿ ಕೇಳಿದ.

"ಪೇಟೇಲಿ ಬೋವಿಗಳು ಮಸ್ತಾಗಿ ಅವ್ರಂತೆ. ನಾವೇ ಓಗಿ ಕರದ್ರೆ ನಮ್ಕೂಡೇನೇ ಬತ್ತಾರಂತೆ."

"ಅದಕ್ಕೋಸ್ಕರ ಪೇಟೇಗೆ ಯಾರು ಹೋಗ್ತಾರೆ ?"

"ನಾನೇ ಓಗಿ ಬತ್ತೀನಿ. ಅಯ್ನೋರೇ....." ಆಸೆಯಿಂದ ಕೇಳಿದ.

"ಮಂಗಳವಾರದ ಸಂತೆಗೆ ಹೇಗೂ ತರಕಾರಿ ಹಾಕ್ಬೇಕು ಸೋಮವಾರನೇ ತರಕಾರಿಗಳನ್ನು ತುಂಬಿಸ್ಕೊಂಡು ಸಂತೆಗೆ ಹಾಕಿ, ಹಾಗೇ ಅವರ್‍ಯಾರಾದ್ರೂ ಬರೋರಿದ್ರೆ ಕರ್‍ಕೊಂಡ್ಬಾ. ತರಕಾರಿ ಬಂದ ಹಣಾನ ಅವ್ರಿಗೆ ಕಾಣಿಸ್ಬೇಡ ಕಿತ್ಕೊಂಡ್ಬಿಡ್ತಾರೆ."

"ನೀವು ಬರೋದಿಲ್ವಾ ಅಯ್ನೋರೆ?"

"ಈ ಸಾರಿ ಶಾನೇ ತರಕಾರಿ ಇಲ್ಲ. ನೀನೊಬ್ನೇ ಹೋಗ್ಬಾ... ಸರಿಯಾಗಿ ತೂಕ ಹಾಕಿಸಿ, ಲೆಖ್ಖ ಹಾಕಿ ಹಣಾನ ಇಸ್ಕೋ..... ನಿಕ್ಕರಿನ ಒಳ ಜೇಬ್ನಲ್ಲಿ ಯಾರ್ಗೂ ಕಾಣಿಸದಂತೆ ಇಟ್ಕೋ......" ವೈಕುಂಠ ಖುಷಿಯಿಂದ ಉಬ್ಬಿಹೋದ.

"ಅದೇನು ಅವನೊಬ್ಬನ್ನೇ ಕಳಿಸ್ತೀಯ ? ನಿಂಗೆ ದಗಾ ಹಾಕಿದ್ರೆ ?"

"ನಾಳೆ ದಿನ ವೆಂಕಟಾಚಲಯ್ಯನವರೂ, ತರಕಾರಿಗಳನ್ನು ಪೇಟೇಗೆ ಕಳಿಸ್ತಿದಾರೆ. ಆ ಗಾಡಿಗಳ ಜೊತೇಲಿ, ನಮ್ಮ ಗಾಡೀನೂ ಕಳಿಸ್ತೀನಿ. ನಾನು ಆತಂಗೆ ಒಂದ್ಮಾತು ಹೇಳಿರ್ತೀನಿ ಇಲ್ದಿದ್ರೆ ಸೈಕಲ್ನ ತುಳ್ಕೊಂಡು ನಾನೂ ಹೋಗ್ಬೇಕಾಗುತ್ತೆ. ಈ ಸಾರಿ ವೈಕುಂಠನ್ನ ನಂಬಿಕೆ ಮೇಲೆ ಕಳಿಸ್ತೀನಿ."

"ಆಳು ಮಾಡೋದು ಹಾಳು ಅಂತ ಮೊದಲೇ ಗಾದೆ ಮಾತಿದೆ."

"ನಂಗೂ ಗೊತ್ತು ಲಕ್ಷ್ಮೀ.... ನಮ್ಮ ವೆಂಕಟೇಶ ದೊಡ್ಡೋನಾಗಿ ನನ್ನ ಎತ್ತರಕ್ಕೆ ಬೆಳೆದು, ಈ ಕೆಲಸಗಳನ್ನು ವಹಿಸಿಕೊಂಡಾಗ ನನಗೆ ನೆಮ್ಮದಿ."

"ಈ ಕಷ್ಟ ಕಾರ್ಪಣ್ಯ ಎಲ್ಲಾ ನಿಮ್ಮ ಕಾಲಕ್ಕೇ ಮುಗಿಯಲಿ. ಈ ಗದ್ದೆ ಗರ್ಜಿಯ ಕೆಲಸವನ್ನು ಬೆಂಕಟೇಶನಿಗೆ ಮಾತ್ರ ಅಂಡಿಸಬೇಡಿ. ಚೆನ್ನಾಗಿ ಓದಿ ಬರೆದು, ವಿದ್ಯಾವಂತನಾಗಿ ಆಫೀಸಿನ ಕೆಲಸಕ್ಕೆ ಸೇರ್ರೊಳ್ಳಲಿ." ಲಕ್ಷ್ಮಿ ಮಾತು ಮುಗಿಸಿ ಅವನಿಗೆ ಬೆನ್ನು ಮಾಡಿದ ಕೂಡಲೇ ಶಾಸ್ತ್ರಿ ಹಲ್ಲು ಬಿಟ್ಟು ಕೈಯಾಡಿಸುತ್ತಾ ಅಣಕಿಸಿ ನಕ್ಕ. ಶಾಂತ ಲಲಿತ ಕಿಸಕಿಸ ನಕ್ಕರು.

"ಅವರಿಬ್ರೂ ಎಲ್ಲಿ? ಒಳಕ್ಕೆ ಕರೀರಿ, ಬಿಸಿಲ್ನಲ್ಲಿ ಬೀದೀಲಿ ಎಲ್ಲ ಕುಣೀತಿವ್ರ್ಯೋ...?" ಶಾಸ್ತ್ರಿ ನಗುವನ್ನು ನಿಲ್ಲಿಸಿ ಕೇಳಿದ.

"ಅವರಿಬ್ರೂ ಅತ್ತೆ ಮನೆಗೆ ಹೋಗಿದಾರೆ"

"ಅಲ್ಲೇನು ಸಡಗರದವರಂತೆ ಇಬ್ರಿಗೂ ?"

"ಅತ್ತೇ ಚೌಕಾಭಾರ ಆಡೋಕೆ ಕರೆದ್ರು."

"ನೀನು ಹೋಗ್ಲಿಲ್ವಾ ಲಲಿತಾ ?"

"ಇಲ್ಲ ಅಣ್ಣ ಅಮ್ಮ ಬೇಡಾಂತ ಅಂದ್ಲು." ಲಲಿತಾ ಹೊರಟು ನಿಂತಾಗ ಲಕ್ಷ್ಮಿ ತಡೆದು ನಿಲ್ಲಿಸಿದ್ದಳು. ನೀನೀಗ ದೊಡ್ಡ ಹುಡುಗಿ ಪದೇ ಪದೇ ಅತ್ತೆ ಮನೆಗೆ ಹೋಗ್ಬೇಡ ಅಂತ ಹೇಳಿದ್ದನ್ನು ಲಲಿತ ಹೇಳಲಿಲ್ಲ.

* * *

ಬಾವಿಗೆ ಇಳಿಯುವವರನ್ನು ವೈಕುಂಠ ತನ್ನೊಡನೆ ಕರೆತಂದ. ಬಂದವರಿಬ್ಬರೂ, ಸರಸರನೆ ಬಾವಿಗೆ ಇಳಿದರು. ತಳದಲ್ಲಿ ಕಾಲೂರಿ ಒಬ್ಬ ನಿಂತ, ಒಬ್ಬ ಮೇಲೆ ಹತ್ತಿಬಂದ. ಅವರಿಬ್ಬರೂ ಸೇರಿ ಬಾವಿಯ ನೀರನ್ನು ಬಕೆಟ್‌ನಲ್ಲಿ ಸೇದಿ ಆಚೆ ಚೆಲ್ಲಿದರು. ಕಡೆಗೆ ಬಗ್ಗಡದ ನೀರನ್ನು ಎತ್ತುವಾಗ ಕೆಳಗಿದ್ದವನು ತನ್ನ ಭಾಷೆಯಲ್ಲಿ ಕೂಗಿ ಏನೋ ಹೇಳಿದ. ಅವರ ಭಾಷೆ ಯಾರಿಗೂ ಅರ್ಥವಾಗುವಂತಿರ ಲಿಲ್ಲ. ಮೇಲಿದ್ದವನು ಕೆಳಕ್ಕೆ ಇಳಿದು, ಕೋಲಿನಂತೆ ಇದ್ದುದನ್ನು ಕೈಯಲ್ಲಿ ಹಿಡಿದು ಮೇಲೆ ಬಂದು ಎಲ್ಲರಿಗೂ ತೋರಿಸುತ್ತಾ ಅದನ್ನು ನೆಲದ ಮೇಲೆ ಹಾಕಿದ. ಒಂದು ದಪ್ಪನೆಯ ಕಡ್ಡಿಯಿಂದ ಸರಿಸಿ ಸರಿಸಿ ಸರಿ ಮಾಡಿ ವೈಕುಂಠನಿಗೆ ತೋರಿದ. ವೈಕುಂಠ ಕುತೂಹಲದಿಂದ ಆಶ್ಚರ್ಯದಿಂದ ಹತ್ತಿರದಿಂದ ನೋಡಿ ಕಡ್ಡಿಯಿಂದ ಎತ್ತಿದ ಆಗ ಅವನಿಗೆ ಅದೇನೆಂದು ಗೊತ್ತಾಗಿಯೇ ಬಿಟ್ಟಿತು. ಆವು ಎನ್ನುತ್ತಾ ಅದನ್ನು ಕೆಳಕ್ಕೆ ಎಸೆದ ಮೈಯಲ್ಲೆಲ್ಲಾ ಏನೋ ಹರಿದಾಡಿದಂತಾಗಿತ್ತು. ಮನೆಯ ಕಡೆಗೆ ಓಡಿ ಬಂದ.

"ಅಪ್ರಾಪ್ರೇ ಬೇಗ ಬನ್ನಿ... ಅರಚಿದ."

"ಏನಾಯ್ತೋ...?" ಸಾತಕ್ಕ ಧಾವಿಸಿ ಬಂದಳು.

"ನೀವು ವಸಿ ಬನ್ನಿ ಒಂದು ತಮಾಸೆ ನೋಡೋರಂತೆ" ಅವನ ಗಡಿಬಿಡಿ

ಕಂಡು ಮನೆಯವರೆಲ್ಲಾ ಬಾವಿಯ ಬಳಿಗೆ ಬಂದರು. ವೈಕುಂಠ ಕಡ್ಡಿಯಿಂದ ಆ ವಸ್ತುವನ್ನು ಎತ್ತಿ ಎಲ್ಲರ ಮುಂದೆ ಹಿಡಿದ.

"ಇದೆಂಥದೋ... ಎಲ್ಲಿತ್ತೋ... ?"

"ಸರಿಯಾಗಿ ನೋಡಿ ಅವ್ವಾವ್ರೇ.... ಇದು ಆವು ಅಲ್ರಾ...."

"ಎಂಥದೋ ಅತ್ಲಾಗೆ ಬಿಸ್ಹಾಕು.... ನಿಂಗೆಲ್ಲಿ ಸಿಕ್ತು ?"

"ಬಾವಿಯೊಳಗೆ ಬಿದ್ಕೊಂಡಿತ್ತು ಅವ್ವಾವ್ರೇ.. ಈವಯ್ಯ ಆಚೆಗೆ ತೆಗೆದು ಹಾಕ್ದ."

"ಏನು ? ಇದು ಬಾವಿಯೊಳಗೆ ಇತ್ತಾ ? ಯಾರು ಬಿಸಾಡ್ತಾರೆ ನಿಜಹೇಳು"

"ಈ ವಯ್ಯನ್ನೇ ಕೇಳಿ ಬೇಕಾದ್ರೆ.." ಅವನು ಹೌದು ಎನ್ನುವಂತೆ ತಲೆಯಾಡಿಸಿದ.

"ಸಾಂತವ್ವಾರೆ..... ನೀವೆಲ್ಲಾ ಚಿನ್ನದ ಕೋಲು ಅಂತ ಏಳ್ತಿರ್‍ಲಿಲ್ವಾ ಅದೇ ಇದು. ಸತ್ತ ಆವಿನ ಎಮ್ಕೆ ಕಣ್ರವ್ವಾ...."

"ಎಮ್ಕೆ ಅಂದ್ರೆ..... ?"

"ಮೂಳೆ ಕಣ್ರವ್ವಾ.. ಇದು ಇಲ್ಲಿ ಕಲ್ಲುಗಳ ಸಂದೀಲಿ ಅಡಕ್ಕೊಂಡಿತ್ತಲ್ರಾ ಅದೇ ಆವು. ನೀರಿನಾಗೆ ಬಿದ್ದು ಸತ್ತೋಗ್ಯೈತೆ. ಕೊಳೆತು ಎಮ್ಕೆಯಾಗಿ ಬಿದ್ದೈತೆ.... ಸತ್ತೋಗಿ ಬಾಳ ದಿನಗಳಾಗಿವೆ."

"ಥೂ ಸಾಕು ನಿಲ್ಸು, ಹೇಳ್ಬೇಡ. ಅಸಹ್ಯ ಆಗುತ್ತೆ."

"ಹುಂದ್ರವ್ವಾ. ಪಳಪಳಾಂತ ಒಳಿತಿತ್ತಲ್ಲ. ಎಲಬಿಗೆ ಅಂಟಿಕೊಂಡಿರೋ ಉಳುಗಳು. ನೋಡಿ ಎಂಗೆ ಅರಿದಾಡ್ತಿವೆ...."

"ಥೂ" ಎಲ್ಲರೂ ಕೆಟ್ಟ ಮುಖ ಮಾಡಿ ಉಗುಳಿದರು

"ನೀರು ಹಾವು, ನೀರಿನಲ್ಲಿ ಬಿದ್ದು ಯಾಕೆ ಸಾಯುತ್ತೇ ? ನೀನೇ ಎಲ್ಲಿಂದ್ಲೋ ತಂದು ಎಸೆದಿರಬೇಕು" ಸಾತಕ್ಕ ನುಡಿದಳು.

"ಇಲ್ರವ್ವಾ.. ನನ್ನಾಣೆ ನಾವು ನೋಡಿದ್ವಲ್ಲ. ಅದೇ ಆವು..... ನೋಡಿ ಎಷ್ಟುದ್ದ ಐತೆ."

"ಥೂ ಅತ್ಲಾಗೆ ಎಸಿ.... ಮತ್ತೆ ಮತ್ತೇ ತೋರಿಸ್ಬೇಡ."

"ಅಷ್ಟರಲ್ಲಿ ಬಾವಿಯಲ್ಲಿ ಕೆಳಗಿದ್ದವನು, ಬಕೆಟ್‌ನೊಳಗೆ ಆಮೆಯನ್ನು ಇಟ್ಟು ಚಪ್ಪಾಳೆ ತಟ್ಟಿ ಹೇಳಿದ. ವೈಕುಂಠನೂ ಇನ್ನೊಬ್ಬನೊಂದಿಗೆ ಹಗ್ಗ ಎಳೆದು, ಬಕೆಟ್‌ನ್ನು ಮೇಲಕ್ಕೆ ಎತ್ತಿದರು. ನೆಲದ ಮೆಲೆ ಬಕೆಟ್‌ನ್ನು ಇಳಿಸಿದ ಕೂಡಲೇ ವೈಕುಂಠ ಆಮೆ ಯನ್ನು ನೆಲಕ್ಕೆ ಕೆಡವಿದ. ಅಲುಗಾಡದೇ ಚಿಪ್ಪಿನೊಳಗೆ ಅಡಗಿ ಮಲಗಿದ್ದುದನ್ನು ಕಂಡ ಶಾಂತ ಮರುಕದಿಂದ ಕೇಳಿದಳು.

"ಇದೂ ಸತ್ತೋಗಿದ್ಯೇನೋ... ಅಲುಗಾಡ್ತಾನೇ ಇಲ್ಲ.

"ಇಲ್ರವ್ವಾ, ಇದು ಬದುಕೈತೆ... ಸತ್ತಂಗೆ ಮಲಗೈತೆ ಅಷ್ಟೇ... ಮೊರದಗಲದಷ್ಟಿದೆ...

ನಿದ್ದೆಯಿಂದ ಎದ್ದ ಶಾಸ್ತ್ರಿಯೂ ಬಾವಿಯ ಬಳಿಗೆ ಬಂದ.

"ಅವನ್ಗೆ ಹೇಳು, ಬಾವೀಲಿ ಜಾತಿ ಮೀನುಗಳಿವೆ. ಅದನ್ನು ಬಕೆಟ್‌ನಲ್ಲಿಟ್ಟು ಮೇಲಕ್ಕೆ ಕಳಿಸಲಿ" ಇನ್ನೊಬ್ಬ ಕೆಳಗೆ ಇದ್ದವನಿಗೆ ಹೇಳಿದ. ಅವನು ತನ್ನ ಭಾಷೆಯಲ್ಲಿ ಇಲ್ಲಿ ಯಾವ ಮೀನೂಗಳೂ ಇಲ್ಲ ಅಂತ ಹೇಳಿದ. ಇನ್ನೊಬ್ಬ ಅದನ್ನು ಇವರಿಗೆ ತಿಳಿಸಿದಾಗ, ಶಾಸ್ತ್ರಿ ಮತ್ತೆ ಒತ್ತಿ ಹೇಳಿದ.

"ಯಾಕಿಲ್ಲ ? ಎರಡು ದೊಡ್ಡ ಮೀನುಗಳನ್ನು ನಾನೇ ತಂದು ಬಾವಿಯೊಳಕ್ಕೆ ಬಿಟ್ಟಿದ್ದೆ. ಅವುಗಳು ಮರಿಗಳನ್ನು ಮಾಡಿರಬೇಕು. ಬಗ್ಗಡದೊಳಗೆ ಅಡಗಿ ಕೂತಿರುತ್ವೆ.... ಗುದ್ದಲಿಯಲ್ಲಿ ಅಗೆದು ತೆಗಿ ಅಂತ ಹೇಳು" ಎಂತಂದ. ಅಷ್ಟರಲ್ಲಿ ಅವನ ಕಣ್ಣಿಗೆ ಸತ್ತ ಹಾವಿನ ಅಸ್ಥಿಪಂಜರ ಕಂಡಿತು. "ಇದೆಂಥದು ? ಎಷ್ಟುದ್ದಕ್ಕೆ....... ಹೀಗಿದೆ....?" ಕೇಳಿದ.

"ಕೆರೆ ಆವು..... ಸತ್ತು ಓಗಿ ಇಂಗಾಗೈತೆ.... ಬಾವಿಯೊಳಗೆ ಇತ್ರ ನೀರ ಆವು ಅದೆಂಗೆ ನೀರ್ನಲ್ಲಿ ಸಾಯುತ್ತೆ. ನಂಗೆ ಅದೇ ಚೋಚಿಗ....." ಬಾಯಿ ಬಾಯಿ ಬಿಟ್ಟ.

"ನಂಗೆ ಎಲ್ಲಾ ಸೋಜಿಗವೇ.... ಸತ್ತು ಎಷ್ಟು ದಿನಗಳಾಗಿವ್ಯೋ ಏನೂ ಉಳಿದಿಲ್ಲ. ಎಲಬಿಗೆ ಹುಳುಗಳು ಮುತ್ಕೊಂಡು ಹರಿದಾಡ್ತಿವೆ."

ಅಷ್ಟರಲ್ಲಿ ಕೆಳಗಿಳಿದವನೂ ಮೇಲೆ ಹತ್ತಿ ಬಂದ. "ಅಲ್ಲಿ ಯಾವ ಮೀನು ಕಪ್ಪೆ ಏನೂ ಇಲ್ಲ ಸ್ವಾಮೇರೆ. ತಡಕಾಡಿ ಸಾಕಾಯ್ತು."

"ಹಾಗಾದ್ರೇ ಏನಾಯ್ತು ? ನೀರಿನಲ್ಲಿರೋ ಮೀನುಗಳು ಇನ್ನೆಲ್ಲಿಗೆ ಹೋಗಲು ಸಾಧ್ಯ... ಸರಿಯಾಗಿ ನೋಡಿದ್ಯೇನಪ್ಪಾ........ ?"

"ಇಂಥಾ ಕಾಡು ಆಮೇನ ಬಾವೀಲಿ ಬಿಟ್ಟಿದೀರಿ. ಇದೇ ಎಲ್ಲಾ ಮೀನನ್ನು ತಿಂದು ಹಾಕಿದೆ." ಅವನು ವಿಚಿತ್ರವಾಗಿ ನಕ್ಕು ನುಡಿದ.

"ತಮಾಷೆ ಮಾಡ್ತಿದೀಯಾ ? ಆಮೆ ಮೀನನ್ನೆಲ್ಲಾದ್ರೂ ತಿನ್ನುತ್ತಾ ?"

"ಹೂನ್ರಯ್ಯಾ, ಈ ಜಾತಿಯ ಆಮೇನೇ ಅಂಥದು. ಹಿಂಗೆ ಬೆಳೆದಿದೆ. ಅದಕ್ಕೆ ಆಹಾರ ಬೇಡ್ವಾ ಸ್ವಾಮೀ.... ಮೀನು, ಕಪ್ಪೆ ಎಲ್ಲಾನೂ ತಿಂದು ಬೆಳೆದೈತೆ... ಈ ಕೆರೆ ಹಾವನ್ನು ಇದೇ ತಿಂದು ಮುಗಿಸಿದೆ. ರಾಕ್ಷಸನ ಹಾಗೆ."

"ಛೇ.... ಹಾಗೆ ಹೇಗೆ ಹೇಳ್ತೀಯ? ಎಲ್ಲವೂ ನೀರಿನಲ್ಲಿ ಜೀವಿಸುವ ಪ್ರಾಣಿಗಳು. ಒಂದನ್ನೊಂದು ತಿನ್ನಲು ಸಾಧ್ಯವಿಲ್ಲ."

"ತಿಂತಾವೆ.... ಇಲ್ದಿದ್ರೆ ಬದುಕೋದು ಹೇಗೆ ಸ್ವಾಮೀ.... ಇದೊಂದೇ ಅಲ್ಲಿ ಬದುಕಿದ್ದುದು... ಮೀನುಗಳನ್ನು ತಿಂದಿದೆ. ಸಮಯ ನೋಡಿ, ನೀರಿಗೆ ಇಳಿದ ಹಾವನ್ನು ಹಿಡಿದು ತಿಂದಿದೆ. ಎಲ್ಲಾ ಈ ಆಮೆಯದೇ ಕೆಲಸ.." ಅವನು ಖಡಾ

ಖಂಡಿತವಾಗಿ ಹೇಳಿದ.

"ಥೂ" ಲಲಿತಾ ಶಾಂತ ಕೆಟ್ಟ ಮುಖ ಮಾಡಿದರು. ಶಾಸ್ತ್ರಿ ಪೆಚ್ಚಾದ.

"ಛೇ ಎಂಥಾ ಮೋಸ ಆಯ್ತು. ಇಂತಾ ರಾಕ್ಷಸ ಆಮೆ ಅಂತ ಗೊತ್ತಾಗಿದ್ದಿದ್ರೆ, ತೋಟದಿಂದ ತರ್ತಾನೆ ಇರ್ಲಿಲ್ಲ. ಹಾಸನದಿಂದ ಒಳ್ಳೆ ಜಾತಿ ಮೀನುಗಳನ್ನು ಬಾವಿಗೋಸ್ಕರವೇ ತರಿಸಿದ್ದೆ. ಇದನ್ನು ತೋಟದ ಬಾವಿಗೆ ಬಿಟ್ಟು ಬಿಡೋಣ. ಬಾವಿಗೆ ಮತ್ತೇ ಮೀನುಗಳನ್ನು ತರಿಸಿ ಬಿಡ್ತೀನಿ."

"ಬಾವಿಯ ಹೂಳನ್ನು ತೆಗೆದು, ಸುಣ್ಣದ ತಿಳಿ ಹಾಕಿ ಚೆನ್ನಾಗಿ ಶುಚಿ ಮಾಡಿ ಬಿಡಿ. ಹೊಸದಾಗಿ ಬರೋ ನೀರು ಶುಚಿಯಾಗಿರಲಿ."

"ಈ ಕೊಳೆತ ಹಾವು ಇದ್ದ ಬಾವಿಯ ನೀರನ್ನೇ ಕುಡ್ದಿದೀವಿ. ಅಡಿಗೆ ಮಾಡಿ ದೀವಿ, ಈಗ ಅಸಹ್ಯ ಆಗ್ತಿದೆ." ಸಾತಕ್ಕ ಮತ್ತೆ ಹೇಳಿದಳು

"ಈಗ ಅಸಹ್ಯಸಿಕೊಂಡ್ರೆ ಏನು ಪ್ರಯೋಜನ ? ಮತ್ತೆ ಮತ್ತೆ ಅದನ್ನೇ ಆಡ್ತಿರಬೇಡಿ. ಇಲ್ಲಿಗೇ ಬಿಡಿ." ಶಾಸ್ತ್ರಿ ಎಲ್ಲರನ್ನು ಸೇರಿಸಿ ನುಡಿದ.

"ಸ್ಟೇಷನ್ ಬಾವಿಯಿಂದ ಕುಡಿಯುವ ನೀರನ್ನು ತರಬೇಕು."

"ನಾನು ತರ್ತೀನಿ ನಾಲ್ಕು ಬಿಂದಿಗೆ ತಂದರೆ ಸಾಕು. ಬಚ್ಚಲು ಮನೆಗೆ. ಪಾತ್ರೆ ತೊಳೆಯೋಕೆ, ಕಂಠಿ ಮನೆಯಿಂದ ವೈಕುಂಠ ತಂದು ತುಂಬಿಸ್ತಾನೆ."

ಬಾವಿಯ ಬಗ್ಗಡವನ್ನೆಲ್ಲಾ ತೆಗೆದು, ಸುಣ್ಣದ ತಿಳಿಯನ್ನು ಹಾಕಿ ಶುಚಿ ಮಾಡುವಷ್ಟರಲ್ಲಿ ಸಂಜೆಯಾಗಿತ್ತು. ಬೆಳಗಾಗುವ ಹೊತ್ತಿಗೆ ಮಂಡಿ ತನಕ ನೀರು ಬಂದಿರುತ್ತೆ. ನಾಳೆಯಿಂದಲೇ ನೀರನ್ನು ಉಪಯೋಗಿಸಬಹುದು" ಹೂಳು ತೆಗೆದವನು ಹೇಳಿದ.

"ಈ ಆಮೆ ಇಲ್ಲೇ ಬಕೆಟ್‌ನಲ್ಲಿರಲಿ ನಾಳೆ ದಿನ ತೋಟದ ಬಾವಿಗೆ ಬಿಟ್ಟು ಬಿಡ್ತೀನಿ." ಶಾಂತಾ ತಂದೆಯ ಬಳಿ ಬಂದಳು.

"ಅಣ್ಣಾ ಬೇಡ ಅಣ್ಣ, ಈ ಆಮೆ, ನಮ್ಮ ಮನೆ ಬಾವೀಲೆ ಇರ್ಲಿ."

"ನೋಡಿದ್ರಲ್ಲಾ.... ಇರೋ ಮೀನು ಗೀನು ಒಂದನ್ನು ಬಿಡದೆ ತಿಂದು ಹಾಕಿದೆ ಈ ಬಕರಾಕ್ಷಸ."

"ಇಲ್ಲೇ ಇರಲಿ ಬಿಡು ಗುಂಡಣ್ಣ, ಮಕ್ಕಳು ಆಸೆ ಪಡುತ್ವೆ. ಇಷ್ಟು ದಿನ ಇಲ್ಲೇ ಇತ್ತಲ್ವಾ, ಅದಕ್ಕೆ ಆಹಾರ ಸಾಕಾಗ್ತಿರ್ಲಿಲ್ಲ, ಅಂತ ಕಾಣುತ್ತೇ..... ಎಲ್ಲಾದನ್ನು ತಿಂದಿದೆ. ಪಾಪ ಅದರ ತಪ್ಪೇನು ?"

"ಸಾತೂ, ನೀನೂ ಮಕ್ಕಳ ಥರ ಆಡ್ತೀಯಲ್ಲ. ಅದಕ್ಕೇ ಆಹಾರಾನ ಎಲ್ಲಿಂದ ಒದಗಿಸೋದು. ಇದೋ ಮಾಂಸಾಹಾರಿ ನೀನೇ ನೋಡಿದ್ಯಲ್ಲ."

"ಇನ್ನು ಮುಂದೆ ನಾವು ಇದನ್ನು ಶಾಕಾಹಾರಿಯಾಗಿ ಬೆಳೆಸೋಣ. ಕಾಳು

ವೇಳೆ, ತರಕಾರಿ ಸಿಪ್ಪೆ, ಬಾಳೆಹಣ್ಣು ಇತ್ಯಾದಿಗಳನ್ನು ಹಾಕೋಣ. ಎಷ್ಟು ದಿನ ಉಪವಾಸವಿರುತ್ತೆ? ತಿಂದೇ ತಿನ್ನುತ್ತೆ. ಶಾಸ್ತ್ರಿ ತುಟಿಯಂಚಿನಲ್ಲೇ ನಕ್ಕ. ಬಾವಿಯ ಕೆಲಸದವರು, ತಮ್ಮ ಕೂಲಿಯ ಹಣವನ್ನು ತೆಗೆದುಕೊಂಡು ಹೊರಟು ಹೋದರು. "ಒಂದು ಅಗಲವಾದ ಬಕೆಟ್‌ಗೆ ನೀರು ತುಂಬಿ, ಆಮೆಯನ್ನು ಅದರಲ್ಲಿಟ್ಟು ಒಂದು ಚೀಲವನ್ನು ಹೊದಿಸಿ ಬಿಡು" ಸಾತಕ್ಕ ವೈಕುಂಠನಿಗೆ ಹೇಳಿದಳು.

"ಈ ಸತ್ತ ಹಾವಿನ ಎಲಬನ್ನು ದೂರ ಎಲ್ಲಾದ್ರೂ ಪೊದೆಯೊಳಕ್ಕೆ ಎಸೆದು ಬಿಡು" ಶಾಸ್ತ್ರಿ ವೈಕುಂಠನಿಗೆ ಹೇಳಿದ ಎಲ್ಲರೂ ಮನೆಯ ಕಡೆಗೆ ನಡೆದರು.

ಬೆಳಿಗ್ಗೆ, ಬಕೆಟ್‌ನಲ್ಲಿ ಮಲಗಿರುವ ಆಮೆಯನ್ನು ನೋಡಲೆಂದು ಬಂದ ಲಲಿತಳಿಗೆ ಆಮೆ ಕಾಣಲಿಲ್ಲ. ಶಾಂತಳಿಗೆ ಹೇಳಿದಳು. ಶಾಂತ ಉದಾಸೀನವಾಗಿ ನುಡಿದಳು.

"ವೈಕುಂಠ ಎಲ್ಲೋ ಮುಚ್ಚಿಟ್ಟಿರಬೇಕು. ಅವನನ್ನ ಕೇಳೂ." ಲಲಿತ ವೈಕುಂಠನ್ನ ಕೇಳಿದಳು.

"ಆಮೇನ ಎಲ್ಲಿ ಮುಚ್ಚಿಟ್ಟಿದೀಯ ಹೇಳು. ನಾನು ಅಯ್ನೋರ್ಗೆ ಹೇಳ್ತೀನಿ ಅಷ್ಟೇ...."

"ಇಲ್ಲಿ ಲಲಿತಮ್ಮ ನಾನ್ಯಾಕೆ ಮುಚ್ಚಿಡ್ಲಿ. ಅಲ್ಲಿ ಬಕೆಟ್‌ನಲ್ಲಿ ಇಲ್ಲವ್ರಾ....? ಬನ್ನಿ ನೋಡೋವಾ ?" ಅವನೂ ಅವಳೊಂದಿಗೆ ಬಾವಿಯ ಬಳಿಗೆ ಬಂದ ಆಮೆ ಅಲ್ಲಿರಲಿಲ್ಲ.

"ಎಲ್ಹೋಯ್ತು ಈ ದರಿದ್ರದ್ದು.... ?" ಅತ್ತಿತ್ತ ನೋಡಿದ.

"ಅದನ್ನ ನೀ ಬಯ್ಯಬೇಡ.... ಸುಮ್ನೆ ಹುಡುಕು..... ಎಂದು ಹೇಳಿ ಅತ್ತಳು. ವೈಕುಂಠ ಸುತ್ತಮುತ್ತ ಹುಡುಕಿದ. ಬಾವಿಗೆ ಇಳಿದು ಹೋಗಿರಬಹುದೇ ಅಂತಂದು ಕೊಂಡ. ಅಷ್ಟರಲ್ಲಿ ಮನೆಯಲ್ಲಿ ಉಳಿದವರಿಗೂ ಆಮೆ ತಪ್ಪಿಸಿಕೊಂಡು ಹೋಗಿಧೆ ಅಂತ ತಿಳಿಯಿತು.

"ಮೇಲೊಂದು ಗೋಣಿಚೀಲನ್ನು ಭಾರವಾಗಿ ಹೊದಿಸು ಅಂತ ಹೇಳಿದ್ದೆ. ಹೊದಿಸಿರಲಿಲ್ಲ. ಅಂತ ಕಾಣುತ್ತೇ ಯಾವುದೋ ಪೊದೆ ಸಂದಿ ಅಡಗಿ ಕೊಂಡಿರ ಬಹುದು ನಿಧಾನವಾಗಿ ಹುಡುಕು."

"ಅವ್ವಾವ್ರು ತರಕಾರಿ ಸಪ್ಪೆ, ಕಾಳು ಬೇಳೆ ಆಕ್ತೀನಿ ಅಂತಂದ್ರು ಅದು ಮುನಿಸ್ಕಂಡು ಮನೆ ಬಿಟ್ಟು ಒಂಟೋಗ್ಯೆತೆ." ವೈಕುಂಠ ಸಾತಕ್ಕನ ಕಡೆ ನೋಡಿ ಹೇಳಿದ.

"ಹುಂ ಅದಕ್ಕೆ ಅತ್ತೆಯ ಮಾತು ಎಲ್ಲ ಅರ್ಥವಾಗಿರುತ್ತೇ? ಅದು ನಿನಗೆ ಬುದ್ಧಿ ಕಲಿಸಬೇಕು ಅಂತ, ಇಳಿದು ಎಲ್ಲೋ ಅವಿತುಕೊಂಡಿದೆ "ಸರಿಯಾಗಿ ಹುಡುಕು." ಶಾಂತ ಹೇಳಿದಳು

"ಇವತ್ತು ಈಗ ಹುಡುಕ್ತಾ ಕಾಲ ಕಳೀಬೇಡ. ಮೊದಲು ಕೊಟ್ಟಿಗೆಯ ಸೆಗಣಿ ತೆಗೆದು ಆಚೆ ಹಾಕು. ಹಾಲು ಕರೆಯಬೇಕು ಲಕ್ಷ್ಮಿ ಅವನಿಗೆ ಕೊಟ್ಟಿಗೆಯ ಕೆಲಸವನ್ನು ವಹಿಸಿದಳು. ಅವನು ಸೆಗಣಿಯ ತೊಪ್ಪೆಗಳನ್ನು ಎತ್ತಿ ಒಂದು ಕಡೆ ಹಾಕಿ ಕೊಟ್ಟಿಗೆಯನ್ನು ಗುಡಿಸುವ ವೇಳೆಗೆ ಪಟೇಲರ ಮನೆಯ ಆಳು ಸಿದ್ಧ ಬಂದ.

"ಬಾವಿ ಊಳು ತೆಗೆಯೋಕೆ ಬಂದಿದ್ರಲ್ಲ ಬೋವಿಗಳು. ಇದಾರೋ ಒಂಟೋದ್ರೋ..?" ಪಟೇಲ್ರು ಮನೆ ಬಾವ್ಯಾಗೆ ಕೊಡಪಾನ ಬಿದ್ಯೆತೆ. ತೆಗೀಬೇಕಂತೆ

"ನೆನ್ನೇನೇ ಕೆಲ್ಸ ಮುಗೀತು ಓದ್ರು .....ಈಗ ಏಳ್ತೀಯಲ್ಲ."

"ಕೆಲ್ಸ ಮುಗ್ಸಿ ಬತ್ತೀಯಾ ? ಇಲ್ಲೇ ಎಲ್ಲೋ ಬೋವಿಗಳ ಅಟ್ಟಿ ತಾವ ಮನಗಿರ್ತಾರೆ ವಿಚಾರಿಸೋವಾ....."

"ಇಲ್ಲ ಸಿದ್ಧ.... ಈ ಕೆಲ್ಸ ಮುಗ್ಸಿ ನಾನು ತ್ವಾಟಕ್ಕೇ ಬ್ಯಾರೆ ಓಗ್ಬೇಕು ಬಾವಿಗಿದ್ದ ಆಮೆ ತಪ್ಪಿಸ್ಕಂಡ್ಯೆತೆ. ಉಡುಕ್ಬೇಕು. ಮುಂಡ್ಹೆತ್ತದ್ದು ಎಲ್ಲಿ ಓಯ್ತೋ ಏನೋ?" ವೈಕುಂಠ ಆಮೆಯನ್ನು ಬೈದ.

"ಆಮೆ ಕಾಣ್ತಾ ಇಲ್ವಾ... ಬಾರಿಯಾಗಿ ಬೆಳೆದಿತ್ತು ಅಲ್ವಾ ? ಇನ್ನು ನಿಂಗೆ ಸಿಕ್ತು ಅದಾಯ್ತು..... ಬಿಡು ಅತ್ಲಾಗೆ." ಸಿದ್ಧ ನಕ್ಕ.

"ಶಾನೆ ದೂರ ಓಗಿರುಲ್ಲ ಇಲ್ಲೇ ಎಲ್ಲೋ ಅಡಕ್ಕೊಂಡಿರ್ತೈತೆ ನಾನು ಬಿಡಾಕಿಲ್ಲ, ಉಡುಕಿ ದಾರ ಕಟ್ಟಿ ಆಟ ಆಡಿಸ್ತಿನಿ."

"ಊ ಆಟ ಆಡಿಸ್ತೀಯ, ಆಟ್ತಾವ. ಅದು ಬದುಕಿದ್ರೆ ಅಲ್ವಾ ನೀನು ಆಟ ಆಡಿಸೋದು. ನೆನ್ನೇನೇ ಅದರ ಕತೆ ಮುಗಿದ್ಯೆತೆ ಅಂತ ಅಂದ್ಕೋ"

"ಏನೋ ಈಗಂತೀಯ.... ಅದೇ ಬಾವೀಲಿದ್ದ ಮೀನುಗಳನ್ನ ಬಾವಿಗೆ ಬಿದ್ದ ಅವನ್ನ, ಕಪ್ಪೆ ಇಲಿ ಎಲ್ಲಾವನ್ನು ತಿಂದ್ಯೆತೆ....."

"ಅದನ್ನ ತಿನ್ನೋರು ಇರ್ತಾರೆ ಕಣ್ಲಾ. ಬೋವಿಗಳು ಅಂಗೇ ಕಂಡಿದ್ದನ್ನ ಬಿಟ್ಬಿರ್ತಾರೆ ಅಂತ ಅಂದ್ಕೊಬೇಡ ಯಾವಾಗ್ಲೋ ತಗೊಂಡ್ಹೋಗಿ ಬೇಯಿಸ್ಕೊಂಡು ಅಬ್ಬ ಮಾಡಿರ್ತಾರೆ. ಆಮೆ ಮಾಂಸ ಬೋ ರುಚಿಯಂತೆ."

"ಇಂಗೆಲ್ಲಾ ಏಳಿ ಒಟ್ಟೇನ ಉರಿಸ್ಬೇಡ್ವೋ ಸಿದ್ಧಾ.... ಅಯ್ನೋರ್ಗೆ ಏನು ಏಳ್ಲಿ? ಮನೆ ಮಂದಿಗೆಲ್ಲಾ ಏನು ಏಳ್ಲಿ ನನ್ನನ್ನ ಬೈಯಾಕಿಲ್ವಾ ?" ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಗಂಟಲು ಉಬ್ಬಿಕೊಂಡಿತ್ತು.

"ಏನೂ ಏಳ್ಲೇ ಬೇಡ ಸುಮ್ನಿದ್ಬಿಡು. ಎಲ್ಲೋ ಓಯ್ತು ಅಂತ ಸುಮ್ಕಾಗ್ತಾರೆ... ನೀನೂ ಮಾಂಸ ತಿಂತೀಯ ನಿಂಗ್ಯಾಕೆ ದುಖ್ಖ.....?"

"ಈ ಮನೀಗೆ ಬಂದ್ಮೇಲೆ ಮಾಂಸ ತಿನ್ನೋದನ್ನ ಬಿಟ್ಟಿದೀನಿ ಏನಿದ್ರೂ ಇಟ್ಟು, ಅನ್ನ ಸಾರು ಈಗ ನನ್ನಿಂದ ತೆಪ್ಪಾತಲ್ಲೋ ಸಿದ್ಧ... ನಾನೇ ಈ ಬೋವಿಗಳನ್ನ

ಕರ್‍ಕೊಂಡು ಬಂದೋನು....."

"ಅಯ್ಯೋ ಯಾಕಿಂಗೆ ಅಳ್ತೀಯೋ....?" ಅಪ್ಪರಲ್ಲಿ ಪಾತ್ರೆಗಳನ್ನು ಹಿಡಿದು ಲಕ್ಷ್ಮಿ ಬಂದಳು.

"ಕೊಟ್ಟೆಗೇನೇ ಗುಡಿಸಾಯ್ತೇನೋ ವೈಕುಂಠ ಕರೂನ ಬಿಡು. ಹಾಲು ಕರೀಬೇಕು. ಯಾರಿವನು ? ಇಷ್ಟೊತ್ತಿಗೇ ಹರಟ್ತಾ ನಿಂತಿದೀರಾ ?"

"ನಾನು ಸಿದ್ಧ....." ಪಟೇಲ್ರ ಮನೆ ಆಳು

"ಅವ್ವಾವ್ರೇ, ನಾ ತೆಪ್ಪು ಮಾಡ್ಬಿಟ್ಟೆ... ಅಲ್ಕಾ ನನ್ಮಕ್ಳು ಮೋಸ ಮಾಡ್ಬಿಟ್ರು." ವೈಕುಂಠ ಅಳುತ್ತಾ ನುಡಿದಾಗ ಲಕ್ಷ್ಮಿ ಬೈದಳು.

"ಅಳೋ ಅಂಥಾದ್ದು ಏನಾಯ್ತು ? ಯಾರು ಮೋಸ ಮಾಡಿದ್ರು ? ಸರಿಯಾಗಿ ಹೇಳು," ವೈಕುಂಠ ಕಣ್ಣೊರೆಸಿಕೊಂಡು ತನ್ನ ಸಿದ್ಧನ ಮಾತುಗಳನ್ನ ಹೇಳಿದ.

"ಅವ್ವಾವ್ರೇ ನಾನೀಗ ಏನು ಮಾಡ್ಲಿ ? ಸಾಂತವ್ವಂಗೆ, ಲಲಿತವ್ವಂಗೆ ಏನು ಏಳಾದು ? ಅವ್ರಿಗೆ ದುಖ್ಖ ಆಗಾಕಿಲ್ವಾ !"

"ಯಾರ್‍ಗೂ ಏನೂ ಹೇಳೊದೇ ಬೇಡ ; ಕಳೆದು ಹೋದದ್ದು ಸಿಗಲಿಲ್ಲ ಅಂತ ಅಂದ್ಕೊಂಡು ಸುಮ್ಮನಾಗ್ತಾರೆ. ನಾಲ್ಕು ದಿನ ಕಳೆದ್ಮೇಲೆ ಮರೀತಾರೆ" ಅವಳು ಹಾಗೆ ಹೇಳಿದರೂ ಅವಳಿಗೆ ಸಹ ವ್ಯಥೆಯಾಗಿತ್ತು. ಮನಸ್ಸು ತಡೆಯದೇ ಸಾತಕ್ಕನಿಗೆ ಎಲ್ಲವನ್ನು ತಿಳಿಸಿದಳು.

"ಎಂತೆಂಥಾ ಕಳ್ಳರು ಇರ್ತಾರೆ, ನೋಡಿದ್ರಾ ಅತ್ತಿಗೇ ಯಾರನ್ನು ನಂಬೋಕೆ ಆಗುಲ್ಲ ಈ ಕಾಲ್ದಲ್ಲಿ."

"ಅವರ ಕೆಟ್ಟ ದೃಷ್ಟಿ, ಇದರ ಮೆಲೆ ಬಿತ್ತು ಇದರ ಗತಿ ಮುಗೀತು. ಮಕ್ಕಳಿಗೆ ಗೊತ್ತಾಗೋದೇ ಬೇಡ. ಸುಮ್ಮನೇ ಅಳುತ್ವೆ."

"ನಾನೂ ಹಾಗೇ ಹೇಳ್ದೆ ಒಕ್ಕಲಿಗರೋನಾಗಿ, ಅವನು ಹೇಗೆ ಅತ್ತ ಗೊತ್ತಾ? ನಾನೇ ಸಮಾಧಾನ ಹೇಳ್ಬೇಕಾಯ್ತು."

"ಅದೂ ನಮ್ಮ ಜೊತೆ ಇದ್ದು ನಮ್ಮ ಹಾಗೇ ಆಗಿದೆ, ಪಾಪ...." ಸಾತಕ್ಕ ಲೊಚಗುಟ್ಟಿದಳು

* * *

"ಈಗ ಬರ್ಲಿಲ್ಲ ಅಂತ ಆಕ್ಷೇಪಣೆ ಮಾಡ್ತಾನೆ ಇರ್ತಾನೆ ಎರಡು ದಿನ ಹೋಗಿದ್ದು ಬರ್ತೀನಿ ಮಕ್ಕಳನ್ನು ಕರ್‍ಕೊಂಡು ಹೋಗ್ತೀನಿ ವಾಪಸ್ಸು ಬೇಗ ಬಂದು ಬಿಡಬಹುದು." ಸಾತಕ್ಕ ಉಪಾಯ ಮಾಡಿದಳು.

"ಅವರ್‍ಮನೆ ಮಕ್ಕಳು ಒಂದಿನ ಬರೋದಿಲ್ಲ, ಕೇಳಿದ್ರೆ ಹಳ್ಳೀಲಿ ಏನಿದೆ ಅಂತ ಬರ್ಬೇಕು, ಅಂತ ನಿಮ್ಮ ನಾದಿನಿ ಅಂತಾಳೆ." ಲಕ್ಷ್ಮಿ ಆಕ್ಷೇಪಿಸಿದಳು.

"ಹೌದು ತಾನೇ? ಹಳ್ಳೀಲಿ ಕಾಲ ಕಳೆಯೋದು, ನಮ್ಮ ಮನೆಯ ಮಕ್ಕಳಿಗೇ ಬೇಜಾರು. ಪೇಟೇಲಿರೋರು ಅವರಿಗೆ ಬೇಜಾರಾಗೋದು ಸಹಜ. ನಿನು ಹೇಳೋದು ನಿಜ. ಬರ್ದೇ ಇದ್ರೆ ಬೇಡ ಬಿಡು...."

"ಈಗ ಅವರ ಸ್ಥಿತಿ ಗತೀನೂ ಅಷ್ಟಕಷ್ಟೆ.... ಮಕ್ಕಳನ್ನೆಲ್ಲಾ ಕರ್ಕೊಂಡು ಬಂದ್ರು ಅಂತ ಬೇಸರ ಪಟ್ಕೊಂಡ್ರೆ.?" ಸಂದೇಹವನ್ನೂ ವ್ಯಕ್ತಪಡಿಸಿದಳು.

"ಒಂದಿಷ್ಟು ಬೆಣ್ಣೆತುಪ್ಪ, ನಾಲ್ಕು ಬಗೆ ತರಕಾರಿ, ಹಣ್ಣುಗಳನ್ನೆಲ್ಲ ತಗೊಂಡು ಹೋಗ್ತೀನಿ. ಆ ಮಕ್ಕಳೂ ಎರಡು ದಿನ ಚೆನ್ನಾಗಿ ತಿನ್ನಲಿ ಶೀನಂಗೂ ಅವನ ಹೆಂಡ್ತಿಗೂ ಸಮಾಧಾನವಾಗುತ್ತೆ.."

"ಏನು ಸಮಾಧಾನವೋ, ಇವರಂತೂ ಶೀನ ಮಕ್ಕಳೊಂದಿಗೆ ಅಂತ ಆಗ ಈಗ ತರಕಾರಿ, ಹಣ್ಣುಗಳನ್ನು ತಗೊಂಡ್ಹೋಗಿ ಕೊಡ್ತಾನೇ ಇರ್ತಾರಲ್ಲ........ ಆದರೂ ಅವರುಗಳಿಗೆ ನಮ್ಮ ಬಗ್ಗೆ ಏನೋ ತಾತ್ಸಾರ." ಏನೇ ಹೇಳಿ ಒಂಥರಾ ಜಂಬ.

"ಈಗ್ಯಾಕೆ ಅಂದ್ಕೋತೀಯ ! ನಿನಗೆ ಇಷ್ಟವಿಲ್ಲದಿದ್ರೆ ನಾನು ಹೋಗುಲ್ಲ."

"ಹಾಗಲ್ಲ ಅತ್ಗೆ ಅವರಿಗೆ ನೀವು ಅಕ್ಕ. ಅಕ್ಕ ತಮ್ಮನ ಮಧ್ಯೆ ನಾನ್ಯಾಕೆ ಬರ್ಲಿ? ದೂರಾಳವಾಗಿ ಹೋಗ್ಬನ್ನಿ, ಬೇಗ ಬಂದ್ಬಿಡಿ ಅಷ್ಟೇ...."

"ಅದಕ್ಕೇ ಹೇಳಿದ್ದು, ಮಕ್ಕಳು ಜೊತೆಗಿದ್ರೆ ಬೇಗಬಂದು ಬಿಡಬಹುದು ನಂಗೂ ಅಷ್ಟೆ. ಇಲ್ಲಿಯಷ್ಟು ನಿಸೂರು ಎಲ್ಲಿಯೂ ಇಲ್ಲ. ಸೀತಾರಾಮ ಅವನೊಂದು ಥರಾ ಶಿಸ್ತುಗಾರ ಹೆಂಡ್ತಿ ಮಕ್ಳು ಅವನಿಗೆ ಹೆದರಿ ನಡುಗ್ತಾರೆ. ಅದನ್ನೆಲ್ಲಾ ನಂಗೆ ನೋಡೋಕೇ ಕಷ್ಟವಾಗುತ್ತೆ. ನಂಗೆ ಗುಂಡಣ್ಣಂಗೆ ಅಂತರ ಕಡಿಮೆ ಒಟ್ಟಿಗೇ ಬೆಳೆದೋರು. ನನಗೆ ಇವನೇ ಇಷ್ಟ." ಅಭಿಮಾನದಿಂದ ನುಡಿದಳು.

"ಯವಾಗ್ಲೂ ನೀವು ನಮ್ಮ ಜೊತೇಲೇ ಇರಿ. ಯಾರ ಮನೆಗೂ ಹೋಗ್ಲೇ ಬೇಡಿ ನಂಗೂ ನೀವಿಲ್ದೇ ಇರೋಕೇ ಅಗುಲ್ಲ. ಪಾರ್ವತಿ ಏನಂತಾಳೆ ಗೊತ್ತಾ? ಸಾತಕ್ಕನಿಗೆ ನಾನು ಒಡಹುಟ್ಟಿದ ತಂಗಿ ಅದ್ರೂ ಅವಳಿಗೆ ನಂಗಿಂತ ನಿಮ್ಮನ್ನ ಕಂಡರೇ ಇಷ್ಟ ಅಂತ ಹೇಳ್ತಾಳೆ. "

"ನಾವಿಬ್ಬರೂ ಯಾವ ಜನ್ಮದಲ್ಲಿ ಅಕ್ಕತಂಗಿಯರಾಗಿದ್ದೆವೋ ಈ ಜನ್ಮದಲ್ಲಿ ಅತ್ತಿಗೆ ನದಿನಿಯರಾಗಿದ್ದೇವೆ. ನಮ್ಮಿಬ್ಬರ ಸಂಬಂಧ ಅಕ್ಕ ತಂಗಿಯರಂತೆಯೇ ಇರಲಿ ಕಂಠಿ ಅಂತೋನು ಒಬ್ಬ ಇದ್ರೆ ಸಂಬಂಧಗಳು ಕೆಡುತ್ತವೆ ಅಷ್ಟೆ."

"ಕಂಠಿ ಭಾವನ್ನ ಕಂಡ್ರೆ ನಿಮಗೆ ಅಷ್ಟಕಷ್ಟೇ ಯಾಕೋ ಕಾಣೆ."

"ಅವನ ಮನಸ್ಸು ಶುದ್ಧ ಇಲ್ಲ ಲಕ್ಷ್ಮಿ. ಕೊಳಕು ಮನುಷ್ಯ ಪಾರ್ವತೀನ ಮದುವೆ ಆದಾಗ್ನಿಂದ ಕಂಡೀದಿನಿ ನಂಗೆ ಅವನ ವರ್ತನೆ ಸರಿ ಹೋಗುಲ್ಲ."

"ನಂಗೂ ಹಾಗೇ ಅನ್ನಿಸುತ್ತೆ. ಒಂಥರಾ ಕೆಟ್ಟ ಚಪಲದ ಸ್ವಭಾವ." ಮಕ್ಕಳು

ಒಳ ಬಂದುದರಿಂದ ಮಾತಿನ ಧಾಟಿ ಬದಲಾಯಿತು.

"ಒಂದಿಷ್ಟು ಚಕ್ಕುಲಿ ಹಿಟ್ಟು ಇತ್ತು ಅಲ್ವಾ ? ಶೀನಂಗೆ ಚಕ್ಕುಲಿ ಅಂತಂದ್ರೆ ಭಾಳ ಎಷ್ಟ. ಅವನ ಹೆಂಡ್ತಿ ಮಾಡಿಕೊಡ್ತಾಳೋ ಇಲ್ವೋ?"

"ಅದಕ್ಕೇನಂತೆ ? ಮಾಡಿದ್ರಾಯ್ತು. ಚಕ್ಕುಲಿಯ ಜೊತೆಗೆ, ಕೊಬ್ಬರಿ ಮಿಠಾಯಿ, ಕೋಡುಬಳೆನೂ ಮಾಡೋಣ ಮಡೀಲಿ ಮಾಡಿದ್ರೆ ನೀವೂ ತಿನ್ನಬಹುದು. ನಾಳೆ ಬೆಳಿಗ್ಗೆ ಮಾಡೋಣ."

"ಈಗೇನಾದ್ರೂ ತಿಂಡಿ ಇದ್ದರೆ ಕೊಡಮ್ಮಾ......" ರಾಗಿಣಿ ಕೇಳಿದಳು

"ಆ ಡಬ್ಬದಲ್ಲಿ ಒಂದಿಷ್ಟು ಅವಲಕ್ಕಿ ಪುರಿಗೆ ಖಾರ ಹಾಕಿದ್ದು ಮಿಕ್ಕಿದೆ. ಒಂದಿಷ್ಟು ಕಾಗದಾನ ಹರಿದ್ಕೊಂಡು ಬಾ. ಎಲ್ರಿಗೂ ಹಾಕಿ ಕೊಡ್ತಿನಿ" ರಾಗಿಣಿ ಯಾವುದೋ ಹಳೇ ದಿನಪತ್ರಿಕೆಯನ್ನು ತಂದಳು. ಅದನ್ನು ಸಮನಾಗಿ ಹರಿದು, ಅದಕ್ಕೇ ಪುರಿಯನ್ನು ಹಾಕಿಕೊಟ್ಟಳು.

"ವೈಕುಂಠಂಗೆ ?" ಪದ್ಮಿನಿ ಕೇಳಿದಳು

"ಒಳ್ಳೇ ವೈಕುಂಠ! ಮನೆ ಮಗನಿಗಿಂತ ಹೆಚ್ಚಾಗಿ ಬಿಟ್ಟಿದಾನೆ. ತಗೋ ಅವನಿಗೂ ಕೊಡು ಎನ್ನುತ್ತಾ ಇನ್ನೊಂದು ಕಾಗದದ ಚೂರಿನ ಮೇಲೆ ಹಾಕಿಕೊಟ್ಟಳು." ಪದ್ಮಿನಿ, ರಾಗಿಣಿ ಇಬ್ಬರೂ ವೈಕುಂಠನನ್ನು ಕರೆಯಲು ಓಡಿದಳು.

"ನೋಡಿದ್ರಾ ಅತ್ತಿಗೇ... ವೈಕುಂಠನ್ನ ಎಷ್ಟು ಹಚ್ಕೊಂಡು ಬಿಟ್ಟಿದಾರೆ. ಅತಿಯಾಯ್ತು ಈ ಮಕ್ಕಳದ್ದು."

"ಮಕ್ಕಳಲ್ಲಿ ತಿಳುವಳಿಕೆ ಕಡಿಮೆ, ಬೆಳೆದ್ಮೇಲೆ ತಾವೇ ತಿಳ್ಕೋತಾರೆ. ಎರಡು ದಿನಕ್ಕಾಗುವಷ್ಟು ಮಕ್ಕಳ ಬಟ್ಟೆಗಳನ್ನು ಜೋಡಿಸಿ ತೆಗೆದಿಡು."

"ಎಷ್ಟೊಂದು ಸಾಮಾನಾಗುತ್ತಲ್ಲ. ಅತ್ಗೇ ವೈಕುಂಠನ್ನು ನಿಮ್ಮ ಜೊತೆ ಕರ್‍ಕೊಂಡು ಹೋಗಿ ನಿಮ್ಮನ್ನೆಲ್ಲಾ ಬಿಟ್ಟು ಬರ್ತಾನೆ."

"ನೋಡಿದ್ಯಾ ವೈಕುಂಠ ಎಷ್ಟರ ಮಟ್ಟಿಗೆ ಮನೆಯವನಾಗಿ ಬಿಟ್ಟಿದಾನೆ. ಅವನ ಅಗತ್ಯ ಎಷ್ಟಿದೆ ಅಂತ. ಜಾತಿ ಯಾವುದಾದ್ರೇನು ? ನಮಗೆಲ್ಲಾ ಬೇಕಾದವನಾಗಿ ಬಿಟ್ಟಿದಾನೆ ಮುಂಡೆದು ತುಂಬಾ ಒಳ್ಳೆದು" ಲಕ್ಷ್ಮಿಯೂ ತನ್ನ ತಲೆಯಾಡಿಸಿದಳು

* * *

ಸಾತಕ್ಕ ಶೀನನ ಮನೆಗೆ ಹೊರಡಲು ಸಿದ್ಧಳಾದಳು. ಮಕ್ಕಳೆಲ್ಲರೂ ಸಂಭ್ರಮದಿಂದ ಕೈ ಚೀಲಗಳನ್ನು ಎತ್ತಿಟ್ಟುಕೊಂಡು ನಿಂತರು.

"ಎಲ್ಲವನ್ನು ವೈಕುಂಠ ತಗೊಂಡು ಬರ್ತಾನೆ. ಕೆಳಗಿಡಿ ವೈಕುಂಠ ಹುಶಾರು ಕಣೋ. ಚೀಲಗಳು ಜ್ವಾಪಾನ. ರೈಲಿನಿಂದ ಎಲ್ರನ್ನು ಸರಿಯಾಗಿ ಇಳಿಸಿ, ಬಂದು ಜಟಕಾಗಾಡೀನ ಗೊತ್ತು ಮಾಡಿ ಕರ್‍ಕೊಂಡು ಹೋಗು...." ಎಂದು ಶಾಸ್ತ್ರಿ ನುಡಿದು

ಸಾತಕ್ಕನ ಕೈಗೆ ಒಂದಿಷ್ಟು ಹಣವನ್ನು ಕೊಟ್ಟ.

"ಜ್ವಾಪಾನ ಕಣೇ ಸಾತು ರೈಲಿನಲ್ಲಿ ಮಕ್ಕಳು ತಂಟೆ ಮಾಡಿದ್ರೆ ಎರಡು ಬಿಗಿ. ಕಿಟಕಿಯಿಂದಾಚೆ ತಲೆ ಹಾಕುಕ್ಕೆ ಬಿಡ್ಬೇಡ. ಶಾಂತಾ..... ನೀನು ಎಲ್ಲರನ್ನು ನೋಡ್ಕೋ, ಅತ್ತೇನ ಗೋಳು ಹೊಯ್ದು ಕೊಳ್ಳಬೇಡಿ."

"ಹುಂ ಕಣಮ್ಮಾ ಅದೆಷ್ಟು ಸಲ ಹೇಳ್ತೀಯ ನಮಗೆಲ್ಲಾ ಗೊತ್ತು"

"ಎಲ್ರೂ ದೇವರಿಗೆ ನಮಸ್ಕಾರ ಮಾಡಿ ಹೊರಡಿ ನಾನು ನಿಮ್ಮೆಲ್ಲರನ್ನು ರೈಲಿನಲ್ಲಿ ಕೂರಿಸಿ ಬರ್ತೀನಿ." ಶಾಸ್ತ್ರಿಯೂ ಅವರುಗಳೊಂದಿಗೆ ಹೊರಟ. ವೆಂಕಟೇಶ ತಾನೂ ಅವರುಗಳೊಂದಿಗೆ ಹೋಗಬೇಕೆಂದು ಹಠಮಾಡಿ ಅಳತೊಡಗಿದ. ಅವನನ್ನು ಸಮಾಧಾನಗೊಳಿಸುವುದೇ ಸಾಕಾಯಿತು ಲಕ್ಷ್ಮಿಗೆ.

ರೈಲಿನ ಬೋಗಿಯಲ್ಲಿ ಸರಿಯಾದ ಜಾಗ ನೊಡಿ, ಎಲ್ಲರನ್ನು ಹತ್ತಿಸಿದ. ರೈಲು ಹೊರಟ ನಂತರ ಗದ್ದೆಯ ಕಡೆ ಹೊರಟ. ವೆಂಕಟೇಶ ಬೀದಿಗೆಲ್ಲಾ ಕೇಳುವಷ್ಟು ರಮಿಸುತ್ತಿದ್ದಳು ಪಾರ್ವತಿ ತನ್ನ ಕೈ ಕೂಸನ್ನು ಎತ್ತಿಕೊಂಡು ಇವರ ಮನೆಗೆ ಬಂದಳು ಅವಳ ಹಿಂದೆ ದತ್ತನೂ ಬಂದ.

"ಸಾವಿತ್ರಿ ಮಕ್ಕಳ್ನೆಲ್ಲಾ ಕರ್ಕೊಂಡು ಎಲ್ಲಿಗೆ ಹೋದ್ಲು ? ನಂಗೆ ಒಂದ್ಮಾತು ಹೇಳ್ಲೇ ಇಲ್ಲ." ಪಾರ್ವತಿ ಆಕ್ಷೇಪಣೆ ಮಾಡಿದಳು. ಇಬ್ಬರು ಒಳಕ್ಕೆ ಬಂದರು.

"ಶ್ರೀನಿವಾಸನ ಮನೆಗೆ, ಎರಡ್ದಿನ ಇದ್ದು ಬರ್ತೀನಿ ಅಂತ ಹೊರಟಿದಾರೆ. ಅವರೇ ಮಕ್ಕಳನ್ನು ಎಬ್ಬಿಸಿದರು."

"ಮುಂಚೇನೇ ಗೊತ್ತಾಗಿದ್ದಿದ್ರೆ ನಮ್ಮನೆಯ ಎರಡು ಮಕ್ಕಳನ್ನು ಕಳಿಸ್ತಿದ್ದೆ, ನೀವುಗಳು ಏನನ್ನು ಹೇಳುಲ್ಲ. ಬಹಳ ಗುಟ್ಟು ಮಾಡ್ತೀರಿ." ಹಂಗಿಸಿದಳು.

"ಗುಟ್ಟೇನು ಬಂತು ಪಾರ್ವತಿ ? ಚಿಕ್ಕಪ್ಪನ ಮನೆ ಅಂತ ಎಂದೂ ನಮ್ಮ ಮಕ್ಕಳು ಹೋಗಿಲ್ಲ. ಎಲ್ರೂ ನಾಳೆ ಸಾಯಂಕಾಲಕ್ಕೆ ಬಂದು ಬಿಡ್ತಾರೆ ಇನ್ನೊಂದ್ಸಲ ಹೊರಟಾಗ, ಖಂಡಿತಾ ನಿಮಗೆ ಹೇಳ್ತೀವಿ"

"ಸಾವಿತ್ರಿಗೆ, ನಿಮ್ಮ ಮಕ್ಕಳನ್ನು ಕಂಡ್ರೆ ಅತಿಶಯ. ನನ್ನ ಮಕ್ಕಳನ್ನು ಎಂದಾದ್ರೂ ಎತ್ತಿ ಆಡಿಸಿದ್ದಾಳಾ ? ಮುದ್ದಾಡಿದಾಳಾ ?"

"ಅವರ ಮಡಿ ನಿಮಗೆ ಗೊತ್ತಿಲ್ವಾ ಪಾರ್ವತಿ? ನಮ್ಮ ಮಕ್ಕಳನ್ನು ಮಡೀಲಿರು ವಾಗ ಮುಟ್ಟಿಸ್ಕೊಳ್ಳಲ್ಲ. ನಿಮ್ಮ ಮಕ್ಕಳನ್ನು ನಮ್ಮ ಮನೆಗೆ ಕಳಿಸಿ ಇಲ್ಲೇ ಆಟ ಆಡಿಕೊಳ್ಳಲಿ...."

"ನಿನ್ನ ಭಾವಂಗೆ ಅದೆಲ್ಲಾ ಸರಿ ಹೋಗುಲ್ಲ. ಇಲ್ದಿದ್ರೆ ಕಳಿಸ್ದೇ ಇರ್ತಿದ್ನಾ...? ಅವರು ಏನೂಂತ ನನಗೆ ಇರುವರೆಗೂ ಅರ್ಥವಾಗಿಲ್ಲ. ಒಂದೊಂದಸಲವಂತೂ ವಿಪರೀತ ಬೇಜಾರಾಗುತ್ತೆ. ಮೊನ್ನೆ ಏನಾಯ್ತು ಗೊತ್ತಾ ? ಅವರಿಗೆ ಇಷ್ಟ ಅಂತ

ಹೀರೇಕಾಯಿ ಹುಳಿ ತೊವ್ವೆ ಮಾಡಿ ರಾಗಿಮುದ್ದೆ ತೊಳಸಿದ್ದೆ. ಊಟಕ್ಕೆ ಕೂತೋರು, ರಂಪ ಮಾಡಿ ಬಾಯಿಗೆ ಬಂದ ಹಾಗೆ ಬೈದು ಬಿಟ್ರು ನಂಗೆ ಹೇಳ್ದೆ, ನನ್ನನ್ನ ಕೇಳ್ದೆ ಇದನ್ನು ಯಾಕೆ ಮಾಡ್ದೆ ! ಹೀರೇಕಾಯಿ ಬೋಂಡ, ಬದನೆಕಾಯಿ ವಾಂಗಿಬಾತ್ ಮಾಡ್ಬೇಕಾಗಿತ್ತು ಅಂತ ಹೇಳಿ ಊಟಕ್ಕೆ ಕೂತೋರು ಎದ್ದು ಬಿಟ್ರು ಮಧ್ಯಾಹ್ನ ಅವರಿಗೂ ಊಟವಿಲ್ಲ. ನಂಗೂ ಊಟವಿಲ್ಲ. ರಾತ್ರಿಗೆ ಬದನೇಕಾಯಿಯ ವಾಂಗೀ ಬಾತ್ ಮಾಡ್ದೆ. ಅರ್ಧಕರ್ಧ ಹುಳಿ ತೊವ್ವೆ ದಂಡ ಆಯ್ತು. ನಿಮ್ಮ ಮನೆಗೆ ಕಳಿ ಸೋಣ ಅಂತಂದ್ರೆ, ನೀವುಗಳು ಏನಂದುಕೊಳ್ತೀರೋ ಅಂತ ಕಳಿಸಲಿಲ್ಲ. ಸಾವಿತ್ರಿ ತಿನ್ನಲ್ಲ...."

"ಕಳಿಸಬೇಕಾಗಿತ್ತು ಪಾರ್ವತಿ ನಿಮ್ಮಣ್ಣಂಗೆ ಹುಳಿತೊವ್ವೆ ಅಂತಂದ್ರೆ ಪ್ರಾಣ. ನಾನೂ ಹಾಕ್ಕೊಂಡಿರ್ತಿದ್ದೆ."

"ಗೊತ್ತಾಗ್ಲಿಲ್ಲ ಲಕ್ಷ್ಮಿ... ಏನೋ ಮಂಕುತನ ಕವಿದ ಹಾಗಾಯ್ತು. ದಿನಾ ಒಂದಲ್ಲ ಒಂದು ವಿಷಯಕ್ಕೆ ಅನ್ನಿಸ್ಕೊಂಡು ಜಿಗುಪ್ಸೆ ಬಂದು ಬಿಟ್ಟಿದೆ. ಬಾವಿಗೆ ಹಾರಿಕೊಂಡು ಬಿಡೋಣ ಅಂತ ಅನ್ನಿಸುತ್ತೆ." ಪಾರ್ವತಿ ಅತ್ತಳು.

"ಛೀ.... ಹಾಗೆಲ್ಲಾ ಮಾತಾಡ್ಬೇಡ..... ಮಕ್ಕಳ ಗತಿ ?"

"ಮಕ್ಕಳಿಗೋಸ್ಕರ ಎಲ್ಲವನ್ನು ಸಹಿಸ್ಕೊಂಡಿದೀನಿ. ಇವನೊಬ್ಬ ಈ ದತ್ತ ಏನೂ ಕರ್ಮ ಮಾಡಿ ಹುಟ್ಟಿದಾನೋ, ಪಾಪಿ.... ಇವನನ್ನು ಕಂಡ್ರೆ ಉರಿದು ಬೀಳ್ತಾರೆ. ಹೊಟ್ಟೆ ಉರಿದು ಹೋಗುತ್ತೆ ಲಕ್ಷ್ಮಿ...." ಪಾರ್ವತಿ ಕಣ್ಣುಗಳನ್ನು ಒರೆಸಿಕೊಂಡಳು

"ಸಮಾಧಾನ ಮಾಡ್ಕೊಳ್ಳಿ ಪಾರ್ವತಿ ಕಾಫೀನ ಬಿಸಿ ಮಾಡಿ ಕೊಡ್ತೀನಿ ಅದೇನು ಇಷ್ಟು ಪುರಸೊತ್ತಾಗಿ ಬೆಳಿಗ್ಗೇನೆ ಬಂದು ಬಿಟ್ಟಿದೀರಿ ಭಾವ ಮನೇಲಿಲ್ವಾ?"

"ಇಲ್ಲ.... ಮೊನ್ನೇನೇ ತಿಪಟೂರಿಗೆ ಹೋಗಿದಾರೆ ಬೀಗರ ಮನೆಗೆ ಹೋಗಿ ಬರ್ತಾರೆ."

"ಓ... ಏನು ವಿಶೇಷ ಎಲ್ರೂ ಹುಶಾರಾಗಿದಾರೆ ತಾನೇ ?"

"ಹೂಂ ವಿಶೇಷಾನೇ... ಮೀನಾಕ್ಷಿಗೆ ಮೂರು ತಿಂಗಳಾಗಿದೆಯಂತೆ ಬೀಗರು ಕಾಗದ ಬರೆದಿದ್ದರು."

"ಓ.... ಗಂಡನ ಮನೆಗೆ ಹೋಗ್ತಿದ್ದ ಹಾಗೇ....." ಲಕ್ಷ್ಮಿ ನಕ್ಕಳು, "ಅವಳನ್ನು ಕರ್ಕೊಂಡು ಬರ್ತಾರೇನು ?"

"ಇಲ್ಲ ಲಕ್ಷ್ಮಿ ನನ್ನ ಕೈಲಿ ಆಗುಲ್ಲ. ನಿನ್ಹತ್ರ ಹೇಳುಕ್ಕೆ ನಾಚಿಕೆ ಆಗುತ್ತೆ. ನನಗೆ ಮತ್ತೆ ಮೂರು ತಿಂಗಳು ತುಂಬಿದೆ. ಬಯಕೆ ಸಂಕಟ ಸುಸ್ತು." ನಾಚಿದ್ದಳು.

"ಹೌದೇನು ? ಗೊತ್ತೇ ಆಗ್ಲಿಲ್ಲ. ಈ ಮಗೂಗೆ ಇನ್ನು ವರ್ಷ ಅಲ್ವಾ ?"

"ಹೌದು ವರ್ಷ ತುಂಬಿ ಎರಡು ತಿಂಗಳಾಯ್ತು....."

"ಈ ಸಾರಿ ನಿಮಗೆ ಹೆಣ್ಣು ಮಗುವಾಲಿ, ಮೀನಾಕ್ಷಿ ನಂತರ ಎಲ್ಲವೂ ಗಂಡು

ಮಕ್ಕಳೇ...."

"ಗಂಡೋ ಹೆಣ್ಣೋ... ಯಾವುದೋ ಒಂದು ಮಕ್ಕಳು ಸಾಕು ಅಂತ ಅನ್ನಿಸುತ್ತೆ ಆದರೆ ನನ್ನ ಕೈಲಿ ಏನಿದೆ? ಸಾವಿತ್ರಿಗೆ ಇದನ್ನೆಲ್ಲ ಹೇಳ್ಬೇಡ. ಅವಳಿಗೆ ಇದೆಲ್ಲ ಇಷ್ಟವಾಗುಲ್ಲ. ಅರ್ಥವೂ ಆಗುಲ್ಲ" ಸಂಕೋಚದಿಂದ ಹೇಳಿದಳು.

"ಆದರೆ.... ಮುಚ್ಚಿಡೋದು ಹೇಗೆ ! ಬಸಿರು ಮುಂದಕ್ಕೆ ಬೆಳೆಯುತ್ತೇ ಹೊರತು ಬೆನ್ನಿಗೆ ಅಂಟಿಕೊಳ್ಳುತ್ತೇ? ಹೋಗಲಿ ಸ್ವಲ್ಪ ನಿಮ್ಮ ಆರೋಗ್ಯದ ಕಡೆ ಗಮನ ಕೊಡಿ. ಹಾಲು ತುಪ್ಪ ಚೆನ್ನಾಗಿ ತಿನ್ನಿ. ಊಟ ತಿಂಡೀನ ಸರಿಯಾಗಿ ಮಾಡಿ ಉಪವಾಸ ಮಾಡ್ಬೇಡಿ."

"ಪರಂಗಿಕಾಯಿ, ಹಣ್ಣು ಎಲ್ಲಾ ತಿಂದೆ ಆದರೆ ಪಿಂಡ ಅಲ್ಲಾಡ್ಲಿಲ್ಲ. ಹೊನ್ನಿತಿ ಎಂಥದೋ ಔಷ್ಧಿ ಕೊಡ್ತಾಳಂತೆ ಹೇಳೀ ಕಳಿಸ್ದೆ. ಅವಳು ಊರಲ್ಲಿಲ್ಲವಂತೆ ಮಗಳ ಜೊತೆಗೆ ತಾಯೀನೂ ಬಸಿರಿ ಅಂತ ಬೀಗರಿಗೆ ತಿಳಿದ್ರೆ ಅವರುಗಳು ನಗೋಲ್ವಾ... ಮೊದಲೇ ಪಟ್ಟಣದೋರು."

"ಭಾವ ಎಷ್ಟೇ ಕೆಟ್ಟೋರಾದ್ರೂ ಈ ವಿಷಯದಲ್ಲಿ, ನಿಮ್ಮ ಮೇಲೆ ಭಾಳ ಪ್ರೀತಿ, ನಿಮ್ಮನ್ನು ಬಿಟ್ಟು ಒಂದು ಕ್ಷಣ ಇರುಲ್ಲ." ಲಕ್ಷ್ಮಿ ನಕ್ಕಳು.

"ಯಾವುದೇ ಪ್ರೀತಿ ಹೆಚ್ಚಾದ್ರೂ ಅಸಹ್ಯ ಆಗುತ್ತೆ ಲಕ್ಷ್ಮಿ ನನ್ಹತ್ರ ಜಗಳ ಆಡಿ, ಬೈದೂ ಹೊಡೆದು ಹೀನಾಯವಾಗಿ ಕಾಣ್ತಾರೆ. ಆದರೆ ನಾನು ಬೇಕೇ ಬೇಕು. ಇದು ನನ್ನ ಗಂಡನ ಪ್ರೀತಿ ....." ಪಾರ್ವತಿ ವ್ಯಥೆಯಿಂದ ನುಡಿದಳು.

"ಇವತ್ತು ಇಲ್ಲೇ ಊಟ ಮಾಡೋರಂತೆ ನಿಮ್ಮಣ್ಣ ತೋಟದಿಂದ ಬರುವಷ್ಟರಲ್ಲಿ ಅಡಿಗೆ ಮಾಡಿಬಿಡ್ತೀನಿ."

"ಬೇಡ ಲಕ್ಷ್ಮಿ ಮಕ್ಕಳಿಗೆಲ್ಲಾ ಅಡಿಗೆ ಮಾಡ್ಲೇ ಬೇಕಲ್ಲ ನಾನಿನ್ನು ಬರ್ತೀನಿ."

"ಇಲ್ಲ ಇವತ್ತು ನೀವು ಊಟ ಮಾಡ್ಕೊಂಡು ಹೋಗಲೇಬೇಕು ನಿಮಗೆ ಏನು ಇಷ್ಟವೋ ಅದನ್ನೆ ಮಾಡ್ತೀನಿ ನಿಮ್ಮ ಮಕ್ಕಳೂ ಇಲ್ಲಿಗೇ ಬರಲಿ ಹೇಗೂ ದತ್ತನೂ ಇಲ್ಲೇ ಇದಾನೆ ಹೋಗೋ ದತ್ತಾ, ನಿನ್ನ ತಮ್ಮಂದಿರನ್ನು ಕರ್ಕೊಂಡು ಬಾರೋ....."

"ಈಗ್ಲೇ ಬೇಡ ಲಕ್ಷ್ಮಿ.... ಸುಮ್ಮನೇ ಕ್ಯಾತೆ ಮಾಡಿ ಬೇಜಾರು ಮಾಡುತ್ವೆ, ರಾಜ ಖಂಡಿತಾ ಬರುಲ್ಲ. ಅವನೂ ಅವರ ಅಪ್ಪನ ತರಹ ಒಂಥರಾ ಖೊಟ್ಟಿ ಬುದ್ಧಿ.. . ಅವನಿಗೆ ಹುಳಿಯೋ ಸಾರೋ ತಗೊಂಡು ಹೋಗ್ತೀನಿ ಅನ್ನ ಮಾಡಿಟ್ಟು ಬರ್ತೀನಿ."

"ಅನ್ನಾನೂ ತೋಡಿ ಕೊಟ್ರಾಯ್ತು. ನೀವು ಕೂತ್ಕೊಳ್ಳಿ. ಕಾಫಿ ಬಿಸಿಯಾಗಿದೆ ಕುಡೀರಿ."

"ತರಕಾರಿ ಬುಟ್ಟೀನ ಇತ್ಲಾಗೆ ಕೊಡು ಹೆಚ್ಚಿಕೊಡ್ತೀನಿ. ನಿಮ್ಮ ತೋಟದಲ್ಲಿ ಏನೇನೋ ತರಕಾರಿ ಬೆಳೆಯುತ್ತಂತೆ."

"ಹುಂ, ಅದರಿಂದ್ಲೇ ಒಂದಿಷ್ಟು ಆದಾಯ. ಆದರೂ ಎಲ್ಲಾ ಕಷ್ಟವೇ ನಿಮ್ಮ ಅಣ್ಣನಂತೂ ತುಂಬಾ ಶ್ರಮ ಪಡ್ತಾರೆ. ನೋಡೋಕೇ ಕಷ್ಟವಾಗತ್ತೇ."

"ಕಷ್ಟ ಪಡದಿದ್ರೆ ಆಗುತ್ತಾ ಲಕ್ಷ್ಮೀ ? ಕಾಫಿ ತುಂಬಾ ಚೆನ್ನಾಗಿದೆ ಈಗ ಎಷ್ಟು ಎಮ್ಮೆಗಳಿವೆ ?"

"ನಾಲ್ಕು ಎಮ್ಮೆ, ಎರಡು ಹಸುಗಳಿವೆ ಎರಡು ಎಮ್ಮೆ ಒಂದು ಹಸು ಹಾಲನ್ನು ಕೊಡುತ್ವೆ. ಉಳಿದೋವು ಗಬ್ಬ ಆಗಿವೆ." ಅತ್ತಿಗೆ ನಾದನಿ ಇಬ್ಬರೂ ಮಾತ ನಾಡುತ್ತಾ ಕೆಲಸವನ್ನು ಮುಂದುವರೆಸಿದರು. ಲಕ್ಷ್ಮಿ ಅಡಿಗೆಯನ್ನು ಮಾಡಿ ಮುಗಿಸಿದಳು. ಶಾಸ್ತ್ರಿ ಮನೆಗೆ ಬಂದ ತಂಗಿಯನ್ನು ಕಂಡ.

"ಏನೇ ಪಾತೂ ಅಪರೂಪಕ್ಕೆ ಗಂಡ ಮಕ್ಕಳನ್ನು ಮನೇಲೆ ಬಿಟ್ಟು ಅಣ್ಣನ ಮನೆಗೆ ಬಂದಿದೀಯ." ತಮಾಷೆಯಾಗಿ ಮಾತನಾಡಿದ.

"ನಿಮ್ಮ ಭಾವ ಊರಲಿಲ್ಲ ಇಲ್ಲಿ ಸಾವಿತ್ರಿಯೂ ಇಲ್ಲ. ಲಕ್ಷ್ಮಿ ಒಬ್ಬಳಿಗೆ ಬೇಸರವಾಗುತ್ತೆ ಅಂತ ಬಂದೆ."

"ಸರಿ ಮತ್ತೆ ಇಲ್ಲೇ ಊಟಕ್ಕೇಳು ಮಕ್ಕಳನ್ನು ಕರಿ ಲಕ್ಷ್ಮಿ ಎಲ್ರಿಗೂ ತಟ್ಟೆ ಹಾಕು ನೀನು ಬಂದದ್ದು ಒಳ್ಳೇದೇ ಆಯ್ತು. ಸಾತು, ಮಕ್ಕಳು ಯಾರೂ ಮನೇಲಿಲ್ಲ ದತ್ತ ಹೋಗೋ ನಿನ್ನ ತಮ್ಮಂದಿರನ್ನ ಕರ್ಕೊಂಡ್ಬಾ." ದತ್ತ ಮನೆಗೆ ಹೋದ.

ದತ್ತನ ಹಿಂದೆ ಎಲ್ಲರೂ ಬಂದರೂ ರಾಜ ಬರಲಿಲ್ಲ. "ಅವನು ಹಾಗೇನೇ ನಾನು ಹೇಳಲಿಲ್ವಾ ?"

"ನೀವು ಊಟಕ್ಕೆ ಕೂತ್ಕೊಳ್ಳಿ ನಾನೇ ಹೋಗಿ ಕರ್ಕೊಂಡು ಬರ್ತೀನಿ." ಲಕ್ಷ್ಮಿ ಎಲ್ಲರಿಗೂ ಬಡಿಸಿದಳು. ಎಲ್ಲರ ಊಟ ಉಗಿಯುವ ಹಂತದಲ್ಲಿದ್ದಾಗ ರಾಜನನ್ನು ಕರೆಯಲೆಂದು ಅವರ ಮನೆಗೆ ಬಂದಳು.

"ಬಾರೋ ರಾಜ... ಎಲೆ ಹಾಕಿದೆ."

"ಇಲ್ಲ ಅತ್ತೇ.... ನಾನು ಮನೇಲೇ ಊಟ ಮಾಡ್ತೀನಿ."

"ಅಮ್ಮ ಅಡಿಗೆ ಮಾಡಿಲ್ಲ. ಎಲ್ರೂ ಅಲ್ಲೇ ಊಟ ಮಾಡ್ತಿದಾರೆ. ಸುಮ್ಮನೆ ಬಾ. ತಟ್ಟೆಗೆ ಬಡಿಸಿರುವ ಅನ್ನ ಆರಿ ಹೋಗುತ್ತೆ ಬಾ ."

"ಅಪ್ಪಂಗೆ ಗೊತ್ತಾದ್ರೆ, ಅಮ್ಮನ ಹೊಡೀತಾರೆ ಅಷ್ಟೇ."

"ನಿಮ್ಮಪ್ಪಂಗೆ ನೀನು ಹೇಳಿದ್ರೆ ಗೊತ್ತಾಗುತ್ತೆ. ಅಷ್ಟಕ್ಕೂ ನಿಮ್ಮಮ್ಮ ಏನು ತಪ್ಪು ಮಾಡಿದಾರೆ ?"

"ಮನೇಲಿ ಅಡಿಗೆ ಮಾಡದೇ ತಾನು ಹೋಗಿ ಎಲ್ಲೋ ಊಟ ಮಾಡೋದು

ತಪ್ಪಲ್ವಾ ಅತ್ತೆ....."

"ರಾಜಾ.... ಹೀಗೆಲ್ಲಾ ಮಾತಾಡ್ಬೇಡ..... ಅಮ್ಮಂಗೆ ನಮ್ಮನೆ ತವರು ಮನೆ ಅಲ್ಲಿ ಊಟ ಮಾಡಿದರೆ ತಪ್ಪಲ್ಲ. ಬೆಳಿಗ್ಗೆ ನಿಮಗೆಲ್ಲಾ ದೋಸೆ ಚಟ್ನಿ ಮಾಡಿ ಕೊಟ್ಟಿದಾರೆ ನೀವ್ಯಾರೂ ಉಪವಾಸ ಏನಿಲ್ಲವಲ್ಲ."

"ದೋಸೆ ಚಟ್ನಿ ತಿಂದು ಎಷ್ಟೋ ಹೊತ್ತಾಯ್ತು. ಯಾವಾಗ್ಲೋ ಅರಗಿ ಹೋಯ್ತು. ಅಮ್ಮನ್ನ ಕಳಿಸಿ ಬಂದು ಅನ್ನ ಹುಳಿ ಮಾಡಿ ಬಡಿಸ್ಲಿ."

"ಚೆನ್ನಾಗಿದೆ, ಅಮ್ಮನ ಕೈಲಿ ಎಲ್ರೂ ಚೆನ್ನಾಗಿ ದುಡಿಸಿಕೊಳ್ತೀರಿ ಅವರಿಗೂ ವಿಶ್ರಾಂತಿ ಬೇಡ್ವಾ ? ನಿನಗೂ ಅದು ಪರರ ಮನೆ ಅಲ್ಲ. ಸ್ವಂತ ಸೋದರಮಾವನ ಮನೆ. ನಿನಗೆ ಬರುಕ್ಕೆ ಅಧಿಕಾರ ಇದೆ. ಸ್ವಾತಂತ್ರ್ಯ ಇದೆ ತಿಳುವಳಿಕೆ ಇರೋನು, ವಿದ್ಯಾವಂತನಾಗಿರೋನು, ನಿನಗೆ ನಾನು ಹೇಳಿಕೊಡಬೇಕಾ! ಇವತ್ತು ನನ್ನ ಕೈಯ ಅಡಿಗೆ ರುಚಿ ನೋಡೂವಂತೆ ಬಾ." ಅನುನಯದಿಂದ ಕರೆದಳು.

"ಹೊಟ್ಟೆ ಹಸಿಯುತ್ತಿತ್ತು. ಇನ್ನು ಮಾತು ಬೇಡ ಎನಿಸಿತ್ತು ರಾಜ ಬಾಗಿಲನ್ನು ಹಾಕಿ ಅತ್ತೆಯೊಡನೆ ಹೊರಟ. ಪಾರ್ವತಿಯೇ ಇವರಿಬ್ಬರಿಗೂ ಬಡಿಸಿದಳು.

* * *

"ಅದೇನದು ವಿಶೇಷ ಎಂದೂ ಇಲ್ಲದ್ದು ? ನಿನ್ನ ನಾದಿನಿ ಇಲ್ಲಿ ಬಂದು ಊಟ ಮಾಡಿದ್ಲಲ್ಲ ಕಂಠಿ ಊರಲಿಲ್ಲ ಅಂತ ಕಾಣುತ್ತೇ."

"ಹುಂ, ಬೀಗರ ಊರಿಗೆ ಹೋಗಿದಾರಂತೆ. ಎರಡು ದಿನ ಅಯ್ತಂತೆ. ಬೀಗರ ಮನೆಗೆ ಹೋಗೀ ಹೋಗಿ ಹಗುರ ಆಗ್ತಾನೆ ಅಷ್ಟೇ..."

"ಮೀನಾಕ್ಷಿ ಬಸಿರಿಯಂತೆ ಕಾಗ್ದ ಹಾಕಿದ್ರಂತೆ." ಎಲೆ ಅಡಿಕೆ ಮಡಿಸಿ ಕೊಟ್ಟಳು.

"ಓಹೋಹೋ ಕಂಠಿ ಅಜ್ಜ ಆಗ್ತಾ ಇದಾನೆ. ಇನ್ನಾದ್ರೂ ಬುದ್ಧಿ ಬರ್ಬೇಕು ಅವನಿಗೆ ಅವಳನ್ನು ಕರ್ಕೊಂಡು ಬರ್ತಾನಂತ?" ತಾಂಬೂಲವನ್ನು ಹಾಕಿಕೊಂಡ.

"ನಿಮ್ಮ ಭಾವ ಮೀನಾಕ್ಷೀನ್ನೂ ಇಲ್ಲಿಗೆ ಕರ್ಕೊಂಡು ಬಂದ್ರೆ ಇಬ್ಬಿಬ್ರಿಗೂ ಬಾಣಂತನ ಮಾಡ್ಬೇಕು. ನಿಮ್ಮ ಭಾವ." ನಗುತ್ತಾ ಹೇಳಿದಳು. ತಾನೂ ಎಲೆ ಅಡಿಕೆ ಹಾಕಿಕೊಂಡಳು.

"ಎಲ್ಲೋ ತಮಾಷೆಗೆ ಹಾಗೆ ಹೇಳಿದಾಳೆ ಪಾತು....." ನಂಬದವನಂತೆ ಹೇಳಿದ.

"ಇದರಲ್ಲಿ ತಮಾಷೆ ಏನು? ಈಗ ಏಳನೇದೋ ಎಂಟನೇದೋ ಮಗು ಹುಟ್ಟುತ್ತೇ ಮಧ್ಯೆ ಎಷ್ಟೋ ಅಬಾರ್ಷನ್‌ಗಳಾಗಿವೆ. ಅವರಿಗೇ ಲೆಖ್ಖ ಗೊತ್ತಿಲ್ಲ. ನಿಮ್ಮ ತಂಗಿಯ ಆರೋಗ್ಯ ಹದಗೆಡುಲ್ವಾ ?"

"ಈ ಚಿಂತೆ ಕಂಠಿಗಿರ್ಬೇಕು ನಾನೇನು ಹೇಳ್ಲಿ !"

"ಹೆಂಡತಿಯ ಚಿಂತೆ, ಅವಳ ಆರೋಗ್ಯದ ಕಡೆ ಗಮನ ಯಾವ

ಗಂಡನಿಗಿರುತ್ತೇ? ನೀವು ಎಂದಾದ್ರೂ ನೀನು ಹೇಗಿದೀಯ ಲಕ್ಷ್ಮಿ ಅಂತ ನನ್ನ ಬಗ್ಗೆ ವಿಚಾರಿಸಿದೀರಾ!" ಗಂಡನನ್ನು ಆಕ್ಷೇಪಿಸಿದಳು

"ನೀನು ಹೇಗಿದೀಯಾ ಲಕ್ಷ್ಮಿ ನಿನ್ನ ಆರೋಗ್ಯ ಹೇಗಿದೆ ?" ಶಾಸ್ತ್ರಿ ನಾಟಕೀಯವಾಗಿ ವಿಚಾರಿಸಿದಾಗ ಅವಳಿಗೆ ನಗು ಬಂತು. ಅವನೂ ನಕ್ಕ... ಬಾ.... ಇಲ್ಲಿ ಹತ್ರ ಕೂತ್ಕೋ ಬಾ ಇವತ್ತು ಮನೇಲಿ ಹೇಗೂ ಯಾರು ಇಲ್ಲ ನಾವಿಬ್ರೇ...." ಗಂಡನ ಆಸೆ ಅವಳಿಗೆ ತಿಳಿಯಿತು ನಾಚಿದಳು

"ಥೂ ಇಷ್ಟು ಹೊತ್ನಲ್ಲಿ....?"

"ಹೊತ್ತೇನು ಗೊತ್ತೇನೂ ! ಮುಜುಗರ ಪಟ್ಟುಕೊಳ್ಳೋಕೆ ಯಾರೂ ಇಲ್ಲ ಸಾತು ಇಲ್ಲ, ಬೆಳೆದೆ ಹೆಣ್ಣು ಮಕ್ಕಳಿಲ್ಲ. ವೈಕುಂಠ ಇಲ್ಲ....."

"ಆದರೂ ಮಧ್ಯಾಹ್ನದ ಹೊತ್ನಲ್ಲಿ..... ವೆಂಕಟೇಶ ಎದ್ದರೆ ?"

"ಮಧ್ಯಾಹ್ನದ ಹೊತ್ನಲ್ಲೂ ಕಂಠಿ ಅವನ ಹೆಂಡ್ತಿ ಜೊತೆ ಸರಸ ಆಡ್ತಾ ಇರ್ತಾನೆ ಅಂತ ನೀನೇ ಹೇಳಿದ್ದೆ ಈಗ ನಮಗೂ ಸಮಯ ಸಿಕ್ಕಿದೆ ಸುಮ್ಮನೇ ಬರ್ತೀಯೋ ನಾನೇ ಬರ್ಲೋ?"ಎನ್ನುತ್ತಾ ಅವಳ ಮೇಲೆ ಕೈಹಾಕಿದ.

"ಕಂಠಿ ಸರಸ ಆಡಿದ್ದಕ್ಕೆ ಆಯ್ತಲ್ಲ ಮೇಲೆ ಮೇಲೆ ಮಕ್ಕಳು. ಹಾಗೇ ಹೇಳಿದರೂ ಹತ್ತಿರ ಬಂದ ಗಂಡನನ್ನು ಲಕ್ಷ್ಮಿ ದೂರ ತಳ್ಳಲಿಲ್ಲ."

"ಇದು, ಮದುವೆಯಾದ ಎಲ್ಲಾ ಗಂಡ ಹೆಂಡತಿಯರ ಹಣೇಬರಹ. ಮದುವೆಯಾಗೋದೇ ಸರಸ ಆಡೋಕೆ. ಸರಸವಾಡೋದೇ ಮಕ್ಕಳಾಗ್ಲಿ ಅಂತ." ಅವಳನ್ನು ರಮಿಸಿದ.

"ಚೆನ್ನಾಗಿದೆ ನಿಮ್ಮ ತರ್ಕ ನಿಮಗೆ ಬೇಕಾದಾಗ ರಸಿಕರಾಗಿ ಬಿಡ್ತೀರಿ. ದಿನಾ ಇಷ್ಟು ಹೊತ್ನಲ್ಲಿ ಗೊರಕೆ ಹೊಡೀತಾ ಮಲಗಿರ್ತೀದ್ರಿ....."

"ಎಲ್ಲರೆದುರಿಗೆ ಹೀಗೆ ಸರಸ ಆಡುಕ್ಕೆ ಆಗುತ್ತಾ..... ನೀನು ಅಡಿಗೆ ಮನೇಲಿ ಎಲ್ಲೋ ಇರ್ತಿದ್ದೆ. ಇವತ್ತು ನನ್ನ ಕೈಗೆ ಸಿಕ್ಕಿದಿಯ...." ಎನ್ನುತ್ತಾ ಅವಳ ಮೇಮೇಲೆ ಕೈ ಹಾಕಿದ.

"ಬಾಗಿಲನ್ನು ಹಾಕಿಯೇ ಇಲ್ಲ, ತೆಗೆದೇ ಇದೆ."

"ನಾನು ಬಾಗಿಲನ್ನು ಹಾಕ್ಬಿಟ್ಟು ಬರ್ತೀನಿ.... ವೆಂಕಟೇಶನ್ನ ಅತ್ಲಾಗೆ ಮಲಗಿಸಿ ಈ ಕಡೆ ಬಾ......" ಅವನು ಬಾಗಿಲುಗಳನ್ನು ಹಾಕಿ ಬಂದ. ಶಾಂತಂಗೆ ಮದುವೆಯಾಗಿ, ಅವಳು ತಾಯಿಯಾಗುವ ಮೊದಲು ನಮಗೆ ಇನ್ನೊಂದು ಮಗುವಾಗಿ ಬಿಡಬೇಕು...." ತನ್ನ ಬಯಕೆಯನ್ನು ಹೊರಗೆಡವಿದ.

"ಇನ್ನೊಂದು ಹೆಣ್ಣು ಮಗು ಹುಟ್ಟಿ ಬಿಟ್ಟರೇ....? ಈಗಾಗ್ಲೇ ನಾಲ್ಕು ಜನ ಹೆಣ್ಣು ಮಕ್ಕಳು ನಮಗೆ."

"ಹೆಣ್ಣು ಹುಟ್ಟಿದ್ರೆ ಅದನ್ನು ಪಾರ್ವತಿಗೆ ಕೊಟ್ಟು ಬಿಡೋಣ ಒಂದು ಗಂಡು ಮಗುವನ್ನು ಅವಳಿಂದ ಇಸ್ಕೊಂಡು ಸಾಕೋಣ."

"ಏನೂ ಬೇಡ ಅವರ ಸಹವಾಸ ಸಾಕು. ಅದೇ ನೆವಮಾಡಿಕೊಂಡು ಏನು ರಂಪ ಮಾಡ್ತಾರೋ.... 'ನಿಮ್ಮ ಭಾವ. " ಮೂತಿ ಸೊಟ್ಟ ಮಾಡಿದಳು.

"ಈಗ ಅವನ ಮಾತು ಸಾಕು. ಹತ್ತಿರ ಬಾ...." ಲಕ್ಷ್ಮಿ ಹತ್ತಿರಕ್ಕೆ ಸರಿದಳು ಅವನ ಆಸೆಗೆ ಅನುಮತಿ ಕೊಟ್ಟಳು

* * *

ಕತ್ತಲಾಗುತ್ತಾ ಬಂದಿತ್ತು. ಕಾಫಿ ಕುಡಿದು ತೋಟಕ್ಕೆ ಹೋಗಿದ್ದ ಶಾಸ್ತ್ರಿ ಇನ್ನು ಮನೆಗೆ ಬಂದಿರಲಿಲ್ಲ. ಹಠ ಮಾಡುತ್ತಿದ್ದ ವೆಂಕಟೇಶನನ್ನು ಎತ್ತಿಕೊಂಡು ಮುದ್ದಾಡಿ, ಹಾಲು ಕುಡಿಸಿದಳು ಒಂದೊಂದಾಗಿ ಸೀಮೆಎಣ್ಣೆಯ ದೀಪಗಳ ಚಿಮಣಿಯಗಾಜನ್ನು ಬಿಳಿ ಬೂದಿ ಹಾಕಿ ಉಜ್ಜಿ, ತೊಳೆದು ಒರೆಸಿಟ್ಟಳು. ಲಾಂದ್ರಗಳ ಬತ್ತಿಗಳನ್ನು ಸರಿಮಾಡಿ ಕರಕಲುಗಳನ್ನು ಕತ್ತರಿಸಿ ತೆಗೆದಳು, ಗೋಡೆಗಳಿಗೆ ತಗುಲಿ ಹಾಕಿದ್ದ ಸೀಮೆ ಎಣ್ಣೆಯ ಬುಡ್ಡಿ ದೀಪಗಳನ್ನು ಹಚ್ಚಿಟ್ಟಳು. ಮನೆಯೆಲ್ಲಾ ಬೆಳಕಿನಿಂದ ತುಂಬಿತ್ತು. ತನ್ನ ಕೆಲಸವನ್ನು ತಾನೇ ಮೆಚ್ಚಿಕೊಂಡಳು. ಹೊಳೆಯುವ ಗಾಜಿನ ಚಿಮಣಿಗಳಿಂದ ಆಚೆ ಹೊರ ಹೊಮ್ಮುತ್ತಿರುವ ದೀಪದ ಬೆಳಕನ್ನೇ ವೀಕ್ಷಿಸಿ ಮುದಗೊಂಡಳು. ಗಂಡನೊಡನೆ ಕಳೆದ ರಸನಿಮಿಷಗಳನ್ನು ಮೆಲಕು ಹಾಕಿಕೊಂಡಳು. ಮದುವೆಯಾಗಿ ಹದಿನೆಂಟು ವರ್ಷಗಳು ಕಳೆದವು. ಮೊದಲರಾತ್ರಿಯಿಂದ ಹಿಡಿದು, ಎಷ್ಟೋ ರಾತ್ರಿಗಳವರೆಗೆ, ಗಂಡ ಹೆಂಡತಿ ಇಬ್ಬರೂ ಒಟ್ಟಿಗೆ ಮಲಗಿದ್ದುಂಟು. ಆದರೆ, ಏನೋ ಸಂಕೋಚ, ಏನೋ ಬಿಗುಮಾನ, ಗಂಡನಲ್ಲಿ ಸರಸ, ಸದರ ಸಲುಗೆ ಕಡಿಮೆ. ಅವನು ಹೇಳಿದಂತೆ ಕೇಳಿಬಿಡುತ್ತಿದ್ದಳು. ಪಿಸುಮಾತುಗಳಿಗೂ ಅವಕಾಶವಿರಲಿಲ್ಲ. ಮನೆಯಲ್ಲಿ ಹಿರಿಯರಿರುತ್ತಿದ್ದರು. ಅತ್ತಿಗೆ ನಾದಿನಿಯರಿರುತ್ತಿದ್ದರು. ಕದ್ದುಮುಚ್ಚಿ, ಕತ್ತಲಲ್ಲಿ ಕಾಲ ಕಳೆದಂತೆ ಅನ್ನಿಸುತ್ತಿತ್ತು. ಮಕ್ಕಳು ಹುಟ್ಟಿದ ನಂತರ ಸೇರುತ್ತಿದ್ದುದೂ ಕಡಿಮೆ ಆಗಿತ್ತು. ಆದರೆ ಈ ದಿನ ಎಷ್ಟೋ ರಾತ್ರಿಗಳ ನಂತರ ಒಂದು ರಸಮಯ ಅವಕಾಶ, ಅದರೆ ಇದು ಸರಿಯೋ ತಪ್ಪೋ ತಿಳಿಯದು. ಮಧ್ಯಾಹ್ನದ ಹೊತ್ತು ಗಂಡ ಹೆಂಡತಿ ಒಟ್ಟಿಗೇ ಮಲಗಿದರೆ, ಮುಂದಿನ ಜನ್ಮದಲ್ಲಿ ಹೆಬ್ಬಾವಾಗಿ ಹುಟ್ತಾರೆ ಅಂತ ಯಾರೋ ಹೇಳಿದ ಮಾತು ನೆನಪಾಗಿ ಭಯವಾಯಿತು.

ಹಾವು ಅಂತಂದ್ರೇ ಭಯ ಇನ್ನು ಹೆಬ್ಬಾವು? ಹದಿನೆಂಟು ಇಪ್ಪತ್ತು ಅಡಿ ಉದ್ದದ, ಮರದ ಕೊರಡಿನಂತೆ ಬಿದ್ದುಕೊಂಡಿರುವ ಪ್ರಾಣಿಗಳನ್ನು ಇಡಿಯಾಗಿ ನುಂಗುವ ಜೀರ್ಣಿಸಿಕೊಳ್ಳಲು ಮರವನ್ನು ಏರಿ ಸುತ್ತುವ.... ಅಬ್ಬಾ! ಭಯವನ್ನು ಹುಟ್ಟಿಸುವ ಜಂತು. ಇದ್ದಕ್ಕಿದ್ದಂತೆ ಅವಳಲ್ಲಿ ಏನೋ ಅವ್ಯಕ್ತ ಭಯ ಆವರಿಸಿಕೊಂಡಿತು.

ಬಚ್ಚಲು ಮನೆಯ ಬಾಗಿಲ ಬಳಿ ಇಲಿ ಅರಚಿಕೊಳ್ಳುವ ಸದ್ದು ಕೇಳಿಸಿತು. ಥೂ ದರಿದ್ರ ಇಲಿಗಳ ಕಾಟ. ಬೋನು ಇಟ್ಟರೆ ಬೋನಿಗೂ ಬೀಳುವುದಿಲ್ಲ. ಹಿಂದೆಯೇ ಭುಸ್ ಎಂದು ಪೂತ್ಕರಿಸುವ ಧ್ವನಿ ಕೇಳಿದಾಗ ಅವಳ ಜೀವ ಝುಲ್ಲೆಂದಿತು. ಒಂದುಗಳಿಗೆ ತಡೆದು ಆಲಿಸಿದಳು ಮತ್ತೊಮ್ಮೆ ಅದೇ ಭುಸ್ ಎನ್ನುವ ಸದ್ದು ಏನಿರಬಹುದು? ಇಲಿ ಹಿಡಿಯಲು ಬೆಕ್ಕು ಬಂದಿರಬಹುದೇ ? ಅಡಿಗೆ ಮನೆಗೆ ನುಗ್ಗಿದರೆ, ಹಾಲಿನ ಪಾತ್ರೆಯನ್ನು ಉರುಳಿಸಿ, ಹಾಲನ್ನು ಕುಡಿಯದೇ ಇರುವುದಿಲ್ಲ. ಅದಕ್ಕೇ ಮುಂಚೆ ಓಡಿಸಿಬಿಡಬೇಕೆಂದುಕೊಂಡು, ಹುಶ್ ಎಂದು ಬಾಯಲ್ಲಿ ಸದ್ದು ಮಾಡುತ್ತಾ ಲಾಂದ್ರವನ್ನು ಹಿಡಿದು ಅಡಿಗೆ ಮನೆಗೆ ಬಂದಳು. ಬೆಕ್ಕು ಅಡಿಗೆ ಮನೆಗೆ ನುಗ್ಗಿರುವಂತೆ ಅನ್ನಿಸಲಿಲ್ಲ. ಬಚ್ಚಲು ಮನೆಯಲ್ಲಿ ಅಡಗಿರಬಹುದು ಹಿಂಬಾಗಿಲು ತೆಗೆದು ಓಡಿಸಿಬಿಡುತ್ತೇನೆಂದುಕೊಂಡು, ಬಚ್ಚಲು ಮನೆಯ ಬಾಗಿಲ ಬಳಿಗೆ ಬಂದವಳಿಗೆ ಕಂಡಿದ್ದು ಒಂದು ದೊಡ್ಡ ಹಾವು ಹೆಡೆ ಎತ್ತಿತ್ತು! ಎರಡು ಹೆಜ್ಜೆ ಹಿಂದೆ ಸರಿದಳು. ಕಿರುಚಿಕೊಳ್ಳಲೂ ಆಗದಂತೆ ಧ್ವನಿ ಉಡುಗಿ ಹೋಗಿತ್ತು. ಮನೆಯೊಳಗೆ ಹಾವು ಬಂದು ಸೇರಿಕೊಂಡಿದೆ. ಲಾಂದ್ರವನ್ನು ಬಾಗಿಲ ಬಳಿ ಇಟ್ಟು ವೇಗವಾಗಿ ಬಂದು ವೆಂಕಟೇಶನನ್ನು ಎತ್ತಿಕೊಂಡಳು. ಅಯ್ಯೋ ದೇವರೇ..... ಈಗೇನಪ್ಪಾ ಮಾಡುವುದು? ಇವರೂ ಮನೇಲಿಲ್ಲ. ವೈಕುಂಠನೂ ಇನ್ನು ಬಂದಿಲ್ಲ. ಒಳಗೇ ಎಲ್ಲೋ ಹಾವು ಅಡಗಿರಬಹುದು ಇಲಿಯ ಅರಚಾಟವೂ ಕೇಳುತ್ತಿಲ್ಲ. ಈಗ ಇಷ್ಟು ಹೊತ್ನಲ್ಲಿ ಯಾರನ್ನು ಕರೆಯುವುದು? ಮತ್ತೊಂದು ಲಾಂದ್ರವನ್ನು ಹಿಡಿದು ಮುಂಬಾಗಿಲಿಗೆ ಬಂದು ನಿಂತಳು ಎದುರು ಮನೆಗೆ ಹೋಗಿ ಯಾರನ್ನಾದರೂ ಕರೆದರೇ. ಅಂತ ಅಂದುಕೊಂಡರೂ ಮನೆಯಿಂದ ಆಚೆ ಹೋಗುವುದು ಸರಿ ಎನಿಸಲಿಲ್ಲ. ಬಚ್ಚಲು ಮನೆಯ ಬಾಗಿಲ ಬಳಿ ಹಾವನ್ನು ಕಂಡೆ, ಅದು ಅಲ್ಲೇ ಇರಬಹುದು.... ಆದಷ್ಟು ಬೇಗ ಮನೆಗೆ ಯಾರಾದರೂ ಬರಬಾರದೇ ಅಂತ ತವಕಿಸುತ್ತಾ, ಹಾಲಿನ ನಡು ಮಧ್ಯದಲ್ಲಿ ಲಾಂದ್ರವನ್ನಿಟ್ಟುಕೊಂಡು, ಬಚ್ಚಲ ಮನೆಯ ಕಡೆಗೆ ನೋಡುತ್ತಾ ನಿಂತಳು.

ಮುಂಬಾಗಿಲನ್ನು ತಳ್ಳಿಕೊಂಡು ಒಳ ಬಂದ ಶಾಸ್ತ್ರಿ, ನಡುಮಧ್ಯೆ ಲಾಂದ್ರವನ್ನು ಹಿಡಿದು ನಿಂತಿದ್ದವಳನ್ನು ಕಂಡ.

"ಬರೀ ಬಾಗಿಲನ್ನು ಹಾಕಿ ಇಲ್ಲೇನು ಮಾಡ್ತಿದೀಯ..... ?"

"ಹಾವೂ ಹಾವೂ.... ಒಳಗೆ ಬಚ್ಚಲ ಮನೇಲಿ ಸೇರ್ಕೊಂಡಿದೆ." ಪಿಸಯ ದನಿಯಲ್ಲಿ ಗಾಬರಿಗೊಂಡು ಹೇಳಿದಳು.

"ಹಾವಾ ! ನೀನು ನೋಡಿದ್ಯಾ ?"

"ಹೂಂ, ನೋಡ್ದೆ, ಭುಸ್ ಅಂತ ಹೆಡೆ ಬಿಚ್ಚಿ ನಿಂತಿತ್ತು... ಈಗ್ಲೂ ಎಲ್ಲೋ

ಅಲ್ಲೇ ಇದೆ ಹೊರಕ್ಕೆ ಬಂದಿಲ್ಲ."

"ಸರಿಯಾಗಿ ನೋಡಿದ್ಯಾ! ಹಗ್ಗಾನೇ ಹಾವು ಅಂತ ಅಂದ್ಕೊಂಡ್ಯೋ .... ಹೇಗೆ?"

"ಇಲ್ಲಾ ಅದು ಹಾವೇ.. ನಂಗೇನು ಅಷ್ಟೂ ಗೊತ್ತಾಗುಲ್ವೇ? ಮಾರುದ್ದ ಉದ್ದ ಇತ್ತು.... ದೀಪದ ಬೆಳಕಿಗೆ ಹೊಳೀತಿತ್ತು. ಭುಸ್ ಅಂತ ಸದ್ದು ಮಾಡ್ತಿತ್ತು. ಇಲೀನ ತಿನ್ನೋಕೆ ಅಂತ ಬಂದಿದೆ."

"ಸರಿ, ಎಲ್ಲಿದೆ ಅಂತ ನೋಡ್ತೀನಿ. ನೀನು ಇತ್ಲಾಗೆ ನಿಂತ್ಕೋ... "

"ತಡೀರಿ, ಮುಂದೆ ಹೋಗ್ಬೇಡಿ, ಯಾರನ್ನಾದ್ರೂ ಕರೀರಿ. ಖಂಡಿತಾ ಅಲ್ಲೇ ಎಲ್ಲೋ ಇದೆ"

"ಇಷ್ಟೊತ್ನಲ್ಲಿ ಯಾರನ್ನ ಕರೀಲಿ? ಹಿಂಬಾಗಿಲನ್ನು ತೆಗಿ, ಹೇಗೆ ಬಂತೋ ಹಾಗೇ ಹೋಗುತ್ತೆ."

"ಹೋಗ್ದೇ ಇದ್ರೆ ? ನಾವು ರಾತ್ರಿ ಧೈರ್ಯವಾಗಿ ಮಲಗೋದು ಹೇಗೆ ?"

"ಕತ್ತಲೆ ಕೋಣೇಲಿ ಮಲಗೋಣ. ಬಾಗಿಲನ್ನು ಹಾಕ್ಕೊಂಡರಾಯ್ತು. ಬೆಳಿಗ್ಗೆ ಎದ್ದು ಓಡಿಸಿದರಾಯ್ತು..... ಬಚ್ಚಲು ಮನೆಯ ಬಾಗಿಲನ್ನು ಹಾಕೋಣ.

ಬಚ್ಚಲು ಮನೆಯ ಬಾಗಿಲಿಗೆ ಬಂದವನು, ಲಾಂದ್ರವನ್ನೆತ್ತಿ, ಅದರ ಬೆಳಕನ್ನು ಒಳಕ್ಕೆ ಚೆಲ್ಲಿದ. ಮೂಲೆಯಲ್ಲಿಟ್ಟಿದ್ದ ತಾಮ್ರದ ಹಂಡೆಯ ಸಂದಿಯಲ್ಲಿ ಅಡಗಿದ್ದ ಹಾವಿನ ಬಾಲ ಕಂಡಿತು. ಅವನಿಗೂ ಅದು ಹಾವೇ ಎಂದು ಖಚಿತವಾಯ್ತು. "ಹೌದು ಅದು ಹಾವೇ.... ಹಂಡೆಯ ಹಿಂದೆ ಮಲಗಿದೆ. ಇಲಿಯನ್ನು ಹಿಡಿದಿರ ಬಹುದು. ನೀನು ಸುಮ್ಮನೇ ಗಲಾಟೆ ಮಾಡ್ಬೇಡ ಇಲೀನ ನುಂಗೋದನ್ನ ನೋಡ್ಬಾರ್ದು. ಅಲ್ಲದೇ ತಕ್ಷಣಕ್ಕೆ ಅದು ಎಲ್ಲಿಗೂ ಹೋಗುಲ್ಲ. ವೈಕುಂಠ ಬರಲಿ ಆಮೇಲೆ ಹೊರಕ್ಕೆ ಓಡಿಸೋಣ." ಇಬ್ಬರೂ ವೈಕುಂಠನ ಬವಿಗಾಗಿ ಕಾದರು ರೈಲು ಬಂದು ನಿಂತು ಮತ್ತೇ ಹೊರಟ ಸದ್ದು ಕೇಳಿಸಿತ್ತು. ಸಣ್ಣದಾಗಿ ಶೀಟಿ ಹೊಡೆಯುತ್ತಾ ಕೈಚೀಳಗಲನ್ನು ಹಿಡಿದು ವೈಕುಂಠ ಬಾಗಿಲಲ್ಲಿ ನಿಂತು "ಅವ್ವಾವ್ರೇ....." ಅಂತ ಕೂಗಿದ, "ನಾನು ಬಂದೆ." ಎಂದ ಸಂಭ್ರಮದಿಂದ.

"ವೈಕುಂಠ ಬಂದ" ಲಕ್ಷ್ಮಿ ಆತುರದಿಂದ ಹೊರಬಂದಳು. ವೆಂಕಟೇಶ ಕೈ ಚಾಚಿ ಅವನ ಹೆಗಲೇರಿದ.

"ನಾ ಬಂದ್ಬುಟ್ಟೆ..... ಸಣ್ಣಯ್ಯಾರೇ....."

"ಒಂದು ಹಾವು ಬಂದು ಸೇರ್ಕೊಂಡಿದೆ....." ಲಕ್ಷ್ಮಿ ಹೇಳಿದಳು

"ಆವಾ ! ಎಲ್ಲೈತೆ ! ನೀವು ಕಂಡ್ರಾ ?"

"ಹೂಂ, ಬಚ್ಚಲು ಮನೆಯಲ್ಲಿರುವ ಹಂಡೆಯ ಹಿಂದೆ ಮಲಗಿದೆ. ನಾಲ್ಕು

ಜನರನ್ನ ಕರ್ಕೊಂಡು ಬಂದು ಓಡಿಸ್ಬಿಡು."

"ನಾನು ನೋಡ್ತೀನಿ ಎಂಥಾ ಆವು ಅಂತ ಕೆರೆ ಆವು ಆಗಿದ್ರೆ ಅದಕ್ಕಿದೆ ಇವತ್ತು ಅಬ್ಬ......"

"ಕೆರೆ ಹಾವಲ್ಲ ಕಣೋ.... ನಾಗರಹಾವು.... ಹೆಡೆಬಿಚ್ಚಿ ನಿಂತಿದ್ದನ್ನು ನಾನು ಕಂಡೆ. ಮಾರುದ್ಧ ಇದೆ ಹೆಡೆಯೂ ದೊಡ್ಡದಾಗಿತ್ತು ಈಗ್ಲೇ ಹೋಗಿ ನಾಲ್ಕಾಳುಗಳನ್ನು ಕರ್ಕೊಂಡು ಬಾ ಬೇಗ...."

"ಕಾಳಿಂಗ ಸರ್ಪವೇ ಇರಬೈದು. ನಾನು ವಸಿ ನೋಡ್ತಿನಿ."

"ಹೊತ್ತು ಮಾಡ್ಬೇಡ ಆಮೇಲೆ ಆಳುಗಳು ಸಿಗುಲ್ಲ. ಮೊದಲು ಓಡಿ ಹೋಗು ವೈಕುಂಠ ವೆಂಕಟೇಶನನ್ನು ಇಳಿಸಿ, ಪಟೇಲರ ಮನೆಯ ದಿಕ್ಕಿಗೆ ಓಡಿದ. ಹತ್ತು ನಿಮಿಷಗಳಲ್ಲಿ ನಾಲ್ಕು ಮಂದಿ ಆಳುಗಳೊಡನೆ ಬಂದ. ಅವರುಗಳ ಕೈಯಲ್ಲಿ ಭಾರಿ ದೊಣ್ಣೆಗಳಿದ್ದವು." ಲಕ್ಷ್ಮಿ ಹೆದರಿದಳು.

"ಹಾವನ್ನು ಯಾರೂ ಹೊಡೀಬೇಡ್ರಪ್ಪಾ..... ಹೆದರಿಸಿ ಓಡಿಸಿ..."

"ಎಲ್ಲೈತೆ, ಎಂಗೈತೆ... ಎಂಥದು ಅಂತ ಮೊದ್ಲು ನೋಡೋವಾ ಎನ್ನುತ್ತಾ ಎಲ್ಲರೂ ಒಳ ಬಂದರು. ವೈಕುಂಠ, ಶಾಸ್ತ್ರಿ ಕೊಟ್ಟ ಟಾರ್ಚನ್ನು ಹಿಡಿದು ಬೆಳಕನ್ನು ತೋರಿದ. ಒಂದಿಬ್ಬರು ಲಾಂದ್ರವನ್ನು ಹಿಡಿದು ನಿಂತರು.

ಒಬ್ಬ, ಕೈಯಲ್ಲಿ ದೊಣ್ಣೆ ಹಿಡಿದು, ಹಂಡೆಯನ್ನು ಜರುಗಿಸಿದ. ಮಲಗಿದ್ದ ಹಾವು ಹೆಡೆ ಎತ್ತಿ ಭುಸ್ ಎಂದು ಮುಂದಕ್ಕೆ ವಾಲಿತು. ಅವನು ಹಿಂದಕ್ಕೆ ಹಾರಿದ. ಇಲೀನ್ನೋ, ಕಪ್ಪೆನೋ ನುಂಗೈತೆ ಕಣ್ಲಾ.. ಇಲ್ದಿದ್ರೆ ಇಂಗೆ ಕುಂತಿರ್ತೈತಾ? ಅದು ಎತ್ನಾಗೂ ಓಗಾಕಿಲ್ಲ, ಅಂಡೇನ ಇತ್ನಾಗೆ ಎಳಿ. ನೀರು ತುಂಬಿದ್ದ ಹಂಡೆಯನ್ನು ಕೈ ಹಾಕಿ ಎಳೆದರು. ಹಾವು ಕೂತಲ್ಲೇ ಹೆಡೆ ಬಿಚ್ಚಿ ಭುಸ್ ಎನ್ನುತ್ತಾ ಕುಳಿತೇ ಇತ್ತು.

"ಆಕ್ರೋ ಎಡೆ ಮೇಲೆ." ಒಬ್ಬ ನುಡಿದ. ಆಳುಗಳು ದೊಣ್ಣೆ ಹಿಡಿದು ಸುತ್ತುವರಿದರು. ಟಾರ್ಚಿನ ಬೆಳಕಿನಲ್ಲಿ ಹೆಡೆ ಎತ್ತಿ ಪೂತ್ಕರಿಸುವ ಹಾವು ಅಲ್ಲಿಂದ ಚಲಿಸಿರಲಿಲ್ಲ.

"ಹೊಡೀ ಬೇಡ್ರಪ್ಪಾ... ಹಿಡಿದು ಆಚೆಗೆ ಕಳಿಸಿ." ಲಕ್ಷ್ಮಿ ಎಂದಳು. ಆದರೆ ಯಾರೂ ಅವಳ ಅವಳ ಮಾತಿನ ಕಡೆ ಗಮನ ಕೊಡಲಿಲ್ಲ. ಎತ್ತಿದ್ದ ಹೆಡೆಯನ್ನು ಹತ್ತಾರು ಹೊಡೆತಗಳು ಅಪ್ಪಳಿಸಿದವು. ಹಾವು ನೆಲವನ್ನು ಕಚ್ಚಿ ಬಿದ್ದುಕೊಂಡಿತು ದೊಣ್ಣೆಯಿಂದ, ಸತ್ತ ಹಾವನ್ನು ಹೊರಕ್ಕೆ ತಳ್ಳಿಕೊಂಡು ಬಂದರು. ಲಕ್ಷ್ಮಿ ಕಣ್ಣುಗಳನ್ನು ಮುಚ್ಚಿಕೊಂಡು, ಬೆನ್ನು ಮಾಡಿ ನಿಂತಳು ಅವಳು ತಳಮಳಗೊಂಡಳು.

"ಓ.... ಹೋ... ಹೋ..... ಭಾರಿಯಾಗೇ ಇದೆ. ಐದಾರು ಅಡಿಗಿಂತ ಉದ್ದವಾಗಿದೆ....." ಶಾಸ್ತ್ರಿ ಎಂದ.

"ಗೋಧಿನಾಗರ ಕಣ್ರವ್ವಾ ಮೈ ಎಂಗೆ ಒಳೀತೈತೆ ನೋಡಿ."

"ಬೇಡಾಂದ್ರೂ ಹೊಡೆಸಿದ್ಯಲ್ಲೋ ವೈಕುಂಠ ಓಡಿಸಿದ್ರಾಗ್ತಿತ್ತು." ವ್ಯಥೆಯಿಂದ ನುಡಿದಳು.

"ಮನಿಸ್ರ ಕಣ್ಗೆ ಬಿದ್ದ ಆವ್ಗೆ ಆಯಸ್ಸು ಮುಗಿದಂಗೇ.... ಬಾರಿ ಇಲೀನ ನುಂಗಿ ಮನಗೈತೆ ತಿಂದ್ದು ಅರಗೋವರ್ಗೂ, ಈ ಜಾಗ ಬಿಟ್ಟು ಕದಲ್ತಿರ್ಲಿಲ್ಲ. ಬೆಳಗಿನ ತನ್ಕ ಕಾಯ್ಕೊಂಡು ಕುಂತಿರಕ್ಕಾಗ್ತಿತ್ತಾ ?"

"ಹೊಡೆದು ಹಾಕಾಗಿದೆ. ಬಿಡು ಇನ್ನ ಮಾತೇಕೆ ! ಇದು ನಾಗರ ಹಾವು. ಹಾಗೇ ಪೊದೆಗಿದೇಲಿ ಬಿಸಾಕೋ ಹಾಗಿಲ್ಲ ಸಂಸ್ಕಾರ ಮಾಡ್ಬೇಕು. ಈಗ ಕತ್ತಲಾಗಿದೆ ನಾಳೆ ಬೆಳಿಗ್ಗೆ ಮಾಢಿದ್ರಾಯ್ತು. ಒಂದಿಷ್ಟು ಒಣಹುಲ್ಲುಗಳನ್ನು ಹಾಸಿ, ಅದರ ಮೇಲೆ ಮಲಗಿಸಿ, ಒಂದು ದೊಡ್ಡ ಮಂಕರಿನ ದಬ್ಬಿ ಹಾಕು, ಮೇಲೆ ಒಂದು ಕಲ್ಲನ್ನು ಒತ್ತಿಡು" ಶಾಸ್ತ್ರಿ ವೈಕುಂಠನಿಗೆ ಸಲಹೆ ನೀಡಿದ. ವೈಕುಂಠ ಹಾಗೇ ಮಾಡಿದ, ಆಳುಗಳ ಕೈಗೆ ಶಾಸ್ತ್ರಿ ಒಂದಿಷ್ಟು ಹಣವನ್ನು ಹಾಕಿದ. ಲಕ್ಷ್ಮಿ ಮಂಕಾಗಿ ಬಿಟ್ಟಿದ್ದಳು. ಅವಳ ಧ್ಯಾನ ಎಲ್ಲೋ....ಮಧ್ಯಾಹ್ನದ ಹೊತ್ತು ನಾವಿಬ್ಬರೂ ಒಟ್ಟಿಗೇ ಮಲಗಿದ್ವುಅದಕ್ಕೇ ಹೀಗಾಯ್ತೋ ?

ಶಾಸ್ತ್ರಿ ಕೈ ಕಾಲು ತೊಳೆದು ಮಗುಟವನ್ನುಟ್ಟು ದೇವರಿಗೆ ತುಪ್ಪದ ದೀಪಗಳನ್ನು ಹಚ್ಚಿ ಊದು ಕಡ್ಡಿಗಳನ್ನು ಹಚ್ಚಿದ. ದೇವರಿಗೆ ನಮಸ್ಕಾರ ಮಾಡಿ ಈಚೆಗೆ ಬಂದ. "ಅಡಿಗೇನ ಬಿಸಿ ಮಾಡು ಬಡಿಸು ಹಸಿವಾಗ್ತಿದೆ" ಎಂದ ಲಕ್ಷ್ಮಿಯ ಕಳೆಗುಂದಿದ ಮುಖವನ್ನು ನೋಡಿದ "ಯಾಕೇ ಇನ್ನು ಭಯ ಹೋಗಿಲ್ವಾ ?"

"ಈ ಭಯಾನೇ ಬೇರೆ, ಈ ಪ್ರಾಣಿ ನಮ್ಮ ಕಣ್ಣಿಗೆ ಬೀಳ್ದೆ ಇದ್ದಿದ್ರೇ ಚೆನ್ನಾಗಿತ್ತು ಎಂಥಾ ಕೆಲಸವಾಯ್ತಲ್ಲ, ಹಾವನ್ನು ಹೊಡಿಸಿದ ಪಾಪ ಅಂಟಿಕೊಂಡಿತಲ್ಲ ಎಂದು ಆತಂಕವಾಗ್ತಿದೆ"

"ಆತಂಕ ಪಟ್ಕೋಬೇಡ ಬೆಳಿಗ್ಗೆ ಸಂಸ್ಕಾರ ಮಾಡ್ತೀವಲ್ಲ. ಅದರ ಆಯಸ್ಸು ಮುಗಿದಿತ್ತು. ಅದಕ್ಕೇ ಮನುಷ್ಯರ ಕಣ್ಣಿಗೆ ಬಿತ್ತು. ಇಂಥಾ ಕಾಡಿನಲ್ಲಿ ವಾಸ ಮಾಡೋರಿಗೆ ಇದೆಲ್ಲಾ ಸರ್ವೇಸಾಮಾನ್ಯ...."

"ನಮ್ಮಿಂದ ಏನೋ ಅಚಾತುರ್ಯ ನಡೆದಿದೆ ಅಂತ ಅನ್ನಿಸ್ತಿದೆ."

"ಯಾವ ಅಚಾತುರ್ಯವೂ ನಡೆದಿಲ್ಲ. ಅದನ್ನೇ ಯೋಚಿಸ್ತಿರ್ಬೇಡ. ಬೇಗ ಊಟ ಮಾಡಿ ಮಲಗೋಣ. ನನಗೂ ಆಯಾಸ ಆಗಿದೆ. ಗಂಡನಿಗೆ ಬಡಿಸಿ, ವೆಂಕಟೇಶನಿಗೆ ಹಾಲು ಕುಡಿಸಿದಳು. ಅವಳಿಗೆ ಎಂದಿನಂತೆ ಊಟ ಸೇರಲಿಲ್ಲ. ಮಗುವನ್ನು ತಬ್ಬಿ ಕೊಂಡು ಮಲಗಿದವಳಿಗೆ ನಿದ್ದೆ ಸುಳಿದಿರಲಿಲ್ಲ. ಹೆಡೆ ಎತ್ತಿ ನಿಂತ ಸರ್ಪವೇ ಕಣ್ಣು ಮುಂದೆ ಬಂದು ನಿಲ್ಲುತ್ತಿತ್ತು.

ಬೆಳಗಾಯಿತು. ಬೆಳಗಿನ ಕೆಲಸಗಳು ಮುಗಿದ ನಂತರ, ಶಾಸ್ತ್ರಿ ಸ್ನಾನ ಮಾಡಿ ಮಡಿ ಬಟ್ಟೆ ಉಟ್ಟು ಹೊರಬಂದ. ಬಾವಿಯ ಸಮೀಪದಲ್ಲಿ ಒಂದು ಜಾಗವನ್ನು ತೆರವು ಮಾಡಿ, ಸರ್ಪವನ್ನು ಅಲ್ಲಿ ತಂದು ಮಲಗಿಸುವಂತೆ ವೈಕುಂಠಂಗೆ ಹೇಳಿದ. ಹುಲ್ಲಿನ ಮೇಲೆ ಮಲಗಿಸಿದ್ದ ಹಾವಿನ ಕಳೇಬರವನ್ನು ವೈಕುಂಠ ತಂದು ಇಟ್ಟ ಶಾಸ್ತ್ರಿ ತನಗೆ ಗೊತ್ತಿರುವ ಕೆಲವು ಮಂತ್ರಗಳನ್ನು ಉಚ್ಛರಿಸಿ, ಹಾವಿನ ಶರೀರದ ಮೇಲೆ ನೀರನ್ನು ಪ್ರೋಕ್ಷಿಸಿ, ಹಾವಿನ ಹೆಡೆಯ ಮೇಲೆ ಒಂದು ಹೊಸ ಬಟ್ಟೆಯ ತುಂಡನ್ನು ಹೊದೆಸಿ, ಅದರ ಮೇಲೆ ಒಂದು ತಾಮ್ರದ ಕಾಸನ್ನು ಇರಿಸಿದ. ತಣ್ಣನೆಯ ಹಸುವಿನ ಹಾಲನ್ನು ತನಿ ಎರೆದು ಕೈ ಮುಗಿದು, ಊದಿನ ಕಡ್ಡಿಗಳನ್ನು ಸಮೀಪದಲ್ಲಿ ಹಚ್ಚಿಸಿಟ್ಟ.

"ನಾನೂ ಆಲು ಎರೀಲಾ ? ನಾನೂ ಸ್ನಾನ ಮಾಡಿವ್ನಿ" ವೈಕುಂಠನೆಂದ

"ಹೂಂ, ಅದಕ್ಕೇನಂತೆ ಹಾಲು ಹಾಕು" ವೈಕುಂಠನೂ ಹಾಲನ್ನೆರೆದ

ಶಾಸ್ತ್ರಿ ಮಲಗಿದ್ದ ಹಾವಿನ ಸುತ್ತ ಅಪ್ರದಕ್ಷಿಣೆಯಲ್ಲಿ ಬಂದು, ಬೆಂಕಿ ಕಡ್ಡಿಯನ್ನು ಗೀರಿ, ಹುಲ್ಲಿಗೆ ಬೆಂಕಿಯನ್ನು ತಗುಲಿಸಿದ. ಹುಲ್ಲು ಒಣಗಿತ್ತು. ಕ್ಷಣ ಮಾತ್ರದಲ್ಲಿ ಜ್ವಾಲೆ ಹರಡಿತು. ಮೇಲೆ ಇನ್ನೊಂದಿಷ್ಟು ಒಣಗಿದ ಹುಲ್ಲನ್ನು ಹಾಕಿಬಿಟ್ಟು ಇತ್ತಗೆ ಬಾ. ಯಾರೂ ನೋಡ್ಬಾರ್ದು ಎಂದು ಹೇಳಿ, ಬಾವಿಯಿಂದ ಎರಡು ಬಿಂದಿಗೆ ನೀರನು ಸೇದಿಕೊಂಡು ತಲೆಯ ಮೇಲೆ ಹೊಯ್ದುಕೊಂಡು ಮನೆಯೊಳಕ್ಕೆ ಬರುವ ಮೊದಲು, ಒದ್ದೆ ಬಟ್ಟೆಯನ್ನು ಬಿಚ್ಚಿ ಪೊದೆಯ ಮೇಲೆ ಬಿಸಾಡಿ, ಒಣಗಿದ ಪಂಚೆಯನ್ನು ಸುತ್ತಿಕೊಂಡ,

ಉರಿಯುತ್ತಿದ್ದ ಬೆಂಕಿಗೆ ತಗುಲುವಂತೆ ಮತ್ತಷ್ಟು ಒಣ ಹುಲ್ಲನ್ನು ಹಾಕಿ ವೈಕುಂಠ, ತಾನೂ ಸ್ನಾನ ಮಾಡಿ, ಹಿಂಬಾಗಿಲಿನಲ್ಲಿ ಬಂದು ನಿಂತ. ದೇವರಿಗೆ ದೀಪ ಹಚ್ಚಿ ನಮಸ್ಕಾರ ಮಾಡೋ ಮನಸ್ಸಿಲ್ಲ. ಕಾಫಿ ಕೊಡು ಕುಡಿದು ತೋಟದ ಕಡೆ ಹೋಗ್ತೀನಿ. ವೈಕುಂಠ, ನೀನು ಎಲ್ಲೂ ಹೋಗ್ಬೇಡ. ಮನೇಲೇ ಇರು. ಅದು ಪೂರ್ತಿ ಚೆನ್ನಾಗಿ ಉರೀತೋ ಇಲ್ವೋ ಅಂತ ನೋಡು." ಎಂದ.

"ಮೊದಲು ಚೆನ್ನಾಗಿ ಉರೀಲಿ.... ಬೂದಿಯಾಗಲಿ, ಬೂದಿ ತಣ್ಣಗಾದ ಮೇಲೆ ಕೆರೆಯ ಹತ್ರ ಹಾಕಿದ್ರಾಯ್ತು. ಆ ಜಾಗದ ಮೇಲೆ ಓಡಾಡಬಾರದು ಅಷ್ಟೇ.... ಯಾವ್ದಾದ್ರೂ ಒರ್ಳಳ್ಳೆಯ ಹೂವಿನ ಗಿಡವನ್ನು ಹಾಕಿ ಬೆಳೆಸೋಣ.

ಪಾರಿಜಾತದ ಸಸಿಯನ್ನು ತಂದು ಹಾಕಿಸೋಣ. ಮರ ಆದ್ಮೇಲೆ ಹೂಗಳು ಬಿಟ್ಟು ಉದುರುತ್ವೆ."

"ಪಾರಿಜಾತವೋ ಸಂಪಿಗೆಯೋ ಯಾವುದೋ ಒಂದು ವೈಕುಂಠಂಗೆ ಹೇಳಿದ್ರೆ ಪೇಟೆಯಿಂದ ತಂದು ಹಾಕ್ತಾನೆ." ಅಷ್ಟರಲ್ಲಿ ವೆಂಕಟಾಚಲಯ್ಯ ಬೇಲಿಯ ಬಳಿ

ನಿಂತು ಕರೆದದ್ದು ಕೇಳಿಸಿತು. "ಏನು ವೆಂಕಟಾಚಲಯ್ಯನವರೇ ಕರೆದ್ರಾ ?" ಶಾಸ್ತ್ರಿ ಹೊರಬಂದು ಕೇಳಿದ.

"ಹೂಂ, ಅದೇನದು ಬೆಂಕಿ ? ನೀವೇ ಹಾಕ್ಸಿದ್ರಾ ?"

"ಹೂಂ, ನಾನೇ ಹಾಕಿದ್ದು." ಎಂದು ಹೇಳಿ ನಡೆದದ್ದನ್ನು ತಿಳಿಸಿದ

"ಏನಯ್ಯ ಮನೆಗೆ ನುಗ್ಗಿದ ನಾಗರಹಾವನ್ನು ನಯವಾಗಿ ಓಡಿಸದೇ ಹೊಡೆಸಿಹಾಕಿ, ಯಾರಿಗೂ ತಿಳಿಸದೇ ಗುಟ್ಟಾಗಿ ಶವಸಂಸ್ಕಾರ ಬೇರೆ ಮಾಡಿ ಮುಗಿಸಿದೀಯ. ಪಂಚಾಯ್ತಿಯವರಿಗೆ ತಿಳಿದರೆ ದಂಡ ಕಟ್ಟಬೇಕಾಗುತ್ತಲ್ಲಯ್ಯ.... ಏನಂತಾರೆ ನಿಮ್ಮ ಕಂಠಿ ಭಾವ ?" ಅಣಕಿಸುವ ಧ್ವನಿಯಲ್ಲಿ ಕೇಳಿ ನಕ್ಕ. ಶಾಸ್ತ್ರಿಯೂ ನಗುವನ್ನು ಸೇರಿಸಿ ನುಡಿದ.

"ಅವನು ಊರಲಿಲ್ಲ, ಇಷ್ಟರ ಮೇಲೆ ತಿಳಿದರೆ ತಿಳಿಲಿ, ದಂಡ ಕಟ್ಟಬೇಕಾದ್ರೆ ಕೊಟ್ಟರಾಯ್ತು. ನಾವೂ ಮನುಷ್ಯರೇ, ನಮಗೂ ನೋವು ಆಗದೆ ಇರುತ್ತಾ ?"

"ಗೇಲಿ ಮಾಡಿದ್ನಪ್ಪಾ, ಹಳ್ಳಿ ಮನೆಗಳಲ್ಲಿ ಇದು ಮಾಮೂಲು. ಎಷ್ಟೋ ಜನರಿಗೆ ಈ ಸಂಸ್ಕಾರ ಇದೆಲ್ಲಾ ಗೊತ್ತೇ ಇಲ್ಲ. ಪೊದೆಯಲ್ಲೋ ಹೊಂಡದಲ್ಲೋ ಬಿಸಾಡ್ತಾರೆ ಆದರೆ ಅದು ತಪ್ಪು ಅಂತ ಅವರಿಗೆ ಗೊತ್ತಿಲ್ಲ, ವಿಷದ ಹಲ್ಲುಗಳು ಹಾಗೇ ಭೂಮಿಯಲ್ಲಿ ಉಳಿದುಕೊಂಡು ಬಿಟ್ಟರೆ, ಅಪಾಯ ತುಳಿದವರ ದೇಹಕ್ಕೆ ವಿಷ ಸೇರುತ್ತೆ. ಈ ಸುಡುವ ಪದ್ಧತಿಯೇ ಸರಿ. ಬೇರೆ ಎಲ್ಲಿಯೇ ಆಗಲಿ, ಸತ್ತ ನಾಗರಹಾವನ್ನು ಕಂಡರೆ ಹಾಗೇ ಬಿಡಬಾರದು ಸಂಸ್ಕಾರ ಮಾಡ್ಬೇಕು ಅಂತ ಅದಕ್ಕೇ ಹೇಳೋದು. ಒಳ್ಳೆಯ ಕೆಲಸವನ್ನೇ ಮಾಡಿದೆ ಬಿಡು."

"ನನಗೆ ಇದರ ಬಗ್ಗೆ ಅರಿವಿದೆ. ಇದನ್ನೆಲ್ಲಾ ನಮ್ಮ ತಂದೆ ನಮಗೆ ಚಿಕ್ಕ ವಯಸ್ನಲ್ಲೇ ಹೇಳಿಕೊಟ್ಟಿದ್ದರು. ಅದಕ್ಕೇ ನಾನೇ ಮಾಡಿದೆ ನಿಮ್ಮ ಬೆಳಗಿನ ಕೆಲಸ ಇಲ್ಲಾ ಆಯ್ತಾ ? ಇನ್ನು ತೋಟಕ್ಕೆ ಹೋಗಿಲ್ಲ."

"ದೇವರ ಪೂಜೆ ಮಾಡ್ತಿದ್ದಾಗ ಸುಟ್ಟ ವಾಸನೆ ಬಡೀತು, ಆಚೆ ಬಂದು ನೋಡಿದೆ ಹೊಗೆ ಕಾಣಿಸ್ತು, ಕೇಳಿಯೇ ಬಿಡೋಣ, ಅಂತ ಕರೆದೆ, ಹೇಗಾದರೂ ಆಗಲಿ, ಈಶ್ವರನ ಗುಡೀಲಿ ಒಂದು ರುದ್ರಾಭಿಷೇಕ ಮಾಡಿಸಿ ಬಿಡು ಪಾಪವೂ ಪರಿಹಾರ ಆಗುತ್ತೆ. ಮನಸ್ಸಿಗೆ ನೆಮ್ಮದಿಯೂ ಸಿಗುತ್ತೆ. ಭಯವೂ ನಿವಾರಣೆ ಆಗುತ್ತೆ."

"ಹೂಂ, ಹಾಗೇ ಮಾಡ್ತೀನಿ, ಪಂಚಾಯ್ತಿಯವರಿಗೆ ತಿಳಿಸ್ಬೇಕಾ ?"

"ಪಂಚಾಯ್ತೀಲಿ ತೀರ್ಮಾನ ಕೊಡೋನು ನಾನೇ, ಇಷ್ಟು ಹೊತ್ತಿಗಾಗ್ಲೇ ಹಳ್ಳಿಯವರಿಗೆ ವಿಷಯ ತಿಳಿದಿದ್ರೂ ತಿಳಿದಿರುತ್ತೇ ಕೇಳಿದರೆ ಉತ್ತರ ಹೇಳೋದು, ಇಲ್ದಿದ್ರೆ ಸುಮ್ಮನಿದ್ದು ಬಿಡೋದು. ಶ್ರೀಕಂಠಯ್ಯ ಇದ್ದಿದ್ದರೆ ಒಂದು ಹಗರಣ ಮಾಡ್ದೇ ಇರ್ತಿರಲಿಲ್ಲ."

"ಅವನಿಗೆ ಮಾಡುಕ್ಕೆ ಬೇರೆ ಕೆಲಸವಿಲ್ಲ."

"ಹೂಂ, ಬರೀ ಕಿತಾಪತಿ ಮನುಷ್ಯ, ನಂಗಿಂತ ನಿಂಗೇ ಚೆನ್ನಾಗಿ ಗೊತ್ತು, ಎಷ್ಟಾಗಲೀ ಅವರು ನಿನ್ನ ಭಾವ."

"ಅದೇ ಕಷ್ಟಕ್ಕೇ ಬಂದಿರೋದು, ಆಡೋ ಹಾಗಿಲ್ಲ, ಅನುಭವಿಸೋ ಹಾಗಿಲ್ಲ." ಶಾಸ್ತ್ರಿ ಪೆಚ್ಚು ನಗೆಯನ್ನು ನಕ್ಕ. ವೆಂಕಟಾಚಲಯ್ಯ ತುಂಟ ನಗೆಯನ್ನು ನಕ್ಕು ಅಲ್ಲಿಂದ ಸರಿದ.

* * *

ಬೇಗ ಹೋಗೋ ವೈಕುಂಠಾ ರೈಲು ಬರೋ ಹೊತ್ತಾಯ್ತು, ವೈಕುಂಠ ಹೊದ್ದ ಟವೆಲ್ಲನ್ನು ಕೊಡವುತ್ತಾ ರೈಲ್ವೇ ಸ್ಟೇಷನ್ ಕಡೆಗೆ ಓಡಿದ. ರೈಲು ಬಂದು ನಿಂತಿತು. ಪದ್ಮಿನಿ ರಾಗಿಣಿಯರು, 'ವೈಕುಂಠಾ' ಅಂತ ಕೂಗಿಕೊಂಡರು, ಇಬ್ಬರೂ ಅವನ ಕೈ ಹಿಡಿದು ಇಳಿದರು. ಶಾಂತಾ ಲಲಿತರ ಕೈಲಿದ್ದ ಚೀಲಗಳನ್ನು ಎತ್ತಿಕೊಂಡು ಇಬ್ಬರೂ ಇಳಿದು, ಸಾತಕ್ಕನಿಗೆ ಇಳಿಯಲು ನೆರವಾದರು.

"ಏನೋ ವೈಕುಂಠ ಬಹಳ ಮೌನವಾಗಿ ಬಿಟ್ಟಿದ್ದೀಯ, ಒಂದೇ ದಿನದಲ್ಲಿ ನಮ್ಮನ್ನೆಲ್ಲಾ ಮರೆತುಬಿಟ್ಯಾ ಹೇಗೆ ?" ಸಾತಕ್ಕ ಮೌನವನ್ನು ಮುರಿದಳು

"ಏನಿಲ್ಲವ್ವಾ.... ನೆನ್ನೆ ಚಂಜೆ ಒಂದು ಗಟ್ನೆ ನಡೆದೋಯ್ತು...." ಸಾತಕ್ಕ ದಿಗಿಲುಗೊಂಡಳು

"ಏನಾಯ್ತೋ.... ಮನೇಲಿ ಎಲ್ಲಾ ಹುಶಾರಾಗಿದಾರೆ ತಾನೇ...."

"ಊನ್ರವ್ವಾ ಎಲ್ಲಾ ಸೆಂದಾಕವ್ರೇ....." ನಡ್ಡದ್ದೇ ಬೇರೆ ಎನ್ನುತ್ತಾ ಹಿಂದಿನ ರಾತ್ರಿ ನಡೆದದ್ದನ್ನು ತಿಳಿಸಿದ. ಸಾತಕ್ಕ ಬಹಳ ನೊಂದುಕೊಂಡಳು ತಾನು ಮನೆಬಿಟ್ಟು ಹೋಗದೇ ಇದ್ದಿದ್ರೆ ಈ ಘಟನೆ ನಡೆಯುತ್ತಿರಲಿಲ್ಲವೇನೋ ಅಂತಂದುಕೊಂಡಳು. ಶಾಂತಾ ಲಲಿತಾ ಭಯಗೊಂಡರು. ಈಗಾಗ್ಲೇ ಕತ್ತಲೆಯಾಗಿದೆ ಮನೆಯೊಳಗೆ ಏನೇನೂ ಸೇರಿಕೊಂಡಿವೆಯೋ ? ಕಾಲಿಡುವುದು ಹೇಗೆ ? ಪದ್ಮಿನಿ ರಾಗಿಣಿಯರಿಗೆ ಹೆಚ್ಚು ಏನೂ ಅರ್ಥವಾಗದ ವಯಸ್ಸು, ವೈಕುಂಠನ ಕೈ ಹಿಡಿದು ರಸ್ತೆಯಲ್ಲಿ ಕುಣಿಯುತ್ತಾ ಸಾಗಿದರು. ಒಳಕ್ಕೆ ಕಾಲಿಡುತ್ತಿದ್ದಂತೆಯೇ ಶಾಂತಾ ಅತ್ತಿತ್ತ ನೋಡುತ್ತಾ ಕೇಳಿದಳು.

"ಏನಮ್ಮಾ.... ನಿಂಗೆ ಭಯ ಆಗ್ತಿಲ್ವಾ ? ಕತ್ತಲೇಲಿ ಹೇಗೆ ಓಡಾಡೋದು?"

"ಭಯ ಯಾಕೇ ಶಾಂತಾ ಅವೂ ನಮ್ಮ ಹಾಗೆ ಜೀವಿಗಳೇ, ನಮಗಿಂತ ಹೆಚ್ಚಾಗಿ ಅವುಗಳಿಗೂ ಭಯ ಇರುತ್ತೇ, ತಮ್ಮನ್ನು ತಾವು ಕಾಪಾಡಿಕೊಳ್ಳುವುದ ಕ್ಕೋಸ್ಕರ ಮನುಷ್ಯನ್ನ ಹೆದರಿಸುತ್ತವೆ. ನಾವು ಸುಮ್ಮನಿದ್ದರೆ, ಅವೂ ಸುಮ್ಮನಿರುತ್ತವೆ. ಇಲ್ಲದಿದ್ದರೆ ಕಚ್ಚುತ್ತವೆ." ಸಾತಕ್ಕ ನುಡಿದಳು

"ಹಾಗಾದ್ರೆ, ಅದು ತಾನಾಗಿಯೇ ಹೊರಟು ಹೋಗಲಿ ಅಂತ ಕಾದು ಕೂತಿರಬೇಕಾಗಿತ್ತ ಅತ್ತೇ?"

"ಹಾಗೆಲ್ಲಿ ಅಂದೆ ನಾನು? ಕೊಂದು ಹಾಕಬಾರದಾಗಿತ್ತು ಓಡಿಸಬಹು ದಾಗಿತ್ತು, ಹೋಗಲಿ ಬಿಡು ಆದದ್ದಾಯ್ತು, ಇನ್ಯಾಕೆ ಆ ಮಾತು ?"

"ಎಲ್ಲಾ ಹೇಳಿ ಬಿಟ್ನಾ?" ಲಕ್ಷ್ಮಿ ಆಕ್ಷೇಪಣೆ ಮಾಡಿದಳು.

"ಅವನದ್ದು ತಪ್ಪಿಲ್ಲ ಲಕ್ಷ್ಮಿ, ಅದಕ್ಕೆ ತಡಕೊಳ್ಳೊಕೇ ಅಗಿಲ್ಲ, ಎಲ್ಲಾ ಒದರಿಬಿಟ್ಟ, ಫಲಾಹಾರಕ್ಕೆ ಏನಾದ್ರೂ ಮಾಡಿದೀಯ ? ಕೈ ಕಾಲು ತೊಳೆದು ಮಡಿ ಉಟ್ಕೊಂಡು ಬರ್ತೀನಿ, ನೀವು ಎಲ್ರೂ ರೈಲು ಮೈಲಿಗೆಯ ಬಟ್ಟೆಗಳನ್ನು ಬಿಚ್ಚಿ ಕೈ ಕಾಲು ತೊಳೆದು ಬೇರೆ ಬಟ್ಟೆಗಳನ್ನು ಹಾಕ್ಕೊಳ್ಳಿ."

"ಮಡೀಲಿ ನಿಮಗೆ ಅಂತ ಅವಲಕ್ಕಿ ಒಗ್ಗರಣೆ ಮಾಡಿದೀನಿ, ನೀವುಗಳೂ ಏಳ್ರೇ, ಮಧ್ಯಾಹ್ನ ಏನು ಊಟ ನಿಮ್ಮ ಚಿಕ್ಕಪ್ಪನ ಮನೇಲಿ ?

"ವಾಂಗೀಭಾತ್, ಬೆಂಡೇ ಕಾಯಿಗೊಜ್ಜು ಅನ್ನಸಾರು ಮಜ್ಜಿಗೆ ಎಲ್ಲವೂ ಚೆನ್ನಾಗಿತ್ತು, ಹಪ್ಪಳ ಸಂಡಿಗೆ ಕೂಡ ಕರಿದಿದ್ರು."

"ತರಕಾರಿ ನಮ್ಮ ಮನೇದು, ಹಪ್ಪಳ ಸಂಡಿಗೆ ನಮ್ಮ ಮನೇದು ಎಲ್ಲಾ ಹುಶಾರಾಗಿದಾರಾ ? ನಿಮಗೆ ಇನ್ನೊಂದು ಸ್ವಲ್ಪ ಹಾಕ್ಲಾ ?"

"ಹುಂ ಲಕ್ಷ್ಮಿ...." ಬಡಿಸಿದ್ದನ್ನು ಮೌನವಾಗಿ ಉಂಡು ಸಾತಕ್ಕ ಎದ್ದಳು. ಆಯಾಸಗೊಂಡಿದ್ದರಿಂದ ಬೇಗ ಮಲಗಿದಳು. ರಾತ್ರಿಯೆಲ್ಲಾ ಸಾತಕ್ಕ ಹೊರಳಾಡುತ್ತಲೇ ಇದ್ದಳು.

* * *

ಬೆಳಗಾದ ಮೇಲೆ ಎಲ್ಲರನ್ನು ವೈಕುಂಠ ಹಾವನ್ನು ಸಂಸ್ಕಾರ ಮಾಡಿದ ಸ್ಥಳಕ್ಕೆ ಕರೆದೊಯ್ತು, ಎಲ್ಲವನ್ನು ವಿವರಿಸಿ ಹೇಳಿದ, ಇನ್ಮೇಲೆ ಈ ಜಾಗಾನ ಯಾರೂ ತುಳಿಯಕ್ಕಾಗ್ದು" ಎಂದ

"ತುಳಿದ್ರೆ ಏನಾಗುತ್ತೇ ?"

"ತುಳಿದ್ರೇ ಕನಸ್ನಲ್ಲಿ ಆವು ಬಂದು ಕಚ್ತೈತೆ"

"ಕನಸ್ನಲ್ಲಿ ತಾನೇ ?..... ಕನಸ್ನಲ್ಲಿ ಹಾವು ಕಚ್ಚಿದರೆ ಒಳ್ಳೇದಂತೆ."

"ಭಯ ಆಗುಲ್ವೇನೇ ಶಾಂತಾ....."

"ಭಯ ಎಲ್ಲಾ ವೈಕುಂಠನಂತೋರ್ಗೆ."

"ಔದ್ರವ್ವಾ, ನಂಗೆ ಕನಸ್ನಲ್ಲಿ ಆವು ಬಂದ್ರೆ ಭಯ ಆಗ್ತೈತೆ ನೆನ್ನೆ ರಾತ್ರಿ ಅಟ್ಟದ ಮ್ಯಾಗೆ ಮನಗಿದೋನ್ಗೆ ನಿದ್ದೇನೇ ಇಲ್ಲ, ಒಂದೇ ಬಯಾ. ಆಮ್ಯಾಕೆ ಎದ್ದೋಗಿ ಗಾಡೀಲಿ ಮನ್ಗಿದ್ದೆ."

"ಮೊದ್ಲು ನಿನ್ನ ಭಾಷೇನ ಸರಿ ಮಾಡ್ಕೋ, ಈ ಬಯ ಗಿಯಾ ಯಾವ್ದೂ ಇರುಲ್ಲ," ಶಾಂತಾ ನಕ್ಕಳು ಅವನು ತಲೆ ಕೆರ್ಕೊಂಡು ನುಡಿದ.

"ಪ್ಯಾಟೆಯಿಂದ ಪಾರಿಜಾತದ ಸ್ವಸಿ ತಂದಾಕ್ಲೋ... ಸಂಪ್ಗೇ ಸ್ವಸಿ ತಂದಾಕ್ಲೋ....?"

"ಯಾವ್ದೂ ಬೇಡ ಮಲ್ಲಿಗೆ ಬಳ್ಳಿನ ತಂದ್ಹಾಕು, ಬೇಕಾದಷ್ಟು ಹೂ ಬಿಡುತ್ತೇ, ಪೂಜೆಗೂ ಆಗುತ್ತೆ ಮುಡ್ಕೊಳ್ಳೋಕೂ ಆಗುತ್ತೆ. ಸಂಪಿಗೆ ಮರಾನ ಹತ್ತಿ ಹೂವನ್ನು ಕೊಯ್ಯಬೇಕಾಗುತ್ತೆ. ಪಾರಿಜಾತ ಎಲ್ಲಾ ಉದುರಿ ನೆಲದ ಮೇಲೆ ಬೀಳುತ್ತೆ."

"ಔದಲ್ರಾ.... ನಂಗೆ ಒಳ್ದೇ ಇರ್ಲಿಲ್ಲ."

"ಏನು ಒಳಿಯುತ್ತೆ ನಿನ್ತಲೆ!" ಲಲಿತ ರೇಗಿಸಿದಳು ಅವನು ನಕ್ಕ.

"ಈಶ್ವರನ ದೇವಾಸ್ಥಾನದಲ್ಲಿ ಅಭಿಷೇಕಕ್ಕೆ ಕೊಟ್ಟಿದ್ದೆ, ನಾಗಪ್ಪಭಟ್ಟರು ಪ್ರಸಾದ ತಂದು ಕೊಟ್ಟಿದಾರೆ, ಎಲ್ರೂ ಸ್ನಾನ ಮಾಡಿ ತಗೊಳ್ಳಿ."

"ಒಳ್ಳೆ ಕೆಲ್ಸ ಮಾಡಿದೆ ಗುಂಡಣ್ಣ, ನಮ್ಮಿಂದ ಯಾಕೆ ಹೀಗೆ ಪಾಪ ಕೃತ್ಯಗಳನ್ನು ಮಾಡಿಸ್ತೀಯೋ ಭಗವಂತಾ ಅಂತ ಯೋಚಿಸ್ತಿದ್ದೆ."

"ಆದದ್ದಾಯ್ತು, ಸಾತು, ನಾವೇನು ಬೇಕು ಅಂತ ಮಾಡ್ತೀವಾ ? ಹೋಗಲಿ, ಶೀನನ ಮನೆ ವಿಷಯ ಏನು ? ಎಲ್ಲಾ ಹೇಗಿದಾರೆ.... ಏನು ಹೆಚ್ಚಿನ ವಿಷಯ ?"

"ಶೀನಂಗೆ ಫಾರೆಷ್ಟ್ ಆಫೀಸ್ನಲ್ಲಿ ಕೆಲ್ಸ ಸಿಕ್ಕಿದೆಯಂತೆ, ಎರಡು ತಿಂಗಳಿಂದ ಹೋಗ್ತಿದಾನಂತೆ, ಸಂಬಳ ಹದಿನೈದು ರೂಪಾಯಿ ಅಂತೆ."

"ಅವನೇ ಹೇಳಿದ್ನಾ? ಹೋದವಾರ ಅವನ ಮನೆಗೆ ಹೋದಾಗ ನಂಗೆ ಹೇಳ್ಲೇ ಇಲ್ಲ."

"ನೋಡಿದ್ರಾ ನಿಮ್ಮ ತಮ್ಮನ್ನ... ನಿಮ್ಮ ಹತ್ರ ಇಸ್ಕೊಂಡ ಸಾಲದ ಹಣಾನ ಕೊಡಬೇಕಾಗುತ್ತಲ್ಲ ಅಂತ ಹೇಳಿಲ್ಲ." ಅಷ್ಟೇ.

"ನೀನು ಸ್ವಲ್ಪ ಸುಮ್ನಿರ್ತೀಯಾ ? ಅವನು ಕೊಡದೇ ಇದ್ದರೆ ಬೇಡ ಅವನು ಹೊರಗಿನವಲ್ಲ, ವಾಪಸ್ಸು ಕೊಡು ಅಂತ ನಾನು ಹೇಳಿರಲೇ ಇಲ್ಲ

"ಹಾಗಾದ್ರೆ ಕೆಲಸ ಸಿಕ್ಕಿದ್ದನ್ನು ಹೇಳಬಹುದಾಗಿತ್ತಲ್ಲ....ಈಗ್ಲಾದ್ರೂ ನಿಮ್ಮ ಹಣಾನ ನಿಮಗೆ ಕೊಡಬೇಕಾದದ್ದು ಅವರ ಧರ್ಮ. ಇಸ್ಕೊಂಡಿದ್ದನ್ನ ಮರೆತು ಬಿಟ್ರೆ ಹೇಗೆ."

"ಯಾವುದೇ ಮಾತ್ನದಿದ್ರೂ ದುಡ್ಡಿನ ವಿಷಯಕ್ಕೇ ಬರ್ತೀಯಲ್ಲ ನೀನು."

"ಹೌದು ಮತ್ತೆ, ಕೊಟ್ಟೋನು ಕೋಡಗ; ಇಸ್ಕೊಂಡೋನು ಈರಭದ್ರ ಅಂತ ಹೇಳೊ ಮಾತು ಖಂಡಿತಾ ನಿಜ.... ನಿಮ್ಮ ವಿಷಯದಲ್ಲಿ."

"ಹೌದು, ನಾನು ಕೋಡಗ, ಈಗ ನಿಂಗೆ ಹಣ ಬೇಕಾ ಕೇಳು, ನಾನು ಕೊಡ್ತೀನಿ ಆದ್ರೆ, ನಾನು ಅವರಿವರಿಗೆ ಕೊಟ್ಟ ಹಣದ ಮಾತನ್ನೆತ್ತಿ ಹಂಗಿಸಿ ಹಂಗಿಸಿ

ಅನ್ನಬೇಡ."

"ಅಯ್ಯೋ..... ಅದೇನಾಯ್ತು ನಿಮಗೀಗ ? ನಾನೇನಂದೆ ನೀವೇ ಹೇಳಿ ಅತ್ತಿಗೆ ? ಅನ್ನಬಾರದ್ದನ್ನ ಏನಾದ್ರೂ ಅಂದ್ನೇ ?"

"ಹೌದು ಕಣೋ ಗುಂಡಣ್ಣ ಲಕ್ಷ್ಮಿ ಹೇಳೋದು ಸರಿ. ಶೀನಂಗೆ ಈಗ ಸಂಪಾದನೆ ಇದೆ. ನೀನು ಕೇಳದಿದ್ದರೂ ಪರವಾಗಿಲ್ಲ, ಅವನೇ ಕೊಡಬೇಕು ನಿನ್ನ ಮಗಳ ಮದುವೆ ಹೊತ್ತಿಗಾದ್ರೂ ಕೊಡ್ಬೇಕು, ನೀನ್ಯಾಕೆ ಹೀಗಾಡ್ತೀಯೋ....."

"ನಾನಂತೂ ಕೇಳೋದಿಲ್ಲ, ಅವನಿಗೆ ಮನಸ್ಸಿದ್ರೆ ಕೊಡಲಿ,"

"ಹೀಗೇ ನೀನು ಸಾಲ ಕೊಟ್ಟೂ ಕೊಟ್ಟೂ ಎಷ್ಟು ಹಣಾನ ಕಳ್ಕೊಂಡಿ ದಿಯೋ... ಯಾರಾದ್ರೂ ಅವರಾಗಿಯೇ ಕೊಟ್ಟಿದಾರಾ ?"

"ಕೊಡ್ದಿದ್ರೆ, ಬೇಡ, ಯಾವುದೋ ಜನ್ಮದ ಋಣ ಸಂದಾಯವಾಯ್ತು ಅಂತ ಅಂದ್ಕೊತೀನಿ."

"ಹೌದು ಹೌದು ಈ ಹಳ್ಳಿಗೆ ಬಂದಿರೋದೇ ಋಣ ಸಂದಾಯ ಮಾಡುಕ್ಕೆ, ದಾನಶೂರ ಕರ್ಣನ ವಂಶದವರು, ಕೇಳಿ ಕೇಳ್ದೋರಿಗೆಲ್ಲಾ ಕೈ ಎತ್ತಿ ಕೊಡೋದೆ. ಇನ್ಮುಂದೆ ನಿಮ್ಮ ತಮ್ಮನ ಮನೆಗೆ ಹೋಗ್ಲೇ ಬೇಡಿ. ಹೋದ್ರೂ ತಿಂಡಿ ಗಿಂಡಿ ತಗೊಂಡು ಹೋಗ್ಬೇಡಿ, ಅವರಿಗೆ ಇಲ್ಲದ ವಾಂಛಲ್ಯ ನಿಮಗ್ಯಾಕೆ ?"

"ಅದನ್ನೆಲ್ಲಾ ನೀನು ನಂಗೆ ಹೇಳ್ಬೇಡ, ನೀನೇ ತರಕಾರಿ, ಹಣ್ಣು ಬೆಣ್ಣೆ ತುಪ್ಪಾನ ಕಳಿಸ್ಕೊಟ್ಟೆ, ತಿಂಡಿಗಳನ್ನು ಮಾಡಿ ಕಳಿಸ್ದೆ, ನಿಂಗ್ಯಾಕೆ ಅಂತಹ ಕೆಟ್ಟ ಬುದ್ಧಿ ಬಂತು?"

"ನಂಗೇನು ಗೊತ್ತಿತ್ತು, ಅವರಿಗೆ ಕೆಲ್ಸ ಸಿಕ್ಕಿದೆ ಅಂತ. ಕಷ್ಟದಲ್ಲಿದಾರೆ ಮಕ್ಕಳು ಒಂದೆರಡು ತಿನ್ನಲಿ ಅಂತ ಕಳಿಸ್ದೆ, ನಮ್ಮ ಒಳ್ಳೆತನಕ್ಕೆ ಬೆಲೆ ಇಲ್ಲ, ಇನ್ಮುಂದೆ ನಾನು ಏನನ್ನೂ ಕಳಿಸುಲ್ಲ."

"ಭಾಳ ದೊಡ್ಡ ಕೆಲಸ, ಇದ್ದರೆ ನಿನ್ನ ಹಾಗಿರಬೇಕು ನಿನ್ನ ಹಾಗೆ ಮಾತಾಡ್ಬೇಕು. ಮಕ್ಕಳಿಗೂ ಇದನ್ನೇ ಕಲಿಸು. ಮುಂದೆ ಉದ್ಧಾರವಾಗ್ತಾರೆ ಶಾಸ್ತ್ರಿ ಮೂದಲಿಸಿ ನುಡಿದು ಅಲ್ಲಿಂದ ಎದ್ದು ಹೋದ."

"ನೋಡಿ ಅತ್ತಿಗೇ.... ನನ್ನ ಮೇಲೆ ಹೇಗೆ ರೇಗಾಡ್ತಾರೆ ನೆನ್ನೆಯಿಂದ ನಾನು ಮೂಕ ಸಂಕಟವನ್ನು ಅನುಭವಿಸ್ತಿದೀನಿ ಇವರ ಮಾತು ನೋಡಿದ್ರೆ ಹೀಗೆ"

"ಶೀನನ ಮೇಲೆ ಅವನಿಗೂ ಕೋಪ ಬಂದಿದೆ. ಅದನ್ನು ಮುಚ್ಚಿಡೋಕೆ ಹೀಗೆ ಮಾತಾಡ್ತಾನೆ. ಎಷ್ಟಾಗಲೀ ತಮ್ಮ ಅಲ್ವಾ ? ಅವನೂ ಅಷ್ಟೇ, ಅಣ್ಣನಾದವನಿಗೆ ಒಂದ್ಮಾತು ತಿಳಿಸ್ಬೇಕು ಅನ್ನೋ ಅರಿವು ಬೇಡ್ವಾ? ಇದೆಲ್ಲಾ ಆ ನಾಗೂದೇ ಚಿತಾವಣೆ. ಮನೆಯ ವಹಿವಾಟೆಲ್ಲಾ ಅವಳದ್ದೆ. ಅವರ ಮನೆಗೆ ಹೋದರೆ, ನಮ್ಮ ಸ್ವಂತದವರು ಅಂತ ಅನ್ನಿಸೋದೆ ಇಲ್ಲ.... ಬಂದರೆ ಸಾಕೆಂದೆನಿಸಿತ್ತು."

"ಒಳ್ಳೇದೇ ಮಾಡಿದ್ರಿ ಅತ್ತಿಗೆ. ನೆನ್ನೆಯಂತೂ ಮನೆ ಬಿಕೋ ಅಂತಿತ್ತು. ಜೊತೆಗೆ ಈ ಪ್ರಕರಣ. ನೀವು ಇದ್ದಿದ್ದರೆ ಹೀಗೆಲ್ಲಾ ಆಗ್ತಾನೆ ಇರ್ಲಿಲ್ಲ. ಲಕ್ಷ್ಮಿ ವ್ಯಥೆಯಿಂದ ನುಡಿದಳು. ಅವಳಿಗೆ ಹಿಂದಿನ ದಿನದ ಮಧ್ಯಾಹ್ನದ ಸರಸವೂ ನೆನಪಿಗೆ ಬಂದಿತು ಆದರೆ ಅದನ್ನು ಅತ್ತಿಗೆಗೆ ಹೇಳಲಾಗದು."

* * *

ಶಾಂತಾ ಎಲ್.ಎಸ್. ಪರೀಕ್ಷೆಯಲ್ಲಿ ಪಾಸಾಗಿದ್ದಳು. ಪದ್ಮಿನಿ ರಾಗಿಣಿಯರೂ ಪೇಟೆಯ ಸ್ಕೂಲಿಗೆ ಸೇರಿಕೊಂಡಿದ್ದರು. "ಅಣ್ಣಾ, ನಾನೂ ಹೈಸ್ಕೂಲಿಗೆ ಸೇರ್ಕೊಳ್ತಿನಿ" ಶಾಂತಾ ತನ್ನ ಆಸೆಯನ್ನು ವ್ಯಕ್ತಪಡಿಸಿದಳು

"ಏನೂ ಬೇಡ..... ಮದುವೆ ನಿಶ್ಚಯ ಮಾಡಲು ಅವರೆಲ್ಲಾ ಬರ್ತಿದಾರೆ."

"ಅತ್ತೇ.... ಅಣ್ಣಂಗೆ ಹೇಳಿ, ನಂಗೀಗ್ಲೇ ಮದ್ವೆ ಬೇಡ. ನಾನು ಹೈಸ್ಕೂಲಿಗೆ ಸೇರ್ಕೊಂಡು ಓದ್ಬೇಕು."

"ನಿನ್ನ ಗಂಡನ ಮನೆಯವರ್ನ ಒಂದ್ಮಾತು ಕೇಳೋಣ...ಅಕ್ಕ ಬದುಕಿದ್ದಿದ್ದರೆ ಇಷ್ಟು ಹೊತ್ತಿಗೆ ಮದುವೆಯಾಗಿರುತ್ತಿತ್ತು." ಶಾಂತ ಸಪ್ಪಗಾದಳು

"ಮಳೆಗಾಲ ಪ್ರಾರಂಭವಾಗುವ ಮೊದಲೇ, ಸಂಡಿಗೆ, ಹಪ್ಪಳ, ಬಾಳಕ ಮಾಡಿಡಬೇಕು. ಮದುವೆ ಗೊತ್ತಾಗಿ ಬಿಟ್ಟ ಮೇಲೆ ಮಾಡುಕ್ಕೆ ಬಿಡುವಾಗಲ್ಲ."

"ದಿನಾ ಸ್ವಲ್ಪ ಸ್ವಲ್ಪ ಅರಳು ಹುರಿಯೋಣ..... ನಂಗೆ ಆ ಕೆಲಸ ಇರಲಿ ಸಾತಕ್ಕ ಆ ಕೆಲಸವನ್ನು ವಹಿಸಿಕೊಂಡಳು ವೈಕುಂಠಾ ಒಂದು ಭತ್ತದ ಮೂಟೆಯನ್ನು ತೆಗೆದು, ಒಂದು ಮೂಲೆಯಲ್ಲಿ ಸುರಿದುಬಿಡು, ಸ್ವಲ್ಪ ಸ್ವಲ್ಪ ವಂದರಾಡಿಕೊಡು. ಜೊಳ್ಳು ಪೊಳ್ಳನ್ನೆಲ್ಲ ಕೇರಿ, ಭತ್ತವನ್ನು ಕುದಿಯುವ ನೀರಿಗೆ ಹಾಕಿ ಬಸಿದು ಇಟ್ಕೊಂಡು ಸ್ವಲ್ಪ ಸ್ವಲ್ಪವೇ ಓಡಿನಲ್ಲಿ ಹುರಿದಿಟ್ಟುಕೊಂಡರಾಯ್ತು. ಈ ಭತ್ತ ಚೆನ್ನಾಗಿದೆ ಅರಳು ಚೆನ್ನಾಗಿ ಬರುತ್ತೆ, ಒದಗುತ್ತೆ ಎಲ್ರೂ ಕೂತು ಆರಿಸಿದರೆ ನಾಲ್ಕು ದಿನದ ಕೆಲಸ ಸಂಡಿಗೇನ ಇಡೋ ಕೆಲಸ ಲಕ್ಷ್ಮೀದು. ಅವಳ ಹಾಗೆ ಇಡೋ ಸಹನೆ ನನಗಿಲ್ಲ." ಸಾತಕ್ಕ ಪಟಪಟನೆ ಮಾತನಾಡಿದಳು

"ತುಂಬಾ ಮಾಡೋದು ಬೇಡ, ದಿನಾ ಒಲೆ ಮುಂದೆ ಕೂತ್ರೆ ನಿಮ್ಮ ಮೈಗಾಗಲ್ಲ, ಒಲೆ ಶಾಖ, ಮರಳಿನ ಶಾಖ, ಸಾಕು ಸಾಕಾಗುತ್ತೆ."

"ಇನ್ನು ಶುರೂನೇ ಮಾಡಿಲ್ಲ.... ಎಲ್ರೂ ಸೇರಿ ಮಾಡಿದರೆ ತಾನೇ ಕೆಲಸ ಕೈಗೊಡೂದು. ಪಾತೂಗೂ ಹೇಳಿ ಕಳಿಸೋಣ......"

"ಪಾತು ಬಂದು ಏನ್ಮಾಡ್ತಾಳೆ, ಸುಸ್ತು ಅಂತ ಸೊಂಟ ನೀವಿಕೊಳ್ತಾಳೆ ಅವಳ ಕೈಲಿ ಅಗೋದೆ ಇಲ್ಲ. ಮಕ್ಕಳ್ನ ಹೆರೋದು ಒಂದೇ ಕೆಲಸ."

"ಏನೇ ಲಕ್ಷ್ಮಿ ಗುಂಡಣ್ಣ ಯಾಕೆ ಹೀಗೆ ಮಾತಾಡ್ತಾನೆ? ಎಂದೂ ಹೀಗೆಲ್ಲಾ

ಆಡ್ಡೋನಲ್ಲ." ಸಾತಕ್ಕ ಆಶ್ಚರ್ಯದಿಂದ ಕೇಳಿದಳು

"ಪಾತು ಮತ್ತೆ ಬಸಿರಿ, ನಾಲ್ಕು ತಿಂಗಳಾಗಿದೆಯಂತೆ, ಮೀನಾಕ್ಷಿಯೂ ಬಸಿರಿಯಂತೆ."

"ಅಜ್ಜಿಯಾಗುವ ವಯಸ್ಸಾದ್ರೂ, ಪಾತೂಗೆ ತಿಳುವಳಿಕೆ ಬರಲಿಲ್ಲ, ನಂಗೇನಾಗ್ಬೇಕು ? ಏನಾದರೂ ಆಡಿದ್ರೆ ಕೆಟ್ಟೋಳಾಗೋಳು ನಾನು...."

"ಯಾರಿಗೂ ಹೇಳ್ಬೇಡ ಅಂತ ಹೇಳಿದ್ರು, ಅವರನ್ನ ಕೇಳ್ಬೇಡಿ ಅತ್ಗೆ ಏನಂದುಕೊಳ್ತಾರೋ ?"

"ನಾನ್ಯಾಕೆ ಕೇಳ್ಲಿ ? ಅವಳೇನು ಮುಚ್ಚಿಡ್ತಾಳೆ ? ಜಾಣೆ ತರಹ ಮಾತಾಡ್ತಾಳೆ ಇನ್ನು ಅವಳ ಕೈಲಿ ಯಾವ ಕೆಲಸವೂ ಹರಿಯುಲ್ಲ.... ನಮಗೆ ಯಾರ ಸಹಾಯವೂ ಬೇಡ ವೈಕುಂಠ ಇದಾನೆ. ಜೈ ಅನ್ನಿಸಿಬಿಡೋಣ."

ನಾಲ್ಕು ದಿನಗಳಲ್ಲಿ ಬೇಕಾಗುವಷ್ಟು ಅರಳನ್ನು ಹುರಿದು ವಂದರಾಡಿ ಇಟ್ಟಿದ್ದಾಯ್ತು. ಮನೆಯವರೆಲ್ಲಾ ಸೇರಿ ಕೂತಾಗ ನಿಂತಾಗ ಆರಿಸಿದ್ದಾಯಿತು.

"ನಾನು ವಸಿ ಆರಿಸ್ಕೊಡ್ಲಾ ಅವ್ವಾವ್ರೇ..." ವೈಕುಂಠ ಕೇಳಿದ

"ನಂಗೆ ಮಡಿಗೆ ಬರುಲ್ಲವಲ್ಲೋ....."

"ನಾನು ಮಡಿಯಾಗ್ಬೇಕಾದರೆ ಏನ್ಮಾಡ್ಬೇಕು ಯೇಳಿ, ಅಂಗೇ ಮಾಡ್ತೀನಿ"

"ಪೆದ್ದ ಮುಂಡೇದೇ..ನಿನ್ನ ಮಾತಿಗೆ ನಾನು ಏನು ಹೇಳ್ಲಿ? ನಮ್ಮ ಜಾತೀಲಿ ಹುಟ್ಟಿದ್ದಿದ್ರೆ, ಮೂರೆಳೆ ಜನಿವಾರ ಹಾಕಿಸಿ, ಗಾಯತ್ರಿ ಉಪದೇಶ ಮಾಡು ಅಂತ ಶಾಸ್ತ್ರಿಗೆ ಹೇಳ್ತಿದ್ದೆ.

"ಅಂಗಂದ್ರೇ...."

"ನಿಂಗೆ ಗೊತ್ತಾಗುಲ್ಲ ಬಿಡು ಇನ್ನೆಂದಾದ್ರು ಹೇಳ್ತೀನಿ" ಆರಿಸಿಟ್ಟ ಅರಳನ್ನು ಉಪ್ಪು, ಖಾರ ಹಾಕಿ ಹದವಾಗಿ ಕಲೆಸಿ, ಬೂದುಗುಂಬಳ ಕಾಯಿಯನ್ನು ಸಣ್ಣದಾಗಿ ಹೆಚ್ಚಿ ಬೆರೆಸಿ, ಸಣ್ಣ ಸಣ್ಣ ಉಂಡೆಯಂತೆ, ಮೊರಗಳಲ್ಲಿ ಸಂಡಿಗೆ ಇಟ್ಟಳು ಲಕ್ಷ್ಮಿ.... ಬಿಸಿಲು ಏರುವ ಮೊದಲೇ ಇಟ್ಟಿದ್ದು ಮುಗಿದಿತ್ತು."

"ಲಲಿತೂ ಇಲ್ಲೇ ಕೂತ್ಕೊಂಡು ನೋಡ್ಕೊಳ್ಳೇ, ನಾಯಿ ಕಾಗೆ ಬಂದು ಬಾಯಿ ಹಾಕದ ಹಾಗೆ ನೋಡ್ಕೋ....."

"ಚಿಕ್ಕೋವಕ್ಕೆ ಹೇಳಿ ಅತ್ತೆ ನಂಗೆ ಬೇಜಾರು."

"ಆ ಹಾ ಹಾ ನೀನು ಮಹಾ ದೊಡ್ಡೋಳು ಅಲ್ವೇ ಕರಿದ ಗರಿ ಗರಿ ಸಂಡಿಗೇನ ತಿನ್ನೋಕೆ ಬೇಜಾರಾಗುಲ್ವಾ !"

"ಎಲ್ಲ್ರೂ ತಿಂತಾರಲ್ಲ ಅತ್ತೇ, ಎಲ್ಲ್ರೂ ನೋಡ್ಕೊಳ್ಳಲಿ. ನಾನೊಬ್ಬೇ ಯಾಕೆ ನೋಡ್ಕೋಬೇಕು ಶಾಂತಂಗೆ ಹೇಳಿ ಅತ್ತೆ."

"ಅವಳು ಸಧ್ಯದಲ್ಲೇ ಮದುವೆಯಾಗ್ತಿರೋ ಹುಡುಗಿ, ಬಿಸಿಲ್ನಲ್ಲಿ ಕೂತು ಮೈ ಒಣಗಿಸ್ಕೊಂಡು ಕಪ್ಪಾಗಿ ಬಿಡ್ತಾಳೆ. ನೀನು ಬೇಕಾದ್ರೆ ಹೋಗು ನಾನು ವೈಕುಂಠಂಗೆ ಹೇಳ್ತೀನಿ ದೂರದಲ್ಲಿ ಕೂತ್ಕೊಂಡು ನೋಡ್ಕೋತಾನೆ."

"ವೈಕುಂಠಂಗೆ ಬೇರೆ ಕೆಲ್ಸ ಇಲ್ವಾ ? ಪದ್ಮಿನಿ ರಾಗಿಣಿಗೆ ಬೇರೆ ಏನು ಕೆಲ್ಸ ಬರುತ್ತೇ ? ಆದರೆ ಕೈ ಹಾಕಿ ಮೈಲಿಗೆ ಮಾಡ್ಬಾರ್ದು ಅಷ್ಟೇ." ಲಕ್ಷ್ಮಿ ಎಂದಳು

"ಇಬ್ರೂ ಒಟ್ಟಿಗೇ ಕೂತಿರ್ತೀವಮ್ಮಾ....."

"ಯಾಕೆ ಇಬ್ರೂ ಜಗಳ ಆಡೋಕಾ ? ಆಮೇಲೆ ಈ ಕಡೆ ಗಮನಾನೇ ಇರುಲ್ಲ. ಒಬ್ಬರನ್ನೊಬ್ಬರು ಅಟ್ಟಿಸ್ಕೊಂಡು ಓಡಿ ಹೋಗ್ತೀರಿ. ಬೇರೆ ಬೇರೆ ಕೂತ್ಕೊಳ್ಳಿ."

"ಒಂದಿಷ್ಟು ಹಪ್ಪಳದ ಹಿಟ್ಟು ಕಲೆಸಿಟ್ಟರೆ, ಮಧ್ಯಾಹ್ನ ಹಪ್ಪಳಾನ ಒತ್ತಬಹುದು. ಪಾರ್ವತಿಯನ್ನು ಕರೆಯೋಣ ಅಂತಂದ್ರೆ, ಅವಳಿಗೆ ಬಸಿರು, ಬಾಣಂತನಗಳ ನಡುವೆ ಬಿಡುವೇ ಇಲ್ಲ."

"ಒಂದಿಷ್ಟು ಅವಲಕ್ಕೀನೂ ಮಡೀಲಿ ಕುಟ್ಟಿಟ್ಟರೆ, ನಿಮಗ ಫಲಾಹಾರಕ್ಕೆ ಆಗುತ್ತೆ.... ಭತ್ತ ಚೆನ್ನಾಗಿದೆ

"ಬಿಡು.... ಈಗ ಒಟ್ಟೊಟ್ಟಿಗೇ ಎಲ್ಲಾ ಕೆಲಸ ಮಾಡ್ಬೇಡ. ಆಯಾಸ ಆಗುತ್ತೆ. ನಿನ್ನ ಮುಟ್ಟು ಕಳೀಲಿ..... ಆಮೆಲೆ ಮಾಡಿದ್ರಾಯ್ತು. ಅಂದ್ಹಾಗೇ ಈಸಾರಿ ಮುಂದೆ ಹೋಯ್ತಲ್ವಾ ?" ಲಕ್ಷ್ಮಿ ಮಾತಾಡಲಿಲ್ಲ. ತಲೆ ತಗ್ಗಿಸಿದಳು. ಅವಳಲ್ಲೂ ಆತಂಕ ಕಾಡಿತ್ತು. ಮದುವೆಯ ತಯಾರಿಯ ಕೆಲಸ ಬೇಕಾದಷ್ಟಿದೆ. ಈಗ ಬಯಕೆ ವಾಕರಿಕೆ ಸುಸ್ತು ಅಂತ ಪ್ರಾರಂಭ ಆದರೆ, ಕೆಲಸ ಆಗೋದು ಹೇಗೆ! ಆದಷ್ಟು ಶ್ರಮಪಟ್ಟು ಕೆಲಸ ಮಾಡಿದರೆ, ಗರ್ಭ ನಿಲ್ಲುವ ಸಾಧ್ಯತೆ ಇರುವುದಿಲ್ಲ. ತಾನೇನಾದರೂ ಗರ್ಭಿಣಿ ಯಾಗಿರಬಹುದೇ ಎಂಬ ಅನುಮಾನ ಅವಳಲ್ಲಿ ಸಂತಸವನ್ನು ನೀಡಲಿಲ್ಲ.

ಹತ್ತು ಸೇರು ಭತ್ತವನ್ನು ಬಿಸಿನೀರಿನಲ್ಲಿ ಸ್ವಲ್ಪ ಬೇಯಿಸಿ, ಬಸಿ ಹಾಕಿ ಸ್ವಲ್ಪ ಸ್ವಲ್ಪವೇ ಕುಟ್ಟಿ ತೆಗೆದಿಟ್ಟಳು. ಒನಕೆಯಿಂದ ಕುಟ್ಟುವಾಗ ಮೈಯೆಲ್ಲಾ ಅಲುಗಾಡುತ್ತಿತ್ತು. ಸಾತಕ್ಕ ಕೆಳಗೆ ಕೂತು ಹೊರಕ್ಕೆ ಚಿಮ್ಮುತ್ತಿದ್ದ ಭತ್ತವನ್ನು ಒಳಕ್ಕೆ ತಳ್ಳುತ್ತಿದ್ದಳು.

"ಎರಡು ಒನಕೆ ಇದ್ದಿದ್ದರೆ, ಇಬ್ಬರೂ ಒಟ್ಟಿಗೇ ಕುಟ್ಟಬಹುದಾಗಿತ್ತು. ಬಿಸಿ ಆರುವ ಮೊದಲೇ ಭತ್ತಕ್ಕೆ ಏಟು ಬೀಳಬೇಕು... ಪಾರ್ವ್ತತಿ ಮನೆಯ ಒನಕೆ ಭಾರವಾಗಿ ಚೆನ್ನಾಗಿದೆ ಹೋಗೇ ಲಲಿತಾ, ಅತ್ತೆ ಮನೆಯಿಂದ ಒನಕೇನ ಕೇಳಿ ಇಸ್ಕೊಂಡ್ಬಾರೆ." ಲಲಿತ ಓಡಿದಳು.

ಅವಳ ಹಿಂದೆ ಒನಕೆಯನ್ನು ಹಿಡಿದು ರಾಜ ಬಂದ, "ಯಾಕೋ ರಾಜ ನೀನು ತಗೊಂಡು ಬಂದೆ ಲಲಿತಂಗೇನಾಯ್ತು ?"

"ಒನಕೆ ಭಾರವಂತೆ ಅವಳ ಕೈಲಿ ಎತ್ತುಕ್ಕೆ ಆಗುಲ್ವಂತೆ ತಂದ್ಕೊಡು ಅಂತಂದ್ಲು

ಅದಕ್ಕೆ ನಾನು ತಂದೆ ಹಿಂತಿರುಗಿ ಲಲಿತಳ ಕಡೆ ನೋಡಿ ನಸು ನಕ್ಕ." ಲಲಿತ ಹಿಂದೆಹಿಂದೆ ಸರಿದು ಹೊರ ಬಾಗಿಲಲ್ಲಿ ನಿಂತಳು.

"ನಿಂಗೆ ಒನಕೇಲಿ ಕುಟ್ಟೋಕೆ ಬರುತ್ತೇನೋ !...ಇಬ್ಬರು ಕುಟ್ಟುವಾಗ ಜಾಣ ತನದಿಂದ ಒನಕೇನ ಎತ್ತಿ ಇಳಿಸಬೇಕು ಇಲ್ದಿದ್ರೆ ಒಂದಕ್ಕೊಂದು ತಗುಲಿ ಹೊಡ ಕ್ಕೊಳ್ಳುತ್ತೇ.... ಕೆಳಗೆ ಭತ್ತನ ಸರಿಸೋರ ಕೈಯೂ ಜಜ್ಜಿಹೋಗುತ್ತೆ."

"ಅದೆಲ್ಲಾ ನಂಗೊತ್ತಿಲ್ಲ ದೊಡ್ಡಮ್ಮಾ......ಇದೆಲ್ಲಾ ಏನಿದ್ರೂ ಹೆಂಗಸ್ರ ಕೆಲ್ಸ."

"ಬಿಸಿ ಬಿಸಿಯಾಗಿ ಕವಳ ಕತ್ತರಿಸೋದು ಮಾತ್ರ ಗಂಡಸರ ಕೆಲಸಾನಾ ! ಹೆಂಗಸ್ರು ಶ್ರಮ ಪಡೋದು ಗಂಡಸ್ರು ಮೋಜು ಮಾಡೋದು."

"ಯಾಕೆ ಹೀಗೆ ಹೇಳ್ತೀರಿ ದೊಡ್ಡಮ್ಮಾ....ಗಂಡಸ್ರು ಸಂಪಾದಿಸುಲ್ವಾ ?"

"ಬರೀ ಸಂಪಾದನೆ ಒಂದು ಇದ್ದರೆ ಸಾಕೇನೋ....ಮನೇಲಿರೋ ಹೆಂಗಸರಿಗೆ ಕೆಲಸ ಜಾಸ್ತಿ ಅಂತಂದೆ. ನಿಂದೇನಾಯ್ತು? ಮತ್ತೇ ಕಾಲೇಜಿಗೆ ಯಾವಾಗ ಸೇರ್ಕೋ ತೀಯಾ?"

"ಹುಂ, ಈ ವರ್ಷ ಸೇರ್ಕೊತೀನಿ, ನಾನಿನ್ನು ಬರ್ತೀನಿ...ಬರಲಾ ಅತ್ತೇ?"

"ಕಾಫಿ ಕೊಡ್ತಿನಿ, ದೋಸೆ ಮಾಡಿ ಕೊಡ್ಲೇನೋ ?"

"ಏನೂ ಬೇಡ ಅತ್ತೇ ನಮ್ಮಮ್ಮನೂ ದೋಸೆ ಮಾಡಿದ್ಲು," ಅವನು ಹೊರ ಬರುವುದಕ್ಕೂ ಲಲಿತ ಹೊರಗಿನಿಂದ ಒಳಕ್ಕೆ ಬರುವುದಕ್ಕೂ ಸರಿಯಾಯ್ತು. ಢಿಕ್ಕಿ ಹೊಡೆದು ವಾಲಿದವಳನ್ನು ರಾಜ ಹಿಡಿದು ನಿಲ್ಲಿಸಿದ.

"ತೋಳು ನೋಯ್ತಿದೆ ಬಿಡು ಕೈನ...."

"ಒಂದು ಢಿಕ್ಕಿ ಹೊಡೀಬಾರ್ದು ಅಂತ ಅಂತಾರೆ. ಇನ್ನೊಂದು ಢಿಕ್ಕಿ ಕೊಟ್ಟು ಬಿಡು." ನಗುತ್ತಾ ಅವಳ ಮುಂದೆ ತಲೆ ನೀಡಿದ. ಲಲಿತಾ ಜೋರಾಗಿ ಢಿಕ್ಕಿಯನ್ನು ಹೊಡೆದು ನಕ್ಕಳು.

"ಹ್ಹಾಂ, ಏನೇ ಇದು, ಎಷ್ಟು ನೋವಾಗ್ತಿದೆಯಲ್ಲೇ ನನ್ನ ತಲೆ ಒಡೆದು ರಕ್ತ ಬಂತೋ ಏನೋ ಸ್ವಲ್ಪ ನೋಡು ಬಾ..."

"ಮನೇಲಿ ಕನ್ನಡಿ ಮುಂದೆ ನಿಂತು ನೀನೇ ನೋಡ್ಕೋ...." ಅವಳು ಅವನ ಕಡೆ ನೋಡದೇ ಒಳ ನಡೆದಳು. ರಾಜ ನೋಯುತ್ತಿದ್ದ ಜಾಗವನ್ನು ಬೆರಳಿನಿಂದ ಉಜ್ಜಿಕೊಂಡ

"ಏನೇ ಅದು ಚೆಲ್ಲಾಟ ? ಗಂಡು ಹುಡುಗನ ಹತ್ರ ?"

"ನಾನೇನು ಚೆಲ್ಲಾಟ ಆಡ್ಲಿಲ್ಲ. ನಾನು ಓಡಿ ಬಂದೆ ಅವನು ಅಡ್ಡ ಬಂದ ಢಿಕ್ಕಿ ಹೊಡ್ದ. ಅದರಲ್ಲಿ ನನ್ನ ತಪ್ಪೇನು ? ನನ್ನನ್ನು ಬೈಯಬೇಡ."

"ಮಾತಿಗೆ ಮಾತು ಬೆಳೆಸ್ಬೇಡ ಸ್ವಲ್ಪ ನಿಧಾನವಾಗಿ ಓಡಾಡು."

"ಅತ್ತೇ ನಾನು ಕುಟ್ಲಾ!" ಲಂಗವನ್ನು ಮುದುರಿಕೊಂಡು ಒರಳಿನ ಮುಂದೆ ಕುಳಿತಳು.

"ಒನಕೇನೇ ಎತ್ತುಕ್ಕಾಗುಲ್ಲ ನಿನ್ಕೈಲಿ ನೀನೇನು ಕುಟ್ತೀಯಾ ? ಹೋಗ್ಲಿ ಹೇಗೂ ಕೂತಿದೀಯಲ್ಲ ಹೊರಕ್ಕೆ ಚೆಲ್ಲೋ ಭತ್ತಾನ ಕೈಯಿಂದ ತಳ್ತೀಯಾ ?"

"ಕೈ ಜಜ್ಜಿ ಹೋದ್ರೇ.... ನನ್ಕೈಲಾಗುಲ್ಲ."

"ಯಾವುದೂ ಆಗುಲ್ಲ ನಿನ್ಕೈಲಿ, ಎದ್ದು ಹೋಗು ಲಲಿತ ಎದ್ದು ಮುಂಬಾಗಿಲಿಗೆ ಬಂದು ನಿಂತಳು. ತನ್ನ ಮನೆಯ ಬಾಗಿಲ ಮೆಟ್ಟಿಲ ಬಳಿ ನಿಂತ ರಾಜ ಇವಳನ್ನು ನೋಡಿ, ತಲೆಯನ್ನು ಮುಟ್ಟಿ ನೋಡಿಕೊಂಡ. ಲಲಿತ ಹಾಗೇ ಆಗ್ಬೇಕು ಎನ್ನುವಂತೆ ಸಂಜ್ಞೆ ಮಾಡಿ ನಕ್ಕಳು. ಅವನು ಕೈ ಬೀಸಿ ಬಾ ಎನ್ನುವಂತೆ ಸಂಜ್ಞೆ ಮಾಡಿ ಕರೆದ ಲಲಿತಾ ಅವನಿದ್ದಲ್ಲಿಗೆ ಬಂದಳು.

"ಏನೋ ರಾಜಾ ಯಾಕೋ ಕರ್ದೇ ? ತುಂಬಾ ನೋಯ್ತಿದೆಯಾ !" ವೈಯ್ಯಾರ ದಿಂದ ಜಡೆಯನ್ನು ಹಿಂದಕ್ಕೆ ಮುಂದಕ್ಕೇ ತೂಗುತ್ತಾ ಕೇಳಿದಳು

"ಬಾರೇ....... ಇಲ್ಲಿ ಕೂತ್ಕೋ...." ಅವನು ಜಡೆಯನ್ನು ಎಳೆದು ತನ್ನ ಪಕ್ಕದ ಜಾಗವನ್ನು ತೋರಿದ

"ಇಲ್ಲಪ್ಪಾ.... ನಂಗೆ ಕೆಲ್ಸ ಇದೆ."

"ಮಹಾ ಕೆಲ್ಸ ನಂಗೊತ್ತು ಕೂತ್ಕೊಳ್ಳೇ ಅಂದ್ರೆ ಕೂತ್ಕೋ." ಅವನು ಕೈ ಹಿಡಿದು ಎಳೆದ ಅವಳು ಮುಗ್ಗರಿಸಿ ಅವನ ಮೇಲೆ ಬಿದ್ದಳು. ಅವನು ಹಿಡಿದೆತ್ತಿದ ಮಾತು ಮಾತಿಗೂ ನನ್ಮೇಲೇ ಬೀಳ್ತೀಯಲ್ಲೇ ಏನಾಗಿದೆ ನಿಂಗೆ ?" ನಕ್ಕ

ಅವಳು ಕೋಪದಿಂದ ದೂರ ನಿಂತಳು. ನೀನು ಹೀಗೆಲ್ಲಾ ಮಾಡಿದ್ರೆ ನಾನು ನಿನ್ಹತ್ರ ಮಾತನ್ನೇ ಆಡುಲ್ಲ. ಎಂಥೋನೋ ನೀನು? ಸದಾ ಪೆಟ್ಟು ಮಾಡ್ತೀ ಯಲ್ಲ ತಡೀ ಅತ್ತೇಗೆ ಹೇಳ್ತೀನಿ.

"ಓ ಹೇಳು..... ಅಮ್ಮಾ.... ಲಲಿತ ಬಂದಿದಾಳೆ."

"ಲಲಿತಾ ಒಳಗೆ ಬರಬಾರದೇನೇ? ಅಲ್ಲೇ ನಿಂತು ಏನು ಮಾತಾಡ್ತಿದೀಯ!" ಲಲಿತ ಒಳಗೆ ಹೋಗುವುದರಲ್ಲಿದ್ದಳು. ರಾಜ ಹೇಳಬೇಡ ಎನ್ನುವಂತೆ ಸಂಜ್ಞೆ ಮಾಡಿದ. ಅವಳು ಮೂತಿ ಸೊಟ್ಟ ಮಾಡಿ ಅಣಕಿಸಿ, ಒಳನಡೆದಳು.

"ಎಂಥಾ ಹಪ್ಪಳ ಮಾಡಿದರು? ಸಂಡಿಗೆ ಒಣಗ್ತಾ ?...ಅವಲಕ್ಕಿ ಎಷ್ಟು ಸೇರು ಕುಟ್ಟಿದರು !" ಮೊದಲಾದುವನ್ನು ಪಾರ್ವತಿ ವಿಚಾರಿಸಿದಳು. ಲಲಿತ ಉತ್ತರ ಹೇಳಿ ಮತ್ತೆ ತನ್ನ ಮನೆಗೆ ಹೊರಟಳು ಮುಂಬಾಗಿಲ ಹೊಸ್ತಿಲನ್ನು ಎಡವಿದಳು ರಾಜ ಮತ್ತೇ ಕೈ ಹಿಡದ.

"ಬಿಡೋ ನನ್ನನ್ನ" ಎನ್ನುತ್ತಾ ತನ್ನ ಮನೆಗೆ ಓಡಿದಳು.

"ನಿಧಾನ ಅನ್ನೋದೇ ಇಲ್ವಾಲ್ಲಾ ನಿಂಗೆ ? ಬಿಸಿಲ್ನಲ್ಲಿ ಯಾಕೆ ಅಲಿತೀಯ ಮುಖ ನೋಡು ಹೇಗಾಗಿದೆ ತಣ್ಣೀರ್ನಲ್ಲಿ ಮುಖ ತೊಳ್ಕೊಂಡು ಬಂದು, ಶಾಂತನ ಕೈಲಿ ತಲೆ ಬಾಚಿಸ್ಕೋ...."

"ಏನೂ ಬೇಡ ನಾನೇ ಬಾಚ್ಕೋತೀನಿ" ಲಲಿತ ಬಚ್ಚಲ ಮನೆಗೆ ಹೋದಳು.

"ಸೊಂಟದವರೆಗೂ ಬೆಳೆದಿದೆ ಕೂದಲು. ಹೇಳಿದಷ್ಟು ಕೇಳ್ಬಾರ್ದಾ"

"ಈ ಲಲಿತಾ ಶಾಂತನ್ನ ಮೀರಿಸಿ ಬೆಳೀತಿದಾಳೆ.... ಶಾಂತಗಿಂತ ಜೋರು. ಇವಳಿಗೇ ಮೊದಲು ಮದುವೆ ಮಾಡಿ, ಗಂಡನ ಮನೆಗೆ ಅಟ್ಟಬೇಕು." ಇಬ್ಬರೂ ನಕ್ಕರು.

"ಭಾವ ಕಾಗ್ದ ಬರ್ದಿದಾರೆ. ಅಕ್ಕನ ವರ್ಷದ ಕೆಲಸಗಳು ಮುಗಿದ ಹದಿನೈದು ದಿನಗಳಿಗೆ ಮದುವೆಗೆ ದಿನಾಂಕವನ್ನು ಗೊತ್ತು ಮಾಡಿದೀವಿ ಅಂತ. ಏನಂತ ಬರೀಲಿ !"

"ಅವರೇ ದಿನಾಂಕವನ್ನು ಗೊತ್ತು ಮಾಡಿದಾರೆ ಅಂತ ಅಂದ್ಮೇಲೆ ಸರಿ ಹಾಗಿದ್ರೆ ಅವ್ರುಗಳು ಇಲ್ಲಿಗೆ ಬರುಲ್ಲ" ಸಾತಕ್ಕ ಕೇಳಿದಳು

"ಈ ಹಳ್ಳಿಗೆ ಅವರುಗಳು ಬರೋದೇನೂ ಬೇಡ, ಇವರೇ ಹೋಗಿ ಮಾತನಾಡಿಕೊಂಡು ಬರ್ಲಿ."

"ಯಾಕೆ ಹಾಗಂತೀಯ ! ಅವರೇನು ಹೊಸಬ್ರೇ.... ಅಕ್ಕನೇ ಇಲ್ಲದಿರುವಾಗ ಯಾರೂ ಆಕ್ಷೇಪಣೆ ಮಾಡುಲ್ಲ ಎಲ್ಲ ಗೊತ್ತಿದೆಯಲ್ಲ."

"ಹಳ್ಳಿ ಜನ, ಹಳ್ಳಿ ಇರಸರಿಕೆ ಅಂತ ಆಡಿಕೊಳ್ದೇ ಇರ್ತಾರಾ! ಓರಗಿತ್ತಿಯರು, ಅತ್ತಿಗೆಯರು ಶಾಂತನ್ನ ಸತಾಯಿಸ್ದೇ ಬಿಡ್ತಾರಾ !"

"ಯಾವಾಗ್ಲೂ ಇವಳ ಮಾತು ಹೀಗೇನೇ ಅಸಂಬದ್ಧ ಅವರುಗಳೇನಾದ್ರೂ ಬರ್ತೀನಿ ಅಂತ ಹೇಳಿದ್ರೆ, ಬರ್ಬೇಡಿ ಅಂತ ಅನ್ನೋಕೆ ಆಗುತ್ತಾ. ಸಾತು, ನೀನೂ ಅವಳ ಮಾತಿಗೆ ತಲೆದೂಗಬೇಡ."

"ನಾನು ಯಾರ ಮಾತಿಗೂ ತಲೆದೂಗಲ್ಲ, ತಾಯಿಯೇ ಇಲ್ಲದಿದ್ದ ಮೇಲೆ, ಯಾರಿಗೂ ಹೆಚ್ಚು ಆಸಕ್ತಿ ಇರುಲ್ಲ. ಅವರುಗಳು ಯಾರೂ ಖಂಡಿತಾ ಬರುಲ್ಲ. ಮದುವೆ ಕಾರ್ಯ ನಡದ್ರೆ ಸಾಕು ಅವರುಗಳಿಗೆ."

ಸಾತಕ್ಕ ಹೇಳಿದಂತೆಯೇ ಆಯಿತು. ವರ್ಷದ ಕೆಲಸಕ್ಕೆಂದು ಶಾಸ್ತ್ರಿ, ಕಂಠಿ ಇಬ್ಬರೂ ಹೋಗಿದ್ದರು. ಗೊತ್ತು ಮಾಡಿದ ದಿನಾಂಕವನ್ನು ಗುರುತು ಮಾಡಿಕೊಂಡು ಬಂದ ಶಾಸ್ತ್ರಿ ಲಗ್ನ ಪತ್ರಿಕೆಗಳನ್ನು ಅಚ್ಚು ಹಾಕಿಸಲೆಂದು ಕೊಟ್ಟ.

"ಇನ್ನು ಎರಡು ತಿಂಗಳಿಗೆ ಮದುವೆಯ ಮುಹೂರ್ತ. ಅಷ್ಟರೊಳಗೆ ಎಲ್ಲಾ ತಯಾರಿಯೂ ನಡೆದಿರಬೇಕು."

"ಹಣ ಒಂದಿದ್ರೆ ಎಲ್ಲಾ ತಯಾರಿಯೂ ಸುಸೂತ್ರವಾಗಿ ನೆರವೇರುತ್ತೆ. ಹಣ ಹೊಂದಿಸಿದೇಯಾ ಗುಂಡಣ್ಣ"

"ಹಣಕ್ಕೆ ವ್ಯವಸ್ಥೆ ಮಾಡಿದೀನಿ, ಈ ಸಾರಿಯ ಬೆಳೆಯಿಂದ ಲಾಭ ಬಂದಿದೆ. ತರಕಾರಿಗಳ ಬೆಲೆ ಏರಿದ್ದರಿಂದ ಅದರಿಂದ ಸ್ವಲ್ಪ ಹಣ ಕೈಯ್ಯಲ್ಲಿದೆ. ದಿನಸಿ, ಜವಳೀನ, ಸಾಲಕ್ಕೆ ತಂದರಾಯ್ತು. ಆಮೇಲೆ ಕಂತಿನಲ್ಲಿ ಹಣ ಕಟ್ಟಿದರಾಯ್ತು."

"ಮದುವೆ ಮಾಡಿ ನೋಡಿ ಅಂತ ಗಾದೆಯ ಮಾತೇ ಇದೆ. ಖರ್ಚು ಎಷ್ಟು ಎಳೆಯುತ್ತೋ ಅಲ್ಪ ಸ್ವಲ್ಪ ಎಲ್ಲಿ ಸಾಕಾಗುತ್ತೇ ?"

"ಧೈರ್ಯವಾಗಿರು ಲಕ್ಷ್ಮಿ. ದೇವರ ಮೇಲೆ ಭಾರಹಾಕು. ಎಲ್ಲಾ ನಡೆಸ್ತಾನೆ. ಆತಂಕ ಪಟ್ಕೋಬೇಡ."

"ಇದು ನಮ್ಮ ಮನೇಲಿ ನಡೆಯುತ್ತಿರುವ ಮೊದಲ ಮಂಗಳ ಕಾರ್ಯ ಹತ್ತಿರದ ನೆಂಟರಿಗೆಲ್ಲಾ ಉಡುಗೊರೆ ಕೊಡಲೇಬೇಕು. ಇಲ್ದಿದ್ರೆ ಆಡ್ಕೋತಾರೆ."

"ತಂದ್ರಾಯ್ತು. ನಾನು ಬೇಡ ಅಂತ ಎಲ್ಲಿ ಅಂದೆ ? ಪಾರ್ವತಿ ಬಂದ್ಲು ಈಗ ಈ ಮಾತು ಸಾಕು ಶಾಸ್ತ್ರಿ ಮಾತನ್ನು ಕತ್ತರಿಸಿದ. ಏನೇ ಪಾರ್ವತಿ ಹುಶಾರಾಗಿ ದೀಯ ? ಸುಸ್ತಾಗಿರುವಂತೆ ಕಾಣ್ತಿದೆ."

"ಹುಂ, ಇರುತ್ತಲ್ಲ" ಎಂದು ಪೆಚ್ಚು ನಗೆ ನಕ್ಕು, ಅಲ್ಲಿ ಹಾಸಿದ್ದ ಚಾಪೆಯ ಮೇಲೆ ಉಸ್ ಅಂತ ಕುಳಿತಳು. ಶಾಸ್ತ್ರಿ ತೋಟದ ಕಡೆ ಹೊರಟ.

"ಮೀನಾಕ್ಷಿ ಚೆನ್ನಾಗಿದಾಳಂತ ? ಬೀಗರಿಂದ ಕಾಗದ ಬಂದಿತ್ತಾ? ಬಾಣಂತನಕ್ಕೆ ಯಾವಾಗ ಕರ್ಕೊಂಡ್ಹು ಬರ್ತೀರಿ !"

"ಅವಳು ಇಲ್ಲಿ ಬಾಣಂತನಕ್ಕೆ ಬಂದರೆ ಮಾಡೋರು ಯಾರಿದಾರೆ ? ಮುಂದಿನ ತಿಂಗಳು ಅವರ ಮನೇಲಿ 'ಸೀಮಂತ' ಇಟ್ಟುಕೊಂಡಿದಾರಂತೆ ಖಂಡಿತಾ ಎಲ್ಲರೂ ಬರ್ಬೇಕು ಅಂತ ಹೇಳಿದಾರೆ ನೀನೂ ಬರ್ತೀಯಾ ?"

"ಸಾತಕ್ಕ ಪೆಚ್ಚು ನಗೆಯನ್ನು ನಕ್ಕಳು. ನಾನು ಬಂದು ಅಲ್ಲಿ ಮಾಡೋದೇನಿದೆ? ಅವಳು ಇಲ್ಲಿಗೆ ಬಾಣಂತನಕ್ಕೆ ಬಂದಿದ್ರೆ ಮಗೂ ಬಾಣಂತಿಗೆ ನೀರು ಹಾಕಿ, ತಲೆ ಒರೆಸಿ, ಸಾಂಬ್ರಾಣಿ ಹೊಗೆ ಹಾಕಿ ಕಾಯಿಸಿ, ಬಾಣಂತಿಗೆ ಶುಶ್ರೂಷೆ ಮಾಡ್ತಿದ್ದೆ, ಸೀಮಂತದಲ್ಲಿ ನನ್ನ ಕೆಲಸ ಏನಿದೆ?"

"ಬಂದರೆ ಏನೀಗ ? ಬೀಗರು ಏನೂ ಅಂದ್ಕೊಳಲ್ಲ."

"ಅವರು ಏನಾದ್ರು ಅಂದ್ಕೊಳ್ಳಲಿ ಅಥವಾ ಬಿಡಲಿ ನನಗೇ ಮುಜುಗರ ಸುಮ್ಮನೆ ನೀನು ಹೋಗಿ ಬಾ."

"ಹೋಗೋಕೇನೋ ಆಸೆ.... ಆದರೆ....."

"ಯಾಕೆ ರಾಗ ! ನಿನ್ನ ಹೆರಿಗೆಗೆ ಇನ್ನು ಸಮಯ ಇದೆಯಲ್ಲ."

"ಅದಲ್ಲ.... ನಮ್ಮ ಬೀಗರು ಶ್ರೀಮಂತರು ಮೀನಾಕ್ಷಿಗೆ ಬೇಕಾದಷ್ಟು ಒಡವೆಗಳನ್ನಿಟ್ಟಿದ್ದಾರೆ. ಈಗ ಮತ್ತೆ ಎರಡು ಜೊತೆ ಬಳೆಗಳನ್ನು ಮಾಡಿಸೋಕ್ಕೆ ಹಾಕಿದಾರಂತೆ."

"ಅವರೇ ಎಲ್ಲಾ ಮಾಡ್ತಿರುವಾಗ ನಿನಗ್ಯಾಕೆ ಸಂಕಟ ?"

"ನೀನು ಈ ಮುಂಚೆ ಕೊಡ್ತೀನಿ ಅಂತ ಅಂದಿದ್ಯಲ್ಲಾ ಆ ದುಡ್ಡನ್ನ ಕೊಡ್ತೀಯಾ? ಹೋಗೋದ್ರೊಳಗೆ ಬಳೆ ಮಾಡಿಸ್ಕೊಳ್ತಿನಿ" ಸಾತಕ್ಕ ಬಂದ ಕೋಪವನ್ನು ತಡೆದು ಕೊಂಡಳು.

"ಈಗ ನನ್ಹತ್ರ ಹಣ ಇಲ್ಲ ಪಾತು ಶಾಂತಳ ಮದುವೆಯ ದಿನ ಗೊತ್ತಾಗಿದೆ. ಇಲ್ಲೂ ಖರ್ಚಿದೆ"

"ನಿನ್ನ ಹಣವನ್ನು ನೀನು ಕೇಳೋಕೆ ಮುಲಾಜು ಏನು ! ಹೇಗೂ ಹಣಕ್ಕೆ ವ್ಯವಸ್ಥೆ ಮಾಡಿರ್ತಾನೆ ಕೇಳಿದ್ರೆ ಕೊಡ್ದೇ ಇರ್ತಾನಾ !"

"ಛೀ, ಎಂಥಾ ಮಾತು ಆಡ್ತೀ ಪಾತು ! ನಾನು ಈ ಸಮಯದಲ್ಲಿ ನನ್ನ ದುಡ್ಡು ಕೊಡು ಅಂತ ಕೇಳೋಕೆ ನನಗೆ ಹೀನಾಯವಾಗುಲ್ವಾ ! ನಾನು ಕೇಳುಲ್ಲ"

"ಸ್ವಲ್ಪನಾದ್ರೂ ಕೊಟ್ಟಿರು, ಬಳೆಗಳನ್ನ ಮಾಡಿಸುಕ್ಕೆ ಹಾಕ್ತೀನಿ ಉಳಿದಿದ್ದನ್ನ ನಿಧಾನವಾಗಿ ಕೊಡುವಂತೆ ಆಯ್ತಾ ?"

"ನೀನು ನಿಧಾವಾಗಿಯೇ ಬಳೆಗಳನ್ನ ಮಾಡಿಸ್ಕೋ, ಅವಾಂತರ ಏನು ! ಬಳೆಗಳನ್ನು ಬೀಗರಿಗೆ ತೋರಿಸ್ಲೇ ಬೇಕು ಅಂತ ಏನು? ನೀನು ಸಂಸಾರ ಮಾಡಿ ದೀಯ. ಕಷ್ಟ ಸುಖ ಕಂಡಿದೀಯ... ನಿನಗೆ ಇನ್ನು ತಿಳುವಳಿಕೆ ಬಂದಿಲ್ಲ ಅಂತಂದ್ರೆ ನಿನ್ನ ಮಾತಿಗೆ ನಗಬೇಕೋ ಅಳಬೇಕೋ ಗೊತ್ತಾಗ್ತಿಲ್ಲ" ಸಾತಕ್ಕ ಮುಲಾಜಿಲ್ಲದೆ ಆಕ್ಷೇಪಿಸಿದಳು

"ನಿನಗೇನೋ ಚಿನ್ನ, ಬಣ್ಣ ಯಾವುದೂ ಬೇಡ. ಹೇಗಿದ್ರೂ ನಡೆಯುತ್ತೇ. ಬೀಗರ ಎದುರಿಗೆ 'ಬಿಂ' ಅಂತ ಓಡಾಡೋದು ಹೇಗೆ.... ಮೈಮೇಲೆ ಸ್ವಲ್ಪ ಚಿನ್ನದ ಹೊಳಪು ಇರಲಿ ಅಂತ ಆಸೆ ಪಟ್ಟರೆ, ನಿನಗೆ ಅದೂ ಸಹಿಸಲ್ವಾ ?" ಪಾತು ಆಕ್ಷೇಪಣೆ ಮಾಡದೇ ಬಿಡಲಿಲ್ಲ

"ನೀನು ಕೇಳ್ತಾ ಇರೋದು ನನ್ನ ಹಣ. ಅಂಥಾದ್ರಲ್ಲಿ ಇಂಥ ಮಾತುಗಳು ನಿನ್ನ ಗಂಡ ಮಾಡಿಸ್ಕೊಟ್ರೆ, ಮೈತುಂಬಾ ಬಂಗಾರ ಹೇರ್ಕೋ ಥಳ ಥಳ ಅಂತ ಹೊಳೇತಿರು ಯಾರು ಬೇಡ ಅಂತಾರೆ !"

"ಕೊಡ್ತೀನಿ, ಮಾಡಿಸ್ಕೋ ಅಂತ ಆಸೆ ಹುಟ್ಟಿಸಿದೋಳು ನೀನು. ಅಗತ್ಯ ವಿದ್ದಾಗ ಕೇಳಿದೆ ನೀನಾಗಿಯೇ ಕೊಟ್ಟಿದ್ರೆ ಈ ಮಾತುಗಳೇ ಬರ್ತಿರಲಿಲ್ಲ. ಎಲ್ಲವನ್ನು ಗುಂಡಣ್ಣನ ಕೈಗೆ ಹಾಕಿ, ವಾಪಸ್ಸು ಕೇಳೋಕು ಆಗದ ಸ್ಥಿತೀಲಿದ್ದೀಯ ನಿನ್ಹತ್ರ ಈ

ವಿಷಯಾನ ಮಾತಾಡಿದ್ದೇ ತಪ್ಪು" ಪಾತು ಕೋಪದಿಂದ ಎದ್ದಳು. ಸಾತಕ್ಕ ಸುಮ್ಮನೆಯೇ ಇದ್ದಳು. ಇದುವರೆಗೂ ಅವರಿಬ್ಬರ ಸಂಭಾಷಣೆಗಳನ್ನು ಲಕ್ಷ್ಮಿ ಕೇಳಿಸಿಕೊಂಡಿದ್ದಳು. ಆದರೂ ಮಧ್ಯೆ ಬಾಯಿ ಹಾಕಿರಲಿಲ್ಲ. ಈಗ ಹೊರಕ್ಕೆ ಬಂದಳು."

"ಕಾಫಿ ಕುಡಿದು ಹೋಗಿ ಪಾರ್ವತಿ" ಲಕ್ಷ್ಮಿ ಕಾಫಿಯನ್ನು ತಂದಿತ್ತಳು.

"ನಂಗೇನೂ ಬೇಡ" ದನಿ ದಪ್ಪಗಿತ್ತು ಬರೀ ಕುಂಕುಮಕೊಡು"

"ನಮ್ಮ ಮನೆಯಿಂದ ನೀವು ಮುನಿಸ್ಕೊಂಡು ಹೋದ್ರೆ ನಮಗೆ ಬೇಸರವಾಗುಲ್ವಾ? ಏನೋ ನಿಮ್ಮಣ್ಣಂಗೆ ಸದಾ ಕಷ್ಟ ಹಣದ ಅಡಚಣೆ. ಸಾಲ ಮಾಡಿದ್ರು....ಯಾವುದೂ ಹೊಸದಲ್ಲ. ಆದರೆ ನಮಗೆ ಯಾರ ಹಣವೂ ಬೇಡ ಈಗ ನಿಮ್ಮ ಆರೋಗ್ಯವೂ ಮುಖ್ಯ. ಮೊದಲು ಕಾಫಿ ಕುಡೀರಿ. ನಾನು ನಿಮ್ಮಣ್ಣನ ಹತ್ರ ಮಾತಾಡ್ತೀನಿ" ಪಾತು. ನಿಧಾನವಾಗಿ ಕಾಫಿಯನ್ನು ಕುಡಿದಳು. ಸಾತಕ್ಕನ ಮುಖ ಧುಮುಗುಟ್ಟುತ್ತಿತ್ತು ಲಕ್ಷ್ಮಿ ಒಳಗೆ ಹೋಗಿ ತನ್ನ ಬಳಿ ಇದ್ದ ಹಣವನ್ನು ಎಣಿಸಿ, ಎಲೆ ಅಡಿಕೆಯೊಂದಿಗೆ ಇಟ್ಟು ಕೊಟ್ಟಳು.

"ಇದರಲ್ಲಿ ಇಪ್ಪತ್ತೈದು ರುಪಾಯಿಗಳಿವೆ ಒಂದು ಜೊತೆ ಚಿನ್ನದ ಬಳೆಗೆ ಸಾಕಾಗುತ್ತದೆ. ಅಸಲು, ಬಡ್ಡಿ ಎಲ್ಲಾ ಸೇರಿದೆ ಇದನ್ನು ಸಂತೋಷದಿಂದ ತೆಗೆದು ಕೊಂಡು ನಮ್ಮನ್ನು ಋಣ ಮುಕ್ತರನ್ನಾಗಿ ಮಾಡಿ" ಎಂದಳು.

"ಬೇಡ ಬಿಡು, ನಿಮಗೆಲ್ಲಾ ಬೇಸರ ಮಾಡಿ, ನಾನು ಚಿನ್ನದ ಬಳೆಗಳನ್ನು ತೊಟ್ಕೊಂಡು ಮೆರೆಯಬೇಕಾಗಿಲ್ಲ."

"ಈಗ ಏನನ್ನು ಆಡ್ಬೇಡ. ಬೇಕು ಅಂತ ಪೀಡಿಸಿದವಳು ನೀನೇ ಬೇಡ ಅಂತ ಬಿಟ್ಟರೆ ನಿನಗೇ ಇಲ್ಲ ನಿನ್ನಿಷ್ಟ ಆದರೆ ಇನ್ನು ಮುಂದೆ ಈ ಹಣದ ಸುದ್ದಿಯನ್ನು ಎತ್ತಕೂಡದು" ಸಾತಕ್ಕ ರೋಷದಿಂದ ಹಲ್ಲು ಕಚ್ಚಿ ನುಡಿದಳು

"ಈಗ ಬೇಡ ಅನ್ಬೇಡಿ, ಬಸುರಿ ಹೆಂಗ್ಸು ಮಟ ಮಟ ಮಧ್ಯಾಹ್ನದಲ್ಲಿ ನೊಂದುಕೊಂಡು ಹೋಗ್ಬೇಡಿ, ಆದಷ್ಟು ಬೇಗ ಬಳೆಗಳನ್ನು ಮಾಡಿಸಿಕೊಳ್ಳಿ," ಲಕ್ಷ್ಮಿ ಬಲವಂತದಿಂದ ಹಣವನ್ನು ಪಾರ್ವತಿಯ ಕೈಗಿಟ್ಟಳು.

"ಬರ್ತೀನೇ ಸಾತು, ಬೈಕೋ ಬೇಡ. ಏನೇನೋ ಮಾತಾಡಿಬಿಟ್ವೆ, ಅದನ್ನೇಲ್ಲ ಮನಸ್ಸಿಗೆ ಹಚ್ಕೋಬೇಡ." ಸಾತು ಮಾತನಾಡಲಿಲ್ಲ. ಪಾರ್ವತಿ ಹೊರಟು ಹೋದಳು. ಸಾತಕ್ಕ ಲಕ್ಷ್ಮಿಯನ್ನು ತರಾಟೆಗೆ ತೆಗೆದುಕೊಂಡಳು.

"ನೀನು ಕೊಡಬಾರದಾಗಿತ್ತು, ಲಕ್ಷ್ಮಿ ಅವಳು ಕೇಳಿದ ಕೂಡಲೇ ಕೊಡಬೇಕು ಅಂತ ಯಾವ ಕಾಯಿದೆಯೂ ಇಲ್ಲ."

"ಅವರು ಪದೇ ಪದೇ ಕೇಳ್ತಿದ್ರೆ, ಮನಸ್ಸಿಗೆ ಹಿಂಸೆ ಆಗುಲ್ವಾ ಅತ್ತಿಗೆ ಇನ್ಮೇಲೆ ಅದು ತಪ್ಪುತ್ತೆ."

"ಮದುವೆ ನಡೆದದ್ದೇ ಒಂದ್ಥು ಕನಸಿನಂತೆ, ಗಂಡನ ಮನೆಗೆ ಹೋಗಿ ಒಂದು ದಿನ ಬಾಳಲಿಲ್ಲ. ಗಂಡನ ಮುಖ ಸರಿಯಾಗಿ ನೋಡಲಿಲ್ಲ. ಗಂಡನೇ ಇಲ್ಲದಿರುವಾಗ, ಆ ಹಣ ನನಗ್ಯಾಕೆ ಅಂತ ಎಲ್ಲರಿಗೂ ಕೊಟ್ಟು ಬಿಡೋಣ ಅಂತಂದು ಕೊಂಡು ಆ ಮಾತನ್ನು ಹೇಳಿದ್ದೇ ತಪ್ಪಾಯ್ತು, ಸಾಲ ಕೊಟ್ಟೋರ ಥರ ಬಂದು ಕೇಳೋದಾ ! ಸ್ವಲ್ಪನಾದ್ರೂ ಹೀನಾಯ ಬೇಡ್ವಾ !"

"ಎಲ್ಲಾ ಹಣವನ್ನು ನಾವೆಲ್ಲಿ ತಿಂದು ಹಾಕಿ ಬಿಡ್ತೀವೋ ಅನ್ನೋ ಅನುಮಾನ ವಿರಬೇಕು ಇನ್ನು ಅವರಿಬ್ಬರಿಗೆ ಕೊಡಬೇಕಾದದ್ದನ್ನು ಕೊಟ್ಟುಬಿಟ್ಟರೆ ನಿಶ್ಚಿಂತೆ."

"ಸಧ್ಯಕ್ಕೆ ಈ ಸುದ್ಧಿಯನ್ನು ಯಾರ ಎದುರಿಗೂ ಎತ್ತಲೇಬೇಡ. ಗುಂಡಣ್ಣಂಗೆ ತಿಳಿಸಲೇ ಬೇಡ. ಇದೆಲ್ಲಾ ಕಂಠೀದೇ ಕಿತಾಪತಿ. ಹೆಂಡತೀನ 'ಛೂ' ಬಿಟ್ಟಿದಾನೆ. ಹೆಂಡತಿಗೆ ಸೀರೆ ಒಡವೆ ತಂದುಕೊಡುವ ಯೋಗ್ಯತೆ ಇಲ್ಲ. ಬರೀ ಮನೆ ತುಂಬಾ ಮಕ್ಕಳು ಇವನ ರಸಿಕತನಕ್ಕಷ್ಟು ಬೆಂಕಿಹಾಕ." ಸಾತಕ್ಕ ರೋಷದಿಂದ ಉಸುರಿದಳು.

"ಈಗ ನೀವು ಸಿಟ್ಟು ಮಾಡಿಕೊಂಡರೆ ಏನು ಪ್ರಯೋಜನ ಬಿಡಿ"

"ಶಾಂತನ ಮದುವೆ ಸುದ್ಧಿ ಗೊತ್ತಾಗಿದೆ. ಕೈಯಲ್ಲಿ ಹಣ ಇರುತ್ತೇ ಅಂತ ಗೊತ್ತಾಗಿದೆ. ಅವನು ಹೇಳ್ದ. ಇವಳು ಬಂದ್ಲು. ಏನಾದ್ರೂ ಸಹಾಯ ಮಾಡ್ತಿನಿ ಅನ್ನೋ ದೊಡ್ಡ ಬುದ್ಧಿ ಬೇಡ್ವಾ ! ಕಿತ್ಕೊಳ್ಳೋಕೆ ನೋಡ್ತಾರಲ್ಲ ಥೇ ಎಂಥಾ ಜನ?"

"ಅವರಂತೂ ಬದಲಾಗುಲ್ಲ, ನೀವ್ಯಾಕೆ ಬಾಯಿ ಒಣಗಿಸಿಕೊಳ್ತೀರಿ! ಮಡೀಲಿ ಮಾಡಿದೀನಿ. ನೀವೂ ಸ್ವಲ್ಪ ಕಾಫಿ ಕುಡೀತೀರಾ !"

"ಹುಂ. ಕೊಡು ಮನಸ್ಸು ಕಲಕಿ ಹೋಗಿದೆ." ಲಕ್ಷ್ಮಿ, ಸಾತಕ್ಕ ಇಬ್ಬರೂ ಒಟ್ಟಿಗೇ ಕುಳಿತು ಕಾಫಿಯನ್ನು ಕುಡಿದರು. ಶಾಸ್ತ್ರಿ ತೋಟದಿಂದ ಹಿಂದಿರುಗಿ ಬರುವ ವರೆಗೂ ಅದೂ ಇದು ಮಾತನ್ನಾಡುತ್ತಿದ್ದರು.

* * *

ಒಂದು ವಾರದ ಮೇಲಾಗಿತ್ತು. ಪಾರ್ವತಿ ಮತ್ತೆ ಬಂದಿರಲಿಲ್ಲ. ಅವಳು ಬಳೆಗಳನ್ನು ಮಾಡಲು ಹಾಕಿದ್ದಾಳೋ ಇಲ್ಲವೋ ಅದೂ ಸಹ ತಿಳಿಯಲಿಲ್ಲ. "ನೋಡಿದ್ಯಾ..... ಲಕ್ಷ್ಮೀಪಾರ್ವತಿ ನನ್ನ ಬೆನ್ನಲ್ಲಿ ಬಿದ್ದ ತಂಗಿ. ಕೃತಜ್ಞತೆ ಅನ್ನೋದೇ ಇಲ್ಲ. ಕಂಠಿಯ ತರಹಾನೇ ಆಡ್ತಾಳೆ. ಮದುವೆಯ ತಯಾರಿಗೆ ಬಂದು ಸಹಾಯ ಮಾಡ್ತೀನಿ. ಅಂತ ಬಾಯಲ್ಲಿ ಕೂಡಾ ಹೇಳ್ಲಿಲ್ಲ. ಹೇಗೆ ಬದಲಾಗಿಬಿಡ್ತಾರೆ ನೋಡು...."

"ಹೋಗ್ಲಿ ಬಿಡಿ ಆಳು ಕಾಳು ಇದಾರೆ. ಹೇಗೊ ನಡೆಯುತ್ತೇ, ನಾನು ಹೀಗಂತೀನಿ ಅಂತ ಅಂದ್ಕೋಬೇಡಿ, ಕಂಠಿ, ಶ್ರೀನಿವಾಸ ಎಲ್ಲರೂ ಒಂದೇ ಜಾತಿ ನಾಗೂ ಇನ್ನೇನು, ಏನಾದ್ರೂ ಮಾತಾಡಿದಾಳಾ ?"

"ನಿನ್ನ ತಮ್ಮಂದಿರಿಗೆ ರಜ ಇದ್ದರೆ ಹತ್ತೂ ದಿನ ಮುಂಚಿತವಾಗಿ ಬಂದು

ನೆರವಾಗುವಂತೆ ಕೇಳು ಕಾಗದ ಬರೆಸು."

"ಅತ್ತಿಗೆ ಏನಂತಾಳೋ?" ಲಕ್ಷ್ಮಿ ಅನುಮಾನವನ್ನು ಪ್ರಕಟಿಸಿದಳು.

"ನಿನ್ನ ಅಣ್ಣ ಅತ್ತಿಗೆಗೆ ನೀನ್ಯಾಕೆ ಹೆದರಬೇಕು? ಅವರು ನಿಂಗೆ ಮಾಡಿರೋದು ಅಷ್ಟರಲ್ಲೇ ಇದೆ. ನಿನ್ನ ತಮ್ಮಂದಿರಿಗೆ ಇನ್ನು ಹೆಂಡತೀರು ಬಂದಿಲ್ಲ. ಸ್ವತಂತ್ರವಾಗಿದಾರೆ." ತಮಾಷೆಯಾಗಿ ನುಡಿದಳು

"ಈ ವಿಷಯದಲ್ಲಿ ನಿಮ್ಮ ಅಣ್ಣಂದೇ ಬೇರೆ ಸ್ವಭಾವ. ನಾನು ಹೇಳಿದಂತೆ ಒಂದು ದಿನವೂ ಕೇಳಿಲ್ಲ."

"ಸೀತಾರಾಮ, ಗುಂಡಣ್ಣ ಇಬ್ಬರೂ ಈ ವಿಷಯದಲ್ಲಿ ಮಾತ್ರ ಒಂದೇ ಸ್ವಭಾವ. ಹೆಂಡತಿ ಮೇಲೆ ಜೋರು ಮಾಡೋದು ಯಾಕೆ ಅಂತ ಅರ್ಥವೇ ಆಗುಲ್ಲ. ನಮ್ಮಪ್ಪನೂ ಹೀಗೇ ಆಡ್ತಿದ್ರು, ಅಮ್ಮನ್ನ ನೆನೆಸ್ಕೊಂಡ್ರೆ ಬೇಸರವಾಗುತ್ತೆ." ಸಾತಕ್ಕ ತಾಯಿಯನ್ನು ನೆನೆಸಿಕೊಂಡು ವ್ಯಥೆಗೊಂಡಳು.

"ಏನೇ ಸಾತು... ಅಮ್ಮನ ನೆನಪಾಯ್ತೇನೆ ? ಲಕ್ಷ್ಮಿ ಏನಾದ್ರೂ ಬೇಸರವಾಗುವ ಹಾಗೆ ಮಾತಾಡಿದ್ಲಾ ?" ಗುಂಡಣ್ಣ ವಿಚಾರಿಸಿದ.

"ಸುಮ್ಸುಮ್ನೆ ಅವಳನ್ನ ಅನ್ಬೇಡ. ನಿಂಗೆ ಅವಳ ಬಗ್ಗೆ ಕನಿಕರಾನೇ ಇಲ್ಲ. ಹಳ್ಳಿ ಮನೆಯ ಕೆಲಸ, ಮಕ್ಕಳ ಪೋಷಣೆ, ಈಗ ಮದುವೆಗೆ ತಯಾರಿ ಎಷ್ಟೆಷ್ಟು ಕೆಲಸಗಳಿವೆ. ಜೊತೆಗೆ ನಿನ್ನ ತೆಗಳಿಕೆಯ ಮಾತುಗಳು."

"ಯಾಕೆ ಸಾತು ? ಸಹಾಯಕ್ಕೆ ನೀನಿದೀಯ..... ಹಣಕಾಸು ಹೊಂದಿಸುಕ್ಕೆ ನಾನಿದೀನಿ, ಇನ್ನೇನಂತೆ, ಅತಿಯಾಯ್ತು ಇವಳದ್ದು, ಇವಳ ಜಾಯಮಾನವೇ ಇಷ್ಟು ವಿನಾಕಾರಣ ಏನೇನೋ ಹುಡುಕಿ ರೇಗಿಸ್ತಾಳೆ."

"ಸರಿ ಈಗ ನೀನು ಇವಳನ್ನು ರೇಗಿಸಬೇಡ. ಕಂಠೀನ, ಶೀನನ್ನ ಕೇಳು, ಸಹಾಯಕ್ಕೆ ಅವರವರ ಹೆಂಡತೀರನ್ನ ಕಳಿಸ್ಲಿ, ನಾನು ಒಬ್ಬಳೇ ಎಷ್ಟು ಕೆಲಸ ಮಾಡಿಯೇನು ?"

"ನಿನಗೂ ಇವಳ ಗಾಳಿ ಬೀಸಿದೆ. ಕಂಠಿ ಮನಸ್ಸಿಗೆ ಬಂದ ಗಿರಾಕಿ ಪಾರ್ವತಿಗೆ ಗೊತ್ತಿಲ್ಲದ್ದೇನಿಲ್ಲ ನಾಗು ಇನ್ನೊಂದು ಜಾತಿ ಅವಳು ಹೇಳಿದಂತೆ ಶೀನ ಕುಣೀತಾನೆ. ನಮ್ಮ ಸಮಯಕ್ಕೆ ಯಾರೂ ಆಗೋರಲ್ಲ. ವೈಕುಂಠನ ಊರ್ನಿಂದ ಇಬ್ಬರು ಆಳುಗಳನ್ನು ಕರೆಸೋಣ."

"ಆಳುಗಳು ಆಳುಗಳೇ ಮನೆಯೋರು ಆಗುಲ್ಲ. ಮನೆಯೋರು ಅಂತ ಒಂದಿಬ್ಬರಿದ್ದರೆ ಯೋಚನೆ ಇರಲ್ಲ. ನಿನ್ನ ಭಾಮೈದುನಂದಿರನ್ನ ಕರೆಸ್ಕೋ ಅವರುಗಳು ಬಂದರೆ ಖಂಡಿತಾ ಮನಸ್ಸಿಟ್ಟು ಸಹಾಯ ಮಾಡ್ತಾರೆ"

"ಏನಂತೀಯ ಲಕ್ಷ್ಮಿ? ನಿನ್ನ ತಮ್ಮಂದಿರನ್ನ ಕರೆಸ್ಕೋತೀಯ ? ನಿನ್ನ ಅಣ್ಣ

ವಿರಾಟರಾಯ ಏನಂತಾನೋ !" ಶಾಸ್ತ್ರಿ ಗೇಲಿ ಮಾಡುತ್ತಾ ಪ್ರಶ್ನಿಸಿದ.

"ಇಲ್ಲಿ ಅಣ್ಣಂದೇನು ಗುತ್ತಿಗೆ ?......" ನೀನು ಪತ್ರ ಬರಿ ಸಾತಕ್ಕ ಹೇಳಿದಳು ಲಕ್ಷ್ಮಿ ಮಾತನಾಡಿರಲಿಲ್ಲ.

"ಇನ್ನು ನಿನಗೇನು ಕೋಪ?" ತವರು ಮನೆಯಿಂದ ತಮ್ಮಂದಿರು ಬಂದರೆ ನಿನ್ನದೇ ಸಾಮ್ರಾಜ್ಯ ಒಂದ್ಲೋಟ ಕಾಫೀಗೂ ನಾನು ಪರದಾಡಬೇಕು." ಹಾಸ್ಯವಾಗಿ ಹೇಳಿದ.

"ನಾನಿದೀನಲ್ಲ, ನಾನು ನೋಡ್ಕೋತೀನಿ. ನನ್ನ ಸಾಮ್ರಾಜ್ಯ ಇದೇ ತಾನೇ?" ಇದ್ದಕ್ಕಿದ್ದಂತೆ ಸಾತಕ್ಕನ ದನಿ ನಡುಗಿತು. ಶಾಸ್ತ್ರಿ ಪೆಚ್ಚಾದ ಮಾತನ್ನು ಬದಲಾಯಿಸಿದ.

"ಪದ್ಮನಾಭಯ್ಯ ಅವನ ತಮ್ಮ ಇಬ್ಬರೂ ಹೊಸ ಮನೆ ಕಟ್ಟಿಸಿದ್ದಾರೆ. ಗೃಹಪ್ರವೇಶ ಆಗಿದೆ. ಮನೆಕೆಲಸ ಪೂರ್ತಿ ಮುಗಿದಿಲ್ಲ, ಅವರಿಬ್ಬರೂ ಮದುವೆಗೆ ಅಂತ ಮನೆಗಳನ್ನು ಬಿಟ್ಟು ಕೊಡೋಕೆ ತಯಾರಿದಾರಂತೆ. ನರಸಿಂಹಯ್ಯ ಹೇಳಿದ್ರು, ಒಂದು ಭಾರಿ ಚಿಂತೆ ತಪ್ಪಿತು" ನಿರಾಳವಾದ ಉಸಿರನ್ನು ತಳ್ಳಿದ.

"ಸಧ್ಯ ಒಳ್ಳೇದಾಯ್ತು ನೆಂಟರಿಷ್ಟರನ್ನೆಲ್ಲಾ ಸೀದಾ ಮದುವೆ ಮನೆಗೆ ಬಂದು ಇಳಿದುಕೊಳ್ಳುವ ಏರ್ಪಾಡು ಮಾಡು. ಇಲ್ಲಿಗೆ ಯಾರೂ ಬರೋದು ಬೇಡ."

"ಹುಂ, ಶೀನಂಗೆ ಈ ಜವಾಬ್ದಾರಿ ವಹಿಸ್ತೀನಿ, ಅವನೂ ಸ್ವಲ್ಪ ಮಾಡಲಿ ನಾಳೆ ನಾವು ಅವನ ಹೆಣ್ಣುಮಕ್ಕಳ ಮದುವೇಲಿ ಓಡಾಡ್ಬೇಕೋ ಬೇಡ್ವೋ ?"

"ನಾಗೂಗೆ, ಐದು ಜನ ತಂಗಿಯರು.... ಅಕ್ಕನ ಸಹಾಯಕ್ಕೆ ಓಡಿ ಬಂದು ನಿಲ್ತಾರೆ. ನಿನ್ನ ಹೆಂಡ್ತಿಗೆ ತಂಗೀರೆ ಇಲ್ಲವಲ್ಲೋ..." ಸಾತಕ್ಕ ತಕ್ಷಣ ಸುಮ್ಮನಾದಳು ತಾನು ಆ ಮಾತನ್ನು ಆಡಬಾರದಾಗಿತ್ತೆನಿಸಿ ಲಕ್ಷ್ಮಿಯ ಕಡೆ ನೋಡಿದಳು ಲಕ್ಷ್ಮಿಯ ಮುಖದಲ್ಲಿ ನೋವಿನ ಗೆರೆಗಳು ಮೂಡಿದ್ದವು.

"ಅತ್ತೇ.... ಈ ಹೂವು ಚೆನ್ನಾಗಿ ಬಂದಿದೆಯಾ ಅಂತ ನೋಡಿ." ಶಾಂತ ತಾನು ಹಾಕಿದ್ದ ದಿಂಬಿನ ಚೀಲದ ಮೇಲಿನ ಕಸೂತಿಯನ್ನು ತೋರಿಸಿದಳು.

"ಚೆನ್ನಾಗೇ ಬಂದಿದೆ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಒಂದೇ ಸಮನೆ ಹೊಲಿಗೆ ಕೆಲಸ ಮಾಡ್ಬೇಡ. ಕಣ್ಣು ನೋವು ಬರುತ್ತೆ ಅವಾಂತರವೇನೂ ಇಲ್ಲ, ಮದುವೆಗೆ ಇನ್ನು ಸಮಯವಿದೆ ಕಣ್ಣುಗಳಿಗೆ ವಿಶ್ರಾಂತಿ ಕೊಡು."

"ಹೋಗಿ ಅತ್ತೇ" ಶಾಂತ ನಾಚುತ್ತಾ ಎದ್ದು ಹೋದಳು

"ನೀವು ಹಾಕುವಷ್ಟು ನಯವಾಗಿ ನಾಜೂಕಾಗಿ ಬಂದಿಲ್ಲ ಅತ್ತಿಗೆ. ನಿಮ್ಮ ಕೆಲಸಗಳೆಲ್ಲಾ ಬಹಳ ಅಚ್ಚುಕಟ್ಟು" ಲಕ್ಷ್ಮಿ ಸಾತಕ್ಕನನ್ನು ಹೊಗಳಿದಳು.

"ಅವಳೂ ಕಲಿತ್ಕೋತಾಳೆ.... ನೀನೂ ಎಲ್ಲಾ ಎಷ್ಟು ಚೆನ್ನಾಗಿ ಹಾಕ್ತೀಯ ಬಟ್ಟೆಗಳನ್ನು ಹೊಲಿತೀಯ ಹೆಣ್ಣುಮಕ್ಕಳು ಇದನ್ನೇಲ್ಲಾ ಕಲಿತಿದ್ರೇ ಚೆನ್ನ."

"ಏನು ಬಂದ್ರೇನು? ಬಿಡುವೆ ಆಗುಲ್ಲ. ಸದಾ ಈ ಮನೆಯ ಕೆಲಸ ಬಟ್ಟೆ ಹೊಲಿಯೋದು ಬೇಕಾದಷ್ಟು ಬಿದ್ದಿದೆ ಯಾಕೋ ನನ್ಕೈಲಿ ಆಗ್ತಾನೇ ಇಲ್ಲ." ಇದ್ದಕ್ಕಿದ್ದಂತೆ ತಾನೂ ಗರ್ಭಿಣಿಯಾಗಿರುವುದು ಖಚಿತ ಎನಿಸಿ ಉದ್ವೇಗಗೊಂಡಳು ತಲೆ ಧಿಂ ಎಂದಿತು ಹಾಗೇ ಗೋಡೆಗೆ ಒರಗಿ ಕೂತುಬಿಟ್ಟಳು.

"ಏನಾಯ್ತೇ ಲಕ್ಷ್ಮಿ ಹಾಗ್ಯಾಕೆ ಕೂತ್ಬಿಟ್ಟೆ ?" ಸಾತಕ್ಕ ಆತಂಕದಿಂದ ಪ್ರಶ್ನಿಸಿದಳು.

"ಯಾಕೋ ತಲೆ ಸುತ್ತಿದ ಹಾಗಾಯ್ತು, ಬೆಳಗ್ನಿಂದ ಒಂದೆರಡು ಬಾರಿ ಹೀಗೇ ಆಯ್ತು....." ಸಾತಕ್ಕ ಮಾತನಾಡಲಿಲ್ಲ. ಅಡಿಗೆ ಮನೆಗೆ ಹೋಗಿ ನಿಂಬೆಹಣ್ಣಿನ ಶರಬತ್ತನ್ನು ಮಾಡಿ ತಂದುಕೊಟ್ಟಳು. ಅವಳು ಕುಡಿಯುವಷ್ಟರಲ್ಲಿ ರಾಗಿಣೀ ಪದ್ಮಿನಿ 'ನಂಗೇ ನಂಗೇ' ಎಂದು ಕೂಗುತ್ತಾ ಬಂದರು. ಲಲಿತಳೂ ಓಡಿ ಬಂದಳು ಶಾಂತ ದೂರದಿಂದಲೇ ನೋಡಿದಳು.

"ಏನಾಯ್ತಮ್ಮಾ ಅತ್ತೇ ಅಮ್ಮಂಗ್ಯಾಕೆ ಶರಬತ್ತು ಕೊಟ್ರಿ ?"

"ಏನಿಲ್ಲ, ನಿಮ್ಮಮ್ಮಂಗೆ ಮನೆ ಕೆಲಸ ಮಾಡಿ ದಣಿವಾಗಿದೆ ಬಿಡುವೇ ಇಲ್ಲ. ದೂರ ಸರೀರಿ ಗಾಳೀ ಬರಲಿ" ಶಾಸ್ತ್ರಿಯೂ ಅಲ್ಲಿ ಬಂದು ನಿಂತ.

"ಏನಾಯ್ತೇ ? ಕೆಲಸ ಮಾಡುಕ್ಕೆ ಬೇಸರವಾಗಿ ಕೂತ್ಕೊಂಡ್ಯಾ ?"

"ತಲೆಗೆ ಈ ಗೂಟ ಬಡೀತೂ." ಗೋಡೆಯ ಕಡೆ ತೋರಿದಳು

"ಉದ್ದಕ್ಕಿರೋರಿಗೆ ಹಾಗೇ ಗೂಟವೂ ಬಡಿಯುತ್ತೇ ಛಾವಣಿಯೂ ತಗುಲುತ್ತೆ. ಸ್ವಲ್ಪ ತಗ್ಗಿ ಬಗ್ಗಿ ಓಡಾಡ್ಬೇಕು ಮತ್ತೇ ಮತ್ತೇ ಹೀಗೆ ಮಾಡ್ಕೋಬೇಡ ಮದುವೆಯ ಹೊತ್ತಿಗೆ ಕಷ್ಟ ಆಗುತ್ತೆ" ಅವನು ಹೆಂಡತಿಗೆ ಬುದ್ಧಿ ಹೇಳಿ ಅಲ್ಲಿಂದ ಕದಲಿದ. ಸಾತಕ್ಕ ಅಡಿಗೆ ಮನೆಗೆ ತೆರಳಿದಳು ಲಕ್ಷ್ಮಿಗೆ ನಾನಾ ಆಲೊಚನೆಗಳು ಹಾವು ಮನೆಯೊಳಗ್ಗೆ ನುಗ್ಗಿದ ಸಂಜೆ ನೆನಪಾಗಿತ್ತು. ಅದರೊಂದಿಗೇ ಆ ಮಧ್ಯಾಹ್ನ ತಾವಿಬ್ಬರೂ ಒಟ್ಟಿಗೇ ಇದ್ದುದು ನೆನಪಾಗಿ ಭಯ ಆವರಿಸಿಕೊಂಡಿತು. ಒಂದೇ ದಿನದಲ್ಲಿ ಎರಡು ತಪ್ಪು ಮುಂದೇನು ?"

ಯಾರಿಗೂ ಗೊತ್ತಾಗದಂತೆ, ಹಿತ್ತಲಿನಲ್ಲಿ ಬಿಟ್ಟಿದ್ದ ಪರಂಗಿಕಾಯಿಯನ್ನು ತಿಂದಳು. ಉಷ್ಣದ ಪದಾರ್ಥಗಳನ್ನು ಹೆಚ್ಚು ಹೆಚ್ಚು ಸೇವಿಸಿದರೂ ಫಲಕಾರಿಯಾಗಿರ ಲಿಲ್ಲ ದಿನ ಕಳೆದಂತೆ ಊಟ ಸೇರದಾಯಿತು. ಸುಸ್ತು ಬಳಲಿಕೆ ಹೆಚ್ಚಾಗಿತ್ತು. ಬಯಕೆ ಸಂಕಟವಾಗುತ್ತಿತ್ತು. ಗುಟ್ಟಾಗಿ, ಹೊನ್ನಿತಿಗೆ ಹೇಳಿ ಕಳಿಸಿದಳು. ಬಾಯಲ್ಲಿದ್ದ ತಾಂಬೂಲವನ್ನು ಬದಿಗೆ ಉಗುಳಿ, ಕೆಂಪಾಗಿದ್ದ ಹಲ್ಲನ್ನು ಪ್ರದರ್ಶಿಸಿದಳು ಎರಿಗೆ ನೋವನ್ನು ಉಣ್ತಾ ಬಿದ್ಕೋಂಡಿದಿರೇನೋ ಅಂತ ಅಂದ್ಕೊಂಡು ಓಡೋಡಿ ಬಂದೆ. ನೀವು ನೋಡಿದ್ರೆ ಇಂಗೆ ಇದೀರಿ ಯಾರ್ಗ್ಗೇ ಎರ್ಗ್ಗೆ ?" ಲಕ್ಷ್ಮಿ ಮೆಲ್ಲಗೆ ಮಾತನಾಡುವಂತೆ ಸಂಜ್ಞೆ ಮಾಡಿ ಅವಳನ್ನು ಕೊಟ್ಟಿಗೆಗೆ ಕರೆದೊಯ್ದಳು.

"ಮೆಲ್ಲಗೆ ಮಾತಾಡೆ ಹೊನ್ನಿ, ಯಾರ್ಗೂ ಹೆರಿಗೆ ಇಲ್ಲ, ನಂಗೆ ಎರಡು ತಿಂಗಳಾಗಿದೆ. ನಂಗೆ ಈ ಬಸಿರು ಬೇಡ... ಮೈ ಇಳಿದು ಹೋಗೋ ಹಾಗೆ ಔಷ್ದ ಕೊಡ್ತೀಯಂತಲ್ಲ ಅದಕ್ಕೇ ಹೇಳಿ ಕಳಿಸ್ದೆ."

"ಸಿವಾ ಸಿವಾ ನಾನಿಂಥಾ ಕೆಲ್ಸ ಮಾತ್ರ ಮಾಡಲ್ರವ್ವಾ, ಏನಿದ್ರೂ ಎರ್ಗೆ ಮಾಡ್ಸಿ ಮಕ್ಕಳ್ನ ಉಟ್ಸೋದು. ಈ ಜನ್ಮ ತೆಗ್ಯೋ ಕೆಲ್ಸ ನಾನು ಮಾಡುಲ್ಲ. ಅದು ಪಾಪದ ಕೆಲ್ಸ...."

"ಇದು ಹತ್ಯೆ ಅಲ್ಲ ಕಣೇ ಹೊನ್ನಿ. ಪಾಪ ಏನೇ ಇದ್ರೂ ನನಗಿರಲಿ ಇನ್ನೆರಡು ತಿಂಗಳಿಗೆ ನನ್ನ ಮಗಳು ಶಾಂತನ ಮದುವೆ ನಾ ಹೇಗೆ ಓಡಾಡ್ಲಿ.... ಕೈಯಲ್ಲಿ ಕೆಲಸ ಹರಿಯಲ್ಲ ಅಲ್ದೇ ಎಲ್ರಿಗೂ ಗೊತ್ತಾಗುತ್ತೆ."

"ಗೊತ್ತಾದ್ರೆ ಗೊತ್ತಾಗ್ಲಿ ಬಿಡ್ರವ್ವಾ ಈ ಎಲ್ಡು ತಿಂಳ್ನಾಗೆ ಒಟ್ಟೆ ಏನೂ ಗುಡಾಣ್ದಂಗೆ ಬೆಳೆದೋಗುಲ್ಲ. ಯಾರ್ಗೆ ಗೊತ್ತಾಗ್ತೈತೆ ? ನೀವು ಸುಮ್ನಿರಿ ಅಂಗೆಲ್ಲಾ ಮಾಡಾಕ್ಕಾಗ್ದು" ತಂಬಾಕಿನ ರಸವನ್ನು ಪಿಚಕ್ಕನೆ ಉಗುಳಿ ಬಂದಳು.

"ಹೆರಿಗೆ ಮಾಡ್ಸಿದ್ರೆ ಕೈ ತುಂಬಾ ಕಾಸು ಸಿಗುತ್ತೆ ಅನ್ನೋ ದುರಾಸೆ ನಿಂಗೆ. ಅದೇ ಹಣಾನ ನಾನು ಕೊಡ್ತಿನಿ. ನಾನು ಹೇಳಿದ್ಹಾಗೆ ಕೇಳು. ಇದೊಂದು ಬಾರಿ ಅಷ್ಟೇ..... ಈ ಬಸುರನ್ನು ತೆಗೆಯೋದಕ್ಕೆ ಔಷ್ದ ಕೊಡು.

"ಏಯ್.... ಬುಡ್ರವ್ವಾ ಕದ್ದು ಬಸುರಾದೋರಂಗೆ ಆಡ್ತೀರಲ್ಲವ್ವಾ ಅಯ್ನೋರಿಗೆ ಈ ವಿಸ್ಯ ಗೊತ್ತಾ ?" ಹೊನ್ನಿ ಮತ್ತೆ ಹಲ್ಲುಗಳನ್ನು ತೋರಿದಳು.

"ಏನೇನೋ ಮಾತಾಡ್ಬೇಡ ನೀನು.....ಅವ್ರಿಗೇನು ಗೊತ್ತಾಗುತ್ತೇ ನನ್ನ ಕಷ್ಟ?"

"ಅಂಗಾರೆ ಅವರ್ನ ಕರ್ದು ಕೇಳೋವಾ ? ಅವರ್ಗು ಬ್ಯಾಡಾಂತಾದ್ರೆ ನಾನು ಮದ್ದು ಕೊಡ್ತೀನಿ."

"ಅವರನ್ನು ನೀನೇನು ಕೇಳೋದು ಈ ಬಸಿರು ನಂಗೆ ಬೇಡ ಅಷ್ಟೆ.... ಇದು ವರ್ಗೆ ನೀನು ಯಾರ್ಗೂ ಬಸಿರು ತೆಗೆಯೋಕೆ ಔಷಧಿ ಕೊಟ್ಟೇ ಇಲ್ವಾ ?"

"ಕೊಟ್ಟಿವ್ನಿ, ಆದ್ರೆ ನಿಮ್ಮಂಥ ಸಂಸಾರ್ಸ್ಥೋರ್ಗಲ್ಲ. ಯಾವನ್ನೋ ಮಡಿಕ್ಕಂಡು ಮನೆಯೋರ್ಗೆ ತಿಳಿದಂಗೆ ಬಸುರಾಗ್ತಾರಲ್ಲ ಅಂತೋರ್ಗೆ ಅದಕ್ಕೇ ನಾ ತಮಷೆ ಮಾಡಿದ್ದು ಅಯ್ಯಾರಿಗೆ ಗೊತ್ತಾ ಅಂತ ?" ಸೆರಗನ್ನು ಇಟ್ಟು ನಕ್ಕಳು ಲಕ್ಷ್ಮಿಗೆ ಕೋಪ ಬಂತು.

"ನಿನ್ನಂಥೋಳ ಹತ್ರ ಮಾತಾಡೋರ್ಗೆ ಮರ್ಯಾದೆ ಬರುಲ್ಲ. ಬಾಯಿಗೆ ಬಂದ್ಹಾಗೆ ಮಾತಾಡ್ತೀಯಲ್ಲ ನಡೀ ಅತ್ಲಾಗೆ." ಲಕ್ಷ್ಮಿ ಮುಖ ತಿರುಗಿಸಿದಳು.

"ಕ್ಷಾಪ ಮಾಡ್ಕೋ ಬೇಡರವ್ವಾ, ನಾಳೀಕೆ ಏನಾದ್ರೂ ಎಚ್ಚು ಕಡ್ಮೆ ಆದ್ರೆ ನನ್ತಲೆಮ್ಯಾಕೆ ಬತ್ತದೆ. ನಂಗೂ ಮರ್ವಾದೆ ಐತೆ. ನೀವು ವಯಸ್ನಾಗೆ ಇನ್ನು ಚಿಕ್ಕೋರು ಇನ್ನೊಂದು ಗಂಡ್ಮಗ ಉಟ್ಲಿ ಬುಡಿ."

"ಗಂಡೇ ಹುಟ್ಟುತ್ತೇ ಅಂತ ಹೇಗೇ ಹೇಳೋದು ?"

"ನಾನು ಎರ್ಗೆ ಮಾಡ್ಸಿದ್ರೆ ಉಟ್ಟೋವೆಲ್ಲಾ ಗಂಡು ಐಕ್ಳುಗಳೇ ಸೀಕಂಠೋಪ್ನೋರ ಎಂಡ್ರಿಗೆ ನಾನೇ ಎರ್ಗೆ ಮಾಡ್ಸೋದು. ಎಲ್ಲಾ ಗಂಡೇ ಅಲ್ಲವ್ವಾ ಉಟ್ಟಿರೋದು. ಆವಮ್ಮ ಮತ್ತೇ ಬಿಮ್ಮನ್ನಿ..... ಊರು ಬಿಟ್ಟು ಎಲ್ಲೂ ಓಗ್ಬೇಡ್ವೇ ಹೊನ್ನಿ ಅಂತ ಆವಯ್ಯಾ ಸಿಕ್ದಾಗ ಏಳವ್ರೆ. ಈ ಸಾರಿಯೂ ಉಟ್ಟಾದೂ ಗಂಡೇಯ. ನನ್ನಾಣೆಯಾಗೂ ಸುಳ್ಳಲ್ಲ. ಆವಮ್ಮ ನಿಮ್ಮಂಗೆ ಎಂದೂ ಆಡಿದ್ದೇ ಕಾಣೆ. ಸಿವ ಕೊಟ್ಟಿದ್ನ ಕೈತುಂಭಾ ತುಂಬ್ಕೋತಾರೆ ನಾ ಒಂಟೇ."

"ಅವರ್ಮನೆ ವಿಷಯ ಅವರದ್ದು, ನಂಗ್ಯಾಕೆ ? ಈಗೇನು ನೀನು ಔಷ್ಧ ಕೊಡ್ತೀಯೋ ಇಲ್ವೋ. "

"ಇಲ್ರವ್ವಾ, ನಾ ಕೊಡಾಕಿಲ್ಲ. ಏನಾರ ಬೈಕೊಳ್ಳಿ... ದಿನಾ ತುಂಬಿದ್ಮೇಲೆ ಏಳಿ ಕಳ್ಸಿ... ನಾನೇ ಬಂದು ಎರ್ಗೆ ಮಾಡಿಸ್ತೀನಿ ಗಂಡು ಮಗೀನೇ ಉಟ್ಟೋದು ನಾನೀಗ್ಲೇ ಏಳಿವ್ನಿ. ನನ್ನ ಬಾಯರಕೆ ಎಂದೂ ತಪ್ಪಿದ್ದಿಲ್ಲ."

"ಏನು ನಿನ್ನ ಬಾಯೋ..... ತಂಬಾಕಿನ ವಾಸ್ನೆ ಬಡೀತಿದೆ."

"ಎಲೆ ಅಡ್ಕೆ ಇದ್ರೆ ಕೊಡಿ. ತಂಬಾಕಿಗೆ ಕಾಸು ಕೊಡಿ. ನೀವು ಏಳಿಕಳ್ಸಿದ್ಕೂಡ್ಲೆ ಓಡಿ ಬಂದಿವ್ನಿ." ನೆನೆಸಿಕೊಂಡವಳಂತೆ ತಕ್ಷಣ ಕೇಳಿದಳು.

"ಈಗ ನಿಂಗ್ಯಾಕೆ ಕಾಸು ? ಔಷ್ದ ಕೊಡ್ಲಿಲ್ಲ ಹೆರಿಗೆ ಮಾಡ್ಸಿಲ್ಲ, ಸುಮ್ನೇ ಹೋಗು."

"ನೀವು ಇಂಗೆ ಇಂತಾದಕ್ಕೆ ಕರ್ಸಿದ್ರಿ ಅಂತ ನಾನು ಯಾರ ಕೂಟ ಎಳಾಕಿಲ್ಲ.... ನೀವು ಕಾಸು ಕೊಟ್ರೆ." ಮತ್ತೆ ಹಲ್ಲುಗಳನ್ನು ಪ್ರದರ್ಶಿಸಿದಳು.

"ಇದೋಳ್ಳೇ ಚೆನ್ನಾಯ್ತುಲ್ಲ.....ಹೇಳ್ಕೋ ಹೋಗು ನಾನು ಹೆದರುಲ್ಲ"

"ಸೀಕಂಠಪ್ಪಂಗೆ ಗೊತ್ತಾದ್ರೆ ಪಂಚಾಯ್ತೀ ಮಾಡಿಸ್ತಾರೆ ಅಷ್ಟೇ...."

"ನಾನು ನಿನ್ನ ಶ್ರೀಕಂಠಪ್ಪಂಗೆ ಹೆದರಲ್ಲ ಹೋಗು." ಹಾಗೆ ಹೇಳಿದರೂ ತನ್ನ ವಿಷಯ ಬಯಲಾಗುವುದು ಅವಳಿಗೆ ಬೇಕಿರಲಿಲ್ಲ ತನ್ನ ಸೀರೆಯ ನೆರಿಗೆಯ ಬಾಳೆ ಕಾಯಿಗೆ ಸಿಕ್ಕಿಸಿ ಇಟ್ಟುಕೊಂಡಿದ್ದ ಎಂಟಾಣೆಯನ್ನು ಅವಳ ಕೈಗೆ ಹಾಕಿದಳು ಹೊನ್ನಿತಿ ಎಂಟಾಣೆಯ ನಾಣ್ಯವನ್ನು ಹಾಗೇ ಹೀಗೇ ತಿರುಗಿಸಿ ನೋಡಿದಳು.

"ಅದೇನು ಕಮ್ಮೀ ಅಲ್ಲ, ಅರ್ಧರೂಪಾಯಿ ಅದೇ ಹೆಚ್ಚು ಈಗ ಹೋಗು."

"ಯಾಕ್ರವ್ವಾ ಅಂಗೆ ಅಟ್ಟೀರಿ ಕರೆಸ್ದೋವ್ರು ನೀವೇ ಅಲ್ಲವ್ರಾ.. ಕಾಸು ಬೇಡ ನೀವೇ ಮಡಿಕ್ಕಳ್ಳಿ. ಒಂದ್ಸೇರು ಅಕ್ಕಿ, ಒಂದು ಪಾವು ಬ್ಯಾಳೆ ಕಾಳು ಒಂದೇ ಅಳೇ ಶ್ಯಾಲೆ ಕೊಟ್ಬಿಡಿ. ನಾ ಒಂಟೋಯ್ತಿನಿ."

"ಈಗ ಅದನ್ನೆಲ್ಲ ಕೊಟ್ರೆ, ಮನೆಯೋರ್ಗೆಲ್ಲಾ ಅನುಮಾನ ಬರುತ್ತೇ ಮದುವೆ

ಹೊತ್ತಿಗೆ ಬಾ ಆಗ ಎಲ್ಲಾ ಕೊಡ್ತೀನಿ."

"ಈಗ ಅರ್ಧಸೇರು ಅಕ್ಕಿನಾದ್ರೂ ಕೊಡಿ ಯಾರಾರೂ ಕೇಳಿದ್ರೆ ನಾನೇ ಓಗಿ ಕೇಳ್ದೆ ಅಕ್ಕೀನ ಕೊಟ್ರು ಅಂತ ಏಳ್ತೀನಿ." ಲಕ್ಷ್ಮಿ ಒಳಗಿನಿಂದ ಅರ್ಧಸೇರು ಅಕ್ಕಿ ತಂದು ಅವಳ ಸೀರೆಯ ಮಡಿಲಿಗೆ ಸುರಿದಳು. ಲಕ್ಷ್ಮಿ ಒಳಕ್ಕೆ ಬಂದಳು.

"ಯಾರದು ಬಂದದ್ದು ! ಹೊನ್ನಿತಿ ಧ್ವನಿ ಇದ್ದ ಹಾಗಿತ್ತು."

"ಹೌದು ಅತ್ತಿಗೇ..ಅವಳೇ ಬಂದಿದ್ದೋಳು"

"ಅವಳೇ ಬಂದಿದ್ಲೋ ನೀನೇ ಹೇಳೀ ಕಳಿಸಿದ್ಯೋ ?" ಲಕ್ಷ್ಮಿಗೆ ಒಂದು ಗಳಿಗೆ, ಯಾಕೋ ಏನೋ ಸುಳ್ಳು ಹೇಳುವ ಮನಸ್ಸಾಗಿಲ್ಲ.

"ನಾನೇ ಹೇಳಿ ಕಳಿಸಿದ್ದೆ ಅತ್ಗೆ...." ಕ್ಷೀಣವಾದ ಸ್ವರದಲ್ಲಿ ನುಡಿದಳು.

"ನಿಂಗ್ಯಾಕೆ ಇಂಥಾ ಬುದ್ಧಿ ಬಂತು ? ಇದು ಪಾಪದ ಕೆಲಸ ಅಲ್ವಾ ?"

"ಯಾಕೋ ಭಯ ಆಗುತ್ತೇ ಅಗ್ತಿಗೇ...ಮತ್ತೊಂದು ಹೆಣ್ಣುಮಗು ಹುಟ್ಟಿ ಬಿಟ್ರೇ.....ನಂಗೆ ಹೆಣ್ಣು ಮಗು ಹುಟ್ಟಿದಂತೆ ಪದೇಪದೇ ಕನಸು ಬೀಳುತ್ತೆ"

"ಕನಸ್ಸೆಲ್ಲಾ ನಿಜವಾಗುಲ್ಲ. ಅದಕ್ಕೇ ಹೆದರ್ತಾರಾ ! ಹೆಣ್ಣೋ ಗಂಡೋ ಅದೂ ಒಂದು ಸೃಷ್ಟಿ... ಅದನ್ನು ನಾವು ಒಪ್ಕೋಬೇಕು. ಅದು ಬಿಟ್ಟು ಹುಟ್ಟುಕ್ಕೆ ಮುಂಚೇನೇ ಚಿವುಟಿ ಹಾಕೋದು ಮಹಾಪಾಪ ಆಗುತ್ತೇ ಲಕ್ಷ್ಮೀ"

"ಮನೆಗೆ ನಾಗರಹಾವು ಹೊಕ್ಕ ದಿನದಿಂದ ನನ್ನ ತಲ್ಲಣ ಹೆಚ್ಚಾಗಿದೆ ಅತ್ಗೇ... ನಾವು ಅದನ್ನು ಕೊಲ್ಲಿಸಿ ಬಿಟ್ಟಿದೀವಿ ಪಾಪ ಮಾಡಿದೀವಿ."

"ಅದಕ್ಕೂ ಇದಕ್ಕೂ ಏನು ಸಂಬಂಧ? ಹಾಗೆ ನಿಂಗೆ ಭಯ ಇದ್ದರೆ ಕುಕ್ಕೆ ಸುಬ್ರಹ್ಮಣ್ಯಂಗೆ ಹರಕೆ ಹೊತ್ಕೋ. ಮಡೀಲಿ ಮುಡಿಪು ಕಟ್ಟಿಡು ಇಷ್ಟರ ಮೇಲೆ ದೇವರ ಇಚ್ಛೇ ಹೇಗಿದೆಯೋ ಹಾಗಾಗುತ್ತೆ. ಅದಕ್ಕೆಲ್ಲಾ ಚಿಂತಿಸುತ್ತಾ ಹೋದರೆ ಕೊನೆಯೇ ಇಲ್ಲ."

"ನೀವೇನೋ ಸುಲಭವಾಗಿ ಹೇಳಿಬಿಡ್ತೀರಿ ಅತ್ಗೆ. ಅದರೆ ಹಿಂಸೇನ ಅನುಭವಿಸ್ತಾ ಇರೋಳು ನಾನು."

"ಹೌದು ಲಕ್ಷ್ಮಿ ನಿನ್ನ ಮಾತು ನಿಜ. ನಿನ್ನ ಹಿಂಸೆ ನನಗೆ ಅರ್ಥವಾಗುಲ್ಲ. ಆದ್ರೆ ನಾನು ವಯಸ್ನಲ್ಲಿ ನಿಂಗಿಂತ ದೊಡ್ಡೋಳು ನೋಡ್ಕೊಂಡು ಹೇಗೆ ಸುಮ್ಮನಿರ್ಲಿ? ಏನಾದ್ರೂ ಹೆಚ್ಚು ಕಡಿಮೆ ಆದರೆ, ನೀನೂ ನನ್ನನ್ನೇ ಅಂತೀಯ... ಎಲ್ಲರೂ ನನ್ನನ್ನೇ ದೂಷಿಸ್ತಾರೆ ಗೂಬೆ ತರಹ, ಸುಮ್ಮನೇ ನೋಡ್ಕೊಂಡು ಕೂತಿರೋದು ಹೇಗೆ ?"

"ನಾನು ಎಂದಾದ್ರೂ ನಿಮ್ಮ ಹತ್ರ ಕಟುವಾಗಿ ಮಾತನಾಡಿದೀನಾ ಅತ್ಗೇ?"

"ಇಲ್ಲ, ನೀನು ಎಂದು ಆಗಿಲ್ಲ, ಮುಂದೆಯೂ ಆಗಲ್ಲ ನಂಗೊತ್ತು. ನನ್ನನ್ನ

ನಾನೇ ಗೂಬೆ ಅಂತ ಅಂದ್ಕೊಂಡೆ ಹೊನ್ನಿ ಏನಂದ್ಲು ?"

"ಅಯ್ಯೋ ಅದೊಂದು ಪೀಡೆ ನನ್ನ ಮಾತಿಗೆ ಹೂಂ ಅನ್ನಲಿಲ್ಲ ಕಾಸು ಮಾತ್ರ ಕೊತ್ಕಂಡ್ಲು. ಅಕ್ಕಿ ಹಾಕಿಸ್ಕೊಂಡ್ಲು. ಸೀರೆ ಬೇರೆ ಬೇಕಂತೆ. ಕೊಡ್ದೆ ಇದ್ದರೆ ಶ್ರೀಕಂಠಪ್ಪನ ಮನೇಲಿ ಹೇಳೀ ಪಂಚಾಯ್ತಿ ಮಾಡಿಸ್ತಾಳಂತೆ ನೋಡಿದ್ರಾ ಅತ್ತಿಗೆ ಈ ಸೂಲಗಿತ್ತಿಯ ಧಿಮಾಕು..." ಸಾತಕ್ಕ ಬಾಯ್ತುಂಬಾ ನಕ್ಕು ನುಡಿದಳು

"ಅಂಥೋರ್ಗೇ ಕಾಲ ಹೆದ್ರಿಸಿದ್ರೆ ಹೆದರೋಕೆ ನಾವು ಇದೀವಲ್ಲ. ಹೋಗ್ಲಿ ಬಿಡು. ಭಾಗವತ ಹೇಳ್ಕೋತಾ ಇದೀನಿ. ಜೋರಾಗಿ ಹೇಳ್ತೀನಿ ನೀನೂ ಕೇಳಿಸ್ಕೋ... ಗುಂಡಣ್ಣ ಬರೋ ಹೊತ್ತಾಯ್ತು, ಈ ಪುರಾಣನೆಲ್ಲಾ ಇಲ್ಲಿಗೆ ಬಿಡು."

"ನಿಮ್ಮ ಜೊತೇಲಿ ನಾನೂ ಹೇಳ್ತೀನಿ." ಲಕ್ಷ್ಮಿ ದನಿ ಗೂಡಿಸಿದಳು.

* * *

ವೆಂಕಟಾಚಲಯ್ಯ ನಾಗಪ್ಪಭಟ್ಟರು ಹಾಗೂ ಕಂಠಿಯ ಮನೆಗಳಿಗೆ ಲಕ್ಷ್ಮಿ, ಶಾಸ್ತ್ರಿ ಜೊತೆಯಾಗಿ ಹೋಗಿ ಮದುವೆಯ ಆಹ್ವಾನ ಪತ್ರಿಕೆಯನ್ನು ಕೊಟ್ಟು ಮಂತ್ರಾಕ್ಷತೆಯನ್ನು ಕೊಟ್ಟು ಆಹ್ವಾನಿಸಿದರು. ಇದು ನಮ್ಮ ಮನೆಯಲ್ಲಿ ನೆರವೇರುತ್ತಿರುವ ಮೊದಲ ಮಂಗಳ ಕಾರ್ಯ ಎಲ್ಲರೂ ದಯಮಾಡಿಸಿ ನವ ದಂಪತಿಗಳನ್ನು ಆಶೀರ್ವದಿಸಬೇಕು ಶಾಸ್ತ್ರಿ ವಿನೀತನಾಗಿ ಕೇಳಿಕೊಂಡ.

"ನಾನು ಈ ಹೊಟ್ಟೆ ಹೊತ್ಕೊಂಡು ಹೇಗೆ ಬರ್ಲೆ ಲಕ್ಷ್ಮಿ. ನಾನು ಇಲ್ಲಿಂದಲೇ ಆರ್ಶಿರ್ವಾದ ಮಾಡ್ತೀನಿ."

"ಈ ಪದ್ಮಾವತೀನ ಒಬ್ಬಳನ್ನೇ ಬಿಟ್ಟು ನಾನು ಹೇಗಯ್ಯಾ ಬರಲಿ! ಇವಳಿಗೆ ಈ ಸಾರಿ ಅವಳಿ ಮಕ್ಕಳೇ ಹುಟ್ಟೋದು." ಕಂಠಿ ಗೇಲಿ ಮಾಡಿದ.

"ಅಂತೂ ನಮ್ಮ ಮನೆಯ ಸಮಾರಂಭಕ್ಕೆ ಬರದೇ ಇರೋಕ್ಕೆ ಕಾರಣ ಹುಡುಕಿದೀರಿ. ಮಕ್ಕಳನ್ನಾದ್ರೂ ನಮ್ಮ ಜೊತೆ ಕಳಿಸು."

"ದತ್ತನ ವಿಷಯ ನಿಂಗೊತ್ತು. ರಾಜ ಮೀಸೆ ಬಂದ ಹುಡುಗ. ನಾನು ಹೇಳಿದ ಹಾಗೆಲ್ಲಿ ಕೇಳ್ತಾನೆ ? ಮೀನಾಕ್ಷಿ ಅತ್ತೇ ಮನೇಲಿದಾಳೆ. ಇನ್ನು ಉಳಿದೋವು ಬರೀ ಚೇಷ್ಟೆಯೋವು.....ಎಲ್ಲಾದ್ರೂ ಕಳೆದು ಹೋದ್ರೆ ಹುಡುಕೋರು ಯಾರು ? ಆಮೇಲೆ ನಿನ್ನ ತಂಗೀನ ನೀನೇ ಸಮಧಾನ ಮಾಡಬೇಕಾಗುತ್ತೇ.."

"ಹೀಗೆಲ್ಲಾ ಯಾಕೆ ಮಾತಾಡ್ತೀಯೋ ಭಾವ ನಾವೂ ಮಕ್ಕಳೊಂದಿಗರು ಈ ಮಕ್ಕಳೂ ನಮ್ಮ ಮಕ್ಕಳಂತೆ ನೋಡಿಕೊಳ್ದೇ ಇರ್ತೀವಾ ?"

"ಸಾವಿತ್ರಿ ಬರೋದಾದ್ರೆ ಕಳಿಸಿಕೊಡ್ತೀನಿ. ಅವಳೊಬ್ಬಳಿಗೆ ಜವಾಬ್ದಾರಿ ಇರೋದು. ಅಲ್ಲದೆ ಮದುವೆ ಮಂಟಪದಲ್ಲಿ ಏನು ಕೆಲಸ. ಆರತಿ ಎತ್ತಬೇಕೇ? ಕುಂಕುಮ ಕೊಡಬೇಕೇ ?....." ಶಾಸ್ತ್ರಿಯ ಮುಖ ಕೆಟ್ಟಿತು. ಎದ್ದು ನಿಂತು ಲಕ್ಷ್ಮಿಯನ್ನು

ಹೊರಡಿಸಿದ. ಪಾರ್ವತಿ ಅರಿಶಿನ ಕುಂಕುಮವನ್ನು ಕೊಟ್ಟಳು ಅವರ ಹಿಂದೆ ಬಂದವಳು ರಸ್ತೆಯ ತನಕ ಬಂದಳು.

"ಸಾವಿತ್ರಿಯ ಹತ್ರ ಇದನ್ನೇಲ್ಲಾ ಹೇಳ್ಬೇಡ ಲಕ್ಷ್ಮಿ ನೊಂದ್ಕೋತಾಳೆ."

"ನಿನ್ನ ಗಂಡಂಗೆ ಸ್ವಲ್ಪ ಬುದ್ದಿ ಹೇಳ್ಬಾರ್ದಾ ಪಾತು? ಸಾತುದೇನು ತಪ್ಪಿದೇ? ಯಾಕೆ ಹೀಗೆ ನೋಯುವಂತೆ ಮಾತಾಡ್ತಾನೆ ?"

"ನಂಗೊತ್ತಿಲ್ಲ ಗುಂಡಣ್ಣ. ಏನಾದ್ರೂ ಆಡಿದ್ರೆ ಊರು ಹೊಲಿಗೇರೀನ ಒಂದು ಮಾಡ್ತಾರೆ. ನಂಗೂ ಸಾಕಾಗಿ ಹೋಗಿದೆ. ಜೊತೆಗೆ ಈ ಬಸಿರು ಬಾಣಂತನ ನಾನೆಲ್ಲಿ ಹಾಯಾಗಿದೀನಿ?"

"ಹೋಗ್ಲಿ ಬಿಡಿ ಪಾರ್ವತಿ. ನಿಮ್ಮ ಹೆರಿಗೆ ಸುಖಮುಖವಾಗಿ ಕಳೆದ್ರೆ ಸಾಕಾಗಿದೆ. ಬಿಡುವಾದಾಗ ಬನ್ನಿ ಅತ್ತಿಗೆ ಪುರಾಣ ಪುಣ್ಯಕತೆ ಓದಿ ಹೇಳ್ತಾರೆ. ನಿಮ್ಮ ಮನಸ್ಸಿಗೂ ನೆಮ್ಮದಿ ಸಿಗುತ್ತೆ."

"ಅಷ್ಟೆ ಬಿಡುವೆಲ್ಲಿದೆ! ಈ ಬಂಧನವೇ ಒಂದು ಪುರಾಣ. ಈ ಜಂಝಾಟವೇ ಒಂದು ಪುಣ್ಯಕತೆ. ನಿತ್ಯ ಇದೇ ತಾನೇ ?" ಪಾರ್ವತಿ ವ್ಯಥೆಯಿಂದ ನುಡಿದಳು.

* * *

ಚಿಗರೆಯಂತೆ ಓಡಿ ಬರುತ್ತಿದ್ದ ಲಲಿತಳನ್ನು ಕಂಡು ರಾಜ ಸೈಕಲ್ಲನ್ನು ನಿಲ್ಲಿಸಿ ಇಳಿದು ನಿಂತ "ಏನೇ ಜಿಂಕೆ ಮರಿ ! ಎಲ್ಲಿಂದ ಓಡಿ ಬರ್ತಿರ್ದೀಯೆ ?" ನಗುತ್ತಾ ಮಾತನಾಡಿಸಿದ.

"ಸ್ಟೇಷನ್ ಮಾಸ್ಟರರ ಮನೆಗೆ ಹೋಗಿದ್ದೆ ಅವರ್ಮನೇಲಿ ಯಾರೂ ಇಲ್ಲ ಎಲ್ಲಾ ಊರಿಗೆ ಹೋಗಿದಾರಂತೆ." ಏದುಸಿರು ಬಿಡುತ್ತಾ ಹೇಳಿದಳು

"ಅದಕ್ಕೇ ಓಡಿ ಬರ್ಬೇಕಾ ? ಆವಾಗ್ಲೆ ಎಲ್ಲಿಗೆ ಹೋಗಿದ್ದೆ ಹೊಸಾ ಜರಿ ಲಂಗ ಹಾಕ್ಕೊಂಡು."

"ಅದಾ? ಪಟೇಲರ ಮನೆಗೆ ಅಣ್ಣನ ಜೊತೇಲಿ ಹೋಗಿದ್ದೆ. ಶಾಂತಾಗೆ ಮದುವೆ ಅಲ್ವಾ? ಕರೆಯೋಕೆ ಹೋಗಿದ್ದೆ."

"ನೀನ್ಯಾವ ದೊಡ್ಡ ಯಜಮಾನಿತಿ ಅಂತ ಕರ್ಯೋಕೆ ಹೋಗಿದ್ದೆ ?"

"ಅಮ್ಮ ಬರುಲ್ಲ ಅಂತಂದ್ಲು. ಅಣ್ಣ ನನ್ನನ್ನು ಕರೆದ್ರು ನಾ ಹೋದೆ. ನಿಂಗೇನು? ಅವರ್ಮನೇಲಿ ಶರಬತ್ತು ಕೊಟ್ರು ಎಷ್ಟು ಸಿಹಿಯಾಗಿತ್ತು ಗೊತ್ತಾ ?"

"ಎಂದೂ ಕುಡಿದೇ ಇಲ್ವಾ ಶರಬತ್ತನ್ನ ? ಪಟೇಲ್ರ ಮನೆ ಶರಬತ್ತಿಗೆ ಬಾಯಿ ಬಿಟ್ಕೊಂಡು ಹೋಗಿದ್ಯಾ....?" ಅವನು ಅವಳ ಕೈ ಹಿಡಿದ.

"ಏಯ್ ಬಿಡೋ ಕೈನ..... ಯಾರ ಮನೆಗಾದ್ರೂ ಹೋಗ್ತೀನಿ. ಏನಾದ್ರೂ ಕುಡೀತೀನಿ ನಿಂಗೇನು ?" ಜೋರು ಮಾಡಿ ಕೇಳಿದಾಗ ಅವನು ಮೆತ್ತಗಾದ.

"ಹೋಗ್ಲಿ ಬಿಡು ನಂಗ್ಯಾಕೆ ! ನನ್ನ ಹೊಸಾ ಸೈಕಲ್ ಹೇಗಿದೆ !....."

"ಹೊಸ್ದಾ ? ಚೆನ್ನಾಗಿದೆ.... ನಂಗೆ ಹೇಳ್ಲೇ ಇಲ್ಲ ನೀನು ?"

"ನೀನು ಕೇಳಿದ್ಯಾ ? ಈಗ ನಾನಾಗೇ ಹೇಳ್ದೇ. "

"ಬರ್ತೀಯಾ ಒಂದು ಸುತ್ತೂ ಹಾಕಿಸ್ತೀನಿ." ಅವನು ಅವಳ ಕೈ ಸವರಿದ. ಅವಳು ಸೈಕಲ್‌ನ ಹ್ಯಾಂಡಲ್‌ಗಳನ್ನು ಸವರುತ್ತಿದ್ದಳು. ಆಸೆಯಾದರೂ ಹೆದರಿದಳು.

"ಬೇಡಪ್ಪಾ.... ಬಿದ್ದು ಬಿಟ್ಟರೇ ?"

"ಬಿದ್ದರೆ ಎತ್ತೋಕೆ ನಾನಿದೀನಲ್ಲ.. ಸುಮ್ನೆ ಬಾ ಮುಂದೆ ಕೂತ್ಕೋತೀಯೋ ಹಿಂದೆ ಕುತೋತೀಯೋ !"

"ಈಗ ಬೇಡಪ್ಪಾ... ಅಮ್ಮ ಬೈತಾಳೆ."

"ಅತ್ತೇಗೆ ಗೊತ್ತಾಗೋದೇ ಇಲ್ಲ, ಇಲ್ಲೇ ಕೆರೆತನಕ ಹೋಗಿ ಬಂದು ಬಿಡೋಣ.... ಬಾರ್ ಮೇಲೆ ಕೂತ್ಕೋ.... ಹೆದರಿಕೆ ಆಗುಲ್ಲ ಕ್ಯಾರಿಯರ್ ಸರಿ ಇಲ್ಲ."

"ಬಾರ್ ಒತ್ತುತ್ತೇ ಕಣೋ.... ಸೀಟ್ ಹಾಕ್ಸು, ಆಮೇಲೆ ಕೂತ್ಕೋತೀನಿ" ಎನ್ನುತ್ತಾ ಅವಳು ಮುಂದೆ ಓಡಿದಳು. ಇವನು ಜಡೆ ಎಳೆದ. ಆ ರಭಸಕ್ಕೆ ಅವಳು ಹಿಂದಕ್ಕೆ ಬಿದ್ದಳು. ರಾಜ ಸೈಕಲ್ಲಿಗೆ ಸ್ಟ್ಯಾಂಡ್ ಹಾಕಿ ಸಿಲ್ಲಿಸಿ ಅವಳನ್ನು ಎಬ್ಬಿಸಿದ. ಅವಳು ಅಳತೊಡಗಿದಳು.

"ಏನೇ ನೀನು ಮುಟ್ಟಿದರೆ ಬೀಳ್ತೀಯಲ್ಲ ಅಳ್ಬೇಡ. ನಾನು ನಿನಗೆ ನಾಳೆ ಪೆಪ್ಪರ್‌ಮೆಂಟ್ ತಂದುಕೊಡ್ತೀನಿ" ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು.

"ಎಲ್ಲಿ ನೋಯ್ತಿದೆ ತೋರ್ಸು..... ಅವನು ಅವಳ ನುಣ್ಣನೆಯ ಕಾಲನ್ನು ಸವರಿ, ತರಚಿದ್ದ ಗಾಯಕ್ಕೆ 'ಉಫ್ ಉಫ್' ಎಂದು ಬಾಯಿಂದ ಗಾಳಿಯನ್ನು ಊದಿ ಅವಳ ಕಡೆ ನೋಡಿ ನಕ್ಕ. "ಈಗ ನೋವು ಕಡಿಮೆ ಆಯ್ತೇನೆ !" ಕೇಳಿದ.

"ಏನೂ ಕಡಿಮೆ ಆಗಿಲ್ಲ." ಅವಳು ಮೂತಿಯನ್ನು ದಪ್ಪ ಮಾಡಿದಳು

"ಹನುಮಂತನ ಥರ ಕಾಣ್ತೀಯಲ್ಲೇ?" ಅವನು ನಕ್ಕ.

"ಸುಮ್ನೇ ಹೋಗೋ..... ಯಾವಾಗ್ಲೂ ಪೆಟ್ಟು ಮಾಡ್ತೀಯಾ. ಅತ್ತೇಗೆ ಹೇಳ್ತೀನಿ."

"ಏ ಹೇಳ್ಬೇಡ್ವೇ ಮಾರಾಯಿತಿ ಸೈಕಲ್ಲನ್ನು ಓಡಿಸುಕ್ಕೇ ಬಿಡುಲ."

"ಹಾಗಾದ್ರೆ ಹೇಳೇ ಹೇಳ್ತೀನಿ." ಅವನು ಅವಳ ತೋಳನ್ನು ಹಿಡಿದ.

"ಬೇಡ ಕಣೇ ಹೇಳ್ಬೇಡ. ನನ್ನಿಂದ ನೋವಾಗಿದ್ರೆ, ನೀನೂ ಹೊಡಿ, ಬಡಿ, ಕಚ್ಚು, ಪರಚು, ಚಿವುಟು, ಏನು ಬೇಕಾದ್ರೂ ಮಾಡು."

"ಆಮೇಲೆ ನನ್ನನ್ನು ಬೈಯಬಾರ್ದು."

"ಇಲ್ಲ ಬೈಯುಲ್ಲ." ಅವಳು 'ಫಟ್' ಎಂದು ಕೆನ್ನೆಗೆ ಜೋರಾಗಿ ಬಾರಿಸಿದಳು. ಇದು ಅವನಿಗೆ ಅನಿರೀಕ್ಷಿತ... ತತ್ತರಿಸಿದ. ಅಕ್ಕ ಪಕ್ಕ ನೋಡಿದ. ಕೆನ್ನೆ ಉರಿಯುತ್ತಿತ್ತು.

ಅದಕ್ಕಿಂತ ಹೆಚ್ಚಾಗಿ ಅವಮಾನವಾಗಿತ್ತು. ಲಲಿತಳ ಕೈಯ ಏಟು ಅದೂ ಒಬ್ಬ ಹುಡುಗಿಯ ಏಟು.... ಹಲ್ಲನ್ನು ಕಡಿದ. ತಿರುಗಿಸಿ ಹೊಡೆದರೆ ಮತ್ತೇನು ರಂಪ ವಾಗುವುದೋ ಎಂದುಕೊಂಡು, ಸಹಿಸಿಕೊಂಡು ಬಲವಂತವಾಗಿ ನಕ್ಕ.

"ಅಬ್ಬಾ....ಇಷ್ಟು ಜೋರಾಗೇನೇ ಹೊಡೆಯೋದು. ಅದು ರಸ್ತೇಲಿ, ನೀನು ಒಬ್ಬಳೇ ಸಿಗು. ನಿಂಗೆ ಏನು ಮಾಡ್ತೀನಿ ನೋಡ್ತಿರು." ಲಲಿತ ಜಯ ಸಾಧಿಸಿದವಳಂತೆ ಅವನನ್ನು ಅಣಗಿಸಿ ಓಡಿದಳು. ರಾಜ ಮನದಲ್ಲೇ ಭುಸುಗುಟ್ಟಿದ.

* * *

"ನಾಳೆ ಜವುಳಿ ಅಂಗಡಿಗೆ ಹೋಗೋಣ. ಏನೇನು ಬೇಕು ? ಎಷ್ಟೆಷ್ಟು ಬೇಕು ಒಂದು ಪಟ್ಟಿ ಮಾಡಿಡು. ಎಲ್ಲವನ್ನು ಶೀನನ ಮನೇಲಿಟ್ಟಿರೋಣ."

"ಅವರ ಮನೇಲಿ ಭದ್ರವಾಗಿಟ್ಟಿರ್ತಾರಾ ?"

"ಹೂಂ, ಇಡದೇ ಏನು ? ನಿಂಗೆ ಅವರು ತೆಗೆದು ನೋಡ್ತಾರೆ ಅಂತ ಅನುಮಾನಾನ !"

"ತೆಗೆದು ನೋಡಿದರೆ ನೋಡಲಿ ಮತ್ತೇ ಸರಿಯಾಗಿ ಗಂಟು ಕಟ್ಟಿ ಇಡಬೇಕು ಅನ್ನೋ ಎಚ್ಚರ ಇದ್ರೆ ಸಾಕು. ಹೆಚ್ಚು ಕಡಿಮೆ ಏನಾದ್ರೂ ಆದ್ರೂ ಸಹ ನಾವು ಕೇಳು ಕ್ಕಾಗಲ್ಲ. ಅಂಗಡೀಲೇ ಒಂದು ಕಡೆ ಜೋಪಾನವಾಗಿ ಇಡಿಸಿದರೆ ?"

"ಸರಿ ಹಾಗೇ ಮಾಡೋಣ. ಮನೇಲಿ ಹಳೇ ಬೆಳ್ಳಿ ಏನಾದರೂ ಇದ್ದರೆ ತೆಗೆದಿಟ್ಕೋ....ತೂಕಕ್ಕೆ ಹಾಕಿಸಿ, ಹೊಸಾ ಬೆಳ್ಳಿ ಸಾಮಾನು ತಗೊಳ್ಳೋಣ.

"ಅಷ್ಟೊಂದು ಎಲ್ಲಿದೆ? ಈ ಹಳ್ಳಿಗೆ ಬಂದ್ಮೇಲೆ ಎಷ್ಟೋ ಕಳೆದುಹೋಯ್ತು. ಹೊಸದನ್ನೇ ತಗೊಂಡ್ರಾಯ್ತು... ಹಾಗೇ ಶಾಂತಂಗೆ ಒಂದೆಳೆ ಸರ ತಗೊಳ್ಳೋಣ.... ಬರೀ ಕತ್ನಲ್ಲಿದ್ದಾಳೆ."

"ಈಗ ಎಲ್ಲಿದೆಯೇ ಅಷ್ಟೊಂದು ದುಡ್ಡು? ಚಿನ್ನ ಅಂದ್ರೆ ಬಿಟ್ಟಿ ಬರುತ್ತಾ ಸರ ಬಳೆ ಏನು ಬೇಕಾದ್ರೂ ಅವರು ತರ್ತಾರೆ. ಒಂಜೊತೆ ಕಲ್ಲಿನ ವಾಲೆ, ಒಂದು ಹುಟ್ಟು ತಾಳಿ ಅಷ್ಟು ಸಾಕು."

"ಏನು ಹೀಗೆ ಮಾತಾಡ್ತೀರಿ? ಮನೆ ಗಂಡು ಅಂತ ಹೆಚ್ಚು ಖರ್ಚಿಲ್ಲದೆ ಮದುವೆ ಮಾಡಿದ್ರು ಅಂತ ಆಡ್ಕೋತಾರೆ ಅಥವಾ ಕಂಠಿ ಥರ ಶ್ರೀಮಂತ ಗಂಡನ್ನ ನೋಡ್ಬೇಕಾಗಿತ್ತು.... ಈಗಲೂ ಆಲೋಚನೆ ಮಾಡಿ."

"ಈಗ ಬಾಯ್ಮುಚ್ತೀಯಾ? ಯಾರು ನಗ್ತಾರೋ ನಗಲಿ, ನನ್ಕೈಲಿ ಆಗೋವಷ್ಟು ಖರ್ಚು ನಾನು ಮಾಡ್ತಿನಿ. ಅಳಿಯಂಗೆ ಏನೂ ಕಡಿಮೆ ಮಾಡುಲ್ಲ. ಮುಗುಟ, ಶಲ್ಯ, ಸಂಕಲ್ಕೆ ಪಂಚೆ, ಬೆಳ್ಳಿ ತಟ್ಟೆ, ಚೊಂಬು, ಪಂಚಪಾತ್ರೆ ಉದ್ಧರಣೆ, ಬೆಳ್ಳೀ ಲೋಟ ಎಲ್ಲಾ ತಂದೇ ತರ್ತೀನಿ ಶಾಂತಂಗೆ ಒಂದು ರೇಷ್ಮೇ ಸೀರೆ, ಇನ್ನೊಂದು

ಸಾಧಾರಣ ವಾದ ಸೀರೆ ತರೋಣ. ಹಸೆಮಣೆ ಮೇಲೆ ಕೂತ್ಕೊಳ್ಳುವ ಅಣ್ಣ ಅತ್ತಿಗೆಗೆ ಇದಿಷ್ಟನ್ನು ಹೊಂದಿಸಲೇಬೇಕು." ಶಾಸ್ತ್ರಿ ಖಾರವಾಗಿ ಮಾತಾಡಿದ ಲಕ್ಷ್ಮಿ ಕೋಪ ಗೊಂಡಳು. ಸಾತಕ್ಕ ನೊಂದುಕೊಂಡಳು. ತನ್ನ ಟ್ರಂಕನ್ನು ತೆಗೆದು ಅದರಲ್ಲಿದ್ದ ಐವತ್ತು ರೂಪಾಯಿಗಳನ್ನು ಗುಂಡಣ್ಣನ ಕೈಗೆ ಹಾಕಿದಳು. ತನ್ನ ಬಳಿ ಇದ್ದ ಎರಡು ಬೆಳ್ಳಿಯ ಬಟ್ಟಲಗಳನ್ನು ಲಕ್ಷ್ಮಿಯ ಕೈಗೆ ಕೊಟ್ಟಳು.

"ಈ ಬಟ್ಟಲುಗಳಿಗೆ ಪಾಲಿಷ್ ಹಾಕಿಸು. ಒಂದನ್ನು ಗೋಪಾಲಂಗೆ, ಇನ್ನೊಂದನ್ನ ಶಾಂತಾಂಗೆ ನನ್ನ ಕಡೆಯಿಂದ ಉಡುಗೊರೆ ಅಂತ ಕೊಟ್ಬಿಡು. ಈ ಐವತ್ತು ರೂಪಾಯಿಗೆ ಒಂದೆಳೆ ಸರ ಮಾಡಿಸುಕ್ಕೆ ಹಾಕು. ಬೇಡ ಅನ್ಬೇಡ."

"ಏನೇ ಸಾವಿತ್ರಿ, ಇದೆಲ್ಲಾ ಏನು? ಈಗ ನಿನ್ನನ್ನ ಕೇಳಿದ್ನೇ ?"

"ನಾನೂ ಏನೂ ಹೊರಗಿನವಳಲ್ಲ. ಈ ಮನೆಯೋಳೇ ಚೂರು ಪಾರು ಕಾಸನ್ನ ಸಮಯಾ ಅಂತಂದ್ರೆ ಇರಲಿ ಅಂತ ಕೂಡಿಟ್ಟಿದ್ದೆ ಈಗ ಆ ಸಮಯ ಬಂದಿದೆ. ಬರೀ ಕೊರಳ್ನಲ್ಲಿ ಮದುಮಕ್ಕಳು ಹಸೇ ಮಣೆ ಮೇಲೆ ಕೂತರೆ ಏನು ಚೆನ್ನಾ ನೀನೇ ಹೇಳು. ಅದೆಲ್ಲಾ ನಮ್ಮ ಕಾಲಕ್ಕೆ ಹೋಯ್ತು. ನಿನಗೆ ಲಕ್ಷ್ಮಿಗೆ ಏನಾದ್ರೂ ಕೊಡೋಣ ಅಂತ ಅಂದ್ಕೊಂಡಿದ್ದೆ. ಇನ್ಯಾವಗ್ಲಾದ್ರೂ ಕೊಡ್ತೀನಿ."

"ಅತ್ತಿಗೇ ಈಗ್ಯಾಕೆ ಇದೆಲ್ಲ.. ಚಿನ್ನದ ಹುಟ್ಟಿದ ತಾಳಿ ಕಟ್ತಿವಲ್ಲ."

ಅರಿಶಿನದ ದಾರದಲ್ಲಿ ಪೋಣಿಸಿ ಹಾಕೋ ಪುಟ್ಟತಾಳಿಯ ಜೊತೆಗೆ ಈ ಸರವೂ ಇರಲಿ. ಬೇಡ ಎನ್ಬೇಡ ನಿಂಗೂ ಸರ ಹಾಕ್ಬೇಕು ಅಂತ ಆಸೆ ಇತ್ತೋ ಇಲ್ವೋ.... ನಂಗೆ ಬೇಸರ ಮಾಡ್ಬೇಡ." ಲಕ್ಷ್ಮಿ ಸುಮ್ಮನಾದಳು. ಗುಂಡಣ್ಣ ಹಣವನ್ನು ಜೇಬಿಗೆ ಇಳಿಬಿಟ್ಟ.

* * *

ಬೆಳಗಿನ ರೈಲಿಗೆ ಶಾಸ್ತ್ರಿ, ಲಕ್ಷ್ಮಿ, ಶಾಂತಾ ಹಾಗೂ ವೆಂಕಟೇಶನೊಡನೆ ಹೊರಟ. "ಪೇಟೇಲಿ ಎಲ್ಲಾ ಕೆಲಸ ಮುಗಿಸ್ಕೊಂಡು ಶೀನನ ಮನೆಗೆ ಹೋಗಿ ಸ್ವಲ್ಪ ಸುಧಾರಿಸ್ಕೊಂಡು, ಸಾಯಂಕಾಲದ ರೈಲಿಗೆ ವಾಪಸ್ಸು ಬರ್ತೀವಿ. ಸಾವಿತ್ರಿ ಜ್ವಾಪಾನ ಲಲಿತ ಅತ್ತೇ ಜೊತೆ ಮನೇಲೇ ಇರು. ನೀವೂ ಇಬ್ರೂ ಅಷ್ಟೇ ಅಲ್ಲಿ ಇಲ್ಲಿ ಬಿಸಿಲ್ನಲ್ಲಿ ಅಲೆದಾಡಿ, ಅತ್ತೇನ ಗೋಳು ಹೊಯ್ದುಕೊಳ್ಳಬೇಡಿ ವೈಕುಂಠ ಮನೆ ಹತ್ರಾನೇ ಇರ್ಬೇಕೋ.... ದನಕರುಗಳನ್ನು ಸರಿಯಾಗಿ ಕಟ್ಹಾಕಿ ಹುಲ್ಲು ಹಾಕಿ ನೀರು ಕುಡಿಸು" ಮತ್ತೇ ಮತ್ತೇ ಎಚ್ಚರಿಕೆಯನ್ನು ಹೇಳಿ ಕೈಚೀಲಗಳನ್ನು ಹಿಡಿದು ರೈಲ್ವೇ ಸ್ಟೇಷನ್ ಕಡೆಗೆ ನಡೆದರು.

ಉಣುಗೋಲಿಗೆ ಕೈ ಊರಿ, ಬೀದಿಯ ಕಡೆ ಏನನ್ನೋ ನೋಡುತ್ತಾ ನಿಂತಿದ್ದ ಲಲಿತಳನ್ನು ರಾಜ ಕಂಡ. ಮೆಲ್ಲಗೆ ರಸ್ತೇ ದಾಟಿ ಈ ಕಡೆಗೆ ಬಂದ.

"ಏನೇ ಲಲಿತಾ ಒಬ್ಬಳೇ ನಿಂತಿದೀಯ. ಮಾವ, ಅತ್ತೇ ಎಲ್ಲಾ ಎಲ್ಲಿಗೆ ಹೋದ್ರು ? ಪೇಟೇಗೆ ಹೋದ್ರಾ ?"

"ಹುಂ, ಪದ್ಮಿನಿ ರಾಗಿಣೀನ ಕರಿ ಅಂತ ಅತ್ತೇ ಹೇಳಿದ್ರು, ಅವರಿಬ್ರೂ ನಿಮ್ಮ ಮನೆಗೆ ಬಂದಿದಾರಾ?"

"ಏನೋ ಗೊತ್ತಿಲ್ಲ, ಇದ್ದರೆ ಇರಲಿ ಬಿಡು. ಸೈಕಲ್ ಕ್ಯಾರಿಯರ್‌ಗೆ ಸೀಟು ಹಾಕ್ಸಿದೀನಿ. ಕೂತರೆ ಒತ್ತಲ್ಲ ಬರ್ತೀಯಾ ಒಂದು ಸುತ್ತು ಹಾಕಿಸ್ತೀನಿ."

"ಹೌದಾ? ತಡೀ ಅತ್ತೇಗೆ ಹೇಳಿ ಬರ್ತೀನಿ."

"ದೊಡ್ಡಮ್ಮಂಗೆ ನಾನೇ ಹೇಳ್ಬಿಟ್ಟು ಬರ್ತೀನಿ." ಎಂದು ಹೇಳಿ, ಮನೆಯ ಒಳಕ್ಕೆ ಬಂದ. ಸಾತಕ್ಕ ಅಡಿಗೆ ಮನೆಯಲ್ಲಿ ಮಡಿಯಲ್ಲಿದ್ದುದನ್ನು ಕಂಡು ಹಾಗೇ ಹಿಂತಿರುಗಿದ. "ನಾನು ಕೇಳ್ದೆ ಹುಂ ಕರ್ಕೊಂಡು ಹೋಗು ಅಂತ ಹೇಳಿದ್ರು ಎಂದು ಸುಳ್ಳು ಹೇಳಿ ನೀನು ಇಲ್ಲೇ ಇರು ನಾನು ಸೈಕಲ್ ತರ್ತೀನಿ" ಅಂತ ಹೇಳಿ ತನ್ನ ಮನೆಯ ಕಡೆಗೆ ನಡೆದ. ಅವನು ಸೈಕಲ್ಲನ್ನು ರಸ್ತೆಗೆ ತರುತ್ತಿದ್ದಂತೆಯೇ ಪದ್ಮಿನಿ ರಾಗಿಣಿಯರು ಬಂದರು. ಅವನ ತಮ್ಮಂದಿರೂ ಬಂದು ಸೇರಿದರು.

"ನಾನು.... ನಾನು.... ನಮಗೂ ಒಂದು ಸುತ್ತು ಸುತ್ತಿಸೋ.... ರಾಜಾ..." ಎಲ್ಲರೂ ಅವನನ್ನು ಸುತ್ತುವರೆದರು. ಅವನು ಅವರ ಮೇಲೆ ರೇಗುತ್ತಾ ಸೈಕಲ್ಲನ್ನು ವಾಪಸ್ಸು ತೆಗೆದಿಟ್ಟ, ಲಲಿತ ನಗುತ್ತಿರುವಂತೆ ಅನ್ನಿಸಿತು. ಕೆನ್ನೆಯನ್ನು ಉಜ್ಜಿಕೊಂಡ.

"ಆ ಕಪಿಗಳ ಹಿಂಡನ್ನೆಲ್ಲಾ ಸುತ್ತು ಹಾಕಿಸ್ತಾ ಕೂತ್ರೆ ಇಡೀ ದಿನ ಸಾಕಾಗುಲ್ಲ ಸುಸ್ತಾಗಿ ಹೋಗ್ತೀನಿ ಅಷ್ಟೇ. ಈಗ ನಿನ್ನ ಕಾಲು ನೋವು ಹೇಗಿದೆ?"

"ಸಧ್ಯ, ನೋವು ಕಡಿಮೆ ಆಯ್ತು. ಕುಂಟುಕೊಂಡು ನಡೆದಿದ್ರೆ ಎಲ್ರೂ ನನ್ನನ್ನೇ ಬೈದಿರುತ್ತಿದ್ರು ನೀನು ಮಾಡೋದೆಲ್ಲಾ ಹೀಗೇ... ನೀನು ಕೆಟ್ಟೋನಪ್ಪಾ."

"ನನ್ನ ಕೆನ್ನೆ ಮಾತ್ರ ಈಗಲೂ ಚುರುಗುಟ್ತಿದೆ ಲಲಿತಾ ಯಾರ್ಗಾದರೂ ಹೇಳುಕ್ಕಾಗುತ್ತಾ ನೀನು ಹೊಡ್ದೆ ಅಂತ." ನೀನೂ ಒಳ್ಳೋಳಲ್ಲ ರೇಗಿಸಿದ.

"ನಿಂಗೆ ಹಾಗೇ ಆಗ್ಬೇಕು" ಬೆರಳುತೋರಿ ಅವಳು ಕಿಲಕಿಲನೆ ನಕ್ಕಳು. ಅವನ ಅಂತರಂಗದಲ್ಲಿ ರಾಡಿಯನ್ನು ಕದಡಿದಂತಾಯಿತು. ದುರು ದುರು ನೋಡಿದ.

"ಹುಂ, ನಂಗೆ ಹಾಗೇ ಆಗ್ಬೇಕು.... ನಾನು ನಿಂಗೆ ನೋವು ಕೊಡ್ತಾನೇ ಇರ್ತೀನಿ ನೀನು ನನ್ನನ್ನು ಹೊಡಿ, ಬಡಿ ಏನು ಬೇಕಾದ್ರು ಮಾಡು ಬೇಸರವಿಲ್ಲ."

"ನಿಜವಾಗ್ಲೂ....? ಹೊಡಿಸ್ಕೊಂಡು ಸುಮ್ಮನಿರ್ತೀಯಾ ?"

"ನಿಜವಾಗ್ಲೂ....ನನ್ನಾಣೆ" ತನ್ನ ತಲೆಯ ಮೇಲೆ ಕೈಯನ್ನಿಟ್ಟುಕೊಂಡ "ಹಾಗಾದ್ರೆ ಈಗ ಹೊಡೀಲಾ ? ಆಮೇಲೆ ನೀನು ಬೈಯಬಾರದು."

"ಇಲ್ಲ ಕಣೇ ಲಲಿತಾ.... ನಾನು ಖಂಡಿತಾ ಬೈಯಲ್ಲ. ಆದರೆ ಇಲ್ಲಿ ರಸ್ತೇಲಿ

ಮಾತ್ರ ಹೊಡೀಬೇಡ ಯಾರಾದ್ರೂ ನೋಡಿದ್ರೆ ಗೇಲಿ ಮಾಡ್ತಾರೆ. ನಾನು ನಿನ್ನನ್ನು ಯಾರೂ ಕಾಣದ ಜಾಗಕ್ಕೆ ಕರ್ಕೊಡು ಹೋಗ್ತೀನಿ ಅಲ್ಲಿ ನೀನು ಎಷ್ಟು ಬೇಕಾದರೂ ಹೊಡಿ." ಕೆರಳಿಸುವವನಂತೆ ಹೇಳಿದ. ಲಲಿತ ನಕ್ಕು ಸುಮ್ಮನಾಗಿದ್ದಳು.

"ಯಾವುದು ಆ ಜಾಗ ? ಎಲ್ಲಿದೆ ಹೇಳು?" ಒಳಗೊಳಗೇ ನಕ್ಕಳು

"ನಿಮ್ಮನೇಲೇ ಇದೇ ನಿಮ್ಮನೆ ಕತ್ತಲೇ ಕೋಣೆ. ಅಲ್ಲಿ ಯಾರೂ ನೋಡಲ್ಲ."

"ಬೇಡಪ್ಪಾ, ಬರೀ ಕತ್ತಲೆ ನಂಗೆ ಅಲ್ಲಿ ಭಯ ಆಗುತ್ತೆ."

"ನಾನು ಜತೇಲಿರ್ತೀನಲ್ಲೇ ಏನು ಭಯ?"

"ದೊಡ್ಡಮ್ಮಂಗೆ ಗೊತ್ತಾದ್ರೆ ಬೈತಾರೆ."

"ಅವರಿಗೆ ಹೇಗೆ ಗೊತ್ತಾಗುತ್ತೆ ಮಡೀಲಿದಾರೆ. ಅಡಿಗೆ ಮುಗಿದು ಊಟ ಆಗೋವರ್ಗೂ ಅತ್ತೇ ಅಚೆಗೆ ಬರಲ್ಲ ಅಂತ ನೀನೇ ಹೇಳ್ದೆ."

"ಹೌದಲ್ವಾ? ಸರಿ ನಡೀ....." ಅವಳು ಉತ್ಸಾಹಗೊಂಡಳು

"ನೀನು ನನ್ನನ್ನ ಹೊಡ್ದೆ ಅಂತ ನೀನು ಯಾರ್ಗೂ ಹೇಳ್ಬರ್ದು.... ನಂಗೆ ಮುಜುಗರವಾಗುತ್ತೇ.... " ಅವನು ಕೈ ಕೈ ಉಜ್ಜಿಕೊಂಡ.

"ಯಾರ್ಗೂ ಹೇಳಲ್ಲ ಬಾರೋ...." ಅವಳೇ ಅವನ ಕೈ ಹಿಡಿದೆಳೆದಾಗ, ಅವನ ಅಂಗಾಗಗಳಲ್ಲಿ ಬಿಸಿ ಏರಿತು. ಇಬ್ಬರೂ ಕತ್ತಲೆ ಕೋಣೆಯನ್ನು ಹೊಕ್ಕರು. ಸಾತಕ್ಕ ಅಡಿಗೆ ಮನೆಯಲ್ಲಿದ್ದಳು. ವೈಕುಂಠ ಬಾವಿಯ ಹತ್ತಿರ ಇದ್ದ, ಬಣವೆಯ ಹುಲ್ಲಿನ ಪಿಂಡಿಗಳನ್ನು ಸರಿಯಾಗಿ ಜೋಡಿಸುತ್ತಿದ್ದ. ಪದ್ಮಿನಿ, ರಾಗಿಣಿ, ಮತ್ತೇ ಅತ್ತೇಯ ಮನೆಯನ್ನು ಸೇರಿದ್ದರು. ರಾಜ ತನ್ನಲ್ಲೇ ನಗುತ್ತಾ ಕೋಣೆಯ ಬಾಗಿಲನ್ನು ಭದ್ರ ಪಡಿಸಿದ.

"ಯಾಕೆ ಇಷ್ಟೂ ಕತ್ತಲೆ? ನೀನು ಕಾಣ್ತಾನೇ ಇಲ್ಲವಲ್ಲೇ ?"

"ನಾನು ಇಲ್ಲಿದೀನಿ." ಅಲ್ಲಿ ಪೇರಿಸಿದ್ದ ಹಾಸಿಗೆಯ ಬಳಿ ನಿಂತಿದ್ದ ಲಲಿತ ಹೇಳಿದಳು. ದನಿ ಬಂದ ಕಡೆಗೆ ರಾಜ ನಡೆದ. ಅವಳ ದೇಹ ಸಿಕ್ಕಿದ ಕೂಡಲೇ ಬಲವಾಗಿ ಅಪ್ಪಿಕೊಂಡು ಅವಳ ಮೈಗೆ ತನ್ನ ಮೈಯನ್ನು ಉಜ್ಜಿದ.

"ಥೂ, ಇದೇನು ಮಾಡ್ತಿದೀಯ.... ದೂರ ನಿಂತ್ಕೋ...." ಅವಳು ರೇಗಿದಳು

"ನನ್ನ ಕೆನ್ನೆಗೆ ಹೇಗೆ ಹೊಡೀತೀಯಾ! ನನ್ನ ಮುಖವೇ ಕಾಣದಷ್ಟು ಕತ್ತಲೆ." ಎನ್ನುತ್ತಾ ಅವಳ ಕೈಯನ್ನು ತೆಗೆದುಕೊಂಡು ತನ್ನ ಮೈ ಮೇಲೆ ಆಡಿಸಿಕೊಂಡು, ತನ್ನ ಮುಖವನ್ನು ಮುಂದೆ ಒಡ್ಡಿದ. ಅವಳ ಕೈಯನ್ನು ತನ್ನ ಕೆನ್ನೆಗೆ ತಗುಲಿಸಿಕೊಂಡ.

"ನೀನು ಕೈ ಬಿಟ್ಟರೆ ತಾನೇ ನಾನು ಹೊಡೆಯೋದು... ಮೊದಲು ಕಿಟಕಿ ತೆಗಿ. ಸ್ವಲ್ಪ ಬೆಳಕು ಬರುತ್ತೆ. ನೀನು ಎಲ್ಲಿದೀಯ ಅಂತ ಗೊತ್ತಾಗುತ್ತೆ."

"ನಾನು ಇಲ್ಲೇ ಇದೀನಿ. ಕಿಟಕೀನೇನೂ ತೆಗೀಬೇಡ ನಿಧಾನವಾಗಿ ಚೆನ್ನಾಗಿ

ಹೊಡೆಯೂವಂತೆ ಎನ್ನುತ್ತಾ ಅವಳಿಗೆ ಒತ್ತಿ ನಿಂತು ಅವಳ ತುಟಿಗಳನ್ನು ಬಲವಾಗಿ ಚುಂಬಿಸಿದ. ಅವಳ ಕೈಗಳನ್ನು ಬಲವಾಗಿ ಹಿಡಿದ ಅವಳು ಕೊಸರಿಕೊಳ್ಳಲು ನೋಡಿದಳು. ಕೂಗಿಕೊಳ್ಳಲು ಆಗಲೇ ಇಲ್ಲ. ಗಂಟಲಲ್ಲಿ ಉಸಿರು ಸಿಕ್ಕಿಹಾಕಿಕೊಂಡಂತೆ ಅನಿಸಿತ್ತು.

"ಲಲಿತಾ ಸುಮ್ಮನೇ ಬಿಡ್ಕೋ.... ನಾನು ಹೇಳಿದ ಹಾಗೆ ಕೇಳದಿದ್ರೆ ಕೊಂದು ಹಾಕಿ ಬಿಡ್ತೀನಿ." ಎಂದು ಹೆದರಿಸಿ, ಅವಳನ್ನು ನೆಲದ ಮೇಲೆ ಕೆಡವಿ, ಅವಳ ಮೈಮೇಲೆ ತನ್ನ ಮೈಯನ್ನು ಚೆಲ್ಲಿದ.

"ರಾಜಾ.... ಬಿಡೋ... ಬಿಡೋ....." ಅವಳು ಉಸಿರೇ ಇಲ್ಲದವಳಂತೆ ಕ್ಷೀಣವಾಗಿ ಕಿರುಚಿದ್ದು ಹೊರಗಿನವರಿಗೆ ಕೇಳುವಂತಿರಲಿಲ್ಲ. ಅವನೇನು ಮಾಡ್ತಿದಾನೆ. ಯಾಕೆ ಹೀಗೆ ಮಾಡ್ತಿದಾನೆ, ಎಂದು ಅವಳಿಗೆ ಅರ್ಥವಾಗುವಂತೆಯೇ ಇರಲಿಲ್ಲ. ಸೋತವಳಂತೆ ಮಲಗಿದ್ದವಳ ಮೇಲೆ ತನ್ನ ಪರಾಕ್ರಮವನ್ನು ತೋರಿ, ತನ್ನ ಬಹುದಿನದ ಆಸೆಯನ್ನು ಪೂರೈಸಿಕೊಂಡ. ಅವಳ ಮೇಲಿನ ಸೇಡನ್ನು ತೀರಿಸಿಕೊಂಡ. ಅವಳ ಕೈಗಳನ್ನೆತ್ತಿ ತನ್ನ ಕೆನ್ನೆಗೆ ಹಗುರವಾಗಿ ಹೊಡೆದುಕೊಂಡ.

"ಲಲಿತಾ... ನನ್ನನ್ನು ಎಷ್ಟು ಬೇಕಾದ್ರೂ ಹೊಡೀ.. ನಾನು ಸುಮ್ಮನಿರ್ತೀನಿ." ಎಂದು ಹೇಳಿ ಅವಳ ಕೆನ್ನೆಗಳನ್ನು ಚುಂಬಿಸಿದ. ಕೊರಡಿನಂತೆ ಮಲಗಿದ್ದವಳನ್ನು ಹಾಗೆಯೇ ಬಿಟ್ಟು ಕೋಣೆಯಿಂದ ಹೊರಬಂದ. ದೊಡ್ಡಮ್ಮ ಇನ್ನು ಅಡಿಗೆ ಮನೆಯಲ್ಲಿಯೇ ಇದಾರೆ ಎಂದು ಖಚಿತ ಮಾಡಿಕೊಂಡು, ತನ್ನ ಮನೆಗೆ ನಡೆದ.

ರಾಜ ತನಗ್ಯಾಕೆ ಹೀಗೆ ಮಾಡಿದ? ಮೈ ಕೈಯೆಲ್ಲಾ ಅಸಹ್ಯವಾಗಿದೆ. ವಿಪರೀತ ನೋಯ್ತಿದೆ ಎಂದುಕೊಂಡು ಏಳಲು ನೋಡಿದಳು. ಅಳು ಬರುವಂತಾಗಿತ್ತು ಆದರೆ ಅಳಲೂ ಆಗದಷ್ಟು ಹಿಂಸೆ ಆಗುತ್ತಿತ್ತು. ಅತ್ತೆಗೆ ಹೋಗಿ ಹೇಳಿದರೆ ಏನಂತಾ ರೋಮಡೀಲಿದಾರೆ ಎಂದುಕೊಂಡು ಹಾಗೇ ಬಿದ್ದುಕೊಂಡಿದ್ದಳು.

* * *

"ಪದ್ಮಿನೀ..... ರಾಗಿಣಿ ಬನ್ರೇ.... ಲಲಿತನ್ನು ಕರೀರಿ... " ಬೀದಿಯಲ್ಲಿ ಆಟ ಆಡುತ್ತಿದ್ದವರನ್ನು ಸಾತಕ್ಕ ಕರೆದಳು.

"ಲಲಿತಾ ಮನೇಲೇ ಇದಾಳೆ ಅತ್ತೇ....."

"ಹೌದೇನೇ.... ಕರೆದ್ರೇ ಆಂ ಎನ್ನಲೇ ಇಲ್ಲ ಬಾವಿಯ ಹತ್ರ ಹೋದ್ಲೋ ಏನೋ." ಎಂದುಕೊಂಡು ಹಿಂಬಾಗಿಲಿಗೆ ಬಂದಳು. ವೈಕುಂಠ ಸಾತಕ್ಕನನ್ನು ಕಂಡು ಎದ್ದು ನಿಂತ ಸಾತಕ್ಕ ಅತ್ತ ಇತ್ತ ನೋಡಿ ಕೇಳಿದಳು.

"ಲಲಿತಾ ಇಲ್ಲಿಗೇನಾದ್ರೂ ಬಂದ್ಲಾ ?"

"ಇಲ್ರಾ..... ಅವರು ಇಲ್ಲಿಗೆ ಬಂದದ್ದು ನಾಕಾಣೆ." ಎಂದ

"ಮತ್ತೆಲ್ಲಿಗೆ ಹೋದ್ಲು ಈ ಹುಡುಗಿ... ಕೊಟ್ಟಿಗೇಲಿ ಕರೂನ ಮುದ್ದಾಡ್ತಿರಬಹುದು ಕರೀ.... ಹಾಗೇ ತಟ್ಟೇನ ತಗೊಂಡ್ಬಾ.... ಬಡಿಸ್ತೀನಿ."

"ಅವ್ವಾರೇ ನಾನಿವತ್ತು ಅನ್ನಾನೇ ಉಣ್ತೀನಿ. ಇಟ್ಟು ಬೇಡ್ರಾ. "

"ಹೂಂ, ಹಿಟ್ಟು ತೊಳೆಸಿರೋರ್‍ಯಾರು ? ಲಲಿತಾ.... ಲಲಿತಾ....." ಅತ್ತೆಯ ಧ್ವನಿ ಕೇಳಿ ನೆಲದ ಮೇಲೆ ಬಿದ್ದುಕೊಂಡಿದ್ದ ಲಲಿತ ಎದ್ದು, ತನ್ನ ಲಂಗವನ್ನು ಸರಿಪಡಿಸಿಕೊಂಡು ಹೊರಬಂದಳು. ಒಳ ಬಂದ ಸಾತಕ್ಕ ಲಲಿತನ್ನ ಕಂಡು ರೇಗಿದಳು.

"ಅಲ್ಲೇನೇ ಮಾಡ್ತಿದ್ದೇ ಕತ್ತಲೇಲಿ ?"

"ಮಲಗಿದ್ದೆ." ನಾಲಿಗೆ ಸುಳ್ಳು ಹೇಳಲು ತಡವರಿಸಿತು.

"ಮಲಗಿದ್ಯಾ? ಯಾಕೇ ಹುಶಾರಿಲ್ವಾ? ಹತ್ತಿರ ಬಂದಳು. ಆಕೇ ಏನಾಯ್ತೇ? ಗರ ಬಡಿದವಳ ಹಾಗೆ ಕಾಣ್ತಿದೀಯಲ್ಲೇ.... ತಲೆ ಕೂದಲು ಯಾಕೆ ಹೀಗೆ ಕೆದರಿದೆ? ಮುಖವೆಲ್ಲಾ ಊದಿದೆ. ತುಟಿಯಂಚಿನಲ್ಲಿ ರಕ್ತ ಬರ್ತಿದೆ ಎಲ್ಲಾದ್ರೂ ಬಿದ್ಯಾ?" ಪರೀಕ್ಷಿಸುವವಳಂತೆ ಮತ್ತೆ ಮತ್ತೆ ನೋಡುತ್ತಾ ಕೇಳಿದಳು.

"ಏನಾಯ್ತೇ ಲಲಿತಾ... ಏನು ನಡೀತು ಅಂತ ಹೇಳಮ್ಮಾ."

"ಅತ್ತೇ.... ರಾಜ...." ಎಂದು ಹೇಳಿ, ಸಾತಕ್ಕನನ್ನು ತಬ್ಬಿಕೊಂಡು ಗೊಳೋ ಅಂತ ಅತ್ತಳು ಸಾತಕ್ಕನ ಕೈ ಅವಳ ಬೆನ್ನ ಮೇಲೆ ಆಡಿತು.

"ರಾಜಾ ಬಂದಿದ್ನಾ? ಏನಾದರೂ ಅಂದ್ನಾ ?... ನೀನ್ಯಾಕೆ ನನ್ನನ್ನ ಕೂಗ್ಲಿಲ್ಲ ..."

"ನೀವು ಮಡೀಲಿದ್ರಿ ಅತ್ತೇ....."

"ನನ್ನ ಮಡಿಗಿಷ್ಟು ಬೆಂಕಿ ಹಾಕ.... ಅವನು ಬಂದಿದಾನೆ ಅಂತ ಗೊತ್ತಾಗಿದ್ದಿದ್ರೆ ನಾನೇ ಬರ್ತಿದ್ದೆ..... ನಿನ್ನ ಜತೆ ಜಗಳ ಆಡಿದ್ನಾ? ಹೊಡೆದ್ನಾ?" ಪ್ರಶ್ನೆ ಕೇಳುವಾಗ ಸಾತಕ್ಕನ ಎದೆ ಹೊಡದುಕೊಳ್ಳುತ್ತಿತ್ತು.

"ಇಲ್ಲ ಅತ್ತೇ.... ಕತ್ತಲೆ ಕೋಣೆಗೆ ಕರ್‍ಕೊಂಡು ಬಂದು, ನೆಲದ ಮೇಲೆ ಬೀಳಿಸಿ ಏನೇನೋ ಮಾಡ್ದ... ಮೈಯೆಲ್ಲಾ ನೋಯ್ತಿದೆ." ಸಾತಕ್ಕ ಹಿಂದೆ ಸರಿದಳು. ರಾಜ ಇಂಥಾ ಹೀನ ಕೃತ್ಯ ಮಾಡಬಹುದೆಂದು ಅವಳು ಊಹಿಸಿರಲಿಲ್ಲ.

"ನಿಜ ಹೇಳ್ತಿದೀಯಾ ಲಲಿತಾ....?"

"ಹುಂ ಅತ್ತೇ." ಅವಳು ಮತ್ತೆ ಬಿಕ್ಕಿ ಬಿಕ್ಕಿ ಅತ್ತಾಗ ಸಾತಕ್ಕನಿಗೆ ದಿಕ್ಕು ತೋಚದಂತಾಗಿತ್ತು. ಅವಳಿಗೂ ಅಳು ಬಂತು.

"ನೀವ್ಯಾಕೆ ಅಳ್ತಿದೀರಿ ಅತ್ತೇ ?"

"ಎಂಥಾ ಗತಿ ಬಂತಲ್ಲೇ ಲಲಿತಾ.... ಅವನು ಒಳಗೆ ಬಂದದ್ದೂ ಹೋದದ್ದು ಒಂದು ಗೊತ್ತಾಗ್ಲಿಲ್ಲ. ನೀನು ನನಗೆ ಒಂದ್ಮಾತೂ ಹೇಳದೇ ಅವನನ್ನು ಹೇಗೇ

ಒಳಕ್ಕೆ ಕರ್‍ಕೊಂಡು ಬಂದೆ ?"

"ಅವತ್ತು ಅವನು ಜಡೆ ಏಳೆದು ಬೀಳಿಸಿದ್ದ... ನಾನು ಹೊಡೀತೀನಿ ಅಂತ ಅಂದಿದ್ದೆ. ಎಲ್ಲರ ಎದುರಿಗೆ ಹೊಡೀಬೇಡ... ಈ ಕತ್ತಲೆ ಕೋಣೇಲಿ ಎಷ್ಟು ಬೇಕಾದ್ರೂ ಹೊಡಿ ಅಂತ ಅವನೇ ಇಲ್ಲಿಗೆ ಕರ್‍ಕೊಂಡು ಬಂದ...."

"ಥೀ.... ಏದೆಂಥದೇ ನಿಮ್ಮ ಜಗಳ ? ಅವನು ಈ ಸಮಯಕ್ಕೆ ಕಾಯ್ತಿದ್ದ. ಮುಂಡೇ ಮಗನ್ನ ಪಂಚಾಯ್ತಿ ಕಟ್ಟೇಲಿ ನಿಲ್ಲಿಸಿ, ಚಪ್ಪಲಿ ತಗೊಂಡು ಹೊಡೀಬೇಕು. ಮುಖಕ್ಕೆ ಉಗಿಯಬೇಕು." ಸಾತಕ್ಕ ನಿರ್ಧಾಕ್ಷಿಣ್ಯವಾಗಿ ಬೈದಳು.

"ನಂದೇನೂ ತಪ್ಪಿಲ್ಲ ಅತ್ತೇ.... ಅಣ್ಣ ಅಮ್ಮಂಗೆ ಹೇಳ್ಬೇಡಿ ಅತ್ತೇಗೂ ಹೇಳ್ಬೇಡಿ."

"ಯಾರ್‍ಗಾದ್ರೂ ಹೇಳ್ಕೊಂಡು ತಿರುಗಾಡೋ ಸಮಾಚಾರನ ಇದು ? ಮೊದ್ಲು ಬಚ್ಚಲು ಮನೆಗೆ ನಡಿ ನೀರು ಹುಯ್ತೀನಿ."

"ಯಾಕತ್ತೇ? ನನ್ನ ಸ್ನಾನ ಆಗಿದೆ." ಕಣ್ಣುಗಳನ್ನು ಒರೆಸಿಕೊಂಡಳು

"ಸುಮ್ನೇ ನಾನು ಹೇಳಿದಷ್ಟನ್ನು ಕೇಳು ಕೂತ್ಕೋ ಬಚ್ಚಲಲ್ಲಿ." ಸಾತಕ್ಕ ಹಂಡೆಯಲ್ಲಿದ್ದ ಬೆಚ್ಚಗಿದ್ದ ನೀರನ್ನು ಚೊಂಬಿನಿಂದ ತೆಗೆ ತೆಗೆದು ಲಲಿತಳ ತಲೆಯ ಮೇಲೆ ಸುರಿದಳು. "ಒದ್ದೆ ಬಟ್ಟೇನ ಬಿಚ್ಹಾಕಿ ಒಣಗಿದ ಬಟ್ಟೇನ ಉಟ್ಕೋ."

ಲಲಿತಳನ್ನು ಹೊರಕ್ಕೆ ಕಳುಹಿಸಿ ಉಟ್ಟ ಬಟ್ಟೆಯಲ್ಲೇ ತಾನೂ ನಾಲ್ಕು ಚೊಂಬು ತಣ್ಣೀರನ್ನು ಹೊಯ್ದುಕೊಂಡು ಹೊರಗೆ ಬಂದಳು ವೈಕುಂಠ ಹಿಂಬಾಗಿಲಿ ನಲ್ಲಿ ಕಾಯುತ್ತಿದ್ದ

"ಆ ಚಿಕ್ಕೋವನ್ನೆರಡನ್ನು ಕರ್‍ಕೊಂಡ್ಬಾ ಊಟಕ್ಕೆ ಬನ್ನಿ ಅಂತ ಕರಿ."

ವೈಕುಂಠನ್ನ ಅತ್ತ ಕಳಿಸಿ, ತಾನೂ ಒಣಗಿದ ಸೀರೆಯನ್ನು ಉಟ್ಟು ಬಂದಳು. "ಲಲಿತಾ ಎಲ್ರೂ ತಟ್ಟೆ ಹಾಕ್ಕೊಳ್ಳಿ." ಆದೇಶವನ್ನಿತ್ತು ಬಡಿಸಲು ಸಿದ್ಧಮಾಡಿಕೊಂಡಳು. ಕೈಗಳು ಕೆಲಸದಲ್ಲಿ ಮಗ್ನವಾಗಿದ್ದರೂ, ಮನಸ್ಸು ಇಲ್ಲದ ಆಲೋಚನೆಯಲ್ಲಿ ಮುಳುಗಿತ್ತು. ಈ ರಾಜಂಗೆ ಅಪ್ಪನ ಬುದ್ಧಿ ಈಗ್ಲೇ ಸೇರ್‍ಕೊಂಡು ಬಿಟ್ಟಿದೆ. ಅವನನ್ನು ಕರೆದು ಬುದ್ಧಿ ಹೇಳಬೇಕು ಅಂತ ಅಂದುಕೊಂಡಳು ತಕ್ಷಣವೇ ಬರೀ ಬಾಯಲ್ಲಿ ಬುದ್ಧಿ ಹೇಳಿದರೆ ಸಾಲದು. ಹೊಡೆದು ಬುದ್ಧಿ ಕಲಿಸಬೇಕು ಅಂತ ಹೇಳಿಕೊಂಡಳು. ಎಂದೂ ಮರೆಯ ದಂತೆ ಪಾಠವನ್ನು ಕಲಿಸಲೇಬೇಕು." ಎಂದು ತನ್ನಲ್ಲೇ ನಿರ್ಧರಿಸಿಕೊಂಡಳು.

"ಏ ಪದ್ದಿ, ಊಟ ಆದ್ಮೇಲೆ, ಅತ್ತೇ ಮನೆಗೆ ಹೋಗಿ ರಾಜನ್ನ ಕರೆದು ಬಾ; ದೊಡ್ಡಮ್ಮ ಕರೀತಿದಾರೆ; ಈಗ್ಲೇ ಬರ್‍ಬೇಕಂತೆ ಅಂತ ಹೇಳು." ಲಲಿತ ಅತ್ತೆಯನ್ನು ಕತ್ತೆತ್ತಿ ನೋಡಿದಳು. ಕಣ್ಣುಗಳಲ್ಲಿ ಭಯ ತುಂಬಿಕೊಂಡಿತ್ತು.

"ಯಾಕತ್ತೇ ಅವನು ಬರಲ್ಲ ಅಂತಂದ್ರೆ ?"

"ಹೇಳಿದಷ್ಟು ಕೇಳು ಅವನು ಬರಲ್ಲ ಅಂತಂದ್ರೆ ನಾನೇ ಹೋಗಿ ವಿಚಾರಿಸಿ

ಕೊಳ್ತೀನಿ." ಇಬ್ಬರೂ ಬೇಗ ಬೇಗ ಊಟವನ್ನು ಪ್ರಾರಂಭಿಸಿದರು. ಲಲಿತ ನಿಧಾನವಾಗಿ ಅನ್ನದಲ್ಲಿ ಬೆರಳಾಡಿಸತೊಡಗಿದಳು. ಹೊರಗೆ ಬಾಗಿಲ ಬಳಿ ಕುಳಿತಿದ್ದ ವೈಕುಂಠನಿಗೆ ಅನ್ನ ಸಾರನ್ನು ಒಟ್ಟಿಗೇ ಬಡಿಸಿದಳು. "ಈಗ ಊಟ ಆದ ತಕ್ಷಣ ತೋಟಕ್ಕೆ ಹೋಗು ಬರ್ತಾ ಏನಾದ್ರೂ ತರಕಾರಿ ಕುಯ್ಕೊಂಡು ಬಾ."

"ನಿನ್ನೆ ಅಷ್ಟೊಂದು ತರಕಾರಿ ತಂದು ಆಕಿದ್ನಲ್ಲ ಅವ್ವಾರೇ....?"

"ಹೇಳಿದಷ್ಟನ್ನು ಕೇಳು.... ಮಾತಿಗೆ ಮಾತು ಆಡಬೇಡ." ಅವನ ಮೇಲೆ ರೇಗಿದಳು. ಒಳಗೆ ಬಂದವಳು ಇಲ್ಲರಿಗೂ ಕೇಳುವಂತೆ ಪಾತ್ರೆಯನ್ನು ಕುಕ್ಕಿದಳು.

"ಯಾಕತ್ತೇ ಅಮ್ಮನ ಮೇಲೆ ಕೋಪಾನಾ?" ಪದ್ಮಿನಿ ಕೇಳಿದಳು.

"ನನ್ನ ಮೇಲೆ ನನಗೇ ಕೋಪ" ಎಂದು ಹೇಳಲಾಗದೇ, "ಸುಮ್ಮನೇ ತಿಂದು ಎದ್ದು ಹೋಗ್ರೇ ಏನು ಬೇಚಾರು ಮಾಡ್ತೀರಿ?" ಎಂದು ಬೈದಳು." ಲಲಿತಾ ನೀನೂ ಅಷ್ಟೇ ಬೇಗ ಊಟನ ಮುಗಿಸಿ, ಬಂದುಗಳಿಗೆ ಮಲಕ್ಕೋ,"ಎಂದು ಹೇಳಿ ಆಚೆಗೆ ಬಂದಳು. ಲಲಿತಾ ತಟ್ಟೆಗಳನ್ನು ತೊಳೆದಿಟ್ಟು, ಎಲೆ ಗೋರು ಮಾಡಿ, ನೆಲವನ್ನು ಬರೆಸಿ ಹೊರಬಂದಳು ಪದ್ಮಿನಿ ರಾಗಿಗಿಯರು ಅತ್ತೆಯ ಮನೆಗೆ ಓಡಿದ್ದರು.

"ಅತ್ತೇ ರಾಜನ್ನ ಯಾಕೆ ಕರೀತಿದೀರಿ.... ಅವನು ಕೆಟ್ಟೋನಾ?" ಎಂದಳು ಹೆದರುತ್ತಾ.

"ಹುಂ ಕೆಟ್ಟೋನೇ.... ನಿನ್ನ ತಂಟೇಗೆ ಬಂದಿರೋನ್ಗೆ ಶಿಕ್ಷೆ ಕೊಡ್ಬೇಕೋ ಬೇಡ್ವೋ.... ಅದಕ್ಕೇ ಕರೀತಿದೀನಿ."

"ಚೆನ್ನಾಗಿ ಹೊಡೀರಿ ಅತ್ತೆ ಸುಮ್ನೆ ಬಿಡ್ಬೇಡಿ."

"ನೀನೇ ಹೊಡೆಯುವಂತೆ. ಅವನು ಬಂದ್ಮೇಲೆ ನಿನ್ನನ್ನ ಕರೀತೀನಿ."

"ಅತ್ತೇ ನಂಗೆ ಭಯ ಆಗುತ್ತೆ."

"ಭಯ ಪಟ್ಕೊಂಡ್ರ, ಅವನ ಕೊಬ್ಬು ಇಳ್ಸೋದು ಹೇಗೆ? ಸುಮ್ನಿರು ನಾನಿರ್ತೀನಲ್ಲ. ಅವನು ಬರುವಾಗ ಅವನ ಎದುರಿಗೆ ಇರ್ಬೇಡ. ನೀನು ಮಲಗಿರು. ಲಲಿತಾ, ಗೋಡೆಯ ಬದಿಯಲ್ಲಿ, ಚಾಪೆಯನ್ನು ಹಾಕಿಕೊಂಡು, ಮಲಗಿದಳು ರಾಜ ಅನುಮಾನಿಸುತ್ತಾ ಒಳಬಂದ, ಏನೂ ನಡೆದಿಲ್ಲವೆಂಬಂತೆ,"

"ಏನು ದೊಡ್ಡಮ್ಮಾ ಕರೆದ್ರಂತೆ." ಎಂದು ಕೇಳಿದ.

"ಅಡಿಗೆ ಮನೆ ಬಡುಪಿನ ಮೇಲೆ ಮೆಣಸಿನ ಕಾಯಿ ಡಬ್ಬ ಇದೆ. ತೆಗೆದುಕೊಡು ನಂಗೆ ಎಟಕ್ತಿಲ್ಲ." ಎಂದಳು

"ಲಲಿತಾ ಇಲ್ವಾ ದೊಡ್ಡಮ್ಮ?" ಎನ್ನುತ್ತಾ ಅಡಿಗೆ ಮನೆಯೊಳಕ್ಕೆ ಬಂದ.

"ಮಲಗಿದಾಳೆ ತಲೆನೋವಂತೆ." ಎನ್ನುತ್ತಾ ಬಾಗಿಲಿಗೆ ಅಡ್ಡ ನಿಂತಳು.

"ಎಲ್ಲಿದೆ ಡಬ್ಬ?" ಎನ್ನುತ್ತಾ ರಾಜ ಅವಳಿಗೆ ಬೆನ್ನು ಮಾಡಿದಾಗ, ಬಾಗಿಲ

ಹಿಂದೆ ಇದ್ದ ಬಟ್ಟೆ ಹರವಿ ಹಾಕುವ ಕೋಲನ್ನು ಕೈಗೆತ್ತಿಕೊಂಡು ಅವನ ಬೆನ್ನ ಮೇಲೆ, ಸೊಂಟದ ಮೇಲೆ ಹೊಡೆದಳು. ಅನಿರೀಕ್ಷಿತ ಪೆಟ್ಟಿಗೆ ರಾಜ ಕಿರುಚಿದ. ತಿರುಗಿ ನೋಡಿದ. ದೊಡ್ಡಮ್ಮನ ಕೈಲಿ ಮಡಿಕೋಲು ! ಆವಳು ಮತ್ತೆ ಕೋಲನ್ನೆತ್ತಿ ಕೊಂಡಾಗ, ಕೈ ಎತ್ತಿ ಕೋಲನ್ನು ಹಿಡಿದ.

"ಯಾಕೆ ದೊಡ್ಡಮ್ಮ ಸುಮ್ಸುಮ್ನೆ ಹೊಡಿತೀರಿ?" ಜೋರಿನಿಂದ ಕೇಳಿದ.

"ನಾನು ಯಾಕೆ ಹೊಡೆದೆ ಅಂತ ನಿಂಗೆ ಇನ್ನು ಗೊತ್ತಾಗ್ಲಿಲ್ವಾ?"

"ನಾನೇನು ಮಾಡ್ದೆ? ಮನೆಗೆ ಕರೆದು ಹೊಡೀತೀರಲ್ಲ. ನಂದೇನು ತಪ್ಪು?"

"ತಪ್ಪು ನಿಂದಲ್ಲ. ನಿಮ್ಮ ಅಪ್ಪಂದು. ಏನನ್ನು ಅರೀದ ದತ್ತನ್ನ ಹಗ್ಗ ತಗೊಂಡು ಹೊಡೀತಾನೆ. ನಿನ್ನನ್ನ ಕಾಡು ಕೋಣನಂತೆ ಬೆಳೆಸಿದಾನೆ. ಬಿಡು ಕೋಲನ್ನ."

"ಅಪ್ಪನ್ನ ಅನ್ಬೇಡಿ. ಅವರಿಗೆ ಗೊತ್ತಾದ್ರೆ ನಿಮ್ಮನ್ನ ಪಂಚಾಯ್ತಿ ಕಟ್ಟೆ ಹತ್ತಿಸ್ತಾರೆ."

"ಹತ್ತಿಸ್ಲಿ ಕಣೋ... ಎಲ್ಲರೆದುರಿಗೆ ನೀನು ಮಾಡಿರೋ ಘನಂದಾರಿ ಕೆಲಸಾನಾ ನಾನೂ ಹೇಳ್ತೀನಿ. ಆಗ ನಿನಗೇ ಶಿಕ್ಷೆ ಆಗೋದು. ಶಿವಮೊಗ್ಗದ ಪೋಲಿಸ್ ಸ್ಟೇಷನ್‌ನಲ್ಲಿ ಕೂಡಿ ಹಾಕಿದರೆ ನಿನ್ನ ತಲೆ ನೆಟ್ಟಗಾಗುತ್ತೆ."

ಪೋಲಿಸ್ ಎಂಬ ಹೆಸರನ್ನು ಕೇಳಿ ರಾಜ ತಣ್ಣಗಾದ. ಕೋಲನ್ನು ಬಿಟ್ಟ. ದೊಡ್ಡಮ್ಮನ ಕಾಲಿಗೆ ಬಿದ್ದ. "ನಂದು ತಪ್ಪಾಯ್ತು. ಇನ್ಮೇಲೆ ಹೀಗೆಲ್ಲಾ ಮಾಡುಲ್ಲ. ದಯವಿಟ್ಟು ಯಾರ್ಗೂ ಹೇಳ್ಬೇಡಿ."

"ಯಾಕೆ ಇಂಥಾ ಹಲ್ಕಾಕೆಲ್ಸ ಮಾಡಿದ್ಯೋ ಹಾಳಾದೋನೆ. ಇದನ್ನೇನಾ ನೀನು ಕಾಲೇಜಿಗೆ ಹೋಗಿ ಕಲಿತಿದ್ದು?" ಮತ್ತೆ ಕೋಲನ್ನೆತ್ತಿಕೊಂಡಳು.

"ನಾನು ಲಲಿತನ್ನ ಮದುವೆ ಆಗ್ತೀನಿ... ನಂಗೆ ಅವಳ ಮೇಲೆ ಮನಸ್ಸಿದೆ. ಅದಕ್ಕೇ ಹಾಗೆ ಮಾಡಿದೆ. ದಯವಿಟ್ಟು ನನ್ನ ಮಾತನ್ನು ನಂಬಿ." ಕೈ ಮುಗಿದ.

"ಮದುವೆ ಮಾಡಿಕೊಳ್ಳುವ ಆಸೆ ಇದ್ದರೆ, ಅದನ್ನು ಹಿರಿಯರಿಗೆ ತಿಳಿಸ ಬೇಕಾಗಿತ್ತು. ಅದನ್ನು ಬಿಟ್ಟು ಇಂಥ ನೀಚ ಕೆಲ್ಸಾನ ಯಾರಾದ್ರೂ ಮಾಡ್ತಾರಾ ? ಲಲಿತ ನಿನ್ನನ್ನ ಮದುವೆಯಾಗಲ್ಲ. ನೀನು ಅವಳ ಗಂಡನಾಗುಕ್ಕೆ ಲಾಯಕ್ಕಿಲ್ಲ."

ಅಷ್ಟರಲ್ಲಿ ಲಲಿತ ಎದ್ದು ಬಂದಿದ್ದಳು. ರಾಜ ಅವಳ ಕಡೆ ತಿರುಗಿದ.

"ಲಲಿತಾ ದೊಡ್ಡಮ್ಮಂಗೆ ಹೇಳಿ ನನ್ನನ್ನ ಹೊಡೆಸಿದೀಯ ಅಲ್ವಾ? ನಾನು ನಿನ್ನನ್ನು ಸುಮ್ನೇ ಬಿಡಲ್ಲ. ನಾನು ನಿನ್ನನ್ನ ಮದುವೆಯಾಗಿ, ನಿನಗೆ ದಿನಾ ಹಿಂಸೆ ಕೊಡ್ತೀನಿ. ಅದ್ಯಾರು ಏನು ಮಾಡ್ತಾರೋ ಮಾಡ್ಲೀ...." ರೋಷದಿಂದ ಮಾತಾಡಿದ.

"ಲಲಿತಾ ತಗೋ ಈ ಕೋಲನ್ನ ಚೆನ್ನಾಗಿ ಬಡಿ, ಯಾರು ಬಂದು ಬಿಡಿಸ್ಕೊಳ್ತಾರೋ ನಾನೂ ನೋಡ್ತೀನಿ." ಸಾತಕ್ಕ ಲಲಿತಳ ಕೈಗೆ ಕೋಲನ್ನು ಕೊಟ್ಟಳು. ಅಡಿಗೆ ಮನೆಯ ಬಾಗಿಲನ್ನು ಭದ್ರಪಡಿಸಿ, ಬಾಗಿಲಿಗೆ ಅಡ್ಡವಾಗಿ ನಿಂತಳು. ಬಾಗಿಲ

ಬಳಿಗೆ ಓಡಿ ಬಂದ ರಾಜನಿಗೆ ಲಲಿತ ಕೋಲಿನಿಂದ ನಾಲ್ಕೇಟು ಹಾಕಿದಳು. ಅವನು ಅವಳ ಕೈಯಿಂದ ಕೋಲನ್ನು ಕಿತ್ತುಕೊಂಡ. ಲಲಿತಳಿಗೆ ಹೊಡೆಯಲೆಂದು ಕೋಲನ್ನು ಎತ್ತಿದ. ಆ ಏಟು ದೊಡ್ಡಮ್ಮನಿಗೆ ಬಿತ್ತು. ಅವನ ಕೈಯಿಂದ ಕೋಲು ನೆಲಕ್ಕೆ ಬಿತ್ತು. ಸಾತಕ್ಕ ಕೋಲನ್ನು ಮತ್ತೆ ಎತ್ತಿಕೊಂಡಾಗ ಹೆದರಿದ.

"ತಪ್ಪಾಯ್ತು, ದೊಡ್ಡಮ್ಮ ಗೊತ್ತಾಗ್ದೇ ಇಂಥಾ ಕೆಲಸ ಮಾಡಿದೆ. ಲಲಿತಾ ನೀನಾದ್ರೂ ಹೇಳೆ ದೊಡ್ಡಮ್ಮಂಗೆ." ಅವನು ಕುಸಿದು ಕುಳಿತು ಮುಖವನ್ನು ಎರಡು ಕೈಗಳಿಂದ ಮುಚ್ಚಿಕೊಂಡ. ಅವಮಾನದಿಂದ ಒಳಗೊಳಗೇ ಕುದಿಯುತ್ತಿದ್ದ.

"ಅವಳನ್ನೇನು ಕೇಳಿಕೊಳ್ತೀಯಾ ಹೇಡಿ ತರಹ, ನೀನೊಬ್ಬ ಗಂಡಸಾ? ನೀನಿನ್ನು ಚಿಕ್ಕೋನು ಅಂತ ಇಷ್ಟಕ್ಕೇ ಬಿಡ್ತೀನಿ. ನಿನ್ನ ಮರ್ಯಾದೆ ಉಳಿಯಬೇಕು ಅಂತಿದ್ರೆ ಈ ವಿಷಯಾನ ಇಲ್ಲಿಗೇ ಮರೆತು ಬಿಡು. ಸಭ್ಯವಾಗಿ ಬಾಳುವುದನ್ನು ಕಲಿ. ಇನ್ನು ಮುಂದೆ ಲಲಿತನ ಹತ್ರ ಮಾತ್ರನ್ನು ಆಡಕೂಡದು ನೀನು... ನಾನು ಹೇಳಿದ್ದು ನೆನಪಿನಲ್ಲಿಟ್ಕೋ ಇಲ್ದಿದ್ರೆ ಗೊತ್ತೇ ಇದೆಯಲ್ಲ." ಅಡಿಗೆ ಮನೆಯ ಬಾಗಿಲನ್ನು ತೆರೆದಳು. ರಾಜ ಹೊರಕ್ಕೆ ಬಂದ.

"ಇದರಲ್ಲಿ ಲಲಿತಂದೂ ತಪ್ಪಿದೆ ದೊಡ್ಡಮ್ಮಾ..... ನಾನೂ ನೋಡ್ಕೋತೀನಿ." ಎಂದು ಹೇಳಿ, ತನ್ನ ಮನೆಗೆ ಓಡಿದ.

ಸಾತಕ್ಕ ಲಲಿತಳ ತಲೆ ಸವರಿದಳು. ಅವನೊಂದು ವಿಷ ಜಂತು ಮತ್ತೇ ನಿನ್ನ ತಂಟೆಗೆ ಬರಲು ಪ್ರಯತ್ನಿಸ್ತಾನೆ. ನೀನು ಅವನ ಹತ್ರ ಮಾತಾನಾಡಲೇಬೇಡ. ಆದಷ್ಟೂ ಅವನ ಕಣ್ಣಿಗೆ ಬೀಳಬೇಡ..... ಅವನೇನಾದ್ರೂ ಬೈದು ಅಂದು ಮಾಡಿದ್ರೆ ನನಗೆ ಹೇಳು. ಸುಮ್ಮನಿರಬೇಡ" ಲಲಿತ ಅತ್ತೆಯ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿದಳು. ಸಾತಕ್ಕನ ಹೃದಯ ಬೆಂದು ಹೋಗಿತ್ತು. ತನ್ನದೇ ತಪ್ಪು ಎಂಬಂತೆ ಪರಿತಪಿಸಿದಳು. "ಗುಂಡಣ್ಣಂಗಾಗ್ಲೀ, ಲಕ್ಷ್ಮಿಗಾಗಲೀ, ಈ ವಿಷಯ ತಿಳಿದರೆ, ತನ್ನ ಮೇಲಿನ ನಂಬಿಕೆ ಹೋಗುವುದಿಲ್ಲವೆ ?" ಅವಳು ಮೂಕವಾಗಿ ಅತ್ತಳು.

"ಯಾಕತ್ತೇ ಇಬ್ರೂ ಹೀಗೆ ಇದೀರಿ ? ಲಲಿತಂಗೆ ಹುಶಾರಿಲ್ವಾ ?"

"ಇಬ್ಬರಿಗೂ ಕೆಲಸವಿರಲಿಲ್ಲ, ಅವಳಿಗೆ ಕತೆ ಹೇಳ್ತಿದ್ದೆ."

"ನಮಗೂ ಹೇಳಿ ಅತ್ತೇ....."

"ಈಗ ಬೇಡ ಎಲ್ರೂ ಸುಮ್ಮನೆ ಮಲಕ್ಕೊಳ್ಳಿ, ಎದ್ದ ಮೇಲೆ ಕಾಫಿ ತಿಂಡಿ ಕೊಡ್ತೀನಿ. ಅವರೂ ಇಬ್ಬರೂ ಅಲ್ಲಿಯೇ ಚಾಪೆ ಹಾಸಿಕೊಂಡು ಮಲಗಿದರು. ಸಾತಕ್ಕನ ಕೈ ಲಲಿತಳ ಮುಂದಲೆಯನ್ನು ಸರಿ ಮಾಡಿದವು.

* * *

ಚಿನ್ನ ಬೆಳ್ಳಿ ಅಂಗಡಿಯ ಜವುಳಿ ಅಂಗಡಿಯ, ವ್ಯಾಪಾರವನ್ನು ಮುಗಿಸಿ

ಕೊಂಡು, ಪೇಟೆಯಲ್ಲಿ ಸುತ್ತಾಡಿ ಶ್ರೀನಿವಾಸನ ಮನೆಗೆ ಬಂದರು. ಅಲ್ಲಿಯೇ ಊಟ ಮಾಡಿದರು. ಅವರಿಗೂ ಲಗ್ನಪತ್ರಿಕೆಯನ್ನು ಕೊಟ್ಟು ಆಮಂತ್ರಣವನ್ನಿತ್ತರು.

"ನೀವೆಲ್ಲಾ ಬಂದು ಓಡಾಡ್ಬೇಕು ನಾಗು..." ಲಕ್ಷ್ಮಿ ವಿಶ್ವಾಸದಿಂದ ಕರೆದಳು

"ಆಯ್ತು ಅತ್ತಿಗೆ, ಇಬ್ಬರೂ ನಗೆ ಮುಖದಿಂದ ಇವರುಗಳನ್ನು ಕಳಿಸಿ ಕೊಟ್ಟರು. ಒಂದು ಝಟಕಾಗಾಡಿಯನ್ನು ಗೊತ್ತು ಮಾಡಿಕೊಂಡು ರೈಲ್ವೇ ಸ್ಟೇಷನ್‌ಗೆ ಬಂದರು. ಹಳ್ಳಿಯ ಸ್ಟೇಷನ್‌ನಲ್ಲಿ ವೈಕುಂಠ ಸಮಯಕ್ಕೆ ಸರಿಯಾಗಿ ಬಂದಿದ್ದ. ಸಾಮಾನುಗಳನ್ನು ಅವನು ಹೊತ್ತುಕೊಂಡ. ಎಲ್ಲರೂ ಮನೆಗೆ ಬಂದರು. ಕೈಕಾಲು ತೊಳೆದರು ಅತ್ತೇ, ಕಾಫೀ ಇದ್ದರೆ ಕೊಡಿ ಸುಸ್ತಾಗಿದೆ." ಶಾಂತ ಎಂದಳು. ಸಾತಕ್ಕ ಏನನ್ನು ಆಡದೇ ಕೇಳದೇ ಎಲ್ಲರಿಗೂ ಕಾಫಿಯನ್ನು ತಂದಿತ್ತಾಗ ಲಕ್ಷ್ಮಿ ಅಚ್ಚರಿ ಗೊಂಡಳು.

"ಪೇಟೇಲಿ ವಿಪರೀತ ಶೆಕೆ.... ಬಿಸಿಲು ಸಾಕಾಯ್ತು." ಹೊದೆದಿದ್ದ ಶಲ್ಯದಿಂದ ಗಾಳಿಯನ್ನೂ ಬೀಸಿಕೊಂಡ. ಶಾಸ್ತ್ರಿ ತನ್ನ ಕೈ ಚೀಲದಿಂದ ಚಿನ್ನದ ಸರದ ಡಬ್ಬಿಯನ್ನು ತೆಗೆದ. ಸಾತು ನೋಡು, ಸರ ಚೆನ್ನಾಗಿದೆಯಾ ಅಂತ.... ?" ಅವಳ ಮುಂದೆ ಹಿಡಿದ ಸಾತು ಕೈಗೆ ತೆಗೆದುಕೊಳ್ಳಲಿಲ್ಲ.

"ಶಾಂತಂಗೆ ಇಷ್ಟವಾಗಿದ್ದರೆ ಸರಿ.... ದೇವರ ಮುಂದೆ ಇಟ್ಟು ಬಾ....." ಶಾಂತ ಅಡಿಗೆ ಮನೆಗೆ ಹೋದಳು. ಲಕ್ಷ್ಮಿ ಸಾತಕ್ಕನನ್ನೇ ವಿಚಿತ್ರವಾಗಿ ನೋಡಿದಳು. ಲಲಿತಳೂ ಮಂಕಾಗಿರುವುದನ್ನು ಗಮನಿಸಿದಳು. ಪಾರ್ವತಿಯೋ, ಕಂಠಿಯೋ ಬಂದು ಏನೋ ಆಡಿ ಹೋಗಿರಬಹುದು. ಇವರ ಮನಸ್ಸು ಕೆಟ್ಟು ಹೋಗಿದೆ ಅಂತಂಧುಕೊಂಡಳು.

"ಅತ್ಗೇ ಏನಾಯ್ತು ? ಯಾಕೋ ಒಂಥರಾ ಇದೀರಲ್ಲ."

"ಏನೂ ಇಲ್ಲ ಲಕ್ಷ್ಮೀ, ಸ್ವಲ್ಪ ಕೆಲಸ ಜಾಸ್ತಿಯಾಯ್ತಲ್ಲ, ಸೊಂಟನೋವು. ಪೇಟೆ ಕೆಲಸ ಎಲ್ಲ ಮುಗೀತಾ ?"

"ಹೂಂ, ಅತ್ಗೇ, ಜವುಳಿ ಗಂಟನ್ನು ಶ್ರೀನಿವಾಸನ ಮನೇಲಿ ಇಟ್ಟು ಬಂದಿ ದೀವಿ. ಅಂಗಡೀಲಿ ಗಂಟು ಕಳೆದು ಹೋದ್ರೆ ಅವನು ಜವಾಬ್ದಾರಿ ತಗೊಳ್ಳಲ್ಲವಂತೆ ಇಲ್ಲಿಗೇ ತಂದಿದ್ರೆ ನೀವೂ ನೋಡಬಹುದಾಗಿತ್ತು."

"ನಿನ್ನ ಆಯ್ಕೆ ಅಂದ್ಮೇಲೆ ಸೀರೆಗಳು ಚೆನ್ನಾಗಿರುತ್ತವೆ. ಅಷ್ಟಕ್ಕೂ ನಾನು ನೋಡಿ ಏನಾಗಬೇಕಾಗಿದೆ ? ಉಡೋರಿಗೆ ಇಷ್ಟವಾದರೆ ಸರಿ. ಉಳಿದ ಕೆಲಸಗಳನ್ನು ನೋಡ್ಕೋ ನಾನು ಮಲಗಿರ್ತೀನಿ." ಸಾತಕ್ಕ ಮಂದಲಿಗೆಯನ್ನೆಳೆದು ಮಲಗಿದಳು.

"ಶಾಂತಾ ಸ್ವಲ್ಪ ಬಾರೇ.... ಅಡಿಗೆ ಮನೆಯ ಕಸ ತೆಗಿ"

"ಲಲಿತಂಗೆ ಹೇಳಮ್ಮ ನಂಗೆ ಕಾಲು ನೋಯ್ತಿದೆ."

"ನಂಗೂ ಮೈ ಕೈ ನೋಯ್ತಿದೆ." ಲಲಿತ ಹೇಳಿದಾಗ ಲಕ್ಷ್ಮಿ ಅವಳನ್ನೇ

ವಿಚಿತ್ರವಾಗಿ ನೋಡಿದಳು

"ಏನು ಹುಡುಗೀರೋ.... ಈಗ್ಲೇ ಹೀಗೆ ಮುಂದೇನು ಗತಿಯೋ....?" ಅವಳಿಗೂ ಓಡಾಟದ ಆಯಾಸ ಈಗ ಗೊತ್ತಾಗತೊಡಗಿತ್ತು. ನಿಂತಲ್ಲೇ ಸೊಂಟವನ್ನು ನೀವಿಕೊಂಡಳು. ವೆಂಕಟೇಶ ಓಡಿ ಬಂದು 'ಎತ್ಕೋ' ಅಂತಂದ "ಬೆಳಗ್ನಿಂದ ಎತ್ಕೊಂಡೇ ಇದೀನಲ್ಲೋ" ಹಾಗೇ ಹೇಳಿದರೂ ಮಗನನ್ನು ಮುದ್ದಿಸುತ್ತಾ ಎತ್ತಿಕೊಂಡಳು

ಮದುವೆಗೆ ಹತ್ತು ದಿನಗಳು ಉಳಿದಿವೆ ಎನ್ನುವಾಗ ಲಕ್ಷ್ಮಿಯ ತಮ್ಮ ನಾರಾಯಣ ಹಳ್ಳಿಗೆ ಬಂದ. ಅವನನ್ನು ಕಂಡು ಲಕ್ಷ್ಮಿಗೆ ಬಲ ಬಂದಂತಾಯಿತು. ತಮ್ಮನನ್ನು ನಗೆ ಮುಖದಿಂದ ಸ್ವಾಗತಿಸಿದಳು. ಶಾಸ್ತ್ರಿಗೂ ಸಮಾಧಾನವಾಗಿತ್ತು

"ಬರ್ತೀದೀನಿ ಅಂತ ಕಾಗ್ದ ಹಾಕಿದ್ದಿದ್ರೆ, ರೈಲ್ವೇ ಸ್ಟೇಷನ್‌ಗೆ ವೈಕುಂಠನನ್ನ ಕಳಿಸ್ತಿದ್ದೆ." ಎಂದಳು.

"ಸಾಮಾನೂ ಹೆಚ್ಚಿಗೆ ಏನೂ ಇರ್ಲಿಲ್ಲ. ಬರೀ ಒಂದು ತಗುಲಿ ಹಾಕ್ಕೋಳ್ಳುವ ಚೀಲ.... ಅದಕ್ಕೇ ವೈಕುಂಠ ಯಾಕೆ? ಅವನು ಇನ್ನು ಇಲ್ಲೇ ಕಚ್ಚಿಕೊಂಡು ಇದಾನಾ?" ನಗುತ್ತಾ ಕೇಳಿದ

"ಹುಂ.... ಅವನಿಗೆ ಇಲ್ಲಿ ಏನು ಕಷ್ಟ! ಹಾಯಾಗಿದಾನೆ. ಆಮೇಲೆ ನೋಡು ತಿಂದು ಉಂಡು ದಾಂಡಿಗನಂತಾಗಿದಾನೆ. ಬಂದಾಗ ಹೇಗಿದ್ದ ಸಣಕಲ ಕಡ್ಡಿ ಹಾಗೆ."

"ಏನೋ ನಾಣೀ..... ಚೆನ್ನಾಗಿದೀಯೇನಪ್ಪಾ?" ಸಾತಕ್ಕ ಮಾತನಾಡಿಸಿದಳು

"ಹೂಂ, ಅತ್ತೇ ..... ನೀವು ಹೇಗಿದೀರಿ ? ಹುಶಾರಾಗಿದೀರಾ ?"

"ಹೂಂ....ನಾನು ಆರಾಮವಾಗಿದೀನಿ."

"ನಿಮ್ಮ ಅಣ್ಣ ಅತ್ತಿಗೆ ಹೇಗಿದಾರೆ? ಕೃಷ್ಣ ಯಾವಾಗ ಬರ್ತಾನೆ ?"

"ಅವನು ಯಾವುದೋ ಪರೀಕ್ಷೆಗೆ ಕಟ್ಟಿದಾನೆ. ಮದುವೆಗೆ ಎರಡು ದಿನಗಳು ಇವೆ ಅನ್ನುವಾಗ ಬರ್ತಾನಂತೆ. ಅಣ್ಣ ಅತ್ತಿಗೆ ಎಲ್ಲಾ ಸೀದಾ ಮದುವೆ ಮನೆಗೇ ಬರ್ತಾರಂತೆ" ಲಕ್ಷ್ಮಿ ತಂದಿತ್ತ ಬಿಸಿ ಬಿಸಿ ಕಾಫಿಯನ್ನು ನಿಧಾನವಾಗಿ ಕುಡಿದ.

"ನಮ್ಮೋರು ತಮ್ಮೋರು ಅಂತ ಹತ್ತಿರದವರು ಯಾರೂ ಇರಲಿಲ್ಲ. ನೀನು ಮುಂಚೇನೇ ಬಂದದ್ದು ಒಳ್ಳೇದೇ ಆಯ್ತು. ಸಧ್ಯ ರಜ ಸಿಕ್ತಲ್ಲ....."

"ಎಲ್ಲಾ ರಜಗಳನ್ನು ಸೇರಿಸ್ಕೊಂಡು ಬಂದಿದೀನಿ ಭಾವ...ಶಾಂತಾ ಎಲ್ಲಿ!"

"ಏನು ಮಾವ?" ಶಾಂತಾ ಲಲಿತಾ ಒಟ್ಟಾಗಿ ಬಂದರು ಅವರ ಹಿಂದೆ ಪದ್ಮಿನಿ ರಾಗಿಣಿಯರೂ ನಿಂತರು ಎಲ್ಲರನ್ನು ನೋಡಿ ನಸುನಕ್ಕ.

"ನಿಮ್ಮಿಬ್ಬರಲ್ಲಿ ಮದುವಣಗಿತ್ತಿ ಯಾರು? ಕಲಶಗಿತ್ತಿ ಯಾರು ?"

"ನೀವೇ ಹೇಳಿ ?" ಶಾಂತ ಪ್ರಶ್ನಿಸಿದಳು. ಲಲತ ಗಂಭಿರವಾಗಿ ನಿಂತಿದ್ದಳು

ನಾರಾಯಣ ಅವಳನ್ನು ಹತ್ತಿರಕ್ಕೆ ಕರೆದ.

"ಏನೇ ಲಲಿತಾ.... ವಿಪರೀತ ಜಂಭ ಬಂದು ಬಿಟ್ಟಿದೆಯಲ್ಲೇ...." ನೀನೇ ಮದುವಣಗಿತ್ತಿಯ ತರಹ ಬೀಗ್ತೀದೀಯ ಅವಳ ಕೈ ಹಿಡಿದ.

"ಏನಿಲ್ಲ.... ನಾನು ಇರೋದೇ ಹೀಗೆ...." ಅವಳು ಕೈ ಕೊಸರಿಕೊಂಡು ಒಳಕ್ಕೆ ಓಡಿ ಬಿಟ್ಟಳು. ನಾರಾಯಣ ಅಚ್ಚರಿಗೊಂಡ ತಾನು ತಂದಿದ್ದ ಬಟ್ಟೆಗಳನ್ನು ಹೊರಕ್ಕೆ ತೆಗೆದ "ಇದೆಲ್ಲಾ ನಿಮಗೆ ಶಾಂತಾ.... ನಿಂಗೆ ಸೀರೆ.... ಲಲಿತಂಗೆ ಲಂಗದ ಬಟ್ಟೇನ ತಂದೆ ಅವಳು ಸೀರೆ ಉಡುವಷ್ಟು ಬೆಳೆದು ಬಿಟ್ಟಿದಾಳೆ."

"ಇಷ್ಟೆಲ್ಲಾ ಯಾಕೆ ತರೋಕೆ ಹೋದೆ ನಾಣಿ..... ಎಷ್ಟು ಖರ್ಚಾಯಿತೋ?" ಲಕ್ಷ್ಮಿ ಎಂದಳು.

"ಪಂಚೆ ಷರಟು ಭಾವಂಗೆ.... ಅತ್ತಿಗೆ ಈ ಶಾಲು ನಿಮಗೆ."

"ಶಾಲು ಗೀಲು ನಂಗ್ಯಾಕೋ ನಾಣಿ.... ನನ್ನ ಬಗ್ಗೆ ಅಭಿಮಾನ, ಗೌರವ ಅಷ್ಟು ಇದ್ದರೆ ಸಾಕಪ್ಪ." ಆತ್ಮೀಯತೆಯಿಂದ ಹೇಳಿದಳು ಸಾತಕ್ಕ.

"ನಮ್ಮ ನಾಣಿಗೆ ನಿಮ್ಮನ್ನ ಕಂಡ್ರೆ ಬಹಳ ಗೌರವ ಅತ್ಗೇ..ಸ್ವಂತ ಅತ್ತಿಗೇಗಿಂತ ಹೆಚ್ಚು ನೀವು ಅಂತ ಹೇಳ್ತಾನೇ ಇರ್ತಾನೆ."

"ಹುಚ್ಚು ಹುಡುಗ...." ಸಾತಕ್ಕ ಮುದ್ದಿನಿಂದ ಹೊಗಳಿದಳು.

"ಶಾಂತಾ ಎಲ್ರಿಗೂ ತಟ್ಟೆ ಹಾಕಿಬಿಡು ಬೇಗ ಊಟ ಮಾಡಿ ಮಲಗಿ ಬೆಳಿಗ್ಗೆ ಬೇಗ ಏಳೋಣ. ನಾಳೆಯಿಂದ ಮದುವೆ ಮನೆಗೆ ತೆಗೆದುಕೊಂಡು ಹೋಗುವ ಸಾಮಾನುಗಳನ್ನು ಜೋಡಿಸಿಟ್ಟುಕೊಳ್ಳಬೇಕು. ಯಾವುದನ್ನು ಮರೆತರೂ ಕಷ್ಟ. ಎಲ್ಲಾವನ್ನು ಒಂದು ಪಟ್ಟಿ ಮಾಡಿಡಬೇಕು."

"ಆ ಕೆಲಸವೆಲ್ಲಾ ನಿನ್ನ ತಮ್ಮಂದು ಅವನದ್ದೇ ಉಸ್ತುವಾರಿ."

"ನೀವು ಜಾಣರು. ಬರ್ತಿದ್ದ ಹಾಗೇ ಅವನಿಗೆ ಕೆಲಸ ಹಚ್ತಿದೀರಲ್ಲ."

"ಬಿಡು ಅಕ್ಕ ನಾನು ಬಂದಿರೋದೇ ಸಹಾಯ ಮಾಡುಕ್ಕೆ. ಏನೇನು ವಹಿಸ್ಕೋ ಬೇಕು ಅಂತ ಹೇಳಿದರೆ ಸಾಕು. ಇಲ್ದಿದ್ರೆ ನಂಗೇನು ಗೊತ್ತು ?"

"ಮಕ್ಕಳೆಲ್ಲಾ ಮಲಗಿದ ಕೂಡಲೇ ನಿದ್ದೆಯ ಆಳಕ್ಕೆ ಇಳಿದಿದ್ದರು. ಅಕ್ಕ ಪಕ್ಕದಲ್ಲಿ ಹಾಸಿಗೆ ಹಾಕಿಕೊಂಡು ಮಲಗಿದ್ದ ಅಕ್ಕ ತಮ್ಮನಿಗೆ ನಿದ್ದೆ ಬಂದಿರಲಿಲ್ಲ. ಎಷ್ಟೋ ದಿನಗಳ ಮಾತುಗಳನ್ನಾಡುತ್ತಿದ್ದರು. ಸ್ವಲ್ಪ ದೂರದಲ್ಲಿ ಗೋಡೆಯ ಕಡೆ ಮಲಗಿದ್ದ ಸಾತಕ್ಕನಿಗೆ ಇವರಿಬ್ಬರ ಮಾತು ಕೇಳಿಸುತ್ತಿತ್ತು. ಇದ್ದಕ್ಕಿದ್ದಂತೆ ಕೇಳಿದಳು ನಿಂಗೆ ಎಷ್ಟು ವರ್ಷವೋ ನಾರಾಯಣ."

"ಇಪ್ಪತ್ತಾರು ತುಂಬಿಲ್ಲ, ಯಾಕತ್ತಿಗೆ ಕೇಳಿದ್ರೀ ?"

"ಇನ್ನು ನೀನು ಬೇಗ ಮದುವೆಯಾಗಿ ಬಿಡು. ಕೆಲಸವೂ ಸಿಕ್ಕಿದೆಯಲ್ಲ"

"ನನ್ನ ಕೆಲಸ ಖಾಯಂ ಅಲ್ಲ, ಮದುವೆಗೇನು ಅವಾಂತರ ಅತ್ತಿಗೆ ?"

"ನಿಂತು ನೋಡಿ ಮದುವೆ ಮಾಡುಕ್ಕೆ ನಿಮ್ಮಪ್ಪ ನಿಮ್ಮಮ್ಮ ಬದುಕಿಲ್ಲ, ಅಣ್ಣ ಅತ್ತಿಗೆಯರ ಮನಸ್ನಲ್ಲಿ ಏನಿದೆಯೋ ? ಮದುವೆ ಮನೇಲಿ ನಿನಗೆ ಸರಿ ಹೊಂದುವಂತ ಹುಡುಗಿ ಇದ್ದರೆ, ಗುಂಡಣ್ಣ ವಿಚಾರಿಸ್ತಾನೆ."

"ಕೃಷ್ಣನ ಓದು ಮುಗಿದು, ಕೆಲಸ ಸಿಗಲಿ, ಆಮೇಲೆ ಮದುವೆ ಆಗ್ತೀನಿ. ಕಂಠಿ ಮಗಳು ಮೀನಾಕ್ಷಿಗೆ ಮದುವೆ ಆಯ್ತಂತೆ ಈಗ ಎಲ್ಲಿದಾಳೆ ಅವಳು ? ಅವಳು ತುಂಬಾ ಚೆನ್ನಾಗಿದ್ಲು, ಅವಳ ಗಂಡನೂ ಚೆನ್ನಾಗಿರಬಹುದು ಅಲ್ವಾ ?"

"ಸುಮಾರಾಗಿದಾನೆ, ಆದರೆ ಭಾರಿ ಶ್ರೀಮಂತರಂತೆ, ಮೀನಾಕ್ಷಿ ರೂಪಿನಲ್ಲಿ ಚೆನ್ನ. ಭಾವ ಇಲ್ಲದ ಮನೆ ಆಗ್ಬೇಕಾಗಿತ್ತು. ನಿನಗೆ ತಂದುಕೊಳ್ಳುವ ಆಸೆ ನನಗಿತ್ತು. ಕೇಳುವ ಪ್ರಶ್ನೆಯೇ ಇರಲಿಲ್ಲ. ಆದರೆ ಕಂಠಿ ಸ್ವಭಾವ ನಿಂಗೆ ಗೊತ್ತೇ ಇದೆಯಲ್ಲ, ಅಷ್ಟೇ ರೂಪವಂತೆ ಹುಡುಗೀನ ನೋಡೋನ. ಎಂಥಾ ಹುಡುಗಿ ಬೇಕು ಹೇಳು."

"ಹುಡುಗಿ ನಮ್ಮ ಲಲಿತನ ಹಾಗಿರಬೇಕು. ಲಲಿತಾ ಈಗ ಬೆಳೆದು ಬಿಟ್ಟಿದಾಳೆ, ಚೆನ್ನಾಗಿ ಆಗಿದಾಳೆ."

"ಲಲಿತನ್ನೇ ಮಾಡ್ಕೋತೀಯೇನು ? ಭಾವನ ಹತ್ರ ಮಾತಾಡ್ತೀನಿ."

"ಛೇ...ಛೇ.... ಲಲಿತಾ ತುಂಬಾ ಚಿಕ್ಕವಳು. ಅಲ್ಲದೇ ಹತ್ತಿರದ ಸಂಬಂಧದಲ್ಲಿ ಮದುವೆ ಆಗೋ ಇಷ್ಟ ನನಗಿಲ್ಲ. ಅಲ್ಲದೆ ಸಧ್ಯಕ್ಕೆ ಮದುವೆ ಬೇಡ."

"ವಯಸ್ಸು ಮೀರಿ ಹೋಗುವ ಮೊದಲು ಮದುವೆಯಾಗ್ಬೇಕು ನಾಣಿ ಸುಮ್ಮನೇ ದಿನ ತಳ್ಳಬೇಡ."

"ಶಾಂತಾನೇ ಚಿಕ್ಕವಳು, ಅವಳಿಗೇ ಇನ್ನು ಸ್ವಲ್ಪ ದಿನಗಳು ತಡೀಬಹು ದಾಗಿತ್ತು. ಅವಳು ಓದನ್ನು ಮುಂದುವರೆಸಬಹುದಾಗಿತ್ತು. ಹೆಣ್ಮಕ್ಕಳಿಗೆ ಓದು ಬರಹ ಇರಬೇಕ ಅತ್ಗೇ. ಲಲಿತಂಗೆ ಹೀಗೆ ಅವಸರ ಮಾಡ್ಬೇಡಿ, ಚೆನ್ನಾಗಿ ಓದಲಿ, ನಿಧಾನವಾಗಿ ಮದುವೆ ಮಾಡಿ."

"ನಮಗೆ ನಾಲ್ಕು ಜನ ಹೆಣ್ಣು ಮಕ್ಕಳು ನಾಣಿ. ಎಲ್ಲರ ಜವಾಬ್ದಾರೀನ ಬೇಗ ಬೇಗ ಕಳ್ಕೋಬೇಕು ನಿಧಾನಿಸುಕ್ಕೆ ಹೇಗೆ ಆಗುತ್ತೆ?"

"ಇಲ್ಲ ಅಕ್ಕ, ಹೆಣ್ಮಕ್ಕಳ ವಿಷಯದಲ್ಲಿ ಅವಾಂತರ ಪಟ್ಟು ಏನೇನೋ ನಿರ್ಧಾರ ತಗೋಬೇಡಿ,... ಏನಾದ್ರೂ ಅವಿವೇಕ ಆದರೆ, ಜೀವಮಾನವೆಲ್ಲಾ ಸಂಕಟ ಪಡಬೇಕಾಗುತ್ತೆ." ಅವನ ದನಿಯಲ್ಲಿ ನೋವು ಇದ್ದುದನ್ನು ಸಾತಕ್ಕ ಗುರುತಿಸಿದಳು.

"ನಾರಾಯಣ.... ನೀನಿನ್ನು ಆ ದುರಂತಾನ ಮರತೇ ಇಲ್ಲ ಅಂತ ನಿನ್ನ ಧ್ವನಿಯೇ ಹೇಳುತ್ತೇ.... ಯಾಕಪ್ಪಾ ಸುಮ್ಮನೇ ಕೊರಗ್ತೀಯ ?"

"ಆ ವಿಷಯಾನ ಹೇಗೆ ಮರೆಯೋಕೆ ಆಗುತ್ತೆ ಅತ್ಗೇ. ಇವತ್ತಿಗೂ ಜಯಾ

ಮುಖ ಕಣ್ಣ ಮುಂದೆ ಬಂದು ನಿಲ್ಲುತ್ತೆ. ಅಣ್ಣಂದಿರು ನಾವುಗಳು ಇದ್ರೂ ಅವಳನ್ನು ಕಳೆದುಕೊಂಡು ಬಿಟ್ಟೆವಲ್ಲಾ...." ಅವನ ದನಿ ಗೊರಗೊರ ಅಂದಿತು.

"ನೀನು ಹೀಗೆ ದುಃಖಿಸಿದರೆ, ಅವಳು ಮತ್ತೆ ವಾಪಸ್ಸು ಬರ್ತಾಳ್ಯೆ! ಸಮಧಾನ ಮಾಡ್ಕೋಬೇಕಪ್ಪಾ...ಸಾತಕ್ಕ ಬಾಯಲ್ಲಿ ಹಾಗೆ ಹೇಳಿದರೂ ಅವಳಿಗೂ ವ್ಯಥೆಯಾಗಿತ್ತು. ಗುಂಡಣ್ಣನ ಮದುವೆಯಲ್ಲಿ, ಕಲಶಗಿತ್ತಿಯಾಗಿ ಓಡಾಡುತ್ತಿದ್ದ ಜಯಳ ಮುಖ ಮನಸ್ಸಿನ ಮುಂದೆ ತೇಲಿಬಂತು. ನಿದ್ದೆ ಹಾರಿಹೋಯಿತು. ಇದ್ದಕ್ಕಿದ್ದಂತೆ ಆವರಿಸಿದ ಮೌನದ ಪರದೆಯ ಮೇಲೆ ಚಿತ್ರಗಳು ಕಂಡವು.

* * *

ಲಕ್ಷ್ಮಿಗೆ ಒಬ್ಬ ಅಣ್ಣ, ಇಬ್ಬರು ತಮ್ಮಂದಿರು. ಒಬ್ಬಳೇ ತಂಗಿ ಜಯ. ಅಕ್ಕನ ಮದುವೆಯಲ್ಲಿ ಜರತಾರಿ ಲಂಗ ತೊಟ್ಟು ಕಲಶವನ್ನು ಹಿಡಿದು ಮದುವೆ ಮನೆಯಲ್ಲಿ ಸಡಗರದಿಂದ ಓಡಾಡುತ್ತಿದ್ದಳು. ಆಗಿನ್ನು ಕೇವಲ ಎಂಟು ವರ್ಷ ಲಕ್ಷ್ಮಿಗೆ ಹನ್ನೆರಡು ವರ್ಷಗಳು. ಲಕ್ಷ್ಮಿಯ ಮದುವೆಯಾಗಿ ಗಂಡನ ಮನೆಗೆ ಬಂದಳು. ಮಾರನೇ ವರ್ಷವೇ ತಾಯಿ ಹೆರಿಗೆ ಸಮಯದಲ್ಲಿ, ತೀರಿ ಹೋಗಿದ್ದಳು. ತಂದೆ ಬೇರೆ ಏನೋ ಅನಾರೋಗ್ಯದಿಂದ ತೀರಿಹೋಗಿದ್ದರು. ಅವಳ ತಂದೆ ತಾಯಿ ಏಳೆಂಟು ತಿಂಗಳ ಅಂತರದಲ್ಲಿ ಮಕ್ಕಳನ್ನು ಅನಾಥರನ್ನಾಗಿ ಮಾಡಿ ಪರಲೋಕಕ್ಕೆ ಹೊರಟು ಹೋದರು.

ಹೊಸದಾಗಿ ಮದುವೆಯಾಗಿದ್ದ ಲಕ್ಷ್ಮಿಯ ಅಣ್ಣ ಸುಬ್ಬರಾಯನಿಗೆ ಮನೆಯ ವಹಿವಾಟು ಸಿಕ್ಕಿತು. ಆದರೆ ತಮ್ಮಂದಿರ, ತಂಗಿಯ ಜವಾಬ್ದಾರಿ ಹಿತವೆನಿಸಲಿಲ್ಲ. ಹೊಸದಾಗಿ ಮನೆಗೆ ಬಂದಿದ್ದ ನಾಗಲಕ್ಷ್ಮಿಗೆ ಯಾವ ಅನುಕಂಪವೂ ಇರಲಿಲ್ಲ. ಹತ್ತು ವರ್ಷದ ನಾರಾಯಣ, ಎಂಟು ವರ್ಷದ ಜಯ, ಐದು ವರ್ಷದ ಕೃಷ್ಣ ಅತ್ತಿಗೆಯ ಹೀನಾಯವಾದ ಹಂಗಿನ ಮಾತುಗಳಲ್ಲಿ ನಲುಗಿ ಹೋದರು. ಅಣ್ಣನ ಹತ್ತಿರ ಚಾಡಿ ಹೇಳುವಂತಿಲ್ಲ. ಅಕ್ಕ ಲಕ್ಷ್ಮಿ ಸಹ ಅಸಹಾಯಕಳಾಗಿದ್ದಳು. ತುಂಬು ಕುಟುಂಬದಲ್ಲಿ ಸೊಸೆಯಾಗಿ ಬಂದವಳಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಆದರೂ, ಚಿಕ್ಕ ಚಿಕ್ಕ ವಯಸ್ಸಿನ ಬೇರೆ ಮಕ್ಕಳನ್ನು ನೋಡಿದಾಗ ವ್ಯಥೆ ಮರುಕಳಿಸುತ್ತಿತ್ತು. ಹುಟ್ಟಿಸಿದ ಅಪ್ಪ ಅಮ್ಮನಿಗೆ ಎಲ್ಲರನ್ನು ಅನಾಥರನ್ನಾಗಿ ಮಾಡಿ ಹೋಗಲು ಅವಾಂತರ ವೇನಿತ್ತು ಅಂತ ತನಗೆ ತಾನೇ ಕೇಳಿಕೊಳ್ಳುತ್ತಿದ್ದಳು. ಈ ಕುರಿತು ಅಣ್ಣನ ಹತ್ತಿರ ಮಾತನಾಡುವಂತಿರಲಿಲ್ಲ. ಅವನೂ ಒರಟನಾಗಿ ಬಿಟ್ಟಿದ್ದ.

ತಂದೆಯ ಆಸ್ತಿಯನ್ನೆಲ್ಲ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದ ಚಿಕ್ಕ ವಯಸ್ಸಿನ ನಾಗಲಕ್ಷ್ಮಿಗೆ ಪುಟ್ಟ ಸಂಸಾರದ ಕಲ್ಪನೆ ಇತ್ತು. ಬರುತ್ತಿದ್ದಂತೆ ಒದಗಿದ ಈ ದೊಡ್ಡ ಸಂಸಾರ ಅವಳಿಗೆ ಬೇಡವಾಗಿತ್ತು. ಅಸಹನೆಯ ಗೂಡಾದಳು. ಸ್ವಂತ ಮಕ್ಕಳನ್ನೇ

ಸರಿಯಾಗಿ ಮುದ್ದಿಸಿ ಪಾಲಿಸಲಾಗದ ಸ್ಥಿತಿಯಿರುವಾಗ, ಮೈದುನಂದಿರು ನಾದಿನಿಯರನ್ನ ನೋಡಿಕೊಳ್ಳುವ ಸಹನೆ ಇರಲಿಲ್ಲ.

ವರುಷಗಳು ಉರುಳಿದವು. ನಾರಾಯಣ ಇಂಟರ್ ಮೀಡಿಯಟ್‌ನಲ್ಲಿ ಫೇಲಾಗಿದ್ದ. ಅಣ್ಣನೇ ಒಂದು ಕಡೆ ಕೆಲಸ ಕೊಡಿಸಿದ್ದ. ಹೈಸ್ಕೂಲಿನಲ್ಲಿ ಓದುತ್ತಿದ್ದ ಜಯಳ ಓದು ಅಷ್ಟಕ್ಕೆ ನಿಂತಿತು. ಯೌವನಕ್ಕೆ ಬಂದಿರುವ ಹುಡುಗಿಯ ಮದುವೆ ಮಾಡದೇ ಮನೆಯಲ್ಲೇ ಇಟ್ಟುಕೊಂಡಿದಾರೆ ಎಂಬ ಅವರಿವರ ಮಾತಿಗೆ ಹೆದರಿ, ಸ್ಕೂಲಿಗೆ ಹೋಗುವುದನ್ನ ತಪ್ಪಿಸಿದ್ದಳು. ನಾರಾಯಣನ ಮಾತಿಗೆ ಅತ್ತಿಗೆ ನಕಾರ ಹೇಳಿದ್ದಳು.

"ನಿಮಗೆಲ್ಲಾ ಏನು ತಿಳಿಯುತ್ತೆ! ನಾನು ಕೆಟ್ಟವಳು ಅಷ್ಟೇ. ನಿನ್ನ ತಂಗಿ ಬೆಳೆದು ನಿಂತಿದಾಳೆ. ಮದುವೆ ಮಾಡಬೇಕು. ಅವಳಿಗಿನ್ಯಾಕೆ ಓದು? ಜನ ಆಡಿಕೊಳ್ತಾರೆ. ಅವಳ ಮದುವೆಗೆ ಕಷ್ಟವಾಗುತ್ತೆ." ನಾರಾಯಣ ಸುಮ್ಮನಾಗಬೇಕಾಯಿತು.

ಅತ್ತಿಗೆ ಅವಳಿಗೆ ವರನನ್ನ ಹುಡುಕಲು ಪ್ರಾರಂಭಿಸಿದ್ದಳು. ಜಯ ಅಣ್ಣನೊಡನೆ ಗುಟ್ಟಾಗಿ, ಅತ್ತಿಗೆಗೆ ತಿಳಿಯದಂತೆ, "ನನಗೆ ಈಗಲೇ ಮದುವೆ ಬೇಡ" ಎಂದಿದ್ದಳು.

"ಈಗ ಬೇಡದಿದ್ದರೆ ಇನ್ಯಾವಾಗ ಮಾಡ್ಕೋತೀಯ. ಅತ್ತಿಗೆ ನಿನ್ನ ಶತೃವಲ್ಲ. ನಿನ್ನ ಒಳ್ಳೇದನ್ನೇ ಬಯಸ್ತಾಳೆ. ನಿಂಗೆ ಗೊತ್ತಾಗಲ್ಲ ಸುಮ್ಮನಿರು." ಎಂದು ದಬಾಯಿಸಿದ್ದ.

"ನಾರಾಯಣ ನೀನಾದರೂ ಅಣ್ಣಂಗೆ ಹೇಳು. ನಾನೀಗ್ಲೇ ಮದುವೆಯಾಗಲ್ಲ ಎಂದು ಗೋಗರೆದಿದ್ದಳು. ನಾರಾಯಣ ಅಸಹಾಯಕನಾಗಿದ್ದ.

ಅತ್ತಿಗೆ ಅಲ್ಲಿ ಇಲ್ಲಿ ವಿಚಾರಿಸಿ, ಒಬ್ಬ ವರನನ್ನ ಗೊತ್ತು ಮಾಡಿದಳು. ತಂದೆ ತಾಯಿಗೆ ಒಬ್ಬನೇ ಮಗ. ಎಸ್.ಎಸ್.ಎಲ್.ಸಿ. ಫೇಲಾಗಿದ್ದ. ಸ್ವಲ್ಪ ಜಮೀನು, ಸ್ವಂತ ಮನೆ ಇತ್ತು. ಒಂದು ಅಂಗಡಿಯೂ ಇತ್ತು. ಜಯಳಿಗೆ ಇದಕ್ಕಿಂತ ಉತ್ತಮ ಗಂಡು ಎಲ್ಲಿ ಸಿಗುತ್ತೆ ಅಂತ ಅವಳ ಅಭಿಪ್ರಾಯ. ವಧೂ ಪರೀಕ್ಷೆ ಮಾಡಲು ವರನ ಕಡೆಯವರು ಬಂದಿದ್ದರು. ಅವರುಗಳಿಗೆ ಜಯ ಒಪ್ಪಿಗೆ ಆದಳು. ಆದರೆ ಜಯನಿಗೆ, 'ನಿನಗೆ ಒಪ್ಪಿಗೆಯೇ' ಅಂತ ಯಾರೂ ಕೇಳಿರಲಿಲ್ಲ. ಜಯ ಒಬ್ಬಳೇ ಕುಳಿತು ಅತ್ತಿದ್ದಳು. ನಾರಾಯಣ ಅತ್ತಿಗೆಗೆ ಹೇಳಿದ.

"ಈ ವರ ಬೇಡ ಅತ್ತಿಗೆ. ಜಯನಿಗೆ ತಕ್ಕವನಲ್ಲ. ಬಹಳ ಒರಟನಂತೆ ಕಾಣ್ತಾನೆ. ನಮ್ಮ ಜಯನಿಗೆ ಅನ್ಯಾಯವಾಗುತ್ತೆ."

"ನಾನು ಎಲ್ಲವನ್ನ ವಿಚಾರಿಸಿಯೇ ಮುಂದುವರೆದಿದೀನಿ. ನೋಡೋಕೆ ಒರಟನಂತೆ ಕಂಡರೂ, ಹೃದಯ ಬಹಳ ಮೃದು. ತಂದೆ ತಾಯಿ ಇಲ್ಲದ ಹುಡುಗಿ ಅಂತ ಅನುಕಂಪದಿಂದ ಒಪ್ಪಿಕೊಂಡಿದಾನೆ. ಅಲ್ಲಿ ಇವಳಿಗೆ ಏನೂ ಕಷ್ಟವಿಲ್ಲ. ಮನೇಲಿ ಹೆಚ್ಚು ಜನರಿಲ್ಲ. ಹೆಚ್ಚು ಕೆಲಸವಿಲ್ಲ, ಆದಾಯವಾಗಿರಬಹುದು."

"ಹಾಗಲ್ಲ ಅತ್ತಿಗೆ. ಹುಡುಗ ಸ್ವಲ್ಪ ರೂಪವಂತನಾಗಿರಬೇಡವೆ? ನಮ್ಮ ಜಯ

ರೂಪವಂತೆ. ಕೋಮಲ ಸ್ವಭಾವ..."

"ಅವಳು ರೂಪವಂತೆಯಾಗಿರೋದ್ರಿಂದ್ಲೇ ಅವರು ಒಪ್ಪಿಕೊಂಡಿರುವುದು. ಗಂಡಸಿಗ್ಯಾಕೆ ರೂಪ!? ಅವನ ಆದಾಯ ನೋಡ್ಬೇಕು. ನೀನು ಇಲ್ಲದ ಸಲ್ಲದ ವಿಷಯಗಳನ್ನ ನಿನ್ನ ತಂಗಿಗೆ ಹೇಳಿ, ಅವಳ ಮನಸ್ಸನ್ನ ಕೆಡಿಸಬೇಡ. ನಾವು ಒಪ್ಪಿಗೆಯನ್ನ ಕೊಟ್ಟಿದ್ದಾಗಿದೆ. ಮದುವೆಯ ದಿನವನ್ನೂ ಸಹ ಗೊತ್ತು ಮಾಡಿದ್ದಾಗಿದೆ."

"ಜಯನನ್ನು ಒಂದು ಮಾತೂ ಸಹ ಕೇಳದೇ ಮದುವೆಯನ್ನು ಹೇಗೆ ನಿಶ್ಚಯ ಮಾಡಿದಿರಿ ಅತ್ತಿಗೆ. ಇದು ಅನ್ಯಾಯ." ಎಂದು ಬಿಟ್ಟ.

"ಏನು ಅನ್ಯಾಯ ಮಾಡಿದೀವಿ? ನಮಗೆ ಅಷ್ಟು ಅಧಿಕಾರ ಇಲ್ವಾ? ಜಯ ಒಳ್ಳೆಯ ಮನೆ ಸೇರಲಿ ಅಂತ ನನಗೂ ಆಸೆ ಇಲ್ಲವೆ? ಒಟ್ನಲ್ಲಿ ಅತ್ತಿಗೆ ಕೆಟ್ಟೋಳು ಅನ್ನೋ ಮಾತು ಬಂದೇ ಬಂತು. ಏನಾದ್ರೂ ಮಾಡ್ಕೊಳ್ಳಿ. ನಿಮಗೋಸ್ಕರ ನಾನ್ಯಾಕೆ ಒದ್ದಾಡ್ಬೇಕು. ನಾನು ನಿಮ್ಮ ತಂಟೆಗೆ ಬರುವುದಿಲ್ಲ. ಅನಾಥ ಮಕ್ಕಳು ಅಂತ ಅನುಕಂಪ ತೋರಿದ್ದಕ್ಕೆ ಆಯ್ತು ಮರ್ಯಾದೆ." ಎಂದು ಜೋರಾಗಿ ಅಳ ತೊಡಗಿದಾಗ ಜಯ ಹೆದರಿದಳು.

ತನ್ನ ಅಣ್ಣ ತಮ್ಮಂದಿರಂತೆ, ಭಾವನಂತೆ ರೂಪಸ್ಥನಲ್ಲದ, ಒರಟು ಮುಖದ, ಒಡ್ಡು ದೇಹದ, ವಯಸ್ಸಾದವನಂತೆ ಇದ್ದ ವರನನ್ನ ಮದುವೆಯಾಗಲು ಒಪ್ಪಿಗೆ ಕೊಟ್ಟಳು. ಅತ್ತಿಗೆ ಗೆಲುವಾದಳು. ವರದಕ್ಷಿಣೆ, ವರೋಪಚಾರದ ಆಸೆಯಿಲ್ಲದ, ಸರಳವಾಗಿ ಮದುವೆ ಮಾಡಿಕೊಳ್ಳಲು ಒಪ್ಪಿರುವ ಗಂಡು ಸಿಕ್ಕಿದ್ದು ನಮ್ಮ ಪುಣ್ಯ ಎಂದು ಎಲ್ಲರೊಡನೆ ಹೇಳಿಕೊಂಡು ಬಂದಳು. ನಾರಾಯಣ, ಜಯಳ ದೌರ್ಭಾಗ್ಯಕ್ಕೆ ವ್ಯಥೆಗೊಂಡ. ಆದರೂ ತಪ್ಪಿಸಲು ಸಾಧ್ಯವಾಗಲಿಲ್ಲ. ಕೃಷ್ಣ ಇನ್ನೂ ಚಿಕ್ಕವನು. ಅವನೊಡನೆಯಾಗಲೀ, ಅಣ್ಣನೊಡನೆಯಾಗಲೀ, ತನ್ನ ಮನದ ವ್ಯಥೆಯನ್ನ ಹೇಳಿಕೊಳ್ಳಲಾಗದೇ ಒದ್ದಾಡಿದ. ಕಡೆಗೆ ತಡೆಯಲಾಗದೇ ಅಕ್ಕ ಲಕ್ಷ್ಮಿಗೆ ಪತ್ರ ಬರೆದ. ಆದರೆ ಅವಳಿಂದ ಉತ್ತರ ಬಂದಿರಲಿಲ್ಲ. ಅವಳೇ ಊರಿಗೆ ಬಂದಾಗ, ಮನೆಯಲ್ಲಿ ಮತ್ತೊಂದು ಹಗರಣ.

"ಅತ್ತಿಗೆ, ನೀವೂ ಒಬ್ಬರು ಹೆಣ್ಣಾಗಿ, ಜಯಳ ಮನದಲ್ಲಿ ಏನಿದೆ ಅಂತ ವಿಚಾರಿಸಬೇಕಾಗಿತ್ತು. ಅವಳಿಗೆ ಇನ್ನೂ ಚಿಕ್ಕವಯಸ್ಸು. ಆ ಒರಟನ ಜೊತೆ ಅವಳು ಸಂಸಾರ ಮಾಡೋದಾದ್ರೂ ಹೇಗೆ? ನಲುಗಿ ಹೋಗ್ತಾಳೆ ಅಷ್ಟೆ."

"ನಿನಗೆ ಏನೂ ಗೊತ್ತಾಗಲ್ಲ ಲಕ್ಷ್ಮಿ. ನಮ್ಮ ಕಷ್ಟ ನಮಗೆ ಗೊತ್ತು. ಮನೇಲಿ ದುಡಿದು ತರೋಕೆ ನಿಮ್ಮ ಅಣ್ಣ ಒಬ್ಬರೇ. ತಿನ್ನೋಕೆ ಎಲ್ಲರೂ. ನಿಮ್ಮ ಅಣ್ಣನ ಸಂಪಾದನೆಯಲ್ಲಿ ಏನು ಆಗುತ್ತೆ! ಅದನ್ನ ಯೋಚಿಸಬೇಕು ತಾನೇ!"

"ಯಾಕತ್ತಿಗೆ? ಅಪ್ಪ ಮಕ್ಕಳ ಮದುವೆಗೆ ಅಂತ ಹಣ ಇಟ್ಟಿದ್ದರಲ್ಲ."

"ಏನು ಇಟ್ಟಿದ್ದರು? ಯಾರು ಹೇಳಿದ್ರು? ಎಲ್ಲಾ ಸುಳ್ಳು. ಬೇಕಾದಷ್ಟು ಸಾಲ ಇತ್ತು. ಅದನ್ನ ತೀರಿಸಿ, ನಮಗೆ ಅಂತ ಏನು ಉಳಿಸಿಕೊಂಡಿದೀವಿ? ನನಗೂ ಇಬ್ಬರು ಮಕ್ಕಳು. ಮಕ್ಕಳಿಗೆ ಏನು ಮಾಡ್ತಿದೀನಿ? ಎಲ್ಲಾ ಇವರುಗಳಿಗೇ ಆಗ್ತಿದೆ. ನಾರಾಯಣ ಫೇಲಾಗಿ ಮನೇಲೇ ಕೂತಿದಾನೆ. ಕೃಷ್ಣ ಓದ್ತಾ ಇದಾನೆ. ನಿನಗೆ ಇಂಥ ಝುಂಝಾಟವಿಲ್ಲ. ಆದ್ದರಿಂದ ಗೊತ್ತಾಗಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅಂತ. ನೀನು ಈ ವಿಷಯಗಳಲ್ಲಿ ಬಾಯಿ ಹಾಕದಿದ್ದರೇ ಒಳ್ಳೇದು. ಇಲ್ಲದಿದ್ದರೆ ನನ್ನ ನಿನ್ನ ಸಂಬಂಧ ಕೆಡುತ್ತೆ." ಎಚ್ಚರಿಸುವಂತೆ ಹೇಳಿದಳು.

"ಹೀಗೆ ಕಟುವಾಗಿ ಯಾಕೆ ಮಾತಾಡ್ತೀರಿ? ನಾನು ಜಯಳಿಗೆ ಅಕ್ಕ. ನಾನು ಒಂದು ಅಭಿಪ್ರಾಯ ಹೇಳುವ ಹಕ್ಕೂ ಇಲ್ಲವಾ?"

"ಹಕ್ಕು ಅಧಿಕಾರ ಎಲ್ಲಾ ಇದೆ. ಹಾಗಾದ್ರೆ ಇವರನ್ನೆಲ್ಲಾ ನಿಮ್ಮನೆಗೆ ಕರ್ಕೊಂಡು ಹೋಗು. ನನಗೂ ನೆಮ್ಮದಿ."

"ಸರಿ ಬಿಡಿ. ಸ್ವಂತ ತಂದೆ ತಾಯಿಗಳೇ ಇಲ್ಲದಿರುವಾಗ, ಮಕ್ಕಳಿಗೆ ಅನ್ಯಾಯ ವಾಗುವುದು ಸಹಜ. ಜಯಳ ಹಣೇಲಿ ಏನು ಬರೆದಿದೆಯೋ ಹಾಗೇ ನಡೆಯುತ್ತೆ! ಕಂಡರೂ ಕಾಣದಂತೆ ಇರುವುದನ್ನು ನಾನು ಕಲಿತ್ಕೋ ಬೇಕು ಅಷ್ಟೇ."

"ಹೆದರಿಬಿಟ್ಯಾ! ಜವಾಬ್ದಾರಿ ಯಾರಿಗೂ ಬೇಡ. ನಿಭಾಯಿಸುವುದು ಕಷ್ಟ. ಇವೆಲ್ಲಾ ನನ್ನ ತಲೆಗೆ ಅಂಟಿದ್ದು. ಒಂದೊಂದಾಗಿ ತೊಳೆದುಕೊಳ್ಳಬೇಕಾಗಿರುವುದು ನನ್ನ ಕರ್ಮ." ಹಣೆ ಹಣೆ ಚಚ್ಚಿಕೊಂಡಳು.

"ಹೀಗೆಲ್ಲಾ ಮಾತಾಡಬೇಡಿ ಅತ್ತಿಗೆ. ಕೇಳುಕ್ಕೆ ಕಷ್ಟವಾಗುತ್ತೆ. ಇದು ನಿಮ್ಮ ಧರ್ಮ ಅಲ್ಲವಾ! ನಿಮಗೆ ಏನು ಸರಿ ಅಂತ ಅನ್ನಿಸುತ್ತೋ ಹಾಗೇ ಮಾಡಿ. ನಾನು ಸುಮ್ಮನಿರುವುದೇ ಒಳ್ಳೆಯದು." ಎನ್ನುತ್ತ ಅಲ್ಲಿಂದ ಎದ್ದಿದ್ದಳು.

ದೇವಸ್ಥಾನದಲ್ಲಿ ಸರಳವಾಗಿ ಮದುವೆ ಜರುಗಿತ್ತು ಜಯ ಮಂಕಾಗಿದ್ದಳು. ವರ ಉತ್ಸಾಹದಲ್ಲಿದ್ದ. ಅವರ ಕಡೆ ಹೆಚ್ಚು ಜನ ಬಂದಿರಲಿಲ್ಲ. ಏನಿದ್ದರೂ ಅತ್ತಿಗೆಯ ನೆಂಟರದ್ದೇ ಓಡಾಟ. ಲಕ್ಷ್ಮಿಗೂ ಯಾವ ಆಸಕ್ತಿ ಇರಲಿಲ್ಲ. ನಾರಾಯಣ ಅಸಹಾಯಕ ನಂತೆ ಚಡಪಡಿಸಿದ. ಕೃಷ್ಣ ತನಗೆ ಸಂಬಂಧಿಸಿದುದೇ ಅಲ್ಲ ವೆನ್ನುವಂತೆ ನಿರಾಸಕ್ತಿ ಯಿಂದ ಇದ್ದ.

"ಯಾವ ಆಕ್ಷೇಪಣೆಯನ್ನ ಎತ್ತದೇ ಇರುವ ಬೀಗರನ್ನ ಕಂಡು ಲಕ್ಷ್ಮಿ ಅಚ್ಚರಿ ಗೊಂಡಳು. ಇವರಿಗೆ ಬೇಕಾದದ್ದು ರೂಪವಂತ ಸೊಸೆ. ಇಲ್ಲದಿದ್ದರೆ ಇವನಿಗೆ ಮದುವೆಯಾಗುವುದೇ ಕಷ್ಟ ಎನ್ನುವಂತಿದ್ದವನಿಗೆ ಅದೃಷ್ಟ. ಜಯಳ ದುರಾದೃಷ್ಟಕ್ಕೆ ಮರುಗಿದಳು.

ಮದುವೆಯ ಸಿಹಿ ಊಟ ಮುಗಿಸಿ, ಉಡುಗೊರೆಗಳನ್ನ ತೆಗೆದುಕೊಂಡ

ಬೀಗರು ವಾಪಸ್ಸು ಹೊರಡುವ ಕಾತುರವನ್ನ ತೋರಿದರು. ಬೀಗರನ್ನ ಕಳಿಸಿಕೊಡುವ ಸಿದ್ಧತೆಯಲ್ಲಿದ್ದಾಗ, ಬೀಗತ್ತಿ ಲಕ್ಷ್ಮಿಯೊಡನೆ ಹೇಳಿದಳು.

"ನಾವು ಸೊಸೆಯನ್ನ ಇವತ್ತೇ ಮನೆ ತುಂಬಿಸಿಕೊಳ್ಳುವುದಿಲ್ಲ. ಈ ರಾತ್ರಿ ನಕ್ಷತ್ರ ಚೆನ್ನಾಗಿಲ್ಲವಂತೆ. ನವದಂಪತಿಗಳು ಒಟ್ಟಿಗೆ ಮಲಗುವಂತಿಲ್ಲ. ಇನ್ನೆರಡು ತಿಂಗಳು ಕಳೆದ ನಂತರ, ಶಾಸ್ತ್ರೋಕ್ತವಾಗಿ "ಪ್ರಸ್ಥ"ದ ಕಾರ್ಯಕ್ರಮವನ್ನ ಮಾಡಿ ಸೊಸೆಯನ್ನ ಕರೆದುಕೊಂಡು ಹೋಗ್ತೀವಿ" ಎಂದಳು. ಬೀಗಿತ್ತಿಯ ಈ ವರ್ತನೆ ವಿಚಿತ್ರವಾಗಿತ್ತು. ಸರಳವಾದ ಮದುವೆ, ವರೋಪಚಾರ ಕಡಿಮೆಯಾಯಿತೆಂದು ಅಸಮಾಧಾನಗೊಂಡಿರಬಹುದು. ಪ್ರಸ್ಥದ ಸಮಯದಲ್ಲಿ ಅದನ್ನೆಲ್ಲಾ ಕೇಳಬಹುದು ಎಂದುಕೊಂಡರು. ಆದರೆ ಜಯಳ ಗಂಡ ರಾಮಚಂದ್ರ ತಾಯಿಯ ಮೇಲ ಕೋಪಗೊಂಡು ಜಗಳ ಆಡಿದ್ದ. ಹೆಂಡತಿಯನ್ನ ತನ್ನೊಡನೆ ಕರೆದುಕೊಂಡು ಹೋಗಬೇಕೆಂದುಕೊಂಡಿದ್ದ. ಹೊರಡುವ ಮೊದಲು ಜಯಳನ್ನ ಮಾತನಾಡಿಸಲೆಂದು ಅವಳ ಕೋಣೆಗೆ ಬಂದಿದ್ದ.

"ನನಗೆ ನಿನ್ನನ್ನ ಬಿಟ್ಟಿರೋದು ಕಷ್ಟ ಆಗ್ತಿದೆ ಜಯಾ. ಅಮ್ಮನ ಮೊಂಡುತನ ಏಸೂಂತ ನಂಗೆ ಅರ್ಥವಾಗ್ತಿಲ್ಲ. ಅವಳ ಸ್ವಭಾವವೇ ಹಾಗೆ. ಸ್ವಲ್ಪ ವಿಚಿತ್ರ. ನೀನು ಚಿಂತಿಸಬೇಡ. ಆದಷ್ಟು ಬೇಗ ನಿನ್ನನ್ನ ನಮ್ಮ ಮನೆಗೆ ಕರೆಸಿಕೊಳ್ತಿವಿ" ಎಂದು ಹೇಳಿ ಅವಳ ಕೈಗಳನ್ನ ಹಿಡಿದ. ರೋಮದಿಂದ ಕೂಡಿದ ದಪ್ಪನೆಯ ಕೈಗಳು, ಕೋಮಲವಾದ ಮೃದು ಕೈಗಳನ್ನ ಅಮುಕಿತು. ಜಯ ಬೆವತು ಹೋದಳು. ಕೈಗಳನ್ನ ಬಿಡಿಸಿಕೊಳ್ಳಲು ಪ್ರಯತ್ನಿಸಿದಳು. ಅವನ ಹಿಡಿತ ಬಿಗಿಯಾಗಿತ್ತು. ಅವಳು ತಲೆ ತಗ್ಗಿಸಿದಳು.

"ಯಾಕೆ ಜಯಾ..? ಹೆದರಿಕೇನಾ? ನಾಚಿಕೇನಾ? ನಾನು ನಿನ್ನ ಗಂಡ." ಎಂದು ಹೇಳಿ ಅವಳ ಗಲ್ಲವನ್ನ ಹಿಡಿದೆತ್ತಿದ. ಅತಿ ಸಮೀಪದಲ್ಲಿ ನಿಂತಿದ್ದವನ ಕಡೆ ನೋಡಲಾಗದೇ ಅವಳು ಕಣ್ಣುಗಳನ್ನು ಮುಚ್ಚಿಕೊಂಡಳು. ಅವನು ಮೆಲ್ಲನೆ ಅವಳ ಸೊಂಟದ ಮೇಲೆ ಕೈಯಾಡಿಸಿದ. ಅವಳು ಹಿಂದಕ್ಕೆ ಸರಿದು ಗೋಡೆಗೆ ಒರಗಿ ನಿಂತಳು. ಭಯದಿಂದ ಕಣ್ಣುಗಳು ಅರಳಿದ್ದವು. ಅವನು ಮತ್ತೆ ಅವಳನ್ನ ಸಮೀಪಿಸು ವಷ್ಟರಲ್ಲಿ ಅವನ ತಾಯಿ ಕರೆದಿದ್ದಳು.

"ಅಮ್ಮ ಕರೀತಿದಾಳೆ. ಈಗ ಹೋಗ್ತೀನಿ. ಮುಂದಿನವಾರ ಬರ್ತೀನಿ" ಎಂದು ಹೇಳಿ ಸರ್ರನೆ ಬಾಗಿ ಅವಳ ಕೆನ್ನೆಗೆ ತನ್ನ ತುಟಿಯನ್ನು ಒತ್ತಿದ್ದ. ಅವಳು ಮುಖವನ್ನ ಅತ್ತ ತಿರುಗಿಸಿಕೊಂಡಳು. ಅವನು ಕಳ್ಳನಗೆಯನ್ನ ನಕ್ಕು ಕೆನ್ನೆಯನ್ನು ಸವರಿ ಅಲ್ಲಿಂದ ಸರಿದಿದ್ದ. ಅವಳು ಹಾಗೇ ಉಸಿರುಕಟ್ಟಿ ನಿಂತಿದ್ದಳು.

"ಜಯ, ಹೊರಗ್ಬಾರೆ. ದಿಬ್ಬಣ ಹೊರಟಿತು" ಯಾರೋ ಕರೆದಿದ್ದರು. ಇವಳು

ಬಚ್ಚಲು ಮನೆಗೆ ಹೋಗಿ, ಮುಖಕ್ಕೆ ತಣ್ಣೀರನ್ನ ಎರಚಿಕೊಂಡಿದ್ದಳು. ದಿಬ್ಬಣವನ್ನ ಕಳಿಸಿಕೊಟ್ಟು ಆರಾಮವಾಗಿ ನಿಂತವರು, ಕೂತವರು ತಮಗೆ ತೋಚಿದಂತೆ ಮಾತನಾಡಿಕೊಂಡರು.

"ಇನೇನು ಬೇಕಂತಪ್ಪಾ ನಿನ್ನ ಬೀಗಿತ್ತಿಗೆ? ಅತ್ಲಾಗೆ ಮನೆ ತುಂಬಿಸಿಕೊಂಡಿದ್ದರೆ ಆಗ್ತಿರಲಿಲ್ವಾ! ಅವನು ಹೊಸದಾಗಿ ಮದುವೆಯಾದವನು ಹೆಂಡತಿಯನ್ನ ಬಿಟ್ಟು ಹೇಗಿರ್ತಾನೆ? ಎರಡು ಮಕ್ಕಳಾಗುವ ವಯಸ್ಸಾಗಿದೆ ಅವನಿಗೆ."

ಲಕ್ಷ್ಮಿಯ ಮನಸ್ಸು ಮುದುಡಿತು. ತನ್ನ ಗಂಡನ ವಯಸ್ಸಿನವನು. ಇಂಥ ಚಿಕ್ಕ ಹುಡುಗಿಯ ಜೊತೆ... ನಮ್ಮ ಜಯಂಗೆ ಅನ್ಯಾಯವಾಗಿ ಹೋಯಿತು. ಮರುಗಿದಳು.

ಸಧ್ಯಕ್ಕೆ ಜಯ ಸಮಾಧಾನಗೊಂಡಿದ್ದಳು. ಅವನು ಹೊರಟು ಹೋಗಿದ್ದ. ಮತ್ತೆ ಅವನು ಬಂದಾಗ ಏನಾದರೂ ನೆವ ಹೇಳಬಹುದು ಎಂದುಕೊಂಡಳು.

ಮದುವೆಗೆ ಬಂದಿದ್ದ ನೆಂಟರಿಷ್ಟರೆಲ್ಲ ಹೊರಟು ಹೋಗಿದ್ದರು. ಲಕ್ಷ್ಮಿ ಒಂದೆರಡು ದಿನಗಳ ಮಟ್ಟಿಗೆ ಉಳಿದುಕೊಂಡಳು. ಅತ್ತಿಗೆಯ ಗೊಣಗಾಟ ನಡದೇ ಇತ್ತು. "ನಮ್ಮ ಕಷ್ಟ ಇನ್ನೂ ತೀರಿಲ್ಲ. ಎಷ್ಟೂಂತ ಇವುರಗಳಿಗೇ ಸುರಿಯೋದು? ನಮ್ಮ ಮಕ್ಕಳಿಗೆ ಕೊಡೋಕೆ ಇದೆಯಲ್ಲ ಚಿಕ್ಕನಾಯಕನ ಹಳ್ಳಿಯ ಬೆಳ್ಳಿ ಚಿಪ್ಪು..."

"ಯಾಕತ್ತಿಗೆ ಹೀಗೆ ಮಾತಾಡ್ತೀರಿ! ಇನ್ನು ಎಷ್ಟು ಜನಕ್ಕೆ ಮದುವೆ ಮಾಡ್ಬೇಕು ನೀವು? ಇವಳನ್ನ ಗಂಡನ ಮನೆಗೆ ಕಳಿಸಿಕೊಟ್ಟ ಮೇಲೆ ಮುಗೀತಲ್ಲ."

"ಎಲ್ಲಿ ಮುಗಿದಿದೆ? ಅವರಿಗೆ ನಾವು ಕೊಟ್ಟಿದ್ದು ಸಾಲದು ಅನ್ನೋ ಅಸಮಾಧಾನ. ಇಲ್ದಿದ್ರೆ ಇವಳನ್ನ ಕರ್ಕೊಂಡು ಹೋಗ್ದೇ ಇರ್ತಿದ್ರಾ?.. ನಿನ್ನ ತಂಗಿಗೆ ತಿಳುವಳಿಕೆ ಸಾಲದು. ಗಂಡನಾದವನ ಹತ್ತಿರ ಸರಸವಾಗಿ ಮಾತಾಡಿದ್ದಿದ್ರೆ, ಅಮ್ಮನ ಒಪ್ಪಿಸಿ ಕರ್ಕೊಂಡು ಹೋಗಿರ್ತಿದ್ದ. ದಿಬ್ಬಣ ಹೊರಟಾಗಲೂ ಮುಂಬಾಗಿಲಿಗೆ ಬಂದು ನಿಲ್ಲಲಿಲ್ಲ... ಗಂಡ ಅಂತಂದ್ರೆ ಅಸಡ್ಡೆ ಅಂತ ಅಂದುಕೊಂಡಿರ್ತಾನೆ."

"ಅವಳಿನ್ನೂ ಚಿಕ್ಕವಳು. ಅದೆಲ್ಲಾ ಎಲ್ಲಿ ತಿಳಿಯುತ್ತೆ?"

"ನೀನು ಹೇಳಿಕೊಡಬೇಕಾಗಿತ್ತು ಲಕ್ಷ್ಮಿ. ಒಡಹುಟ್ಟಿದವಳು ಅಲ್ವಾ?"

"ನಂಗೆ ಇಂಥಾದ್ದೆಲ್ಲಾ ಗೊತ್ತೇ ಇಲ್ಲ ಅತ್ತಿಗೆ. ಅಪ್ಪ ಅಮ್ಮ ಹೇಳಿದ ಹಾಗೆ ಕೇಳ್ದೆ. ಗಂಡನ ಮನೇಲಿ ಅತ್ತೆ ಮಾವ ಹೇಳಿದ ಹಾಗೆ ಕೇಳ್ದೆ. ಇವತ್ತಿಗೂ ದೊಡ್ಡೋರ ಎದುರಿಗೆ, ನಾನು ಇವರ ಹತ್ರ ಮಾತಾಡುಕ್ಕೆ ಸಂಕೋಚವಾಗುತ್ತೆ."

"ನಿನ್ನ ವಿಷಯ ಬೇರೆ ಲಕ್ಷ್ಮಿ. ನಿನ್ನದು ದೊಡ್ಡ ಕುಟುಂಬ. ಇಲ್ಲಿ ಎಷ್ಟು ಜನ ಇದಾರೆ? ಅವನು ಮತ್ತೆ ಬಂದಾಗ ಹೀಗೆಲ್ಲಾ ಆಡಬೇಡ ಅಂತ ನಿನ್ನ ತಂಗಿಗೆ ಬುದ್ಧಿ ಹೇಳು." ಲಕ್ಷ್ಮಿ ತಲೆ ಆಡಿಸಿದ್ದಳು.

ಒಂದು ವಾರದ ಒಳಗೇ ರಾಮಚಂದ್ರ ಹೆಂಡತಿಯನ್ನ ನೋಡಲೆಂದು ಮತ್ತೆ ಬಂದಿದ್ದ. ಹೂವು ಹಣ್ಣು ವಿಳ್ಳೇದೆಲೆಗಳನ್ನ ಕೊಂಡು ತಂದಿದ್ದ. ಜಯ ಅತ್ತಿಗೆಯ ಬಲವಂತಕ್ಕೆ ಒಳ್ಳೆಯ ಸೀರೆಯನ್ನುಟ್ಟು ಹೂವು ಮುಡಿದು ಸಿದ್ಧಳಾದಳು. ಅತ್ತಿಗೆ ಕೊಟ್ಟ ಕಾಫಿಯನ್ನ, ತಿಂಡಿಯನ್ನ ತಟ್ಟೆಯಲ್ಲಿಟ್ಟುಕೊಂಡು ಅವನು ಕುಳಿತಿದ್ದಲ್ಲಿಗೆ ಬಂದಳು. ರಾಮಚಂದ್ರ ಹೆಂಡತಿಯನ್ನ ಕಂಡು ಊರಗಲ ಬಾಯಿ ಬಿಟ್ಟು, 'ಕೂತ್ಕೋ' ಎಂತಂದ. ಅವಳು ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತಳು. ಕಾಫಿ ತಿಂಡಿಯನ್ನ ಮುಗಿಸಿದ. ಅವಳು ತಲೆ ಎತ್ತಿರಲಿಲ್ಲ.

"ಹೊರಗೆ ಎಲ್ಲಾದ್ರೂ ತಿರುಗಾಡಿಕೊಂಡು ಬರೋಣ ಬರ್ತೀಯಾ ಜಯಾ?" ಆಸೆಯಿಂದ ಕೇಳಿದ್ದ. ಇವಳು ಒಳ ಬಂದು ಕೇಳಿದಾಗ, ಅತ್ತಿಗೆ ಬೇಡ ಎಂದಿರಲಿಲ್ಲ. ಜಯ ಮುದುರಿಕೊಂಡು ಅವನಿಂದ ದೂರದಲ್ಲೇ ನಡೆದಳು. ವಾಪಸ್ಸು ಬರುವಾಗ ನಡುಗುತ್ತಲೆ ಕವಿದಿತ್ತು. ಬೀದಿಯಲ್ಲಿ ಅವಳ ಕೈಹಿಡಿದ. ಅವಳು ಕೊಸರಿಕೊಂಡಳು. ಅವನು ನಯವಾಗಿ ಪಿಸುದನಿಯಲ್ಲಿ ಗದರಿದ.

"ನಮ್ಮಿಬ್ಬರಿಗೂ ಮದುವೆ ಆಗಿದೆ. ಯಾರೂ ಏನೂ ಅಂದ್ಕೊಳ್ಳಲ್ಲ ಸುಮ್ಮನೇ ಬಾ." ಅವನ ಕೈಯ ಬಿಸಿ, ಅವಳಲ್ಲಿ ಯಾವ ನವಿರು ಭಾವನೆಯನ್ನ ಹುಟ್ಟಿಸಲಿಲ್ಲ. ಮೈ ಬಿಗಿ ಮಾಡಿಕೊಂಡಳು. ಅವನಾಡುವ ಮಾತುಗಳು ಅವಳಿಗೆ ಅರ್ಥವಾಗಲಿಲ್ಲ. ಯಾವ ಸರಸವೂ ಬೇಕಿರಲಿಲ್ಲ. ಇಬ್ಬರೂ ಮನೆಗೆ ಬಂದರು. ಸ್ವಲ್ಪ ಹೊತ್ತಿನ ನಂತರ ಅವನು ಹೊರಟ. ಅವಳು ಸುಮ್ಮನೇ ತಲೆ ಆಡಿಸಿದ್ದಳು. ಅವನು ಮತ್ತೆ ಮುಂದಿನವಾರ ಬಂದಿದ್ದ. ಅವಳು ಅವನ ಪ್ರೀತಿಯ ನಡೆ ನುಡಿಗಳಿಗೆ ಸ್ಪಂದಿಸಿರಲಿಲ್ಲ. ಅವಳ ನಿರ್ಲಿಪ್ತತೆ ಅವನಲ್ಲಿ ಬೇಸರವನ್ನುಂಟು ಮಾಡಿತು.

ಅದಾದ ನಂತರ ಮರುವಾರ ಅವನು ಬಂದಿರಲಿಲ್ಲ. ಅವಳಿಗೆ ಯಾವ ಬೇಸರವೂ ಆಗಿರಲಿಲ್ಲ. ಎರಡು ದಿನಗಳ ನಂತರ ಬಂದವನು, "ಅಪ್ಪನಿಗೆ ತುಂಬಾ ಹುಶಾರಿಲ್ಲ. ಅವರ ಸ್ಥಿತಿ ಗಂಭೀರವಾಗಿದೆ. ಆಸ್ಪತ್ರೆಗೆ ಸೇರಿಸಿದೀವಿ. ನಿನ್ನನ್ನ ನೋಡ್ಬೇಕು ಅಂತ ಹೇಳ್ತಾ ಇದಾರೆ. ಎರಡು ದಿನಗಳ ಮಟ್ಟಿಗೆ ಕರ್ಕೊಂಡು ಹೋಗಿ, ನಾನೇ ಮತ್ತೆ ಕರ್ಕೊಂಡು ಬಂದು ಬಿಡ್ತೀನಿ" ಅಂತಂದ. ಹಿಂದೆ ಮುಂದೆ ಯೋಚಿಸದೇ ಅವನ ಜೊತೆಯಲ್ಲಿ ಕಳಿಸಿಕೊಟ್ಟರು. ಅತ್ತೆ ಸೊಸೆಯನ್ನ ನಿರ್ವಿಕಾರವಾಗಿ ಬರಮಾಡಿ ಕೊಂಡಳು. ರಾಮಚಂದ್ರ ಹೆಂಡತಿಯನ್ನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತಂದೆಗೆ ತೋರಿಸಿದ. "ಅಪ್ಪಂಗೆ ನಿನ್ನದೇ ಚಿಂತೆ ಆಗಿತ್ತು. ಇನ್ನ ಅವರ ಆರೋಗ್ಯ ಸುಧಾರಿಸುತ್ತೆ." ರಾಮಚಂದ್ರ ಹೇಳಿದ. ಅವಳನ್ನ ಮನೆಗೆ ಕರೆದುಕೊಂಡು ಬಂದ. ಅತ್ತೆ ಆಸ್ಪತ್ರೆಯಲ್ಲೇ ಉಳಿದಳು.

ಆ ರಾತ್ರಿ, ಆ ಮನೆಯಲ್ಲಿ ರಾಮಚಂದ್ರ, ಜಯಾ ಇಬ್ಬರೇ ಉಳಿದರು.

ಜಯ ನಡುಗಿದಳು. "ನನ್ನನ್ನ ಊರಿಗೆ ಕರ್ಕೊಂಡು ಹೋಗಿ ಬಿಟ್ಟುಬನ್ನಿ." ಎಂದಳು.

"ಅವಸರ ಏನು? ಹೇಗೂ ಬಂದಿದೀಯ ಎರಡು ದಿನ ಇದ್ದು ಹೋಗು. ಅಪ್ಪನೂ ಮನೆಗೆ ಬಂದು ಬಿಡ್ತಾರೆ." ಅವನೇ ಅಡಿಗೆ ಮಾಡಿ ಹೆಂಡತಿಗೂ ಬಡಿಸಿ ತಾನೂ ಊಟ ಮಾಡಿದ. ಅವಳ ಚಡಪಡಿಕೆ ಅವನನ್ನು ಕೆರಳಿಸಿತ್ತು. "ಯಾಕೆ ಹೀಗಾಡ್ತಿದೀಯ? ಇದು ನಿನ್ನದೇ ಮನೆ. ನಾನು ನಿನ್ನ ಗಂಡ... ನಾನೇನು ಹೊರಗಿನವ ನಲ್ಲ." ಎಂದು ಅವಳನ್ನ ಸಮೀಪಿಸಿದ.

"ಬೇಡ.... ದೂರ ಇರಿ. ನನಗೆ ಏನೂ ಮಾಡ್ಬೇಡಿ." ಕೇಳಿಕೊಂಡಳು.

"ಪೆದ್ದು ಪೆದ್ದಾಗಿ ಮಾತಾಡ್ಬೇಡ ಜಯಾ. ಮದುವೆಯಾಗಿಯೂ ಇದುವರೆಗೆ ಒಂಟಿಯಾಗಿ ಕಾಲ ಕಳೆದಿದೀನಿ. ಇವತ್ತು ಅವಕಾಶ ಸಿಕ್ಕಿದೆ. ನಾನು ನಿನ್ನನ್ನ ಬಿಡ್ತೀನಾ?" ಅನ್ನುತ್ತಾ ಅವಳನ್ನ ಒರಟಾಗಿ ತನ್ನೆಡೆಗೆ ಎಳೆದುಕೊಂಡು ಅವಳ ಮೈ ಮೇಲೆ ಕೈಯಾಡಿಸಿದ. ಅವಳು ತಪ್ಪಿಸಿಕೊಳ್ಳಲು ನೋಡಿದಷ್ಟು ಅವನ ಹಿಡಿತ ಬಿಗಿಯಾಗಿತ್ತು.

"ಇದು ತಪ್ಪು: ಹೀಗೆಲ್ಲಾ ಮಾಡ್ಬೇಡಿ." ಅವಳ ಉಸಿರು ಕ್ಷೀಣವಾಗಿತ್ತು.

"ಯಾವುದು ತಪ್ಪು! ಇದುವರೆಗೂ ನಾವು ದೂರ ಇದ್ದುದೇ ತಪ್ಪು, ನೀನು ಏನೂ ಮಾತಾಡ್ಬೇಡ. ನಾನು ನಿನ್ನ ಮಾತನ್ನ ಕೇಳಿ, ನಿನ್ನನ್ನ ದೂರ ಇಡುವಷ್ಟು ದಡ್ಡನಲ್ಲ" ಎನ್ನುತ್ತ ಅವಳನ್ನ ಹಾಸಿಗೆಯ ಮೇಲೆ ಕೆಡವಿದ." ನನ್ನ ಚಿನ್ನ, ನನ್ನ ಬಂಗಾರಿ ಎಂದು ಮುದ್ದಿಸುತ್ತಾ ರಮಿಸಲು ನೋಡಿದ. ಕಲ್ಲಿನಂತೆ ಬಿದ್ದಿದ್ದವಳನ್ನ ಕಂಡು ಅವನ ತಾಳ್ಮೆ ತಪ್ಪಿತು. ಪಶುವಿನಂತೆ ಮೇಲೆ ಬಿದ್ದು ಬಲಾತ್ಕಾರದಿಂದ ಅವಳನ್ನ ವಶಪಡಿಸಿಕೊಂಡ. ಕಿರುಚಲೂ ಆಗದೇ, ಅಳಲೂ ಆಗದೇ, ನಿರ್ವಿಕಾರವಾಗಿ ಅವನ ದಾಳಿಗೆ ಬಲಿಯಾದಳು. ಅವನು ಜಯ ಸಾಧಿಸಿದವನಂತೆ ಅವಳನ್ನು ದಿಟ್ಟಿಸಿದ. ಅವಳು ಸೋತವಳಂತೆ ಹಣ್ಣಾಗಿದ್ದಳು. ನಂತರ ಅವನು ಮಲಗಿ ನಿದ್ದೆ ಹೋಗಿದ್ದ. ಅವನ ಗೊರಕೆಯ ಸದ್ದು ಅಸಹನೀಯವೆನಿಸಿತು. ವೆರಾಂಡದಲ್ಲಿದ್ದ ಚಾಪೆಯ ಮೇಲೆ ಕುಳಿತು ರಾತ್ರಿಯನ್ನು ಕಳೆದಳು. ಬೆಳಕು ಹರಿಯಿತು. ಆಸ್ಪತ್ರೆಯಿಂದ ಅತ್ತೆ ಮನೆಗೆ ಬಂದಳು. ಸೊಸೆಯ ಮುಖವನ್ನು ಕಂಡು ಅವಳ ಅನುಮಾನ ದೃಢವಾಗಿತ್ತು. ಸೊಸೆಗೆ ಸಮಾಧಾನ ಹೇಳಬೇಕೆನಿಸಿತು.

"ನನ್ನ ಮಗ ಬಲು ಒರಟ. ಆದರೆ ಅವನ ಹೃದಯ ಒಳ್ಳೆಯದು. ಅಲ್ಲದೇ ಅವನು ನಿನ್ನ ಗಂಡ. ಆದದ್ದಾಗಿದೆ, ದುಃಖಿಸಬೇಡ. ಆದಷ್ಟು ಬೇಗ ನಿನ್ನನ್ನ ಮನೆ ತುಂಬಿಸಿಕೊಳ್ಳುವ ಏರ್ಪಾಟು ಮಾಡ್ತೀನಿ. ಒಂದೆರಡು ದಿನ ನೀನು ಇಲ್ಲೇ ಇದ್ದರೆ ನನಗೆ ಸಹಾಯವಾಗುತ್ತೆ. ನಾನು ಆಸ್ಪತ್ರೆ, ಮನೆ ಅಂತ ಎರಡೂ ಕಡೆ ಓಡಾಡಿ ಮಾಡ್ತಾರೆ." ಜಯ ಅಸಹಾಯಕಳಂತೆ ನೋಡಿದಳು.

ಆ ರಾತ್ರಿಯೂ, ಹಿಂದಿನ ರಾತ್ರಿಯ ಪುನರಾವರ್ತನೆಯಾಯಿತು. ಚೆಂದುಳ್ಳಿ ಚೆಲುವೆಯ ರೂಪ, ಸುಕೋಮಲವಾದ ದೇಹ... ಹೆಣ್ಣಿನ ಸುಖದ ರುಚಿ, ಅವನನ್ನ ಹುಚ್ಚನನ್ನಾಗಿ ಮಾಡಿತು. ಜಯಳ ದೇಹ ನುಜ್ಜು ಗುಜ್ಜಾಗಿತು. ತನ್ನ ನೋವನ್ನು ಸಂಕಟವನ್ನ ಕೇಳಲು ತನ್ನವರು ಅಂತ ತನ್ನ ಬಳಿ ಯಾರೂ ಇಲ್ಲ ಎಂದು ಅರ್ಥ ವಾಗಿತ್ತು. ತನ್ನಲ್ಲೇ ಕಷ್ಟವನ್ನು ನುಂಗಿಕೊಂಡಳು. ನಾಲ್ಕು ರಾತ್ರಿ ಕಳೆಯಿತು. ಮಾವ ಆಸ್ಪತ್ರೆಯಿಂದ ಮನೆಗೆ ಬಂದಿದ್ದರು.

"ನಿನ್ನ ಕಾಲ್ಗುಣದಿಂದ, ನಿನ್ನ ಮಾವ ಹುಶಾರಾಗಿ ಮನೆಗೆ ಬಂದಿದಾರೆ. ಅವರು ಚೆನ್ನಾಗಿ ಚೇತರಿಸಿಕೊಳ್ಳಲಿ. ನಾನೇ ಬಂದು ನಿನ್ನ ಅಣ್ಣನ ಹತ್ತಿರ ಮಾತನಾಡಿ ನಿನ್ನನ್ನ ಕರ್ಕೊಂಡು ಬರ್ತೀನಿ. ನೀನು ಚಿಂತಿಸಬೇಡ." ಎಂದು ಹೇಳಿ ಸೊಸೆಯನ್ನ ಕಳಿಸಿ ಕೊಟ್ಟಿದ್ದಳು. ರಾಮಚಂದ್ರ ಅವಳ ಜೊತೆ ಹೊರಟ. ಬಸ್ಸಿನಲ್ಲಿ ಅವನ ಪಕ್ಕ ಕುಳಿತಿದ್ದಾಗ, ಅವಳಿಗೆ ಉಸಿರು ಕಟ್ಟಿದಂತಾಗಿತು. ಭಾವನೆಗಳೆಲ್ಲ ಸುಟ್ಟು ಹೋಗಿ ಕರಕಲಾದವಳಂತೆ ಕಪ್ಪಾಗಿದ್ದಳು. ಅವಳನ್ನ ಮನೆಗೆ ತಲುಪಿಸಿ ಅವನು ವಾಪಸ್ಸು ಹೊರಟು ನಿಂತಾಗ, ಅವಳು ಬಾಯಿ ಮಾತಿಗೂ ಇದ್ದು ಹೋಗಿ ಎಂದಿರಲಿಲ್ಲ. ಅವನಿಗೆ ನಿರಾಸೆ ಆಗಿತ್ತು.

"ನೋಡ್ತಿರು ನನ್ನ ಸಂಗವಿಲ್ಲದೇ ನಿನಗೆ ಒಂದು ರಾತ್ರಿ ಕಳೆಯುವುದೂ ಕಷ್ಟವಾಗುತ್ತೆ. ನನಗೋಸ್ಕರ ಹಂಬಲಿಸ್ತೀಯ." ಅವಳ ಗಲ್ಲ ಸವರಿ ಹೇಳಿದ. ಅವಳು ಹಿಂದೆ ಸರಿದಳು. "ಇದು ನಿನ್ನ ಅಣ್ಣನ ಮನೆ, ಅಂತ ಸುಮ್ಮನಿದೀನಿ. ಇಲ್ದಿದ್ರೆ ಸುಮ್ನೆ ಬಿಡ್ತಿದ್ನಾ.. ಹೇಗೂ ನನ್ನ ಮನೆಗೆ ಬಂದೇ ಬರ್ತೀಯಲ್ಲ. ಆಗ ನಿನ್ನನ್ನ ಕೇಳೋರು ಯಾರು!" ಎಂದು ನುಡಿದು ಹೊರಟಿದ್ದ.

"ಅಲ್ಲಿ ಏನು ನಡೀತು ಅಂತ ಅತ್ತಿಗೆ ಕೇಳಲಿಲ್ಲ. ಇವಳು ಹೇಳಲಿಲ್ಲ. ಅಣ್ಣ ಮಾತ್ರ, "ಮಾವ ಈಗ ಹುಶಾರಾಗಿದಾರಾ," ಅಂತ ಕೇಳಿದ್ದ. ಅವಳ ಮುಖದಲ್ಲಿ ಕಂಡ ಬದಲಾವಣೆಯನ್ನ ಇಬ್ಬರೂ ಗುರುತಿಸಲಿಲ್ಲ. ನಾರಾಯಣನೊಡನೆಯಾಗಲಿ, ಕೃಷ್ಣನೊಡನೆಯಾಗಲಿ, ತನ್ನ ಅಳಲನ್ನ ಹೇಳಿಕೊಳ್ಳುವಂತಿರಲಿಲ್ಲ. ಅಕ್ಕನ ನೆನಪಾಗಿತ್ತು. ಅದೇ ಸಮಯದಲ್ಲಿ ಶಾಸ್ತ್ರಿ ಮಂಡ್ಯದಿಂದ, ಉತ್ತರಪ್ರದೇಶದ ಸಕ್ಕರೆ ಕಾರ್ಖಾನೆ ಯೊಂದಕ್ಕೆ ಸೇರಿಕೊಂಡು, ಸಂಸಾರ ಸಮೇತನಾಗಿ ಪ್ರಯಾಣ ಬೆಳೆಸುವ ಸಿದ್ಧತೆ ಯಲ್ಲಿದ್ದ. ಜಯ ಏಕಾಂಗಿಯಾಗಿ, ಮಂಕಾಗಿ, ಸಮಯವನ್ನು ಕಳೆಯಬೇಕಾಗಿ ಬಂತು.

ಎರಡು ತಿಂಗಳಾದರೂ, ಜಯ ಹೊರಗೆ ಆಗದಿದ್ದಾಗ, ನಾಗಲಕ್ಷ್ಮಿಗೆ ಅನುಮಾನ ಬಂದಿತು. ಅಣ್ಣನೊಡನೆ ಗುಟ್ಟಾಗಿ ಮಾತನಾಡಿದ್ದಳು. ನಿಮ್ಮ ತಂಗಿ ಬಸುರಿಯಾಗಿದಾಳೆ. ಇದೇ ಸಮಯ ಇವಳನ್ನ ಕರ್ಕೊಂಡು ಹೋಗಿ ಅತ್ತೆಯ ಮನೆಗೆ ಕರ್ಕೊಂಡು

ಹೋಗಿ ಬಿಟ್ಟು ಬನ್ನಿ" ಎಂದಿದ್ದಳು.

"ಅದ್ಹೇಗೆ ಸುಮ್ಮನೆ ಬಿಟ್ಟು ಬರೋಕೆ ಆಗುತ್ತೆ? ಜನ ಆಡ್ಕೋತಾರೆ ನಾನು ಹೋಗಿ ರಾಮಚಂದ್ರನ ತಾಯಿ ಹತ್ತಿರ ಮಾತನಾಡಿ ಬರ್ತೀನಿ" ಅಂತ ಅಂದ. ಅಷ್ಟರಲ್ಲಿ ಜಯಳಿಗೂ ಅನುಮಾನ ಬಂದಿತು. ಆದರೆ ಯಾರೊಡನೆಯೂ ಹೇಳಿಕೊಳ್ಳ ಲಾಗದ ಪರಿಸ್ಥಿತಿ... ಭಯ ಸಂಕೋಚಗಳಿಂದ ಒದ್ದಾಡಿದಳು.

ಅಣ್ಣ, ರಾಮಚಂದ್ರನ ಊರಿಗೆ ಹೋಗಿ ಬಂದ. "ರಾಮಚಂದ್ರನ ತಾಯಿ ಈಗ ಹೊಸ ವರಸೆ ತೆಗೆದಿದಾಳೆ. ಗಂಡನ ಶುಶ್ರೂಷೆಗೆ ಸಿಕ್ಕಾಪಟ್ಟೆ ಸಾಲ ಆಗಿದೆಯಂತೆ. ಒಂದು ಸಾವಿರ ವರದಕ್ಷಿಣೆ ಕೊಡಿ." ಅಂತ ಹೇಳಿದಳು. "ನಾನು ಎಲ್ಲಿಂದ ಅಷ್ಟು ಹಣ ತರಲಿ?"

"ನಿನ್ನ ಸೊಸೆ ಬಸುರಿ ಆಗಿದಾಳೆ. ನಿನ್ನ ಮಗ ತಪ್ಪು ಮಾಡಿದಾನೆ ಅಂತ ಹೆದರಿಸಬೇಕಾಗಿತ್ತು..."

"ನನ್ನ ತಂಗಿಯೂ ತಪ್ಪು ಮಾಡಿದಾಳೆ... 'ಪ್ರಸ್ಥ' ಮಾಡಿ ಕಳಿಸದೇ ನಾವು ತಪ್ಪು ಮಾಡಿದೀವಿ. ಬೀಗಿತ್ತಿಯ ಬಾಯಿಗೆ ಸಿಕ್ಕಿ ಬಿದ್ದರೆ ಹೋಗುವುದು ನಮ ಮಾನ.... ಎಂಥಾ ಕೆಲಸ ಆಗಿ ಹೋಯ್ತು. ಹಿಂದೆ ಮುಂದೆ ನೋಡದೆ ನಾವು ಜಯನ್ನ ಅವರ ಮನೆಗೆ ಕಳಿಸಬಾರದಾಗಿತ್ತು..."

"ರಾಮಚಂದ್ರನ ಕರೆಸಿ ಮಾತ್ನಾಡಿ. ಹೆಂಡತಿಯ ಮುಖ ನೋಡಿ ಅವನು ಒಪ್ಪಿಕೊಳ್ಳಬಹುದು. ತಾಯಿಯ ಹತ್ತಿರ ಮಾತನಾಡುವಂತೆ ಹೇಳಿ. ಒಂದು ಸಣ್ಣ ಶಾಸ್ತ್ರ ಮಾಡಿ ಆರತಿ ಎತ್ತಿ ಇವಳನ್ನ ಅವರ ಮನೆಗೆ ಕಳಿಸಿ ಬಿಡೋಣ. ಆಮೇಲೆ ಅವರ ಹಣೇ ಬರಹ."

"ಅದು ಅಷ್ಟು ಸುಲಭ ಅಲ್ಲ ನಾಗು... ಪ್ರಸ್ಥಕ್ಕೆ ಮುಂಚೆಯೇ ಜಯ ಬಸುರಿ ಆಗಿದಾಳೆ ಅಂತ ಜನ ಆಡಿಕೊಂಡರೆ, ನಗೆ ಪಾಟಲಾಗುತ್ತೆ.... ಜಯನ್ನ ಸರ್ಕಾರಿ ಆಸ್ಪತ್ರೆಗೆ ಕರ್ಕೊಂಡು ಹೋಗಿ ಅಬಾರ್ಷನ್ ಮಾಡಿಸು."

"ಈ ಕೆಲಸ ನಾನು ಮಾಡಲ್ಲ. ಮೊದಲೇ ನಾನು ಅತ್ತಿಗೆಯಾಗಿ ಕೆಟ್ಟವಳಾಗಿದೀನ್ನಿ, ಲಕ್ಷ್ಮೀನ ಕರೆಸಿ. ಅವಳ ಹತ್ತಿರ ಮಾತನಾಡಿ."

"ಸರಿ, ನಾನು ನಾಳೆ ನಾಡಿದ್ದರಲ್ಲಿ ಮಂಡ್ಯಕ್ಕೆ ಹೋಗಿ ಅವಳನ್ನ ಕರ್ಕೊಂಡು ಬರ್ತೀನಿ." ಅಣ್ಣ ಅತ್ತಿಗೆಯರ ಸಂಭಾಷಣೆ ಜಯಳ ಕಿವಿಗೆ ಬಿದ್ದಿತು. ಎಲ್ಲರ ಮೇಲೂ ಸಿಟ್ಟು ಬಂದಿತು. ನನ್ನ ತಪ್ಪು ಮಾತ್ರ ಎಲ್ಲರಿಗೂ ಕಾಣುತ್ತೆ. ಇದು ನನಗೆ ಬಲವಂತದ ಮದುವೆ. ಇದು ಅಣ್ಣ ಅತ್ತಿಗೆಯರ ತಪ್ಪು. ಗಂಡನೆನೆಸಿಕೊಂಡ, ಹೆಂಡತಿಯ ಮೇಲೆ ಬಲಾತ್ಕಾರ ಮಾಡಿದ ಆ ಪ್ರಾಣಿಯದು ದೊಡ್ಡ ತಪ್ಪು. ಆದರೆ ಎಲ್ಲರೂ ದೂಷಿಸುವುದು ನನ್ನನ್ನೇ. ಅತ್ತೆ, ಹಣ ಕೊಡದಿದ್ದರೆ ನನ್ನನ್ನ ಸೇರಿಸದೇ

ಇರಬಹುದು. ಅಕ್ಕ ನನಗೆ ತಿಳುವಳಿಕೆ ಹೇಳಬಹುದು. ನಾರಾಯಣ, ಕೃಷ್ಣ ನನ್ನನ್ನ ವಿಚಿತ್ರವಾಗಿ ನೋಡಬಹುದು.... ಹದಿನಾರು ವರ್ಷದ ಜಯ ಅವಮಾನಗಳನ್ನ ಎದುರಿಸಲು ಸಿದ್ಧಳಾಗಿರಲಿಲ್ಲ. ನಿರ್ಧರಿಸಿದ್ದೇ ಬೇರೆ.

ಮಾರನೆಯ ದಿನ ಮಧ್ಯಾಹ್ನಕ್ಕೆ ಮುಂಚೆ, ಯಾರೂ ಮನೆಯಲ್ಲಿ ಇಲ್ಲದಿರುವ ಸಮಯವನ್ನ ಕಾದು, ಬಚ್ಚಲು ಮನೆಗೆ ಬಂದು ಬಾಗಿಲನ್ನು ಹಾಕಿಕೊಂಡಳು. ಸೀಮೆ ಎಣ್ಣೆಯನ್ನ ಮೈ ಮೇಲೆ ಸುರಿದುಕೊಂಡಳು. ಬೆಂಕಿ ಕಡ್ಡಿಯನ್ನ ಗೀರಿ ಹೊತ್ತಿಸಿಕೊಂಡಳು. ಮೈ ಮೇಲಿನ ಬಟ್ಟೆ ಹತ್ತಿಕೊಂಡು, ಮೈಗೆ ಬಿಸಿ ತಾಕಿದಾಗ ಹೆದರಿ ಕಿರುಚಿಕೊಂಡಳು. ಕ್ಷಣಮಾತ್ರದಲ್ಲಿ ಮೈಯೆಲ್ಲಾ ಉರಿಯತೊಡಗಿತು. ಅವಳ ಕಿರುಚಾಟವನ್ನ ಕೇಳಿ, ಪಕ್ಕದ ಮನೆಯವರ ಹತ್ತಿರ ಮಾತನಾಡುತ್ತಿದ ನಾಗಲಕ್ಷ್ಮಿ ಒಳಗೆ ಬಂದಳು. ಬಚ್ಚಲು ಮನೆಯಿಂದ ಹೊಗೆ, ಸುಟ್ಟವಾಸನೆ ಬರುತ್ತಿತ್ತು. ಜಯಳ ಕಿರುಚಾಟವೂ ಕೇಳಿಸುತ್ತಿತ್ತು. ಅಕ್ಕ ಪಕ್ಕದವರ ಸಹಾಯದಿಂದ ಬಾಗಿಲನ್ನು ಒಡೆದು ನೋಡುವಷ್ಟರಲ್ಲಿ ಜಯಳ ಅರ್ಧಂಬರ್ಧ ಸುಟ್ಟದೇಹ ನೆಲದ ಮೇಲೆ ಬಿದ್ದಿತು. ಕಂಬಳಿಯಲ್ಲಿ ಸುತ್ತಿ ಆಸ್ಪತ್ರೆಗೆ ಸಾಗಿಸಿದರು.

ಆಫೀಸಿಗೆ ಹೋಗಿದ್ದ ಸುಬ್ಬರಾಯನಿಗೆ ವಿಷಯವನ್ನ ತಿಳಿಸಿದರು. ಅವನು ಸೀದಾ'ಆಸ್ಪತ್ರೆಗೇ ಬಂದ. ಡಾಕ್ಟರು ಯಾವ ಭರವಸೆಯನ್ನ ಕೊಡಲಿಲ್ಲ. ಅವನು ತಕ್ಷಣ ನಾರಾಯಣನನ್ನ ಕಂಡು, ಲಕ್ಷ್ಮಿಯನ್ನು ಕರೆತರುವಂತೆ ಮಂಡ್ಯಕ್ಕೆ ಕಳಿಸಿ, ತಾನು ರಾಮಚಂದ್ರನ ಊರಿನ ಬಸ್ಸನ್ನು ಹತ್ತಿದ.

ಅವರೆಲ್ಲರೂ ಬರುವ ಹೊತ್ತಿಗೆ ಮಧ್ಯರಾತ್ರಿಯಾಗಿತ್ತು. ಜಯ ಸುಟ್ಟ ಗಾಯಗಳಿಗೆ ಬಲಿಯಾಗಿದ್ದಳು. ಶವವನ್ನ ಶವಾಗಾರದಲ್ಲಿ ಇಟ್ಟು ಬಿಟ್ಟಿದ್ದರು. ಮಾರನೇ ದಿನ, ಮಧ್ಯಾಹ್ನ ಶವಪರೀಕ್ಷೆಯ ನಂತರ ಶವವನ್ನು ಇವರುಗಳಿಗೆ ವಹಿಸಿಕೊಟ್ಟಿದ್ದರು. ಶವ ಪರೀಕ್ಷೆ ಮಾಡಿದ ಡಾಕ್ಟರು ಜಯ ಒಂದೂವರೆ ತಿಂಗಳ ಗರ್ಭಿಣಿಯಾಗಿದ್ದಳೆಂದು ತಿಳಿಸಿದ್ದರು. ಪೋಲೀಸರು ಬಂದು ತನಿಖೆ ಮಾಡಿ, ಕೇಸ್ ಗುರುತು ಮಾಡಿ ಕೊಂಡಿದ್ದರು.

ಇವಳ ಸಾವಿಗೆ ನಾನೇ ಕಾರಣ ಎಂದು ರಾಮಚಂದ್ರನಿಗೆ ಅನ್ನಿಸಿತು. ಎರಡನೆ ಶಾಸ್ತ್ರವನ್ನು ಮಾಡದೇ ಗಂಡನ ಮನೆಗೆ ಕಳಿಸಿದ್ದು ತಮ್ಮ ತಪ್ಪು ಎಂದು ಅಣ್ಣ ಅತ್ತಿಗೆಗೆ ತಿಳಿದಿತ್ತು. ಮಗ ಹೆಂಡತಿಯೊಡನೆ ದೇಹ ಸಂಬಂಧ ಬೆಳೆಸಿದ್ದ. ಈ ತಪ್ಪಿನಲ್ಲೂ ತನ್ನದೂ ಪಾಲಿದೆ ಎಂದು ಅತ್ತೆಗೆ ಅನ್ನಿಸಿತು. ಆದರೆ ಯಾರೂ, ತಮ್ಮ ತಮ್ಮ ತಪ್ಪನ್ನ ಬಹಿರಂಗವಾಗಿ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಆದರೆ ಜಯ ಅಪರಾಧಿ ಅಲ್ಲ. ಅವಳ ತಪ್ಪು ಏನೂ ಇರಲಿಲ್ಲ ಎಂದು ಎಲ್ಲರೂ ಒಪ್ಪಿಕೊಂಡಿದ್ದರು.

"ನನ್ನ ಸಾವಿಗೆ ನಾನೇ ಕಾರಣ. ಬೇರೆ ಯಾರೂ ಅಲ್ಲ" ಎಂದು ಜಯ

ಬರೆದಿಟ್ಟಿದ್ದ ಚೀಟಿ, ನಾಗಲಕ್ಷ್ಮಿಯ ಕೈಗೆ ಸಿಕ್ಕಿತ್ತು. ಅದನ್ನ ಅವಳು ಮುಚ್ಚಿಟ್ಟಳು. ಪೋಲೀಸ್ ತನಿಖೆ ನಡೆದರೆ, ರಾಮಚಂದ್ರ ಹಾಗೂ ಅವನ ತಾಯಿ ತಪ್ಪಿತಸ್ಥರಾಗುತ್ತಾರೆ. ಆದರೆ ಆಗಲಿ ಎಂಬ ಧೋರಣೆ ಅವಳದು.

ಲಕ್ಷ್ಮಿ, ನಾರಾಯಣನೊಡನೆ ಮಾತನಾಡಿ ಎಲ್ಲಾ ವಿಷಯಗಳನ್ನ ತಿಳಿದುಕೊಂಡಿದ್ದಳು. "ಒಟ್ನಲ್ಲಿ ಅಣ್ಣ, ಜಯಂಗೆ ಅನ್ಯಾಯ ಮಾಡಿಬಿಟ್ಟ. ದೇಹ ಸುಡುವಾಗ ಅವಳಿಗೆ ಎಷ್ಟು ಹಿಂಸೆಯಾಗಿರಬೇಡ... ಅವಳು ತಾನೇ ಈ ನಿರ್ಧಾರಕ್ಕೆ ಹೇಗೆ ಹೋದಳೋ? ಗಂಡನ ಮನೆಗೆ ತಾನೇ ಹೋಗಿದ್ದುದು... ಇದರಲ್ಲಿ ಮರ್ಯಾದೆ ಹೋಗುವಂಥಾದ್ದು ಏನಿತ್ತು? ಈಗ ಜನ ಆಡಿಕೊಳ್ಳುವುದಿಲ್ಲವೆ? ಅಷ್ಟಾದರೂ ತಿಳಿಯಬೇಕಾಗಿತ್ತು ಇವಳಿಗೆ..." ಲಕ್ಷ್ಮಿ ರೋಧಿಸಿದಳು.

ನಾನು ಅವಳೊಡನೆ ದೇಹ ಸಂಪರ್ಕ ಮಾಡಿದ್ದು ತಪ್ಪು ಇರಬಹುದು. ಆದರೆ ನಾನು ಅವಳ ಗಂಡನೇ ತಾನೇ? ಪರಪುರುಷನೇನಲ್ಲವಲ್ಲ. ಇಷ್ಟೆಲ್ಲಾ ಆದದ್ದು ಈ ಅಮ್ಮನಿಂದ. ಹಣದ ಆಸೆಗೆ, ನನ್ನ ಹೆಂಡತಿಯನ್ನ ಕೊಂದು ಹಾಕಿ ಬಿಟ್ಟಳು ಎಂದು ತಾಯಿಯ ಮೇಲೆ ರಾಮಚಂದ್ರ ಕೋಪ ಗೊಂಡಿದ್ದ. ಮೃದುವಾದ ಮೆತ್ತೆಯಂತಿದ್ದ ಅವಳ ದೇಹವನ್ನ ಬಲಾತ್ಕಾರದಿಂದ ಅನುಭವಿಸಿದ್ದ. ಆದರೆ ಈಗ ಸುಟ್ಟು ಕರಕಲಾಗಿದ್ದ ದೇಹವನ್ನ ಕಣ್ಣೆತ್ತಿ ನೋಡಲೂ ಸಹ ಕಷ್ಟವೆನಿಸಿತು. ನೀಳುದ್ದದ ಕೂದಲು ಸುಟ್ಟು ಹೋಗಿತ್ತು. ಅವಳ ಮುಖ ವಿಕಾರವಾಗಿತ್ತು. ಈ ಸ್ಥಿತಿಗೆ ತಾನೇ ಕಾರಣ ಎಂದು ರೋಧಿಸಿದ. ಎಂಥಾ ಕೆಲಸ ಮಾಡಿ ಬಿಟ್ಟೆ ಜಯಾ. ನೀನು ಗರ್ಭಿಣಿ ಅಂತ ಒಂದೇ ಒಂದು ಮಾತನ್ನ ನನಗೆ ತಿಳಿಸಿದ್ದರೂ, ನಾನು ಅಮ್ಮನೊಡನೆ ಹೋರಾಡಿ, ನಿನ್ನನ್ನ ನನ್ನ ಮನೆಗೆ ಕರೆದುಕೊಂಡು ಹೋಗ್ತಿದ್ದೆ ಎಂದು ಗೋಳಾಡಿದ. ಕೇಸು ಬೆಳೆದರೆ, ತಮ್ಮ ತಪ್ಪು ಆಚೆಗೆ ಬರುತ್ತದೆಂದು ಹೆದರಿ, ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ಕೇಸನ್ನ 'ಆಕಸ್ಮಿಕ' ಎಂದು ಹೇಳಿ ಮುಚ್ಚಿಸಿ ಬಿಟ್ಟರು.

ಜಯ ಬರೆದಿಟ್ಟಿದ ಪತ್ರ ಅಡಿಗೆ ಮನೆಯಲ್ಲಿದ್ದುದರಿಂದ ನಾವುಗಳು ಪಾರಾದೆವು. ಆತ್ಮಹತ್ಯೆ ಅಂತ ಏನಾದ್ರೂ ತಿಳಿದು ಬಿಟ್ಟಿದ್ದರೆ... ಪೋಲೀಸರು ತನಿಖೆ ಮಾಡದೇ ಬಿಡುತ್ತಿರಲಿಲ್ಲ. ಎಂದು ನಾಗಲಕ್ಷ್ಮಿ ಸಮಾಧಾನಗೊಂಡಳು.

"ಇದು ಆಕಸ್ಮಿಕವಲ್ಲ; ಆತ್ಮಹತ್ಯೆಯೂ ಅಲ್ಲ. ಎಲ್ಲರೂ ಸೇರಿ ಮಾಡಿರುವ ಕೊಲೆ. ಇದಕ್ಕೆ ನನ್ನ ಹತ್ತಿರ ಸಾಕ್ಷಿ ಪುರಾವೆಗಳಿಲ್ಲ. ಆದರೆ ಜಯಳ ಆತ್ಮ ಯಾರನ್ನೂ ಸುಮ್ಮನೆ ಬಿಡುವುದಿಲ್ಲ. ಅವಳ ಸಂಕಟದ ನಿಟ್ಟುಸಿರು, ಎಲ್ಲರ ಹಿಂದೆ ಸುತ್ತುತ್ತಲೇ ಇರುತ್ತೆ. "ನಾರಾಯಣ ಲಕ್ಷ್ಮಿಯೊಡನೆ ಹೇಳಿದ. ಲಕ್ಷ್ಮಿಗೂ ನಿಜವೆನಿಸುತು. ಆದರೆ, ಎಲ್ಲರೂ ನಮ್ಮವರೇ. ಯಾರನ್ನೂ ಬಾಯಿಬಿಟ್ಟು ದೂಷಿಸಲಾಗುವುದಿಲ್ಲ. ಜಯಳ ಬದುಕು ಇಷ್ಟು ಬೇಗ ಮುಗಿದು ಹೋಯಿತಲ್ಲ ಎಂದು ವ್ಯಥೆಯಾಗಿತ್ತು. ತಮ್ಮನೊಡನೆ

ನುಡಿದಳು.

"ಅತ್ತಿಗೆ ಇನ್ನಾದರೂ ಸ್ವಲ್ಪ ಅಂಜಬೇಕು. ಅವಳಿಗೂ ಮಕ್ಕಳಿವೆ..."

"ಅತ್ತಿಗೆ ಏನೂ ಬದಲಾಗಲ್ಲ. ಮಾತು ಮಾತಿಗೆ ಕುಟುಕ್ತಾನೆ ಇರ್ತಾಳೆ."

"ನೀವಿಬ್ರೂ ಹುಶಾರಾಗಿರಿ. ಅವಳ ಮಾತಿಗೇ ಹೋಗಬೇಡಿ" ಲಕ್ಷ್ಮಿ ಎಂದಳು.

* * *

ನಾರಾಯಣ, ಲಕ್ಷ್ಮಿ ನಿದ್ದೆ ಬರುವವರೆಗೂ ಮಾತನಾಡುತ್ತಿದ್ದರು. ಸಾತಕ್ಕ ಮೌನವಾಗಿ ಎಲ್ಲವನ್ನ ಕೇಳಿಸಿಕೊಂಡಳು. "ಲಲಿತಾ ಮುಗ್ಧ ಹೆಣ್ಣು. ಅವಳ ಮಾನವನ್ನ ನೀನೇ ಕಾಪಾಡಬೇಕು. ಅವಳ ಬಾಳನ್ನ ನೀನೇ ಬೆಳಗಬೇಕು." ದೇವರಲ್ಲಿ ಮೊರೆ ಇಟ್ಟಳು. ಅವಳು ಮಗ್ಗುಲು ಬದಲಾಯಿಸಿದಾಗ ಲಕ್ಷ್ಮಿ ಕೇಳಿದಳು.

"ಯಾಕತ್ತೆ ನಿದ್ದೆ ಬರ್ಲಿಲ್ವಾ?" ನಾರಾಯಣ ಅಕ್ಕನಿಗೆ ಹೇಳಿದ.

"ನಾವಿಬ್ರೂ ಮಾತಾಡ್ತಾನೇ ಇದೀವಿ. ಅವರಿಗೆ ನಿದ್ದೆ ಹತ್ತೋದಾದ್ರೂ ಹೇಗೆ!"

ಮದುವೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಪ್ರತ್ಯೇಕವಾಗಿ ಕಟ್ಟಿಟ್ಟ ವಿವರಗಳನ್ನ ಬರೆದ ಚೀಟಿಯನ್ನ ಅಂಟಿಸಿ, ಗಾಡಿಗಳಲ್ಲಿ ಪೇರಿಸಿಟ್ಟಿದ್ದಾಗಿತ್ತು. ಪಟೇಲರ ಮನೆಯ ಗಾಡಿಯನ್ನ ಶಾಸ್ತ್ರಿ ತರಿಸಿಕೊಂಡಿದ್ದ... ಮಧ್ಯಾಹ್ನದ ಊಟದ ನಂತರ, ಗಾಡಿಗಳು ಪೇಟೆಯ ದಾರಿಯನ್ನ ಹಿಡಿದವು. "ವೈಕುಂಠಾ ಜ್ಞಾಪಾನ ಕಣೋ. ಎಲ್ಲಾ ಸಾಮಾನು ಗಳನ್ನ ಒಂದು ಕೊಠಡಿಯಲ್ಲಿರಿಸಿ, ಬಾಗಿಲನ್ನ ಸರಿಯಾಗಿ ಹಾಕಿ ಬೀಗ ಹಾಕಿಕೊಂಡು ಬಾ..."

"ಅಕ್ಕ, ಆತಂಕ ಪಟ್ಕೋಬೇಡ. ನಾನು ಇರ್ತೀನಲ್ಲ."

"ನೀನ್ಯಾಕೆ ಈ ಗಾಡಿಯಲ್ಲಿ ಹೋಗ್ಬೇಕು. ಗಾಡಿ ತುಂಬಾ ಕುಲುಕುತ್ತೆ. ಮೈ ಕೈ ನೋವಾಗುತ್ತೆ."

"ಪರ್ವಾಗಿಲ್ಲ ಬಿಡಕ್ಕ. ಮದುವೆ ಮನೆಯ ಹತ್ತಿರಕ್ಕೆ ಕೃಷ್ಣನೂ ಬರ್ತಾನೆ. ನಂಜುಂಡನೂ ಬರ್ತಿದಾನಂತೆ. ಸಾಯಂಕಾಲ ನಾವೆಲ್ಲಾ ಒಟ್ಟಿಗೇ ರೈಲಿನಲ್ಲಿ ವಾಪಸ್ಸು ಬರ್ತೀವಿ."

"ಸರಿ ಹಾಗಾದ್ರೆ ಸಾಮಾನುಗಳನ್ನೆಲ್ಲಾ ಸರಿಯಾಗಿ ಇಳಿಸಿ, ಜೋಡಿಸಿಡಿ."

"ಪೇಟೆಯಿಂದ ಏನಾದ್ರೂ ತರ್ಬೇಕಾ ಅಕ್ಕಾ!"

"ಹುಂ. ದಾರದ ಅಂಗಡಿಯಿಂದ ದಾರಗಳು, ಗುಂಡಿಗಳು ಬೇಕು. ಚೀಟಿ ಬರೆದು ಕೊಡ್ತೀನಿ".

"ಚೆನ್ನಾಯ್ತು. ಇನ್ನೂ ನಿನ್ನ ಹೊಲಿಯುವ ಕೆಲಸ ಮುಗಿದಿಲ್ವಾ?" ಸಾತಕ್ಕ ಕೇಳಿದಳು.

"ಇಲ್ಲ ಅತ್ಗೇ. ನಿಮಗೆ ಗೊತ್ತಲ್ಲ. ಕಡೇವರ್ಗೂ ನನ್ನ ಕೆಲಸ ಪೂರೈಸೋದೇ

ಇಲ್ಲ." ಇಬ್ಬರೂ ನಕ್ಕರು.

* * *

"ಚೆನ್ನಾಗಿದೀರಾ ಅತ್ಗೇ....?" ಕೃಷ್ಣ ಕೇಳಿದ.

"ಹೂಂ... ನಪ್ಪಾ. ಪರೀಕ್ಷೆ ಮುಗೀತಾ? ಈ ಹುಡುಗ ಯಾರು?"

"ಇವನು ನಂಜುಂಡ. ನಮ್ಮ ಚಿಕ್ಕಪ್ಪನ ಮಗ. ನನ್ನ ಜೊತೇನೇ ಓದ್ತಾ ಇದಾನೆ. ನಾವಿಬ್ರೂ ಒಟ್ಟಿಗೇ ಬಸ್ಸಿನಲ್ಲಿ ಬಂದೆವು.

"ನಿಮ್ಮ ಅಣ್ಣ ಅತ್ತಿಗೆ ಯಾವಾಗ ಬರ್ತಾರಂತೆ? ಅವರಿಂದ ಪತ್ರವೇ ಇಲ್ಲ."

"ಏನೋ ನಂಗೊತ್ತಿಲ್ಲ ಅತ್ಗೇ. ನಾರಾಯಣಂಗೆ ಗೊತ್ತು."

"ಸರಿ ನಿಮ್ಮಿಬ್ರಿಗೂ ಸರಿಯಾಗಿ ಗೊತ್ತಿಲ್ಲ ಅಂತಾಯ್ತು. ಈಗಲೂ ಅಣ್ಣ ಅತ್ತಿಗೆಯ ಜೊತೆ ಮಾತುಕತೆ ಕಡಿಮೆ, ಜಗಳ ಜಾಸ್ತೀನಾ?"

"ಏನತ್ಗೆ ತಮಾಷೆ ಮಾಡ್ತೀರಾ? ನಾನೀಗ ತುಂಬಾ ಬದಲಾಗಿದೀನಿ. ಅಕ್ಕ ಭಾವ ಎಲ್ಲಾ ಎಲ್ಲಿ! ಶಾಂತಾ ಎಲ್ಲಿ!"

"ಶಾಂತನ್ನ ಪಟೇಲ್ರ ಮನೇಲಿ ಕರೆದಿದ್ರು. ಎಲ್ಲಾ ಅಲ್ಲಿಗೆ ಹೋಗಿದಾರೆ. ಕೈ ಕಾಲು ತೊಳ್ಕೊಂಡ್ಬನ್ನಿ. ಕಾಫಿ ಕೊಡ್ತೀನಿ... ಅಂದ್ಹಾಗೇ ರೈಲು ಬರೋ ಹೊತ್ತು ಆಗಿಲ್ಲ. ಹೇಗೆ ಬಂದ್ರಿ?"

"ನಿಮ್ಮನೆ ಗಾಡಿಗಳು ವಾಪಸ್ಸು ಬಂದ್ವಲ್ಲಾ ಅದರಲ್ಲಿ ಕೂತು ಬಂದೆವು. ಮೈಕೈಯೆಲ್ಲಾ ಜಜ್ಜಿ ನುಗ್ಗೇಕಾಯಿ ಆಗಿದೆ."

"ನಾರಾಯಣ ಬರ್ಲಿಲ್ವಾ...?"

"ಅವನು ರೈಲಿನಲ್ಲಿ ಬರ್ತಾನೆ. ಪೇಟೇಲಿ ಕೆಲಸ ಇದೆ ಅಂತ ಹೋದ." ಓಡಿ ಬಂದ ಪದ್ಮಿನಿ ರಾಗಿಣಿಯರು ಅವರಿಬ್ಬರನ್ನ ನೋಡಿ ಹಾಗೇ ನಿಂತರು....

"ನಾನು ಯಾರು ಅಂತ ಗೊತ್ತಾಯ್ತಾ?" ಕೃಷ್ಣ ಕೇಳಿದ.

"ಇಲ್ಲ ಗೊತ್ತಾಗ್ಲಿಲ್ಲ."

"ಹತ್ತಿರ ಬಾ. ಹೇಳ್ತೀನಿ."

"ಪರವಾಗಿಲ್ಲ. ಅಲ್ಲೇ ಹೇಳಿ." ಪದ್ಮಿನಿ ಹೇಳಿದಳು.

"ಘಾಟಿ ಹುಡುಗಿ ಕಣೇ." ಎಂದು ಹೇಳಿ ಇಬ್ಬರ ಕೈಗೂ ಒಂದೊಂದು ಬಿಸ್ಕತ್ತಿನ ಪೊಟ್ಟಣ್ಣಗಳನ್ನೂ ಕೊಟ್ಟ.

"ಇದನ್ನೆಲ್ಲ ಯಾಕೆ ತಂದೆ!... ಈಗ ಇದನ್ನು ತಿಂದ್ರೆ ಹಸಿವು ಮುಚ್ಚಿ ಹೋಗುತ್ತೆ. ಊಟ ಸೇರುಲ್ಲ. ಬೆಳಿಗ್ಗೆ ತಿನ್ನಿ" ಅತ್ತೆಯ ಮಾತಿಗೆ ಕಿವಿ ಕೊಡದೇ ಇಬ್ಬರೂ ಹೊರಕ್ಕೆ ಓಡಿದ್ದರು. ಪಟೇಲರ ಮನೆಗೆ ಹೋಗಿದ್ದವರೆಲ್ಲಾ ಹಿಂತಿರುಗಿದ್ದರು. ಕುಶ

ಲೋಪರಿ ವಿಚಾರಿಸಿದರು. ಲಕ್ಷ್ಮಿಗೆ ಕೃಷ್ಣನನ್ನು ಕಂಡು ನೆಮ್ಮದಿ ಎನಿಸಿತ್ತು. "ಅತ್ತಿಗೆ ಪಟೇಲರ ಮನೆಯವರು, ಎಷ್ಟು ಬೇಡಾಂದ್ರೂ ಕೇಳಲಿಲ್ಲ. ಶಾಂತಂಗೆ ಸೀರೆ ಖಣ ಕೊಟ್ಟರು. ನಮ್ಮಿಬ್ಬರಿಗೂ ಒಂದೊಂದು ಬೆಳ್ಳಿ ಬಟ್ಟಲನ್ನು ಕೊಟ್ಟರು. ನೋಡಿ"

"ಸೀರೆ ಚೆನ್ನಾಗಿದೆ. ಈಗಿನ ಕಾಲದ ಹುಡುಗಿಯರು ಉಡುವಂಥಾದ್ದು." ದೂರದಲ್ಲಿ ನಿಂತಿದ್ದ ಲಲಿತಳನ್ನು ಪದೇ ಪದೇ ನೋಡಿದ. ಅವಳು ಜಡೆಯನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಿದ್ದಳು. ಕಡೆಗೆ ತಾನೇ ಮಾತನಾಡಿಸಿದ.

"ನೀನು ಲಲಿತಾ ಅಲ್ವಾ! ನಾನು ಯಾರು ಅಂತ ಗೊತ್ತಾಯ್ತಾ?"

"ಹುಂ ಗೊತ್ತಾಯ್ತು. ಕೃಷ್ಣ."

"ಅವನು ನಿಂಗಿಂತ ದೊಡ್ಡೋನು. ಲಕ್ಷಣವಾಗಿ ಮಾವ ಅಂತ ಕರಿ."

"ಪರವಾಗಿಲ್ಲ ಬಿಡಿ ಅತ್ಗೆ... ಅಲ್ವೇ... ಲಲಿತಾ... ಯಾವಾಗ ಬೆಳೆಸ್ಕೊಂಡ್ಯೇ ಇಷ್ಟುದ್ದ ಜಡೇನಾ! ನಂಗೆ ಹೇಳ್ಲೇ ಇಲ್ಲ ನೀನು."

"ನಾನೇನೂ ಬೆಳೆಸ್ಲಿಲ್ಲ. ಅದೇ ಬೆಳೀತು." ಜಡೆಯೊಡನೆ ಚೆಲ್ಲಾಟವಾಡುತ್ತಾ ನುಡಿದಳು.

"ಎಲ್ರೂ ಊಟಕ್ಕೆ ಏಳಿ. ಶಾಂತಾ ತಟ್ಟೆ ಹಾಕೇ..."

"ಶಾಂತಾ ನನ್ನನ್ನ ಮಾತಾಡಿಸ್ಲೇ ಇಲ್ವಲ್ಲೇ? ಅಷ್ಟೊಂದು ಜಂಭ ಬಂದು ಬಿಟ್ಟಿದೆಯಾ ನಿಂಗೆ?"

"ನೀನು ಮಾತಾಡಿಸ್ಲಿಲ್ಲ. ಅದಕ್ಕೆ ಸುಮ್ಮನಿದ್ದೆ. ಜಂಭ ಎಲ್ಲಾ ನಿಂಗೇನೇ."

"ನಂಗೆ ಜಂಭ ಇದ್ದಿದ್ರೆ, ನಿನ್ನ ಮದುವೆಗೆ ಬರ್ತಿದ್ನಾ? ಇವನ್ಯಾರು ಗೊತ್ತಾಯ್ತಾ?" ನಂಜುಂಡನ ಕಡೆ ತಿರುಗಿದ.

"ನಂಜುಂಡ ತಾನೇ...? ಈಗ್ತಾನೇ ನೀನೇ ಅಮ್ಮಂಗೆ ಹೇಳಿದ್ಯಲ್ಲಾ."

"ಹೌದಲ್ವಾ?" ಅವನು ತಲೆ ಕೆರೆದುಕೊಂಡ. ಬಾಗಿಲ ಬಳಿ ನಿಂತಿದ್ದ ವೈಕುಂಠ ಇವರುಗಳ ಮಾತನ್ನ ಆಲಿಸುತ್ತ ಮುದಗೊಳ್ಳುತ್ತಿದ್ದ. "ವೈಕುಂಠಾ ತುಂಬಾ ಒಳ್ಳೆಯ ಹುಡುಗ ಅಕ್ಕ... ರಸ್ತೆ ಉದ್ದಕ್ಕೂ ಏನೇನೋ ಕತೆಗಳನ್ನ ಹೇಳುತ್ತಾ ಬಂದ... ಮೈ ಕೈ ನೋವು ಕಮ್ಮಿಯಾಯ್ತು."

"ಕತೆ ಹೇಳೂದ್ರಲ್ಲಿ, ಕಿತಾಪತಿ ಮಾಡೂದ್ರಲ್ಲಿ ಇವನು ನಿಸ್ಸೀಮ... ಅತ್ತೇನಂತೂ ವಿಪರೀತ ಗೋಳು ಹೊಯ್ಕೊಂಡಿದಾನೆ."

"ಸುಮ್ಮನಿದ್ರೇ ಅವನ್ಮೇಲೆ ಯಾಕೆ ಚಾಡಿ ಹೇಳ್ತೀರಿ? ನೀನೇನು ಕಡಿಮೇನಾ! ಅತ್ತೆ ಅಂದ್ರೆ ಜೊತೇಲಿ ಆಡೋ ಹುಡುಗಿ ಇವರುಗಳಿಗೆ." ಎಲ್ಲರೂ ಮನಸಾರೆ ನಕ್ಕರು.

"ರೈಲು ಬಂತು. ಇಂಜಿನ್ನೂ ಕೂಗ್ತು" ಅಂತ ಹೇಳಿ, ವೈಕುಂಠ ಸ್ಟೇಷನ್

ಕಡೆಗೆ ಓಡಿದ. ಐದು ನಿಮಿಷಗಳಲ್ಲಿ ನಾರಾಯಣನೂ ಬಂದು ಸೇರಿಕೊಂಡ.

"ಒಬ್ಬರಾಗಲೀ, ಇಬ್ಬರೇ ಆಗಲಿ, ನೀವುಗಳು ಬಂದಿದ್ದರಿಂದ ಮನೆಗೆ ಹೊಸ ಕಳೆ ಕಟ್ಟಿದೆ. ಮದುವೆ ಮನೆಯ ಸಂಭ್ರಮ ಕಾಣ್ತಿದೆ." ಸಾತಕ್ಕೆ ಎಂದಳು.

"ನಾನು ಟ್ಯಾಕ್ಸೀನ ಗೊತ್ತು ಮಾಡಿದೀನಿ. ಮದುವೆ ಯಾಗೋ ಹುಡುಗಿ ಎತ್ತಿನ ಗಾಡೀಲಿ ಹೋಗೋದು ಬೇಡ. ಗಾಡಿ ಕುಲಕುತ್ತೆ. ಜುಂ ಅಂತ ಟ್ಯಾಕ್ಸೀಲಿ ಹೋಗಲಿ"

"ರಸ್ತೆ ಚೆನ್ನಾಗಿದ್ರೆ ತಾನೇ? ಗಾಡೀನೂ ಕುಲಕುತ್ತೆ. ಟ್ಯಾಕ್ಸೀನೂ ಕುಲಕುತ್ತೆ. ಏನು ಜುಂ ಅಂತ ಹೋಗೋದು." ಶಾಂತ ನಕ್ಕಳು. ಎಲ್ಲರೂ ನಗುನಗುತ್ತಾ ಊಟವನ್ನ ಮುಂದುವರೆಸಿದರು. ಸಾತಕ್ಕ ಕೃಷ್ಣನ ಬಗ್ಗೆ ಯೋಚಿಸುತ್ತಿದ್ದಳು.

ಊಟದ ನಂತರ, ಎಲ್ಲರೂ ಗುಂಪಾಗಿ ಕುಳಿತು ಹರಟೆ ಹೊಡೆಯಲು ಪ್ರಾರಂಭಿಸಿದರು. ಎದುರು ಮನೆ ಕಂಠಿ ಮಾವಯ್ಯ ಹೇಗಿದಾರೆ? ದತ್ತ ಸ್ಕೂಲಿಗೆ ಹೋಗ್ತಾನಾ? ಮೀನಾಕ್ಷಿಗೆ ಮದುವೆ ಆಯ್ತಂತೆ. ಈಗ ಎಲ್ಲಿದಾಳೆ?" ವಿಚಾರಿಸಿದ.

"ಮೀನಾಕ್ಷೀನ ನಾಣೀನೂ ವಿಚಾರಿಸ್ದ. ನೀನೂ ವಿಚಾರಿಸ್ತಿದೀಯ ಏನು ವಿಷಯ?" ಸೀತಕ್ಕ ಚಟಾಕಿ ಎಸೆದಳು.

"ಏನಿಲ್ಲ... ಸುಮ್ಮನೇ ಹಾಗೇ ವಿಚಾರಿಸ್ದೆ. ಹೇಗಿದಾಳೆ ಅಂತ ಕೇಳ್ದೆ ಅಷ್ಟೆ."

"ಗಂಡನ ಮನೇಲಿ ಸುಖವಾಗಿದಾಳೆ... ಬೆಳಿಗ್ಗೆ ನೀನೇ ಹೋಗಿ ಒಂದು ಗಳಿಗೆ ವಿಚಾರಿಸ್ಕೊಂಡು ಬಾ. ಪಾತುಗೂ ಸಂತೋಷವಾಗುತ್ತೆ?"

"ಅವರೆಲ್ಲಾ ಮದುವೆಗೆ ಬರ್ತಾರೆ ಅಲ್ವಾ ಅತ್ತೆ? ಆಗ್ಲೇ ಮಾತಾಡಿಸ್ತೀನಿ."

"ಯಾರು ಬರ್ತಾರೋ ಬಿಡ್ತಾರೋ ಯಾರಿಗೆ ಗೊತ್ತು? ಕಂಠಿ ಭಾವ ಮನಸ್ಸಿಗೆ ಬಂದ ಗಿರಾಕಿ. ನಮ್ಮ ಮನೇಲಿ ಮದುವೆ ಅಂತ ತಿಳಿದೂ ಹತ್ತು ದಿನಗಳಿಂದ ಇತ್ತ ಸುಳಿದಿಲ್ಲ. ಪಾರ್ವತಿ ಹಸೀ ಮೈ ಬಾಣಂತಿ.. ದತ್ತನ ವಿಷಯ ಎಲ್ಲರಿಗೂ ತಿಳಿದದ್ದೇ. ರಾಜಾ... ಅವನೊಬ್ಬ ಅಲಾಲ್‌ಟೋಪಿ. ಇನ್ನು ಚಂದ್ರು, ಬಾಲು, ಗೋಪಿ, ಮಂಜು, ರತ್ನಾ ಎಲ್ಲರೂ ಚಿಕ್ಕೋರೆ... ಏನ್ಮಾಡ್ತಾರೋ?

"ರತ್ನಾ ಯಾರು?"

"ಈಗ ಹುಟ್ಟಿರುವುದು. ಅಪರೂಪದ ಹೆಣ್ಣು ಮಗು. ರತ್ನಾ ಅಂತ ಹೆಸರಿಟ್ಟಿದಾರೆ... ಬಲು ಮುದ್ದಾಗಿದೆ. ಮೀನಾಕ್ಷಿಯೂ ಮಗುವಾಗಿದ್ದಾಗ ಹೀಗೇ ಇದ್ಲು."

"ಅತ್ತೆಗೆ ಇದು ಎಷ್ಟನೇ ಮಗು?" ತುಂಟತನದಿಂದ ಪ್ರಶ್ನಿಸಿದ.

"ಹತ್ತನೇದೋ ಹನ್ನೆರಡನೇದೋ... ಇದೆಲ್ಲಾ ನಿಂಗ್ಯಾಕೆ?"

"ಇದಲ್ಲದೇ ಈ ಹಳ್ಳೀಲಿ ಬೇರೆ ಏನು ವಿಷಯ ಇದೆ? ಹಸು ಹೋರಿ ಕರು ಹಾಕ್ತು. ಎಮ್ಮೆ ಹೆಣ್ಣು ಕರು ಹಾಕ್ತು. ಜಾನಿ, ನಾಲ್ಕು ಮರಿಗಳನ್ನು ಹಾಕ್ತು...

ಪಟೇಲರ ಮನೆ ಕೋಳಿ ಮೊಟ್ಟೆ ಇಡ್ತು... ಇಷ್ಟೇ ತಾನೇ ಹಳ್ಳಿಯ ವಿಷಯ?"

"ಮೆಲ್ಲಗೆ ಮಾತಾಡೋ ಕೃಷ್ಣಾ. ನಿನ್ನ ಭಾವಂಗೆ ಕೇಳಿದ್ರೆ ಏನಂದುಕೊಳ್ತಾರೆ?..." ಲಕ್ಷ್ಮಿ ಎಚ್ಚರಿಸಿದಳು.

"ನಂಗೆ ಇನ್ನು ನಿದ್ದೆ ಬಂದಿಲ್ಲ. ಎಲ್ಲಾ ಕೇಳಿಸ್ತು. ಕೃಷ್ಣ ಈಗ ಕಾಲೇಜ್ನಲ್ಲಿ ಓದೋ ಯುವಕ. ಸ್ನೇಹಿತರ ಸಹವಾಸ. ಇಂಥಾ ಮಾತುಗಳು ಸೊಗಸಾಗಿ ಕಾಣುತ್ತೆ..." ಶಾಸ್ತ್ರಿ ಮುಸುಕನ್ನ ತೆಗೆದು ನುಡಿದಾಗ ಎಲ್ಲರೂ ಗಪ್‌ಚಪ್.

"ನಾಳೆ ಭಾವನ, ತೋಟದ ಕಡೆಗೆ ಹೋಗಿ ಬಾ. ವೈಕುಂಠ ಎಲ್ಲಾ ತೋರಿಸ್ತಾನೆ. ಬಾಳೆಯ ಗಿಡಗಳು ಗೊನೆಗಳನ್ನ ಬಿಟ್ಟಿವೆ. ತರಕಾರಿ ಗಿಡಗಳಲ್ಲಿ ಹೂವು ಹೀಚು ಆಗಿವೆ. ನೆಲಬಾವಿ ಇದೆ. ಹಳ್ಳಿಯ ಮಳೆ ಬೆಳೆ ಬಗ್ಗೇನೂ ತಿಳ್ಕೋ. ಅದೂ ಈ ಹಳ್ಳಿಯ ವಿಷಯವೇ." ಸಾತಕ್ಕ ನುಡಿದಾಗ ಕೃಷ್ಣ ಸುಮ್ಮನೇ ನೋಡಿದ.

ಮಾರನೇ ದಿನ, ನಾರಾಯಣನ ನೇತೃತ್ವದಲ್ಲಿ, ವೈಕುಂಠನ ಸಹಕಾರದಿಂದ ಮನೆ ಮುಂದೆ ಚಪ್ಪರವನ್ನು ಹಾಕಲಾಯಿತು. ಬಾಳೆಯ ಕಂದುಗಳನ್ನ ಕಟ್ಟಿ, ಮಾವಿನ ಸೊಪ್ಪಿನ ತೋರಣವನ್ನ ಕಟ್ಟಿದರು. ವೈಕುಂಠ ಕಂಬಗಳಿಗೆ ಬಣ್ಣವನ್ನು ಬಳಿದ. ಶಾಸ್ತ್ರಿ ಹಾಗೂ ಲಕ್ಷ್ಮಿ, ಚಪ್ಪರದ ಪೂಜೆಯನ್ನ ಗೋಪೂಜೆಯನ್ನ ಮಾಡಿದರು. ಪಾಯಸದ ಅಡಿಗೆಯನ್ನ ಮಾಡಿದರು. ಕಂಠಿಯ ಮನೆಯವರನ್ನ ಊಟಕ್ಕೆ ಕರೆದಿದ್ದರು. ದೊಡ್ಡವರ್ಯಾರೂ ಬರಲಿಲ್ಲ. ಮಕ್ಕಳನ್ನ ಪಾರ್ವತಿ ಕಳಿಸಿದ್ದಳು.

"ನಿಮ್ಮ ಭಾವ, ಹೋಗಿ ಕರೆದ್ರೂ ಬರ್ಲಿಲ್ಲ. ಮದುವೆಗೆ ಏನ್ಮಾಡ್ತಾರೋ...?"

"ತಪ್ಪಿಸ್ಕೋಬೇಡ ಬಾ... ಅಂತ ಮತ್ತೆ ಹೇಳ್ಬಿಟ್ಟು ಬರ್ತೀನಿ."

"ಏನೂ ಬೇಡ ಗುಂಡಣ್ಣ. ಬರೋ ಮನಸ್ಸಿದ್ರೆ, ಒಂದು ಸಲ ಕರೆದ್ರೆ ಸಾಕು. ನ್ಯಾಯವಾಗಿ, ಅವನೂ ಕೈ ಹಚ್ಚಿ ನಡೆಸಿಕೊಡಬೇಕಾದ ಕೆಲಸ. ಎಷ್ಟು ಸಾರಿ ಹೋಗಿ ಕರಿಯೋದು? ಏನು ಅದೇ ಕೆಲಸಾನ?" ಸಾತಕ್ಕ ತಡೆದಳು.

ಕೃಷ್ಣ ಬೈಸಿಕಲ್ಲ ಮೇಲೆ ಪೇಟೆಗೆ ಹೋಗಿ, ಟ್ಯಾಕ್ಸಿಗಳನ್ನು ಕರೆತಂದು ಮನೆಯ ಮುಂದೆ ನಿಲ್ಲಿಸಿದ. ಬೆಲೆ ಬಾಳುವ ಸಾಮಾನುಗಳನ್ನ ಇಡಿಸಿ, ಎಲ್ಲರೂ ಟ್ಯಾಕ್ಸಿಯನ್ನ ಹತ್ತಿದರು. ಕಡೇ ಗಳಿಗೆಯಲ್ಲಿ ಸಾತಕ್ಕ ತಾನು ಬರುವುದಿಲ್ಲವೆಂದುಬಿಟ್ಟಳು.

"ನನಗೆ ಅಲ್ಲಿ ಮಡಿ ಸರಿ ಹೋಗಲ್ಲ. ನಾನು ಇಲ್ಲೇ ಇರ್ತೀನಿ." ಎಂದಳು.

"ಸಾತು, ಒಬ್ಬಳೇ ಇಲ್ಲಿ ಏನು ಮಾಡ್ತೀಯ. ಶೀನನ ಮನೇಲಿ ಮಡೀಲಿ ಅಡಿಗೆ ಮಾಡಿಕೊಂಡ್ರೆ ಆಯ್ತು. ಈಗ ಹೀಗೆ ಕೈ ಕೊಡ್ತೀಯಲ್ಲ."

"ಇಲ್ಲ ಗುಂಡಣ್ಣ. ನಾನು ಅವತ್ತೇ ನಿರ್ಧರಿಸಿದ್ದೆ. ಹೇಳಿರಲಿಲ್ಲ ಅಷ್ಟೇ. ಪಾರ್ವತಿಯೂ ಬಾಣಂತಿ. ಅಲ್ಲಿಯೂ ಸಹಾಯಕರಿಲ್ಲ. ನೀನು ಬಲವಂತ ಮಾಡಬೇಡ."

"ನಿನ್ನ ಇಷ್ಟ ಸಾತು. ನಿಂಗೆ ತೊಂದರೆ ಆಗುತ್ತೆ ಅನ್ನೋದಾದ್ರೆ ಇರು. ವೈಕುಂಠನ

ನಿನ್ನ ಜೊತೆಗೆ ಬಿಟ್ಟು ಹೋಗೋಣ." ವೈಕುಂಠನ ಮುಖ ಕಳೆಗುಂದಿತು.

"ಯಾರೂ ಬೇಡ. ಒಂದು ದಿನದ ಮಟ್ಟಿಗೆ ಹೇಗೋ ನಡೆಯುತ್ತೆ."

"ಇಲ್ಲ ಅತ್ತೆ. ಹೇಗೋ ನಡೆಯುಲ್ಲ. ನಿಮ್ಮ ಜೊತೆಗೆ ನಾನಿರ್ತೀನಿ" ಕೃಷ್ಣ ಹೇಳಿದಾಗ, ಸಾತಕ್ಕ ತಲೆಯನ್ನು ಅಡ್ಡಡ್ಡ ಆಡಿಸಿದಳು.

"ಬೇಡ. ಕೃಷ್ಣ ಮದುವೆಗೆ ಅಂತ ಬಂದಿರೋನು ನೀನು. ನಿನ್ನಂಥ ಯುವಕರ ಅಗತ್ಯ ಅಲ್ಲಿದೆ. ನಾನು ಎಲ್ಲಿದ್ರೂ ಒಂದೇ."

"ಇಲ್ಲ ಅತ್ತೇ. ಈ ವಿಷಯದಲ್ಲಿ ನನಗೆ ಬಲವಂತ ಮಾಡ್ಬೇಡಿ. ನಾನು ಈಗ ಹೋಗಿದ್ರೂ, ರಾತ್ರಿಗೆ ವಾಪಸ್ಸು ಬಂದು ಬಿಡ್ತಿದ್ದೆ..." ಮತ್ತೆ ಹೇಳಿದ.

"ಹೋಗ್ಲಿ ಬಿಡಿ ಅತ್ಗೆ. ಈ ಮುಂಚೇನೇ ಅವನು ನಿರ್ಧರಿಸಿಕೊಂಡು ಬಂದಿದಾನೆ. ಯಾರೇ ಹೇಳಿದ್ರೂ ಅವನು ಮನಸ್ಸು ಬದಲಾಯಿಸಲ್ಲ." ನಾಣಿ ಹೇಳಿದ.

"ಸರಿ, ಬಾಗಿಲಲ್ಲಿ ಚರ್ಚೆ ಮಾಡ್ತಾ ಯಾರೂ ನಿಲ್ಬೇಡಿ. ಹೊತ್ತಾಗುತ್ತೆ. ವರ ಪೂಜೆಗೆ ತಡವಾಗುತ್ತೆ. ನಾಳೆ ಬೆಳಿಗ್ಗೇನಾದ್ರೂ ಬರ್ತಾನೆ. ಅಲ್ವೇನೋ ಕೃಷ್ಣಾ?" ಶಾಸ್ತ್ರಿ ಎಲ್ಲರನ್ನ ಅವಸರಿಸಿ, ಟ್ಯಾಕ್ಸಿಯಲ್ಲಿ ಕೂರಿಸಿದ. ವೈಕುಂಠನ ಹೊರತು ಉಳಿದವರೆಲ್ಲರೂ ಟ್ಯಾಕ್ಸಿಯನ್ನೇರಿದರು.

"ವೈಕುಂಠ ನೀನು ಬೆಳಗಿನ ರೈಲಿಗೆ ಬಂದು ಬಿಡು." ಶಾಸ್ತ್ರಿ ಅವನ ಕೈಗೆ ಕಾಸನ್ನ ಹಾಕಿದ.

"ಮುಂಡೇದು ಬಾಯಿ ಬಿಟ್ಕೊಂಡು ಹೊರಟು ನಿಂತಿದೆ. ರಾತ್ರಿಯ ರೈಲಿಗೆ ಬರ್ತಾನೆ. ನೀವುಗಳು ಹೊರಡಿ."

"ನಾನೂ ವೈಕುಂಠನ ಜತೇಲಿ ಬರ್ತೀನಿ. ಅವನ ಹತ್ರ ಸ್ವಲ್ಪ ಮಾತನಾಡೋದು ಇದೆ." ನಂಜುಂಡ ನುಡಿದಾಗ ಎಲ್ಲರೂ ನಕ್ಕರು.

"ಅವನು ಯಾವ ಸೀಮೆ ಜಾಣ ಅಂತ ಅವನ ಹತ್ರ ಮಾತು?"

"ಮಂಡ್ಯ ಸೀಮೆಯ ಜಾಣ ಅವನು. ಆಲೆಮನೆ ಬಗ್ಗೆ ಸ್ವಲ್ಪ ವಿಷಯಗಳನ್ನ ತಿಳ್ಕೋ ಬೇಕಾಗಿತ್ತು."

"ಸರಿ. ಒಬ್ಬೊಬ್ರೂ ಒಂದೊಂದು ಕಾರಣ ಹೇಳ್ತಿದೀರಿ. ಸಾತು, ನೀನು ಹೊರಟಿದ್ರೆ, ಇವರುಗಳೆಲ್ಲಾ ತೆಪ್ಪಗೆ ಹೊರಟಿರುತಿದ್ರು..."

"ಎಲ್ರೂನ್ನು ನಾನು ರಾತ್ರಿಯ ರೈಲಿಗೆ ಕಳಿಸಿ ಕೊಡ್ತಿನಿ. ನೀವು ಹೊರಡಿ." ಶಾಸ್ತ್ರಿ ಹತ್ತಿದ ಟ್ಯಾಕ್ಸಿ ಹೊರಟವು. ವೈಕುಂಠ ನಂಜುಂಡನನ್ನ ಕರೆದುಕೊಂಡು ತೋಟದ ಕಡೆಗೆ ಹೊರಟ. ಕೃಷ್ಣ ಸಾತಕ್ಕನೊಡನೆ ಮನೆಯಲ್ಲೇ ಉಳಿದ.

"ಕೃಷ್ಣಾ, ನಿನ್ನ ಅಕ್ಕಂಗೆ ಭಾವಂಗೆ ನೀನು ಹೊರಡ್ಲಿಲ್ಲ ಅಂತ ಖಂಡಿತಾ ಬೇಸರವಾಗಿರುತ್ತೆ. ನಾಳೆ ಮದುವೆಗಾದ್ರೂ ಹೋಗು. ತಪ್ಪಿಸ್ಕೋಬೇಡ."

"ನನಗೆ ಮದುವೆ ಮನೆಗೆ ಹೋಗುವ ಮನಸ್ಸಿಲ್ಲ ಅತ್ಗೇ. ಅಲ್ಲಿ ಅಣ್ಣ ಅತ್ತಿಗೆ ಬಂದಿರುತ್ತಾರೆ. ಅವರ ಮುಖ ನೋಡುಕ್ಕೇ ಬೇಸರ."

"ಹೀಗೇನೋ ಬಲವಾದ ಕಾರಣ ಇದೆ ಅಂತ ನಂಗ್ ಅನ್ನಿಸಿತು. ಇಂಥ ಸಮಯಗಳಲ್ಲಿ ಎಲ್ಲಾ ದ್ವೇಷವನ್ನೂ ಮರೆತು ಎಲ್ಲರೂ ಒಂದಾಗಿ, ಶುಭಕಾರ್ಯಗಳನ್ನು ನೆರವೇರಿಸಿ ಕೊಡ್ಬೇಕು. ನೀನು ಓದಿದೋನು ತಿಳಿದೋನು."

"ಓದು ಬರಹ, ತಿಳುವಳಿಕೆ ಎಲ್ಲಾ ಬೇರೆ. ಹಾಳು ಮನಸ್ಸೇ ಬೇರೆ. ನನ್ನನ್ನ ಕೆಟ್ಟೋನು ಅಂತ ಬೇಕಾದ್ರೂ ಅಂದ್ಕೊಳ್ಳಿ. ಪರವಾಗಿಲ್ಲ. ನನಗೆ ಅನ್ನಿಸಿದ್ದನ್ನ ನಿಮಗೆ ಹೇಳ್ದೆ. ಅಲ್ಲದೇ ನಿಮ್ಮ ಜೊತೆ ಇರಬೇಕು ಅಂತ ಅನ್ನಿಸ್ತು. ನಿಮ್ಮಷ್ಟು ಒಳ್ಳೆಯವರನ್ನೂ ನಾನು ಎಲ್ಲಿಯೂ ಕೇಳಿಲ್ಲ. ಅಕ್ಕನೂ ನಿಮ್ಮನ್ನೂ ಹೊಗಳ್ತಾಳೆ."

"ಅವಳಿಗೆ ಬೇರೆ ಕೆಲಸವಿಲ್ಲ. ನೀನು ತೋಟಕ್ಕೆ ಹೋಗಲ್ವಾ...?"

"ಇನ್ನೆಂದಾದ್ರೂ ಹೋಗ್ತೀನಿ. ಸಧ್ಯಕ್ಕೆ ಕೆಲವು ದಿನಗಳ ರಜ ಇದೆ. ಈ ಚಿಕ್ಕ ಹಳ್ಳೀನ ಸುತ್ತಿ ಬರೋಕೆ ಒಂದೆರಡು ಗಂಟೆ ಸಾಕು."

"ಇದು ಚಿಕ್ಕ ಹಳ್ಳಿ ನಿಜ. ಆದರೆ ನೋಡೋದು ಬೇಕಾದಷ್ಟಿದೆ. ಕಲಿಯೋದು ಬೇಕಾದಷ್ಟಿದೆ."

"ನಿಮಗೆ ಈ ಹಳ್ಳಿ ಇಷ್ಟು ಆಯ್ತಾ ಅತ್ಗೆ? ಅಕ್ಕಂಗೆ ಮಾತ್ರ ಸುತರಾಂ ಇಷ್ಟವಿಲ್ಲ. ಪ್ರತಿ ಕಾಗದದಲ್ಲೂ ಹಳ್ಳೀನ ಜರಿದು ಬರೆಯುತ್ತಿದ್ದಳು."

"ಹಳ್ಳಿಯ ಜೀವನ ಕಷ್ಟ ಕೃಷ್ಣಾ. ನನ್ನಂಥೋರಿಗೆ ಎಲ್ಲಿದ್ರೂ ಒಂದೇ. ಅವಳಿಗೆ ಮಕ್ಕಳ ವಿದ್ಯಾಭ್ಯಾಸ, ಮನೆಯ ಅನಾನುಕೂಲ ಇದೆಲ್ಲದರ ಚಿಂತೆ. ಅಲ್ಲದೇ ಜೀವನೋಪಾಯಕ್ಕೆ ಇಲ್ಲಿ ತುಂಬಾ ಶ್ರಮ ಪಡಬೇಕು. ಅದು ಸರಿ, ನಂಜುಂಡ ಅದೇನೋ ಆಲೆಮನೆ ಅಂತಿದ್ನಲ್ಲ. ಅದೇನದು? ನಿಮ್ಮ ಭಾವ ಈ ಸಾರಿ ಗದ್ದೇಲಿ ಕಬ್ಬು ಹಾಕ್ಸಿದಾನೆ. ಆಲೆಮನೆ ಕಟ್ಟಿಸ್ತಾನೆ. ತಿಳಿಸಿದ್ರೆ ಬಂದು ಹೋಗ್ತೀಯಾ?"

"ಆದರೆ ಬರ್ತೀನಿ. ಕಾಲೇಜಿಗೆ ರಜ ಇರಬೇಕಲ್ಲ. ಈ ವರ್ಷ ಕಳೆದ್ರೆ ಡಿಗ್ರಿ ಸಿಗುತ್ತೆ. ಆಮೇಲೆ ಕೆಲಸಕ್ಕೆ ಸೇರಬಹುದು."

"ನಿಂಗೆಷ್ಟು ವರ್ಷ? ಇಷ್ಟು ಬೇಗ ಕೆಲಸ ಸಿಕ್ಕತ್ತಾ?"

"ಅಣ್ಣ ಒಂದು ಉಪಕಾರ ಮಾಡಿದಾನೆ. ಸ್ಕೂಲಿಗೆ ಸೇರಿಸುವಾಗ ವಯಸ್ಸು ಸ್ವಲ್ಪ ಜಾಸ್ತಿ ಬರೆಸಿದಾನೆ. ನಂಗೆ ಇಪ್ಪತ್ತು ವರ್ಷ ತುಂಬುತ್ತೆ. ಇನ್ನ ಓದು ಸಾಕು. ನಾರಾಯಣ ಓದನ್ನ ಮುಗಿಸದೇ ಕೆಲಸಕ್ಕೆ ಸೇರಿ ಸಂಪಾದಿಸ್ತಾ ಇದಾನೆ. ನನ್ನ ಫೀಸು, ಪುಸ್ತಕಕ್ಕೆ ಅವನೇ ಹಣ ಕೊಡ್ತಾನೆ."

"ಕೆಲಸ ಸಿಕ್ಕ ಕೂಡಲೇ ನೀವಿಬ್ರೂ ಮದುವೆ ಮಾಡಿಕೊಂಡು ಬಿಡಿ."

"ನಾನು ಮದುವೆಯಾಗುಲ್ಲಪ್ಪಾ. ನಾರಾಯಣಂಗೆ ಇಷ್ಟವಿದ್ದರೆ ಆಗಲಿ."

"ಯಾಕೋ ನಾಚ್ಕೇನ?"

"ನಾಚ್ಕೆ ಹೆಣ್ಣು ಹುಡುಗೀರ್ಗೆ... ಮದುವೆ ಅಂದರೆ, ನನಗೆ ಅತ್ತಿಗೆಯ ರೂಪ ಕಣ್ಣ ಮುಂದೆ ನಿಲ್ಲುತ್ತೆ. ಜಯ ನೆನಪಾಗ್ತಾಳೆ."

"ಹುಚ್ಚು ಮುಂಡೇದೆ. ಎಲ್ಲಾ ಹೆಂಗಸ್ರೂ ನಿನ್ನ ಅತ್ತಿಗೆ ತರಹ ಇರೋದಿಲ್ಲ. ಎಲ್ಲರ ಹಣೇಬರಹವೂ ಜಯನ ತರಹ ಇರೋದಿಲ್ಲ. ನಿನ್ನ ಅತ್ತಿಗೆ ಕೆಟ್ಟೋಳಲ್ಲ. ಆದರೆ ಸ್ವಾರ್ಥಿ. ಎಲ್ಲಾ ಹೆಂಗಸರೂ ಸ್ವಾರ್ಥಿಗಳೇ..."

"ನೀವು ಸ್ವಾರ್ಥಿಗಳಲ್ಲ.... ನೀವು ಯಾರಿಗೂ ಅನ್ಯಾಯ ಮಾಡಿಲ್ಲ. ಅತ್ತಿಗೆ ನಮಗೆಲ್ಲಾ ಅನ್ಯಾಯ ಮಾಡಿದಾರೆ."

"ನಿಮಗೆಲ್ಲಾ ಅನ್ಯಾಯ ಮಾಡಿದೋನು ಆ ದೇವರು... ನಿಮ್ಮನ್ನು ಅನಾಥರನ್ನಾಗಿ ಮಾಡಿಬಿಟ್ಟ. ಅದೇ ಇಷ್ಟಕ್ಕೆಲ್ಲಾ ಕಾರಣ. ಆದರೆ ದೇವರನ್ನ ಯಾರೂ ದೂಷಿಸಲ್ಲ." ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಅನ್ಯಾಯವಾಗಿದೆ. ನನ್ನ ವಿಷಯಾನೇ ನೋಡು. ಆದರೂ ಎಲ್ಲವನ್ನೂ ಮರೆಯಲು ಯತ್ನಿಸಿ, ಹೀಗೆ ಕಾಲ ಕಳಿತಿದೀನಿ. ಮನೆ ಕೆಲಸ ನನ್ನ ಕೈಲಾದಷ್ಟು ಮಾಡ್ತೀನಿ. ಮಕ್ಕಳ ಜೊತೆ ಬೆರೆಯುತ್ತೀನಿ. ವೈಕುಂಠ ಅಂತೂ ತರಲೆ... ಅವನನ್ನ ಸಹಿಸಿಕೊಳ್ತೀನಿ... ಹೋಗಲಿ ಬಿಡು ನನ್ನ ಬಗ್ಗೆ ಸಾಕು. ನನ್ನದೊಂದು ಮಾತನ್ನ ನಡೆಸಿಕೊಡ್ತೀಯ?"

"ಹೇಳಿ ಅತ್ತೆ. ನನ್ನ ಕೈಲಿ ಆದರೆ ಖಂಡಿತಾ ನಡೆಸಿ ಕೊಡ್ತೀನಿ."

"ಬಾ. ಹಾಗಾದ್ರೆ. ದೇವರ ಮುಂದೆ ನಿಂತು ಪ್ರಮಾಣ ಮಾಡು."

"ವಿಷಯ ತಿಳಿಯದೇ ನಾನ್ಹೇಗೆ ಪ್ರಮಾಣ ಮಾಡ಼್ೀ?"

"ನೀನು ನಮ್ಮ ಲಲಿತನ್ನ ನೋಡಿದೀಯಲ್ಲ. ನಿಂಗೆ ಏನನ್ನಿಸುತ್ತೆ?"

"ಚೆನ್ನಾಗಿದಾಳೆ... ಒಳ್ಳೆಯ ಹುಡುಗಿ... ಅಕ್ಕನ ಮಗಳು..."

"ಅವಳಲ್ಲಿ ಏನಾದರೂ ಬದಲಾವಣೇನ ಕಂಡ್ಯಾ?"

"ಹುಡುಗೀರು ಬಹಳ ಬೇಗ ಬೆಳೆದು ಬಿಡ್ತಾರೆ. ಹಾಗೇ ಬದಲಾಗಿ ಬಿಡ್ತಾರೆ. ಆದರೆ ಹಿಂದೆ ನೋಡಿದಾಗ ಚುರುಕಾಗಿದ್ಲು. ಈಗ ಮಂಕಾಗಿದಾಳೆ. ಅಂತ ಅನ್ನಿಸ್ತು."

"ಹೌದು ಕೃಷ್ಣ ಚಿಗರೆಯಂತೆ ಚಿಮ್ಮಿಕೊಂಡಿದ್ದ ಹುಡುಗಿ ಮಂಕಾಗಿ ಬಿಟ್ಟಿದಾಳೆ. ಅವಳಲ್ಲಿ ಒಂಥರಾ ಭಯ ಹುಟ್ಟಿಕೊಂಡು ಬಿಟ್ಟಿದೆ."

"ಎಂಥಾ ಭಯ?"

"ಏನೋ ಒಂದು ಘಟನೆ ನಡೆದು ಹೋಯ್ತು.... ವಯಸ್ಸಿನಲ್ಲಿ ಚಿಕ್ಕವಳು ಮುಗ್ಧೆ. ಅವಳು ಹಿಂದಿನಂತೆ ಗೆಲುವಾಗಬೇಕು..." ಅವಳನ್ನ ನೀನು ಒಲಿಸಿಕೊಂಡು ಅವಳನ್ನ ಮದುವೆಯಾಗಬೇಕು. ಇದು ನನ್ನ ಆಸೆ."

"ಅಂಥಾದ್ದೇನಾಯ್ತು? ಹೇಳೋದಾದ್ರೆ ಹೇಳಿ. ನಾನು ಯಾರಿಗೂ ಹೇಳಲ್ಲ."

ಸಾತಕ್ಕ ನಡೆದ ಘಟನೆಯನ್ನ ತಿಳಿಸಿದಳು. ಈ ವಿಷಯ ನಮ್ಮಿಬ್ಬರ ಹೊರತು ಬೇರೆ ಯಾರಿಗೂ ತಿಳಿಯದು. ತಿಳಿದರೆ ಮುಂದೆ ಅವಳ ಪಾಡೇನು! ಆ ಧೂರ್ತನು ನನ್ನ ತಂಗಿಯ ಮಗನೇ. ಅವನೂ ಹಾಳಾಗಿ ಹೋಗ್ತಾನೆ."

"ಅವನೇ ಲಲಿತನ್ನ ಮದುವೆಯಾಗಬಹುದಲ್ಲ ಅತ್ತೆ."

"ಅವನು ಲಲಿತಂಗೆ ತಕ್ಕವನಲ್ಲ. ಅಲ್ಲದೇ ಮದುವೆಗೆ ಮುಂಚೆಯೇ ಪಶುವಿನಂತೆ ವರ್ತಿಸಿದವನನ್ನ ಲಲಿತ ಗಂಡ ಅಂತ ಹೇಗೆ ಒಪ್ಪಿಕೊಳ್ತಾಳೆ! ಅವನ ಬಗ್ಗೆ ಅವಳಿಗೆ ತಿರಸ್ಕಾರವಿದೆ. ಅವನಿಗೆ ಇವಳ ಮೇಲೆ ದ್ವೇಷ ಇದೆ. ನೀನೂ ಹಿಂದೆ ಮುಂದೆ ಯೋಚಿಸ್ತಾ ಇದೀಯಲ್ಲ. ಲಲಿತಾ ಯಾವ ತಪ್ಪನ್ನೂ ಮಾಡಿಲ್ಲ. ಅವಳಿಗೆ ಅರಿವಿಲ್ಲದೇ ಒಂದು ತಪ್ಪು ನಡೆದಿದೆ ಅಷ್ಟೆ."

"ಲಲಿತ ನನ್ನನ್ನ ಮದುವೆಯಾದರೆ ಸುಖವಾಗಿರ್ತಾಳಾ ಅತ್ತೆ?"

"ನೀನು ಅವಳನ್ನ ಸುಖವಾಗಿಟ್ಟುಕೊಳ್ಳಬೇಕು. ಅವಳು ಸಂತೋಷವಾಗಿರುವಂತೆ ನೋಡಿಕೊಳ್ಳಬೇಕು. ಅದು ನಿನ್ನಿಂದ ಸಾಧ್ಯ ಅಂತ ಅನ್ನಿಸುತ್ತೆ ನನಗೆ ನಿನ್ನ ಮೇಲೆ ನಂಬಿಕೆ ಇದೆ."

ನಿಮ್ಮ ನಂಬಿಕೆಗೆ ನಾನು ಪಾತ್ರನೋ ಅಲ್ಲವೋ ತಿಳಿಯದು. ಅತ್ತಿಗೆ ನನಗೆ ಜಗಳಗಂಟ ಅನ್ನೋ ಬಿರುದನ್ನ ಕೊಟ್ಟಿದಾರೆ. ಮದುವೆ ಬಗ್ಗೆ ನಾನು ಯಾರ ಭಾವನೆಯನ್ನ ಬೆಳೆಸಿಕೊಂಡಿಲ್ಲ. ಅಲ್ಲದೇ ನಾರಾಯಣನ ಮದುವೆ ಆಗದೇ ನಾನು ಮದುವೆಯಾಗುವಂತಿಲ್ಲ. ಇನ್ನು ಒಂದು ವಿಷಯ. ಈ ವಿಚಾರದಲ್ಲಿ ಲಲಿತನ್ನ ಬಲವಂತ ಪಡಿಸಬೇಡಿ. ಅವಳ ಒಪ್ಪಿಗೆ ಇದ್ದರೆ ಮಾತ್ರ ನಾನು ಅವಳನ್ನ ಮದುವೆಯಾಗ್ತೀನಿ."

ನನಗೀಗ ನೆಮ್ಮದಿ ಆಯ್ತು.... ನನಗೆ ಲಲಿತಳ ಬಗ್ಗೆ ಅಂತಃಕರಣ ಜಾಸ್ತಿ. ಅತ್ತೇ ಅತ್ತೇ ಅಂತ ನನಗೆ ಬಹಳ ಹತ್ತಿರವಾಗಿದಾಳೆ. ಬೇರೆ ಯಾರಿಗೋ ಕೊಟ್ಟು ಮದುವೆ ಮಾಡುವ ಬದಲು, ನೀನು ಮನೆ ಹುಡುಗ ..ಮನೆ ಅಳಿಯನಾಗಿ ನಿನ್ನ ಅಕ್ಕ ಭಾವನ ಜೊತೆಗೇ ಇರಲಿ ಅಂತ ನನ್ನಾಸೆ. .."

"ಅಕ್ಕ ಭಾವನ ಮನಸ್ನಲ್ಲಿ ಏನಿದೆಯೋ ಅವರಿಗೆ ನಾನು ಒಪ್ಪಿಗೆಯಾ?"

" ಒಪ್ಪದೆ ಏನ್ಮಾಡ್ತಾರೆ?! ಅವರಿಗೂ ಗಂಡು ಮಮಗನಂತೆ ನೀನು ಅವರವನಾಗಿದ್ದರೆ ಇದಕ್ಕಿಂತ ಇನ್ನೇನು ಬೇಕು... ನಾನು ಮಾತಾಡ್ತೀನಿ..."

" ಸರಿ ಅತ್ತೇ. ನಿಮ್ಮಿಷ್ಟದಂತೆಯೇ ಆಗಲಿ" ಕೃಷ್ಣ ಒಪ್ಪಿಕೊಂಡ. ಸಾತಕ್ಕ ನಿರಾಳವಾದಳು.

"ನನಗೀಗ ನೆಮ್ಮದಿ ಆಯಿತು... ಲಲಿತಳ ಬಗ್ಗೆ ಕಾಡುತ್ತಿದ್ದ ಆತಂಕ ಕಡಿಮೆ ಆಯಿತು." ನೆಮ್ಮದಿಯ ನಿಟ್ಟುಸಿರನ್ನ ಬಿಟ್ಟಳು.

"ಅಕ್ಕನ, ಭಾವನ ಮನಸ್ನಲ್ಲಿ ಏನಿದೆಯೊ? ಅವರು ಒಪ್ಪದಿದ್ದರೇ?"

"ಆ ಜವಾಬ್ದಾರಿ ನನ್ನದು... ಈ ಘಟನೆ ಬಗ್ಗೆ ಅವರಿಗೆ ನಾನು ತಿಳಿಸಿಲ್ಲ. ಅವರು ನನ್ನನ್ನ ಅಂತಾರೆ ಅಂತ ಅಲ್ಲ. ಲಲಿತನ್ನ ನೋಡುವ ದೃಷ್ಟಿ ಬದಲಾಗುತ್ತೆ ಅಂತ ಅಷ್ಟೆ. ಅವಳಿಗಿರುವ ಸ್ವಾತಂತ್ರ್ಯ ಕಡಿಮೆ ಆಗುತ್ತೆ. ಅವಳ ಮಂಕುತನ ಹೆಚ್ಚಾಗುತ್ತೆ. ಅದು ನನಗೆ ಇಷ್ಟವಿಲ್ಲ. ಅವಳ ಜೀವನಕ್ಕೆ ಯಾವ ತೊಂದರೆ ಬರಬಾರದು ಅಂತ ನನ್ನಾಸೆ. ನೀನು ತಪ್ಪು ತಿಳ್ಕೋ ಬೇಡ ಕೃಷ್ಣಾ. ಲಲಿತ ಅಪವಿತ್ರಳಲ್ಲ. ಅವಳ ಮನಸ್ಸು ಪವಿತ್ರವಾಗಿದೆ. ಶುಭ್ರವಾಗಿದೆ. ಹಾಲಿನಂಥವಳು." ಹೇಳ್ತಾ ಹೇಳ್ತಾ ಸಾತಕ್ಕ ಭಾವುಕಳಾದಳು. ಅವಳ ಗಂಟಲುಬ್ಬಿ ಬಂತು.

"ನೀವು ಇಷ್ಟು ಬೇಡ್ಕೋ ಬೇಡಿ ಅತ್ಗೆ. ಅದು ನಂಗೆ ಒಳ್ಳೆಯದಲ್ಲ. ನಂಗೂ ಮುಜುಗರವಾಗುತ್ತೆ. ಲಲಿತನ್ನ ನಾನು ಮದುವೆಯಾಗ್ತೀನಿ. ಕಾಯಾ ವಾಚಾ ಮನಸಾ ಅವಳಿಗೆ ದ್ರೋಹ ಮಾಡಲ್ಲ. ನೀವು ಚಿಂತಿಸಬೇಡಿ..."

"ನೀನು ಸದಾಕಾಲ ಚೆನ್ನಾಗಿರಪ್ಪಾ... ನನ್ನನ್ನ ಸ್ವಾರ್ಥಿ ಅಂತ ಅಂದ್ಕೋಬೇಡ. ನಿಜ ಹೇಳ್ತೀನಿ. ಈ ಆಲೋಚನೆ ಈಗ ನಿನ್ನ ಹತ್ರ ಮಾತಾಡುವಾಗ ದಿಢೀರನೇ ಬಂದದ್ದು. ಇದೊಂದು ತರಹ ಸುಯೋಗ. ನಾನು ಮಡಿಯ ನೆಪಮಾಡಿ, ಮದುವೆ ಮನೆಗೆ ಹೋಗದೇ ಉಳ್ಕೊಂಡೆ. ನೀನು ನಿನ್ನ ಅಣ್ಣ ಅತ್ತಿಗೆಯರ ಕಾರಣ ಹೇಳಿ, ನನಗೆ ಕಾವಲುಗಾರನಾಗಿ ಉಳ್ಕೊಂಡೆ."

"ನಾನು ನನ್ನ ಜೀವಮಾನವೆಲ್ಲಾ ಹೀಗೇ ನಿಮ್ಮ ಜೊತೆ ಇರಬಲ್ಲೆ ಅತ್ಗೆ. ಅಮ್ಮನ ಮುಖವನ್ನ ನೋಡಿದ ನೆನಪಿಲ್ಲ. ಅತ್ತಿಗೆ ತಾಯಿಯಾಗಲಿಲ್ಲ. ಅಕ್ಕ ಬೇರೆ ಮನೆಯವಳಾಗಿ ಬಿಟ್ಟಳು. ಜಯ ನಮ್ಮನ್ನೆಲ್ಲಾ ಬಿಟ್ಟು ಹೋದಳು. ನನ್ನ ಹೃದಯದಲ್ಲಿ ನಿಮಗೆ ಮಾತೃಸ್ಥಾನವನ್ನು ಕೊಟ್ಟಿದೀನಿ. ನಿಮ್ಮ ಮಾತಿನಂತೆ ನಡೆಯುತ್ತೀನಿ."

"ಅವ್ವಾವ್ರೇ ಪರಸಂಗ ಏಳ್ತಿದ್ರಾ? ನಂಗೂ ಏಳಿ." ವೈಕುಂಠ ಇಬ್ಬರನ್ನ ಎಚ್ಚರಿಸಿದ.

"ಇವನೊಬ್ಬ ಹುಚ್ಚು ಮುಂಡೇಗಂಡ. ಯಾವಾಗ ನೋಡಿದ್ರೂ ಇವನಿಗೆ ಕಥೆ, ಪುರಾಣ, ಪುಣ್ಯಕತೆ ಪ್ರಸಂಗದ ಹುಚ್ಚು. ನಂಜುಂಡಂಗೆ ಏನೇನು ಹೇಳ್ದೆ? ಏನು ಕಿತಾಪತಿ ಮಾಡ್ದೆ?"

"ಇಲ್ಲ ಅವ್ವಾರೇ. ನಾನು ಏನೂ ಕಿತಾಪತಿ ಮಾಡ್ಲಿಲ್ಲ. ಬೇಕಾದ್ರೆ ಅವರ್ನೇ ಕೇಳಿ." ನಂಜುಂಡ ಮುಗುಳ್ನಕ್ಕ.

"ಮಾತಾಡ್ದೆ ಕೂತ್ಬಿಟ್ಟು ಸಮಯ ಹೋದದ್ದೇ ತಿಳೀಲಿಲ್ಲ. ರಾತ್ರಿಗೆ ಏನು ಅಡಿಗೆ ಮಾಡ್ಲೀ?" ಎನ್ನುತ್ತ ಅಡಿಗೆ ಮನೆಯ ಕಡೆಗೆ ನಡೆದಳು. ನಂಜುಂಡ ತಾನು ನೋಡಿದ ಹಳ್ಳಿಯ ವರ್ಣನೆಯನ್ನ ಮಾಡಿದ. ಮಧ್ಯೆ ಮಧ್ಯೆ ವೈಕುಂಠನೂ ಬಾಯಿ ಹಾಕಿದ. ಕೃಷ್ಣ ಲಲಿತಳ ಬಗ್ಗೆ ಚಿಂತಿಸುತ್ತಿದ್ದ.

"ಹೋಗೋ ವೈಕುಂಠ, ಕರುಗಳನ್ನ ಬಿಟ್ಟು ಹಾಲನ್ನು ಕರೆದು ಬಿಡು. ದನ ಕರುಗಳಿಗೆ ಮೇವು ಹಾಕಿ ಬಾ. ಕೊಟ್ಟಿಗೆಯ ಬಾಗಿಲನ್ನ ಸರಿಯಾಗಿ ಹಾಕು." ವೈಕುಂಠ ಅತ್ತ ಹೋದ. ಅಡಿಗೆ ಮನೆಯಿಂದ ಬರುವಾಗ, ಪಗಡೆ ಹಾಸು, ದಾಳಗಳನ್ನ ಕಂಡಳು. "ಬೆಳಗ್ಗೆ ಮಾಡಿದ್ದ ಅಡಿಗೆಯೇ ಸಾಕಷ್ಟು ಮಿಕ್ಕಿದೆ. ನಿಮ್ಮೆಲ್ಲರಿಗೂ ಆಗುತ್ತೆ. ಬಿಸಿ ಮಾಡಿ ಬಡಿಸ್ತೀನಿ. ನಿಂಗೆ ಪಗಡೆ ಆಡೋಕೆ ಬರುತ್ತೇನೋ ಕೃಷ್ಣಾ. ನಾನು ಲಲಿತಾ, ದಿನಾ ಮಧ್ಯಾಹ್ನ ಊಟವಾದ ಮೇಲೆ ಆಡ್ತೀನಿ. ಒಂಥರಾ ಅಭ್ಯಾಸವಾಗಿ ಬಿಟ್ಟಿದೆ. ದಾಳಗಳನ್ನ ಉಜ್ಜದೇ ಕೈ ಕಡೀತಾ ಇದೆ."

"ಅತ್ಗೇ ಈ ಅಭ್ಯಾಸ ಒಳ್ಳೇದಲ್ಲ. ಇದು ಆಟವಲ್ಲ ಜೂಜು."

"ಎಂದಾದ್ರೂ ಆಡಿದೀಯ?" ಎನ್ನುತ್ತ ಪಗಡೆ ಹಾಸನ್ನ ಹಾಸಿ ದಾಳವನ್ನ ತೆಗೆದು, ಕಾಯಿಗಳನ್ನ ಹೂಡಿದಳು. ಕೃಷ್ಣನನ್ನು ಆಟಕ್ಕೆ ಕರೆದಳು.

"ನಂಗೆ ಬರಲ್ಲ ಅತ್ಗೇ. ಸೋತು ಹೋಗ್ತೀನಿ ಅಷ್ಟೆ. ನಂಜುಂಡ ನೀನೂ ಆಡೋ..."

"ಏಯ್ ಇಲ್ಲಪ್ಪ. ನನಗೆ ಈ ಆಟ ಗೀಟ ಬೇಡ. ಸುತ್ತಾಡಿ ಸುಸ್ತಾಗಿದೆ. ನಾನು ಮಲಗಿರ್ತೀನಿ" ಎನ್ನುತ್ತ ಅವನು ದಿಂಬಿನ ಮೇಲೆ ತಲೆ ಇಟ್ಟ. ಇಬ್ಬರೂ ಆಟವನ್ನ ಪ್ರಾರಂಭಿಸಿದರು. ಸಾತಕ್ಕ ದಾಳಗಳನ್ನ ಹೊಸೆದು ಹೊಸೆದು ಉರುಳಿಸಿ, ಉತ್ಸಾಹದಲ್ಲಿ ಕಾಯನ್ನ ನಡೆಸುತ್ತಿದ್ದಳು. ಚಕಚಕನೆ ನಡೆಸುತ್ತಿದ್ದ ರೀತಿ ಕೃಷ್ಣನನ್ನ ಅಚ್ಚರಿಗೊಳಿಸಿತು.

"ಲಲಿತರಿಗೆ ನಿಮ್ಮ ಹಾಗೇ ಆಟ ಬರುತ್ತಾ?"

"ಹೂಂ ಕಲಿತಿದಾಳೆ. ನಿಮ್ಮಕ್ಕನೂ ಆಡ್ತಾಳೆ... ಆದರೆ ದಿನಾ ನಾನೇ ಗೆಲ್ಲೋದು." ಹೆಮ್ಮೆಯಿಂದ ಸಾತಕ್ಕ ಹೇಳಿಕೊಂಡಾಗ ಅವನು ಅವಳನ್ನೇ ನೋಡಿದ.

"ಯಾಕೋ, ಸೋಲ್ತೀನಿ ಅಂತ ಯೋಚಿಸ್ತಿದೀಯ... ಸೋತರೆ ಅವಮಾನ ಅಂತ ಅಂದ್ಕೋಬೇಡ. ಯಾವಾಗಲೂ "ಸೋತು ಗೆಲ್ಲಬೇಕು" ಎಂದು ಮುಗುಳ್ನಕ್ಕಳು. ಆಟದಲ್ಲಿ ಅವನು ನುರಿತವನಲ್ಲದ್ದರಿಂದ ಸೋತಿದ್ದ. ಸಾತಕ್ಕ ಎಂದಿನಂತೆ ಗೆದ್ದಿದ್ದಳು. "ನಿಂಗೆ ಆಟವೇ ಬರುಲ್ಲ. ಲಲಿತ ಹೇಳಿ ಕೊಡ್ತಾಳೆ ಬಿಡು." ಅವನು ನಕ್ಕು ನಂಜುಂಡನ ಕಡೆ ನೋಡಿದ. ಅವನು ನಿದ್ದೆ ಹೋಗಿದ್ದ.

* * *

ಮದುಮಗನ ಕಡೆಯವರು, ಬೆಳಗ್ಗೆಯೇ, ಮದುವೆ ಮನೆಗೆ ಬಂದಿಳಿದಿದ್ದರು. ಎಲ್ಲಾ ಅನುಕೂಲವನ್ನ ಮೊದಲೇ ಮಾಡಿಕೊಟ್ಟಿದ್ದರಿಂದ, ಅವರ ಮನೆಯ ದೇವರ ಸಮಾರಾಧನೆ ಕಾರ್ಯಕ್ರಮವನ್ನ ಇಲ್ಲಿಯೇ ನೆರವೇರಿಸಿದ್ದರು. ಮನೆಯ ಮಾಲೀಕರು ಮೊದಲೇ ಚಪ್ಪರವನ್ನ ಹಾಕಿಸಿದ್ದರು. ನರಸಿಂಹಯ್ಯ ಕೆಲವು ಜವಾಬ್ದಾರಿಯನ್ನ

ಹೊತ್ತಿದ್ದರು. ಎಲ್ಲರೂ ಹತ್ತಿರದ ನೆಂಟರೇ ಆಗಿದ್ದುದರಿಂದ, ಹೆಚ್ಚು ಬಿಗುಮಾನಗಳಿರಲಿಲ್ಲ. ಶ್ರೀನಿವಾಸನ ಮನೆಯವರು, ಸೀತಾರಾಮನ ಮನೆಯವರು ಕೆಲವರು ಮದುವೆ ಮನೆಯಲ್ಲೇ ಇಳಿದುಕೊಂಡಿದ್ದರು.

ಶಾಸ್ತ್ರಿ ತನ್ನ ಪರಿವಾರದೊಂದಿಗೆ ಅಲ್ಲಿಗೆ ಬಂದು ಸೇರಿದ. ಎಲ್ಲರೂ ಪರಸ್ಪರ ಉಭಯ ಕುಶಲೋಪರಿಯನ್ನ ವಿನಿಮಯ ಮಾಡಿಕೊಂಡರು. ಅಡಿಗೆಯವರು ಎಲ್ಲರಿಗೂ ಕಾಫಿ ತಿಂಡಿಗಳನ್ನ ಕೊಟ್ಟರು. ಎಲ್ಲರೂ ಶಾಂತಳನ್ನ ಬಂದು ಮಾತನಾಡಿಸಿಕೊಂಡು ಹೋದರು. ಅವಳ ಜೊತೆಯಲ್ಲಿದ್ದ ಲಲಿತಳ ಮೇಲೆ ಅನೇಕರ ದೃಷ್ಟಿ ಹರಿದಿತ್ತು. ಸಾವಿತ್ರಿ ಏಕೆ ಬರಲಿಲ್ಲವೆಂದು ವಿಚಾರಿಸಿದರು. ಪಾರ್ವತಿ ಮತ್ತೆ ಹಸುಗೂಸಿನ ಬಾಣಂತಿ ಅಂತ ತಿಳಿದಾಗ ಕೆಲವರ ಮುಖದಲ್ಲಿ ಕಿರುನಗೆ ಮೂಡಿತು.

ಲಕ್ಷ್ಮಿಯ ಅಣ್ಣ ಅತ್ತಿಗೆ ತಮ್ಮ ಚಿಕ್ಕ ಮಕ್ಕಳೊಡನೆ ಬಂದಿಳಿದರು. ಲಕ್ಷ್ಮಿ ನಗೆ ಮುಖದರಿಂದ ಬರಮಾಡಿಕೊಂಡಳು. ನಾರಾಯಣನೂ ಲಕ್ಷ್ಮಿಯೊಡನೆ ನಿಂತಿದ್ದ. ಅಣ್ಣ ಅತ್ತಿಗೆಯರನ್ನ ಕರೆದೊಯ್ದು ತಿಂಡಿ ಕಾಫಿಯನ್ನ ಕೊಡಿಸಿದ. ವರಪೂಜೆಯ ಸಮಯವಾಗಿತ್ತು. ಎಲ್ಲರೂ ಸಿದ್ಧರಾಗಿ, ಮಂಟಪದ ಬಳಿ ಸೇರಿದರು. ಶಾಸ್ತ್ರಿ ದಂಪತಿಗಳು, ವರನ ಪೂಜೆಯನ್ನ ನೆರವೇರಿಸಿ, ವರನಿಗೆ ಆರತಿ ಎತ್ತಿ ಹರಸಿದರು.

ಗೋಪಾಲನ ಹಿರಿಯ ಅಣ್ಣ ಅತ್ತಿಗೆ, ಶಾಂತಳನ್ನ ಹಸೆಮಣೆಯ ಮೇಲೆ ಕೂರಿಸಿ, ಸೀರೆಯನ್ನ ಕೊಟ್ಟರು. ಹೊಸ ಸೀರೆಯನ್ನ ಉಟ್ಟು ಬಂದು ಮತ್ತೆ ಕುಳಿತವಳ ಮಡಿಲನ್ನ ತುಂಬಿ, ಕಡಲೆ ಬೆಲ್ಲವನ್ನ ಸಂಪ್ರದಾಯದಂತೆ ಕೊಟ್ಟು ಆರತಿ ಎತ್ತಿ ಆಶೀರ್ವದಿಸಿದರು. ಇಷ್ಟೆಲ್ಲಾ ಮುಗಿಯುವ ಹೊತ್ತಿಗೆ, ಬಿಸಿಲಡಿಗೆ ಊಟದ ಸಮಯವಾಗಿತ್ತು. ಬೀಗರು, ಯಾರೂ ತಕರಾರು ಮಾಡದೇ ಊಟಕ್ಕೆ ಎದ್ದರು. ನಗೆಗಡಲನ್ನೆಬ್ಬಿಸುತ್ತ, ಸಂತಸದಿಂದ ತೃಪ್ತಿಯಿಂದ ಒಬ್ಬರಿಗೊಬ್ಬರು ಉಪಚಾರವನ್ನ ಮಾಡಿಕೊಳ್ಳುತ್ತ ಊಟ ಮಾಡಿದರು. ವರನನ್ನ ವಧುವನ್ನ ತಮಾಷೆ ಮಾಡಿ. ಸುಸ್ತು ಮಾಡಿದರು. ಹೆಣ್ಣಿನವರೂ ಆತುರಾತುರವಾಗಿ ಊಟ ಮುಗಿಸಿ, ಮಧ್ಯರಾತ್ರಿಯ ಹೊತ್ತಿಗೆ ಮಲಗುವ ಶಾಸ್ತ್ರವನ್ನು ಮಾಡಿದರು.

ಬೆಳಗಿನ ಝಾವಕ್ಕೆ ಮುಂಚೆಯೇ ಹೆಣ್ಣಿನ ಮನೆಯವರು ಎದ್ದರು. ಎರಡೂ ಮನೆಯ ಬಚ್ಚಲು ಮನೆಯ ಹಂಡೆಗಳ ನೀರು ಕುದಿಯುತ್ತಿತ್ತು. ಅಡಿಗೆಯವರು ಸ್ನಾನ ಮಾಡಿ, ಮೊದಲು ಕಾಫಿಯನ್ನ ತಯಾರಿಸಿ, ಎಲ್ಲರನ್ನ ಎಬ್ಬಿಸಿ ಕೊಡುತ್ತಿದ್ದರು. ಮದುವೆ ಮನೆಯ ಗದ್ದಲ ಪ್ರಾರಂಭವಾಗಿ, ಒಬ್ಬೊಬ್ಬರಾಗಿ ಎಲ್ಲರೂ ಎದ್ದು ಕಾಫಿ ಕುಡಿದರು. ಕೆಲವು ನೆಂಟರು, ರಾತ್ರಿಯ ಪ್ರಯಾಣ ಮಾಡಿ, ಬಂದಿಳಿದಿದ್ದರು.

ಮೊದಲಿಗೆ, ಮದುಮಕ್ಕಳನ್ನ ಎಬ್ಬಿಸಿ, ಹಸೆಗೆ ಕರೆದ ಹಾಡನ್ನ ಹಾಡಿ, ಹಸೆಮಣೆ ಮೇಲೆ ಕೂರಿಸಿ ಆರತಿ ಎತ್ತಿ ಎಣ್ಣೆ ಶಾಸ್ತ್ರವನ್ನ ಮಾಡಿದರು. ನಂತರ ಮಂಗಳ

ಸ್ನಾನವನ್ನ ಮಾಡಿಸಿದರು. ಶಾಂತ, ಒದ್ದೆಯಾಗಿದ್ದ ತಲೆಕೂದಲನ್ನ ಒಣಗಿಸಿಕೊಂಡಳು. ನಾಗಲಕ್ಷ್ಮಿ ಚೌರಿ ಹಾಕಿ ಜಡೆ ಹೆಣೆದು, ಕುಚ್ಚನ್ನ ಸೇರಿಸಿದಳು. ಜಡೆ ಬಿಲ್ಲೆಯನ್ನ ಸಿಕ್ಕಿಸಿ ಹೂವನ್ನ ಮುಡಿಸಿದಳು.

"ತುಂಬಾ ಹೂವನ್ನ ಮುಡಿಸ್ಬೇಡಿ ಅತ್ತೆ. ತಲೆ ನೋಯುತ್ತೆ."

"ಹಾಗೆಲ್ಲ ಹೇಳ್ಬಾರ್ದು. ಹೂವು ಏನು ಮಹಾಭಾರವಾಗಿರುತ್ತೆ. ಹೂ ಮುಡಿದಷ್ಟು ಲಕ್ಷಣವಾಗಿ ಕಾಣ್ತೀಯ" ಎನ್ನುತ್ತ ಮುಖಕ್ಕೆ ಸ್ನೋ ಪೌಡರನ್ನ ಹಚ್ಚಿ ಬೆಲ್ಲದಲ್ಲಿ ಪುಡಿ ಕುಂಕುಮವನ್ನ ಕಲೆಸಿ, ಹಣೆಯ ಮಧ್ಯದಲ್ಲಿ, ಚಂದ್ರಾಕಾರವಾಗಿ ಇಟ್ಟು, ಅದರ ಕೆಳಗೆ, ಚಂದ್ರದ ಬೊಟ್ಟನ್ನ ಇಟ್ಟು ಅಲಂಕರಿಸಿದಳು. "ಕಣ್ಣಿಗೆ ಕಪ್ಪನ್ನ ನೀನೇ ಹಚ್ಕೋ–ನಾನು ಹಚ್ಚಿದರೆ ಉರಿಯುತ್ತೆ" ಎಂದಳು.

ಶಾಂತ ಕನ್ನಡಿಯನ್ನ ಹಿಡಿದು, ಕಪ್ಪನ್ನ ಕಣ್ಣಿಗೆ ನವಿರಾಗಿ ಬಳಿದುಕೊಂಡಳು. ಅಲಂಕಾರ ಅತಿಯಾಗಿತ್ತೆನಿಸಿತು. "ಅತ್ತೆ. ನಂಗೆ ಈ ಅಲಂಕಾರ ಒಪ್ಪಲ್ಲ... ಎಲ್ಲರೆದುರಿಗೆ ಹೋಗೋಕೆ ನಾಚ್ಕೆ ಆಗುತ್ತೆ."

"ಯಾರೂ ನಿನ್ನ ಅಲಂಕಾರಾನ ನೋಡುಲ್ಲ. ನಿನ್ನನ್ನ ನೋಡ್ತಾರೆ. ಸೀರೇನ ನೀನೇ ಉಟ್ಕೋತೀಯೋ ನಾನೇ ಉಡಿಸ್ಲೋ...?"

"ನಾನೇ ಉಟ್ಕೋತೀನಿ.... ನೀವು ಹೊರಕ್ಕೆ ಹೋಗಿ."

"ನಿಂಗೆ ನಾಚ್ಕೆ... ಈ ನಾಚ್ಕೆ ಗೀಚ್ಕೆ ಎಲ್ಲಾ ಇವತ್ತಿಗೇ ಕೊನೆ..." ಗೇಲಿ ಮಾಡಿ ನಕ್ಕಳು. ಶಾಂತಳ ಮುಖ ಕೆಂಪೇರಿತು. ನಾಗಲಕ್ಷ್ಮಿ ನೆರಿಗೆಗಳನ್ನ ಸರಿ ಮಾಡಿ, ಸೆರಗನ್ನ ಬಿಗಿಯಾಗಿ ಹೊದೆಸಿದಳು. ಗಂಡಿನವರು ತಂದಿದ್ದ ಮೇಲು ಹೊದಿಕೆಯ ಸೀರೆಯ ಮಡಿಕೆಯನ್ನ ಹೊದೆಸಿ, ಒಂದು ಪಿನ್ನ ಹಾಕಿದಳು. "ಸ್ವಲ್ಪ ಹಾಲನ್ನ ಕುಡಿದು ಬಿಡು. ಗೌರಿಪೂಜೆಗೆ ಕೂತ್ಕೊಳ್ಳುವಂತೆ" "ನಾರಾಯಣ ಸ್ವಲ್ಪ ಸಕ್ಕರೆ ಹಾಕಿದ, ಕೇಸರಿ ಬೆರೆಸಿದ ಹಾಲನ್ನ ಶಾಂತಂಗೆ ತಂದುಕೊಡು." ಮೈದುನಂಗೆ ಹೇಳಿದಳು. ನಾರಾಯಣ ಅತ್ತಿಗೆಯ ಉತ್ಸಾಹವನ್ನ ಅಚ್ಚರಿಯಿಂದ ನೋಡಿದ. ಸಾತಕ್ಕ ಆಡಿದ ಮಾತುಗಳು ನೆನಪಾಗಿದ್ದವು.

ಮನೆಯಂಗಳದಲ್ಲಿ ಬಿಟ್ಟ ಹೂಗಳನ್ನು ಕೊಯ್ದು, ಬುಟ್ಟಿಗಳಲ್ಲಿ ತುಂಬಿಸಿಕೊಂಡು ತಂದಿದ್ದ ವೈಕುಂಠ. ನಂಜುಂಡನೂ ಜೊತೆಗಿದ್ದ.

"ಕೃಷ್ಣ ಹೊರಡ್ಲೇ ಇಲ್ವಾ? ಬಲವಂತ ಮಾಡಿ ಎಳ್ಕೊಂಡು ಬರಬೇಕಾಗಿತ್ತು." ನಾರಾಯಣ ಕೇಳಿದ.

"ಅವನು ಹಠ ಮಾರಿ. ಯಾರ ಮಾತಿಗೂ ಬಗ್ಗೋನಲ್ಲ. ಸಾತಕ್ಕ ಒಬ್ಬರೇ ಆಗ್ತಾರೆ. ಇರ್ತೀನಿ ಅಂತ ಅಂದ್ಬಿಟ್ಟ.... ಅತ್ತಿಗೆ, ಅಣ್ಣ ಯಾವಾಗ ಬಂದ್ರು?"

"ನೆನ್ನೆ ರಾತ್ರೀನೇ ಬಂದ್ರು. ಅತ್ತಿಗೆ ಸಂಭ್ರಮದಿಂದ ಓಡಾಡ್ತಿದಾರೆ. ಅಕ್ಕಂಗೆ

ಬಹಳ ಖುಷಿ..." ವೈಕುಂಠ ತಾನು ತಂದಿದ್ದ ಹಾಲಿನ ಕ್ಯಾನ್‌ಗಳನ್ನ ಅಡಿಗೆ ಮನೆಗೆ ಒಯ್ದು ಕೊಟ್ಟ. ನಂಜುಂಡನೂ ಕೆಲಸಗಳಿಗೆ ಸಹಾಯಕನಾದ.

ಮೊದಲಿಗೆ ಬೀಗರ ಮನೆಯವರಿಗೆ ಕಾಫಿ ತಿಂಡಿಯ ಉಪಚಾರ ಆಯಿತು. ಗೋಪಾಲ, ಕಚ್ಚೆ ಪಂಚೆಯನ್ನುಟ್ಟು ಶಲ್ಯವನ್ನ ಹೊದ್ದು, ಪೇಟವನ್ನು ಧರಿಸಿ, ಹೊಸ ಚಪ್ಪಲಿಯನ್ನ ಮೆಟ್ಟಿ, 'ಕಾಶಿಯಾತ್ರೆ'ಗೆ ಹೊರಟ. ಸುಬ್ಬರಾಯನೇ ಹೊಸ ಛತ್ರಿಯನ್ನು ಹಿಡಿದ. ಶಾಸ್ತ್ರಿ ಗೋಪಾಲನನ್ನು, ಕುರ್ಚಿಯ ಮೇಲೆ ಕೂರಿಸಿ, ಬೆಳ್ಳಿಯ ತಟ್ಟೆಗಳಲ್ಲಿ ಕಾಲನ್ನಿಟ್ಟು ತೊಳೆದು, ಉಪಚರಿಸಿ, ಮಗಳನ್ನ ಕೊಟ್ಟು ಮದುವೆ ಮಾಡ್ತೀನಿ ಎಂದು ಸಾಂಪ್ರದಾಯಿಕವಾಗಿ ಹೇಳಿ, ವರನನ್ನ ಮದುವೆಮಂಟಪಕ್ಕೆ ಕರೆತಂದ.

'ಗೌರಿಪೂಜೆ'ಯನ್ನ ಮಾಡಿ, ಹಿರಿಯ ಮುತ್ತೈದೆಯರಿಬ್ಬರಿಗೆ ಮರದ ಬಾಗಿನ ಗಳನ್ನು ಕೊಟ್ಟು, ಮಂಟಪಕ್ಕೆ ಬರಲು ಸಿದ್ಧಳಾಗಿ ನಿಂತಿದ್ದ ಶಾಂತಳನ್ನ ಸುಬ್ಬರಾಯ ನಡೆಸಿಕೊಂಡು ಮಂಟಪಕ್ಕೆ ಕರೆತಂದ. ಅಷ್ಟರಲ್ಲಿ ವಧೂವರರ ನಡುವೆ ಅಂತರ ಪಟವನ್ನು ಒಬ್ಬರ ಮುಖ ಒಬ್ಬರಿಗೆ ಕಾಣದಂತೆ ಎತ್ತರಕ್ಕೆ ಹಿಡಿದಿದ್ದರು. ಪುರೋಹಿತರು, ವೇದಘೋಷ ವನ್ನ ಮಾಡುತ್ತಿದ್ದರು. ವರನ ಕಡೆಯವರು, ವರನನ್ನ, ವಧೂ ಕಡೆಯವರು, ಶಾಂತಳನ್ನು ಜೀರಿಗೆ ಬೆಲ್ಲವನ್ನ ನೀನು ಮೊದಲು ಹಾಕು, ನೀನು ಮೊದಲು ಹಾಕು ಎಂದು ಹುರಿದುಂಬಿಸುತ್ತಿದ್ದರು. ಗೋಪಾಲ ಆ ಶುಭಘಳಿಗೆ ಗಾಗಿ ಕಾಯುತ್ತಿದ್ದ. ಶಾಂತ ತಲೆತಗ್ಗಿಸಿ ನಿಂತಿದ್ದಳು. ಅಂತರಪಟ ಸರಿಯಿತು. ಗೋಪಾಲ ಶಾಂತಳ ತಲೆಯ ಮೇಲೆ ಜೀರಿಗೆ ಬೆಲ್ಲವನ್ನ ಹಾಕಿದ್ದ. ಅವನ ಕಡೆಯವರು 'ಹೋ' ಎಂದು ಕೂಗಿ, ಕರತಾಡನ ಮಾಡಿದ್ದರು.

ನಂತರ ವಧೂವರರು, ಹೂವಿನ ಮಾಲೆಯನ್ನ ಪರಸ್ಪರ ಅದಲು ಬದಲು ಮಾಡಿಕೊಂಡರು. ಅಕ್ಕಿಯ ಧಾರೆಯನ್ನು ಒಬ್ಬರ ತಲೆಯ ಮೇಲೆ ಇನ್ನೊಬ್ಬರು ಹಾಕಿದರು. ಆ ನಂತರ ಧಾರೆ ಮುಹೂರ್ತದ ಸಮಯ, ವರನ ಕೈಯ ಮೇಲ ವಧೂ ಕೈಯನ್ನಿಟ್ಟು, ಶಾಸ್ತ್ರಿ ಹಾಗೂ ಲಕ್ಷ್ಮಿ ಧಾರೆ ಎರೆದುಕೊಟ್ಟು ಕನ್ಯಾದಾನವನ್ನು ಮಾಡಿದ್ದರು. ಇಬ್ಬರ ಕಣ್ಣಿನಲ್ಲೂ ನೀರು ಜಿನುಗಿತು.

ನಂತರ ಇಬ್ಬರನ್ನು ಒಂದೇ ಹಸೆ ಮಣೆಯ ಮೇಲೆ ಕೂರಿಸಿ, ಕೆಲವಾರು ಶಾಸ್ತ್ರಗಳ ನಂತರ, ಗೋಪಾಲನ ಕೈಯಲ್ಲಿ ಶಾಂತಳ ಕೊರಳಿಗೆ ಮಾಂಗಲ್ಯ ಧಾರಣೆಯನ್ನ ಮಾಡಿಸಿದರು. ಮುತ್ತೈದೆಯರು ಮಾಂಗಲ್ಯದ ಗಂಟೆಗೆ ಅರಿಶಿನ ಕುಂಕುಮವನ್ನಿಟ್ಟು "ದೀರ್ಘಸುಮಂಗಲಿ"ಯಾಗು ಎಂದು ಹರಸಿದರು. ಗೋಪಾಲ ಆಗಾಗ್ಗೆ ಕದ್ದು ಕದ್ದು ತನ್ನ ಮಡದಿಯ ಕಡೆ ನೋಡುತ್ತಿದ್ದ. ಶಾಂತ ಬಗ್ಗಿಸಿದ ಕತ್ತನ್ನು ಎತ್ತಿರಲಿಲ್ಲ. ಹದಿನಾರು ಮೊಳದ ದೊಡ್ಡಸೀರೆ, ಹೂವಿನಿಂದ ಆವೃತವಾಗಿದ್ದ ಜಡೆಯಭಾರ, ಅವಳಿಗೆ ಸಾಕೆನ್ನಿಸಿತು. ಆಹ್ವಾನಿತರಲ್ಲಿ ಕೆಲವರು, ತಾವು ತಂದಿದ್ದ

ಉಡುಗೊರೆಗಳನ್ನ ಇತ್ತು ಶುಭ ಕೋರಿದ್ದರು.

ನಂತರ ಮೇಲು ಹೊದಿಕೆಯ ಸೀರೆಯುನ್ನು ಉಟ್ಟು ಬಂದಳು. ನಾಗೋಲಿಯ ಶಾಸ್ತ್ರ ಪ್ರಾರಂಭವಾಗಿತ್ತು. ಉಪ್ಪಿನ ಆನೆ, ಅಕ್ಕಿಯ ಆನೆಯನ್ನು ಸಾಂಕೇತಿಕವಾಗಿಟ್ಟು ಕೊಂಡು ಉರುಟಣೆಯ ಶಾಸ್ತ್ರವನ್ನು ಮಾಡಿದರು. ಗೋಪಾಲ ಶಾಂತಳ ಕೈ ಹಿಡಿದು, ಸಪ್ತಪದಿಯನ್ನು ತುಳಿದು ಅಗ್ನಿಯ ಸುತ್ತ ಸುತ್ತಿ ಬಂದ. ಪತಿಯಾಗಿ ತನ್ನ ಕರ್ತವ್ಯಗಳನ್ನು ನಿಭಾಯಿಸುತ್ತೇನೆಂದು ವಚನವನ್ನಿತ್ತ. ನಂತರ ಶಾಂತಳ ಸರದಿ. ಪತ್ನಿಯಾಗಿ ತಾನು ತನ್ನ ಧರ್ಮಗಳನ್ನು ಪಾಲಿಸುತ್ತೇನೆಂದೂ ಅವಳೂ ವಚನವನ್ನಿತ್ತಳು. ಪತಿಪತ್ನಿಯರು, ಲಾಜಾ ಹೋಮವನ್ನು ಮಾಡಿ, 'ಭೂಮದೂಟ'ಕ್ಕೆ ಕುಳಿತರು. ಈ ವೇಳೆಗಾಗಲೇ ಸಾಕಷ್ಟು ಹೊತ್ತಾಗಿತ್ತು. ಉಳಿದವರೂ ಊಟ ಮಾಡ ಬೇಕಾಗಿದ್ದುದರಿಂದ ಭೂಮದ ಊಟಕ್ಕೆ ಹೆಚ್ಚು ಮಹತ್ವ ಸಿಗಲಿಲ್ಲ. ಗೋಪಾಲನಿಗ ಪಿಚ್ಚೆನ್ನಿಸಿತು. ಜೋಡಿಸಿಹಾಕಿದ ಎಲೆಯ ಮೇಲೆ ಬಡಿಸಿದ ಭಕ್ಷ್ಯಗಳು, ಎಲೆಯ ಮುಂದೆ ಹಚ್ಚಿಟ್ಟ ಮಂಗಳ ದೀಪದ ಕಂಭಗಳು, ಹಾಕಿದ್ದ ಬಣ್ಣದ ರಂಗೋಲಿ, ಅವನನ್ನು ಉತ್ಸಾಹಗೊಳಿಸಿತು. ಆದರೆ ಹುರಿದುಂಬಿಸುವ ಗೆಳೆಯರ್‍ಯಾರೂ ಇರಲಿಲ್ಲ. ಆ ನೀರಸದ ನಡುವೆಯೂ, ಪಾಯಸವನ್ನು ಬಡಿಸಲು ಬಂದ ಲಕ್ಷ್ಮಿಯ ಕೈಯನ್ನು ಎಂಜಲ ಕೈಯಲ್ಲಿ ಹಿಡಿದ. ಲಕ್ಷ್ಮಿ ನಾಚಿದರೂ, ಗಂಡನ ಹೆಸರನ್ನ ಹೇಳಿದ್ದಳು. ಶಾಸ್ತ್ರಿ ಅಲ್ಲಿ ಎಲ್ಲಿಯೂ ಕಾಣಲೇ ಇಲ್ಲ.

ಆ ನಂತರ, ಮಗಳನ್ನ ಮನೆ ತುಂಬಿಸಿ ಕಳಿಸುವ ಶಾಸ್ತ್ರ. ಎಲ್ಲರ ಊಟದ ನಂತರ ಮತ್ತೊಮ್ಮೆ ಬೀಗರನ್ನ ಉಡುಗೊರೆ, ಫಲತಾಂಬೂಲಗಳೊಂದಿಗೆ ಮರ್‍ಯಾದೆ ಮಾಡಿ, ಮಗಳನ್ನ ಅವರ ಮನೆಗೆ ಕಳಿಸಿಕೊಟ್ಟರು. ಶಾಸ್ತ್ರಿ ಭಾವನ ತೊಡೆಯ ಮೇಲೆ ಮಗಳನ್ನು ಕೂರಿಸಿ ಒಪ್ಪಿಸಿ ಕೊಟ್ಟ, "ಶಾಂತ ಇನ್ನೂ ಚಿಕ್ಕವಳು ಭಾವ... ಅಕ್ಕನೂ ಇಲ್ಲದ ಮನೆ... ಅವಳಿಂದ ಏನಾದರೂ ತಪ್ಪುಗಳು ನಡೆದರೆ ನೀವೇ ತಿಳುವಳಿಕೆ ಹೇಳಬೇಕು. ಇನ್ನು ಮುಂದೆ ಅವಳು ನಿಮ್ಮ ಮಗಳು." ಶಾಂತ ಬೆವೆತು ತೊಪ್ಪೆಯಾಗಿದ್ದಳು. ನಾಚಿಕೆಯಿಂದ ಕುಗ್ಗಿಹೋದಳು. ಗೋಪಾಲನ ತೊಡೆಯ ಮೇಲೆ ಕೂತಾಗಲಂತೂ, ಇದೆಂಥಾ ಪರೀಕ್ಷೆಯಪ್ಪಾ ಎನ್ನಿಸುವಷ್ಟು ಚಡಪಡಿಸಿದಳು. ಆ ಸಮಯವೂ ಕಳೆಯಿತು. ಶಾಂತ, ಶಾಸ್ತ್ರೋಕ್ತವಾಗಿ, ಸಾಂಪ್ರದಾಯಿಕವಾಗಿ, ಸಾಮಾಜಿಕವಾಗಿ ಗೋಪಾಲನ ಧರ್ಮಪತ್ನಿ ಆದಳು. ಲಕ್ಷ್ಮಿ ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಳು. ಸಧ್ಯ ಮದುವೆ ಮಾಡಿ ಗೆದ್ದೆವು ಎಂದು ಸಂತಸಗೊಂಡಳು. ಶಾಂತ ಹಿರಿಯರೆಲ್ಲರಿಗೂ ನಮಸ್ಕರಿಸಿ ಆಯಾಸಗೊಂಡಳು. ಲಕ್ಷ್ಮಿ ಸಂತೃಪ್ತಿಯಿಂದ ಮಗಳ ನ್ನೊಮ್ಮೆ ನೋಡಿದಳು. ಅತ್ತಿಗೆ ಎಷ್ಟು ಚೆನ್ನಾಗಿ ಅಲಂಕಾರ ಮಾಡಿದಾಳೆ. ಎಲ್ಲರ ದೃಷ್ಟಿಯೂ ತಾಕಿದೆ. ಆಮೇಲೆ ದೃಷ್ಟಿ ನೀವಾಳಿಸಬೇಕು ಎಂದುಕೊಂಡು, ಮತ್ತೊಮ್ಮೆ

ಮೇಲಿನಿಂದ ಕೆಳಕ್ಕೆ ನೋಡಿದಳು. ಕಾಲಿನ ಬಳಿ ಅವಳ ನೋಟ ಹರಿಯುತ್ತಿದ್ದಂತೇ ಎದೆ ಧಸಕ್ಕೆಂದಿತು. ಕಾಲುಂಗುರಗಳು ನಾಪತ್ತೆ! ಇವತ್ತಿನ್ನೂ ನಾಗೋಲಿಯ ಶಾಸ್ತ್ರವಾಗಿದೆ. ಸಪ್ತಪದಿ ತುಳಿಯುವಾಗ, ಎಲ್ಲೋ ಅಲ್ಲೇ ಕಳಚಿ ಬಿದ್ದಿರಬೇಕು. ಎಂಥಾ ಹುಡುಗಿ? ಅಷ್ಟು ಗೊತ್ತಾಗ್ಲಿಲ್ವೇ? ಅಥವಾ ಗೊತ್ತಾದರೂ ನಾಚಿಕೆಯಿಂದ ಸುಮ್ಮನಿದ್ದು ಬಿಟ್ಟಳೇ...? ಎಂದುಕೊಂಡು ನಾರಾಯಣನನ್ನೂ ಕರೆದಳು. ಶಾಂತಳ ಬೆಳ್ಳಿಯ ಕಾಲುಂಗುರಗಳು ಹಸೆಮಣೆಯ ಬಳಿ ಎಲ್ಲೋ ಬಿದ್ದು ಹೋಗಿರಬೇಕು. ಸ್ವಲ್ಪ ಹುಡುಕ್ತೀಯಾ? ಎಲ್ಲರಿಗೂ ಗೊತ್ತಾದರೆ ಅಪಶಕುನ ಅಂತ ಅಂದ್ಕೋತಾರೆ."

"ಒಂದು ಬೆರಳಿನ ಕಾಲುಂಗುರ ಬಿದ್ದು ಹೋಗಿದೆಯೋ? ಅಥವಾ ಎರಡೂ ಬಿದ್ದು ಹೋಗಿದೆಯಾ?" ಅವನು ಜಾಣನಂತೆ ಪ್ರಶ್ನಿಸಿದ.

"ಎರಡೂ ಇಲ್ಲ. ಎಲ್ಲೋ ಅಳ್ಳಕವಾಗಿತ್ತು ಅಂತ ಕಾಣುತ್ತೆ. ಬೇಗ ಹೋಗಿ ಹುಡುಕು. ಪುರೋಹಿತರು ಇನ್ನೂ ಅಲ್ಲೇ ಇದಾರೆ." ನಾರಾಯಣ ಮಂಟಪಕ್ಕೆ ಬಂದು ಕೈಗಳಿಂದ ತಡಕಾಡಿದ. ಉಪ್ಪಿನ ಆನೆ, ಅಕ್ಕಿಯ ಆನೆಗಳ ಮೇಲೆ ಬೆರಳಾಡಿಸಿ ನೋಡಿದ. ಹಸೆಮಣೆಗಳನ್ನು ಎತ್ತಿ ನೋಡಿದ.

"ಏನು ಹುಡುಕ್ತಿದೀಯಪ್ಪಾ?" ಪುರೋಹಿತರು ಕೇಳಿದಾಗ ಅವನಿಗೆ ತಬ್ಬಿಬ್ಬಾಯಿತು.

"ಏನಿಲ್ಲ" ಎಂದು ಹೇಳಿ ಅಲ್ಲಿಂದ ಅಕ್ಕನ ಬಳಿಗೆ ಬಂದ. ಅಲ್ಲಿ ಎಲ್ಲೂ ಬಿದ್ದಿಲ್ಲ, ಅಕ್ಕ." ಒಂದಾದ್ರೂ ಸಿಗಬೇಕಾಗಿತ್ತು ಅಲ್ವಾ!"

"ಹೌದಲ್ವಾ... ತಡೀ ಅವಳನ್ನೇ ಏನಾಯ್ತು ಅಂತ ಕೇಳೋಣ. ಆದರೆ ಈಗ ಹೇಗೆ ಅವಳನ್ನ ಕರೆಯೋದು! ಅವರುಗಳು ಏನಂದುಕೊಳ್ತಾರೆ!..."ಅಷ್ಟರಲ್ಲಿ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಓಡುತ್ತಿದ್ದ ಹುಡುಗಿಯರನ್ನ ಕಂಡಳು. ಬಳಿಗೆ ಕರೆದಳು ಶಾಂತನ್ನ ಸ್ವಲ್ಪ ಕಳಿಸ್ಬೇಕಂತೆ ಅಂತ ಗೋಪಾಲಂಗೆ ಹೇಳಿ, ಅವಳನ್ನ ಕರ್ಕೊಂಡು ಬರ್ತೀಯಾ?" ಆ ಹುಡುಗಿ ಓಡಿದಳು.

"ಶಾಂತನ್ನ ಸ್ವಲ್ಪ ಕಳಿಸ್ಬೇಕಂತೆ, ಅವರು ಕರೀತಿದಾರೆ." ಕೈ ತೋರಿದಳು.

"ಸ್ವಲ್ಪ ಬೇಕಂತೋ? ಪೂರ್ತಿ ಬೇಡವಂತೋ?" ಅವನು ತಮಾಷೆ ಮಾಡಿದ. ಶಾಂತ, ಲಕ್ಷ್ಮಿಯ ಸನ್ನೆಯನ್ನರಿತು ಎದ್ದಳು.

"ಅಮ್ಮ ಕರೀತಿದಾಳೆ. ಹೋಗ್ಬರ್ತೀನಿ." ಎಂದಳು.

"ಬೇಗ ಬಾ...." ಅವನ ಸಂಗಡಿಗರು ಹೋ ಎಂದು ನಕ್ಕರು. ಶಾಂತ ಅಮ್ಮನ ಬಳಿಗೆ ಬಂದಳು.

"ಏನಮ್ಮ ನಿಂದು? ಅವರೆಲ್ಲಾ ತಮಾಷೆ ಮಾಡ್ತಿದಾರೆ" ಸಿಡುಕಿದಳು.

"ನಿನ್ನ ಕಾಲುಂಗುರಗಳು ಎಲ್ಲಿ ಬಿದ್ವೆ? ಅಳಂಕವಾಗಿದ್ವಾ?" ಪಿಸುದನಿಯಲ್ಲಿ

ಕೇಳಿದಳು.

"ನಾನು ಹಾಕ್ಕೊಂಡೇ ಇಲ್ಲ." ಅವಳು ಅಷ್ಟೇ ಶಾಂತವಾಗಿ ಹೇಳಿದಳು. ಲಕ್ಷ್ಮಿ ನಾರಾಯಣನ ಕಡೆ ನೋಡಿದಳು.

"ಯಾಕೇ... ನಾಗೋಲಿ ಆದ್ಮೇಲೆ, ಗೋಪಾಲ ನಿನ್ನ ಕಾಲಿನ ಬೆರಳಿಗೆ ಕಾಲುಂಗುರಗಳನ್ನು ತೊಡಿಸ್ಲಿಲ್ವಾ?..."

"ಇಲ್ಲ. ಈ ತಾಳೀನ ಮಾತ್ರ ಕಟ್ಟಿದ." ಲಕ್ಷ್ಮಿ ಅರಿಶಿನದ ದಾರಗಳಲ್ಲಿ ಕಟ್ಟಿದ ತಾಳಿಗಳನ್ನ ನೋಡಿದಳು. ಹೊಳಪೇ ಇರಲಿಲ್ಲ. ಹಳೆಯ ತಾಳಿಗಳೆಂದು ನೋಡಿದ ತಕ್ಷಣ ಗೊತ್ತಾಗುವಂತಿತ್ತು. ಇದು ಸುಂದರಿ ಅತ್ತಿಗೆಯ ತಾಳಿಗಳು. ಅವಳು ಹೋದದ್ದು ಮುತ್ತೈದೆಯಾಗಿ. ಆ ತಾಳಿಗಳನ್ನೇ ಸೊಸೆಗೆ ಇಟ್ಟಿದಾರೆ. ಆದರೆ ಎಂಥಾ ಜನ! ಒಂದು ಪಾಲಿಷ್‌ನ್ನಾದರೂ ಹಾಕಿಸಬಾರದಾಗಿತ್ತ? ಯಾರಿಗೂ ಆಸಕ್ತಿಯೇ ಇಲ್ಲ. ಅಥವಾ ತಿಳುವಳಿಕೆಯಾದರೂ ಬೇಡ್ವಾ! ಸುಂದರಿಯ ದೇಹದಿಂದ ಕಾಲುಂಗುರವನ್ನು ತೆಗೆಯಲೇ ಇಲ್ಲವೇನೋ? ಅದಕ್ಕೆ ಅದನ್ನ ತಂದೇ ಇಲ್ಲ. ಸೀರೆಗಳೂ ಸುಂದರಿಯದೇ ಇರಬಹುದು ಅಂತ ಅಂದುಕೊಂಡಾಗ ಮನಸ್ಸು ಖತಿಗೊಂಡಿತು. ಒಂದು ವರ್ಷ ಸಮಯ ಇತ್ತು. ನಾವುಗಳಂತೂ, ಒಂದೊಂದನ್ನೂ ಹೊಸದಾಗಿ ಮಾಡಿ ಅಕರಾಸ್ತೆ ಪಟ್ಟವು... ಛೆ."

"ಯಾಕಮ್ಮ. ಏನಾಯ್ತು?..."

"ಏನಿಲ್ಲ. ಹೊಸದಾಗಿ ಮದುವೆಯಾದವಳು. ಕಾಲುಂಗುರಗಳು ಇಲ್ಲದೇ ಓಡಾಡಬಾರದು. ನಾರಾಯಣನ ಹತ್ತಿರ ತರಿಸ್ತೀನಿ. ಹಾಕ್ಕೊಂಡು ಬಿಡು. ಯಾರಿಗೂ ಗೊತ್ತಾಗೋದೇ ಬೇಡ... ನಾರಾಯಣ, ಈಗಲೇ ರಾಮಪ್ಪನ ಬೆಳ್ಳಿ ಅಂಗಡಿಗೆ ಹೋಗಿ ಬಂದು ಜೊತೆ ಬೆಳ್ಳಿ ಕಾಲುಂಗುರಗಳನ್ನು ಕೊಂಡ್ಕೊಂಡು ಬಾ... ಭಾವನ ಹತ್ರ ದುಡ್ಡಿಸ್ಕೋ."

"ಪರವಾಗಿಲ್ಲ ಅಕ್ಕ. ನನ್ಹತ್ರ ದುಡ್ಡಿದೆ. ನಾರಾಯಣ ತಕ್ಷಣವೇ ಪೇಟೆಯ ಕಡೆ ಹೊರಟ."

"ಅಮ್ಮಾ... ನಾನು ನಾಗವೇಣಿ ಅತ್ತಿಗೇನ ಕೇಳ್ಲಾ?"

"ಏನೂ ಬೇಡ. ಸುಮ್ಮನೆ ಒಬ್ಬರಿಂದ ಒಬ್ಬರಿಗೆ ತಿಳಿದು, ಅದೇ ಒಂದು ದೊಡ್ಡ ವಿಷಯವಾಗುತ್ತೆ. ಈಗ ಇನ್ನೇನು ನಾರಾಯಣ ತಂದುಕೊಡ್ತಾನಲ್ಲ. ಶಾಂತ ಪೆಚ್ಚಾದಳು." "ನೀನು ಪೆಚ್ಚು ಮುಖ ಹಾಕ್ಕೋಬೇಡ." ಗದರಿದಳು.

"ನೀನು, ಇವತ್ತು ನನ್ನನ್ನ ಬೈಯಬೇಡ. ನಂದೇನು ತಪ್ಪು?"

"ಅವರೆಲ್ಲಾ ಈ ಕಡೆಯೇ ನೋಡ್ತಿದಾರೆ. ನೀನು ಹೋಗು." ಶಾಂತ ಹೋಗದೇ ಅಳುತ್ತ ನಿಂತಳು. ಬೆಳಗ್ಗಿನಿಂದ ಕಟ್ಟಿಕೊಂಡಿದ್ದ ಕಣ್ಣೀರು ಹರಿಯಲಾರಂಭಿಸಿತು.

"ಶಾಂತ ಅಳ್ತಿದಾಳೆ...." ಗೋಪಾಲ ಎದ್ದ. ತಮ್ಮ ಎಳೆದು ಕೂರಿಸಿದ.

"ಓ.ಹೋ. ಪ್ರೀತಿ ಎಳೀತಿದೆ ಕೂತ್ಕೋ. ತವರು ಮನೆಯನ್ನ ಬಿಟ್ಟು ಹೊರಡುವಾಗ ಎಲ್ಲಾ ಹೆಣ್ಮಕ್ಳೂ ಅಳ್ತಾರಪ್ಪಾ... ನೀನು ಹೋಗಿ ಏನ್ಮಾಡ್ತೀಯ?"

"ನಿಂಗ್ಮಹಾ ಗೊತ್ತು... ಸುಮ್ನಿರಪ್ಪಾ..."

"ಅಕ್ಕ ಹೇಳಿದ್ಲು.... ಅತ್ತಿಗೇನ ಸುಮ್ಮನೇ ಬಿಟ್ಬಿಡು. ಅವರೇ ಸಮಾಧಾನ ಮಾಡ್ಕೋತಾರೆ." ಶಾಂತ, ಅಲ್ಲಿದ್ದ ಕೊಠಡಿಯೊಳಕ್ಕೆ ಹೊರಟು ಹೋಗಿದ್ದಳು.

"ಮುಖ ತೊಳ್ಕೊಂಡು ತಲೆ ಬಾಚ್ಕೋ... ಬೇರೆ ಹಗುರವಾಗಿರೋ ಸೀರೇನ ಉಟ್ಕೋ. "ಲಕ್ಷ್ಮಿ ಮಗಳಿಗೆ ಹೇಳಿ, ಸೋಪನ್ನ ತಂದುಕೊಟ್ಟಳು. ಹತ್ತು ಹದಿನೈದು ನಿಮಿಷಗಳಲ್ಲಿ ನಾರಾಯಣ ವಾಪಸ್ಸಾಗಿದ್ದ. ಚೆನ್ನಾಗಿ ಸೋಪು ಹಾಕಿ ತಣ್ಣೀರಲ್ಲಿ ಮುಖ ತೊಳೆದು ತಲೆ ಬಾಚಿಕೊಳ್ಳುತ್ತಿದ್ದ ಶಾಂತಳ ಕೈಗೆ ಕಾಲುಂಗುರಗಳನ್ನು ಕೊಟ್ಟ.

"ಬೇಗ ಹಾಕ್ಕೊಂಡು ಬಿಡು." ಶಾಂತ ಹಾಕಿಕೊಳ್ಳಲು ಪ್ರಯತ್ನಿಸಿದಳು. ಸುಲಭವಾಗಿ ತೂರಲಿಲ್ಲ.

"ಅಮ್ಮನ್ನ ಕರಿ. ಯಾಕೋ ಆಗ್ತಿಲ್ಲ." ಅವನು ಹೊರಕ್ಕೆ ಹೋದ. ಶಾಂತಳ ಅತ್ತಿಗೆ ನಾಗವೇಣಿ ಬಂದಳು.

"ಏನ್ಮಾಡ್ತಿದೀಯ ಶಾಂತ? ಗೋಪಾಲನ ಸ್ನೇಹಿತರು ಹೊರಟಿದಾರೆ. ನಿನ್ನನ್ನ ಕೇಳ್ತಿದಾರೆ." ಅರ್ಧದೇಹವನ್ನ ಬಗ್ಗಿಸಿ, ಕಾಲಿನ ಬೆರಳಿಗೆ ಕಾಲುಂಗುರವನ್ನ ತೂರಿಸಲು ಪ್ರಯತ್ನಿಸುತ್ತಿದ್ದ ಶಾಂತ ನೆಟ್ಟಗೆ ನಿಂತಳು. ಕೈಯಲ್ಲಿದ್ದ ಉಂಗುರಗಳು ಕೆಳಕ್ಕೆ ಬಿದ್ದವು. ನಾಗವೇಣಿ ಕೈಗೆತ್ತಿಕೊಂಡಳು.

"ಹೊಸಾ ಬೆಳ್ಳಿಯ ಕಾಲುಂಗುರಗಳು? ಯಾರು ಕೊಟ್ಟರು?"

"ನಾರಾಯಣ ಮಾವ ತಂದುಕೊಟ್ಟ. ಅಮ್ಮ ಹೇಳಿದ್ಲು, ಮದುವೆಯಾದ ಹುಡುಗಿ ಹಾಗೇ ಓಡಾಡಬಾರದು ಅಂತ..."

"ಹೌದಾ? ನಮಗೆ ಗೊತ್ತಿರಲಿಲ್ಲ. ಇಲ್ದಿದ್ರೆ ನಾವೇ ತರ್ತಿದ್ವಿ" ಅಷ್ಟರಲ್ಲಿ ಲಕ್ಷ್ಮಿ ಬಂದಿದ್ದಳು.

"ನಾಗವೇಣಿ, ನೀವುಗಳು ಕಾಲುಂಗುರಾನ ತರೋದನ್ನ ಮರತೇ ಬಿಟ್ಟಿದ್ರಿ ಅಂತ ಕಾಣುತ್ತೆ. ಕೆಲವರಿಗೆಲ್ಲಾ ಅದೇ ದೊಡ್ಡ ವಿಷಯವಾಗಿ ಕಾಣುತ್ತೆ. ಆಕ್ಷೇಪಣೆ ಮಾಡ್ತಾರೆ. ಅದಕ್ಕೇ ತರಿಸ್ದೆ."

"ಒಳ್ಳೆ ಕೆಲಸ ಮಾಡಿದ್ರಿ ಅತ್ತೆ. ನಾವ್ಯಾರೂ ಅದರ ಬಗ್ಗೆ ಯೋಚಿಸ್ಲೇ ಇಲ್ಲ. ಅತ್ತಿಗೇರು ಸಹ ಹೇಳಲಿಲ್ಲ. ಅಮ್ಮ ಇದ್ದಿದ್ದರೆ ಹೀಗೆ ಅವಿವೇಕಗಳು ನಡೀತಿತ್ತಾ!... ಅವಳು ತಾಯಿಯನ್ನ ನೆನೆಸಿಕೊಂಡು ಕಣ್ಣೀರು ಸುರಿಸಿದಳು.

"ಅಮ್ಮ ಅನ್ನೋ ವಸ್ತು ಬಹಳ ದೊಡ್ಡದು ನಾಗವೇಣಿ. ಕಳ್ಕೊಂಡೋರ್ಗೆ ಅದರ ಬೆಲೆ ಗೊತ್ತಾಗೋದು." ಲಕ್ಷ್ಮಿ ತನ್ನ ತಾಯಿಯನ್ನ ನೆನೆಸಿಕೊಂಡಳು.

"ಚಿಕ್ಕಮ್ಮನೂ ಬರಲಿಲ್ಲವಲ್ಲ ಅತ್ತೇ... ಪಾರ್ವತಿ ಚಿಕ್ಕಮ್ಮ ಕಂಠಿ ಮಾವ ಯಾರೂ ಬರಲೇ ಇಲ್ಲ."

"ಈ ಚಿಕ್ಕಮ್ಮ, ಮಡಿ ಸರ ಹೋಗಲ್ಲ ಅಂತ ಬರ್ಲಿಲ್ಲ. ಪಾರ್ವತಿ ಹಸೀ ಮೈ ಬಾಣಂತಿ..."

"ಪಾರ್ವತಿ ಚಿಕ್ಕಮ್ಮಂಗೆ ತುಂಬಾ ಮಕ್ಕಳು ಅಲ್ವಾ ಅತ್ತೆ..." ನಮ್ಮಮ್ಮನ ಹಾಗೆ. "ನಾಗವೇಣಿ ತನ್ನ ಮಾತಿಗೆ ತಾನೇ ನಕ್ಕಳು... ಶಾಂತ ಕಷ್ಟಪಟ್ಟು ಕಾಲುಂಗುರವನ್ನ ಬೆರಳಿಗೆ ತೂರಿಸಿದ್ದಳು.

"ಅಮ್ಮ ಬಿಗಿ ಕಣಮ್ಮ... ಬಿಗೀತಾ ಇದೆ."

"ಓಡಾಡ್ತಾ ಓಡಾಡ್ತಾ ಸರಿ ಹೋಗುತ್ತೆ. ಬಿಗಿಯುತ್ತೆ ಅಂತ ತೆಗೀಬೇಡ.

"ಅತ್ತೆ ನಮ್ಮೂರ ಕಡೆ ಎಲ್ಲಾ ಈಗ ಮದುವೆಯಾದವರು ಕಾಲುಂಗುರ ಹಾಕ್ಕೊಳ್ಳೋದನ್ನೇ ಬಿಟ್ಟು ಬಿಟ್ಟಿದಾರೆ.... ಬೆರಳಿಗೆ ಒತ್ತುತ್ತಂತೆ."

"ಕಾಲುಂಗುರ ಒತ್ತುತ್ತೆ. ಕರಿಮಣಿ ಚುಚ್ಚುತ್ತೆ. ಎಲ್ಲಾ ಹಾಗೇನೇ... ವಯಸ್ಸಾದ ಮೇಲೆ ಮೈಮೇಲಿನ ಬಟ್ಟೆ ಕೂಡಾ ಭಾರ ಅಂತ ಅನ್ನಿಸುತ್ತೆ. ಹಾಗಂತ ನಮ್ಮ ಅಜ್ಜಿ ಹೇಳ್ತಿತ್ತು." ಆ ಮಾತಿಗೆ ಎಲ್ಲರೂ ನಕ್ಕರು.

"ಆಯ್ತೇನೆ ಶಾಂತಾ..." ಎನ್ನುತ್ತ ಒಳಬಂದ ನಾರಾಯಣ, ನಾಗವೇಣಿಯನ್ನ ನೋಡಿ ಹಾಗೇ ನಿಂತ.

"ನಿಂಗೊಬ್ಬ ತಮ್ಮ ಇದಾನೆ ಅಲ್ವಾ! ಅವನು ಬರಲಿಲ್ವಾ!"

"ಬಂದಿದಾನೆ. ಮದುವೆಗೆ ಬರಲಿಲ್ಲ ಅಷ್ಟೇ... ನಿಮ್ಮ ಚಿಕ್ಕಮ್ಮ ಒಂಟಿಯಾಗಿರ್ತಾರೆ ಅಂತ ಅವರ ಜತೆಗಿದಾನೆ." ನಾರಾಯಣ ಮಾತಾಡಲಿಲ್ಲ.

"ಅಣ್ಣ ಅತ್ತಿಗೆ ರಾತ್ರಿಯ ರೈಲಿಗೆ ಹೊರಡ್ತಾರಂತೆ. ಹಾಗಂತ ಭಾವನ ಹತ್ರ ಹೇಳ್ತಿದ್ರು." ನಾರಾಯಣ, ಲಕ್ಷ್ಮಿ ಇಬ್ಬರೂ ಹೊರಗೆ ನಿಂತುಕೊಂಡಿದ್ದರು. ನಾಗವೇಣಿ ಶಾಂತಳ ಬಳಿ ಬಂದು ಮೆಲ್ಲಗೆ ಹೇಳಿದಳು.

"ಈ ಕಾಲುಂಗುರದ ವಿಷಯಾನ ಗೋಪಾಲನಿಗೆ ಹೇಳ್ಬೇಡ. ಅವನು ಆಮೇಲೆ ನಮ್ಮನ್ನೇ ಬೈತಾನೆ. "ಹೂಂ" ಎನ್ನುವಂತೆ ಶಾಂತ ತಲೆಯಾಡಿಸಿದಳು. ಅಲ್ಲಿಗೆ ನಾಗಲಕ್ಷ್ಮಿ ಬಂದಳು.

"ಅತ್ತಿಗೆ ಇನ್ನೆರಡು ದಿನ ನಮ್ಮ ಮನೇಲಿದ್ದು ಹೊರಡೋರಂತೆ. ಅವಾಂತರ ಏನು?"

"ಇಲ್ಲ, ಲಕ್ಷ್ಮೀ... ಮಕ್ಕಳಿಗೆ ಸ್ಕೂಲು ತಪ್ಪುತ್ತೆ. ರಾಧಂಗೆ ಯಾವುದೋ ಪರೀಕ್ಷೆ

ಇದೆ. ಮತ್ತೆ ಯಾವಾಗಲಾದ್ರೂ ಬರ್ತೀವಿ" ಲಕ್ಷ್ಮಿ ಮತ್ತೆ ಬಲವಂತ ಮಾಡಲಿಲ್ಲ. ಅಣ್ಣ ಅತ್ತಿಗೆಯರಿಗೆ, ಪಂಚೆ, ಸೀರೆಗಳನ್ನೂ ಉಡುಗೊರೆಯಾಗಿ ಕೊಟ್ಟಳು. ಮದುವೆಗೆ ಬಂದು ಶುಭಕಾರ್ಯವನ್ನ ನಡೆಸಿಕೊಟ್ಟರೆಂದು ಪ್ರಶಂಸೆ ಮಾಡಿ, ಇಬ್ಬರಿಗೂ ನಮಸ್ಕಾರ ಮಾಡಿ ಆಶೀರ್ವಾದವನ್ನ ಪಡೆದಳು.

ಎಷ್ಟೋ ಜನ ನೆಂಟರಿಷ್ಟರು ಆ ರಾತ್ರಿಯೇ ಪ್ರಯಾಣ ಬೆಳೆಸಿದರು. ಸೀತಾರಾಮ ಹಾಗೂ ಅವನ ಹೆಂಡತಿ, ಸಾತಕ್ಕನನ್ನೂ ಪಾರ್ವತಿಯನ್ನ ನೋಡಿ ಮಾತನಾಡಿಸಬೇಕೆಂದು ಉಳಿದುಕೊಂಡರು. ರಾತ್ರಿ ಆರತಕ್ಷತೆಯ ಕಾರ್ಯಕ್ರಮವಿರಲಿಲ್ಲ. ಸಮೀಪದಲ್ಲಿದ್ದ ಶ್ರೀ ಸೀತಾರಾಮಾಂಜನೇಯ ಸ್ವಾಮಿಯ ದೇವಸ್ಥಾನಕ್ಕೆ ನವ ದಂಪತಿಗಳನ್ನ ಕರೆದುಕೊಂಡು ಹೋದರು. ವಿಶೇಷ ಪೂಜೆಯನ್ನು ಮಾಡಿಸಿ, ಮಂಗಳಾರತಿ, ತೀರ್ಥ ಪ್ರಸಾದವನ್ನ ತೆಗೆದುಕೊಂಡರು. ರಾತ್ರಿಯ ಊಟದ ನಂತರ, ನವದಂಪತಿಗಳಿಗೆಂದು ಒಂದು ಕೋಣೆಯನ್ನ ಸಿದ್ಧಗೊಳಿಸಿದ್ದರು. "ವರ್ಷದಲ್ಲಿ ಮೂರು ತಲೆ ಆಗುತ್ತೆ, ಈ ಶಾಸ್ತ್ರ ಬೇಡ ಎಂದು ಹೇಳುವವರು ಯಾರೂ ಇರಲಿಲ್ಲ. ಮೂರು ತಲೆಯೋ, ನಾಲ್ಕು ತಲೆಯೋ, ಈ ಶಾಸ್ತ್ರವನ್ನೂ ಮದುವೆಯಾದ ರಾತ್ರಿಯೇ ಮುಗಿಸಿಬಿಟ್ಟರೆ, ನಿಶ್ಚಿಂತೆ ಯಾವ ಆತಂಕವೂ ಇರುವುದಿಲ್ಲ ಎಂದುಕೊಂಡು, ಲಕ್ಷ್ಮಿ ನಾಗು ಎಲ್ಲರೂ ಸೇರಿಕೊಂಡು ಕೋಣೆಯನ್ನ ಅಲಂಕರಿಸಿದ್ದರು. ಗೋಪಾಲ ಕಾತುರದಿಂದ ಮಡದಿಗಾಗಿ ಕಾಯುತ್ತಿದ್ದ. ಶಾಂತ, ನಾಚಿಕೆಯಿಂದ, "ನಾನು ಹೋಗಲ್ಲ" ಅಂತ ಮೊಂಡುತನ ಮಾಡಿದಳು. ಚಿಕ್ಕಮ್ಮ ನಾಗಲಕ್ಷ್ಮಿ ಹೇಳಬೇಕಾದ ತಿಳುವಳಿಕೆಯನ್ನ ಹೇಳಿ ಉಪಾಯದಿಂದ ಕೋಣೆಗೆ ಕಳಿಸಿದ್ದಳು. ಶಾಂತ ಭಯದಿಂದ ಕೋಣೆಯನ್ನ ಹೊಕ್ಕಳು.

* * *

ಉಡುಗೊರೆ ಉತ್ಸವಗಳೊಂದಿಗೆ, ಮಾರನೇ ಬೆಳಿಗ್ಗೆ ಬೀಗರನ್ನು ಬೀಳ್ಕೊಟ್ಟಿದ್ದಾಗಿತ್ತು. ಶಾಂತಳನ್ನು ಕರೆದುಕೊಂಡು ಹೋಗುವುದಾಗಿ ಹೇಳಿದ್ದರಿಂದ ಅವಳ ಬಟ್ಟೆಗಳನ್ನ ಒಂದು ಟ್ರಂಕಿನಲ್ಲಿ ಜೋಡಿಸಿಟ್ಟಿದ್ದಾಗಿತ್ತು. ಅಮ್ಮ ನಾನು ನಿಮ್ಮಗಳನ್ನೆಲ್ಲ ಬಿಟ್ಟಿರುಕ್ಕೆ ಆಗುಲ್ಲ. ನಾನು ನಿಮ್ಮಗಳ ಜೊತೇನೇ ಬರ್ತೀನಿ" ಎಂದಳು.

"ಇನ್ನು ನೀನು ಅವರ ಮನೆಗೆ ಸೇರಿದವಳು. ಅವರುಗಳು ಹೇಳಿದಂತೆ ಕೇಳಬೇಕು. ಗೋಪಾಲ ಕರ್ಕೊಂಡು ಬಂದಾಗ, ಅವನ ಜೊತೆ ಬರೂವಂತೆ. ಎಲ್ಲರ ಜೊತೆ ಸ್ನೇಹದಿಂದ ಚೆನ್ನಾಗಿರು" ಎಂದು ಹಾರೈಸಿದ್ದಳು.

"ನಾವೆಲ್ಲ ಇನ್ನೂ ಏಳು ತಿಂಗಳು ನಂತರ ಮತ್ತೆ ಬರ್ತೀವಿ ಅತ್ತೆ. ತರೀಕೆರೇಲಿ ನಮ್ಮ ಸೋದರತ್ತೆಯ ಮಗನ ಮದುವೆ ಇದೆ" ನಾಗವೇಣಿ ಹೇಳಿದ್ದಳು.

"ನಿಮ್ಮ ಚಿಕ್ಕಮ್ಮನ್ನ ನೋಡೋಕೆ ಬರಲ್ವಾ... ಹಾಗಾದರೆ...?"

"ಇಲ್ಲ ಅತ್ತೆ. ಈಗ ಆಗಲ್ಲ. ಚಿಕ್ಕಮ್ಮಂಗೆ ಹೇಳಿಬಿಡಿ."

"ನಾನೇನೋ ಹೇಳ್ತೀನಿ. ಆದರೆ ನಿಮ್ಮ ಚಿಕ್ಕಮ್ಮಂಗೆ ನಿಮ್ಮಗಳ ಮೇಲಿನ ಅಸಮಾಧಾನ ಖಂಡಿತಾ ಕಡಿಮೆ ಆಗುಲ್ಲ."

"ನಾನು ಚಿಕ್ಕಮ್ಮಂಗೆ ಪತ್ರ ಬರೆದು ಕ್ಷಮಾಪಣೆ ಕೇಳ್ತೀನಿ... ಗೋದಾವರಿ ಅತ್ತೆ ಮನೆಯ ಮದುವೆಗೆ ಬಂದಾಗ ಖಂಡಿತಾ ಬರ್ತೀನಿ."

"ಸರಿಯಮ್ಮ. ನಿಮ್ಮಗಳ ಅನುಕೂಲ." ದಿಬ್ಬಣದವರಿಗಾಗಿ ಟ್ಯಾಕ್ಸಿಗಳು ಬಂದಿದ್ದವು. ಅಲ್ಲಿಂದ ರೈಲ್ವೇ ಸ್ಟೇಷನ್‌ಗೆ ದಿಬ್ಬಣ ತೆರಳಿತು.

"ದೇವರ ದಯೆಯಿಂದ ನಿರ್ವಿಘ್ನವಾಗಿ ಶುಭಕಾರ್ಯ ನೆರವೇರಿತು. ಇನ್ನು ಸಾಮಾನು ಸರಂಜಾಮುಗಳನ್ನು ಕಟ್ಟಿ ಹೊರಡೋಣ." ಎಂದ ಶಾಸ್ತ್ರಿ. ನಾರಾಯಣ, ವೈಕುಂಠನನ್ನ ನಂಜುಂಡನನ್ನ ಸೇರಿಸಿಕೊಂಡು, ಎಲ್ಲವನ್ನ ಕಟ್ಟಿ, ಗಾಡಿಗಳಿಗೆ ಹೇರಿದರು. ಮದುವೆ ಮನೆಯನ್ನ, ಅದರ ಮಾಲೀಕರಿಗೆ ತೆರವು ಮಾಡಿಕೊಟ್ಟಿದ್ದಾಗಿತ್ತು. ನಾರಾಯಣ, ನಂಜುಂಡ ಇಬ್ಬರೂ ಗಾಡಿಯಲ್ಲಿ ಕುಳಿತು ಬರುವುದಾಗಿ ಹೇಳಿದರು. ಸೀತಾರಾಮ, ಅವನ ಹೆಂಡತಿ, ಎರಡು ಚಿಕ್ಕ ಮಕ್ಕಳು ಇವರುಗಳೊಂದಿಗೆ ಟ್ಯಾಕ್ಸಿಯಲ್ಲಿ ಹೊರಟರು.

ಹಳ್ಳಿಯನ್ನು ತಲುಪಿದ್ದಂತೆಯೇ ಲಕ್ಷ್ಮಿಗೆ ಆಯಾಸ ತೋರ ತೊಡಗಿತು. ಬಳಲಿಕೆಯಿಂದ ಸುಸ್ತಾಗಿ ಕುಳಿತಳು. ಸೀತಾರಾಮ ತಂಗಿಯೊಡನೆ ಮಾತನಾಡಿ, ಕುಶಲವನ್ನ ವಿಚಾರಿಸಿದ.

"ಮಡಿ ಮಡಿ ಅಂತ ನೀನು ಬರದೇ ತಪ್ಪಿಸ್ಕೊಂಡೆ. ಸರೀನಾ?"

"ನನ್ನ ಮಡಿಯಿಂದ ಉಳಿದವರಿಗೆ ತೊಂದರೆ ಆಗಬಾರದು. ಮುಖ್ಯವಾದ ಕೆಲಸಗಳ ಮಧ್ಯೆ ಎಲ್ಲರಿಗೂ ಕಷ್ಟವಾಗಲ್ವಾ!"

"ಹಾಗೇನೂ ಆಗ್ತಿರಲಿಲ್ಲ ಅತ್ತಿಗೆ. ಶ್ರೀನಿವಾಸನ ಮನೆ ಇರ್ಲಿಲ್ವಾ! ನೀವೂ ಬರಲಿಲ್ಲ. ನಿಮ್ಮ ಜೊತೆಗೆ ಅಂತ ಕೃಷ್ಣನೂ ಬರಲಿಲ್ಲ. ಎಲ್ಲರೂ ನಿಮ್ಮನ್ನ ಕೇಳೋರೆ. ಮನೆ ಕಾಯೋಕೆ ನಿಮ್ಮನ ಬಿಟ್ಟು ಬಂದ್ವೇನೋ ಅಂತ ಅನ್ನಿಸ್ತಿತ್ತು."

"ಮನೆಯನ್ನ ಕಾದೋನು ಕೃಷ್ಣ. ಅವನ ಊಟ ತಿಂಡಿಯನ್ನ ನೋಡಿಕೊಂಡವಳು ನಾನು. ನಂಗೆ ಯಾವ ತೊಂದರೆಯೂ ಆಗಲಿಲ್ಲ. ಪಾರ್ವತೀನ ಯಾರೂ ಕೇಳಲಿಲ್ವಾ?"

"ಅವರು ಬಾಣಂತಿ ಅಂತ ತಿಳಿಯುತ್ಲೇ ಯಾರೂ ಏನೂ ಹೇಳಲಿಲ್ಲ. ಕಂಠಿ ಭಾವ ತಾನೂ ಬರಲಿಲ್ಲ. ಮಕ್ಕಳನ್ನ ಕಳಿಸಲಿಲ್ಲ. ಹತ್ತಿರದವರು ಅಂತ ಅನ್ನಿಸ್ಕೊಂಡವರೇ ಹೀಗೆ ಮಾಡಿದರೆ ಹೇಗೆ!"

"ಕಂಠಿಯ ಸ್ವಭಾವವೇ ಅಂಥದ್ದು. ಅದಕ್ಯಾಕೆ ಚಿಂತೆ ಮಾಡ್ತೀಯ...? ನಾವು

ಹೋಗಿ ಪಾರ್ವತಿಯನ್ನ ನೋಡಿ ಮಾತನಾಡಿಸ್ಕೊಂಡು ಬರ್ತೀವಿ" ಸೀತಾರಾಮ, ಅವನ ಹೆಂಡತಿ, ಕಂಠಿಯ ಮನೆಗೆ ಹೊರಟರು.

"ಕೃಷ್ಣ ಬಿಸಿ ಬಿಸಿ ಕಾಫಿ ಮಾಡಿದಾನೆ. ಕುಡಿದು ಬಿಟ್ಟೇ ಹೋಗಿ" ಕೃಷ್ಣ ಎಲ್ಲರಿಗೂ ಕಾಫಿಯನ್ನ ತಂದಿತ್ತ. ಎಲ್ಲರೂ ಕುಡಿದರು. ಆಯಾಸ ನೀಗಿದಂತಾಗಿತು.

"ಶಾಂತ ಹೊರಟಾಗ ಖುಷಿಯಾಗಿದ್ಲಾ?" ಸಾತಕ್ಕ ವಿಚಾರಿಸಿದಳು.

"ಹುಂ. ಅತ್ತೆ ಗೋಪಾಲ ಭಾವನ ಜೊತೆಯಲ್ಲಿ ಖುಷಿಯಾಗಿ ಹೊರಟಳು. ಲಲಿತ ಗೆಲುವಿನಿಂದ ನುಡಿದಾಗ, ಸಾತಕ್ಕ ನಿರಾಳವಾದಳು.

"ಏನೇ ಲಲಿತಾ? ಎಷ್ಟು ಲಾಡು ತಿಂದ್ಯೇ? ನನಗೆ ಅಂತ ಏನು ತಿಂಡಿಗಳನ್ನ ತಂದಿದೀಯ?" ಕೃಷ್ಣ ಕೇಳಿದ.

"ಡಬ್ಬದ ತುಂಬ ತಿಂಡಿಗಳಿವೆ. ಚಕ್ಕಲಿ ಕೋಡುಬಳೆ ಪುರಿ ಉಂಡೆ ಎಲ್ಲಾ ಇದೆ. ಯಾವುದನ್ನ ಬೇಕಾದ್ರೂ ತಗೊಂಡು ತಿನ್ನು." ಎಂದಳು.

"ಲಲಿತಾ... ಅವನು ನಿನ್ನ ಮಾವ. ನಿನಗಿಂತ ದೊಡ್ಡವರನ್ನ ಏಕವಚನದಲ್ಲಿ ಮಾತನಾಡಿಸಬಾರ್ದು. ಮರ್ಯಾದೆಯಿಂದ ಮಾತನಾಡಿಸ್ಬೇಕು."

"ಹೋಗಿ ಅತ್ತೆ. ಕೃಷ್ಣನ್ನ ಮೊದಲ್ನಿಂದ ಹಾಗೇ ಮಾತನಾಡಿಸಿ ರೂಡಿ."

"ಇನ್ನ ಮುಂದೆ ಬದಲಾಯಿಸ್ಕೋ. ನೀನು ಬಹುವಚನದಲ್ಲಿ ಮಾತನಾಡಿಸದೇ ಇದ್ದರೆ, ಪದ್ಮಿನಿ ರಾಗಿಣಿಯರೂ ಮರ್ಯಾದೆ ಕೊಟ್ಟು ಕರೆಯುಲ್ಲ. ಅವನಿಗೆ ಬೇಸರ ವಾಗುತ್ತೆ."

"ಹೌದಾ ಕೃಷ್ಣಾ....?"

"ಇನ್ನ ಮುಂದೆ ನನ್ನನ್ನ ಕೃಷ್ಣ ಅಂತಲೂ ಕರೀ ಬೇಡ. ಬರೀ ಮಾವ ಅನ್ನ ಸಾರು. ಅದಿರಲಿ, ನಿನಗೆ ಏನು ಉಡುಗೊರೆ ಕೊಟ್ಟರು?"

"ಲಂಗ ಜಂಪರ್‌ಗೆ ಅಂತ ಬಟ್ಟೆ ಕೊಟ್ಟಿದಾರೆ..."

"ಕಲಶಗಿತ್ತಿಗೆ ಸೀರೇನ ಕೊಡಬೇಕಾಗಿತ್ತು ಅವರು..."

"ಸೀರೇನ ಕೊಟ್ಟಿದ್ರೂ ಅದನ್ನ ಹರಿಸಿ, ಲಂಗ ರವಿಕೆಯನ್ನ ಹೊಲಿಸಿ ಕೊಳ್ತಿದ್ದೆ. ನಂಗೆ ಅದೇ ಇಷ್ಟ."

"ಇನ್ಮುಂದೆ ಸೀರೇನ ಉಟ್ಕೋ.... ನಿಂಗೆ ಒಪ್ಪುತ್ತೆ." ಲಲಿತ ವೈಯಾರದಿಂದ ಕೃಷ್ಣನ ಕಡೆ ನೋಡಿದಳು ಅವನು ನಸುನಕ್ಕ.

"ತಿಂಡಿಗಳನ್ನ ತಟ್ಟೆಗೆ ಹಾಕಿ ತಂದ್ಕೊಡೇ ಲಲಿತಾ. ಬಾಯಲ್ಲಿ ನೀರು ಬರ್ತಿದೆ..." ಕೃಷ್ಣ ತಿನ್ನುವ ಆಸೆಯನ್ನ ವ್ಯಕ್ತಪಡಿಸಿದ.

"ನೀನು ಒಂದು ಹೊತ್ತಿಗಾದ್ರೂ ಬರಬೇಕಾಗಿತ್ತು. ನಿಮ ನಿಮಗೆ ತೋಚಿದ ಹಾಗೆ ಮಾಡ್ತೀರಿ. ನಾನು ಬಾ ಅಂತ ಹೇಳಿರಲಿಲ್ವಾ ನಿಂಗೆ?" ಲಕ್ಷ್ಮಿ ಆಕ್ಷೇಪಿಸಿದಳು.

"ನಂಗೆ ಬರಬೇಕು ಅಂತ ಆಸೆ ಇತ್ತು. ಆದರೆ ಬರಲಿಲ್ಲ ಅಷ್ಟೇ."

"ನೀನು ಯಾಕೆ ಬರಲಿಲ್ಲ ಅಂತ ನಂಗೆ ಗೊತ್ತು. ನೀನು ಚಿಕ್ಕೋನು. ಹಳೇದನ್ನ ಮರೆತು ಬಿಡು. ಅತ್ತಿಗೆ ಎಷ್ಟು ಸಂಭ್ರಮದಿಂದ ಓಡಾಡಿದಳು ಗೊತ್ತಾ? ಶಾಂತಂಗೆ ಜಡೆ ಹೆಣೆದು ಅಲಂಕಾರ ಮಾಡಿ, ಗೌರಿ ಪೂಜೆಯನ್ನ ಮಾಡಿಸಿದವಳು ಅವಳೇ... ಅತ್ತಿಗೆ ಬದಲಾಗಿದಾಳೆ." ಕೃಷ್ಣ ವ್ಯಂಗ್ಯ ನಗೆಯನ್ನು ನಕ್ಕ.

"ಯಾರೂ ಬದಲಾಗಿಲ್ಲ ಅಕ್ಕಾ. ನೀನು ಹಾಗಂದುಕೊಂಡಿದೀಯ ಅಷ್ಟೇ"

* * *

ಹೊಸದಾಗಿ ಹುಟ್ಟಿದ್ದ ಕರುವಿನ ನುಣುಪಾದ ಮೈಯನ್ನ ಸವರುತ್ತ ನಿಂತಿದ್ದ ಲಲಿತಳ ಹಿಂದೆ ಬಂದು ನಿಂತ ಕೃಷ್ಣ ಹಿಂತಿರುಗಿ ನೋಡಿ "ಓ... ನೀನಾ!" ಎಂದಳು.

"ಕರು ಎಷ್ಟು ಮುದ್ದಾಗಿದೆ..." ಅವನೂ ಮೈ ಸವರಿದ.

"ನಿಂಗೆ ಹಸು ಕರು ಅಂತಾದ್ರೆ ಇಷ್ಟಾನೋ ಭಯಾನೋ?"

"ಒಳ್ಳೆ ಹಸು ಆದರೆ ಇಷ್ಟ. ನಿಮ್ಮನೆ ರಾಧನ ತರಹ ಗೋಮುಖವ್ಯಾಘ್ರ ಆದರೆ ಭಯ... ಅವಳಲ್ಲಿ?"

"ಮೇಯುಕ್ಕೆ ಹೋಗಿದಾಳೆ. ಅವಳಿಗ್ಯಾಕೋ ನನ್ನನ್ನ ಕಂಡರೇ ಆಗುಲ್ಲ. ಎಷ್ಟೇ ದೂರದಲ್ಲಿದ್ರೂ ಅಟ್ಟಿಸ್ಕೊಂಡು ಬರ್ತಾಳೆ."

"ಅವಳಿಗಿಂತ ನೀನು ಚೆನ್ನಾಗಿದೀಯ ಅಂತ ಅವಳಿಗೆ ಅಸೂಯೆ."

"ಥೂ ಹೋಗೋ..."

"ಏನು ಹೋಗೋ? ಅಷ್ಟೊತ್ತಿಂದ ನೋಡ್ತಾನೇ ಇದೀನಿ. ನೆನ್ನೆ ಅತ್ತೆ ಹೇಳಿದ್ದನ್ನ ಮರೆತು ಬಿಟ್ಯಾ?" ಎನ್ನುತ್ತಾ ಅವಳ ಜಡೆಯನ್ನು ಎಳೆದ.

"ಎಲ್ರಿಗೂ ನನ್ನ ಜಡೆ ಮೇಲೆ ಕಣ್ಣು... ಬಿಡೋ..."

"ಬಿಡ್ರೀ ಅನ್ನು ಬಿಡ್ತೀನಿ." ಅವಳು ಜಡೆಯ ತುದಿಯನ್ನ ಕೈ ಬೆರಳಿಗೆ ಸುತ್ತಿ ಕೊಂಡು ಕೀಟಲೆಯ ಧ್ವನಿಯಲ್ಲಿ ನಗುತ್ತಾ ನುಡಿದ.

"ಸರಿ. ಬಿಡಿ ಮಾವ... ನೋಯುತ್ತೆ."

"ಹಾಗೆ ಬಾ ದಾರಿಗೆ." ಜಡೆಯನ್ನ ಬಿಟ್ಟ. "ನಾನು ನಾಳೆ ಬೆಳಿಗ್ಗೆ ಊರಿಗೆ ವಾಪಸ್ಸು ಹೋಗ್ತಿದೀನಿ. ನನ್ನ ಜೊತೇಲಿ ಬರ್ತೀಯಾ? ಕರ್ಕೊಂಡು ಹೋಗ್ತೀನಿ."

"ಇಲ್ಲಪ್ಪಾ. ಸ್ಕೂಲು ತಪ್ಪುತ್ತೆ. ಅಲ್ದೇ ನಿಮ್ಮ ಮನೇಲಿ ನೀನು ಒಬ್ಬನೇ ಇದೀಯಂತೆ."

"ಮತ್ತೆ ನೀನು ಅಂತ ಅಂತೀಯ, ಅತ್ತೆಗೆ ಹೇಳ್ತೀನಿ ತ[illegible]"

"ನೀವೇ ಇನ್ನೊಂದೆರಡು ದಿನ ಇದ್ದು ಹೋಗಿ."

"ನೀನು ಇರು ಅಂತ ಹೇಳಿದ್ರೆ ಇರ್ತೀನಿ ಲಲಿತಾ. [illegible] ಅಂತ

ನಿಂಗೆ ಆಸೆ ಆಗುತ್ತಾ?"

"ಖಂಡಿತಾ ಇರ್ತೀರಾ?" ಅವಳು ಕಣ್ಣುಗಳನ್ನರಳಿಸಿದಳು. ಫೋಟೋದಲ್ಲಿದ್ದ ಜಯಳಂತೆಯೇ ಕಂಡಳು. ಅವಳನ್ನೇ ದಿಟ್ಟಿಸಿದ." ಅದ್ಯಾಕೆ ನನ್ನನ್ನ ಹಾಗೆ ನೋಡ್ತಿದೀರಿ? ನಂಗೆ ಒಂಥರಾ ಆಗುತ್ತೆ."

"ಒಂಥರಾ ಅಂತಂದ್ರೆ...?"

"ನಂಗೊತ್ತಿಲ್ಲ." ನಾಚಿದಳು.

"ನನ್ಹತ್ರ ಎಂಥಾ ನಾಚಿಕೇನೆ! ನಮ್ಮೂರ್ನಿಂದ ಮತ್ತೆ ಬರುವಾಗ ನಿಂಗೆ ಏನು ತಂದ್ಕೊಡ್ಲೀ?"

"ನಿಮ್ಮೂರ್ನಲ್ಲಿ ಏನು ಸಿಗುತ್ತೆ ಅಂತ ನಂಗೇನು ಗೊತ್ತು!" ಅವಳು ವೈಯಾರ ದಿಂದ ಮೈಯಾಡಿಸಿದಳು. ಅವನಿಗೆ ನಗು ಬಂತು.

"ನೀನು ವೈಯಾರಿ ಕಣೇ. ಶಾಂತ, ನಿನ್ನ ಹಾಗಲ್ಲ."

"ನಿಮಗೆ ಶಾಂತ ಇಷ್ಟಾನೋ ನಾನು ಇಷ್ಟಾನೋ!"

"ನಾನು ಶಾಂತನ್ನ ಹೇಗೆ ಇಷ್ಟಪಡ್ಲೀ? ಅವಳು ಮದುವೆಯಾಗಿ ಗಂಡನ ಮನೇಲಿದಾಳೆ. ನಿಮ್ಮ ಗೋಪಾಲ ಭಾವರಿಗೆ ಗೊತ್ತಾದ್ರೇ. ಏನಿಲ್ಲ." ಅಷ್ಟರಲ್ಲಿ ಲಕ್ಷ್ಮಿ ಕರೆದದ್ದು ಕೇಳಿಸಿತು.

"ಈ ಅಮ್ಮ ಒಬ್ಬಳು. ಸದಾ ಕೂಗ್ತಾನೇ ಇರ್ತಾಳೆ. ಬಂದೇಮ್ಮಾ..."

"ಕೊಟ್ಟೀಗೇಲಿ ಏನಾಡ್ತಿದೀಯ ಅಷ್ಹೊತ್ನಿಂದ? ನಿನ್ನ ಜೊತೇಲಿ ಯಾರಿದಾರೆ?"

"ನಾನಿದೀನೇ ಅಕ್ಕ. ನಾವಿಬ್ರು ಹೊಸಾ ಕರುವನ್ನ ನೋಡ್ತಿದ್ದೆವು." ಇಬ್ಬರೂ ಮನೆಯೊಳಕ್ಕೆ ಬಂದರು. ಲಕ್ಷ್ಮಿ ಲಲಿತಳನ್ನ ತೀಕ್ಷ್ಣವಾಗಿ ನೋಡಿದಳು.

"ಕೃಷ್ಣಾ ಊರಿಗೆ ಯಾವಾಗ ಹೋಗ್ತಿದೀಯ?"

"ಯಾಕೇ ಅಕ್ಕ. ನಾನಿರೋದ್ರಿಂದ ತೊಂದರೆ ಆಗ್ತಿದೆಯಾ?"

"ಹಾಗೆಲ್ಲಿ ಅಂದೆ ನಾನು? ಸುಮ್ಮನೇ ಕೇಳಿದೆ. ನೀವುಗಳೆಲ್ಲಾ ಆಗ ಈಗ ಹೋಗಿ ಶಾಂತನ್ನ ನೋಡಿ ಮಾತಾಡಿಸ್ಕೊಂಡು ಬನ್ನಿ. ಹೊಸ ಜಾಗ, ಹೊಸ ಜನ ಹೇಗಿದಾಳೋ...?" ಕೃಷ್ಣ ಆಗಲಿ ಎಂಬಂತೆ ತಲೆಯಾಡಿಸಿದ.

* * *

ನೆಂಟರೆಲ್ಲಾ ವಾಪಸ್ಸು ಹೊರಟು ಹೋಗಿದ್ದರು. ಹೋಗಿ ತಲುಪಿದ್ದಕ್ಕೆ ಪತ್ರಗಳೂ ಬಂದಿದ್ದವು. "ಶಾಂತ ಮನೆಯಲ್ಲಿ ಇಲ್ಲದುದು, ಸಾತಕ್ಕನಿಗಂತೂ ಬಹಳ ಬೇಸರ ವನ್ನುಂಟು ಮಾಡಿತು. ಸದಾ ಅತ್ತೆ ಅತ್ತೆ ಅಂತ ಏನನ್ನಾದ್ರೂ ಕೇಳ್ತಿತ್ತು... ಹೆಣ್ಣುಮಕ್ಕಳು ಬೆಳೆದು ಎಷ್ಟು ಬೇಗ ದೊಡ್ಡವರಾಗಿ ಬಿಡ್ತಾರೆ. ಲಲಿತಾಗೆ ಬೇಗ ಮದುವೆ ಮಾಡೋದು ಬೇಡ. ನಿಧಾನವಾಗಿ ಮಾಡೋಣ."

"ಇನ್ನು ಇಬ್ಬರು ಇದಾರಲ್ಲ ಅತ್ಗೆ... ಒಂದೊಂದಾಗಿ ಜವಾಬ್ದಾರೀನ ಕಳೆದುಕೊಳ್ಳಬೇಡ್ವೆ?"

"ಅದೂ ನಿಜ ಅನ್ನು. ಆದರೂ ಲಲಿತನಾದ್ರೋ ತುಂಬಾ ಮುಗ್ಧೆ."

"ಹಾಗೆನ್ಬೇಡಿ ಅತ್ಗೆ. ಶಾಂತಂಗಿಂತ ಚುರುಕು. ಆದರೆ ಸ್ವಲ್ಪ ಚೂಕಲು ತನ. ಹುಡುಗಾಟ. ಗಂಭೀರವೇ ಇಲ್ಲ. ಇನ್ನಾದರೂ ಸ್ವಲ್ಪ ತಿದ್ದುಕೋಬೇಕು." ಸಾತಕ್ಕ ಅದಕ್ಕೆ ಉತ್ತರ ಕೊಡಲಿಲ್ಲ.

ಸಂಗೀತದ ಮೇಷ್ಟ್ರು ಭಾನುವಾರದಂದು ಬಂದು ಪಾಠವನ್ನು ಹೇಳಿ ಕೊಟ್ಟು ಹೋಗುತ್ತಿದ್ದರು. ರಾಜ ಕಾಲೇಜಿಗೆ ಸೇರಿದ್ದ. ಸೈಕಲಿನಲ್ಲಿ ಹೋಗಿಬರುತ್ತಿದ್ದನಾದ್ದ ರಿಂದ ಇವರುಗಳಿಗೆ ಸಿಗುತ್ತಿರಲಿಲ್ಲ. ಲಲಿತ ಮೊದಲಿನ್ಹಾಗೆ ಅತ್ತೆಯ ಮನೆಗೆ ಓಡಿ ಓಡಿ ಹೋಗುತ್ತಿರಲಿಲ್ಲ. ರಾಜ ಒಮ್ಮೊಮ್ಮೆ ತನ್ನ ಮನೆಯ ಕಿಟಕಿಯ ಬಳ ನಿಂತು ಲಲಿತಳನ್ನು ದೂರದಿಂದ ನೋಡುತ್ತಿದ್ದ. ಅವನಿಗೆ ಅವಳೊಡನೆ ಕಳೆದ ನಿಮಿಷಗಳು ನೆನಪಿಗೆ ಬರುತ್ತಿದ್ದವು. ಮತ್ತೆ ಎಂದಾದರೂ, ಹಾಗೆ ಬಲವಂತದಿಂದಲಾದರೂ ಸರಿ, ಅವಳೊಡೆ ಸುಖಿಸಬೇಕೆಂಬ ಆಸೆ ಉಂಟಾಗುತ್ತಿತ್ತು ಎಂದಾದರೂ ಆ ಸಮಯ ಸಿಗಬಹುದು ಎಂದು ಕಾಯುತ್ತಿದ್ದ. ದೊಡ್ಡಮ್ಮ, ಲಲಿತ ಇಬ್ಬರೂ ಅವನನ್ನ ಹೊಡೆ ದದ್ದು ಅವನನ್ನ ಇನ್ನೂ ಕೆರಳಿಸಿತ್ತು. ಇಬ್ಬರಿಗೂ ಸರಿಯಾಗಿ ಬುದ್ಧಿ ಕಲಿಸಬೇಕೆಂದು ಯೋಚಿಸುತ್ತಿದ್ದ.

ಈ ಬಾರಿ, ಮಳೆ ಚೆನ್ನಾಗಿ ಬಿದ್ದು, ಕೆರೆ ಕಟ್ಟೆಗಳು ತುಂಬಿದ್ದವು. ಎಲ್ಲರ ಮನೆಯ ಬಾವಿಗಳಲ್ಲಿ ನೀರು ಮೇಲೆ ಏರಿತು. ಗದ್ದೆಗಳಲ್ಲಿ ಪೈರು ಚೆನ್ನಗಿ ಬೆಳೆದಿತ್ತು. ರೈತರು ಬೆಳೆ ಚೆನ್ನಾಗಿ ಬಂದು, ಈ ಬಾರಿಯಾದರೂ ಲಾಭವಾದೀತೆಂದು ಲೆಕ್ಕ ಹಾಕುತ್ತಿದ್ದರು. ಶ್ರೀಕಂಠನೂ ಎರಡು ಎಕರೆ ಜಮೀನನ್ನ ಖರೀದಿಸಿ, ತರಕಾರಿಯ ಗಿಡಗಳನ್ನ ನೆಡೆಸಿದ್ದ.

ಸಂತೇಲಿ ತರಕಾರಿಗೆ ಬೆಲೆ ಚೆನ್ನಾಗಿದೆ. ಹೋಟೆಲ್ಲಿನವರು ತಾಜಾ ತರಕಾರಿಯನ್ನ ಹೆಚ್ಚು ಹೆಚ್ಚು ಕೊಂಡ್ಕೊಳ್ತಾರೆಂದು ಕೇಳಿದವರಿಗೆ ಹೇಳುತ್ತಿದ್ದ.

"ನಿನ್ನ ಹತ್ರ ಎತ್ತುಗಳಿಲ್ಲ. ಹೂಡುಕ್ಕೆ ಗಾಡಿ ಇಲ್ಲ. ತರಕಾರಿಯನ್ನ ಸಂತೆಗೆ ಹೇಗೆ ಹಾಕಿಸ್ತೀಯ?" ಶಾಸ್ತ್ರಿ ಒಮ್ಮೆ ಕೇಳಿದ್ದ.

"ಬಾಡಿಗೆಗೆ ಅಂತ ಯಾರಾದ್ರೂ ಗಾಡೀನ ಕೇಳ್ತಾರೆ. ಇಲ್ದಿದ್ರೆ ಅವರಿಗೇ ಕೊಟ್ಟು ಬಿಡ್ತೀನಿ. ಮಾರಿ ಬಂದ ಹಣದಲ್ಲಿ ನನಗೂ ಸ್ವಲ್ಪ ಕೊಟ್ಬಿಡಿ ಅಂತ ಕೇಳ್ತೀನಿ. ಹಾಗೂ ಲಾಭವೇ ಆಗುತ್ತೆ."

"ಬರೀ ಲಾಭವನ್ನೇ ಯೋಚಿಸ್ತಿಯಲ್ಲೋ ಭಾವ. ಖರ್ಚೂ ಬೀಳುತ್ತೆ. ಇದು ಎಮ್ಮೆ ಹಾಲಿನ ವ್ಯಾಪಾರವಲ್ಲ. ನೀರು ಬೆರೆಸಿ, ಅಳೆದು ಸುರಿಯೋಕೆ." ಶಾಸ್ತ್ರಿ

ತಮಾಷೆ ಮಾಡಿದ. ಕಂಠಿ ಸಿಟ್ಟಿಗೆದ್ದ."

"ಏನಂದೆ? ಯೋಚಿಸಿ ಮಾತಾಡು. ನೀರು ಬೆರೆಸಿದರೆ, ಹಾಲನ್ನ ಹೋಟೆಲ್ಲಿನವರು ಕೊಂಡ್ಕೋತಾರಾ! ಅವರಿಗೆ ನಾನು ಒದಗಿಸೋದು ಅಪ್ಪಟ ಎಮ್ಮೆ ಹಾಲು. ಹಸುವಿನ ಹಾಲಿನಂತೆ ತಿಳಿಹಾಲು ಅಂತ ಅಂದ್ಕೊಂಡ್ಯಾ! ಗಟ್ಟಿ ಹಾಲು... ಗಟ್ಟಿ ಹಾಲು..." ಮೀಸೆಯ ಮೇಲೆ ಕೈಯಾಡಿಸಿಕೊಂಡು ಹೇಳಿದ.

"ತಮಾಷೆ ಮಾಡ್ದೆ ಕಣೋ ಭಾವ... ನಿಮ್ಮ ಮನೆಯ ಎಮ್ಮೆ ಹಾಲನ್ನೇ ತಾನೇ ನಾನು ತಗೋತಿದ್ದುದು. ಎಂದಾದ್ರೂ ನೀರಾಗಿದೆ ಅಂತ ಶಿಕಾಯತು ಮಾಡಿದ್ನಾ!"

"ಹಾಲು ಹೇಗಿರುತ್ತಿತ್ತು ಅಂತ ಸಾವಿತ್ರೀನ ಕೇಳು. ಲಕ್ಷ್ಮೀನ ಕೇಳು. ನಿಂಗೇನು ಗೊತ್ತು! ಬರೀ ಕಾಫಿ ಕುಡಿದು ಗೊತ್ತು. ನಿನ್ಹತ್ರ ಮಾತಾಡ್ತಾ ನಿಂತ್ರೆ ರೈಲು ತಪ್ಪಿ ಹೋಗುತ್ತೆ. ಇವತ್ತು ಪೇಟೆಗೆ ಹೋಗಲೇ ಬೇಕು." ಉದ್ದನೆಯ ಕೈಚೀಲವನ್ನು ಛತ್ರಿಯನ್ನು ಹಿಡಿದು ಕಂಠಿ ಸ್ಟೇಷನ್ನಿನತ್ತ ಸಾಗಿದ. ಸ್ವಲ್ಪ ಸಮಯದ ನಂತರ ಶಾಸ್ತ್ರಿ ಗದ್ದೆಯ ಕಡೆಗೆ ನಡೆದ.

ಸುಮಾರು ಹತ್ತು ಗಂಟೆಯ ಹೊತ್ತಿಗೆ, ಪಾರ್ವತಿ ಎಳೆಯ ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ಅಣ್ಣನ ಮನೆಗೆ ಬಂದಳು. ತಲೆಗೆ ಸುತ್ತಿದ ಮಫ್ಲರ್ರು, ಮೈಗೆ ಸುತ್ತಿಕೊಂಡ ಯಾವುದೋ ಬಣ್ಣ ಮಾಸಿದ ಸೀರೆ, ದೊಗಲೆ ಸ್ವೆಟರ್ರು ಬೆನ್ನ ಮೇಲೆ, ಕಾಲಿಗೆ ಹರಿದ ಹೋದ ಹಳೆಯ ಕಾಲುಚೀಲಗಳು, ಎಲೆ ಅಡಿಕೆ ಜಗಿದು ಕೆಂಪಾದ ಹಲ್ಲು ತುಟಿಗಳು, ಅವಳ ಅಸಹಾಯಕತೆಯನ್ನು ಎತ್ತಿ ತೋರುತ್ತಿತ್ತು. ಏದುಸಿರು ಬಿಡುತ್ತಾ, "ದತ್ತ ಬಂದಿದಾನ ಸಾವಿತ್ರಿ?" ಅಂತ ವಿಚಾರಿಸಿದಳು.

"ಕೂತ್ಕೋ ಪಾರ್ವತಿ. ಏದುಸಿರು ಬಿಡ್ತಿದೀಯ... ಕಂಠಿ ಹೊಡೆದು ಏನಾದ್ರೂ ರಂಪ ರಾದ್ಧಾಂತ ಆಯ್ತೇನೆ! ಎಳೆ ಮಗೂನ ಎತ್ಕೊಂಡು, ಹಸೀ ಬಾಣಂತಿ ನೀನೇ ಎದ್ದು ಬಂದಿದೀಯಲ್ಲ."

"ಇವರು ಮನೇಲಿಲ್ಲ. ಬೆಳಿಗ್ಗೇನೇ ರೈಲಿಗೆ ಹೋದ್ರು. ತಿಂಡಿ ಮಾಡಿ ಎಲ್ಲರಿಗೂ ಕೊಟ್ಟೆ. ರಾಜ ಕಾಲೇಜಿಗೆ ಈಗ್ತಾನೇ ಹೋದ. ಚಿಕ್ಕದು ಅಳ್ತಾ ಇದೆ. ದತ್ತ ಎಲ್ಲಿ ಅಡಗಿ ಹೋದ್ನೋ? ಎಷ್ಟು ಕರೆದ್ರೂ ಬರಲಿಲ್ಲ. ಅದಕ್ಕೆ ಇಲ್ಲೇನಾದ್ರೂ ಇದಾನೇನೋ ಅಂತ ನೋಡೋಕೆ ಬಂದೆ.

"ಇಲ್ಲ, ಅವನಿಲ್ಲಿಗೆ ಬಂದಿಲ್ಲ. ನಿಮ್ಮನೇಲೇ ಎಲ್ಲೋ ಅವಿತುಕೊಂಡು ಕೂತಿರಬಹುದು."

"ನಿಮ್ಮ ಮನೆ ಹೊಸ ಕರೂನ ನೋಡೋಕೇನಾದ್ರೂ ಬಂದಿದಾನೋ ಏನೋ ಸ್ವಲ್ಪ ವೈಕುಂಠನ್ನ ಕೇಳ್ತೀಯಾ ಲಕ್ಷ್ಮೀ."

"ವೈಕುಂಠ ಆಗ಼್ೇ ದನಗಳನ್ನ ಮೇಯೋಕೆ ಅಟ್ಟಿದ. ಕೊಟ್ಟಿಗೆ ಬಾಗಿಲು ಹಾಕಿದೆ. ಆದರೂ ನೋಡ್ತೀನಿ ತಡೀರಿ" ಲಕ್ಷ್ಮಿ ಕೊಟ್ಟಿಗೆಯಲ್ಲಿ ಇಣುಕಿ ನೋಡಿದಳು. ಹಾಲು ಕುಡಿಯುವ, ಸಣ್ಣ ಕರುಗಳ ಹೊರತು ಇನ್ಯಾರೂ ಇರಲಿಲ್ಲ.

"ಇಲ್ಲ ಪಾರ್ವತಿ. ಅಲ್ಲಿ ಯಾರೂ ಇಲ್ಲ. ಅವನೇನಾದ್ರೂ ಬಂದರೆ, ಕಳಿಸ್ತೀನಿ..

"ಸರಿ ಹಾಗಾದ್ರೆ ನಾನು ಬರ್ತೀನಿ. ಬಾಗಿಲ ಮುಂದೆ ಮಂಜೂನ ಕೂರಿಸಿ ಬಂದಿದೀನಿ." ಪಾರ್ವತಿ ಎದ್ದಳು.

"ಒಂದ್ನಿಮಿಷ ತಡೀರಿ. ಕಾಫಿ ಕೊಡ್ತೀನಿ. ಮಗೂಗೆ ನೆತ್ತಿಗೆ ಎಣ್ಣೆ ಇಟ್ಟು ಚಿಟಿಕೆ ಸಕ್ಕರೇನ ತಿನ್ನಿಸ್ತೀನಿ. ಇವಳು ಯಾರ ಹಾಗೆ...?"

"ಮೀನಾಕ್ಷಿಯ ಹಾಗೆ ಆಗಲ್ಲ... ಈ ವಯಸ್ನಲ್ಲಿ ಮೀನಾಕ್ಷಿ ಮುದ್ದಾಗಿದ್ಲು."

"ಮಕ್ಕಳು ಹೇಗಿದ್ರೂ ಮುದ್ದೇ!" ಎನ್ನುತ್ತಾ ಕಾಫಿಯನ್ನ ಕೊಟ್ಟಳು.

"ನೀನು ಕೂತ್ಕೋ ಪಾರ್ವತಿ. ವೈಕುಂಠ ಬಂದ. ಅವನನ್ನ ಕಳಿಸ್ತೀನಿ. ಎಲ್ಲಿದ್ರೂ ಹುಡುಕ್ಕೊಂಡು ಬರ್ತಾನೆ."

"ಅವರ ಅಪ್ಪನೂ ಮನೇಲಿರ್ಲಿಲ್ಲ. ಗೂಡ್ಸ್ ಎಂಜಿನ್ನಿನ ಕೂಗು ಕೇಳಿಸಿದ ಕೂಡ್ಲೇ ಓಡಿ ಹೋಗಿರ್ಬೇಕು. ಬೋಗಿಗಳನ್ನ ಎಣಿಸೋದು ಅಂದ್ರೆ ಬಹಳ ಖುಷಿ ಅವನಿಗೆ."

"ಗೂಡ್ಸ್ ರೈಲು ಹೋಗಿ ತುಂಬಾ ಹೊತ್ತಾಯ್ತು. ಸ್ಟೇಷನ್ನಲ್ಲಿರೋ ಮರದಿಂದ ಬಿದ್ದ ಹೂಗಳನ್ನ ಆರಿಸ್ತಾ ಕೂತಿದಾನೋ ಏನೋ... ವೈಕುಂಠ ಬಾರೋ ಇಲ್ಲಿ." ಅಲ್ಲೇ ಇದ್ದ, ವೈಕುಂಠ ಬಂದ. "ದತ್ತ, ಬೀದೀಲಿ ಎಲ್ಲೋ ಏನನ್ನೋ ನೋಡ್ತಾ ನಿಂತಿರಬಹುದು. ಸ್ಟೇಷನ್ನನಲ್ಲಿ ಮರಳಿನ ಮೇಲೆ ಆಟ ಆಡ್ತಾ ಇರಬಹುದು. ಎಲ್ಲೇ ಇದ್ರೂ ಅಮ್ಮ ಕರೀತಾ ಇದಾರೆ ಅಂತ ಕರ್ಕೊಂಡು ಬಾ... "ಲಕ್ಷ್ಮಿ ಮಗುವಿಗೆ ಸಕ್ಕರೆ ತಿನ್ನಿಸಿ ಎಣ್ಣೆ ಇಟ್ಟಳು.

"ನಾನು ಅಂಗೇ ಬಂದ್ನವ್ವ.. ಅಲ್ಲಿ ಯಾರೂ ಇರ್ನಿಲ್ಲ."

"ಹೇಳಿದಷ್ಟು ಕೇಳು ವೈಕುಂಠ. ಅವನು ಮನೇಲಿಲ್ಲ. ಅಪ್ಪನೂ ಊರಿನಲ್ಲಿಲ್ಲ. ಎಲ್ಲಿ ಅಲೀತಿದಾನೋ....?" ವೈಕುಂಠ ಅತ್ತ ಹೋದ. "ಅಷ್ಟಕ್ಕೂ ಅವನಿಂದ ಏನು ಕೆಲಸ ಮಾಡಿಸ್ಕೋತೀಯ ಪಾರ್ವತಿ... ಎಲ್ಲೋ ಆಡ್ಕೊಂಡಿರ್ತಾನೆ ಬಿಡು. ಕಂಠೀನೂ ಮನೇಲಿಲ್ಲ ಅಂತೀಯ...."

"ಅವನೇನು ಆರೋಗ್ಯವಾಗಿದಾನಾ! ನನಗೆ ಸದಾ ಅವನದ್ದೇ ಚಿಂತೆ. ದೂರ ಎಲ್ಲಿಗೂ ಹೋಗಲ್ಲ. ಎಲ್ಲಿಗೆ ಹೋದ್ರೂ ಬೇಗ ಮನೆಗೆ ಬಂದು ಬಿಡ್ತಾನೆ. ಹೊಟ್ಟೆ ಹಸಿವನ್ನ ತಡೆಯಲ್ಲ."

"ಸರಿ ಬಿಡು. ಎಷ್ಟು ಹೊತ್ತಾಯ್ತು ಮನೆಯಿಂದ ಆಚೆ ಹೋಗಿ?"

"ಒಂದು ಗಂಟೆ ಮೇಲಾಯ್ತು ಸಾವಿತ್ರಿ. ಇವತ್ತು ಮಗೂಗೆ ನೀರು ಹಾಕಬೇಕು. ಹಂಡೆ ನೀರು ಕಾದು ಆವಿಯಾಗ್ತಿದೆ. ಬಾವಿಯಿಂದ ನಾಲ್ಕು ಕೊಡ ತಣ್ಣೀರನ್ನ ತುಂಬಿ ತಂದ್ಹಾಕೋ ಅಂತ ಕಳಿಸ್ದೆ... ಒಂದೇ ಒಂದು ಕೊಡ ನೀರನ್ನ ತಂದು ಬಕೆಟ್ಟಿಗೆ ಹಾಕಿಲ್ಲ. ಅಷ್ಟರಲ್ಲೆ ಎಲ್ಲಿ ಹೋದ?" ಸಾವಿತ್ರಿಯ ಎದೆ ತಲ್ಲಣ ಗೊಂಡಿತು. ತನ್ನ ಅನುಮಾನವನ್ನ ಹೊರಗೆಡವಲಿಲ್ಲ.

"ವೈಕುಂಠನ್ನ ಕಳಿಸಿದೀನಲ್ಲ. ಎಲ್ಲೇ ಇದ್ರೂ ಕರ್‍ಕೊಂಡು ಬರ್‍ತಾನೆ. ನೀನು ನಿಶ್ಚಿಂತೆಯಾಗಿರು. ಸಾತಕ್ಕ ಲಕ್ಷ್ಮಿಯ ಕಡೆ ನೋಡಿದಳು. ಲಕ್ಷ್ಮಿಗೂ ಅದೇ ಅನುಮಾನ ನುಸುಳಿತು. ಪಾರ್ವತಿಯ ಮಗು 'ಕೊಂಯ ಕೊಂಯ' ಅಂತ ಅಳಲು ಪ್ರಾರಂಭಿಸಿತು. ಪಾರ್ವತಿ ಹಾಲೂಡಿಸಿದಳು. ಕ್ಷಣದಲ್ಲಿ ಮಗು ನಿದ್ದೆ ಹೋಗಿತ್ತು".

"ಮಗೂ ನಿದ್ದೆ ಮಾಡಿ ಬಿಡ್ತು. ಇನ್ನು ಎದ್ದ ಮೇಲೆ ನೀರು ಹಾಕ್ಬೇಕು. ನೀರಂತೂ ಕಾದೂ ಕಾದೂ ಇಂಗಿ ಹೋಯ್ತೇನೋ. ನಾನಿನ್ನ ಬರ್‍ತೀನಿ ಸಾವಿತ್ರಿ." ಲಕ್ಷ್ಮಿ ಕುಂಕುಮ ಕೊಟ್ಟು, ಬಾಣಂತಿಗೆಂದು ಅಡಿಕೆ ವೀಳ್ಯೇದೆಲೆಗಳನ್ನ ಕೊಟ್ಟಳು. ಅವಳು ಅತ್ತ ಹೋದ ಕೂಡಲೇ ಇಬ್ಬರೂ ಮುಖ ಮುಖ ನೋಡಿಕೊಂಡರು. ಆತಂಕ ತುಂಬಿತ್ತು.

"ನಂಗ್ಯಾಕೋ ಆತಂಕ ಆಗ್ತಿದೆ ಕಣೇ ಲಕ್ಷ್ಮಿ. ದತ್ತನ ಆರೋಗ್ಯ ಚೆನ್ನಾಗಿಲ್ಲ ಅಂತ ತಿಳಿದೂ, ಬಾವಿಯಿಂದ ನೀರನ್ನ ತುಂಬಿಕೊಂಡು ಬರೋಕೆ ಕಳಿಸಿದಾಳಲ್ಲ. ಏನ್ಹೇಳಲಿ! ಅವರ ಮನೆ ಬಾವಿಯೋ ನೆಲಬಾವಿ. ಕಟ್ಟೆಯೇ ಇಲ್ಲ."

"ಇವತ್ತೇನೂ ಮೊದಲಲ್ಲಿ ಅತ್ಗೇ. ದಿನಾ ನೀರನ್ನ ತಂದು ತುಂಬೋನು ಅವನೇ. ಇವತ್ತೆಲ್ಲೋ ಬೇಜಾರು ಮಾಡಿಕೊಂಡು ಹೊರಟು ಹೋಗಿರಬೇಕು."

"ಅಷ್ಟು ತಿಳುವಳಿಕೆ ಅದಕ್ಕೆಲ್ಲಿದೆ? ನೀನು ನನ್ನ ಸಮಾಧಾನಕ್ಕೆ ಈ ಮಾತುಗಳನ್ನ ಹೇಳ್ತಾ ಇದೀಯ. ವೈಕುಂಠ ಬರಲಿ, ಅವನನ್ನ ಬಾವಿಯ ಬಳಿ ನೋಡ್ಕೊಂಡು ಬಾ ಅಂತ ಕಳಿಸೋಣ. "ವೈಕುಂಠ ಬಂದು ಕೈ ಅಲ್ಲಾಡಿಸಿದ.

"ಅವ್ರು ಎಲ್ಲೂ ಇಲ್ರಾ. ಮನ್ಯಾಗೇ ಎಲ್ಲೋ ಅಡಕ್ಕೊಂಡಿರ್‍ಬೈದು."

"ಅವನು ಬಾವಿಯ ಹತ್ರ ಏನಾದ್ರೂ ಕೂತಿದಾನಾ ಅಂತ ಗುಟ್ಟಾಗಿ ನೋಡ್ಕೊಂಡು ಬಾ... ಇದ್ದರೆ ಇಲ್ಲಿ ನಂಗೆ ಬಂದು ಹೇಳು. ನನ್ತಂಗಿಗೆ ಹೇಳ್ಬೇಡ. "ವೈಕುಂಠ ಓಡಿ ಹೋದ. ಕ್ಷಣದಲ್ಲಿ ಹಿಂತಿರುಗಿದ್ದ.

"ಅಲ್ಲೆಲ್ಲೂ ಇಲ್ರಾ! ಕೊಡಪಾನ ಮಾತ್ರ ನೀರ್‍ಮೇಲೆ ತೇಲ್ತಾ ಐತೆ. ಬಾವಿ ನೀರು ಮೇಲ್ಗಂಟ ಐತೆ. ಮೆಟ್ಲೇ ಕಾಣಾಂಗಿಲ್ಲ." ಸಾವಿತ್ರಿಯ ಮುಖ ನಿಸ್ತೇಜ ಗೊಂಡಿತು.

"ಹೆಸರು ಹಿಡಿದು ಕೂಗ್ಬೇಕಾಗಿತ್ತು. ಪೊದೆ ಹಿಂದೆ ಕಕ್ಕಸಿಗೆ ಅಂತ ಏನಾದ್ರೂ ಕೂತಿದ್ನೋ ಏನೋ?"

"ದತ್ತಪ್ಪ. ಅಂತ ಕೂಗ್ದೆ ಕಣ್ರವ್ವಾ, ಬಾವಿ ಅತ್ರ ಯಾವ ಪೊದೆಯೂ ಇದ್ದಂಗಿಲ್ಲ. ನೀರೇ ಇಲ್ಲದೆ ಕಕ್ಕಸ್ಗೆ ಎಂಗೆ ಓಯ್ತಾರೆ." ನಕ್ಕ.

"ನಗೋ ವಿಷಯ ಅಲ್ಲ. ದತ್ತ ಕಳೆದು ಹೋಗಿದಾನೆ. ನನ್ತಂಗಿ ಆತಂಕ ಪಡ್ತಿದಾಳೆ. ಶ್ರೀಕಂಠಪ್ಪನೂ ಪೇಟೆಗೆ ಹೋಗಿದಾರೆ. ಈಗ್ಲೇ ಹೋಗಿ ನಮ್ಮನೆ ಅಯ್ಯಾರಿಗೆ ವಿಷಯ ತಿಳಿಸಿ ಕರ್ರೊಂಡ್ಬಾ." ವೈಕುಂಠ ಮತ್ತೆ ಓಡಿದ. ಕೆಲವೇ ನಿಮಿಷಗಳಲ್ಲಿ ಶಾಸ್ತ್ರಿ ಗಾಬರಿಯಿಂದ ಬಂದ.

"ದತ್ತ ಕಳೆದು ಹೋಗಿದಾನೆ ಅಂತ ನನಗೆ ಬಂದು ಹೇಳಿದ್ರೆ ನಾನು ಎಲ್ಲಿ ಹುಡುಕ್ಲಿ! ಕಂಠಿ ಬೆಳಿಗ್ಗೆ ರೈಲಿಗೆ ಹೋದ. ಇವನೂ ಯಾರ್ಗೂ ಗೊತ್ತಾಗ್ದಹಾಗೆ ರೈಲು ಹತ್ತಿದ್ನೋ ಏನೋ?... ಪೋಲೀಸ್ ಕಂಪ್ಲೆಂಟ್ ಕೊಡಬೇಕಾಗುತ್ತೆ ಅವನು ಸಿಗದೇ ಹೋದ್ರೆ... ಮತ್ತೆ ಪೇಟೆಗೇ ಹೋಗ್ಬೇಕಾಗುತ್ತೆ..."

"ಪಾರ್ವತಿ ಎಂಥಾ ಅವಿವೇಕಿ ಅಂತೀಯ. ಆ ಹುಡುಗನ್ನ ಬಾವಿಯ ಹತ್ರ ಕಳಿಸಿದ್ದಳಂತೆ. ಬಾವೀಲಿ ಭರ್ತಿ ನೀರಿದೆ. ಕೊಡ ಮೇಲೆ ತೇಲ್ತಿದೆಯಂತೆ. ಮೆಟ್ಟಿಲುಗಳೆಲ್ಲಾ ಮುಚ್ಚಿ ಹೋಗಿವೆಯಂತೆ. ಈಗ ಏನ್ಮಾಡೋದು?"

"ಹಾಗೇನೂ ಆಗಿರಲ್ಲ. ನೀನು ಅಂಥದ್ದನ್ನೆಲ್ಲ ಯಾಕೆ ಯೋಚಿಸ್ತೀಯ?" ಎಂದು ಹೇಳಿ ಪಾರ್ವತಿಯ ಮನೆಗೆ ಬಂದ. ಅವಳು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದಳು. ಅಣ್ಣನನ್ನು ಕಂಡೊಡನೆ ಗೋಳೋ ಅಂತ ಅಳತೊಡಗಿದಳು.

"ಅಳಬೇಡ. ಪಾತು... ಹುಡುಕಿಸೋಣ. ಈ ಜಾಗ ಬಿಟ್ಟು ಇನ್ನೆಲ್ಲಿಗೆ ಹೋಗ್ತಾನೆ?"

"ನಂಗ್ಯಾಕೋ ದಿಗಿಲಾಗ್ತಿದೆ. ಅವನಿಗೆ ಫಿಟ್ಸ್ ಬರುತ್ತೆ ಅಂತ ಗೊತ್ತಿದ್ದೂ ನೀರು ತುಂಬಿಕೊಂಡು ಬರೋಕೆ ಕಳಿಸ್ದೆ. ತಪ್ಪೆಲ್ಲಾ ನಂದೇ..." ಮತ್ತೆ ಅತ್ತಳು ಅಷ್ಟರಲಾಗಲೇ ವೈಕುಂಠನಿಂದ ವಿಷಯ ತಿಳಿದು ಕೆಲವು ಮಂದಿ ಅವರ ಮನೆಯ ಮುಂದೆ ಸೇರಿದರು. "ಏನೋ ಅನಾಹುತ ಖಂಡಿತಾ ನಡೆದಿದೆ. ಇವರೆಲ್ಲಾ ಯಾಕೆ ಬಂದಿದಾರೆ?" ಬಂದವರೆಲ್ಲಾ ಬಾವಿಯ ಬಳಿ ಹೋಗಿ ನೋಡಿ ಬಂದರು.

"ಕಂಠಿಯೂ ಮನೇಲಿಲ್ಲ. ರಾಜನೂ ಬಂದಿಲ್ಲ. ಏನ್ಮಾಡೋಣ ಅಂತೀಯ?"

"ನಂಗೇನೂ ತೋಚ್ತಿಲ್ಲ ಗುಂಡಣ್ಣ."

"ಶಾಸ್ತ್ರಿಗಳೇ ಬಾವಿಗೆ ಇಳಿಯೋರ್ಗೆ ಹೇಳಿ ಕಳ್ಸಿ. ಇಳಿದು ನೋಡ್ಲಿ."

"ಬಾವಿ ಭರ್ತಿ ನೀರು ಇದೆಯಲ್ಲಪ್ಪಾ. ಯಾರೂ ಇಳಿಯೂದಿಲ್ಲ."

"ಪಟೇಲರ ಮನೇಲಿ ಪಾತಾಳ ಗರಡಿ ಇದೆ. ಹಗ್ಗ ಕಟ್ಟಿ ಇಳೀ ಬಿಟ್ರೆ ಗೊತ್ತಾಗುತ್ತೆ." ಇನ್ನೊಬ್ಬರು ನುಡಿದರು. ತಕ್ಷಣವೇ ಯಾರೋ ಹೋಗಿ ಪಾತಾಳ ಗರಡಿಯನ್ನ ತಂದು ಹಗ್ಗಕ್ಕೆ ಕಟ್ಟಿ, ಬಾವಿಯೊಳಗೆ ಬಿಟ್ಟು ಅತ್ತಿತ್ತ ಓಡಾಡಿಸಿದರು.

ಒಂದು ಭಾಗದಲ್ಲಿ ಏನೋ ತಡೆದಂತಾಗಿತ್ತು.

"ಏನೋ ತಡೀತಿದೆ" ಎಂದು ಹೇಳಿ ಮತ್ತೆ ಮತ್ತೆ ಓಡಾಡಿಸಿದರು. ಇಷ್ಟೆಲ್ಲಾ ನಡೆಯುವ ವೇಳೆಗೆ ರಾಜ ಕಾಲೇಜಿನಿಂದ ಬಂದ. ತನ್ನ ಮನೆ ಮುಂದೆ ಜನ ಸೇರಿರುವುದನ್ನ ಕಂಡು ಗಾಬರಿಗೊಂಡು ಶಾಸ್ತ್ರಿಯ ಮನೆಗೆ ಬಂದ.

"ಅತ್ತೇ... ನಮ್ಮ ಮನೆ ಮುಂದೆ ಅಷ್ಟು ಜನ ಯಾಕೆ ಸೇರಿದಾರೆ?

"ದತ್ತ ಕಾಣೆಯಾಗಿದಾನೆ. ಬಾವಿಗೆ ನೀರು ತರೋಕೆ ಹೋಗಿದ್ನಂತೆ... ಅಲ್ಲಿ ಹುಡುಕಿಸ್ತಿದಾರೆ." ಅವನೂ ಪೆಚ್ಚಾದ... "ಅಮ್ಮ ಹೇಗಿದಾಳೋ" ಎನ್ನುವ ಆತಂಕ ಕಾಡಿತು. ಮನೆಗೆ ಬಂದ. ಪಾರ್ವತಿ ರಾಜನನ್ನ ಕಂಡು ಅತ್ತಳು.

"ನಾನು ಈಗ್ಲೇ ಹೋಗಿ ಅಪ್ಪನ್ನ ಕರ್ಕೊಂಡು ಬರ್ತೀನಿ." ಎಂದ.

"ಲಕ್ಷ್ಮ್ಯ ಬೋವಿ ಇದ್ದರೆ ಕರ್ಕೊಂಡ್ಬಾ... ಅವನು ಬಾವಿಗೆ ಇಳೀತಾನೆ." ಮತ್ತೊಬ್ಬರು ಸಲಹೆ ಕೊಟ್ಟರು. ರಾಜ ಲಕ್ಷ್ಮ್ಯ ಬೋವಿಯ ಮನೆಗೆ ಬಂದು ವಿಷಯ ವನ್ನ ಹೇಳಿ ಅವನನ್ನ ಮನೆಗೆ ಕಳಿಸಿದ. ಅಲ್ಲಿಂದ ಪೇಟೆಯ ಕಡೆಗೆ ಹೊರಟ. ಸೀದಾ ಹಾಲು ಹಾಕುವ ಹೋಟೆಲ್ಲಿಗೆ ಬಂದ. ಕಂಠಿ ಅಲ್ಲೇ ಇದ್ದ. ರಾಜ ಅಪ್ಪನಿಗೆ ವಿಷಯ ತಿಳಿಸಿ, ಸೈಕಲ್ ಕ್ಯಾರಿಯರ್ ಮೇಲೆ ಕೂರಿಸಿಕೊಂಡು ಬಂದ. ಕಂಠಿ ಉದ್ದಕ್ಕೂ "ವಟ ವಟ" ಅಂತ ಅನ್ನುತ್ತೇ ಇದ್ದ. ಪೆಡಲ್ ತುಳಿದು ತುಳಿದು ರಾಜ ಸುಸ್ತಾದ. ಇಬ್ಬರೂ ಮನೆಯ ಬಳಿಗೆ ಬರುವ ಹೊತ್ತಿಗೆ ಸಂಜೆಯ ಸಮಯವಾಗುತ್ತಿತ್ತು. ಬಾವಿಗೆ ಇಳಿದಿದ್ದ ಬೋವಿ, ದತ್ತನ ಶರೀರವನ್ನ ಹೊರಕ್ಕೆ ಎತ್ತಿ ಹಾಕಿದ್ದ. ಎಲ್ಲರೂ ಊಹಿಸಿದ್ದಂತೆ, ತಲೆ ಕೆಳಗಾಗಿ ಬಿದ್ದ ದತ್ತನಿಗೆ, ತಲೆಗೆ ಏನೋ ತಾಗಿ ಪೆಟ್ಟಾಗಿತ್ತು. ಆಗಲೇ ಪ್ರಾಣವೂ ಹೋಗಿತ್ತು.

ಕಂಠಿ ಗರ ಬಡಿದವನಂತೆ ನೋಡುತ್ತಾ ನಿಂತ. ಪಾರ್ವತಿ ಅವನ ಶರೀರದ ಮುಂದೆ ಕೂತು ಬಿಕ್ಕಿ ಬಿಕ್ಕಿ ಅತ್ತಳು. "ಅಯ್ಯೋ ಮುಂಡೇದೆ ಅಂತೂ ನಮ್ಮನ್ನೆಲ್ಲಾ ಬಿಟ್ಟು ಹೊರಟು ಹೋದ್ಯಾ?" ಸಾವಿತ್ರಿ ಪಾರ್ವತಿಯ ಪಕ್ಕ ಕುಳಿತು ಸಮಾಧಾನ ಹೇಳಿದಳು.

"ಅದರ ಕಷ್ಟ ತೀರಿತು ಅಂತ ಸಮಾಧಾನ ಮಾಡ್ಕೋ ಪಾತು... ಪಾಪ ಎಷ್ಟು ಕಷ್ಟಾನ ಅನುಭವಿಸ್ತು."

"ನಂಗೆ ಗೊತ್ತಿತ್ತು ಒಂದಲ್ಲ ಒಂದು ದಿನ ಹೀಗಾಗುತ್ತೆ ಅಂತ... ಬೇಡಾಂತ ಹೇಳಿದ್ರೂ ಬಾವಿ ಹತ್ರಕ್ಕೆ ಕಳಿಸ್ತಿದ್ಯಲ್ಲ. ಈಗ ಏನಾಯ್ತು ಅಂತ ನೋಡು" ಕಂಠಿ ಎಲ್ಲರೆದುರಿಗೇ ಹೆಂಡತಿಯನ್ನ ಬೈದ.

"ಮುಗೀತಲ್ಲ. ಇನ್ಯಾರನ್ನ ಕೈ ನೋಯುವಷ್ಟು ಹೊಡೀತೀರಿ? ಹೊಡೆತ ತಿಂದೂ ತಿಂದೂ ಅದಕ್ಕೆ ಸಾಕಾಗಿತ್ತು." ಅವಳು ಅಳುತ್ತ ನುಡಿದಳು. ಅವನು ಮತ್ತೆ

ಬಾಯಿ ಬಿಡುವಷ್ಟರಲ್ಲಿ, ನಾಗಪ್ಪ ಭಟ್ಟರು, ಶಾಸ್ತ್ರೀಯ ಕಡೆ ಸಂಜ್ಞೆ ಮಾಡಿದರು. ಶಾಸ್ತ್ರಿ ವೆಂಕಟಾಚಲಯ್ಯನ ಕಡೆ ನೋಡಿದ.

"ಈಗ ನೀವು ಇಬ್ಬರೂ ವಾದ ಮಾಡ್ತಾ ಕೂತರೆ, ಮುಗಿಯೋದೇ ಇಲ್ಲ. ನೀರಿಗೆ ಬಿದ್ದು ಎಂಟು ಹತ್ತು ಗಂಟೆಗಳ ಕಾಲ ಆಗಿದೆ. ದೇಹದೊಳಕ್ಕೆ ನೀರು ತುಂಬಿ ಕೊಂಡಿದೆ. ಆಮೇಲೆ ಹೆಣ ಭಾರ ಆಗುತ್ತೆ. ಆದಷ್ಟು ಬೇಗ ಮುಂದಿನ ಕಾರ್ಯಗಳನ್ನ ಮುಗಿಸೋದೇ ಒಳ್ಳೇದು." ಅವನು ನುಡಿದ.

"ನೀನ್ಯಾರಯ್ಯ ನಮಗೆ ತಿಳುವಳಿಕೆ ಹೇಳೋಕೆ? ನಮಗೂ ಗೊತ್ತು" ಕಂಠಿ ಗುಡುಗಿದ.

"ಶ್ರೀ ಕಂಠಪ್ನೋರೆ... ಸ್ವಲ್ಪ ಸಹನೆಯಿಂದಿರಿ. ಇವರು ಈ ಹಳ್ಳಿಯ ಛೇರ್ ಮನ್ನರು. ಹಳ್ಳಿಯವರ ಒಳ್ಳೇದು ಯಾವುದು ಅಂತ ಹೇಳೋ ಅಧಿಕಾರ ಅವರಿಗಿದೆ. ನೀವು ಹಿಂಗೆಲ್ಲಾ ಮಾತಾಡಿದ್ರೆ ಹೆಂಗೆ! ಹೆತ್ತ ಕರುಳು ಮಿಡೀತಿದೆ. ಪಾರ್ವತಮ್ಮನ ದುಃಖ ಜಾಸ್ತಿ ಆಗಲ್ವಾ?" ನಾಗಪ್ಪ ಭಟ್ಟರು ನುಡಿದರು.

"ಹೋಗ್ಲಿ ಬಿಡು ಕಂಠೀ... ಈಗ್ಲಾದ್ರೂ ಸ್ವಲ್ಪ ಸುಮ್ಮನಿರು. ಪಾರ್ವತಿಗೆ ಸಮಾಧಾನ ಹೇಳು." ಕಂಠಿ ಸುಮ್ಮನೇ ಪಾರ್ವತಿಯ ಕಡೆ ನೋಡಿದ.

"ದತ್ತ ಏಳೋ... ಇನ್ನೆಂದೂ ನಿನ್ನನ್ನ ಬಾವಿಗೆ ಕಳಿಸಲ್ಲ. ಎದ್ದೇಳೋ" ಪಾರ್ವತಿ ಮಗನನ್ನ ಎಬ್ಬಿಸುತ್ತಿದ್ದಳು. ಅಲ್ಲಿ ನಿಂತಿದ್ದವರ ಕಣ್ಣುಗಳು ಮಂಜಾಗಿದ್ದವು.

"ಪಾರ್ವತೀನ ಒಳಕ್ಕೆ ಎಬ್ಬಿಸಿಕೊಂಡು ಹೋಗು ಸಾವಿತ್ರಿ... ಹಸೀ ಮೈ ಬಾಣಂತಿ. ಅವಳ ಆರೋಗ್ಯ ಕೆಡುತ್ತೆ" ಶಾಸ್ತ್ರಿ ಎಂದ. ಸಾವಿತ್ರಿ ಪಾರ್ವತಿಯನ್ನು ಎಬ್ಬಿಸಿದಳು.

"ನಾನು ಇನ್ನು ಹೇಗೇ ಇರ್ಲೀ ಸಾತು? ಯಾರನ್ನ ದತ್ತ ಅಂತ ಕರೀಲೇ? ಎಂಥಾ ಕೆಲ್ಸ ಮಾಡಿ ಬಿಡ್ತಲ್ಲೇ ಪಾಪಿ ಮುಂಡೇದು..." ಸಾವಿತ್ರಿಯನ್ನ ತಬ್ಬಿಕೊಂಡಳು.

"ಪಾರ್ವತಿ ಇನ್ನು ಸಾಕು ಮಾಡು. ಮಕ್ಕಳೆಲ್ಲಾ ಹೆದರಿ ನಡುಗುತ್ತಿವೆ. ಸುಮ್ಮನೇ ಒಳಗೆ ಹೋಗು." ಪಾರ್ವತಿ, ದತ್ತನ ಶರೀರವನ್ನ ಮತ್ತೆ ಮತ್ತೆ ನೋಡುತ್ತ ಬಿಕ್ಕಿ ಬಿಕ್ಕಿ ಅಳುತ್ತ, ಮನೆಯೊಳಕ್ಕೆ ಹೋದಳು.

"ಶ್ರೀ ಕಂಠಪ್ನೋರೆ, ಈಗ ಮುಂದೇನು ಅಂತ ನೀವೇ ಹೇಳಿ. ನಿಮ್ಮ ಕಡೆ ಯವರಿಗೆ ತಿಳಿಸೋದಾದ್ರೆ ತಿಳಿಸಿ. ಯಾರಾದ್ರೂ ಬರೋರಿದಾರಾ!"

"ಯಾರೂ ಬರೋದು ಬೇಡ. ಮೀನಾಕ್ಷಿ ಬಾಣಂತಿ. ಹೇಗೂ ಬರಲ್ಲ. ಇವನಿಗೆ ಉಪನಯನ ಆಗಿತ್ತು. ವಿಧಿ ಪೂರ್ವಕವಾಗಿ ಶವ ಸಂಸ್ಕಾರ ಮಾಡಬೇಕು. ಮಾಡಿಸು ವವರು ಬರೋವರ್ರೂ ನಾನು ಹೆಣವನ್ನು ಕದಲಿಸುವುದಿಲ್ಲ."

"ಇಷ್ಟು ಹೊತ್ನಲ್ಲಿ ಯಾರು ಸಿಗ್ತಾರೆ ಶ್ರೀಕಂಠಯ್ಯನೋರೆ. ಏನಿದ್ರೂ ಬೆಳಿಗ್ಗೇನೆ...

ಅಲ್ಲೀವರ್ಗೂ ಹೆಣಾನ ಹಾಗೇ ಇಟ್ಕೊಂಡಿರ್ತೀರಾ?...." ಅಕ್ಕಪಕ್ಕದ ಕಾಡ್ನಲ್ಲಿ ಪ್ರಾಣಿಗಳಿವೆ. ಬಂದರೆ ಏನ್ಮಾಡ್ತೀರಿ?..." ಇನ್ನೊಬ್ಬರು ಎಚ್ಚರ ನೀಡಿದರು.

"ನಾನು ಕಾಯ್ತೀನಿ. ಬೆಳಗಿನವರೆಗೂ ಎಚ್ಚರವಾಗಿದ್ದು ಕಾಯ್ತೀನಿ. ಶಾಸ್ತ್ರಿ ಈಗ್ಲೇ ಪೇಟೆಗೆ ಹೋಗಿ ಈ ವಿಧಿಗಳನ್ನ ಮಾಡಿಸೋರನ್ನ ಕರ್ಕೊಂಡು ಬಾ. ಅದೇನೇನು ಬೇಕೋ ಅದನ್ನ ಅವರೇ ತರುವಂತೆ ಹೇಳಿಬಿಡು." ಅವನು ಅಷ್ಟು ಹೇಳಿದ ಮೇಲೆ, ಯಾರೂ ಮತ್ತೆ ಮಾತನಾಡಲಿಲ್ಲ. ಕೆಲವರು ತಮ್ಮ ತಮ್ಮ ಮನೆಗೆ ಹೊರಟು ಹೋದರು.

"ಲಕ್ಷ್ಮೀ ಈ ಮಕ್ಕಳನ್ನೆಲ್ಲಾ ಮನೆಗೆ ಕರ್ಕೊಂಡು ಹೋಗು. ನಾನು ಇಲ್ಲಿ ಪಾರ್ವತಿಯ ಜತೇಲಿರ್ತೀನಿ" ಸಾವಿತ್ರಿ ನುಡಿದಳು. ಲಕ್ಷ್ಮಿ ಚಿಕ್ಕ ಮಕ್ಕಳನ್ನ ತನ್ನ ಮನೆಗೆ ಕರೆದುಕೊಂಡು ಹೋದಳು.

ಶವಸಂಸ್ಕಾರಕ್ಕೆ ಬೇಕಾದ ಸಾಮಾನುಗಳನ್ನ ತೆಗೆದುಕೊಂಡು ಇಬ್ಬರು ಬ್ರಾಹ್ಮಣರು, ಬೈಸಿಕಲ್ಲನ್ನೇರಿಕೊಂಡು, ಶಾಸ್ತ್ರಿಯೊಂದಿಗೆ ಬಂದರು. ಅವರುಗಳು ಬರುವ ಹೊತ್ತಿಗೆ ಚೆನ್ನಾಗಿ ಕತ್ತಲಾಗಿತ್ತು. ಈ ಕತ್ತಲಲ್ಲಿ ಹೇಗೆ ಮಾಡೋದು. ಬೆಳಿಗ್ಗೆ ಮಾಡೋಣ" ಬ್ರಾಹ್ಮಣರು ಎಂದರು.

"ಈಗಾಗ್ಲೇ ಹೆಣಾನ ಸಾಕಷ್ಟು ಹೊತ್ನಿಂದ ಕಾದಿದ್ದಾಗಿದೆ. ದೇಹದಲ್ಲಿ ನೀರು ಸೇರಿದೆ. ರಾತ್ರಿಯ ಹೊತ್ತು ಹೆಣ ಕಾಯುವುದು ಕಷ್ಟ. ಮನೆಯೊಳಕ್ಕೆ ತೆಗೆದುಕೊಂಡು ಹೋಗುವುದು ಬೇಡ. ಕಾಡು ನಾಯಿಗಳೋ ಕಿರುಬಗಳೋ ಬಂದು ಹೆಣಕ್ಕೆ ಬಾಯಿ ಹಾಕಿದರೆ, ಅಪಚಾರವಾಗುತ್ತೆ. ಮೊದಲೇ ದುರ್ಮರಣ. ಈಗ ಶವಕ್ಕೆ ಸಂಸ್ಕಾರವಾದರೂ ಸರಿಯಾಗಿ ನಡೆಯಲಿ. ಪೆಟ್ರೋಮ್ಯಾಕ್ಸ್ ದೀಪಗಳನ್ನ ತರಿಸ್ತೀನಿ." ಎಂದು ವೆಂಕಟಾಚಲಯ್ಯ ನುಡಿದಾಗ ಕಂಠಿ ವಿರೋಧಿಸಿದ.

"ಮಧ್ಯಾಹ್ನದಿಂದ ಮನೆ ಮಕ್ಕಳೆಲ್ಲ ಹಸಿದುಕೊಂಡು ಕೂತಿದಾರೆ. ಬಾಣಂತಿ, ಬಾಯಿಗೆ ಒಂದು ಹನಿ ನೀರು ಹಾಕಿಲ್ಲ, ಹಳ್ಳಿಯ ಮಂದಿಯೆಲ್ಲಾ ಇಲ್ಲಿ ನೆರೆದಿದ್ದಾರೆ. ಇದು ಬರೀ ನಿಮ್ಮ ಮನೆಯ ವಿಷಯವಲ್ಲ, ಹಳ್ಳಿಗೂ ಸೇರಿದ್ದು. ಗ್ರಾಮ ಪಂಚಾಯಿತಿಯ ಛೇರ್‌ಮನ್ ಆಗಿ ನಾನು ಹೇಳ್ತಾ ಇದೀನಿ. ಪರಿಸ್ಥಿತಿಯನ್ನ ಅರ್ಥ ಮಾಡ್ಕೊಳ್ಳಿ ಶ್ರೀಕಂಠಯ್ಯ... ನಿಮ್ಮ ದುಃಖದಲ್ಲಿ ನಾವುಗಳೂ ಸಮಭಾಗಿಗಳು. ದತ್ತ ಈ ಗ್ರಾಮದ ಹುಡುಗ. ನಮ್ಮೆಲ್ಲರಿಗೂ ಅವನ ಮೇಲೆ ಪ್ರೀತಿ ಇತ್ತು. ಅವನ ಬಗ್ಗೆ ಅನುಕಂಪವಿತ್ತು. ಈ ಹೊತ್ನಲ್ಲಿ ಮಾಡಬಾರದು ಅಂತೇನಿಲ್ಲ. ಬೇಕಾದುದನ್ನೆಲ್ಲಾ ನಾನು ವ್ಯವಸ್ಥೆ ಮಾಡ್ತೀನಿ. ಎಲ್ಲರೂ ಸಹಾಯ್ಯ ಮಾಡ್ತಾರೆ. ಸಹಕರಿಸ್ತಾರೆ. ದಯವಿಟ್ಟು ನೀವು ಒಪ್ಪಿಗೆ ಕೊಡಿ" ವೆಂಕಟಾಚಲಯ್ಯ ಕೈ ಮುಗಿದ. ಶಾಸ್ತ್ರಿ ಮಾತನ್ನ ಅನುಮೋದಿಸಿದ.

"ಕಂಠೀ ಈ ಹೊತ್ನಲ್ಲೂ ಹಠ ಯಾಕೆ? ಇಡೀ ರಾತ್ರಿ ನೀನು ಹೆಣ ಕಾದರೂ,

ನಿಮ್ಮಿಬ್ಬರ ಋಣ ಇಷ್ಟೇ. ಮನೆಯ ಯಜಮಾನನಾಗಿ ನೀನೇ ಅರಿತುಕೊಳ್ಳಬೇಕಾಗಿತ್ತು. ಏನೋ ಇಂಥಾ ಹೊತ್ನಲ್ಲಿ ತಲೆ ಓಡಲ್ಲ... ವೆಂಕಟಾಚಲಯ್ಯ ಹೇಳೋದ್ರಲ್ಲಿ ಅರ್ಥ ಇದೆ... ಸುಮ್ನೇ ಒಪ್ಕೋ... ಇವರುಗಳೆಲ್ಲಾ ಮಧ್ಯಾಹ್ನದಿಂದ ನಿನ್ನ ಮನೆಯ ಮುಂದೆಯೇ ಇದಾರೆ. ಈ ಕಾರ್ಯ ಬೇಗ ಮುಗಿದರೆ, ಬೇಗ ಹೋಗ್ತಾರೆ. ಇಲ್ಲದಿದ್ದರೆ, ನಿನ್ನೊಂದಿಗೆ ಅವರುಗಳೂ ಇರ್ತಾರೆ."

"ಯಾರೂ ನನ್ನ ಮನೆಯ ಮುಂದೆ ಕಾಯಬೇಕಾಗಿಲ್ಲ. ನಿಮ್ಮ ನಿಮ್ಮ ಪಾಡಿಗೆ ನೀವು ಹೋಗಬಹುದು" ಅವನು ಒರಟಾಗಿ ನುಡಿದ. ಅಲ್ಲೇ ಜಗುಲಿಯ ಮೇಲೆ ಮಗುವನ್ನೆತ್ತಿಕೊಂಡು ಕುಳಿತಿದ್ದ ಪಾರ್ವತಿ ಅವನ ಕಡೆ ತಿರುಗಿ ನುಡಿದಳು.

"ಹೆತ್ತ ಕರುಳು ಬೆಂದು ಹೋಗ್ತಿದೆ. ಇಂಥಾ ಸಮಯದಲ್ಲೂ ನಿಮ್ಮ ಹಠವೇ ಗೆಲ್ಲಬೇಕು ಅಂತ ಅಂತೀರಲ್ಲ. ಇದ್ಯಾವ ನ್ಯಾಯ? ಹೆಣದ ಮುಖ ವಿಕಾರವಾಗುವ ಮೊದಲು ಅಂತ್ಯ ಸಂಸ್ಕಾರವನ್ನ ಮುಗಿಸಿ, ದತ್ತ ನೋಡಲು ರೂಪಸ್ಥನಾಗಿದ್ದ. ಆ ರೂಪು ನನ್ನ ನೆನಪಿನಲ್ಲಿ ಉಳಿಯಲಿ. ನನ್ನ ಈ ಮಾತನ್ನಾದರೂ ನಡೆಸಿಕೊಡಿ" ಬಿಕ್ಕುತ್ತ ಗದ್ಗದ ಸ್ವರದಲ್ಲಿ ನುಡಿದಾಗ, ಅವನ ಮನಸ್ಸು ಸ್ವಲ್ಪ ಮೆತ್ತಗಾಗಿರಬೇಕು. ತನ್ನ ಒಪ್ಪಿಗೆಯನ್ನ ಕೊಟ್ಟ. ಆ ವೇಳೆಗಾಗಲೇ, ಪಟೇಲರ ಮನೆಯಿಂದ, ರೂಪ್ಲಾ ನಾಯಕನ ಮನೆಯಿಂದ ಪೆಟ್ರೋಮ್ಯಾಕ್ಸ್ ದೀಪಗಳು ಬಂದಿದ್ದವು. ಬ್ರಾಹ್ಮಣರು ಕಾರ್ಯ ಸನ್ನದ್ಧರಾದರು. ಅಂತಿಮ ಸಂಸ್ಕಾರಕ್ಕೆ ಬೇಕಾದ ಸಿದ್ಧತೆಗಳು ಪ್ರಾರಂಭವಾದವು. ಮನೆಯ ಮುಂದೆ ಬೆಂಕಿ ಹೊತ್ತಿಸಿದರು. ಚಟ್ಟವನ್ನ ಕಟ್ಟಿದರು. ಅದರ ಮೇಲೆ ದತ್ತನ ಶರೀರವನ್ನು ಮಲಗಿಸಿ ಕಟ್ಟಿದರು. ಕೈಕಾಲುಗಳನ್ನ ಮಡಿಸಲು ಆಗದಂತೆ ಗಡುಸಾಗಿದ್ದವು. ಅವನ ಬಾಯಿಗೆ ಅಕ್ಕಿ ಕಾಳನ್ನ ಹಾಕುವ ಮೊದಲು, ಗಂಗಾಜಲವನ್ನ ಪ್ರೋಕ್ಷಿಸಿದರು. ತುಳಸೀದಳವನ್ನೂ ಗಂಗಾಜಲವನ್ನೂ ಬಾಯಿಗೆ ಹಾಕಿದರು. ನಂತರ ಒಬ್ಬೊಬ್ಬರಾಗಿ ಅಕ್ಕಿ ಕಾಳನ್ನೂ ಹಾಕಿದರು. ಶಾಸ್ತ್ರಿ, ವೆಂಕಟಾಚಲಯ್ಯ, ನಾಗಪ್ಪ ಭಟ್ಟರು ಹಾಗೂ ಬ್ರಾಹ್ಮಣರ ಪೈಕಿ ಒಬ್ಬರು, ಚಟ್ಟಕ್ಕೆ ಹೆಗಲನ್ನ ಕೊಟ್ಟರು. ಕಂಠಿ ಹೆಣದ ಮುಂದೆ ಬೆಂಕಿಯನ್ನ ಹೊತ್ತು ನಡೆದ. ಶವವನ್ನ ಎತ್ತಿಕೊಂಡು ಹೊರಡುತ್ತಿದ್ದಂತೆ ಪಾರ್ವತಿ ದುಃಖವನ್ನ ತಡೆಯಲಾರದೇ ಬಿದ್ದು ಬಿಟ್ಟಳು. ಅವಳನ್ನು ಎತ್ತಿ ಕೂಡಿಸಿ ಶುಶ್ರೂಷೆ ಮಾಡಬೇಕಾಯ್ತು. ಪೆಟ್ರೋಮ್ಯಾಕ್ಸ್ ದೀಪದ ಬೆಳಕಿನಲ್ಲಿ, "ರಘುಪತಿ ರಾಘವ ರಾಜಾರಾಮ್" ಭಜನೆಯನ್ನ ಹೇಳಿಕೊಂಡು ಶವವನ್ನ ಸ್ಮಶಾನಕ್ಕೆ ಸಾಗಿಸಿದರು. ಹಳ್ಳಿಯ ಅನೇಕ ಮಂದಿ ಗಂಡಸರು, ಅವರೊಡನೆ ನಡೆದರು. ಈಶ್ವರನ ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ, ಕೆರೆಯ ಸಮೀಪದಲ್ಲಿ ಅಶ್ವತ್ಥ ಮರದ ಬಳಿ ಶವವನ್ನ ಇಳಿಸಿದರು. ಮತ್ತೆ ಕೆಲವು ವಿಧಿಗಳು ಪೂರೈಸಿದ ನಂತರ, ಕಂಠಿ ದತ್ತನ ಶರೀರಕ್ಕೆ, ಕೊಳ್ಳಿಯಿಂದ ಬೆಂಕಿಯನ್ನ ಹೊತ್ತಿಸಿದ. ಅದುವರೆಗೂ ತಡೆದಿದ್ದ ದುಃಖದ ಕಟ್ಟೆ

ಒಡೆದಿತ್ತು. ಕಂಠಿ ಬಿಕ್ಕಿ ಬಿಕ್ಕಿ ಅತ್ತ.

ಚೆನ್ನಾಗಿ ಬೆಂಕಿ ಹತ್ತಿ ಉರಿಯುವವರೆಗೂ ಸ್ವಲ್ಪ ಹೊತ್ತು ಕಾದಿದ್ದು, ಎಲ್ಲರೂ ಮೌನವಾಗಿ ಹಿಂತಿರುಗಿ, ಅವರವರ ಮನೆಗೆ ತೆರಳಿದರು. ತಣ್ಣೀರಿನಲ್ಲೇ ಸ್ನಾನ ಮಾಡಿದರು. ಶಾಸ್ತ್ರಿಯ ಮನೆಯಿಂದ, ಪಾರ್ವತಿ ಮನೆಯವರೆಗೆ ಆಗುವಷ್ಟು ಅಡಿಗೆ ಯನ್ನ ಕಳಿಸಿಕೊಟ್ಟರು. ಆ ಹೊತ್ನಲ್ಲಿ ಊಟ ಬೇಡವೆನಿಸಿದರೂ, ಮನಸ್ಸಿಗೆ ಮೋಡ ಕವಿದಿದ್ದರಿಂದ ಕಂಠಿ ಗಬಗಬನೆ ಸೇರಿದಷ್ಟನ್ನ ಉಂಡ. ಅವನ ಮಕ್ಕಳೆಲ್ಲಾ ಊಟ ಮಾಡಿ ಶಾಸ್ತ್ರೀಯ ಮನೆಯಲ್ಲೇ ಮಲಗಿದ್ದರು. ಬ್ರಾಹ್ಮಣರು ವಾಪಸ್ಸು ಹೊರಟು ಹೋಗಿದ್ದರು. ಶಾಸ್ತ್ರಿ ಊಟದ ನಂತರ ಕಂಠಿಯ ಮನೆಗೆ ಬಂದ. ಸಾವಿತ್ರಿ ಸ್ನಾನ ಮಾಡಿ ಫಲಾಹಾರವನ್ನ ಮುಗಿಸಿ ತಾನೂ ಬಂದಳು. ಆಗೊಮ್ಮೆ ಈಗೊಮ್ಮೆ ಮಗನನ್ನ ನೆನೆಸಿಕೊಂಡು ಮಾತನಾಡುತ್ತ ರಾತ್ರಿಯನ್ನ ಕಳೆದರು. ಬೆಳಗಾಗಿತ್ತು. ಬ್ರಹ್ಮಣರಿಬ್ಬರೂ ಯಾವಾಗಲೋ ಹೊರಟು ಹೋಗಿದ್ದರು.

* * *

ವಾರ್ತೆ ತಿಳಿದ, ಬೀಗರು ಬಂದು ಮಾತನಾಡಿಸಿಕೊಂಡು ಹೋಗಿದ್ದರು. ಪಾರ್ವತಿಯ ಅಣ್ಣ ತಮ್ಮಂದಿರು, ಕಂಠಿಯ ತಂಗಿಯರು ಬಂದು ಹೋದರು. ಮೀನಾಕ್ಷಿ ಬಾಣಂತಿಯಾದುದರಿಂದ ಬರಲಾಗಿರಲಿಲ್ಲ. ತಂದೆ ತಾಯಿಗೆ ದೀರ್ಘವಾದ ಪತ್ರವನ್ನ ಬರೆದು ತನ್ನ ದುಃಖವನ್ನ ತೋಡಿಕೊಂಡು, ಸಂತಾಪವನ್ನ ವ್ಯಕ್ತಪಡಿಸಿದ್ದಳು. ನಂತರದ ದಿನ ಕರ್ಮಗಳನ್ನ ಗೋಕರ್ಣದಲ್ಲಿ ಮಾಡುವುದಾಗಿ ಕಂಠಿ ನಿರ್ಧರಿಸಿದ್ದ. ಅವನೊಂದಿಗೆ, ಶಾಸ್ತ್ರಿ ಹಾಗೂ ನಾಗಪ್ಪಭಟ್ಟರು ಹೋಗುವುದೆಂದು ತೀರ್ಮಾನಿಸಿದ್ದರು. ಅಂತೆಯೇ ಹತ್ತು ದಿನಗಳ ನಂತರ ಗೋಕರ್ಣಕ್ಕೆ ಹೋಗಿ ಕರ್ಮಾಂತರಗಳನ್ನ ಮುಗಿಸಿಕೊಂಡು ಬಂದರು.

ಹಳ್ಳಿಯ ಜನರ ಸಹಕಾರ, ಸಹಾನುಭೂತಿಯನ್ನ ಕಂಡು ಕಂಠಿ ತನ್ನನ್ನ ತಾನು ತಿದ್ದಿಕೊಳ್ಳಬೇಕೆಂದುಕೊಂಡ. ಅಹಂಕಾರ, ದರ್ಪ, ಜಂಭ ಯಾವುದೂ ಮನುಷ್ಯನಿಗೆ ಸಮಯದಲ್ಲಿ ಸಹಾಯಕವಾಗುವುದಿಲ್ಲ ಎಂಬ ಅರಿವು ಮೂಡಲಾರಂಭಿ ಸಿತು. ಆದರೆ ಬಿಗುಮಾನ ಇನ್ನೂ ಕಡಿಮೆ ಆಗಿರಲಿಲ್ಲ.

ಊಟ ತಿಂಡಿಯನ್ನ ಬಿಟ್ಟು ನಿದ್ದೆ ಗೆಟ್ಟು, ರೋಗಿಯಂತಾಗಿದ್ದ ಪಾರ್ವತಿಯ ಬಗ್ಗೆ ಮರುಕವೆನಿಸುತ್ತಿತ್ತು. ತಾನು ದತ್ತನನ್ನ ನಡೆಸಿಕೊಂಡ ರೀತಿ ನೆನಪಿಗೆ ಬಂದು ಹಿಂಸೆ ಆಗುತ್ತಿತ್ತು. ಪಾಪ ಅವನ ತಪ್ಪೇನು ಇರುತ್ತಿತ್ತು? ಆ ರೀತಿ ಅವನು ಇದ್ದುದು ತಪ್ಪೇ? ನಾನು ಅವನನ್ನ ಚೆನ್ನಾಗಿ ನೋಡಿಕೊಳ್ಳಲಿಲ್ಲ. ಕಟುಕನಂತೆ ಹೊಡೆದು ಬಡಿದು, ರೋಷದಿಂದ ಒದೆಯುತ್ತಿದ್ದೆ. ತನಗಿಂತ ಎತ್ತರಕ್ಕೆ ಬೆಳೆದುನಿಂತ, ಅವನು ತಿರುಗಿಸಿ ಹೊಡೆದಿದ್ದರೆ, ತಾನು ತತ್ತರಿಸಿ ಬೀಳುತ್ತಿದ್ದೆನೇನೋ. ನನ್ನ ಹೊಡೆತಗಳನ್ನ

ಬೈಗುಳವನ್ನ ಸಹಿಸಿಕೊಂಡು ಸತ್ತೇ ಹೋದ. ಈಗ ದತ್ತ ನಮ್ಮ ಜೊತೆಯಲಿಲ್ಲ ಅಂತ ನೆನೆಸಿಕೊಂಡರೆ ತಳಮಳವಾಗುತ್ತೆ. ನನಗೇ ಹೀಗಾದರೆ ಪಾರ್ವತಿಯ ಸಂಕಟಕ್ಕೆ ಕೊನೆ ಇಲ್ಲ. ಆದರೆ ಯಾರೊಡನೆಯೂ ಹೇಳಿಕೊಳ್ಳುವಂತಿಲ್ಲ. ಒಳ್ಳೆಯ ಪತಿ ತಾನಾಗಲಿಲ್ಲ, ಒಳ್ಳೆಯ ತಂದೆ ಎನ್ನಿಸಿಕೊಳ್ಳಲಿಲ್ಲ. ಹಳ್ಳಿಯ ಜನರು, ಒಳ್ಳೆಯ ಮನುಷ್ಯ ಎನ್ನಲಿಲ್ಲ. ನಿವ್ಯಾಕೆ ಹೀಗೆ ಎಂದು ಪಾರ್ವತಿ ಪ್ರಶ್ನಿಸುತ್ತಿರಲಿಲ್ಲ. ಅಪ್ಪಾ, ಹೊಡೆಯೋದ್ಯಾಕೆ ಅಂತ ದತ್ತ ವಿರೋಧಿಸಲಿಲ್ಲ. ಹಳ್ಳಿಯವರು ಎದುರಿಗೆ ಏನನ್ನೂ ಆಡುತ್ತಿರಲಿಲ್ಲ. ನಗುತ್ತಿದ್ದರೇನೋ ಅಷ್ಟಾದರೂ ತಾನು ಬದಲಾಗಿರಲಿಲ್ಲ. ಇದ್ದಕ್ಕಿದ್ದಂತೆ ಅವನ ಮನದಲ್ಲಿ ಒಂದು ಹೊಸ ಆಲೋಚನೆ ಮೂಡಿತು.

"ಪಾರ್ವತಿ..." ಧ್ವನಿ ಮೆತ್ತಗಿತ್ತು.

"ಏನಾದ್ರೂ ಬೇಕಾಗಿತ್ತಾ?" ಅವಳು ನಿರುತ್ಸಾಹದಿಂದ ಕೇಳಿದಳು.

"ದತ್ತನ ನೆನಪು, ಕೂತ್ರೆ ನಿಂತ್ರೆ ಕಾಡ್ತಿದೆ. ದೇಶಾಂತರ ಹೊರಟು ಹೋಗೋಣ ಅಂತ ಅನ್ನಿಸ್ತಿದೆ. ಪಾರ್ವತೀ...ಈ ಮನೆ ಮಠ, ಸಂಸಾರ ಯಾವುದೂ ಬೇಡ ಅಂತನ್ನಿಸ್ತಿದೆ." ಅವಳಿಗೆ ಗಂಡನ ಮಾತಿನ ಮೇಲೆ ವಿಶ್ವಾಸ ಮೂಡಲಿಲ್ಲ. ಆದರೂ, ಇವನೊಬ್ಬ ವಿಚಿತ್ರ ಮನುಷ್ಯ. ಮನಸ್ಸಿಗೆ ಅನ್ನಿಸಿದ್ದನ್ನ ಕಾರ್ಯಗತ ಮಾಡುವವನೇ. ಎಲ್ಲೋ ಅಪರಾಧಿ ಭಾವ ಕಾಡುತ್ತಿರಬಹುದು ಎಂದುಕೊಂಡು ಆತಂಕಗೊಂಡಳು. ಗಂಡನ ಬಗ್ಗೆ ತಿರಸ್ಕಾರ ಮೂಡಿದರೂ, ಹೇಳುವ ಮನಸ್ಸಾಗಲಿಲ್ಲ.

"ಹಾಗೆಲ್ಲ ಮಾತಾಡ್ಬೇಡಿ. ನೀವೇ ಹೀಗಾಡಿದ್ರೆ ಹೇಗೆ! ನೀವು ದೇಶಾಂತರ ಹೋದರೆ ನಮ್ಮಗಳ ಗತಿ ಏನು! ಮಕ್ಕಳೆಲ್ಲಾ ಚಿಕ್ಕೋವು. ನಾನು ಹೇಗೆ ಸಾಕಬಲ್ಲೆ?"

"ಆ ಆಲೋಚನೆಯೂ ಬರುತ್ತೆ. ಈ ಹಳ್ಳಿಯ ಸಹವಾಸವೇ ಬೇಡ. ಎಲ್ಲಾದ್ರೂ ದೂರ ಹೊಟು ಹೋಗೋಣ ಅಂತ ಮನಸ್ಸು ಒದೆಯುತ್ತೆ.."

"ಬೇರೆ ಎಲ್ಲಾದ್ರೂ ಹೋದರೆ, ಏನು ಮಾಡಿ ಜೀವನ ನಡೆಸೋದು? ಹಾಲಿನ ವ್ಯಾಪಾರ ಚೆನ್ನಾಗಿ ನಡೀತಿದೆ. ಖರ್ಚುಮಾಡಿ, ತರಕಾರಿ ತೋಟವನ್ನ ಬೇರೆ ಶುರು ಮಾಡಿದೀರಿ. ಈ ಹಳ್ಳಿಯ ಜೀವನ ನಮಗೆ ಒಗ್ಗಿ ಹೋಗಿದೆ."

"ಗೊತ್ತು ಗುರಿ ಇಲ್ಲದ ಯಾವುದಾದರೂ ಸರಿ, ಯಾರೂ ಪರಿಚಯವಿಲ್ಲದ ಹೊಸ ಜಾಗಕ್ಕೆ ಹೊರಟು ಹೋಗೋಣ. ಅಲ್ಲಿಗೆ ಹೊಂದಿಕೊಳ್ಳೋಣ ಏನಂತೀಯ?" ಅವಳು ಆಶ್ಚರ್ಯದಿಂದ ಅವನನ್ನೇ ನೋಡಿದಳು. ಸಂಸಾರವನ್ನ ಪ್ರಾರಂಭ ಮಾಡಿದ ಮೇಲೆ, ಇದೇ ಮೊದಲ ಸಲ, ಅನುನಯದಿಂದ ಮಾತನಾಡಿ, ಹೆಂಡತಿಯೊಡನೆ ತನ್ನ ಮನದಲ್ಲಿದ್ದುದನ್ನ ಹಂಚಿಕೊಂಡದ್ದು." ಇನ್ನು ಈ ಹಳ್ಳಿಯಲ್ಲಿ ನಾನು ಇರಲು ಸಾಧ್ಯವಿಲ್ಲ. ನನ್ನ ಹಿಂದೆ ಎಲ್ಲರೂ ಆಡಿಕೊಂಡು ನಗ್ತಿದಾರೇನೋ ಅಂತ ಅನ್ನಿಸೋಕೆ ಪ್ರಾರಂಭವಾಗಿದೆ. ಈ ವ್ಯಾಪಾರ, ಈ ಮನೆ, ಎಲ್ಲವನ್ನ ಬಿಟ್ಟು ದೂರ ಎಲ್ಲಾದ್ರೂ

ಹೊರಟು ಹೋಗೋಣ. ಹೊಸದಾಗಿ ಏನನ್ನಾದ್ರೂ ಪ್ರಾರಂಭಿಸ್ತೀನಿ." ತನ್ನ ಮನದಲ್ಲಿರುವುದನ್ನು ಒದರಿಕೊಂಡ.

"ಇದುವರೆಗೂ ನೀವು ಹೇಳಿದಂತೆಯೇ ಕೇಳಿ ಅಭ್ಯಾಸ ನನಗೆ. ಆದರೂ ಹೇಳ್ತೀನಿ. ದುಡುಕಬೇಡಿ. ನಿಧಾನವಾಗಿ ಯೋಚಿಸಿ, ಕ್ರಮೇಣ ಎಲ್ಲಾ ಸರಿ ಹೋಗಬಹುದು. ರಾಜಂಗೆ ಎಲ್ಲವನ್ನ ವಹಿಸಿಕೊಡಿ. ಅವನು ನೋಡಿಕೊಳ್ತಾನೆ."

"ಅವನಿಗೆ ಎಲ್ಲವನ್ನ ವಹಿಸಿಕೊಟ್ಟು ನಾನೇನು ಮಾಡ್ಲೀ?"..... ನನಗೆ ಹೊತ್ತು ಹೋಗ್ತಿಲ್ಲ. ನಾನು ಹೀಗೆ ಕಾಲ ಕಳೆಯಲಾರೆ... "ಅಸಹಾಯಕನಂತೆ ಬಡಬಡಿಸಿದ.

"ರಾಜ ಈಗ ಇನ್ನೂ ಕಾಲೇಜಿಗೆ ಸೇರಿಕೊಂಡಿದಾನೆ. ಅವನ ವಿದ್ಯಾಭ್ಯಾಸ ಮುಗಿಯಬೇಡವೆ? ನಿಮ್ಮ ನಿರ್ಧಾರದಿಂದ ಅವನ ಭವಿಷ್ಯ ಹಾಳಾಗಬಾರದು."

"ಹಾಗೇನೂ, ಮಗನ ಭವಿಷ್ಯವನ್ನ ನಾನು ಹಾಳು ಮಾಡಲ್ಲ. ಭದ್ರಾವತಿಗೆ ಹೊರಟು ಹೋಗೋಣ. ಅಲ್ಲಿ ಒಂದು ದಿನಸಿ ಅಂಗಡಿಯನ್ನು ಪ್ರಾರಂಭ ಮಾಡ್ತೀನಿ. ರಾಜ ಅಲ್ಲಿಂದಲೇ ಕಾಲೇಜಿಗೆ ರೈಲಿನಲ್ಲಿ ಬರಬಹುದು." ಅಸಹನೆಯಿಂದ ನುಡಿದ.

"ನೀವು ಎಲ್ಲವನ್ನ ನಿರ್ಧರಿಸಿಯೇ ನನ್ನೊಡನೆ ಹೇಳಿಕೊಳ್ತಿದೀರಿ. ಈಗ ನಾನು ಬೇಡ ಅಂತಂದ್ರೂ ನೀವು ಮನಸ್ಸು ಬದಲಾಯಿಸಲ್ಲ. ಏನೂ ಬೇಕಾದ್ರೂ ಮಾಡ್ಕೊಳ್ಳಿ, ನೀವು ಎಲ್ಲಿಗೆ ಹೋದ್ರೆ ಅಲ್ಲಿಗೆ ನಿಮ್ಮ ಹಿಂದೆ ಬರುವವಳು ನಾನು" ಅವಳು ಪತಿವ್ರತೆಯಂತೆ ನುಡಿದಾಗ ಅವನಿಗೆ ಯಾವ ಮಾತೂ ಉಳಿಯಲಿಲ್ಲ.

"ಅಟ್ಟದ ಮೇಲೆ, ಒಲೆ ಉರಿದರೆ ಏನು ಪ್ರಯೋಜನ? ಕಳೆದು ಹೋದ ಕ್ಷಣಗಳು ವಾಪಸ್ಸು ಬರುತ್ತದೆಯೆ! ದತ್ತ ವಾಪಸ್ಸು ಬರುತ್ತಾನೆಯೆ! ಈಗ ಪಶ್ಚಾತ್ತಾಪ ಪಟ್ಟರೆ, ನನಗೆ ಬರುವ ಭಾಗ್ಯವೇನು ಎಂದುಕೊಂಡು, ಶಬ್ಧವಾಗದಂತೆ ಅತ್ತಳು. ಕಂಠಿ ಶಾಸ್ತ್ರಿಗೆ ಹೇಳಿ ಕಳಿಸಿದ.

"ಏನು ಭಾವ ಹೇಳಿ ಕಳಿಸಿದೆಯಂತೆ?" ಶಾಸ್ತ್ರಿ ಕೇಳಿದ.

"ಪಾರ್ವತಿ ನಿಮ್ಮಣ್ಣಂಗೆ ಕಾಫಿ ಕೊಡು" ಎಂದು ಹೇಳಿ ತನ್ನ ಮನದಲ್ಲಿ ಉದಯಿಸಿದ ಆಲೋಚನೆಯನ್ನ ತಿಳಿಸಿದ. ಪಲಾಯನವಾದ ದನಿಯಲ್ಲಡಗಿತ್ತು.

"ಕಂಠಿ ನಿನಗೇ ಯಾಕೆ ಇಂಥಾ ಆಲೋಚನೆಗಳು ಬರುತ್ವೋ.. ಅಂಗಡಿ ಮುಂಗಟ್ಟಿನ ವ್ಯಾಪಾರ ನಮ್ಮ ಕಸುಬಲ್ಲ. ಏನಿದ್ರೂ ವೈಶ್ಯರ ಕುಲಕ್ಕೆ ಸೇರಿದ್ದು. ಹಣ ತೊಡಗಿಸಿ ಕೈ ಸುಟ್ಟು ಕೊಳ್ತೀಯ ಅಷ್ಟೇ... ದುಡುಕಬೇಡ."

"ನಾನು ನಿನ್ನ ಸಲಹೆಯನ್ನ ಕೇಳಲಿಲ್ಲ. ನಾನು ನಿರ್ಧರಿಸಿದ್ದು ಆಗಿದೆ. ನೀವೆಲ್ಲ ಒಂದೇ ಜಾತಿ... ಅಡ್ಡ ಮಾತಾಡೋದು."

"ಸರಿ, ನಿರ್ಧರಿಸಿದ್ದಾಗಿದೆ ಅಂದ್ಮೇಲೆ ನನಗ್ಯಾಕೆ ಹೇಳ್ತಿದೀಯ?"

"ತರಕಾರಿ ತೋಟವನ್ನ, ಎಮ್ಮೆಗಳನ್ನ ನಿನಗೆ ಮಾರಿ ಬಿಡ್ತೀನಿ. ನನಗೆ ತಕ್ಷಣಕ್ಕೆ

ಹಣ ಬೇಕಾಗಿದೆ."

"ಅದನ್ನೆಲ್ಲ ಕೊಂಡ್ಕೊಳ್ಳೋಕೆ ನನ್ನ ಹತ್ರ ಹಣವಿಲ್ಲ. ಬೇರೆ ಯಾರನ್ನಾದ್ರೂ ಹುಡುಕಿ ಕೊಡ್ತೀನಿ.."

"ನಿನ್ನಿಂದ ನನಗೆ ಲಾಭ ಏನೂ ಬೇಡ. ಅಸಲು ಸಿಕ್ಕಿದರೆ ಸಾಕು... ಒಂದು ವಾರದೊಳಗೆ ಹಣವನ್ನ ಹೊಂದಿಸಿ ಕೊಡು." ಒರಟಾಗಿ ನುಡಿದ.

"ಇಲ್ಲ ಕಂಠಿ ನೀನು ಬೈಯಬೇಡ. ಮಗಳ ಮದುವೆ ಇದೇ ತಾನೆ ನೆರವೇರಿದೆ. ನನ್ನ ಕೈ ಬರಿದಾಗಿದೆ. ನಾನೇನ್ಮಾಡ್ಲೀ?"

"ನೀವೆಲ್ಲ ಇಷ್ಟೇ. ಸಮಯಕ್ಕೆ ಆಗದೋರು. ಎಮ್ಮೆಗಳು ಸೇರುಗಟ್ಟಳೆ ಹಾಲನ್ನ ಕೊಡುವಂಥೋವು... ತರಕಾರಿಯಂತೂ ಸೊಗಸಾಗಿ ಬಿಟ್ಟಿವೆ. ನನಗೆ ಅನುಭವಿಸುವ ಅದೃಷ್ಟವಿಲ್ಲ. ನಿನಗೆ ಯೋಗ್ಯತೆ ಇಲ್ಲ. ಇನ್ನು ಮಾತು ಬೇಡ." ಕಂಠಿಗೆ ಕೋಪ ಬಂದಿದೆ ಎಂದು ಶಾಸ್ತ್ರಿಗೆ ಅರಿವಾಗಿತ್ತು. ಮಾತಿಲ್ಲದೇ ಎದ್ದು ಬಂದ. ಸಾವಿತ್ರಿಯೊಡನೆ ಚರ್ಚೆ ಮಾಡಿದ. ಲಕ್ಷ್ಮಿ ಎಲ್ಲವನ್ನು ಕೇಳಿಸಿಕೊಂಡಳು.

"ಒಂದು ಕೆಲಸ ಮಾಡು ಗುಂಡಣ್ಣ. ವೆಂಕಟಾಚಲಯ್ಯಂಗೆ ಎಲ್ಲವನ್ನು ಹೇಳಿ, ಸ್ವಲ್ಪ ಸಾಲ ತಗೋ. ಸಾಲವನ್ನ ತೀರಿಸುಕ್ಕೆ ಆಗಿದಿದ್ರೆ ಅವರಿಗೇ ವಹಿಸಿ ಕೊಡ್ತೀನಿ ಅಂತ ಹೇಳು. ಅವರು ಒಪ್ಪಿಕೊಳ್ಳಬಹುದು." ಸಾತಕ್ಕ ಸಲಹೆ ಇತ್ತಳು.

"ನೀನು ಹೇಳೋದು ಒಂಥರಕ್ಕೆ ಸರಿ. ಯಾರೋ ಹೊರಗಿನೋರು ತಕ್ಷಣಕ್ಕೆ ಸಿಗಲ್ಲ. ಸಿಕ್ಕಿದರೂ ಕಂಠಿಗೆ ನಷ್ಟವೇ ಆಗೋದು. ನಾನು ವೆಂಕಟಾಚಲಯ್ಯನ ಹತ್ತಿರ ಮಾತನಾಡಿ, ಆಮೇಲೆ ಪಾರ್ವತಿ ಹತ್ತಿರ ಮತಾಡ್ತೀನಿ." ಶಾಸ್ತ್ರಿ ವೆಂಕಟಾಚಲಯ್ಯನ ಮನೆಗೆ ಬಂದ. ವೆಂಕಟಾಚಲಯ್ಯ ಕಣ್ಣುಗಳನ್ನು ಕಿರಿದು ಮಾಡಿ, ಸ್ವಾಗತಿಸಿದ. ಮೊದಲಿಗೆ ಬಿಸಿ ಬಿಸಿ ಕಾಫಿಯನ್ನ ಕುಡಿಸಿ, ನಂತರ ತಂಬಾಕಿನ ಡಬ್ಬಿಯನ್ನು ತೆಗೆದ. ಶಾಸ್ತ್ರಿ ತಾನು ಬಂದ ವಿಷಯವನ್ನು ಹೇಳಿದ. ವೆಂಕಟಾಚಲಯ್ಯ ಮನದಲ್ಲೇ ಲೆಖ್ಖ ಹಾಕಿದ... ತನ್ನ ಸಮ್ಮತಿಯನ್ನು ನೀಡಿದ.

"ಶ್ರೀಕಂಠಪ್ಪನ ದುಡುಕಿನಿಂದ ನಮಗೇ ಲಾಭ ಶಾಸ್ತ್ರಿಗಳೇ. ಆದರೆ ಕಂಠಿಯಂಥ ವರು ನಮ್ಮ ಸಲಹೆಯನ್ನ ಒಪ್ಪದಿರುವಾಗ, ನಾವು ನಮ್ಮ ಲಾಭದ ಕಡೆ ಗಮನ ಕೊಡಬೇಕು. ಇದು ವ್ಯವಹಾರ. ಏನಂತೀರಪ್ಪಾ?"

"ನಾನು ಇಲ್ಲಿ ಲಾಭದ ಬಗ್ಗೆ ಯೋಚಿಸ್ತಿಲ್ಲ. ಪಾರ್ವತಿಗೆ ಸಹಾಯವಾಗಲಿ ಅಂತ ಅಷ್ಟೇ. ನನ್ನ ಭಾವಂಗೆ ಈ ಆಸ್ತಿ ಬಿಟ್ಟರೆ ಬೇರೆ ಏನೂ ಇಲ್ಲ. ಅಪ್ಪನ ಆಸ್ತಿಯಲ್ಲಿ ತನ್ನ ಪಾಲಿಗೆ ಬಂದದ್ದನ್ನ ನಷ್ಟಕ್ಕೆ ಮಾರಿ, ಈ ಹಳ್ಳಿಗೆ ಬಂದು ಸೇರಿದ. ಇಲ್ಲಿ ಅವನು ಲಾಭ ಗಳಿಸಿದ್ದು ಅಷ್ಟರಲ್ಲೇ ಇದೆ. ಈಗ ಇಲ್ಲಿಂದ ಏಕಾಏಕೀ ಹೊರಟು ನಿಂತಿದಾನೆ. ನನ್ನ ಕೈಲಿ ಬಿಡಿಗಾಸಿಲ್ಲ. ಅದಕ್ಕೇ ನಿಮ್ಮ ಹತ್ರ ಬಂದೆ."

"ಮನೇನ ಏನು ಮಾಡ್ತಾರಂತೆ? ಯಾವ ನಾಯಕರೂ ಕೈ ಮೇಲೆ ಹಣ ಕೊಟ್ಟು ಮನೇನ ಕೊಂಡುಕೊಳ್ಳಲ್ಲ. ಪಾಳು ಬಿದ್ದು ಹೋಗುತ್ತೆ ಅಷ್ಟೇ. ಮುಂದೆ ಅವರ ಮಗ ಬಂದು ಇಲ್ಲಿ ವಾಸ ಮಾಡುವ ತರಹ ಕಾಣಿಸ್ತಿಲ್ಲ."

"ಇಲ್ಲ ವೆಂಕಟಾಚಲಯ್ಯ. ಮೊದಲೇ ಅವನು ಸ್ವಲ್ಪ ಷೋಕಿ. ಅಲ್ಲದೇ ಅಪ್ಪನಂಥವನೇ..." ಬೇಸರದಿಂದ ಹೇಳಿದ.

"ನನ್ನದೊಂದು ಆಲೋಚನೆ ಇದೆ. ಇಲ್ಲಿಯ ಸರ್ಕಾರಿ ಸ್ಕೂಲಿಗೆ ಸ್ವಂತ ಕಟ್ಟಡವಿಲ್ಲ. ಈಗ ಪಟೇಲರ ಮನೆಯಲ್ಲಿ ಮಕ್ಕಳಿಗೆ ಜಾಗ ಸಾಕಾಗ್ತಾ ಇಲ್ಲ. ಹೊರಗೆ ಜಗುಲಿಯ ಮೇಲೆ ಮಕ್ಕಳು ಕೂತ್ಕೊಳ್ತಾ ಇದಾರೆ. ನಾನು ಗ್ರಾಮ ಪಂಚಾಯ್ತಿಯವರೊಡನೆ ಸಮಾಲೋಚನೆ ಮಾಡಿ, ಸರ್ಕಾರಿ ಸ್ಕೂಲಿಗಾಗಿ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡ್ತೀನಿ. ಅವರ ಮನಸ್ನಲ್ಲಿ ಏನಿದೆ ಅಂತ ತಿಳ್ಕೊಂಡು ನಂಗೆ ಹೇಳಿ."

"ಸರಿ. ವೆಂಕಟಾಚಲಯ್ಯ. ನಿಮ್ಮ ತಲೆಯೇ ತಲೆ. ನೀವು ಛೇರ್‌ಮನ್ ಆದದ್ದಕ್ಕೂ ಸಾರ್ಥಕ.... ಗ್ರಾಮದ ಅಭಿವೃದ್ಧಿಗೆ ನಿಮ್ಮಂಥವರು ಬೇಕೇ ಬೇಕು." ಹೊಗಳಿದ.

"ಐದು ವರ್ಷದಿಂದ ಈ ಹುದ್ದೇಲಿದೀನಿ. ಈ ವರ್ಷ ನಿವೃತ್ತಿಯಾಗೋದು ಅಂತ ಅನ್ಕೊಂಡಿದೀನಿ. ನೀವು ಛೇರ್‌ಮನ್ ಆಗಿ. ನಾನು ನಿಮ್ಮ ಹೆಸರನ್ನ ಸೂಚಿಸ್ತೀನಿ."

"ಬೇಡ ವೆಂಕಟಾಚಲಯ್ಯ. ನನಗೆ ಇದರಲ್ಲಿ ಅನುಭವ ಕಡಿಮೆ."

"ಯಾರಿಗೂ ಅನುಭವ ಮುಂಚೆಯೇ ಇರುಲ್ಲ. ಆಮೇಲೇ ಬರೋದು. ಈ ಹಳ್ಳಿಯ ಚಿಂತನೆ ಮಾಡುವ ಅವಕಾಶ ನಿಮಗೂ ಸಿಗಲಿ. ನೀವೂ ಓದಿರುವವರು, ತಿಳುವಳಿಕಸ್ಥರು. ಜನರು ಖಂಡಿತಾ ಸಹಕಾರ ನೀಡ್ತಾರೆ... ಬೇಡ ಅನ್ಬೇಡಿ."

"ಈಗ್ಲೇ ಏನನ್ನೂ ಹೇಳ್ಲಾರೆ. ಯೋಚಿಸಿ ಹೇಳ್ತೀನಿ."

"ಶ್ರೀಮತಿಯವರ ಪರವಾನಗಿ ಬೇಕೇನಪ್ಪಾ... ನೀವು ಛೇರ್‌ಮನ್ ಆದರೆ, ನಿಮ್ಮಾಕೆಗೂ ಈ ಹಳ್ಳಿಯಲ್ಲಿ ಆಸೆ ಆಸಕ್ತಿಗಳು ಮೂಡುತ್ತವೆ." ಶಾಸ್ತ್ರಿ ಹಗುರವಾಗಿ ನಕ್ಕು ಎದ್ದ. ಎರಡು ದಿನಗಳು ಕಳೆದವು. ಕಂಠಿ ಪಟೇಲರೊಡನೆ ಮಾತನಾಡಿ, ತನ್ನ ಅಭಿಮತವನ್ನು ತಿಳಿಸಿದ್ದ. "ಶಾಸ್ತ್ರಿಗಳನ್ನ ಇಲ್ಲಿಗೆ ಕರ್ಕೊಂಡು ಬಂದು ಸೇರಿಸಿ, ಈಗ ನೀವು ಇಲ್ಲಿಂದ ಪಾದ ಬೆಳೆಸ್ತಿದೀರಲ್ಲ ಶ್ರೀಕಂಠಪ್ಪಾ. ಇದು ನ್ಯಾಯಾನಾ?" ಕೇಳಿದರು.

"ಋಣಾನು ಬಂಧ ಇದ್ದಷ್ಟು ದಿನ ಈ ಹಳ್ಳೀಲಿ ಇದ್ದೆ ಅಷ್ಟೇ..."

"ಕ್ವಾಪಾ ಮಾಡ್ಕೋ ಬೇಡಿ ಶ್ರೀಕಂಠಪ್ಪಾ... ಈ ಹಳ್ಳೀಲಿ ಹೆಂಗಿದ್ರಿ?... ಅಪರಿಚಿತರ್ಹಂಗೆ ಇದ್ರಿ!... ನಾಲ್ಕುದಿನ ಇದ್ದು ಹೋಗೋರ ಹಂಗೇ ಇದ್ರಿ..." ನಾವ್ಯಾರೂ

ನಿಮ್ಮೋರು ಅಂತ ನಿಮಗೆ ಅನ್ನಿಸ್ಲೇ ಇಲ್ಲ." ಕಂಠಿ ಎದ್ದ.

"ನಾನಿನ್ನು ಬರ್ತೀನಿ ಪಟೇಲ್ರೇ... ನಿಮಗೊಂದು ಮಾತು ಹೇಳೋದು ಮುಖ್ಯ ಅಂತ ಅನ್ನಿಸ್ತು ಬಂದೆ."

"ನನ್ನಿಂದ ಏನಾದ್ರೂ ಸಹಾಯ ಬೇಕಾದ್ರೆ ಸಂಕೋಚವಿಲ್ಲದೇ ಹೇಳಿ ಶ್ರೀಕಂಠಪ್ಪಾ. ನಡೆಸಿಕೊಡ್ತೀನಿ."

"ಮನೆ, ದನ, ಎಮ್ಮೆ, ತೋಟ ಎಲ್ಲವನ್ನ ಮಾರಿ ಬಿಡಬೇಕು ಅಂತ ಇದೀನಿ. ಯಾರಾದ್ರೂ ತಗೋಳ್ಳೋರು ಇದ್ದರೆ ತಿಳಿಸಿ.

"ನಾಳೆ ಪಂಚಾಯ್ತಿ ಮೀಟಿಂಗ್ ಇದೆ. ಆಗ ಎಲ್ಲರಿಗೂ ವಿಷಯಾನ ತಿಳಿಸ್ತೀವಿ. ಅನುಕೂಲಸ್ಥರು ಯಾರೋ ಅವರು ಕೈಮೇಲೆ ಹಣಕೊಟ್ಟು ಕೊಂಡ್ಕೋತಾರೆ. ನೀವು ಚಿಂತೆ ಮಾಡ್ಬೇಡಿ. ಹೊರಡೋಕ್ಮುಂಚೆ ಕುಟುಂಬವನ್ನು ಮಕ್ಕಳನ್ನ ಕರ್ಕೊಂಡು ಬನ್ನಿ ಮರೀಬೇಡಿ." ಪಟೇಲರು ಕೈ ಮುಗಿದರು. ಕಂಠಿ ಅಲ್ಲಿಂದ ಹೊರಟ.

ಎಂಟು ಹತ್ತು ದಿನಗಳಲ್ಲಿ ಎಲ್ಲವೂ ಇತ್ಯರ್ಥವಾಗಿತ್ತು. ವೆಂಕಟಾಚಲಯ್ಯ ಎಲ್ಲವನ್ನೂ ಕೊಂಡುಕೊಳ್ಳಲು ಸಿದ್ಧನಾಗಿದ್ದ. ಮನೆಯನ್ನೂ ಸರ್ಕಾರದವರಿಗೆ ಬರೆದು ಸ್ಕೂಲಿಗೆ ಕಟ್ಟಡವಾಗಿ ಪರಿವರ್ತನೆ ಮಾಡುವ ಮಾತು ಸಹ ನಿರ್ಧಾರವಾಯಿತು. ಕಂಠಿ ಸಮಾಧಾನದಿಂದ ಬೀಗಿದ. ಶಾಸ್ತ್ರಿಯ ಕಿವಿಯಲ್ಲಿ ಉಸುರಿದ.

"ವೆಂಕಟಾಚಲ ಘಾಟಿ ಮನುಷ್ಯ. ಆಸ್ತಿಪಾಸ್ತಿಗಳನ್ನ ಮಾಡಿಕೊಳ್ಳುವುದರಲ್ಲಿ ನಿಸ್ಸೀಮ. ನೀನೂ ಇದೀಯ..." ಮೂದಲಿಕೆಯ ದನಿಯಲ್ಲಿ ಹೇಳಿದ

"ಇಂಥಾ ಒಂದು ಹಳ್ಳಿ ಇದೆ ಅಂತ ಭೂಪಟದಲ್ಲೂ ನನಗೆ ತಿಳಿದಿರಲಿಲ್ಲ. ಇಂಥಾ ಕಡೆಗೆ ನನ್ನನ್ನ ಎಳೆತಂದವನು ನೀನು. ಈಗ ಇಲ್ಲಿಂದ ಕಾಲ್ತೆಗೆಯುತ್ತಿದೀಯ... ನಿನ್ನನ್ನ ನಂಬಿದ್ದಕ್ಕೆ ನಾನು ಸಾಲಗಾರನಾಗಿದೀನಿ. ಆಸ್ತಿವಂತನಾಗುಕ್ಕೆ ಹೇಗೆ ಸಾಧ್ಯ?" ಶಾಸ್ತ್ರಿಯೂ ಗಂಭೀರವಾಗಿಯೇ ನುಡಿದ.

"ವೆಂಕಟಾಚಲಯ್ಯನ ಜತೆ ಕೂತು ತಂಬಾಕು ಹಾಕ್ಕೊಂಡು, ರಸವನ್ನ ಉಗುಳಿದ್ರೆ ಏನು ಬಂತು ಪ್ರಯೋಜನ! ಬದುಕುವ ಮಾರ್ಗವನ್ನ ತಿಳಕೋ.... ಯಾಕೋ ಏನೋ ನಂಗೂ ಅವನ್ಗೂ ಸರಿ ಬರ್ಲಿಲ್ಲ. ಇಲ್ದಿದ್ರೆ ಅವನನ್ನ ಮೀರಿಸಿ ಇರ್ತಿದ್ದೆ ನಾನು..."

"ನಿಂಗೆ ಯಾವ್ದೂ ಸರಿ ಬರುಲ್ಲ. ಇನ್ನು ಮನುಷ್ಯರು ಯಾವ ಲೆಖ್ಖ! ಶಾಸ್ತ್ರಿ ಗೊಣಗಿದ.

"ಏನಂದೆ! ಜೋರಾಗಿ ಹೇಳು. ಸಧ್ಯ ನನ್ನ ಕಾಟ ತಪ್ಪಿತು ಅಂತ ಯೋಚಿಸ್ತಾ ಇದೀಯ. ಅದ್ಹೇಗೆ ತಪ್ಪುತ್ತೆ. ನಿನ್ನ ತಂಗೀನ ನಾನು ಮದುವೆಯಾಗಿದೀನಿ."

"ಈ ಮಾತುಗಳನ್ನೆಲ್ಲ ಬಿಡೋ ಭಾವ. ಹೊರಡೋಕ್ಮುಂಚೆ ನಗುನಗ್ತಾ ನಿನ್ನನ್ನ

ಕಳಿಸ್ಕೊಟ್ರೆ ನಮಗೂ ಸಮಾಧಾನ. ನಾ...ರೂ ಭಾವ, ಭಾಮೈದುನಂದಿರು.... ಪಾರ್ವತಿಗೆ ತವರು ಮನೆ. ಭದ್ರಾವತಿ ದೂರ ಏನಲ್ಲ. ಆಗಾಗ್ಗೆ ಎಲ್ಲಾ ಬರ್ತಾ ಇರಿ. ಪಾರ್ವತೀನೂ ಹಬ್ಬ ಹುಣ್ಣಿಮೆಗೆ ಕಳಿಸಿಕೊಡು..." ಶಾಸ್ತ್ರಿ ಕಣ್ಣುಗಳನ್ನು ಒರೆಸಿಕೊಂಡ.

* * *

"ಯಾಕೇ ಲಕ್ಷ್ಮೀ ಬೆಳಗ್ನಿಂದ ಮಂಕಾಗಿದೀಯ? ಹುಶಾರಾಗಿದೀಯ ತಾನೇ? ದಿನಗಳು ತುಂಬಿವೆ ಅಲ್ವಾ?" ಸಾತಕ್ಕ ಕೇಳಿದಳು.

"ಯಾಕೋ ಬೆಳಗ್ನಿಂದ ಸಣ್ಣಗೆ ಹೊಟ್ಟೆ ನೋಯ್ತಿದೆ. ಹೊನ್ನಿತಿಗೆ ಹೇಳಿ ಕಳಿಸೋದೋ ಬೇಡ್ವೋ ಅಂತ ಯೋಚಿಸ್ತಿದೀನಿ."

"ಈ ವಿಷಯದಲ್ಲಿ ತಡ ಮಾಡ್ಬಾರ್ದು ಲಕ್ಷ್ಮೀ. ಅವಳಿಗೆ ಬೇಗ ಹೇಳಿ ಕಳಿಸು. ಎಲ್ಲಾದ್ರೂ ಹೋಗಿ ಬಿಟ್ಟಾಳು. ನೀನು ಕೆಲಸಗಳ್ನನ್ನ ಮಾಡೋದು ಬಿಟ್ಟು ವಿಶ್ರಾಂತಿ ತಗೋ."

"ನಾನು ವಿಶ್ರಾಂತಿ ತಗೋತೀನಿ ಅತ್ಗೇ... ನಿಮಗೆ ಕೆಲಸ ಜಾಸ್ತಿ ಆಗುತ್ತಲ್ಲ. ಪಾರ್ವತಿಯೂ ಇಲ್ಲ. ಶಾಂತನೂ ಇಲ್ಲ. ಲಲಿತ ಚಿಕ್ಕೋಳು."

"ಹೇಗೋ ಆಗುತ್ತೆ. ಯಾರನ್ನಾದ್ರೂ ಸಹಾಯಕ್ಕೆ ಕರೆಸಿ ಕೊಳ್ಳೋಣ ಮೊದಲು ಹೊನ್ನಿತಿಗೆ ಹೇಳಿ ಕಳಿಸು" ಲಕ್ಷ್ಮಿ ವೈಕುಂಠನನ್ನು ಕರೆದು ಹೊನ್ನಿತಿಯನ್ನ ಕರೆಸಿದಳು. ಹೊನ್ನಿತಿ ಮೇಲಿನಿಂದ ಕೆಳಕ್ಕೆ ಲಕ್ಷ್ಮಿಯನ್ನ ನೋಡಿದಳು.

"ಇದು ಕಳ್ಳನೋವು ಕಣ್ರವ್ವಾ... ಎರಿಗೆ ಆಗೋಕೆ ಇನ್ನೂ ಒಂದು ವಾರ ಕಳೀಬೇಕು."

"ಇಲ್ಲ ಕಣೇ ಹೊನ್ನಿ. ಇದು ನಿಜವಾದ ನೋವೇ..."

"ಅಂಗಾರೆ ಸುಮ್ನೇ ಮನಗಿ. ಈಗ್ಲೇ ಎರ್ಗೆ ಆಗೋ ಅಂಗೆ ಕಾಣೇ... ನಾನಿನ್ನ ಉಂಡಿಲ್ರವ್ವಾ. ನಂಗೇನಾರ ಕೊಡಿ ಮತ್ತೆ." ರಾಗ ಎಳೆದಳು.

"ನಮ್ಮನೆ ಊಟ ಬರೀ ಸಪ್ಪೆ. ನಿನ್ನ ಮನೆಗೇ ಹೋಗಿ ಉಂಡು ಬೇಗ ಬಾ ಅಪ್ಪೆ."

"ಬೋನ ಯಾರು ಬೇಸವ್ರೇ. ಈ ಐದ ಬಂದು ಕರೆದ್ಕೊಡ್ಲೇ ಅಂಗೇ ಅಟ್ಟ ಬಾಕ್ಲು ಸೈತ ಆಕ್ದೇ ಓಡಿ ಬಂದಿವ್ನಿ... ಒಂದಿಷ್ಟು ಉಪ್ಪಿನಕಾಯಿ ಸುರಿದ್ಬುಡಿ. ಎಂ... ಉಂಡೇನು. ಬಾಂಬ್ರಮನೆ ಉಪ್ಪಿನಕಾಯಿ ಬೋಚಂದ" ಕೆಂತನೆಯ ... ಸಾಲುಗಳನ್ನ ತೋರಿದಳು.

"ಪರವಾಗಿಲ್ಲ ಕಣೇ ನೀನೂನೂ. ನಾನು ಒಬ್ಬಂಟಿ ಅನ್ನೋ ಕರು... ...ತ್ರ ಬೇಡ್ವಾ!" ಸಾತಕ್ಕ ಹುಬ್ಬು ಗಂಟಿಕ್ಕಿದಳು.

"ನೀವು ಏಳಿದ್ರೆ ನಾನು ಮಾಡಾಕಿಲ್ಲ ಅಂತ ಅಂದೇನಾ! ಪಾರ್ವತಮ್ಮ ಎಲ್ಲಾ ಕೆಲ್ಸಾನೂ ಮಾಡಿಸ್ಕೊಂತಿದ್ರು. ಮೇಲೆ ನೀರು ಅನಿಸ್ಕೊಂತಿದ್ರು..."

"ಅವಳ್ಹಾಗೆ ನಾನು ಇರುಕ್ಕಾಗಲ್ಲ... ಅದು ಬಿಡು. ಸಮಯದಲ್ಲಿ ಅವಳಿಗೂ ಕೈ ಕೊಟ್ಟಿದೀಯ ನೀನು. ನೋವು ತಿನ್ತಾ ಇದ್ದೋಳು ಹೇಳಿ ಕಳ್ಸಿದ್ರೆ ಊರ್‍ನಲ್ಲೇ ಇರ್ಲಿಲ್ಲವಂತೆ ನೀನು."

"ನಾನೇನ್ಮಾಡ್ಲೀ. ಆವಮ್ಮ ಲೆಖ್ಖ ಸರಿಯಾಗಿ ಇಟ್ಟಿರ್‍ನಿಲ್ಲ. ಇನ್ನೂ ಅತ್ತು ದಿನ ಕಳೀ ಬೇಕಿತ್ತು. ಆ ಮಗೀಗೆ ಉಟ್ಟಿ ಬರೋಕೆ ಆತುರ ಇತ್ತು. ಉಟ್ಟಿ ಬಂತು. ಅದ್ಯಾರೋ ಲಂಬಾಣಿ ಹೆಂಗಸು ಬಂದು ಎರ್‍ಗೆ ಮಾಡ್ಸಿದ್ಲಂತೆ. ಅದ್ಕೇಯ ಎಣ್ಣು ಮಗೀನ ಎತ್ತಿದ್ದು." ಅವಳು ಸೊಟ್ಟ ಮೂತಿ ಮಾಡಿ ನಕ್ಕಳು.

"ಹೆಣ್ಣು ಮಗು ದಿವಿನಾಗಿದೆ. ರತ್ನದ್ಹಾಗಿದೆ. ನೀನು ಬರದೇ ಇದ್ದದ್ದು ಒಳ್ಳೇದೇ ಆಯ್ತು..."

"ಅಂಗಾರೆ ನಾನೀಗ ಓಯ್ತೀನಿ. ಆ ಲಂಬಾಣಿ ಎಂಗ್ಸನ್ನೇ ಕರಿಸ್ಕೊಳ್ಳಿ." ಕಿಸಿಕಿಸಿ ನಕ್ಕಳು.

"ಅತ್ಗೇ ಸುಮ್ನಿರಿ ಅವಳ್ಹತ್ರ ಏನ್ಮಾತು? ಮೊದ್ಲು ಅವಳಿಗೆ ಊಟ ಹಾಕಿ... ನಂಗೆ ನೋವು ಜಾಸ್ತಿ ಆಗ್ತಿದೆ" ಲಕ್ಷ್ಮಿ ನರಳಿದಳು. ಸಾತಕ್ಕ ಮುತ್ತುಗದ ಎಲೆಯನ್ನ ಹೊರಬಾಗಿಲಲ್ಲಿ ಇಟ್ಟು ಅನ್ನವನ್ನು ಹಾಕಿ ಸಾರನ್ನ ಸುರಿದಳು. ಒಂದು ಹಿಡಿಯಷ್ಟು ಉಪ್ಪಿನ ಕಾಯಿಯನ್ನ ಬಡಿಸಿದಳು. ಊಟ ಮಾಡ್ತಾ ಹೊನ್ನಿತಿ ತನ್ನ ಆಸೆಗಳನ್ನ ಹೇಳಿಕೊಂಡಳು.

"ಈ ಸರ್ತಿ ನೀವು ಒಸಾ ಸೀರೇನ ಕೊಡ್ನೇಬೇಕು. ಅಂಗೇ ಒಂದು ಒಸಾ ದುಪ್ಪಟಿ.... ಮೈಮೇಲೆ ಒದ್ಗೋಣಾಕೆ ಏನಿಲ್ಲ. ಸೀಕಂಠಪ್ಪ ಕೊಡ್ತೀನಿ ಅಂತ ಏಳಿದ್ರು, ಕೊಡ್ನೇ ಇಲ್ಲ. ಅಳ್ಳೀನೇ ಬಿಟ್ಟು ಒಂಟೋದ್ರಂತೆ."

"ಅವರು ಕೊಡ್ಲಿಲ್ಲ ಅಂತ ಇಲ್ಲಿ ವಸೂಲು ಮಾಡ್ತೀಯ. ನಿಂಗೆ ದುರಾಸೆ. ಎಷ್ಟು ಕೊಟ್ರೂ ತೃಪ್ತೀನೇ ಇಲ್ಲ." ಸಾತಕ್ಕ ಮತ್ತಷ್ಟು ಅನ್ನ ಸಾರನ್ನ ಹಾಕಿದಳು.

"ಏನ್ರವ್ವಾ ಇಂಗಾಡೀರಿ? ನಿಮ್ಮಂತೋರಿದ್ಲೇ ಅಲ್ವಾ ನನ್ನ ಜೀವ್ನಾ? ನಂಗೇನು ಗಂಡಾ ಇದಾನಾ? ಮಕ್ಳು ಇದಾರಾ?... ತಂದು ಕೊಡಾಕೆ?" ವೈಯಾರ ಆಡಿದಳು.

"ಎಲ್ಲಿ ಹೋದ ನಿನ್ನ ಗಂಡ?"

"ಎಲ್ಲೋ ಯಾವೋಳ ಇಂದೆಯೋ ಓಡಿ ಓದ. ಅವನ್ಸುದ್ಧಿ ಈಗ್ಯಾಕೆ ಬುಡಿ. ಇನ್ಸ್ವಲ್ಪ ಸಾರು ಬುಡಿ..." ಸಾತಕ್ಕ ಸಾರನ್ನ ತಂದು ಹಾಕಿದಳು. ಹೊನ್ನಿತಿ ಕುಳಿತು ಅಚ್ಚುಕಟ್ಟಾಗಿ ಊಟ ಮಾಡಿದಳು. ಎಲೆ ಅಡಿಕೆಯನ್ನು ಕೇಳಿ ಇಸ್ಕೊಂಡಳು. ಹೊಗೆ ಸೊಪ್ಪನ್ನ ಬಾಯಿಗೆ ತುಂಬಿಕೊಂಡಳು.

ಲಕ್ಷ್ಮಿಯ ನರಳಿಕೆ ಜೋರಾಗಿತ್ತು. ತಂಬುಲದ ರಸವನ್ನ ಉಗುಳಿ ಹೊನ್ನಿತಿ ಒಳ ಬಂದಳು. "ಒಳಗೆ ಕ್ವಾಣೆಗೆ ಓಗಿ ಮನಗ್ರವ್ವಾ.. ನಾನು ಎಂಗೆ ಅಂತ ನೋಡ್ತೀನಿ." ಲಕ್ಷಿ ನಿಧಾನವಾಗಿ ಕತ್ತಲೆ ಕೋಣೆಗೆ ಹೋಗಿ ಹಾಸಿದ್ದ ಚಾಪೆಯ ಮೇಲೆ ಮಲಗಿದಳು ಮಧ್ಯಾಹ್ನವೇ ಲಕ್ಷ್ಮಿ ಸ್ವಲ್ಪ ಹುಶಾರಿಲ್ಲವೆಂದು ಹೇಳಿದ್ದರಿಂದ, ಶಾಸ್ತ್ರಿ ಬೇಗನೇ ಮನೆಗೆ ಬಂದ. ಸಾತಕ್ಕನ ಕಡೆ ನೋಡಿದ.

"ಹೊನ್ನಿತಿ ಬಂದಿದಾಳೆ. ಇನ್ನೂ ಹೆರಿಗೆ ಆಗಿಲ್ಲ." ಎಂದಳು.

ಕತ್ತಲಾಗುತ್ತ ಬಂದಿತು. ಸಾತಕ್ಕ ದೀಪಗಳನ್ನ ಹಚ್ಚಿಟ್ಟಳು. ರೈಲು ಬರುವುದಕ್ಕೆ ಇನ್ನೂ ಸಮಯವಿತ್ತು. ಎಲ್ಲರೂ ಕಳವಳದ ಪರಾಕಾಷ್ಠೆಯಲ್ಲಿದ್ದರು. ಕಡೆಗೊಮ್ಮೆ ಎಳೆ ಮಗು ಅತ್ತ ಧ್ವನಿ ಕೇಳಿಸಿತು. ಸಾತಕ್ಕ ಗುಂಡಣ್ಣನ ಕಡೆ ತಿರುಗಿ, "ಮಗು ಹುಟ್ತು." ಎಂದಳು ಆ ಧ್ವನಿಯಲ್ಲಿ ಸಂತಸಕ್ಕಿಂತ ಆತಂಕವೇ ಹೆಚ್ಚಾಗಿತ್ತು. ಎಂಥಾ ಮಗು ಎಂದು ತಿಳಿದುಕೊಳ್ಳುವ ಕುತೂಹಲ ಇಬ್ಬರಲ್ಲೂ ಇರಲಿಲ್ಲ.

"ಎಂಥಾ ಮಗುವೇ ಹೊನ್ನೀ..." ಲಕ್ಷ್ಮಿ ಕ್ಷೀಣ ಸ್ವರದಲ್ಲಿ ನಿರುತ್ಸಾಹದಿಂದ ಕೇಳಿದಳು. ಹೊನ್ನಿತಿ ಉತ್ತರ ಕೊಡದೇ ತನಗೆ ತಾನೇ ಎಂಬಂತೆ ಹೇಳಿಕೊಂಡಳು.

"ಯಾಕಿಂಗಾತು? ಇದುವರೆಗೂ ಒಂದೂ ಎಣ್ಮಗು ಉಟ್ಟಿರ್ನಿಲ್ಲ ನನ್ನ ಕೈಯಾಗೇ... ಆಂ..." ಲಕ್ಷ್ಮಿ ಕಣ್ಣು ಮುಚ್ಚಿದಳು. ಆಯಾಸ ಹೆಚ್ಚಾಗಿತ್ತು. ಎಷ್ಟು ಹೊತ್ತಾದ್ರೂ ಹೊನ್ನಿತಿ ಏನನ್ನೂ ಹೇಳದಿದ್ದಾಗ, ಸಾತಕ್ಕ ಬಾಗಿಲ ಬಳಿ ನಿಂತು ಕೇಳಿದಳು.

"ಮಗೂ ಒಂದೇ ಸಮನೆ ಅಳ್ತಿದೆಯಲ್ಲೇ... ಎಂಥಾ ಮಗುವೇ?"

"ಎಣ್ಮಗು ಕಣ್ರವ್ವಾ" ಅವಳೂ ಉದಾಸೀನದಿಂದ ಉತ್ತರಿಸಿದಳು.

"ಲಕ್ಷ್ಮಿ ಹೇಗಿದಾಳೆ?" ಸಾತಕ್ಕ ಕಳವಳದಿಂದ ಪ್ರಶ್ನಿಸಿದಳು.

"ಅವರು ಕಣ್ಮುಚ್ಚಿ ಮನಗವ್ರೆ.. ಏದುಸಿರು ಬಿಡ್ತವ್ರೆ.. ಸ್ವಲ್ಪ ತಡೀರವ್ವಾ.. ನಂಗೆ ಏನೋ ಅನ್ಮಾನಾ..." ಮತ್ತೆ ಲಕ್ಷ್ಮಿಯ ಮುಲುಕಾಟ ಶುರುವಾಗಿತ್ತು.

"ಏನಾಯ್ತೇ... ಹುಶಾರಾಗಿದಾಳೆ ತಾನೇ...?"

"ಒಟ್ಟೇಲಿ ಇನ್ನೊಂದು ಮಗ ಇದ್ದಂಗೈತೆ... ಜೋರಾಗಿ ಮಿಸುಕಾಡ್ತಾಐತೆ..." ಎನ್ನುತ್ತಾ ಹೊನ್ನಿತಿ ಅತ್ತ ಗಮನ ಹರಿಸಿದಳು. ಲಕ್ಷ್ಮಿಗೆ ಮತ್ತೊಮ್ಮೆ ನೋವು ಹೆಚ್ಚಾಗಿತ್ತು... ಜೋರಾಗಿ ನರಳಿದಳು.

"ಇನ್ನೊಂದು ಮಗು ಐತಲ್ರವ್ವಾ... ಸ್ವಲ್ಪ ಸಕ್ತಿ ಬಿಟ್ಟು ತಿಣುಕ್ರವ್ವಾ..." ಹೊನ್ನಿತಿ ಆದೇಶ ನೀಡಿದಳು. ಲಕ್ಷ್ಮಿಗೆ ದಿಕ್ಕು ತೋಚದಂತಾಗಿತ್ತು.

"ತಮಾಷೆ ಮಾಡ್ಬೇಡ್ವೇ...." ಎಂದು ಹೇಳುತ್ತಾ, ಮತ್ತೊಂದು ಮಗುವಿಗೆ ಅವಳಿಗೇ ಗೊತ್ತಾಗದಂತೆ ಜನ್ಮ ನೀಡಿದ್ದಳು. ಮಗು ಅತ್ತ ಧ್ವನಿ ಕೇಳಿದ ಕೂಡಲೇ ಲಕ್ಷ್ಮಿ ಯಾವ ಆಸಕ್ತಿಯೂ ಇಲ್ಲದವಳಂತೆ ಅತ್ತ ತಿರುಗಿ ಕಣ್ಣು ಮುಚ್ಚಿದಳು.

ಆಯಾಸಕ್ಕೆ ಅರೆಸಿದ್ರೆ ಬಂದಂತಾಗಿತ್ತು. ಎಂಥಾ ಮಗು ಎಂದು ಕೇಳುವ ಧೈರ್ಯವೇ ಬರಲಿಲ್ಲ ಸಾತಕ್ಕನಿಗೆ.

"ಅವ್ವಾ... ಗಂಡು ಮಗು ಕಣ್ರವ್ವಾ..." ಹೊನ್ನಿತಿ ಅರಚಿದಳು. ಸಾತಕ್ಕ ಮಡಿಯನ್ನ ಮರೆತು ಹೊಲೆ ಮನೆಯೊಳಕ್ಕೆ ಕಾಲಿಟ್ಟಳು.

"ನಿಜ ಹೇಳ್ತಿದೀಯೇನೇ ಹೊನ್ನಿ? ಎಲ್ಲಿ ತೋರ್ಸು." ತನ್ನ ಕೈಯಲ್ಲಿದ್ದ ಮಗುವನ್ನ ಹೊನ್ನಿತಿ ತೋರಿಸಿದಳು. "ಲಕ್ಷ್ಮೀ... ಲಕ್ಷ್ಮಿ..." ಸಾತಕ್ಕ ಕರೆದಳು. "ಲಕ್ಷ್ಮಿ ಎಚ್ಚರ ಮಾಡ್ಕೋ. ಗಂಡು ಮಗು ಹುಟ್ಟಿದೆ... ಕಾಫೀನ ತಂದುಕೊಡ್ತೀನಿ." ಸಾತಕ್ಕ ಸಂಭ್ರಮದಿಂದ ಹೇಳಿ ಹೊರಬಂದಳು.

ಹೊನ್ನಿತಿ, ಚೊಂಬಿನಲ್ಲಿದ್ದ ತಣ್ಣೀರನ್ನ ಕೈಗೆ ತೆಗೆದುಕೊಂಡು ಲಕ್ಷ್ಮಿಯ ಮುಖದ ಮೇಲೆ ಎರಚಿದಳು. ಲಕ್ಷ್ಮಿ ಎಚ್ಚೆತ್ತಳು. ಅವಳ ಕಣ್ಣುಗಳಿಂದ ನೀರು ಹರಿಯಿತು.

"ಅಳಬೇಡ್ರವ್ವಾ–ಇಲ್ಲಿ ನೋಡಿ ಗಂಡು ಮಗುವೂ ಉಟ್ಟೈತೆ..." ಲಕ್ಷ್ಮಿ ಸುಮ್ಮನೇ ಇತ್ತ ತಿರುಗಿದಳು. ಬಿಸಿ ನೀರಲ್ಲಿ ತೊಳೆದು ಒರೆಸಿ, ಬಟ್ಟೆಯಲ್ಲಿ ಸುತ್ತಿ ಇಟ್ಟಿದ್ದ ಮಕ್ಕಳನ್ನು ತೋರಿಸಿದಳು.

"ಅವಳೀ ಮಕ್ಕಳು ಕಣ್ರವ್ವಾ, ನಾನು ಎರ್ಗೆ ಮಾಡ್ಸಿದ್ಮೇಲೆ ಗಂಡ್ಮಗ ಉಟ್ದೇ ಇದ್ದೀತಾ?.... ನೋಡ್ರವ್ವಾ ಎಂಗತ್ತೇ..."

"ಆಮೇಲೆ ನೋಡ್ತೀನಿ. ಈಗ ಸುಸ್ತಾಗಿದೆ. ಸ್ವಲ್ಪ ದೊಡ್ಡಮ್ಮಾರ್ನ ಕರಿ." ಹೊನ್ನಿತಿ ಬಾಗಿಲಲ್ಲಿ ನಿಂತು ಕರೆದಳು. ಶಾಸ್ತ್ರಿ ಬೆರೆಸಿಕೊಟ್ಟ ಕಾಫಿಯನ್ನ ಸಾತಕ್ಕ ತಂದು ಲಕ್ಷ್ಮಿಗೆ ಕುಡಿಸಿದಳು. ಅವಳು ಸ್ವಲ್ಪ ಗೆಲುವಾದಳು.

"ಅತ್ಗೇ... ಅವಳಿ ಮಕ್ಕಳು ಅಂತ ಹೇಳ್ತಿದಾಳೆ ನಿಜಾನಾ? ನೀವು ಸ್ವಲ್ಪ ನೋಡಿ ಹೇಳ್ತೀರಾ!... ನಂಗ್ಯಾಕೋ ಇವಳ ಮಾತಿನ ಮೇಲೆ ನಂಬ್ಕೆ ಇಲ್ಲ. ಹೆಣ್ಮಗು ಅಂತಂದ್ಲು, ಗಂಡ್ಮಗು ಅಂತ ಅಂದ್ಲು... ಆಮೇಲೆ ಅವಳಿ ಮಕ್ಕಳು ಅಂತ ಹೇಳ್ತಾಳೆ, ಯಾವುದು ನಿಜ ಅಂತ ಹೇಳಿ..." ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

"ನೀನು ಅಳಬೇಡ ನಂಜಾಗುತ್ತೆ. ಒಂದು ಗಂಡು ಮಗು, ಇನ್ನೊಂದು ಹೆಣ್ಣುಮಗು. ನಾನು ನಿನ್ನ ಗಂಡಂಗೆ ಹೇಳಿ ಬರ್ತೀನಿ. ಅವನೂ ಕಾತೂರದಿಂದ ಕಾಯ್ತಾ ಇದಾನೆ." ಸಾತಕ್ಕ ಹೊರಕ್ಕೆ ಹೊರಟಳು.

"ಅವರು ಬೇಜಾರು ಮಾಡ್ಕೋತಾರೋ ಏನೋ..." ಅವಳಿಗೆ ಕೇಳಿಸಲಿಲ್ಲ.

"ಏನ್ರವ್ವಾ... ಇಂತಾ ಮುದ್ದುಗಾರ ನಂತ ಎಳೇ ಬುಡ್ಡಗಳನ್ನ ತೆಗ್ದು ಹಾಕ್ಸಾಕೆ ಅಂತ ನನ್ನನ್ನ ಕರೆಸಿದ್ರಲ್ಲ ನೆಪ್ಪೈತಾ?..." ವ್ಯಂಗ್ಯವಾಗಿ ಕೇಳಿದಳು.

"ನೀನು ವಂಚಕಿ. ಔಷ್ಧಿ ಕೊಡೇ ಅಂತಾದ್ರೆ ಕೊಡಲಿಲ್ಲ. ಅದಕ್ಕೇ ಎರಡೆರಡು ಮಕ್ಕಳು ಹುಟ್ಟಿವೆ. ನಿಂಗೆ ಬೇಕಾದ್ರೆ ಒಂದನ್ನ ತಗೊಂಡ್ಹೋಗು."

"ಗಂಡು ಮಗೀನ ಕೊಡ್ತೀರಾ ತಗೊಂಡು ಓಯ್ತೀನಿ" ಕೇಳಿದಳು.

"ಒಂಭತ್ತು ತಿಂಗಳು ಹೊತ್ತು, ಕಷ್ಟಪಟ್ಟು ಹೆತ್ತಿರೋಳು ನಾನು... ಬೇಕಾದ್ರೆ ಹೆಣ್ಣು ಮಗೂನ ತಗೊಂಡು ಹೋಗು. ನನಗೆ ಈಗಾಗ್ಲೇ ನಾಲ್ಕು ಹೆಣ್ಣು ಮಕ್ಕಳಿವೆ."

"ಬ್ಯಾಡ್ರವ್ವಾ... ಅಂಗೆ ಮಾತಾಡ್ಬೇಡಿ. ಎಣ್ಣಿಗೀನಾ ಒಂಭತ್ತು ತಿಂಗಳು ನಿಮ್ಮ ಒಟ್ಟೇಲಿ ಒತ್ತಿದೀರಿ. ಬೋ ಕಸ್ಟ ಪಟ್ಟು ಎತ್ತಿದೀರಿ... ಎರಡೂ ನಿಮ್ಮವೇ. ನೀವೇ ಮಡಿಕ್ಕಂಡು ಚೆನ್ನಾಗಿ ನೋಡ್ಕಳಿ. ನಂಗೆ ಬ್ಯಾಡಾ. ಎರ್ಗೆ ಮಾಡ್ಸಿ, ನಿಮ್ಮಂಥೋರು ಎತ್ತ ಮಕ್ಳನ್ನ ನೋಡಿದ್ರೆ, ನಾನೇ ಎತ್ತಷ್ಟು ಕುಸಿ ನಂಗಾಯ್ತದೆ... ಇನ್ನು ನೀವು ಮನಿಕ್ಕಳಿ. ಏನೂ ಏಚ್ನೆ ಮಾಡ್ಬೇಡಿ." ಹೊನ್ನಿತಿ ಲಕ್ಷ್ಮಿಗೆ ಬೋಧನೆ ಮಾಡಿ ತಾನೂ ಅಲ್ಲೇ ಚಾಪೆಯ ಮೇಲೆ ಉರುಳಿಕೊಂಡಳು.

ಕನಸ್ನಲ್ಲಿ ಹೆಣ್ಣು ಮಗು ಹುಟ್ಟಿರುತ್ತಿತ್ತು. ತಕ್ಷಣವೇ ಎಚ್ಚರವಾಗುತ್ತಿತ್ತು. ನಂಗೆ ಆಸೆ ಇದ್ದುದು ಗಂಡು ಮಗುವೇ ಆಗಲಿ ಅಂತ. ಈಗ ಎರಡೂ ಹುಟ್ಟಿವೆ. ನನಗೆ ಹೆಣ್ಣು ಮಕ್ಕಳ ಮೇಲೆ ದ್ವೇಷವಿಲ್ಲ. ಆದರೆ ಈಗಾಗಲೇ ನಾಲ್ಕು ಹೆಣ್ಣು ಮಕ್ಕಳಿವೆ. ಒಬ್ಬಳ ಜವಾಬ್ದಾರಿ ಕಳೆಯಿತು ಅಂತ ಅಂಜ್ಕೊಂಡ್ರೆ... ಮತ್ತೆ ಜವಾಬ್ದಾರಿ ಹೆಚ್ಚಿತು. ನನಗೇ ಯಾಕೆ ಈ ಪರೀಕ್ಷೆ ದೇವರೇ? ಗಂಡಂಗೆ ತಿಳಿದ್ರೆ ಏನನ್ನಬಹುದು?"

"ಹೊನ್ನಿತೀ... ಯಜಮಾನ್ರು ಮನೆಗೆ ಬಂದಿದಾರೇನೆ?"

"ಹೊಂ.. ನ್ರವ್ವಾ... ಮಾತಾಡ್ಬೇಕಾ! ಮಕ್ಕಳನ್ನ ತೋರ್ಬೇಕಾ?" ಅವಳು ವಿಚಿತ್ರವಾಗಿ ನಗುತ್ತಾ ಕೇಳಿದಳು.

"ಸುಮ್ನೇ ಕೇಳ್ದೆ. ಅವರು ಹೊಲೆ ಮನೆಯೊಳಕ್ಕೆ ಬರುಲ್ಲ. ನಂಗೊತ್ತು." ಹೊನ್ನಿತಿ ಮತ್ತೆ ಕಣ್ಣು ಮುಚ್ಚಿ ಮಲಗಿದಳು. ಸಾತಕ್ಕ ಬೇಗ ಬೇಗ ಎರಡು ಪತ್ರಗಳನ್ನ ಬರೆದಳು. ಒಂದು ಶಾಂತಂಗೆ ಮತ್ತೊಂದು ಕೃಷ್ಣಂಗೆ. ವೈಕುಂಠನ್ನ ಕರೆದಳು. ಈ ಕಾಗದಗಳನ್ನ ತಾಳುಗುಪ್ಪದ ಕಡೆಯಿಂದ ಬರುತ್ತಲ್ಲ. ಆ ರೈಲು ಗಾಡಿಯಲ್ಲಿ ಒಂದು ಕೆಂಪು ಡಬ್ಬಿ ಇರುತ್ತೆ. ಅದು ಅಂಚೆ ಡಬ್ಬಿ. ಅದಕ್ಕೆ ಈ ಕಾಗದಗಳನ್ನು ಹಾಕು. ಬೇಗ ಹೋಗು ಗಾಡಿ ಬಂದು ಹೋಗಿ ಬಿಟ್ಟಿತು." ಅವಸರಿಸಿದಳು.

"ಯಾರ್ಗೆ ಬರ್ದಿದೀರವ್ವಾ..?"

"ಅದೆಲ್ಲಾ ನಿಂಗ್ಯಾಂಕೆ ಹೇಳಿದಷ್ಟು ಕೇಳು. ಹೊರಡು, ವೆಂಕಟೇಶನನ್ನೂ ಎತ್ಕೊಂಡು ಹೋಗು." ವೈಕುಂಠ ವಾಪಸ್ಸು ಬರುವಾಗ, ಅವನ ಜೊತೆ ಸ್ಕೂಲಿಗೆ ಹೋಗಿದ್ದ ಮಕ್ಕಳ ವಾಪಸ್ಸಾಗಿದ್ದರು. ಅವರುಗಳಿಗೆ ಹೊಸ ಸುದ್ದಿ ಕಾದಿತ್ತು.

"ಅತ್ತೆ... ಅಮ್ಮ ಎಲ್ಲಿ?...." ಲಲಿತ ಕೇಳಿದಳು.

"ನಿಮ್ಮಮ್ಮ ಮಲಗಿದಾಳೆ... ನಿಮಗೆ, ಇನ್ನೊಬ್ಬ ಚಿಕ್ಕ ತಮ್ಮ ತಂಗಿ ಹುಟ್ಟಿದಾರೆ."

"ಹೌದಾ ಅತ್ತೆ... ಎಲ್ಲಿ ತೋರ್ಸಿ."

"ಈಗ ಎರಡೂ ಮಲಗಿವೆ. ಎದ್ದ ಮೇಲೆ ನೋಡೋರಂತೆ. ಮೊದಲು ಸ್ಕೂಲು ಮೈಲಿಗೆ ಬಟ್ಟೆಯನ್ನ ಬಿಟ್ಟಿ ಕೈಕಾಲು ತೊಳೆದು ಬನ್ನಿ. ತಿಂಡಿ ಕಾಫೀನ ಕೊಡ್ತೀನಿ."

"ಅತ್ತೆ, ಸಣ್ಣ ಮಗು ಅಳ್ತಿರುವ ದನಿ ಕೇಳ್ತಿದೆ..." ಪದ್ಮಿನಿ ಕತ್ತಲೆ ಕೋಣೆಯ ಕಡೆಗೆ ಓಡಿದಳು.

"ಒಳಗೆ ಹೋಗ್ಬೇಡಿ..." ಸಾತಕ್ಕ ಹಿಂದಿನಿಂದ ಕೂಗಿದಳು. "ಹೊನ್ನಿತೀ ಮಕ್ಕಳು ಎದ್ದಿದ್ದರೆ ತೋರ್ಸೇ. ಇವು ನೋಡ್ಬೇಕಂತೆ. "ಹೊನ್ನಿತಿ ಒಂದಾದ ಮೇಲೆ ಇನ್ನೊಂದು ಮಗುವನ್ನು ಬಾಗಿಲಬಳಿಗೆ ತಂದು ತೋರಿಸಿದಳು.

"ಎಷ್ಟು ಪುಟ್ಟಬಾಯಿ... ಎಷ್ಟೋ ಪುಟ್ಟ ಕೈ..." ರಾಗಿಣಿ ಹೇಳಿದಳು.

"ಮುಟ್ಬೇಡಿ... ದೂರ ನಿಂತ್ಕೊಂಡು ನೋಡಿ. ಲಲಿತಾ ನೀನು ಮಕ್ಕಳನ್ನ ನೋಡಲ್ವಾ?..."

"ಇನ್ನೊಂದು ದಿನ ನೋಡ್ತೀನಿ." ಎಂದು ಬಿಟ್ಟಳು. ಏನು ಯೋಚಿಸ್ತಿದೀಯ ಅಂತ ಅವಳನ್ನ ಕೇಳಲಿಲ್ಲ. ಲಲಿತ ಆ ಕೋಣೆಯ ಬಳಿಗೆ ಹೋಗುವುದನ್ನ ನಿಲ್ಲಿಸಿ ಬಿಟ್ಟಿದ್ದಳು. "ಅತ್ತೆ... ಏನು ಹೆಸರನ್ನಿಟ್ಟಿದೀರಿ?"... ಕೇಳಿದಳು.

"ಹೆಸರಾ?... ಈಗಿನ್ನ ಇಟ್ಟಿಲ್ಲ. ಪುರುಡು ಕಳೆಯಲಿ. ತೊಟ್ಟಿಲಿಗೆ ಹಾಕುವ ದಿನ ಇಟ್ಟರಾಯ್ತು... ನೀನೇ ಯಾವ್ದಾದ್ರೂ ಒಳ್ಳೆ ಹೆಸರನ್ನ ಹುಡುಕು ಅದನ್ನೇ ಇಟ್ಟರಾಯ್ತು."

"ನೀವೇ ಹೇಳಿ ಅತ್ತೆ... ನಮಗೆಲ್ಲಾ ನೀವೇ ಅಂತ ಹೆಸರನ್ನಿಟ್ಟೋರು."

"ಹೂಂ. ಈಗ್ಯಾಕೋ ಯಾವ ಹೆಸರೂ ನೆನೆಪಿಗೆ ಬರ್ತಿಲ್ಲ." ಲಕ್ಷ್ಮಿಗೆ ಹೆಣ್ಣು ಮಕ್ಕಳಿಗೆ ಹೆಸರನ್ನು ಹುಡುಕಿ ಇಡುವುದರಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. 'ಏನೋ ಒಂದು, ಕರೆಯೋಕೆ ಇಟ್ಟರಾಯ್ತು' ಎಂದಿದ್ದಳು. ಸಾತಕ್ಕ ಸೂಚಿಸಿದ ಹೆಸರುಗಳನ್ನ ವಿರೋಧಿಸಿರಲಿಲ್ಲ. ಆ ಹೆಸರುಗಳೇ ಉಳಿದವು.

* * *

ಇದ್ದಕ್ಕಿದ್ದಂತೆ ನಾರಾಯಣ ಬಂದಿಳಿದಾಗ ಸಾತಕ್ಕ ಅಚ್ಚರಿಗೊಂಡಳು. "ಹೇಗಿದೀರಿ ಅತ್ಗೇ... ಅಕ್ಕ ಹೇಗಿದಾಳೆ" ಅಂತ ವಿಚಾರಿಸಿದಾಗ, "ಕೃಷ್ಣ ಬರಲಿಲ್ವಾ?" ಅಂತ ಕೇಳಿದಳು.

"ಅವನಿಗೆ ಇದು ಕಡೇ ವರ್ಷ. ಈ ವರ್ಷ ಮುಗಿದರೆ ಡಿಗ್ರಿ ಸಿಗುತ್ತೆ. ಒಳ್ಳೆ ಕೆಲಸ ಸಿಗುತ್ತೆ. ನಿಮ್ಮ ಕಾಗದ ಬಂದಕೊಡ್ಲೇ... ನನಗೆ ಹೋಗಿ ಬಾ ಅಂತ ಹೇಳ್ದ ಬಂದು ಬಿಟ್ಟೆ."

"ಒಳ್ಳೆ ಕೆಲಸ ಮಾಡಿದೆ ಅಂತ ಹೇಳಿದರೂ ಸ್ವಲ್ಪ ನಿರಾಸೆಯಾಗಿತ್ತು." ಲಲಿತಳ

ಕಡೆ ನೋಡಿದಳು. ಅಕ್ಕ ತಂಗಿಯರು ಮಾವನನ್ನೂ ಸುತ್ತುವರೆದಿದ್ದರು.

"ಮಾವಾ... ನಮ್ಮನೇಲಿ ಎರಡು ಪುಟ್ಟ ಪಾಪುಗಳು ಹುಟ್ಟಿವೆ..." ಸಂಭ್ರಮದಿಂದ ಅವನ ಮುಖವನ್ನ ತಿರುಗಿಸಿ ಹೇಳುತ್ತಿದ್ದರು.

"ಅವನಿನ್ನು ಈಗ ಬರ್ತಿದಾನೆ. ಗೋಳು ಹೊಯ್ಕೋಬೇಡಿ. ಬೇಜಾರು ಮಾಡ್ಕೊಂಡು ನಾಳೇನೇ ಹೊರಟು ಹೋಗ್ತಾನೆ ಅಷ್ಟೇ..." ಅವರುಗಳು ಹಿಂದಕ್ಕೆ ಸರಿದರು.

"ಇಲ್ಲ ಅತ್ಗೇ... ಸಧ್ಯಕ್ಕೆ ಒಂದಿಷ್ಟು ದಿನ ನಾನಿಲ್ಲೇ ಇರ್ತೀನಿ. ನಾನು ಬೇರೆ ಕೆಲಸ ಹುಡುಕ್ತಿದೀನಿ."

"ಹೌದೇನೋ ನಾರಾಯಣ?" ಎಂದಷ್ಟೇ ಕೇಳಿ, ಅವನಿಗೆ ಕಾಫಿಯನ್ನ ತಂದಿತ್ತಳು. ಮೊದಲು ಬಿಸಿ ಬಿಸಿ ಕಾಫಿ ಕುಡಿ. ಕೈ ಕಾಲು ತೊಳ್ಕೊಂಡು ಹೋಗಿ ನಿನ್ನ ಅಕ್ಕನ್ನ ಮಾತಾಡ್ಸು. ನಿನ್ನ ಭಾವ ಪೇಟೆಗೆ ಹೋಗಿದಾನೆ. ಬಾಣಂತಿಗೆ ಕೊಡ ಬೇಕಾದ ಕೆಲವು ಗ್ರಂಥಿಗೆ ಪದಾರ್ಥಗಳು ಬೇಕಿದ್ವು

"ನಂಗೂ ಏನಾದ್ರೂ ಕೆಲಸ ಇದ್ದರೆ ಹೇಳಿ ಅತ್ಗೇ... ಸಧ್ಯಕ್ಕೆ ಬಿಡುವಾಗಿದೀನಿ...." ಎನ್ನುತ್ತ ಕಾಫಿಯನ್ನ ಕುಡಿದು ಮುಗಿಸಿದ.

"ಶಾಂತನ ಮನೆಗೆ ಹೋಗಿದ್ಯಾ? ಹೇಗಿದಾಳೆ. ಕಾಗದ ತಲುಪಿತಂತಾ?... ಬರ್ತೀವಿ ಅಂತ ಹೇಳಲಿಲ್ವಾ?"

"ಅವಳಿಗೇನೋ ಬರೋಕೆ ಆಸೆ ಇತ್ತು ಅತ್ಗೇ... ಇನ್ನೆರಡು ತಿಂಗಳಿಗೆ ಅದ್ಯಾವುದೋ ಮದುವೆ ಇದೆಯಂತಲ್ಲ. ಆಗ ಎಲ್ರೂ ಒಟ್ಟಿಗೇ ಬರ್ತಾರಂತೆ."

"ಪಾಪ, ಮದುವೆಯಾಗಿ ಹೋಗಿದ್ದೇ ಹೋಗಿದ್ದು. ಅತ್ತೆ ಇಲ್ಲದ ಮನೆ. ಜವಾಬ್ದಾರಿ ಜಾಸ್ತಿ. ಆಷಾಢದಲ್ಲಿ ಅತ್ತೆ ಇಲ್ಲದ್ದರಿಂದ ಬರಲಿಲ್ಲ. ಶ್ರಾವಣದಲ್ಲಿ ನೋಹಿ ವ್ರತಗಳನ್ನ ಅತ್ತಿಗೇರೆ ಮಾಡಿಸಿದರಂತೆ. ಅದೇನು ಮಾಡಿಸಿದ್ರೋ ಬಿಟ್ರೋ? ಗೌರಿ ಗಣೇಶನ ಹಬ್ಬಕ್ಕೆ ನಾವುಗಳೇ ಕರೆಸಲಿಲ್ಲ. ನಿಂಗೆ ಗೊತ್ತಲ್ಲ... ನಮ್ಮ ಪಾರ್ವತಿ ಮನೇಲಿ ಎಂಥಾ ದುರಂತ ನಡೆದು ಹೋಯ್ತು ಅಂತ.....

"ಗೊತ್ತಾಯ್ತು ಅತ್ಗೇ... ಪಾಪ... ಅವರು ಈಗ ಹೇಗಿದಾರೆ?..."

"ಈಗ ಅವರುಗಳು ಇಲ್ಲಿಲ್ಲ. ಭದ್ರಾವತಿಗೆ ಹೊರಟು ಹೋದ್ರು..."

"ರಾಜ ಏನ್ಮಾಡ್ತಿದಾನೆ...?"

"ಅವನೂ ಓದ್ತಿದಾನೆ..." ಲಲಿತ ಸಾತಕ್ಕನ ಕಡೆ ನೋಡಿದಳು... ನೀನು ಎದ್ದೇಳು, ನಾನು ಬೇಗ ಅಡಿಗೆ ಮಾಡಿ ಬಡ್ತೀನಿ" ತಾನು ಅಡಿಗೆ ಮನೆ ಸೇರಿದಳು. ಲಲಿತ ಅತ್ತೆಯ ಹಿಂದೆಯೇ ಹೋದಳು. "ಲಲಿತಾ ನೀನು ಓದ್ಕೋ ಹೋಗು... ನಾಣಿ ನಂಗೆ ಸಹಾಯ ಮಾಡ್ತಾನೆ."

"ಇಲ್ಲ ಅತ್ತೆ ಕತ್ತಲೇಲಿ ಓದುಕ್ಕೆ ಬೇಜಾರು. ಊಟ ಆದ್ಮೇಲೆ ಒಂದಾಟ ಪಗಡೆ ಆಡೋಣ್ವಾ...? ಯಾಕೋ ಬೇಜಾರಾಗ್ತಿದೆ." ಸಾತಕ್ಕನಿಗೆ ಅವಳ ಬೇಸರ ಏನು ಅಂತ ಅರ್ಥವಾಗಿತ್ತು.

ಅಷ್ಟರಲ್ಲಿ ಶಾಸ್ತ್ರಿಯೂ ಪೇಟೆಯಿಂದ ಬಂದಿದ್ದ. ಸೈಕಲ್ ಪೆಡಲ್ ತುಳಿದು ಸುಸ್ತಾಗಿತ್ತು. ನಾರಾಯಣ ಮಂದಾಗಿ ಹೋಗಿ, ಕೈಚೀಲಗಳನ್ನ ತೆಗೆದುಕೊಂಡ. "ಹೇಗಿದೀರಿ ಭಾವ?..." ವಿಚಾರಿಸಿದ.

"ಯಾವಾಗ ಬಂದ್ಯೋ ನಾರಾಯಣ? ಬರೋ ವಿಷಯ ಬರೆದಿರಲಿಲ್ಲ."

"ಅಕ್ಕಂಗೆ ಹೆರಿಗೆ ಆಯ್ತು ಅಂತ ತಿಳೀತು. ಬಂದೆ."

"ಒಳ್ಳೇದಾಯ್ತು ಬಿಡು. ಮನೇಲಿ ಎಲ್ಲ ಹೇಗಿದಾರೆ? ಕುಶಲವನ್ನ ವಿಚಾರಿಸಿದ. ನಿಮ್ಮಕ್ಕನ್ನ ಮಾತ್ನಾಡ್ಸಿದ್ಯಾ?..." 'ಹೂಂ' ಎಂದ.

"ಆಲೆಮನೆ ಯಾವಾಗ ಕಟ್ಟಿಸ್ತೀರಿ ಅಂತ ನಂಜುಂಡ ವಿಚಾರಿಸ್ತಿದ್ದ. ಆಗ ಬರ್ತಾನಂತೆ."

"ಆಲೆಮನೆ ಕೆಲಸ ಬಹಳ ರೇಜಿಗೆ. ಬೆಲ್ಲ ಮಾಡೋಕೆ ನುರಿತವರು ಬೇಕು. ಬೆಲ್ಲವನ್ನು ತಯಾರಿಸೋದು, ಬೆಲ್ಲ ತಿನ್ನೋ ಅಷ್ಟು ಸುಲಭವೂ ಅಲ್ಲ; ಸವಿಯೂ ಅಲ್ಲ. ಹದ ಕೆಟ್ಟು ಹೋದ್ರೆ, ಬೆಲ್ಲ ಗಟ್ಟಿಯಾಗಲ್ಲ. ಸೋಮನಕೊಪ್ಪದಲ್ಲಿ ಯಾರೋ ಒಬ್ಬರು ಹೋದ ವರ್ಷ "ಆಲೆಮನೆ" ಕಟ್ಟಿಸಿ, ನಷ್ಟ ಮಾಡಿಕೊಂಡಿದಾರೆ. ಬೆಲ್ಲದ ಹದ ಸಿಗಲೇ ಇಲ್ಲವಂತೆ. "ಜೋನಿಬೆಲ್ಲ" ಆಗಿ ಹೋಯ್ತು. ನಮ್ಮ ಮನೆಗೂ ನಾಲ್ಕು ಟಿನ್ ಜೋನಿ ಬೆಲ್ಲವನ್ನ ಕಳಿಸಿದಾರೆ. ಪಾಪ ಬಡವ ಅಂತ ದುಡ್ಡು ಕೊಟ್ಟು ಕೊಂಡ್ಕೊಂಡೆ. ಈಗ ದಿನಾ ಅಡಿಗೆಗೆ ಹಾಕಿ ಖರ್ಚು ಮಾಡ್ತಿದೀವಿ. ಚಿಕ್ಕೋವು ಹೋಗ್ತಾ ಬರ್ತಾ, ಕೈ ಹಾಕಿ, ಮೈ ಕೈಯೆಲ್ಲಾ ಬಳ್ಕೊಂಡು ತಿನ್ನುತ್ವೆ."

"ಜೋನಿ ಬೆಲ್ಲಾನಾ? ಹೆಸರನ್ನೇ ಕೇಳಿರ್ಲಿಲ್ಲ. ಮೈಗೆ ಒಳ್ಳೇದಾ?"

"ನಂಗೂ ಗೊತ್ತಿರ್ಲಿಲ್ಲ... ಈಗ್ಲೇ ಗೊತ್ತಾದದ್ದು. ನಂಗೇನಿದ್ರೂ ಸಕ್ಕರೆ ಮಾಡಿ ಗೊತ್ತು. ಮಂಡ್ಯದ ಕಬ್ಬು ಬೆಳೆಗಾರರು ಆಲೆಮನೆಗೆ ಕರೆದು ಕಬ್ಬಿನ ಹಾಲನ್ನ ಕುಡಿಯೋಕೆ ಕೊಡ್ತಿದ್ರು. ಬಿಸಿ ಬಿಸಿ ಉಂಡೆ ಬೆಲ್ಲ ಕೊಡ್ತಿದ್ರು. ಹೂಂ. ಇದೂ ಇರುತ್ತೆ ಒಂಥರಾ ಮರಳು ಮರಳಾಗಿ... ಜೇನು ತುಪ್ಪದಂತೆ ದ್ರವವಾಗಿ.... ಬಣ್ಣಾನೂ ಅಷ್ಟೇ... ನಿಮ್ಮ ಮಾವಂಗ ತಂದು ತೋರಿಸ್ರೇ...."

'ಪದ್ಮಿನಿ, ಸೌಟಿನಲ್ಲಿ ಜೋನಿ ಬೆಲ್ಲವನ್ನ ಎತ್ತಿಕೊಂಡು ತಂದಳು. ನಾರಾಯಣ ನೋಡಿ ನಸುನಕ್ಕ. "ಮೊಲಾಸಸ್ ಇದ್ದ ಹಾಗೆ ಇದೆಯಲ್ಲ ಭಾವ..." ಎಂದ.

"ನೀನೆಲ್ಲಿ ನೋಡಿದೀಯ ಅದನ್ನ..."

"ನಮ್ಮನ್ನೆಲ್ಲಾ ಕರ್ಕೊಂಡು ಹೋಗಿ ನೀವೇ ತೋರಿಸಿದ್ರಲ್ಲಾ ಭಾವ. ಅದರಿಂದ

ಆಲ್ಕೋಹಾಲ್ ತಯಾರಿಸ್ತಾರೆ ಅಂತ ಹೇಳಿದ್ರಿ..."

"ಈ ಹಳ್ಳಿಗೆ ಬಂದು ಅದನ್ನೆಲ್ಲ ಮರತೇ ಬಿಟ್ಟಿದೀನಿ. ಈಗ ಏನಿದ್ರೂ ಗದ್ದೆ, ತೋಟ... ಭತ್ತ ಅಕ್ಕಿ.... ಸುಗ್ಗಿ... ಬಳ್ಳ, ಸೇರು ಬೇರೆ ಬೇರೆ ಇಲ್ಲಿಯ ಮಾತುಗಳು. ಈಗ ಈ ಹಳ್ಳಿಯವನೇ ಆಗಿ ಬಿಟ್ಟಿದೀನಿ." ನಸುನಕ್ಕ.

"ಗ್ರಾಮ ಪಂಚಾಯ್ತಿಗೆ ಛೇರ್‌ಮನ್ ಮಾಡ್ತಾರಂತೆ ಈ ವರ್ಷ." ನಿಮ್ಮ ಭಾವನನ್ನ ಸಾತಕ್ಕ ಒಳಗಿನಿಂದಲೇ ಹೇಳಿದಳು....

"ಹೌದಾ ಭಾವ...." ನಾರಾಯಣ ಸಂತಸದಿಂದ ಕೇಳಿದ. ಇಲ್ಲ ಎನ್ನುವಂತೆ ತಲೆಯಾಡಿಸಿದ.

* * *

ಹಳ್ಳಿಯ ರಾಜಬೀದಿಯಲ್ಲಿ ಧೂಳನ್ನೆಬ್ಬಿಸುತ್ತಾ ಒಂದು ಜೀಪು ಬಂದು ನಿಂತಿತು. ಅದರ ಹಿಂದೆ ಒಂದು ಹಿಂಡು ಮಕ್ಕಳು 'ಭುರ್' ಎಂದು ಬಾಯಲ್ಲಿ ಸದ್ದು ಮಾಡುತ್ತ ಓಡಿ ಬಂದು ನಿಂತವು.

"ಇಲ್ಲಿ ಗುಂಡಾ ಶಾಸ್ತ್ರಿ ಅನ್ನೋರ ಮನೆ ಯಾವುದು?" ತಲೆಗೆ ಹ್ಯಾಟನ್ನ ಧರಿಸಿದ್ದ ವ್ಯಕ್ತಿ ನಾರಾಯಣನನ್ನ ಕೇಳಿತು.

"ಇದೇ ಅವರ ಮನೆ. ಆದರೆ ಅವರು ಮನೇಲಿಲ್ಲ. ಗದ್ದೆಗೆ ಹೋಗಿದಾರೆ... ನೀವ್ಯಾರು?"

"ನಾನು ಅವರ ಹಳೇ ದೋಸ್ತ್. ನಾನು ಅವರನ್ನ ನೋಡಬೇಕಾಗಿತ್ತು. ಅವರ ಗದ್ದೆ ಎಲ್ಲಿದೆ ಅಂತ ಸ್ವಲ್ಪ ಹೇಳ್ತೀಯೇನಪ್ಪಾ..." ನಾರಾಯಣ ವೈಕುಂಠನನ್ನ ಕರೆದು ಅವರೊಂದಿಗೆ ಕಳಿಸಿದ. ಒಳಗೆ ಬಂದು ಸಾತಕ್ಕನಿಗೆ ಹೇಳಿದ.

"ಯಾರೋ ಜೀಪ್ನಲ್ಲಿ ಬಂದಿದ್ರು, ಭಾವನ್ನ ಕೇಳ್ಕೊಂಡು. ವೈಕುಂಠನ್ನ ತೋರ್ಸು ಅಂದ್ರು ಗದ್ದೆಗೇ ಕಳಿಸ್ದೆ."

"ಯಾರು? ಹೆಸರೇನು ಅಂತ ಕೇಳ್ಬೇಕಾಗಿತ್ತು. ಹೇಗಿದ್ರು?"

"ಹ್ಯಾಟ್ ಹಾಕ್ಕೊಂಡಿದ್ರು, ಏನೋ ಇನ್‌ಸ್ಪೆಕ್ಷನ್‌ಗೆ ಬಂದಿರಬಹುದು."

"ಈಗ ಕಂಠಿಯ ಮನೆಯೇ ಸ್ಕೂಲಾಗಿದೆ. ಇವನಿನ್ನೂ ಛೇರ್‌ಮನ್ ಆಗಿಲ್ಲ. ಎಂಥಾ ಇನ್‌ಸ್ಪೆಕ್ಷನ್ನೋ..?"

"ಯಾರೋ ಹಳೇ ದೋಸ್ತ್ ಅಂತ ಹೇಳಿದ್ರು ಅತ್ಗೆ... ಮಂಡ್ಯದಲ್ಲಿ ಪರಿಚಯ ವಾಗಿದ್ದೋರು ಇರಬಹುದು. ಭಾವ ಬಂದ್ಮೇಲೆ ಗೊತ್ತಾಗುತ್ತೆ."

"ಹೇಗಾದರಾಗಲೀ, ಸ್ವಲ್ಪ ಹೆಚ್ಚಾಗೇ ಅನ್ನ ಹುಳಿ ಮಾಡ್ತೀನಿ. ಸ್ವಲ್ಪ ತರಕಾರೀನ ಹೆಚ್ಚಿ ಕೊಡ್ತೀಯ ನಾರಾಯಣ..." ನಾರಾಯಣ ಈಳಿಗೆ ಮಣೆಯನ್ನ ಇಟ್ಟುಕೊಂಡು ಕುಳಿತ." ಇವತ್ತು ಸ್ವಲ್ಪ ಹೆಚ್ಚಿಗೆ ಕೆಲಸ ಆಯ್ತು... ಬಾಣಂತಿಗೆ ಮಕ್ಕಳಿಗೆ ನೀರು

ಹಾಕುವಷ್ಟರಲ್ಲಿ ಸಾಕಾಯಿತು. ಸೊಂಟ ನೋವು."

"ನಾನು ಮಡಿ ಉಟ್ಕೊಂಡು ಅಡಿಗೆ ಮಾಡ್ತೀನಿ ಅತ್ಗೆ... ನಂಗೆ ಬರುತ್ತೆ."

"ನಿಮ್ಮ ಅತ್ಗೆ ಇದೊಂದು ಒಳ್ಳೆ ಕೆಲಸ ಮಾಡಿದಾಳೆ ನೋಡು. ಗಂಡು ಹುಡುಗರಾದ್ರೂ ನಿಮ್ಮಿಬ್ರಿಗೂ ಅಡಿಗೆ ಕೆಲಸ ಬರುತ್ತೆ." ನಾರಾಯಣ ಸುಮ್ಮನೇ ನಕ್ಕು ತರಕಾರಿಗಳನ್ನ ಹೆಚ್ಚಿ ತೊಳೆದಿಟ್ಟ. ಕಾಯಿ ತುರಿದುಕೊಟ್ಟ. ಸಾತಕ್ಕ ಮಣ್ಣಿನ ಕೂಡೊಲೆಗೆ ಸೌದೆ ಇಟ್ಟು, ಸೀಮೆ ಎಣ್ಣೆಯನ್ನ ಹಾಕಿ ಹಚ್ಚಿಸಿದಳು. ಒಂದು ಕಡೆ ಅನ್ನಕ್ಕೆ ತಪ್ಪಲೆಯನ್ನ, ಇನ್ನೊಂದು ಕಡೆ, ಬೇಳೆಗೆ ಕೊಳದಪ್ಪಲೆಯನ್ನ ಇಟ್ಟಳು. ಒಂದು ಒಲೆ ಹಚ್ಚಿದರೆ, ಮತ್ತೊಂದು ಕಡೆಯೂ ಉರಿವ ಜ್ವಾಲೆ ಬರುವ ವಿಧಾನದ ಜೋಡಿ ಒಲೆ. ಅನ್ನವನ್ನು, ಬೇಳೆಯನ್ನು ಒಟ್ಟೊಟ್ಟಿಗೇ ಬೇಯಿಸಬಹುದು...

"ಅತ್ಗೇ ಇಂಥಾ ಒಲೆ ಎಲ್ಲಿ ಸಿಗುತ್ತೆ?"..... ನನಗೆ ಈ ಒಲೆ ಇಷ್ಟವಾಯ್ತು.

"ಇದನ್ನು ನಿಮ್ಮಕ್ಕನೇ ತಯಾರಿಸಿದ್ದು. ಹುತ್ತದ ಮಣ್ಣಿನಿಂದ ಮಾಡಿದ್ದು." ಇದನ್ನ "ಕೂಡೊಲೆ" ಅಂತ ಅಂತಾರೆ. ಬೆಂಗಳೂರಿನಲ್ಲಿ ಈಗ ಎಂತೆಂಥದೋ ಸೀಮೆ ಎಣ್ಣೆ ಸ್ಟೌವ್‌ಗಳು ಸಿಗುತ್ತಂತೆ. ಅಂಥಾದ್ರಲ್ಲಿ ಈ ಹಳ್ಳಿಯ ಒಲೆಯನ್ನ ಇಷ್ಟ ಪಡ್ತೀಯಲ್ಲ... ಸಾತಕ್ಕ ನಗುತ್ತ ಉತ್ತರಿಸಿದಳು.

"ಅತ್ಗೇ ಅವರುಗಳೆಲ್ಲ ಬಂದ್ರೂ ಅಂತ ಕಾಣುತ್ತೆ. ಬೇಪ್ಪು ನಿಂಗ, ಸಿದ್ದಯ್ಯ...." ಸಾತಕ್ಕ, ಊದುಕೊಳವೆಯಿಂದ ಒಲೆಯ ಉರಿಯನ್ನ ಊದಿ ಊದಿ ಹೆಚ್ಚು ಮಾಡಿದಳು.

"ನೀನು ಹೊರಗೆ ಹೋಗಿ ಅವರುಗಳಿಗೆಲ್ಲಾ ನೀರು ನಿಡಿ ಏನಾದ್ರೂ ಬೇಕು ಅಂತ ವಿಚಾರಿಸು" ನಾರಾಯಣ ಎದ್ದು ಹೊರಕ್ಕೆ ಬಂದ. ಅಷ್ಟರಲ್ಲಿ ಅವರುಗಳು ಒಳಕ್ಕೆ ಬಂದಿದ್ದರು. ಶಾಸ್ತ್ರಿ ಪರಸ್ಪರ ಪರಿಚಯ ಮಾಡಿಸಿ ಕೊಟ್ಟ. ನಾರಾಯಣ ಕೈ ಮುಗಿದ. "ಇವನು ನನ್ನ ಭಾಮೈದ. ನಾರಾಯಣಸ್ವಾಮಿ ಅಂತ. ಇವರು ಪಾಂಡುರಂಗ ಪ್ರಭು ಅಂತ. ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಸಹೋದ್ಯೋಗಿಯಾಗಿದ್ದರು. ಈಗ ಇಲ್ಲಿ ಶಿವಮೊಗ್ಗದ ಬಳಿ ಮಲವಗೊಪ್ಪ ಎಂಬ ಹಳ್ಳಿಯಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಶುರುವಾಗಿದೆ. ಅಲ್ಲಿಯ ಫಾರಂ ಸೆಕ್ಷನ್‌ನಲ್ಲಿ ಫೀಲ್ಡ್ ಆಫೀಸರ್ ಆಗಿ ಕೆಲಸಕ್ಕೆ ಸೇರಿಕೊಂಡಿದಾರೆ. ಸುತ್ತಮುತ್ತಲ ಹಳ್ಳಿಯ ಗದ್ದೆಗಳಲ್ಲಿ ಬೆಳೆಯುವ ಕಬ್ಬುಗಳನ್ನ ಕೊಂಡು ಕೊಳ್ತಾರಂತೆ. ನೋಡೋಕೆ ಅಂತ ಬಂದಿದಾರೆ." ಅಡಿಗೆ ಮನೆ ಬಾಗಿಲಲ್ಲಿ ನಿಂತಿದ್ದ ಸಾತಕ್ಕನ ಕಿವಿ ಚುರುಕಾಯಿತು.

"ನಾನು ಈ ಸಾರಿ ಆಲೆಮನೆ ಹಾಕಿಸೋಣ ಅಂತ ಗದ್ದೆಯಲ್ಲಿ ಕಬ್ಬನ್ನ ಬೆಳೆಸಿದೆ. ನಾನು ಇಲ್ಲಿದೀನಿ ಅಂತ ಈ ಪುಣ್ಯಾತ್ಮಂಗೆ ಹೇಗೆ ಗೊತ್ತಾಯ್ತೋ? ಸೀದಾ ಈ ಹಳ್ಳಿಗೆ ನನ್ನನ್ನ ಹುಡುಕ್ಕೊಂಡು ಬಂದು ಬಿಟ್ಟರು."

"ವೆಂಕಟಾಚಲಯ್ಯ ಅನ್ನೋರು, ಫ್ಯಾಕ್ಟರಿಯ ಫಾರಂಗೆ ಬಂದಿದ್ದರು. ಅವರಿಂದ, ನೀವು ಇಲ್ಲಿ ಇದೀರಿ ಅಂತ ತಿಳೀತು. ಅವರೂ ಕಬ್ಬು ಹಾಕ್ಸಿದಾರೆ. ನಮಗೇ ಕೊಡ್ತೀವಿ ಅಂತ ಹೇಳಿದಾರೆ. ನೀವೂ ಅದೇ ಕೆಲಸ ಮಾಡಿ..."

"ನಂಗೆ ಏನು ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ ಪ್ರಭುಗಳೇ."

"ಇದು ಲಾಭದಾಯಕ ಅಲ್ವಾ ಶಾಸ್ತ್ರಿಗಳೇ. ಒಂದು ಟನ್ ಕಬ್ಬಿಗೆ ಫ್ಯಾಕ್ಟರಿಯವರು ಕೊಡುವ ಬೆಲೆಗೂ, ಆಲೆಮನೆಯಿಂದ ಬರುವ ಬೆಲ್ಲಕ್ಕೆ ಸಿಗುವ ಆದಾಯಕ್ಕೂ ಲೆಖ್ಖ ಹಾಕಿ ನೋಡಿ. ಆಗ ನಿಮಗೇ ತಿಳಿಯುತ್ತೆ, ಲಾಭ ಯಾವುದು ಅಂತ. ನೀನು ಏನು ಹೇಳ್ತಿಯಪ್ಪಾ ನಾರಾಯಣ?"

ನಾರಾಯಣ ಭಾವನ ಕಡೆ ನೋಡಿದ. ಶಾಸ್ತ್ರಿ ಗೊಂದಲದಲ್ಲಿದ್ದಂತೆ ಕಂಡಿತು. ಪ್ರಭುಗಳು ಹೇಳಿದ್ದರಲ್ಲಿ ಸತ್ಯಾಂಶ ಇದೆ ಅಂತ ಅನ್ನಿಸಿತು. ಅಷ್ಟರಲ್ಲಿ ಶಾಸ್ತ್ರಿ ಮತ್ತೆ ತಾನೇ ಹೇಳಿದ. "ನಾನು ಈಗ್ಲೇ ಏನನ್ನ ಹೇಳಲ್ಲ ಪ್ರಭುಗಳೇ ಯೋಚಿಸ್ಬಿಟ್ಟು ಹೇಳ್ತೀನಿ."

"ಹಾಗೇ ಮಾಡಿ. ಹಾಗೇ ಇನ್ನೊಂದು ಮುಖ್ಯವಾದ ವಿಷಯ. ಸಕ್ಕರೆ ಕಾರ್ಖಾನೆ ಹೊಸದಾಗಿ ಶುರುವಾಗಿದೆ. ಅನುಭವೀ ಕೆಲಸವಂತರ ಅಗತ್ಯ ಇದೆ. ನೀವು ಬಂದು ಹೊಸ ಕೆಲಸಗಾರರಿಗೆ ತರಬೇತಿ ನೀಡಿದರೆ ಸಹಾಯವಾಗುತ್ತದೆ."

"ನನಗೆ ಬಿಡುವಿಲ್ಲ ಪ್ರಭುಗಳೇ... ಅಲ್ಲದೇ ಅದನ್ನೆಲ್ಲಾ ಮರೆತು ಬಿಟ್ಟಿದೀನಿ."

"ಅದ್ಹೇಗೆ ಮರೆತು ಹೋಗುತ್ತೆ ಶಾಸ್ತ್ರಿಗಳೇ... ನೀವು ಓದಿರೋದೇ ಅದನ್ನ. ಹತ್ತಾರು ವರ್ಷಗಳ್ಳ ಅನುಭವವಿದೆ. ನಿಮಗೆ ಗೌರವ ಸಂಭಾವನೆಯನ್ನ ಕೊಡ್ತಾರೆ. ಇಲ್ಲ ಅನ್ನಬೇಡಿ.

"ತಾಪೇದಾರಿ ಕೆಲಸ ಬೇಡ ಅಂತ ಬಿಟ್ಟು ಬಂದು, ಇಲ್ಲಿ ನೆಲೆಸಿದೀನಿ. ಇಲ್ಲಿ ಹಾಯಾಗಿದೀನಿ. ಮತ್ತೆ ನನ್ನನ್ನ ಅಲ್ಲಿಗೆ ಎಳೀಬೇಡಿ" ಕೈಮುಗಿದ.

"ನಾನು ವಿಳೀತಿಲ್ಲ. ವಿಧಿ ಎಳೆಯುತ್ತಿದೆ. ಇಲ್ದಿದ್ರೆ, ನೀವು ಇರುವ ಜಾಗದಲ್ಲೇ ಹೊಸ್ದಾಗಿ ಸಕ್ಕರೆ ಕಾರ್ಖಾನೆ ಯಾಕೆ ಶುರುವಾಯ್ತು? ನೀವು ಮಂಡ್ಯ ಬಿಟ್ಟು ಹತ್ತು ವರ್ಷಗಳೇ ಆಯ್ತು. ನೀವು ಇಲ್ಲಿ ಇದೀರಿ ಅಂತ ಯಾರಿಗೂ ತಿಳಿದಿರಲಿಲ್ಲ. ನನಗೆ ಗೊತ್ತಾದ ತಕ್ಷಣ ನಿಮ್ಮನ್ನ ಹುಡುಕ್ಕೊಂಡು ಬಂದಿದೀನಿ. ನನ್ನ ಮಾತಿಗೆ ಗೌರವ ಕೊಡ್ತೀರಿ ಅಂತ ಅಂದ್ಕೊಂಡಿದೀನಿ...." ವಿನಯದಿಂದ ನುಡಿದರು.

"ಇದೊಳ್ಳೆ ಚೆನ್ನಾಯ್ತಲ್ಲ ಪ್ರಭುಗಳೇ... ನಿಮ್ಮ ಬಗ್ಗೆ ಗೌರವ ಇದೆ. ಆದರೆ ಹಾಗಂತ... ನಿಮ್ಮ ಮಾತಿಗೆ ಒಪ್ಕೋ ಬೇಕು ಅಂತ ಬಲವಂತ ಮಾಡ್ತಿದೀರಲ್ಲ."

"ಸರಿ. ನೀವು ಯೋಚಿಸಿ ಒಂದು ತೀರ್ಮಾನಕ್ಕೆ ಬನ್ನಿ. ಆದರೆ ನನಗೆ ನಿರಾಸೆ ಮಾಡಬೇಡಿ. ನಾನಿನ್ನು ಬರ್ತೀನಿ."

"ಛೆ.ಛೆ. ಹಾಗೇ ಹೋಗುಕ್ಕೆ ಹೇಗಾಗುತ್ತೆ ಪ್ರಭುಗಳೇ. ಊಟಕ್ಕೇಳಿ ನಾರಾಯಣ ಅಡಿಗೆ ಆಗಿದ್ರೆ ಎಲೆ ಹಾಕು.." ನಾರಾಯಣ ಒಳಗೆ ಹೋಗಿದ್ದ. ಸಾತಕ್ಕನ ಅಡಿಗೆ ಕೆಲಸ ಮುಗಿದಿತ್ತು. ನಾರಾಯಣ ಬಂದವರೆಲ್ಲರಿಗೂ ಎಲೆಯನ್ನು ಹಾಕಿ ನೀರನ್ನಿಟ್ಟು ಬಡಿಸಿದ. ಸಾತಕ್ಕ ಅಡಿಗೆ ಮನೆಯ ಬಾಗಿಲಲ್ಲಿ ಕಾಣಿಸಿಕೊಂಡಳು.

"ಇವಳು ನನ್ನ ಅಕ್ಕ ಸಾವಿತ್ರಿ... ಸಾವಿತ್ರಿ ಇವರು ಪ್ರಭುಗಳು ಅಂತ ಮಂಡ್ಯದವರು. ನಿಂಗೆ ನೆನಪಿದೆಯೋ, ಇಲ್ವೋ..."

"ನಾನು ನಿಮ್ಮ ಶ್ರೀಮತಿಯವರನ್ನ ನೋಡಿದ್ದೆ... ತವರಿಗೆ ಹೋಗಿದಾರಾ!"

"ಇಲ್ಲ. ಅವಳು ಬಾಣಂತಿ..." ವೆಂಕಟೇಶನನ್ನ ಎತ್ತಿಕೊಂಡು ಹೇಳಿದ.

"ಓಹೋ... ಶುಭ ಸಮಾಚಾರವನ್ನ ಈಗ ಹೇಳ್ತಿದೀರಲ್ಲ ಶಾಸ್ತ್ರಿಗಳೇ... ಎಷ್ಟು ಜನ ಮಕ್ಕಳು ನಿಮಗೆ!".... ಮಂಡ್ಯದಲ್ಲಿದ್ದಾಗ ಒಂದು ಹೆಣ್ಣು ಮಗು ಇತ್ತು ಅಲ್ವಾ!"

"ಅವಳಿಗೆ ಮದುವೆ ಆಯ್ತು. ನನ್ನ ಅಕ್ಕನ ಮಗನೇ ವರ... ಆಮೇಲೆ ಇನ್ನೂ ಮೂರು ಜನ ಹೆಣ್ಣು ಮಕ್ಕಳು. ಆನಂತರ ಇವನೇ ಕುಲಪುತ್ರ.. ಆಮೇಲೆ ಈಗ ಅವಳಿ ಮಕ್ಕಳು... ಒಂದು ಗಂಡು ಒಂದು ಹೆಣ್ಣು..."

"ಅವಳಿ ಮಕ್ಕಳು ಬಹಳ ಅಪರೂಪ ಶಾಸ್ತ್ರಿಗಳೇ. ಏನು ಹೆಸರನ್ನಿಟ್ಟಿದೀರಿ?"

"ಇನ್ನೂ ನಾಮಕರಣ ಆಗಿಲ್ಲ... ನಾರಾಯಣ ಮಕ್ಕಳನ್ನ ಎತ್ತಿಕೊಂಡು ಬಂದು ಇವರಿಗೆ ತೋರಿಸು." ನಾರಾಯಣ ಜೋಪಾನವಾಗಿ, ಎರಡೂ ಮಕ್ಕಳನ್ನ ಎತ್ತಿಕೊಂಡು ಬಂದು ತೋರಿದ.

"ತುಂಬಾ ಮುದ್ದಾಗಿವೆ." ಎನ್ನುತ್ತ ಮಕ್ಕಳ ಪುಟ್ಟ ಕೈಯೊಳಕ್ಕೆ ಒಂದೊಂದು ರೂಪಾಯಿಗಳ ನಾಣ್ಯವನ್ನ ಇಟ್ಟರು.

"ಇದೆಲ್ಲಾ ಏನು ಪ್ರಭುಗಳೇ..." ಶಾಸ್ತ್ರಿ ಸಂಕೋಚಗೊಂಡ.

"ಇದು ನಿಮಗಲ್ಲ, ಶಾಸ್ತ್ರಿಗಳೇ... ಈ ಮಕ್ಕಳ ಶ್ರೇಯಸ್ಸಿಗೆ. ಸೂರ್ಯ ಚಂದ್ರರ ಹಾಗೆ ಇವರ ಜೀವನ ಪ್ರಕಾಶಮಯವಾಗಲಿ" ಪ್ರಭುಗಳು ಹಾರೈಸಿದರು.

"ಏಳಿ ಪ್ರಭುಗಳೇ. ಕೈಕಾಲು ತೊಳ್ಕೊಳ್ಳಿ ಬಡಿಸಿದ್ದಾಗಿದೆ." ಎಲ್ಲರೂ ಊಟಕ್ಕೆ ಕುಳಿತರು. ನಾರಾಯಣ ಎಲ್ಲವನ್ನ ಪಾಂಗಿತವಾಗಿ ಬಡಿಸಿದ. ಕಡೆಯಲ್ಲಿ ಪಾಯಸದ ಬಟ್ಟಲುಗಳನ್ನ ತಂದಿತ್ತ. ಪಾಯಸದ ಊಟ ಮುಗಿಸಿ, ಕೈ ತೊಳೆದರು.

"ಪಾಯಸ ಬೇರೆ ಮಾಡಿಸಿದೀರಿ. ಅಡಿಗೆ ಎಲ್ಲಾ ತುಂಬಾ ಚೆನ್ನಾಗಿತ್ತು ತಾಯೀ... ನಿಮಗೆ ಹೊತ್ತಲ್ಲದ ಹೊತ್ತಿನಲ್ಲಿ ಬಂದು ತೊಂದರೆ ಕೊಟ್ಟೆವು."

"ತೊಂದರೆ ಏನ್ಬಂತು? ದೇವರಂತೆ ಅತಿಥಿಗಳಾಗಿ ಬಂದಿದೀರಿ... ನಮ್ಮ ಮನೆ ಪುನೀತವಾಯ್ತು." ತಲೆಯ ಮೇಲಿನ ಸೆರಗನ್ನ ಸರಿ ಪಡಿಸಿಕೊಂಡು ನುಡಿದಳು ಸಾತಕ್ಕ.

"ಅಂಥಾ ದೊಡ್ಡ ಮಾತುಗಳನ್ನಾಡ್ಬೇಡಿ... ತಾಯೀ... ನಮ್ಮ ನಿಮ್ಮ ವಿಶ್ವಾಸ ಹೀಗೆ ಮುಂದುವರೆಯಲಿ" ಎಲ್ಲರಿಗೂ ಕೈ ಮುಗಿದು, ಪ್ರಭು ತನ್ನ ಸಂಗಡಿಗರೊಂದಿಗೆ ಜೀಪನ್ನ ಹತ್ತಿದರು. ಅವರು ಅತ್ತ ಹೋದ ಕೂಡಲೇ ಇತ್ತ ಚರ್ಚೆ ಪ್ರಾರಂಭವಾಗಿತ್ತು.

"ಈ ಅವಕಾಶವನ್ನ ಕಳೆದುಕೊಳ್ಳಬೇಡ ಗುಂಡಣ್ಣ. ಆಲೆಮನೆಯನ್ನ ಮತ್ಯಾವಾಗ್ಲಾದ್ರೂ ಕಟ್ಟಿಸಿದರಾಯ್ತು. ಕಬ್ಬಿಗೆ ಬೆಲೆ ಚೆನ್ನಾಗಿ ಬಂದರೆ, ಸಾಲ ತೀರಿಸಿಬಹುದು."

"ನೀನೂ ಹೀಗೆ ಹೇಳ್ತಿಯಲ್ಲ ಸಾತು... ನಾನು ಈ ಬಾರಿ ಕಬ್ಬನ್ನ ಮಾರುಲ್ಲ."

"ಗಾಳಿ ಬಂದಾಗ ತೂರಿಕೋ ಅಂತ ಗಾದೆಯಿದೆ. ಅವರಾಗಿಯೇ ಮನೆ ಬಾಗಿಲಿಗೆ ಬಂದು ಕಬ್ಬನ್ನ ಕೊಂಡ್ಕೊಳ್ತೀವಿ ಅಂತ ಹೇಳುವಾಗ, ನೀನು ಕೇಳಿದಷ್ಟು ಬೆಲೆಯನ್ನ ಕೊಡ್ತಾರೆ. ವೆಂಕಟಾಚಲಯ್ಯನ ಹತ್ರ ಮಾತ್ನಾಡು. ಈ ಅವಕಾಶವನ್ನ ಕಳಕೋಬೇಡ."

"ಸರಿ ನೋಡೋಣ. ನಾನು ಯೋಚಿಸ್ಬೇಕು."

"ಯೋಚಿಸುಕ್ಕೆ ಏನಿದೆ? ಈ ಊರ್ನಲ್ಲೂ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದೆ ಅಂತಂದ್ರೆ, ನಮ್ಮ ಅದೃಷ್ಟದ ಬಾಗಿಲು ತೆಗೆಯಿತು ಅಂತಲೇ ಅರ್ಥ. ಪ್ರಭುಗಳು ಆಡಿದ್ದನ್ನೆಲ್ಲ ನಾನು ಕೇಳಿಸ್ಕೊಂಡಿದೀನಿ. ಈಗ ನೀನು ಮನಸ್ಸು ಮಾಡಿದರೆ ಜಾಣನಾಗ್ತೀಯ."

"ಯಾವ ವಿಷಯ ಹೇಳ್ತಿದೀಯ ಸಾತು?"

"ನಿನ್ನನ್ನ ಕೆಲಸಕ್ಕೆ ಕರೀತಿದ್ರಲ್ಲ... ಗೌರವವಾಗಿ ಸಂಬಳವೂ ಸಿಗುತ್ತೆ. ನಿನಗೆ ಹಣದ ಅವಶ್ಯಕತೆ, ಇದೆ. ಸಂಸಾರ ದೊಡ್ಡದಾಗ್ತಿದೆ..."

"ಹಾಗಂತ, ಆ ಪ್ರಭು ಹೇಳಿದ ಹಾಗೆ ಕೇಳುಕ್ಕೆ ಆಗಲ್ಲ. ನನಗೆ ಮತ್ತೆ ಹೋಗಿ ಸಿಕ್ಕಿ ಹಾಕ್ಕೊಳ್ಳೋಕೆ ಇಷ್ಟವಿಲ್ಲ."

"ಟ್ರೈನಿಂಗ್ ಕೊಡೋದು ಅಷ್ಟೇಯ ಅಂತ ಹೇಳಿದಾರಲ್ಲ ಭಾವ... ನೀವು ಕೇಳಿದಷ್ಟು ಸಂಬಳ ಕೊಡ್ತಾರೆ."

"ಬೇಡ ನಾರಾಯಣ. ನಿಂಗೆ ಗೊತ್ತಿಲ್ಲ. ಅಲ್ಲದೇ ಅದೇನು ಸುಲಭವಲ್ಲ. ಹತ್ತು ಮೈಲಿ ಹೋಗಬೇಕು. ಹತ್ತು ಮೈಲಿ ದೂರ ಬರಬೇಕು. ಷಿಫ್ಟ್‌ಗಳು ಇರುತ್ತವೆ. ಅದೇ ಓಡಾಟವಾಗಿ ಹೋದರೆ, ಇಲ್ಲಿಯ ಕೆಲಸಗಳನ್ನ ಯಾರು ನೋಡ್ಕೊಳ್ತಾರೆ?"

"ಸಧ್ಯಕ್ಕೆ ನಾನು ನೋಡ್ಕೊಳ್ತೀನಿ ಭಾವ. ಹೇಗೂ ನಂಗೆ ಕೆಲಸವಿಲ್ಲ."

"ನಿನಗೆ ಏನು ಅನುಭವ ಇದೆ? ಹೇಳು..."

"ನಿನಗೂ ಯಾವ ಅನುಭವ ಇರಲಿಲ್ಲ. ಕಂಠಿಯ ಮಾತನ್ನ ಕೇಳಿಕೊಂಡು ಇಲ್ಲಿಗೆ ಬಂದು ಸೇರಿಕೊಂಡೆ. ಈಗ ಅವನೇ ಹಳ್ಳಿಯನ್ನ ಬಿಟ್ಟು ಹೋದ. ನೀನೂ ಕೊಡವಿಕೊಂಡು ಹೊರಡು. ಈ ನೆವದಲ್ಲಿ ಈ ಹಳ್ಳಿಯಿಂದ ಬಿಡುಗಡೆಯಾದ್ರೂ

ಸಿಗುತ್ತೆ" ಸಾತಕ್ಕ ಒತ್ತಿ ಹೇಳಿದಳು. ಶಾಸ್ತ್ರಿ ಸಾವಿತ್ರಿಯನ್ನ ದಿಟ್ಟಿಸಿದ.

"ಸ್ವಲ್ಪ ಎಲ್ರೂ ಸುಮ್ಮನಿರ್ತೀರಾ? ನನಗೂ ಯೋಚನೆ ಮಾಡುಕ್ಕೆ ಬಿಡಿ" ಶಾಸ್ತ್ರಿ ಸ್ವಲ್ಪ ಸಿಟ್ಟಿನಿಂದ ಹೇಳಿದ್ದ. ಸಾತಕ್ಕನಿಂದ ವಿವರವಾಗಿ ವಿಷಯಗಳನ್ನ ತಿಳಿದು ಕೊಂಡ ಲಕ್ಷ್ಮಿ, 'ಇದು ಒಂದು ಸದವಕಾಶ, ಇಲ್ಲಿಂದ ಬಿಡುಗಡೆಯಾಗುವಂತಾಗಲಿ' ಎಂದು ದೇವರಲ್ಲಿ ಬೇಡಿದಳು.

ವೆಂಕಟಾಚಲಯ್ಯನನ್ನ ಸಲಹೆ ಕೇಳಿದ ಶಾಸ್ತ್ರಿ, ನಂಗೆ ದಿಕ್ಕು ತೋಚದಂತಾಗಿದೆ. ತಲೆಯೇ ಓಡ್ತಿಲ್ಲ ಎಂತಂದ.

"ತಲೆ ಓಡಬೇಕಾದ್ರೆ ತಂಬಾಕು ಬೇಕು. ತಗೊಳ್ಳಿ ಇದನ್ನ ಬಾಯಿಗೆ ತುಂಬ್ಕೊಳ್ಳಿ" ಶಾಸ್ತ್ರಿ ತಂಬಾಕನ್ನ ಹಾಕಿಕೊಂಡ. ವೆಂಕಟಾಚಲಯ್ಯ ಬೆನ್ನು ತಟ್ಟಿ ನಕ್ಕು ನುಡಿದ. "ನಿನ್ನ ಅನುಭವ ಇರೋದು, ಸಕ್ಕರೆ ತಯಾರಿಸುವುದರಲ್ಲಿ. ಅದರಿಂದ ನಾಲ್ಕು ಜನಕ್ಕೆ ಉಪಯೋಗವಾಗೋದಾದ್ರೆ ಅದನ್ನ ಕೈ ಬಿಡಬಾರದು. ಹಳ್ಳಿಯ ಜೀವನ ಇದ್ದದ್ದೇ ಇದರಿಂದ ಲಾಭಕ್ಕಿಂತ ನಷ್ಟವೇ ಜಾಸ್ತಿ. ಇಂಥದ್ದೆಲ್ಲಾ ಏನಿದ್ರೂ ನಮ್ಮಂಥ ವರಿಗೆ, ಬೇರೆ ಏನೂ ಗೊತ್ತಿಲ್ಲದವರಿಗೆ" ಎಂತಂದ. ಅಲ್ಲಿಗೆ, ಶಾಸ್ತ್ರಿ ಫ್ಯಾಕ್ಟರಿಯ ಕೆಲಸಕ್ಕೆ ಸೇರುವುದು ಎಂದು ತೀರ್ಮಾನವಾಗಿತ್ತು. ಮನೆಯವರಿಗೆ ಪಾಯಸದ ಊಟವನ್ನ ಮಾಡಿದಷ್ಟು ಖುಷಿಯಾಗಿತ್ತು.

"ಈ ಮಕ್ಕಳು ಹುಟ್ಟಿದ ಗಳಿಗೆ ಚೆನ್ನಾಗಿದೆ. ಇಲ್ಲಿಂದ ಬಿಡುಗಡೆ ಆಗುವ ದಾರಿ ಕಾಣ್ತಾ ಇದೆ. ಈ ಮಕ್ಕಳು ಹುಟ್ಟದಿರುವಂತೆ ಔಷಧಿ ತಗೊಳ್ಳುವ ದುರ್ಬುದ್ಧಿ ನನಗೆ ಯಾಕೆ ಬಂದಿತ್ತೋ..." ಲಕ್ಷ್ಮಿ ಪೇಚಾಡಿದಳು.

"ಸಧ್ಯ, ಹೊನ್ನಿತ್ತಿ ಒಳ್ಳೆಯವಳಾಗಿದ್ದಕ್ಕೆ ಸರಿ ಹೋಯ್ತು. ಅವಳಿಗೆ ಸೀರೆ ಕೊಟ್ಬಾಯ್ತು? ಈ ಸಾರಿ ಬಂದಾಗ ಕೊಟ್ಟು ಬಿಡು..." ಸಾತಕ್ಕ ಹೇಳಿದಳು.

* * *

ಪಾಂಡುರಂಗ ಪ್ರಭು ಮತ್ತೆ ಬಂದರು. ಶಾಸ್ತ್ರಿ ಅವರಿಗೆ ತನ್ನ ನಿರ್ಧಾರವನ್ನ ತಿಳಿಸಿದ. ಅವರು ಕೈ ಕುಲಕಿದರು. "ನಂಗೆ ಗೊತ್ತಿತ್ತು ನೀವು ನಿರಾಸೆ ಮಾಡುವುದಿಲ್ಲ ಅಂತ. ಬನ್ನಿ ಇವತ್ತೇ ನಿಮ್ಮನ್ನ ಕರ್‍ಕೊಂಡು ಹೋಗಿ, ನಮ್ಮ ಜನರಲ್ ಮ್ಯಾನೇಜರ್‌ಗೆ ಪರಿಚಯ ಮಾಡಿಸ್ತೀನಿ."

"ಬರ್ತೀನಿ ಹಾಗೇ ಇನ್ನೊಂದ್ಮಾತು. ನನ್ನ ಭಾಮೈದ ಇಂಟರ್‌ಮೀಡಿಯಟ್ ಪಾಸುಮಾಡಿಕೊಂಡಿದಾನೆ. ಟೈಪಿಂಗ್, ಷಾರ್ಟ್‌ಹ್ಯಾಂಡ್ ಪಾಸು ಮಾಡಿಕೊಂಡಿದಾನೆ. ಅವನಿಗೆ ನಿಮ್ಮ ಕಂಪೆನೀಲಿ ಏನಾದರೂ ಕೆಲಸ ಕೊಡಿಸಿದರೇ... ಅವನಿಗೆ ಅನುಕೂಲ ವಾಗುತ್ತೆ."

"ಖಂಡಿತಾ... ಆಫೀಸಿನ ಕೆಲಸಕ್ಕೆ ಜನ ಬೇಕಾಗಿದ್ದಾರೆ. ಮೊದಲು ನಮ್ಮ

ಪ್ರಾಂತ್ಯದವರಿಗೆ ಆದ್ಯತೆ... ಅವರೂ ನಮ್ಮ ಜೊತೆಗೆ ಬರಲಿ."

ತಿಂಡಿ ಕಾಫಿಯ ನಂತರ, ಎಲ್ಲರೂ ಜೀಪನ್ನ ಹತ್ತಿದರು. ಸಾತಕ್ಕ ನಿರಾಳವಾದ ಉಸಿರನ್ನ ಬಿಟ್ಟಳು. "ಅಂತೂ ನಿಮ್ಮ ತಮ್ಮನಿಗೆ, ದೇವರು ಒಳ್ಳೆಯ ಬುದ್ಧಿಯನ್ನ ಕೊಟ್ಟ..." ಲಕ್ಷ್ಮಿ ಉಸುರಿದಳು.

"ಹೌದು, ಎಲ್ಲಾದಕ್ಕೂ ಕಾಲ ಕೂಡಿ ಬರಬೇಕು. ಶನಿಕಾಟ ಮುಗಿಯುವ ಹಂತದಲ್ಲಿದೆ ಅಂತ ಕಾಣುತ್ತೆ... ಏಳರಾಟ ಶನಿ ಹೀಗೇ ಆಟ ಆಡಿಸೋದು."

ತರೀಕೆರೆಗೆ ಮದುವೆಗೆ ಬಂದಿದ್ದ, ಶಾಂತಾ ಹಾಗೂ ಗೋಪಾಲ ಬಂದಿಳಿದಾಗ ವೈಕುಂಠ, ಒಳಗೆ ಓಡಿ ಬಂದ. "ಅವ್ವಾವ್ರೇ... ಸಾಂತವ್ವಾರೂ ಅವರ ಯಜಮಾನ್ರೂ ಬಂದ್ರು." ಸಾತಕ್ಕ ಹೊರಬಾಗಿಲಿಗೆ ಬಂದಳು. ಸಂತಸದಿಂದ ಸ್ವಾಗತಿಸಿದಳು.

"ಹೇಗಿದೀರಿ ಅತ್ತೆ..." ಶಾಂತ ಹತ್ತಿರಕ್ಕೆ ಬಂದು ನಿಂತಳು.

"ಶಾಂತಾ... ಬರ್ತೀನಿ ಅಂತ ಕಾಗ್ದ ಹಾಕ್ಬಾರ್ದಾಗಿತ್ತೇನೆ? ಏನಪ್ಪಾ ಗೋಪಿ ಈಗ ಚಿಕ್ಕಮ್ಮನ ನೆನಪಾಯ್ತಾ ನಿನಗೆ?" ಇಬ್ಬರೂ ಒಳಬಂದರು.

"ತರೀಕೆರೆಗೆ, ಅತ್ತೆ ಮಗನ ಮದುವೆಗೆ ಭಂದಿದ್ವು.. ಎಲ್ರೂ ಬಂದಿದಾರೆ. ಅವರೆಲ್ಲಾ 'ಜೋಗ್‌ಫಾಲ್ಸ್' ನೋಡೋಕೆ ಹೋದ್ರು... ನಾವಿಬ್ರೂ ಇಲ್ಲಿಗೆ ಬಂದೆವು."

"ಹಾಗಾದ್ರೆ, ಅವರ್‍ಯಾರೂ ಬರುಲ್ವೇ... ಯಾರ್‍ಯಾರು ಬಂದಿದೀರಿ.?"

"ನಾವು ಅಣ್ಣ ತಮ್ಮಂದಿರು, ಅಕ್ಕಂದಿರು ಭಾವ ಎಲ್ಲಾ ಬಂದಿದೀವಿ. ಇಲ್ಲಿಗೂ ಬರ್ತಾರೆ ಚಿಕ್ಕಮ್ಮ... ಮಾವ ಇಲ್ವಾ?"

"ಮಾವ ಮನೇಲಿಲ್ಲ. ಕೈ ಕಾಲು ತೊಳ್ಕೊಳ್ಳಿ, ಕಾಫಿ ತಿಂಡಿ ಕೊಡ್ತೀನಿ."

"ಅತ್ತೇ ಮೊದಲು ಅಮ್ಮನ್ನ ಮಾತಾಡ್ಸಿಕೊಂಡು ಪಾಪೂನ, ಪುಟ್ಟೀನ ನೋಡಿಕೊಂಡು ಬರ್ತೀನಿ." ಶಾಂತ ಅತ್ತ ಹೊರಟಳು.

"ಪಾಪು, ಪುಟ್ಟಿ ಅಂತ ಏನೇನೋ ಕರೆದ್ರೆ ಅದೇ ಹೆಸರು ಗಟ್ಟಿಯಾಗಿ ಬಿಡುತ್ತೆ. ರವಿ, ಶಶಿ ಅಂತ ಹೆಸರಿನಿಂದ ಕರೀತೀವಿ."

"ಹೆಸರು ತುಂಬಾ ಚೆನ್ನಾಗಿದೆ ಅತ್ತೆ... ನಿಮ್ಮದೇ ತಾನೇ ಆಯ್ಕೆ?"

"ಅಲ್ಲ, ಗುಂಡಣ್ಣನ ಸ್ನೇಹಿತರೊಬ್ಬರು ಬಂದಿದ್ರು. ಅವರು, ಮಕ್ಕಳು ಸೂರ್ಯ ಚಂದ್ರರಿದ್ದ ಹಾಗಿದಾರೆ ಅಂತಂದ್ರು.... ಮಕ್ಕಳ ಭವಿಷ್ಯ ಹಾಗೇ ಉಜ್ವಲವಾಗಿರಲಿ ಅಂತ ಹಾಗೇ ಕರೆಯಲು ಶುರು ಮಾಡಿದೆವು. ಈಗ ನಿಮ್ಮಣ್ಣ ಸಕ್ಕರೆ ಕಾರ್ಖಾನೆಯಲ್ಲಿ ಕೆಮಿಸ್ಟ್ ಆಗಿ ಸೇರಿಕೊಂಡಿದಾನೆ..."

"ಹೌದಾ ಅತ್ತೇ... ನಮಗೆ ಗೊತ್ತೇ ಇರಲಿಲ್ಲ. ಎಲ್ಲಿದೆ ಫ್ಯಾಕ್ಟರಿ?"

"ಇಲ್ಲೇ ಸಮೀಪದಲ್ಲಿದೆ. ಹೋಗಿ ನೋಡ್ಕೊಂಡು ಬರೋರಂತೆ. ಇರ್ತೀರಲ್ಲ."

"ಇಲ್ಲ ಚಿಕ್ಕಮ್ಮ, ಶಾಂತ ಬೇಕಾದ್ರೆ ಇರಲಿ. ಆದರೆ ನಾವುಗಳೆಲ್ಲರೂ ನಾಳೆ

ಬೆಳಗಿನ ರೈಲಿಗೆ ಹೊರಟು ಬಿಡ್ತೀವಿ."

"ಏನೋ ಗೋಪಿ? ಅವರುಗಳ್ಯಾರೂ ಬಂದೇ ಇಲ್ಲ. ಹೊರಡುವ ಮಾತನ್ನಾಡ್ತೀಯಲ್ಲ... ಒಂದೆರಡು ದಿನ ಇದ್ದು ಮಾವನ ಗದ್ದೆ ತೋಟ, ನೋಡೋರಂತೆ. ಯಾವುದನ್ನ ನೋಡೇ ಇಲ್ವಲ್ಲಾ ನೀವು..."

"ಇಲ್ಲ ಚಿಕ್ಕಮ್ಮ. ಯಾರಿಗೂ ರಜ ಇಲ್ಲ. ಹೆಣ್ಣಿನ ಮನೆಯ ಕಡೆಯವರಲ್ಲಿ ಕೆಲವರು ಬಸ್ಸು ಮಾಡಿಕೊಂಡು ಜೋಗ್‌ಫಾಲ್ಸ್‌ಗೆ ಅಂತ ಹೊರಟಿದ್ದರು. ಬಸ್‌ನಲ್ಲಿ ಬೇಕಾದಷ್ಟು ಜಾಗ ಇತ್ತು. ಎಲ್ಲರೂ ಹೊರಟರು. ನಾವಿಬ್ರೂ ಇನ್ಯಾವಗ್ಲಾದ್ರೂ ನೋಡಿದ್ರಾಯ್ತು ಅಂತ ಇಲ್ಲಿಗೆ ಬಂದೆವು. ಶಾಂತಂಗೆ, ತಮ್ಮನ್ನ, ತಂಗೀನ ನೋಡಬೇಕು ಅಂತ ಹಂಬಲ...."

"ಅದು ಸಹಜವೇ... ಅವರೆಲ್ಲಾ ಎಷ್ಟು ಹೊತ್ತಿಗೆ ಬರಬಹುದು?"

"ಸಾಯಂಕಾಲಕ್ಕೆ ಮುಂಚೆಯೇ ಬರಬಹುದು. ಹೆಣ್ಣಿನ ಕಡೆಯವರು ಕೆಲವರು, ಇವತ್ತಿನ ರಾತ್ರಿಯ ರೈಲಿಗೆ ಬೆಂಗಳೂರಿಗೆ ಹೊರಟಿದಾರೆ. ನಾವೆಲ್ಲಾ ಈ ರಾತ್ರಿ ಇಲ್ಲಿದ್ದು ನಾಳೆ ಬೆಳಗಿನ ರೈಲಿಗೆ ಹೊರಟು ಬಿಡ್ತೀವಿ."

"ಇದನ್ನ ಹೇಳಕ್ಕೆ ಇಷ್ಟು ದೂರ ಬರಬೇಕಾಗಿತ್ತಾ?"

"ಇಲ್ಲ ಅತ್ತೆ ಇವರೆಲ್ಲಾ ಯಾಕೆ ಬಂದಿದಾರೆ ಗೊತ್ತಾ?... ಹೇಳ್ಲಾ?" ಶಾಂತಾ ಗಂಡನ ಕಡೆ ನೋಡಿ ನಕ್ಕಳು. ಅವನು ತಲೆಯಾಡಿಸಿದ. "ನಿಮ್ಮ ಕೈ ತುತ್ತಿನ ಊಟ ಮಾಡ್ಬೇಕಂತೆ. ಭಾವ ಹೇಳ್ತಿದ್ರು. "ಶಾಂತಳ ಮಾತಿಗೆ ಸಾತಕ್ಕ ಹಗುರವಾಗಿ ನಕ್ಕಳು.

"ಹೂಂ. ಚಿಕ್ಕಮ್ಮ. ಚಂದ್ರು, ಅತ್ತಿಗೆ ಜೊತೆ ಹೇಳ್ತಿದ್ದ... ಚಿಕ್ಕಮ್ಮನ ಕೈತುತ್ತಿನ ಊಟ ಮಾಡಿ ಎಷ್ಟೋ ವರ್ಷಗಳಾಗಿ ಹೋಯ್ತು. ಈ ಸಾರಿ ಅದಕ್ಕೋಸ್ಕರನಾದ್ರೂ ಚಿಕ್ಕಮ್ಮನ್ನ ನೋಡೋಕೆ ಹೋಗ್ಬೇಕು ಅಂತ."

"ತಡೀ ಬರಲಿ ಅವನನ್ನ ತರಾಟೆಗೆ ತಗೋತೀನಿ." ಹುಸಿ ಕೋಪದಿಂದ ನುಡಿದಳು.

"ಅವನೊಬ್ಬನೇ ಅಲ್ಲ, ಕಿಟ್ಟಿ, ಮಾಲಕ್ಷ್ಮಿ ಸುಶೀಲ ನಾಗವೇಣಿ ಎಲ್ಲರೂ ನಿಮ್ಮ ಕೈಯ ಅಡಿಗೆಯ ರುಚಿ ನೋಡಕ್ಕೆ ಅಂತ್ಲೇ ಬರ್ತಾ ಇರೋದು. ರಾತ್ರಿಗೆ ಏನು ಅಡಿಗೆ ಮಾಡ್ತೀರಿ ಚಿಕ್ಕಮ್ಮ?" ಗೋಪಾಲನೂ ಆಸೆಯಿಂದ ಕೇಳಿದ.

"ನಿಮಗೆಲ್ಲ ಏನು ಇಷ್ಟವೋ ಅದನ್ನೇ ಮಾಡ್ತೀನಿ. ಏನ್ಮಾಡ್ಲಿ ನೀನೇ ಹೇಳು. ಶಾಂತ ನೀನು ಹೇಳು. ಈಗ ನೀನೂ ಅಪರೂಪವೇ..."

"ಅತ್ತೆ... ಈರುಳ್ಳಿ ಆಲೂಗಡ್ಡೆ ಹುಳಿ ಮಾಡಿಬಿಡಿ. ಮೊಸರನ್ನವನ್ನ ಕಲಿಸಿಬಿಡಿ. ಸಂಡಿಗೆ ಹಪ್ಪಳ ಕರಿದು ಬಿಡಿ... ಕುಡಿಯೋಕೆ ಗಸಗಸೆ ಪಾಯಸವನ್ನ ಮಾಡಿಬಿಡಿ

ಇಷ್ಟು ಸಾಕು."

"ಏನೇ ಶಾಂತಾ... ಇಷ್ಟೆಲ್ಲಾ ಬೇಕಾ? ಜಾಸ್ತಿ ಆಯ್ತಲ್ಲೇ...?" ಗೋಪಾಲ ಹೇಳಿದ.

"ಇರಲಿ ಬಿಡು ಗೋಪಿ. ಜಾಸ್ತಿ ಏನಲ್ಲ...."

"ಅತ್ತೆ ನಾನು ಸಹಾಯ ಮಾಡ್ತೀನಿ. ನೀವು ಚಿಂತಿಸ್ಬೇಡಿ. ಹೇಗೂ ರಾತ್ರಿ ನೀವು ಊಟ ಮಾಡಲ್ವಲ್ಲಾ....?"

"ಸರಿ ಮಾಡೂವಂತೆ. ನೀನು ಎಷ್ಟರ ಮಟ್ಟಿಗೆ ಕೆಲಸ ಮಾಡೂದನ್ನ ಕಲಿತಿದೀ ಯಾಂತ ನಂಗೂ ತಿಳಿಯತ್ತೆ... ಸಾತಕ್ಕ ನುಡಿದಳು. ನೀವುಗಳು ಬರ್ತೀರಿ ಅಂತ ಮುಂಚೇನೇ ಗೊತ್ತಾಗಿದ್ದಿದ್ರೆ, ಈರುಳ್ಳಿ ಆಲೂಗಡ್ಡೇನ ತರಿಸ್ತಿದ್ದೆ. ಇಲ್ಲಿ ಸಿಗಲ್ಲ. ನಮ್ಮ ತೋಟದಲ್ಲೇ ಬೆಳೆದ ತರಕಾರಿಗಳು ಇವೆ. ಮೂರು ನಾಲ್ಕು ಬಗೆಯ ತರಕಾರಿಗಳನ್ನ ಹಾಕಿ, ಕಡಲೆಕಾಯಿ ಬೀಜವನ್ನ ಹುರಿದು ಹಾಕಿ ಕೂಟು ಮಾಡಿ ಬಿಡ್ತೀನಿ. ಇನ್ನೆಂದಾದ್ರೂ ಆಲೂಗಡ್ಡೆ ಈರುಳ್ಳಿಯ ಹುಳೀನ ಮಾಡ್ತೀನಿ." ಶಾಂತ ಒಪ್ಪಿದಳು.

"ವೈಕುಂಠ, ತೋಟಕ್ಕೆ ಹೋಗಿ ಒಂದಿಷ್ಟು ತರಕಾರಿಗಳನ್ನ ಕುಯ್ಕೊಂಡು ಬಾ. ಹಾಗೇ ಬಾಳೆ ಎಲೆಗಳನ್ನ ತಗೊಂಡ್ಬಾ. ಮರೀಬೇಡ."

"ಆಯ್ತು ಅವ್ವಾರೆ... ಅವನು ಹೊರಟ. ಚಿಕ್ಕಮ್ಮ, ನಾನೂ ಇವನ ಜತೇಲಿ ಹೋಗ್ತೀನಿ. ಮಾವನ ತರಕಾರಿ ತೋಟವನ್ನ ನೋಡಿದ ಹಾಗಾಗುತ್ತೆ."

"ಜ್ವಾಪಾನ ಕಣೋ ಗೋಪಿ. ಹಳ್ಳಿಯ ರಸ್ತೆ, ನೋಡ್ಕೊಂಡು ನಡೀ..." ಸಾತಕ್ಕ ಎಚ್ಚರಿಕೆ ನೀಡಿದಳು. ಶಾಂತ ಅತ್ತೆಯೊಡನೆ ಮಾತಿಗೆ ಕುಳಿತಳು. ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಶಾಸ್ತ್ರಿ ಮನೆಗೆ ಬಂದ. ಗೇಟಿನ ಬಳಿ, ಸೈಕಲ್ಲಿನಿಂದ ಇಳಿದು ಯಾರು ಬಂದಿರಬಹುದು ನಮ್ಮ ಮನೆಗೆ, ಎಂದುಕೊಂಡು, ಅನುಮಾನದಿಂದ ಒಳಬಂದ.

"ಮಾವ ಬಂದ್ರು... ಮಾವ ಬಂದ್ರು..." ಚಂದ್ರು ಎದ್ದು ಬಂದ. ಹೇಗಿದೀರಿ ಮಾವ!" ವಿಶ್ವಾಸದಿಂದ ಕೇಳಿದ. ಶಾಸ್ತ್ರಿ ಸುತ್ತಲೂ ನೋಡಿದ. ಚಾಪೆಯ ಮೇಲೆ, ಗೋಡೆಗೆ ಒರಗಿ ಆಯಾಸವನ್ನ ಪರಿಹರಿಸಿಕೊಳ್ಳುತ್ತ, ಮಲಗಿದ್ದವರು, ಕುಳಿತಿದ್ದವರು ಎದ್ದು ಸರಿಯಗಿ ಕುಳಿತರು.

"ಏನು? ಸುಂದರಿ ಮನೆ ಪಟಾಲಂ ಎಲ್ಲಾ ಇಲ್ಲೇ ಇದ್ದ ಹಾಗಿದೆ. ಭಾವ ಬರ್ಲಿಲ್ವಾ?" ಶಾಸ್ತ್ರಿ ಕೇಳಿದ.

"ಇಲ್ಲ ಮಾವ. ಅಣ್ಣಯ್ಯ ಬರ್ಲಿಲ್ಲ... ನೀವು ಮತ್ತೆ ಕೆಲಸಕ್ಕೆ ಸೇರಿಕೊಂಡಿದೀ ರಂತೆ. ಚಿಕ್ಕಮ್ಮ ಹೇಳಿದ್ರು, ಒಳ್ಳೆ ಕೆಲಸ ಮಾಡಿದ್ರಿ."

"ಸಾತು ಆಗ್ಲೇ ಎಲ್ಲಾ ವರದಿ ಒಪ್ಪಿಸಿದ್ಲಾ?... ಎಲ್ಲಿಂದ ಬರ್ತಿದೀರಿ? ಈಗ ಯಾವ ರೈಲೂ ಇಲ್ಲವಲ್ಲ.

"ತರೀಕೆರೆಯಿಂದ ಬಸ್ನಲ್ಲಿ ಎಲ್ರೂ 'ಜೋಗ್‌ಫಾಲ್ಸ್' ನೋಡೋಕೆ ಹೋಗಿದ್ವಿ ಈಗ ಸ್ವಲ್ಪ ಹೊತ್ತು ಆಯ್ತು. ವಾಪಸ್ಸು ಬಂದು...."

"ಹೇಳಿದ್ದಿದ್ರೆ, ವೈಕುಂಠ ಗಾಡೀನ ತಗೊಂಡು ಬರ್ತೀದ್ದ... ನಡೆದುಕೊಂಡು ಬಂದ್ರೇನೋ..."

"ಇಲ್ಲ ಮಾವ. ಪ್ರೈವೇಟ್ ಬಸ್ಸು. ಮದುವೆ ಮನೆಯೆಂದ್ದು ಇಲ್ಲೀ ತನಕ ಬಿಟ್ಟು ಹೋದ್ರು..." ಶಾಸ್ತ್ರಿ ಕೈಕಾಲು ತೊಳೆದು ಬಂದು ಎಲ್ಲರೊಡನೆ ಕುಳಿತ.

"ಸಾತು, ವಿಶೇಷವಾಗಿ ಅಡಿಗೆ ಮಾಡುತ್ತಿರುವ ಹಾಗಿದೆ. ಮನೆಯೆಲ್ಲಾ ವಾಸನೆ ತುಂಬಿಕೊಂಡಿದೆ. ಅಕ್ಕನ ಮಕ್ಕಳು ಅಂತಂದ್ರೆ ಎಷ್ಟು ಅಕ್ಕರೆ ಅವಳಿಗೆ..."

"ಸ್ಪೆಷಲ್ ಊಟಕ್ಕೋಸ್ಕರವೇ ನಾವು ಇಲ್ಲಿಗೆ ಬಂದಿದೀವಿ ಮಾವ. ಇವತ್ತು ಚಿಕ್ಕಮ್ಮನ ಕೈ ತುತ್ತಿನ ಊಟ..." ಚಂದ್ರು ಹೇಳಿದ.

"ಬೆಳದಿಂಗಳೇ ಇಲ್ಲವಲ್ಲೋ ಚಂದ್ರು... ಇಲ್ಲೋ ವಿದ್ಯುಚ್ಛಕ್ತಿಯೂ ಇಲ್ಲ... ಕತ್ತಲೇಲಿ ಎಂಥಾ ಕೈ ತುತ್ತಿನ ಊಟ?" ಶಾಸ್ತ್ರಿ ವಿಷಾದದಿಂದ ಹೇಳಿದ.

"ಅಣ್ಣಾ, ಅತ್ತೆ ವೈಕುಂಠಂಗೆ ಹೇಳಿ ಪೆಟ್ರೋಮ್ಯಾಕ್ಸ್ ದೀಪಗಳನ್ನ ತರಿಸಿದಾರೆ. ವೈಕುಂಠ ಹಿತ್ತಲನ್ನ ಚೆನ್ನಾಗಿ ಗುಡಿಸಿ, ನೀರು ಚುಮುಕಿಸಿದಾನೆ. ತುಳಸೀ ಕಟ್ಟೆಯ ಹತ್ತಿರ ನಾನು ರಂಗೋಲಿ ಹಾಕಿದೀನಿ." ಶಾಸ್ತ್ರಿ ಎದ್ದು ಹೋಗಿ ಹಿತ್ತಲನ್ನ ಒಂದು ಸಾರಿ ಅವಲೋಕಿಸಿ ಬಂದ.

"ಒಂದೆರಡು ಜಮಖಾನಗಳನ್ನ ಹಾಸಿ ಬಿಡಿ. ನೆಲ ತಣ್ಣಗಿರುತ್ತೆ."

"ಎಲ್ರೂ ಕೈ ಕಾಲು ತೊಳ್ಕೊಂಡು, ತಲೆ ಬಾಚ್ಕೊಂಡು ಹೂ ಮುಡ್ಕೊಳ್ಳಿ..."

"ಅಯ್ಯೋ ಇನ್ನೂ ಸುಸ್ತು ಚಿಕ್ಕಮ್ಮ. ತಿರುಗಾಡಿ ಆಯಾಸ ಆಗಿದೆ."

"ಆಯಾಸ ಆಗ್ದೇ ಇರುತ್ತಾ? ತಣ್ಣೀರ್ನಲ್ಲಿ ಮುಖ ತೊಳೆದ್ರೆ ಆಯಾಸ ಪರಿಹಾರ ಆಗುತ್ತೆ. ಇಲ್ಲೇ ಹತ್ತಿರದಲ್ಲಿ ಒಂದು ಈಶ್ವರನ ದೇವಸ್ಥಾನವಿದೆ. ಕತ್ತಲಾಗೋದ್ರೊಳಗೆ ಹೋಗ್ಬಿಟ್ಟು ಬನ್ನಿ. ಅಷ್ಟರಲ್ಲಿ ನನ್ನ ಅಡಿಗೆ ಮುಗಿದಿರುತ್ತೆ."

"ಚಿಕ್ಕಮ್ಮಂಗೆ ನಮ್ಮ ಮಾತ್ನಿಂದ ತೊಂದರೆ ಆಗ್ತಿದೆ. ಅದಕ್ಕೇ ಹೊರಕ್ಕೆ ಕಳಿಸ್ತಿದಾರೆ. ನಡೀರಿ ಹೋಗ್ಬರೋಣ... ನಮಗೆ ರಸ್ತೆ ಗೊತ್ತಿಲ್ವಲ್ಲ ಚಿಕ್ಕಮ್ಮ."

'ಇದೇನು ಐಗಂಚಿ ಪಟ್ಟಣವೇ? ಸೀದಾ ಹೋದ್ಮೇಲೆ ಎಡಕ್ಕೆ ತಿರುಗಿಕೊಂಡ್ರೆ ದೇವಸ್ಥಾನ.. ಬಲಕ್ಕೆ ತಿರುಗಿದರೆ ರೈಲ್ವೇ ಸ್ಟೇಷನ್ನು... ಅಲ್ಲಿ ನಮ್ಮ ಪಕ್ಕದ ಮನೆಯವರು ಹೂವಿನ ತೋಟವನ್ನ ಬೆಳೆಸಿದಾರೆ. ಬಗೆ ಬಗೆಯ ಹೂವುಗಳಿವೆ. ಹೋಗಿ ನೋಡ್ಕೊಂಡು ಬನ್ನಿ. ಬೇಕಾದ್ರೆ ವೈಕುಂಠನ್ನ ಕರ್ಕೊಂಡು ಹೋಗಿ."

"ನೀವು ದೇವಸ್ಥಾನಕ್ಕೆ ಹೋಗ್ತಾ ಇರ್ತೀರಾ ಚಿಕ್ಕಮ್ಮಾ..."

"ಇಲ್ಲ, ನಂಗೆ ಮನೇಲಿರುವ ದೇವರುಗಳೇ ಸಾಕು. ಹೊರಗೆ ಹೋದರೆ, ಮನೆಗೆ ಬಂದು ಮಡಿ ಉಟ್ಕೋ ಬೇಕು. ಅದೆಲ್ಲಾ ಸರಿ ಹೋಗಲ್ಲ."

"ಹೌದು. ಅತ್ತೆಗೆ, ನಾಯಿ ಎದುರಾದರೆ, ಹಂದಿ ಅಡ್ಡ ಬಂದರೆ, ಚಪ್ಪಲಿ ಹೊಲಿಯುವವನು ಪಕ್ಕಕ್ಕೆ ಬಂದರೆ ಮೈಲಿಗೆ ಆಯ್ತು ಅಂತ ಅನುಮಾನ ಹುಟ್ಟಿಕೊಳ್ಳತ್ತೇ ಅದಕ್ಕೇ ಮನೇನ ಬಿಟ್ಟು ಹೋಗಲ್ಲ." ಶಾಂತ ನಗುತ್ತ ನುಡಿದಳು.

"ಮನೇಲೇ 'ಪಂಚಗವ್ಯ' ಸಿಗುತ್ತಲ್ಲ ತಗೊಂಡ್ರಾಯ್ತು." ಎಲ್ಲರೂ ನಕ್ಕರು.

"ನಿಮಗೆಲ್ಲಾ ಚಿಕ್ಕಮ್ಮನ್ನ ಕಂಡ್ರೆ ತಮಾಷೆ. ನಂಗೆ ಸಿಟ್ಟು ಬಂದರೆ ಕೈತುತ್ತನ್ನ ಹಾಕಲ್ಲ ಅಷ್ಟೇ..!"

"ಹಾಗ್ಮಾಡ್ಬೇಡಿ ಚಿಕ್ಕಮ್ಮ. ನಿಮ್ಮ ಕೈತುತ್ತಿನ ಊಟಕ್ಕೆ ನಾವು ಬಂದಿರೋದು." ಎನ್ನುತ್ತ ಒಬ್ಬೊಬ್ಬರಾಗಿ ಎದ್ದರು. ವೈಕುಂಠನೂ ಜತೆಗಿದ್ದುದರಿಂದ, ಟಾರ್ಚನ್ನೂ ಹಿಡಿದು, ಕೆರೆಯ ಸುತ್ತ ತಿರುಗಾಡಿ ಕಡೆಗೆ ರೈಲ್ವೇ ಸ್ಟೇಷನ್‌ಗೆ ಬಂದರು. ತಾಳಗುಪ್ಪದಿಂದ ಬಂದ ರೈಲು ನಿಂತಿತು.

"ಈ ರೈಲು ನಿಂತೇ ಇದೆಯಲ್ಲ. ತುಂಬಾ ಹೊತ್ತು ನಿಲ್ಲಲ್ಲ ಅಂತಂದ್ರು."

"ಸೀಮೊಗ್ಗಾ ಪ್ಯಾಟೆಯಿಂದ ರೈಲು ಒಂಟೈತೆ. ಅದು ಬರಾಗುಂಟ ಇದು ಓಗಾಂಗಿಲ್ಲ." ವೈಕುಂಠ ವಿಶ್ಲೇಷಣೆ ನೀಡಿದ. ಇದೊಂದೇ ಅಳಿ ಸೋಮೊಗ್ಗಾಗುಂಟ, ಇಲ್ಲಿ ಮಾತ್ರ ಎರಡೈತೆ." ಎಲ್ಲರೂ ಅರ್ಥವಾದವರಂತೆ ತಲೆಯಾಡಿಸಿದರು. "ಕೂ...." ಎಂದು ಸೀಟಿ ಊದುತ್ತಾ... ಚುಕ್ ಚುಕ್ ಎಂದು ಸದ್ದು ಮಾಡುತ್ತಾ, ಶಿವಮೊಗ್ಗದಿಂದ ಬಂದ ರೈಲು ಸ್ಟೇಷನ್‌ನಲ್ಲಿ ನಿಂತಿತು. ಇಳಿಯುವವರು ಬೇಗ ಬೇಗ ಇಳಿದರು. ಲಲಿತ, ಪದ್ಮಿನಿ ರಾಗಿಣಿಯವರು, ವೈಕುಂಠನ ಬಳಿಗೆ ವೇಗವಾಗಿ ಬಂದರು. ನಾರಾಯಣ ಅವರನ್ನ ಸೇರಿಕೊಂಡ. ಇದುವರೆಗೂ ನಿಂತಿದ್ದ ರೈಲು ಹೊರಟಿತ್ತು.

"ಯಾಕೋ ವೈಕುಂಠ, ಸ್ಟೇಷನ್‌ಗೆ ಯಾಕೆ ಬಂದಿದೀಯ... ಗಾಡಿ ತಂದಿದೀಯ ಲಲಿತ ಕೇಳಿದಳು. ನಾರಾಯಣನೂ ಆತಂಕಗೊಂಡಿದ್ದ.

"ಇಲ್ಲ ಅವ್ವಾರೇ... ನಿಮ್ಮನೀಗೆ ನೆಂಟ್ರು ಬಂದವ್ರೆ... ಆಗಾ ಅಲ್ನೋಡಿ.... ಸಾಂತವ್ವಾರೂ ಬಂದಿದಾರೆ.... ಮನೆಗಿದಾರೆ." ಲಲಿತ ಅವರುಗಳನ್ನು ಗುರುತಿಸಿದಳು. ಅವರು ಕೇಳಿದಷ್ಟಕ್ಕೇ ಉತ್ತರ ಹೇಳಿದಳು. ಎಲ್ಲರೂ ಮನೆಗೆ ಬಂದರು.

* * *

ರಸ್ತೆಯಿಂದ ಮನೆ ಕಡೆಗೆ ತಿರುಗುತ್ತಿದ್ದಂತೆಯೇ ಅಡಿಗೆಯ ಘಮಘಮ ವಾಸನೆ ಎಲ್ಲರ ಮೂಗಿಗೆ ಬಡಿಯಿತು. ಹಸಿವಾಗಿದೆಯೆಂದೆನಿಸಿತು. ತಮ್ಮ ತಮ್ಮಲ್ಲೇ ಮಾತನ್ನಾಡಿಕೊಳ್ಳುತ್ತ ಒಳ ಬಂದರು. ನಾರಾಯಣ ಕಡೆಯಲ್ಲಿ ಒಳಬಂದ.

"ಗಂಟೆ ಎಂಟಾಯ್ತು. ನಮ್ಮ ಮನೆ ಮಕ್ಕಳೂ ಬಂದಾಯ್ತು. ಮೊದಲು ಚಿಕ್ಕ ಮಕ್ಕಳಿಗೆ ತಟ್ಟೆ ಹಾಕಿ ಬಡಿಸಿ ಬಿಡೋಣ. ತೂಕಡಿಸ್ತಾ ಇವೆ..." ಎಲ್ಲರೂ ಕೈ ಕಾಲು ತೊಳೆದು ಬೇಗ ಬೇಗ ಬನ್ನಿ" ಸಾತಕ್ಕ ಎಲ್ಲರನ್ನ ಎಬ್ಬಿಸಿದಳು.

"ಅತ್ತೆ... ನಾನೂ ಶಾಂತನ ಜೊತೆ ಕೂತು, ಕೈ ತುತ್ತು ಹಾಕಿಸ್ಕೊಳ್ತೀನಿ" ಪದ್ಮಿನಿ ತನ್ನ ಆಸೆಯನ್ನ ಹೊರಗೆಡವಿದಳು.

"ಏನೂ ಬಡ. ಅವರ್ಮನೆ ಮಕ್ಕಳಿಗೆಲ್ಲ ಕೈ ತುತ್ತಿನ ಅಭ್ಯಾಸವಿಲ್ಲ. ಬೀಳಿಸಿಕೊಂಡು ಬಿಡುತ್ವೆ. ನಿಮಗೆಲ್ಲಾ ಇನ್ನೆಂದಾದ್ರೂ ಹಾಕ್ತೀನಿ."

"ನಾವು ಬಾಳೆ ಎಲೇಲಿ ಊಟ ಮಾಡ್ತೀವಿ." ಬಂದಿದ್ದ ಮಕ್ಕಳ ಪೈಕಿಯ ಒಬ್ಬ ಹುಡುಗ ಹೇಳಿದ. ಅವನಾಗಲೇ ಬಾಳೆ ಎಲೆಯನ್ನ ಹರಡಿಕೊಂಡು ಕೂತಿದ್ದ.

"ನಿಮಗೆಲ್ಲಾ ನಿದ್ದೆ ಬರ್ತಿದೆ. ಕತ್ತಲೇರಿ ಬಾಳೆ ಎಲೆಯ ಮೇಲೆ ಊಟ ಮಾಡುಕ್ಕೆ ಕಷ್ಟ ಆಗುತ್ತೆ. ಸುಮ್ನೆ ಹೇಳಿದಷ್ಟು ಕೇಳಿ." ಕಿಟ್ಟಿ ಹೆಂಡತಿ ರೇಗಿದಳು.

"ನಮ್ಮ ಮನೆ ಗೊಂದಿಷ್ಟು ಬಾಳೆ ಎಲೆಗಳನ್ನ ತಗೊಂಡು ಹೋಗೋಣ" ಆ ಹುಡುಗ ಮುಗ್ಧನಂತೆ ಹೇಳಿದಾಗ ಎಲ್ಲರೂ ನಕ್ಕಿದ್ದರು.

ಸಾಲಾಗಿ ತಟ್ಟೆಗಳನ್ನೂ ಹಾಕಿ, ಚಾಪೆಗಳನ್ನ ಹಾಕಿ ಮಕ್ಕಳನ್ನ ಕೂರಿಸಿದರು. ಕಲೆಸಿದ ಕೂಟಿನ ಅನ್ನಕ್ಕೆ ತುಪ್ಪವನ್ನ ಹಾಕಿ, ತಟ್ಟೆಗೆ ಬಡಿಸಿದರು. ನಂತರ, ಒಗ್ಗರಣೆ ಹಾಕಿ, ಕಾಯಿತುರಿಯನ್ನೂ ಹಾಲು ಮೊಸರನ್ನ ಹಾಕಿ ಕಲೆಸಿದ್ದ ಮೊಸರನ್ನವನ್ನ ಬಡಿಸಿ, ನೆಂಚಿಕೊಳ್ಳಲು ಹೋಳುಗಳನ್ನ ಹಾಕಿದರು. ಸಂಡಿಗೆಯನ್ನೂ ಹಾಕಿದರು. ಕುಡಿಯಲು ಬಟ್ಟಲಿನಲ್ಲಿ ಗಸಗಸೆ ಪಾಯಸವನ್ನ ಕೊಟ್ಟರು. ಅರೆ ನಿದ್ದೆಯಲ್ಲಿದ್ದ ಮಕ್ಕಳು ಸದ್ದಿಲ್ಲದೇ ಊಟವನ್ನ ಮುಗಿಸಿ ಎದ್ದರು. ಎಲ್ಲರಿಗೂ ಹಾಸಿಗೆಗಳನ್ನ ಹಾಸಿಕೊಟ್ಟರು. ಆದರೆ, ಮಕ್ಕಳು ತುತ್ತಿನೂಟದ ಮಜವನ್ನ ನೋಡಲು, ಪಿಳಿಪಿಳಿ ಕಣ್ಣುಗಳನ್ನ ಬಿಟ್ಟುಕೊಂಡು ಕುಳಿತಿದ್ದವು.

ಗುಡಿಸಿ ಸಾರಿಸಿದ ಹಿತ್ತಲಿನಲ್ಲಿ ಪೇಟ್ರೋಮ್ಯಾಕ್ಸ್ ದೀಪಗಳನ್ನ ವೈಕುಂಠ ಹಚ್ಚಿಸಿ ಇಟ್ಟ. ಚಾಪೆಗಳನ್ನ ಜಮಖಾನಗಳನ್ನ ಹಾಸಿದರು. ಮಧ್ಯಭಾಗದಲ್ಲಿ ಸಾತಕ್ಕ ಕುಳಿತಳು. ಅವಳ ಮುಂದೆ, ಕೂಟು ಅನ್ನ ಹಾಕಿ ಕಲೆಸಿದ್ದ ದೊಡ್ಡ ಚರಕಲು, ಹಿತ್ತಾಳೆಯದು. ಅದಕ್ಕೆ ಕಲಾಯಿ ಮಾಡಿತ್ತು. ಅದೇ ತರಹದ ಇನ್ನೊಂದು ದೊಡ್ಡ ಚರಕಲಿನಲ್ಲಿ ಸಿಹಿ ಮೊಸರು ಹಾಕಿ ಕಲೆಸಿದ್ದ ಅನ್ನ. ಉಪ್ಪಿನ ಕಾಯಿ, ಹಪ್ಪಳ ಸಂಡಿಗೆ, ಎಲ್ಲವೂ ಇತ್ತು. ನಾರಾಯಣ ಕುಡಿಯುವ ನೀರನ್ನ ಲೋಟಗಳನ್ನು ತಂದಿತ್ತ. "ನಾರಾಯಣ, ಪಾಯಸದ ಕೊಳದಪ್ಪಲೇನ ತಂದು ಬಿಡಪ್ಪಾ." ಸಾತಕ್ಕ ಹೇಳಿ ತರಿಸಿದಳು.

"ಅಮ್ಮಾ ನಂಗೆ ಹಪ್ಪಳಾ." ಮಾಲಕ್ಷ್ಮಿಯ ಮಗಳು ಅಮ್ಮನನ್ನ ಕೇಳಿತು.

"ಛೆ. ಎಂಥಾ ಕೆಲಸ ಆಯ್ತಲ್ಲೇ ಮಾಲಕ್ಷ್ಮೀ.. ಮಕ್ಕಳಿಗೆ ಹಪ್ಪಳವನ್ನೇ ಬಡಿಸಲಿಲ್ಲ. ತಗೋ ಎಲ್ಲಾ ಮಕ್ಕಳಿಗೂ ಕೊಡು."

"ಎಲ್ಲಾ ಹುಶಾರಾಗಿ ತಿನ್ನಬೇಕು. ಪುಡಿ ಉದುರಿಸಬಾರದು" ಮಾಲಕ್ಷ್ಮಿ ಎಚ್ಚರಿಸಿ, ಹಪ್ಪಳವನ್ನ ಹಂಚಿದಳು.

ಸಾತಕ್ಕ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ, ಸರಿಯಾಗಿ ಕುಳಿತಳು. ಅವಳ ಎದುರಿಗೆ, ಜಮಖಾನದ ಮೇಲೆ ಎಲ್ಲರೂ ಅರ್ಧ ವೃತ್ತಾಕಾರದಲ್ಲಿ ಕುಳಿತರು.

"ಎಲ್ಲರೂ ಕೈಗಳನ್ನ ಮುಂದೆ ಮಾಡಿ... ಅಂಗೈನ ಬಟ್ಟಲು ತರಹ ಮಾಡ್ಕೊಂಡು ಹಿಡೀರಿ. ತಿನ್ನಕ್ಕೆ ಸುಲಭವಾಗುತ್ತೆ... ಯಾರಿಗೆ ಮೊದಲ ತುತ್ತು?" ಸಾತಕ್ಕ ಪಾತ್ರೆಯಿಂದ ತುತ್ತು ತೆಗೆದಳು.

"ನಂಗೆ... ನಂಗೆ..." ಎಲ್ಲರೂ ತಾವು ದೊಡ್ಡವರು ಎಂಬುದನ್ನ ಮರೆತು ಕೈ ಮುಂದೆ ಒಡ್ಡಿದರು.... ಸಾತಕ್ಕ ಒಮ್ಮೆ ಎಲ್ಲರನ್ನೂ ಸಾಲಾಗಿ ವೀಕ್ಷಿಸಿದಳು.

"ತಡೀರಿ, ತಡೀರಿ ಮೊದಲು ಈ ಹುಡುಗಂಗೆ...." ಎನ್ನುತ್ತ ಚಂದ್ರುನ ಭಾವಮೈದುನ ಶಂಕರೂಗೆ ತುತ್ತನ್ನು ನೀಡಿದಳು." ಸಂಕೋಚ ಪಟ್ಕೊಬೇಡ. ನೀನೂ ನಮ್ಮವನೇ..." ಅವನು ಸಂಕೋಚದಿಂದ ಕೈ ತುಂಬಿಸಿಕೊಂಡ. ಸಾಲಾಗಿ ಎಲ್ಲರ ಅಂಗೈಗೂ ಒಂದೊಂದು ತುತ್ತನ್ನ ಹಾಕಿ, ಸಂಡಿಗೆಯ ಚೂರುಗಳನ್ನ ಇಟ್ಟಳು.

"ಮಾವ ಬರ್ಲೇ ಇಲ್ಲವಲ್ಲ ಅತ್ತೆ... ಕರೆದು ಬರ್ಲಾ?" ಚಂದ್ರು ಹೆಂಡತಿ ಶಾರದಾ ಏಳಲು ನೋಡಿದಳು.

"ಅವನಿಗೆ ಫಲಾಹಾರ. ಅವನು ಊಟ ಮಾಡಲ್ಲ, ನಂಗೂ ಒಪ್ಪತ್ತು. ಬಾಣಂತಿಗೆ ಬಡಿಸಿದ್ದಾಯ್ತು." ನಾರಾಯಣ ನೀನು ಬಾರೋ. ನಿಂಗೂ ಕೈತುತ್ತು ಹಾಕ್ತೀನಿ. ಆಮೇಲೆ ವೈಕುಂಠಂಗೆ ಬಡಿಸ್ಬೇಕು. ನಾರಾಯಣನೂ ಸಾಲಿನಲ್ಲಿ ಬಂದು ಕುಳಿತ. ಲಕ್ಷ್ಮಿ ಒಳಬಾಗಿಲಿನಲ್ಲಿ ನಿಂತು ಈ ಸಂಭ್ರಮವನ್ನ ನೋಡಿದಳು.

"ಚಿಕ್ಕಮ್ಮ ನಮ್ಮಿಂದ ನಿಮಗೆ ತೊಂದರೆ ಆಯಿತು."

"ತೊಂದರೆ ಏನ್ಬಂತು ಚಂದ್ರು... ನೀವು ಆಸೆ ಪಟ್ಟಿದ್ದು ಹೆಚ್ಚೋ... ನಾನು ತುತ್ತು ಹಾಕೋದು ಹೆಚ್ಚೋ... ಕೈ ತುತ್ತಿಗೆ ಎಷ್ಟು ಮಹತ್ವ ಇದೆ ಗೊತ್ತಾ?

"ಮಹತ್ವಾನಾ? ಅದೇನದು...? ಒಂಥರಾ ಮಜವಾಗಿರುತ್ತೆ ಅಷ್ಟೇ..."

"ಬರೀ ಮಜಾ ಅಲ್ಲ.... ಇದರ ಬಗ್ಗೆ ತಿಳಿದುಕೊಳ್ಳೋದು ಇರುತ್ತೆ. ಸಾತಕ್ಕ ವಿವರಣೆ ನೀಡಿದಳು. ಪ್ರೀತಿ, ಅಕ್ಕರೆ, ಒಗ್ಗಟ್ಟು ಎಲ್ಲಾ ಸೇರಿಕೊಳ್ಳುತ್ತೆ. ಅದಲ್ಲದೇ, ಬೆಳಗಿನ ಹೊತ್ತು ಮಾಡಿದ ಅನ್ನ ಹುಳಿ, ಸಾರು ಯಾವುದೇ ಆದರೂ ತುಂಬಾ ಮಿಕ್ಕು ಬಿಟ್ಟಿರುತ್ತೆ ಅಂತಿಟ್ಕೋ... ಮಾವಿನ ಕಾಯಿ, ಸೀಬೆಕಾಯಿ, ಅದೂ ಇದೂ

ಹಾಳು ಮೂಳು ತಿಂದು ನೀರು ಕುಡಿದ ಮಕ್ಕಳಿಗೆ ಹಸಿವೇ ಇರಲ್ಲ. ನಮಗೆ ಊಟ ಬೇಡ ಅಂತಾರೆ ತಾನೇ...? ಆಗ ಈ ತಣ್ಣನೆಯ ಅನ್ನಕ್ಕೆ ಹುಳಿ ಹಾಕಿ, ಶೇಂಗಾ ಎಣ್ಣೆಯನ್ನು ಹಾಕಿ ಕಲೆಸಿ, ಚೂರು ಚೂರು ತಿಂದು ಮಲಕ್ಕೊಳಿ ಇಲ್ದಿದ್ರೆ ರಾತ್ರಿ ನಿದ್ದೆ ಬರಲ್ಲ... ಅಂತ ಹೆದರಿಸಿ, ಕಾಗಕ್ಕ ಗುಬ್ಬಕ್ಕನ ಕತೆಯನ್ನ ಹೇಳುತ್ತ ಮುಂದೆ ಕೂರಿಸಿಕೊಂಡು, ಕೈತುತ್ತು ಹಾಕಿದರೇ... ನಿದ್ದೆ ಗಣ್ಣಲ್ಲಿ, ತಾವು ಎಷ್ಟು ತಿಂದೆವು ಅಂತ ಅವುಕ್ಕೆ ಗೊತ್ತೇ ಆಗಲ್ಲ... ಆದರೆ ಪಾತ್ರೆ ಖಾಲಿ ಆಗಿರುತ್ತೆ. ಹಾಗೇ ಕಡೇಲಿ, ಬರೀ ಹುಳಿ ಅನ್ನ ತಿಂದರೆ ಬಾಯಾರಿಕೆ ಆಗುತ್ತೆ ಅಂತ ಹೇಳಿ, ಒಂದೊಂದು ತುತ್ತು ಮೊಸರನ್ನವನ್ನ ತುತ್ತು ಮಾಡಿ ಹಾಕಿದರೆ ಆಯ್ತು... ಅನ್ನವೂ ಖಾಲಿ... ಮಕ್ಕಳ ಊಟವೂ ಆಯ್ತು... ಅಷ್ಟೇ..."

"ಬಲವಂತವಾಗಿ ತಿನ್ನಿಸಿದರೆ ಹೊಟ್ಟೆ ಭಾರ ಆಗಲ್ವಾ ಅತ್ತೆ?"

"ಏನೂ ಆಗಲ್ಲ. ಬೆಳೆಯೋ ಮಕ್ಕಳಿಗೆ ಅದೆಲ್ಲ ಗೊತ್ತೇ ಆಗಲ್ಲ. ಅಲ್ಲದೇ ಪೈಪೋಟಿ ಮೇಲೆ ತಿಂದು ಹಾಯಾಗಿ ಮಲಗುತ್ವೆ.. ಅಂಥಾದ್ದೆಲ್ಲ ದೊಡ್ಡೋರಿಗೆ. ಮಕ್ಕಳ ಮನಸ್ನಲ್ಲಿ ಅದನ್ನೆಲ್ಲ ತುರುಕೋದು ದೊಡ್ಡೋರೇ."

"ಹಾಗೇ ಬೆಳಗಿನ ಹೊತ್ತು ಮಾಡಿದ ಅನ್ನ ಏನೋ ಕಾರಣದಿಂದ ಸ್ವಲ್ಪ ಕಡಿಮೆ ಆಗಿರುತ್ತೆ ಅಂತಿಟ್ಕೋ.... ಮತ್ತೆ ಅನ್ನ ಮಾಡಿದರೆ ಉಳಿದು ಬಿಡುತ್ತೆ. ಕೂರಿಸಿ ಬಡಿಸಿದರೆ ಸಾಕಾಗುವಷ್ಟು ಇರಲ್ಲ. ಆಗ, ಸಿಹಿಸಿಹಿಯಾಗಿ ಹುಣಿಸೇ ಸಾರನ್ನ ಮಾಡಿ, ಚೆನ್ನಾಗಿ ತುಪ್ಪವನ್ನ ಹಾಕಿ ಕಲೆಸಿ, ನಿಧಾನವಾಗಿ ಕೈ ತುತ್ತು ಹಾಕಿ ಅದೂ ಇದೂ ತಮಾಷೆಯ ಮೋಜಿನ ಸಂಗತಿಯನ್ನ ಹೇಳಿ ನಗಿಸುತ್ತ ಪುಟ್ಟ ಪುಟ್ಟ ಕೈಗೆ ಪುಟ್ಟ ಪುಟ್ಟ ತುತ್ತು ಎಂದು ರಾಗವಾಗಿ ಹೇಳುತ್ತ... ಕೈ ತುತ್ತು ಹಾಕಿ ದರೆ ಮುಗೀತು. ಅವಕ್ಕೂ ಹೊಟ್ಟೆ ತುಂಬುತ್ತೆ. ನಮಗೂ ಸುಲಭವಾಗುತ್ತೆ.

"ಅರೆ ಹೊಟ್ಟೆ ಹಾಕಿದ ಹಾಗಾಗುಲ್ವಾ ಅತ್ತೆ...?"

"ಒಂದು ರಾತ್ರಿ ಕಡಿಮೆ ತಿಂದರೆ ಏನೂ ಆಗಲ್ಲ. ಮೈಗೂ ಒಳ್ಳೆಯದೇ. ಹಾಗೂ ಕಮ್ಮಿ ಆಯ್ತು ಅಂತ ಅನ್ನಿಸಿದರೆ ಅರ್ಧ ಲೋಟ ಹಾಲಿಗೆ ಸಕ್ಕರೆ ಹಾಕಿ ಕುಡಿಯಲು ಕೊಟ್ಟರೆ ಆಯ್ತು..."

"ಇದೇನಾ ಕೈ ತುತ್ತಿನ ರಹಸ್ಯ? ಇದು ಮೋಸ ಅಲ್ವಾ ಚಿಕ್ಕಮ್ಮ?"

"ಇದರಲ್ಲಿ ಮೋಸ, ವಂಚನೆ ಏನ್ಬಂತು? ಪ್ರೀತಿಯಿಂದ ಕೈ ತುತ್ತು ಹಾಕಿದರೆ, ಅದರ ತೂಕ ಹೆಚ್ಚು. ಒಟ್ಟಿಗೆ ಕೂರಿಸಿ ಕೈ ತುತ್ತು ಹಾಕಿದರೆ, ಮಕ್ಕಳಲ್ಲಿ ಸಮಾನತೆ ಬೆಳೆಯುತ್ತೆ. ಐಕ್ಯತೆ ಹೆಚ್ಚುತ್ತೆ. ಊಟದ ಮಹತ್ವ ತಿಳಿಯುತ್ತೆ. ಇದೆಲ್ಲಾ ಮನೆಯಲ್ಲಿ ಮಕ್ಳಿಗೆ ಮೊದಲ ಪಾಠ... ಬೆಳದಿಂಗಳಿನಲ್ಲಿ ಕೈ ತುತ್ತು ಹಾಕಿದರೆ ಇನ್ನೂ ಸೊಗಸು... ಬಸುರಿ ಹುಡುಗಿಯರು ಬಯಸಿ ಬಯಸಿ, ಬೆಳದಿಂಗಳಿನಲ್ಲಿ ಊಟ ಮಾಡ್ತಾರೆ...

ಅದೇ ಒಂದು ವಿಶೇಷ."

"ಅದ್ಯಾಕೇ... ಹೆಂಗಸಿಗೆ ಮಾತ್ರ...?"

"ಬೆಳದಿಂಗಳು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತೆ. ಅದು ಮಗು ತಾಯಿ ಇಬ್ಬರ ಆರೋಗ್ಯಕ್ಕೂ ಒಳ್ಳೆಯದು. ಎಲ್ಲರೂ ಒಟ್ಟಿಗೇ ಸೇರ್ತಾರೆ."

"ಎಷ್ಟೆಲ್ಲಾ ತಿಳಕೊಂಡಿದೀರಲ್ಲ ಚಿಕ್ಕಮ್ಮ.... ಇದನ್ನೆಲ್ಲ ಎಲ್ಲಿ ಓದಿದ್ರಿ?"

"ಪುರಾಣಗಳಲ್ಲಿ ಎಷ್ಟೋ ಉಪಕಥೆಗಳು ಬರುತ್ವೆ.. ಅವುಗಳಿಂದ ಬೇಕಾದಷ್ಟು ವಿಷಯಗಳು ತಿಳಿಯುತ್ವೆ.. ಸಾತಕ್ಕ ಮಾತನಾಡುತ್ತ, ಎಲ್ಲರಿಗೂ ನಿಧಾನವಾಗಿ ಕೈ ತುತ್ತು ಹಾಕಿದಳು. ಈಗ ಮೊಸರನ್ನದ ಸರದಿ. ಮೊಸರನ್ನದ ಮೇಲೆ ಕೂಟಿನ ಹೋಳುಗಳನ್ನ ಇಟ್ಟಳು. "ಎಲ್ರೂ ಹೊಟ್ಟೆ ತುಂಬಾ ತಿನ್ನಿ. ನಿಮಗೋಸ್ಕರವೇ ಮಾಡಿರೋದು..." ತುತ್ತು ಮಾಡಿ ಕೈಗಿತ್ತಳು. ಮೊಸರನ್ನದ ಪಾತ್ರೆ ಖಾಲಿ ಆಯಿತು. ಅಲ್ಲಿಯೇ ಇದ್ದ ಪಾತ್ರೆಯಲ್ಲಿ ಕೈ ತೊಳೆದು, ಸಾತಕ್ಕ ಪಾಯಸವನ್ನ ಬಟ್ಟಲಿಗೆ ಸುರಿದು ಎಲ್ಲರ ಮುಂದಿಟ್ಟಳು... ಎಲ್ಲರೂ ಕುಡಿದು ಮತ್ತೆ ಮತ್ತೆ ಹಾಕಿಸಿಕೊಂಡರು.

"ನಿಮ್ಮಲ್ಲಿ ಎಲ್ಲರಿಗಿಂತ ದೊಡ್ಡವರು ಯಾರು?"

"ನಾನು..." ಚಂದ್ರು ಕೈ ಎತ್ತಿದ.

"ನಾನು ಕೇಳಿದ್ದು ಹೆಂಗಸರಲ್ಲಿ ಯಾರು ದೊಡ್ಡವರು ಅಂತ?" ಯಾರೂ ಮಾತಾಡಲಿಲ್ಲ, ಸುಮ್ಮನಾದರು. ನಾನು ನಿಮ್ಮ ವಯಸ್ಸನ್ನು ಕೇಳಲಿಲ್ಲ... ವಾವೆಯಲಿ ಕೇಳಿದೆ...." ಎಲ್ಲರೂ ನಕ್ಕರು.

"ದೊಡ್ಡೋನು ನಾನು ಚಿಕ್ಕಮ್ಮ.. ಹೆಂಗಸು ಅಂತ ನೀವು ಪಕ್ಷಪಾತ ಮಾಡ್ತೀರಲ್ಲ ಯಾಕೆ?... ಅವರೆಲ್ಲರಿಗೂ ಚಿಕ್ಕವರು ಅಂತ ಅನ್ನಿಸ್ಕೊಳ್ಳೋಕೇ ಆಸೆ."

"ಕೈ ತುತ್ತು ಹಾಕಿದ ಚಿಕ್ಕಮ್ಮನೂ ಹೆಂಗಸೇ... ಹೆಂಗಸು ಹೆಂಗಸಿನ ಬಗ್ಗೆ ಕೇಳಿದರೆ ಪಕ್ಷಪಾತ ಅಂತೀಯಲ್ಲ... ಪಕ್ಷಪಾತವೂ ಇಲ್ಲ. ಎಂಥಾ ವಾತವೂ ಇಲ್ಲ. ನಂಗೆ ನೀವೆಲ್ರೂ ಒಂದೇ... ಮಾಲಕ್ಷ್ಮಿ ನೀನು ಎದ್ದು ಕೈ ತೊಳ್ಕೊಂಡು ಎಲ್ಲರಿಗೂ ಎಲೆ ಅಡಿಕೆ ಕೊಟ್ಬಿಡು... ಸಿಹಿ ಊಟ ಮಾಡಿದ್ಮೇಲೆ ತಾಂಬೂಲ ಹಾಕ್ಕೋಬೇಕು. ತಿಂದ ಅನ್ನ ಚೆನ್ನಾಗಿ ಜೀರ್ಣವಾಗುತ್ತೆ." ಅವಳು ಎಲೆ ಅಡಿಕೆಯನ್ನ ತಂದು ಕೊಟ್ಟಳು.

"ತುಂಬಾ ಚೆನ್ನಾಗಿತ್ತು ಚಿಕ್ಕಮ್ಮ. ಈ ದಿನಕ್ಕಾಗಿ ನಾವು ಎಷ್ಟೋ ವರ್ಷಗಳಿಂದ ಕಾಯ್ತಾ ಇದ್ದೆವು. ನಮ್ಮಲ್ಲಿ ಕೆಲವರಿಗೆ ಇದೆಲ್ಲಾ ಹೊಸದು.... ಈ ರಾತ್ರಿಯನ್ನ ನಾವು ಸದಾ ಕಾಲಕ್ಕೂ ನೆನಪಿನಲ್ಲಿ ಇಟ್ಟುಕೊಂಡಿರ್ತೀವಿ." ಎಂದು ಹೇಳಿ ಕಿಟ್ಟಿ "ಡರ್" ಅಂತ ತೇಗಿದ.... ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡ.

"ಮಿಡಿ ಉಪ್ಪಿನ ಕಾಯಿ ತುಂಬಾ ಚೆನ್ನಾಗಿತ್ತು ಚಿಕ್ಕಮ್ಮ ನೀವೇ ಹಾಕಿದ್ದಾ?

ಕೇಳಿದ. ಏನೋ ಒಂಥರಾ ರುಚಿ, ಘಮ... ಅಲ್ವಾ?" ಹೆಂಡತಿಯನ್ನು ಕೇಳಿದ.

"ಇಲ್ಲ... ಲಕ್ಷ್ಮಿ ಹಾಕಿದ್ದು. ಇದು ಜೀರಿಗೆ ಮಾವಿನಕಾಯಿ ಅಂತ. ಮಲೆನಾಡಿನಲ್ಲಿ ಧಾರಾಳವಾಗಿ ಸಿಗುತ್ತೆ... ವರ್ಷಕ್ಕೆ ಆಗುವಷ್ಟು ಉಪ್ಪಿನಕಾಯಿಗಳನ್ನ ಜಾಡಿಗಳಲ್ಲಿ ಹಾಕಿಡುವ ಕೆಲಸ ಅಂದ್ರೆ ಲಕ್ಷ್ಮಿಗೆ ಬಹಳ ಇಷ್ಟ... ನಿಂಬೆಕಾಯಿ ಉಪ್ಪಿನಕಾಯಿ ಹಾಕಿದಾಳೆ. ಅದಂತೂ ಇನ್ನೂ ಚೆನ್ನಾಗಿದೆ. ಅರಮದಲ ಕಾಯಿ ಅಂತ ಸಿಗುತ್ತೆ ಈ ಕಡೆ. ಅದರ ಘಮವೇ ಘಮ. ಹಾಗೇ ಈ ಜೀರಿಗೆ ಮಾವಿನಕಾಯಿಗೆ ಅದರದ್ದೇ ಆದ ಘಮ ಇದೆ.. ಇನ್ನೊಂದು ಗೊತ್ತಾ? ಈ ಕಡೆ ಕಾಡಿನ ಮೆಳೆಗಳಲ್ಲಿ ಕವಳೇ ಕಾಯಿ ಅಂತ ಒಂದು ಜಾತಿಯ ಕಾಯಿ ಬಿಡುತ್ತೆ. ಅದನ್ನ ಲಂಬಾಣಿ ಹೆಂಗಸರು, ಕೊಯ್ದು ತಂದು ಮಾರ್ತಾರೆ. ನಾಲ್ಕಾಣೆ ಕೊಟ್ಟರೆ ಐದಾರು ಸೇರು ಕೊಡ್ತಾರೆ. ಅದರ ಉಪ್ಪಿನ ಕಾಯಿ ಕೂಡಾ ಚೆನ್ನಾಗಿರುತ್ತೆ. ಪಾರ್ವತಿಯೂ ಅದರ ಉಪ್ಪಿನ ಕಾಯಿ ಹಾಕ್ತಿದ್ಲು. ಮೀನಾಕ್ಷಿಗೆ ಆ ಉಪ್ಪಿನಕಾಯಿ ಇಷ್ಟವಂತೆ."

"ಈಗ ಈ ಜೀರಿಗೆ ಮಾವಿನ ಕಾಯಿ ಸಿಗುತ್ತಾ? ಸಿಕ್ಕಿದರೆ ಒಂದಿಷ್ಟು ತಗೊಂಡು ಹೋಗ್ತೀವಿ."

"ಈಗೆಲ್ಲಿ ಸಿಗುತ್ತೆ? ಮಾವಿನಕಾಯಿ ಏನಿದ್ರೂ ಚೈತ್ರ ಮಾಸದಲ್ಲಿ. ಅದನ್ನ ಮರದಿಂದ, ಇಳಿಸಿ ತರಬೇಕು. ಪೆಟ್ಟಾಗಬಾರದು. ಗೊಂಚಲು ಗೊಂಚಲನ್ನೇ ಇಳಿಸಿ ತಂದ್ರೆ ಸೊಗಡು ಸೊಗಡಾಗಿರುತ್ತೆ. ಅದು ಚೆನ್ನ... ನಾನಿನ್ನು ಏಳ್ಲಾ? ಕೂತು ಕೂತು ಸೊಂಟ ಹಿಡಿದುಕೊಂಡಿದೆ."

"ನಮಗೆಲ್ಲ ಹೊಟ್ಟೆ ಭಾರದಿಂದ ಏಳಕ್ಕೆ ಆಗ್ತಿಲ್ಲ. ಇಲ್ಲೇ ಈ ಹಿತ್ತಲಿನಲ್ಲಿ ಜಮಖಾನದ ಮೇಲೆ ತಣ್ಣಗೆ ಮಲಗಿ ಬಿಡೋಣ ಅಂತ ಅನ್ನಿಸ್ತಿದೆ."

"ನೀವೇನೋ ತಣ್ಣಗೆ ಮಲಗ್ತೀರಿ. ನಿಮ್ಮ ಮೈ ಮೇಲೆ ತಣ್ಣಗೆ ಹರಿದಾಡೋ ಜಂತುಗಳೂ ಇವೆ... ಹುಶಾರು."

"ಹೌದಾ ಚಿಕ್ಕಮ್ಮ..." ಎಲ್ರೂ ತಮ್ಮ ಹಿಂದೆ ನೋಡಿಕೊಂಡರು.

"ಅಷ್ಟೇನೂ ಹೆದರಬೇಡಿ. ಈ ಬೆಳಕಿಗೆ, ಸದ್ದಿಗೆ ಏನೂ ಬರಲ್ಲ. ಸುತ್ತಲೂ ಕಾಡಿನಲ್ಲಿ ಕಾಡು ಪ್ರಾಣಿಗಳೂ ಇವೆ... ಅವೂ ಈಗ್ಲೇ ಹೊರಕ್ಕೆ ಬರಲ್ಲ."

"ಹುಲಿ, ಚಿರತೆ ಎಲ್ಲಾ ಇದೆಯಾ ಚಿಕ್ಕಮ್ಮ?"

"ಇರದೇ ಏನು? ಇದು ಮಲೆನಾಡಿನ ಒತ್ತಾದ ಕಾಡು. ಎಂತೆಂಥ ಭಾರಿ ಬೆಲೆ ಬಾಳುವ ಮರಗಳಿವೆ ಗೊತ್ತಾ? ಹೊನ್ನೆ, ತೇಗ, ಸಾಗವಾನಿ, ಶ್ರೀಗಂಧ ಮುಂತಾದ ಮರಗಳಿಗೆ ಭಾರಿ ಬೇಡಿಕೆ ಇದೆ. ಈ ಪ್ರದೇಶದ ಕಾಡುಗಳು ಹೆಸರು ಮಾಡಿವೆ. ಅದಕ್ಕೆ ಮಲೆನಾಡಿನಲ್ಲಿ ಮಳೆ ಜಾಸ್ತಿ. ಭೂಗೋಳದ ಪಾಠದಲ್ಲಿ ನೀವುಗಳು ಓದಿರಬೇಕು... ನೆನಪಿದೆಯೋ ಮರೆತು ಬಿಟ್ರೋ?" ಶಾಸ್ತ್ರಿ ಕೇಳಿದ. ಅವನು ಬಂದು

ಕುಳಿತಿದುದನ್ನ ಈ ವರೆಗೆ ಯಾರೂ ಗಮನಿಸಿರಲಿಲ್ಲ.

"ಓ ಮಾವಾ? ನೀವಾ? ನೀವು ಬಂದು ಕೂತಿದ್ದನ್ನೂ ನಾವ್ಯಾರೂ ಗಮನಿಸಲೇ ಇಲ್ಲ." ಕಿಟ್ಟಿ ಹೇಳಿದ.

"ನಿಮ್ಮ ಗಮನವೆಲ್ಲಾ ಕಾಡು ಪ್ರಾಣಿಗಳ ಮೇಲಿತ್ತು. ಹುಲಿ ಚಿರತೆ ಅಂತ ಹೆಸರುಗಳನ್ನ ಕೇಳಿಯೇ ಹೆದರಿ ಬಿಟ್ಟಿದೀರಿ ಅಂತ ಅನ್ನಿಸುತ್ತೆ. ಎದುರಿಗೆ ಕಂಡರೆ ಏನ್ಮಾಡ್ತೀರಿ?..." ಅವು ಹಾಗಲ್ಲಾ ಸುಮ್ಸುಮ್ನೆ ಜನರು ವಸ ಮಾಡುವ ಕಡೆಗೆ ಬರಲ್ಲ. ಈಚೆಗೆ ಕಾಡುಗಳನ್ನೆಲ್ಲಾ ಸಿಕ್ಕಾಪಟ್ಟೆ ಕಡಿದ್ದು ಹಾಕಿದಾರೆ... ಅವು ಬೇರೆ ಬೇರೆ ಕಡೆಗೆ ಹೋಗ್ತಿವೆ. ಈ ಕಾಡೇ ನಮ್ಮ ಸಂಪತ್ತು. ಅದನ್ನ ಉಳಿಸಿಕೊಳ್ಳಬೇಕು ಅನ್ನೋ ಪರಿಜ್ಞಾನ ಕಡಿಮೆ ಆಗ್ತಿದೆ.... ಆದ್ದರಿಂದಲೇ ಮಳೆಯೂ ಕಡಿಮೆ ಆಗಿದೆ. ಶಾಸ್ತ್ರಿ ಆಕಾಶದ ಕಡೆ ನೋಡುತ್ತಾ ಹೇಳಿದ. ಎಲ್ಲರೂ ಮೌನವಾಗಿದ್ದರು. ಶಾಸ್ತ್ರಿಯೇ ಮತ್ತೆ ಮೌನವನ್ನ ಮುರಿದ.

"ಹೇಗಿತ್ತು ಕೈ ತುತ್ತಿನ ಊಟ? ಹೊಟ್ಟೆ ತುಂಬಿತಾ?"

"ತುಂಬಾ ಮಜವಾಗಿತ್ತು ಮಾವ. ನೀವೂ ಬಂದಿದ್ರೆ ಚೆನ್ನಾಗಿತ್ತು."

"ಚಿಕ್ಕ ವಯಸ್ಸಿನಲ್ಲಿ ಕೈತುತ್ತಿನ ಊಟ ನಮಗೆ ಅಪರೂಪವಾಗಿರಲಿಲ್ಲ. ನಮ್ಮಮ್ಮ ಕೈತುತ್ತು ಹಾಕಿಯೇ ನಮ್ಮನ್ನ ಬೆಳೆಸಿದಳು. ಈಗ ಸಾತು ಮುಂದುವರೆಸಿಕೊಂಡು ಬಂದಿದಾಳೆ."

"ಕೈ ಒಣಗ್ತಾ ಇದೆ. ಎಲ್ರೂ ಎದ್ದು ಕೈ ತೊಳ್ಕೊಳ್ಳಿ..." ಸಾತಕ್ಕ ಮಂಡಿಗೆ ಕೈ ಊರಿ ಎದ್ದಳು. ನಾರಾಯಣ ಪಾತ್ರೆಗಳನ್ನ ಎತ್ತಿಟ್ಟ, ವೈಕುಂಠ ಜಮಖಾನಗಳನ್ನ ಎತ್ತಿಟ್ಟು ಆ ಜಾಗವನ್ನ ಶುಚಿಗೊಳಿಸಿದ. ಸಾತಕ್ಕ ಮಡಿ ಸೀರೆಯನ್ನುಟ್ಟು, ಶಾಸ್ತ್ರಿಗೂ ಫಲಹಾರಕ್ಕೆ ಕೊಟ್ಟು ತಾನೂ ತೆಗೆದುಕೊಂಡಳು. ನಾರಾಯಣ ವೈಕುಂಠನನ್ನ ಕೂರಿಸಿ ಬಡಿಸಿದ.

* * *

ಸಾತಕ್ಕ ಫಲಾಹಾರ ಮುಗಿಸುವವರೆಗೂ, ತಮ್ಮ ತಮ್ಮಲ್ಲೇ ಮಾತನಾಡುತ್ತ ಕುಳಿತಿದ್ದವರು, ಅವಳು ಹೊರಕ್ಕೆ ಬಂದೊಡನೆ ಮತ್ತೆ ಅವಳನ್ನ ಸುತ್ತುವರೆದು ಕುಳಿತರು.

"ಯಾರೂ ಯಾಕಿನ್ನೂ ಮಲಗಿಲ್ಲಾ? ಮಲಗ್ಬಾರ್ದಾ?"

"ನಿದ್ದೆ ಬರುವವರೆಗೂ ನಿಮ್ಮ ಜೊತೆ ಮಾತಾಡ್ಬೇಕು. ಬೆಳಿಗ್ಗೆ ಹೊರಟು ಬಿಡ್ತೀವಲ್ಲ."

"ಇದ್ದ ಹಾಗೇ ಆಗಲಿಲ್ಲ ನೀವುಗಳು. ಅದೇನೋ ಹೇಳ್ತಾರಲ್ಲ ಹಾಗೇ... ಬಂದ ಪುಟ್ಟ; ಹೋದ ಪುಟ್ಟ ಅಂತ. ಇದೆಂಥಾ ಬರಾಟ?" ಆಕ್ಷೇಪಿಸಿದಳು.

"ಮತ್ತೆ ಬರ್ತೀವಿ. ಅತ್ತೆ ಜೋಗ್‌ಫಾಲ್ಸ್‌ನ ಮತ್ತೊಂದು ಸಾರಿ ನೋಡ್ಲೇ ಬೇಕು. ಆಗ ನಿಮ್ಮನ್ನ ನಮ್ಮ ಜೊತೇಲಿ ಕರ್ಕೊಂಡು ಹೋಗ್ತೀವಿ."

"ನನ್ಹತ್ರ ಎಲ್ರೂ ಅಷ್ಟು ಮಾತಾಡಿದ್ರಿ? ಯಾರೂ 'ಗೇರುಸೊಪ್ಪೆ ಜಲಪಾತ ಹೇಗಿತ್ತು ಅಂತ ಹೇಳಲೇ ಇಲ್ಲ... ಹಾಗಾದ್ರೆ ಸರಿಯಾಗಿ ನೋಡಿಲ್ಲ ಅಂತಾಯ್ತು... ಅಲ್ಲದೇ ನಿಮಗೆಲ್ಲಾ ಈ ಊಟದ ಚಿಂತೆಯೇ ಹೆಚ್ಚಾಗಿತ್ತು... " ಸಾತಕ್ಕ ನಕ್ಕಳು.

"ಹಾಗೇನಿಲ್ಲ ಚಿಕ್ಕಮ್ಮ. ಜಲಪಾತದ ಎದುರಿಗಿದ್ದಾಗ ಬೇರೆ ಎಲ್ಲಾ ವಿಷಯವೂ ಮರೆತು ಹೋಗಿತ್ತು. ನಮ್ಮ ಜೀವನ ಸಾರ್ಥಕವಾಯ್ತು ಅಂತ ಅನ್ನಿಸ್ತು. ಜೋಗ್ ಜಲಪಾತ ನಮ್ಮ ನಾಡಿಗೆ ಹೆಮ್ಮೆ. ಅದೇಸು ಅದ್ಭುತ! ಅದೇನು ಭರಾಟೆ?... ನೋಡುಕ್ಕೆ ಎರಡು ಕಣ್ಣುಗಳು ಸಾಲದು... ಅಂಥಾ ಭವ್ಯವಾದ ದೃಶ್ಯ... ಅಂತಾ ನೋಟ ಎಷ್ಟು ವರ್ಣನೆ ಮಾಡಿದರೂ ಸಾಲದು.." ತನ್ಮಯತೆಯಿಂದ ಹೇಳಿದರು.

"ಕ್ಯಾಮೇರಾ ತಂದಿದ್ರೋ ಇಲ್ವೋ-ಫೋಟೋಗಳನ್ನ ತೆಗೆದ್ರಿತಾನೇ..?"

"ಹೂಂ.. ಅತ್ತೆ... ಬರೀ ಜಲಪಾತ ಮಾತ್ರ ಅಲ್ಲ. ಕಾಡು ಮೇಡು, ಆಕಾಶ, ಮೋಡ, ನದಿ, ಬಂಡೆ, ಸಂದು ಗೊಂದು, ಜನ ಜಂಗುಳಿ ಎಲ್ಲಾ ತೆಗೆದಿದೀನಿ ಚಿಕ್ಕಮ್ಮ. ಫೋಟೋ ಬರಲಿ, ನಿಮಗೂ ಕಳಿಸಿ ಕೊಡ್ತೀನಿ."

"ಇರಲಿ ಕಳಿಸಿ ಕೊಡೋರಂತೆ... ಈ ನೆವದಲ್ಲಾದ್ರೂ ಮತ್ತೆ ಬನ್ನಿ."

"ಬರಲೇ ಬೇಕು. ಅಲ್ಲಿಯವರೆಗೂ ಇವತ್ತು ನಾವು ನೋಡಿದ ದೃಶ್ಯವನ್ನು ನಮ್ಮ ಕಣ್ಣುಗಳಲ್ಲಿ ತುಂಬಿಕೊಂಡಿರುವುದನ್ನ ಮತ್ತೆ ಮತ್ತೆ ಅನುಭವಿಸ್ತೀವಿ... ಚಂದ್ರು ಹೇಳುತ್ತ ಹೋದ." ನಾವುಗಳು ಬಸ್ಸಿನಿಂದ ಇಳಿಯುತ್ತಿದ್ದಾಗಲೇ, ಜಲಪಾತದ 'ಭರೋ' ಎನ್ನುವ ಸದ್ದು ಕೇಳಿ ಬಂತು. ಅಷ್ಟಕ್ಕೇ ನಮಗೆ ಆನಂದ... ಸಮೀಪದಲ್ಲೇ ಬೀಳುವ ಜಲಪಾತದಿಂದ ಹಾರಿ ಬರುವ ತುಂತುರು ಹನಿಗಳು ನಮ್ಮ ತಲೆಯನ್ನ ಸವರಿಕೊಂಡು ಹೋಗುತ್ತಿತ್ತು. ಮಧ್ಯಾಹ್ನದ, ಬಿಸಿಲು, ಶೆಕೆ, ಇದ್ದರೂ ವಾತಾವರಣ ಹಿತವಾಗಿತ್ತು... ಸ್ವಲ್ಪ ಮುಂದೆ ನಡೆದು ಫಾಲ್ಸ್ ನೋಡಲು ಮಾಡಿರುವ ಸ್ಥಳಕ್ಕೆ ಬಂದೆವು. ಅಬ್ಬಾ...! ಎಲ್ಲಾ ಆಯಾಸವೂ ಮಾಯ... ಆಹಾ... ಎಂಥಾ ದೃಶ್ಯ! ಮತ್ತೆ ಮತ್ತೆ ನೋಡಬೇಕೆನ್ನಿಸುವ, ನೋಡುತ್ತಲೇ ಇರಬೇಕೆನ್ನಿಸುವ ಅದ್ಭುತ ದೃಶ್ಯ!! ಯಾವುದೋ ದೇವಲೋಕಕ್ಕೋ, ಮಾಯಾಲೋಕಕ್ಕೋ ಬಂದಿದೀವಿ ಅಂತ ಅನ್ನಿಸುವ ಅನುಭವ... ತೃಪ್ತಿಯೇ ಆಗಲಿಲ್ಲ ಚಿಕ್ಕಮ್ಮ. ಜೀವನದಲ್ಲಿ ಒಮ್ಮೆ ಜೋಗ್ ಜಲಪಾತವನ್ನ ನೋಡಲೇ ಬೇಕು... ಭರೋ ಎನ್ನುವ ಸದ್ದಿನೊಂದಿಗೆ ಆಕಾಶ ಪಾತಾಳವನ್ನ ಒಂದು ಮಾಡುವ, ಒಂಭೈನ್ನೂರು ಅಡಿಗಳ ಕೆಳಗೆ ಪ್ರಪಾತಕ್ಕೆ ಧುಮುಕುವ ಶರಾವತಿಯನ್ನ ನಮ್ಮೆದುರಿಗೆ ಕಾಣುವಾಗ ಮೈಯೆಲ್ಲಾ ಜುಂ ಅಂತ ಅನ್ಸುತ್ತೆ. ಆ ರಭಸದ ಕಂಪನಕ್ಕೆ ನಾವುಗಳೂ ತೂರಾಡ್ತಾ ಇದೀವೇನೋ ಅನ್ನುವ

ಅನುಭವ ದೇಹದೊಳಕ್ಕೆ ತುಂಬಿಕೊಳ್ಳುತ್ತೆ. ಜಲಪಾತ ನಾಲ್ಕು ಭಾಗಗಳಾಗಿ ಧುಮ್ಮಿಕ್ಕು ವುದನ್ನ ಕಾಣುವುದೇ ಒಂದು ಸೊಗಸು. ರಾಜನ ಗಾಂಭೀರ್ಯ, ರಾಣಿಯ ಬಳುಕು, ರೋರರ್‌ನ ಮೊರೆತ, ರಾಕೆಟ್‌ನ ವೇಗ... ಎಲ್ಲವನ್ನ ನೋಡಿ ಆನಂದಿಸುವುದಕ್ಕೆ ಸಮಯವೇ ಸಾಲದು ಚಿಕ್ಕಮ್ಮ... ನೀವೆಲ್ಲಾ ಎಷ್ಟು ಅದೃಷ್ಟವಂತರು. ವಾರಕ್ಕೆ ಒಂದು ಬಾರಿ ಹೋಗಿ ಬರಬಹುದು." ಶಾಸ್ತ್ರಿ ಎದ್ದು ಕುಳಿತು ನಕ್ಕ.

"ವಾರಕ್ಕೊಮ್ಮೆ ಹೋಗಿ ಬರುಕ್ಕೆ, ಸಮಯ, ಹಣ, ಶ್ರಮ ಎಲ್ಲ ಬೇಕಲ್ಲಪ್ಪಾ. ಮೂರನ್ನ ಒಟ್ಟಿಗೆ ಹೊಂದಿಸುವುದು ಕಷ್ಟ... ಈಗ ನಿನ್ನ ಬಾಯಲ್ಲಿ ವರ್ಣನೆ ಕೇಳಿದೆವಲ್ಲ. ನಾವುಗಳು ಹೋಗಿ ಬಂದಷ್ಟೇ ಆನಂದ ನಮಗಾಗಿದೆ... ಆದರೂ ಈ ಹಳ್ಳಿಯನ್ನ ಬಿಟ್ಟು ಹೋಗುವ ಮೊದಲು ಎಲ್ಲರನ್ನ ಕರ್ಕೊಂಡು ಹೋಗಿ" ಗೇರುಸೊಪ್ಪೆ ಜಲಪಾತವನ್ನು ಖಂಡಿತಾ ತೋರಿಸ್ಕೊಂಡು ಬರ್ತೀನಿ. ಗುಂಡಣ್ಣ ಈ ಮಾತುಗಳನ್ನ ಯಾಕೆ ಹೇಳಿದನೆಂದು ಸಾತಕ್ಕ ಯೋಚಿಸುತ್ತಿದ್ದಳು. ಮಾತುಗಳ ಭರಾಟೆ ನಿಧಾನವಾಗಿ ಕಡಿಮೆ ಆಯಿತು. ಎಲ್ಲರೂ ನಿದ್ದೆಯ ಮಡಿಲಿಗೆ ಇಳಿದರು.

* * *

ಬೆಳಕು ಹರಿಯುವ ಮೊದಲೇ ಸಾತಕ್ಕ ಅವರುಗಳನ್ನ ಎಬ್ಬಿಸಿದಳು. ಎಲ್ಲರು ಎದ್ದು, ಮೊದಲಿಗೆ ಮುಖ ತೊಳೆದು ಕಾಫಿಯನ್ನ ಕುಡಿದು, ಬಿಸಿ ನೀರಿನಲ್ಲಿ ಸ್ನಾನವನ್ನ ಮಾಡಿ, ಪ್ರಯಾಣಕ್ಕೆ ಸಿದ್ಧರಾದರು. ಸಾತಕ್ಕ ಅವರುಗಳಿಗೆಂದು ಮೂರು ಬಗೆಯ ಉಪ್ಪಿನ ಕಾಯಿಗಳನ್ನ, ಹಪ್ಪಳ ಸಂಡಿಗೆಗಳನ್ನ, ಬಗೆಗೆಯ ತರಕಾರಿಗಳನ್ನ, ರಸ್ತೆಯಲ್ಲಿ ತಿನ್ನಲು ಕುರುಕಲು ತಿಂಡಿಗಳನ್ನ ಪ್ರತ್ಯೇಕವಾಗಿ ತೆಗೆದಿರಿಸಿದ್ದಳು. ಅಕ್ಕಿರೊಟ್ಟಿ ಗಳನ್ನು ಮಾಡಿ ಜೊತೆಗೆ ಕಾಯಿಚಟ್ನಿಯನ್ನ ಇಟ್ಟಿದ್ದಳು.

"ಚಿಕ್ಕಮ್ಮ... ಇದೇನಿದು ಇಷ್ಟೊಂದು? ಇದನ್ನೆಲ್ಲಾ ಹೇಗೆ ತಗೊಂಡು ಹೋಗೋದು?" ನಾಗವೇಣಿ ಮೂಗಿನ ಬೆರಳನ್ನಿಟ್ಟುಕೊಂಡಳು.

"ನೀವೇನೂ ಕಷ್ಟ ಪಡಬೇಕಾಗಿಲ್ಲ. ಇಲ್ಲಿ ವೈಕುಂಠ, ರೈಲಿನ ತನಕ ತಂದು ಕೊಡ್ತಾನೆ. ಅಲ್ಲಿ ಒಬ್ಬ ಕೂಲಿಯವನನ್ನ ಗೊತ್ತು ಮಾಡ್ಕೊಂಡ್ರೆ ಆಯ್ತು. ಇವೆಲ್ಲಾ ಅಲ್ಲಿ ನಿಮಗೆ ಸಿಗಲ್ಲ. ಆಗಲ್ಲ ಅಂತ ಬಿಟ್ಟು ಹೋದ್ರೆ, ಆಮೇಲೆ ಖಂಡಿತಾ ಪೇಚಾಡಿಕೊಳ್ತೀರಿ." ಎಚ್ಚರಿಕೆಯ ಧ್ವನಿಗೆ ಎಲ್ಲರೂ ಮುಗುಳ್ನಕ್ಕರು.

"ಇಲ್ಲ, ಚಿಕ್ಕಮ್ಮ, ನೀವು ಪ್ರೀತಿಯಿಂದ ಕೊಟ್ಟಿದ್ದನ್ನ, ನಾವುಗಳು ಸಂತೋಷದಿಂದ ತೆಗೆದುಕೊಂಡು ಹೋಗ್ತೀವಿ." ಎಲ್ಲವನ್ನ ತಮ್ಮ ಲಗೇಜುಗಳಲ್ಲಿ ಸೇರಿಸಿಕೊಂಡರು. ಸಾತಕ್ಕ ಮುದಗೊಂಡಳು.

"ರೈಲು ಬರೋಕೆ ಮುಂಚೆ ಸ್ಟೇಷನ್‌ನಲ್ಲಿರಬೇಕು. ಇಲ್ಲಿ ತುಂಬಾ ಹೊತ್ತು ರೈಲು ನಿಲ್ಲಲ್ಲ. ಎಲ್ಲರೂ ಹೊರಡಿ." ಶಾಸ್ತ್ರಿ ಅವಸರಿಸಿದ. ದೇವರಿಗೆ ನಮಸ್ಕರಿಸಿ,

ಹಿರಿಯರಿಬ್ಬರಿಗೂ ನಮಸ್ಕರಿಸಿ ಆಶೀರ್ವಾದವನ್ನ ಪಡೆದರು. ಹಸುಗೂಸುಗಳ ಅಂಗೈ ಬಿಡಿಸಿ ದುಡ್ಡನ್ನ ಇಟ್ಟು ಮುದ್ದಿಸಿದರು. ಸಾತಕ್ಕ ಲಲಿತಳ ಕೈಯಿಂದ ಹೆಂಗಸರೆಲ್ಲರಿಗೂ, ಅರಿಶಿನ ಕುಂಕುಮ, ಎಲೆ ಅಡಿಕೆಯೊಂದಿಗೆ ರವಿಕೆ ಖಣವನ್ನಿಟ್ಟು ಕೊಡಿಸಿದಳು. ಮನೆಯಲ್ಲೇ ಅರಳಿದ್ದ ಹೂಗಳನ್ನ ಮುಡಿಯಲು ಕೊಡಿಸಿದಳು. ಬಂದಿದ್ದ ಚಿಕ್ಕ ಮಕ್ಕಳ ಕೈಗೆ, ಒಂದೊಂದು, ಇಪ್ಪತ್ತೈದು ಪೈಸೆಯ ಹೊಸ ನಾಣ್ಯವನ್ನ ಇರಿಸಿ, ಹರಸಿದಳು. ಮಕ್ಕಳು ಖುಷಿಯಿಂದ ನಾಣ್ಯವನ್ನು ತಿರುಗಿಸಿ ಮುರುಗಿಸಿ ನೋಡಿದರು.

ಶಾಂತ, ಲಕ್ಷ್ಮಿಗೆ ಮತ್ತೊಮ್ಮೆ ಹೇಳಿ, ಹೊರಬಂದಳು. ಅವಳ ಕಣ್ಣುಗಳು ತೇವಗೂಂಡಿದ್ದವು. ಸಾತಕ್ಕ ತಲೆ ಸವರಿದಳು. "ಬೇಗ ಬಾಣಂತನಕ್ಕೆ ಬರುವಂತೆ ಆಗಲಿ" ಶಾಂತ ನಾಚಿಕೊಂಡಳು. ಗೋಪಾಲ ತಲೆ ಕೆರೆದುಕೊಂಡು ನಕ್ಕ.

ನಾರಾಯಣ, ಹಾಗೂ ಸ್ಕೂಲಿಗೆ ಹೋಗುವವರು, ಅವರೊಂದಿಗೇ ಹೊರಟರು. ವೈಕುಂಠ ಲಗೇಜುಗಳನ್ನ ಎತ್ತಿಕೊಂಡ. ಶಾಸ್ತ್ರೀ ರೈಲಿಗೆ ಹತ್ತಿಸಿ ಬರುತ್ತೇನೆಂದು ಹೇಳಿ ಹೊರಟ. ಮುಂಬಾಗಿಲಿನಲ್ಲಿ ನಿಂತು ಸಾತಕ್ಕ ಹಾಗೂ ಲಕ್ಷ್ಮಿ ಅತಿಥಿಗಳನ್ನ ಬೀಳ್ಕೊಟ್ಟರು.

ಹಳ್ಳಿಯ ಉದ್ದ ಅಗಲ, ವಿಸ್ತೀರ್ಣ, ಅನುಕೂಲ ಅನಾನುಕೂಲಗಳ ಬಗ್ಗೆ ವಿವರ ನೀಡುತ್ತಾ ಶಾಸ್ತ್ರಿ ಅವರೊಂದಿಗೆ ಹೆಜ್ಜೆ ಹಾಕಿದ. "ರೈಲ್ವೆ ಹಳಿಗಳನ್ನ ದಾಟಿದರೆ, ಅನೇಕರ ಗದ್ದೆ ಜಮೀನುಗಳು ಸಿಗುತ್ತವೆ. ಸಮಯ ಇದ್ದಿದ್ರೆ ನಮ್ಮ ತೋಟಕ್ಕೆ ನಿಮ್ಮನ್ನ ಕರೆದುಕೊಂಡು ಹೋಗ್ತಿದ್ದೆ" ಎಂದ. ಎಲ್ಲರೂ ಸ್ಟೇಷನ್ನನ್ನು ತಲುಪಿ, ಲಗೇಜುಗಳನ್ನ ಕೆಳಗಿಟ್ಟು ರೈಲಿಗಾಗಿ ಕಾಯುತ್ತ ನಿಂತರು.

ಅಷ್ಟರಲ್ಲಿ ದೂರದಲ್ಲಿ ಎಡಗಡೆಯ ಭಾಗದ "ಕೈಮರ" ಬಿದ್ದುದು ಕಂಡಿತು. ವೈಕುಂಠ "ಕೈಮರ ಬಿತ್ತು" ಎಂದ. ಸ್ಟೇಷನ್ ಮಾಸ್ಟರ್ ಪ್ಲಾಟ್‌ಫಾರಂನಲ್ಲಿ ಬಂದು ನಿಂತು ಕೆಂಪು ಬಾವುಟವನ್ನ ಬೀಸಿದರು. "ರೈಲು ಬರ್ತಾ ಇದೆ. ಎಲ್ಲರೂ ಲಗೇಜನ್ನ ಎತ್ಕೊಳ್ಳಿ, ಮಕ್ಕಳು ಜ್ವಾಪಾನ.." ಎಂದು ಅವರುಗಳಿಗೆ ಹೇಳಿದ. "ಕೂ..." ಎಂದು ಕೂಗುತ್ತ ರೈಲು ನಿಧಾನಗತಿಯಲ್ಲಿ ಬಂದಿತು. ಇಂಜಿನ್ 'ಚಸ್‌ಚಸ್' ಎಂದು ಸದ್ದು ಮಾಡುತ್ತ ನಿಂತಿತು. ಎಲ್ಲರೂ ಬೇಗ ಬೇಗ ಅವಸರದಲ್ಲಿ ಹತ್ತಿದರು. ಎರಡೇ ನಿಮಿಷಗಳಲ್ಲಿ ರೈಲು ಹೊರಡುವ ಸೂಚನೆಯ ಗಂಟೆ ಬಾರಿಸಿತು. ಗಾರ್ಡ್ ಸೀಟಿ ಊದುತ್ತ ಹಸಿರು ಬಾವುಟವನ್ನ ತೋರಿದ. ಗಾಡಿ ಚಲಿಸಲು ಪ್ರಾರಂಭಿಸಿತು.

"ಜ್ವಾಪಾನ... ತಲುಪಿದ ಕೂಡ್ಲೇ ಕಾಗದ ಬರೀರಿ" ಎಂದು ಶಾಸ್ತ್ರಿ ಮುಂದೆ ಮುಂದೆ ಹೋಗಿ ಹೇಳುವಷ್ಟರಲ್ಲಿ ಗಾಡಿಯ ವೇಗ ಹೆಚ್ಚಾಗಿತ್ತು. ಅವರುಗಳು ಕೈ ಬೀಸಿದರು. ಕಿಟಕಿಯಲ್ಲಿ ಬಗ್ಗಿ ನೋಡುತ್ತ ಅವರುಗಳು ಕೈ ಬೀಸಿದರು. ವೇಗವನ್ನ

ಹೆಚ್ಚಿಸುತ್ತಾ ಹಳಿಗಳ ಮೇಲೆ 'ಚುಕ್‌ಪುಕ್' ಎಂದು ಚಲಿಸುವ ಗಾಡಿಯ ಕಡೆಯ ಬೋಗಿ ಒಂದು ತಿರುವಿನಲ್ಲಿ ಕಾಣುವವರೆಗೂ, ಗಾರ್ಡ್‌ನ ಹಸಿರು ಬಾವುಟ ಕಾಣುವವರೆಗೂ ನಿಂತಿದ್ದು, ನಂತರ ಹೊರಟರು. ಶಾಸ್ತ್ರಿ ವೈಕುಂಠನನ್ನ ಮನೆಗೆ ಕಳಿಸಿ, ತಾನು ಗದ್ದೆಯ ಕಡೆಗೆ ತಿರುಗಿದ.

* * *

ಇದ್ದಕಿದ್ದಂತೆ ಹತ್ತಾರು ನಾಯಿಗಳು ಒಟ್ಟಿಗೇ ಬೊಗಳಾರಂಭಿಸಿದಾಗ, ಲಕ್ಷ್ಮಿ ಎಚ್ಚರಗೊಂಡಳು. ಮಕ್ಕಳೂ ಅಳಲಾರಂಭಿಸಿದ್ದವು. ಸಾತಕ್ಕನೂ ಎಚ್ಚರಗೊಂಡಳು. ಸೈಕಲ್ ಬೆಲ್‌ನ ಸದ್ದು ಕೇಳಿಸಿದಾಗ ನಾರಾಯಣನನ್ನ ಎಬ್ಬಿಸಿದಳು. ಸಣ್ಣಗೆ ಉರಿಯುತ್ತಿದ್ದ ಲಾಂದ್ರದ ಬತ್ತಿಯನ್ನ ಏರಿಸಿದಳು. ಅಷ್ಟರಲ್ಲಿ ಮುಂಬಾಗಿಲನ್ನು 'ದಬದಬ' ಅಂತ ಯಾರೋ ಬಡಿದ ಸದ್ದೂ ಕೇಳಿಸಿತು. ಎದೆ ಗುಂಡಿಗೆ ನಿಂತಂತಾಯಿತು. "ಯಾರು! ಯಾರು!" ನಾರಾಯಣ ದನಿ ಏರಿಸಿ ಕೇಳಿದ.

"ನಾನು... ಬೇಗ ಬಾಗಿಲು ತೆಗೀರಿ..." ಶಾಸ್ತ್ರಿಯ ಆತುರದ ಧ್ವನಿ ಕೇಳಿಸಿತು ನಾರಾಯಣ ಗಾಬರಿಯಿಂದ, ಬಾಗಿಲನ್ನ ತೆಗೆದ. ಶಾಸ್ತ್ರಿ ಸೈಕಲ್ಲನ್ನ ತಳ್ಳಿಕೊಂಡು ಸರ್‍ರನೆ ಒಳ ಬಂದು ಮುಂಬಾಗಿಲನ್ನ ಭದ್ರ ಪಡಿಸಿದ. ಸಾತಕ್ಕ ಲಾಂದ್ರವನ್ನ ತಂದಳು. ಲಕ್ಷ್ಮಿಯೂ ಎದ್ದು ವರಾಂಡಕ್ಕೆ ಬಂದಳು.

"ಏನಾಯ್ತು? ಯಾಕೆ ಇಷ್ಟು ಬೇಗ ಬಂದ್ರಿ?" ಆತಂಕದಿಂದ ಕೇಳಿದಳು.

"ನಾನು ಮೊದಲು ಸ್ನಾನ ಮಾಡಬೇಕು. ಹಂಡೇಲಿ ನೀರಿದೆಯಾ" ಕೇಳಿದ. ಸಾತಕ್ಕ ಬೆವೆತು ಹೋದಳು. ಸಮೀಪಕ್ಕೆ ಬಂದ ಲಕ್ಷ್ಮಿ ಅವನ ಬಿಳಿಯ ಬಣ್ಣದ ಷರಟಿನ ಮೇಲಾಗಿದ್ದ ರಕ್ತದ ಕಲೆಗಳನ್ನ ಕಂಡಳು.

"ಇದೇನಿದು? ಬಟ್ಟೆಯೆಲ್ಲಾ ರಕ್ತ, ಏನಾಯ್ತು?" ಕಿರುಚಿದಂತಿತ್ತು ಅವಳ ಧ್ವನಿ. ಹಿಂದಕ್ಕೆ ಸರಿದಳು.

"ಯಾರೂ ಭಯ ಪಟ್ಕೋಬೇಡಿ... ನಾನು ಹೇಳ್ತೀನಿ... ಫ್ಯಾಕ್ಟರೀಲಿ ನನ್ನ ಎದುರಿಗೇ ಒಂದು ಅಪಘಾತ ನಡೆದು ಹೋಯ್ತು...."

"ಅಪಘಾತಾನಾ?... ಮತ್ತೆ ಈ ರಕ್ತ?..."

"ಹೆಂಗಸೊಬ್ಬಳು ಯಂತ್ರದ ಚಕ್ರಕ್ಕೆ ಸಿಕ್ಕಿ ಬಿದ್ದು, ಅವಳ ದೇಹ ಕತ್ತರಿಸಿ ತುಂಡಾಯ್ತು... ಅಲ್ಲಿದ್ದವರ ಮೈ ಮೇಲೆ ರಕ್ತ ಸಿಡಿಯಿತು.... ನಾನು ಈ ಬಟ್ಟೆಗಳನ್ನ ಬಿಚ್ಚಿ ಸ್ನಾನ ಮಾಡಬೇಕು." ಶಾಸ್ತ್ರಿ ಬಚ್ಚಲು ಮನೆಯ ಕಡೆಗೆ ನಡೆದ. ಬಟ್ಟೆಗಳನ್ನು ಕಳಚಿದ.

"ಥೂ ನಿಮ್ಮ... ಈ ವೇಷದಲ್ಲಿ ನಿಮ್ಮನ್ನ ಯರಾದ್ರೂ ನೋಡಿದ್ರೆ ಏನು ಗತಿ?... ಮಧ್ಯರಾತ್ರೀಲಿ ರಕ್ತದ ಬಟ್ಟೆಗಳನ್ನ ಹೀಗೆ ಹಾಕ್ಕೊಂಡು ಯಾರಾದ್ರೂ

ಬರ್ತಾರಾ?... ಬೆಳಗಾಗುವವರೆಗೂ ನಿಮ್ಮ ತಮ್ಮನ ಮನೇಲಿದ್ದು ಬರ್ಬೇಕಾಗಿತ್ತು."

"ನಾನು ಹೀಗೆ ಅವರ ಮನೆಗೆ ಹೋಗಿದ್ದಿದ್ರೆ, ಅವನೂ ಹೆದರುತ್ತಿದ್ದ. ರಕ್ತ, ಮಾಂಸದ ತುಣುಕುಗಳು ಬಟ್ಟೆಯ ಮೇಲೆ ಮೆತ್ತಿಕೊಂಡಿದ್ದವು. ಮೇಲೆ ಮೇಲೆ ತಕ್ಷಣವೇ ತೊಳೆದುಕೊಂಡೆ."

"ಮೊದಲು ಈ ಬಟ್ಟೆಗಳನ್ನ ನೆನೆಸಿ... ಯಾವೋಳೋ ಎಂಥೋಳೋ. ಮೊದಲೇ ಬಿಳಿ ಬಟ್ಟೆ... ರಕ್ತದ ಕಲೆಗಳು, ಹೋಗುತ್ವೋ ಇಲ್ಲವೋ... ಎಷ್ಟು ಬಾರ್ ಸೋಪು ತಿಕ್ಕ ಬೇಕೋ?"

"ನೀನು ಗೊಣಗಬೇಡ. ತಲೆಗೆ ಒಂದಿಷ್ಟು ನೀರು ಹುಯ್ಯಿ. ಚೆನ್ನಾಗಿ ಸ್ನಾನ ಮಾಡಿ ಬರ್ತೀನಿ. ನೆನಸಿದ ಬಟ್ಟೆಗಳನ್ನ ಎಲ್ಲಿಡಲಿ!"

"ಅಲ್ಲೇ ಬಿದ್ದಿರ್ಲಿ... ಬೆಳಗಾದ ಮೇಲೆ ಅದರ ಅವಸ್ಥೇನ ನೋಡ್ತೀನಿ." ಎನ್ನುತ್ತ ಗಂಡನ ತಲೆಯ ಮೇಲೆ ಚೊಂಬಿನಿಂದ ನೀರನ್ನ ಸುರಿದಳು. ಸಾತಕ್ಕ ಗರಬಡಿದವಳಂತೆ ಕೂತಿದ್ದಳು. ಅಮಾವಾಸ್ಯೆಯ ದಿನಗಳು.. ಇವನಿಗೇ ಏನಾದ್ರೂ ಆಗಿದ್ದಿದ್ರೆ ಏನು ಮಾಡಬೇಕಾಗಿತ್ತು! ಗಡಿಯಾರದ ಕಡೆ ನೋಡಿದಳು. ಎರಡು ಗಂಟೆಯ ಸಮಯ ವಾಗಿತ್ತು. ಯಾವುದೋ ಹೆಂಗಸಿನ ದುರ್ಮರಣಕ್ಕೆ ಇವನು ಸಾಕ್ಷಿ... ಯಾಕೆ ಹೀಗಾಯ್ತು?"

ಸ್ನಾನ ಮಾಡಿ ಬಂದ ಶಾಸ್ತ್ರಿ, ಹಳೆಯ ಜನಿವಾರವನ್ನ ತೆಗೆದು ಹೊಸ ಜನಿವಾರವನ್ನ ಧರಿಸಿ, ಮೂರು ಆಚಮನ ಮಾಡಿ, ದೇವರಿಗೆ ತುಪ್ಪದ ದೀಪಗಳನ್ನು ಹಚ್ಚಿದ.... ಕೆಲವು ಸ್ತೋತ್ರಗಳನ್ನ ಹೇಳಿಕೊಂಡು, ದೇವರಿಗೆ ನಮಸ್ಕಾರವನ್ನ ಮಾಡಿ ಎದ್ದು ಬಂದ. ಲಕ್ಷ್ಮಿ ಬಿಸಿ ಬಿಸಿ ಕಾಫಿಯನ್ನ ಕೊಟ್ಟಳು. ಹೆಚ್ಚು ಮಾತಾಡದೇ ಶಾಸ್ತ್ರಿ ತನ್ನ ಹಾಸಿಗೆಯಲ್ಲಿ ಮಲಗಿದ.

"ಅಬ್ಬಾ... ನಿಮ್ಮ ಅಣ್ಣಂಗೆ ಅದೆಷ್ಟು ಧೈರ್ಯ? ಕಾಡು ದಾರಿಯಲ್ಲಿ, ರಕ್ತದ ವಾಸನೆಗೆ ಯಾವುದಾದ್ರೂ ಕಾಡು ಪ್ರಾಣಿಗಳು ಬಂದು ಹಿಡುಕೊಂಡಿದ್ರೆ ಏನ್ಮಾಡ್ತಿದ್ರು?..." ಆ ಆಲೋಚನೆಯೇ ಮೈಯನ್ನ ನಡುಗಿಸಿತ್ತು.

"ಏನೋ, ಗ್ರಹಚಾರ ಚೆನ್ನಾಗಿಲ್ಲ... ಇಲ್ದಿದ್ರೆ ಯಾಕೆ ಹೀಗಾಗ್ತಿತ್ತು?" ನಿದ್ದೆ ಹತ್ತದ ಶಾಸ್ತ್ರಿಗೆ ಅವರಿಬ್ಬರ ಸಂಭಾಷಣೆ ಕೇಳಿಸಿತ್ತು. ಕೆಲವೇ ಗಂಟೆಗಳ ಹಿಂದೆ ನಡೆದ ಅಪಘಾತ ಕಣ್ಣ ಮುಂದೆ ಗೋಚರಿಸುತ್ತಿತ್ತು... ಯಾಕೆ ಹೀಗಾಯಿತು?... ನೆನೆಪಿನ ಚಕ್ರ ಹಿಂದಕ್ಕೆ ತಿರುಗಿತ್ತು.

ಸುಮಾರು ರಾತ್ರಿ ಒಂಭತ್ತು ಗಂಟೆಯ ಸಮಯ. ಊಟ ಮಾಡಿ ಕಾರ್ಮಿಕರೆಲ್ಲ ತಮ್ಮ ತಮ್ಮ ಕೆಲಸಕ್ಕೆ ವಾಪಸ್ಸು ಬರುತ್ತಿದ್ದರು. ಶಾಸ್ತ್ರಿ ತನ್ನ ಕೈ ಕೆಳಗಿನ, ಹೊಸದಾಗಿ ಸೇರಿಕೊಂಡಿದ್ದ ಅಪ್ರೆಂಟಿಸ್‌ಗಳಿಗೆ ಸಕ್ಕರೆ ತಯಾರಾಗುವ ವಿಧಾನಗಳ ಬಗ್ಗೆ ವಿವರಣೆ

ನೀಡುತ್ತ ಆ ಜಾಗಕ್ಕೆ ಬಂದ. ಯಂತ್ರಗಳು ತಿರುಗುತ್ತಿದ್ದವ. ಇದ್ದಕ್ಕಿದ್ದಂತೆ ಕಟ ಕಟನೆ ವಿಚಿತ್ರ ಸದ್ದಿನೊಂದಿಗೆ, ರಕ್ತ, ಮಾಂಸದ ತುಣುಕುಗಳು ಮೈ ಮೇಲೆ ಎರಚಿದಂತಾಗಿತ್ತು. ಏನಾಯಿತೆಂದು ಅರ್ಥವಾಗುವಷ್ಟರಲ್ಲಿ ಒಬ್ಬ ಹೆಂಗಸು, ಯಂತ್ರದ ಭಾರಿ ಗಾತ್ರದ ಚಕ್ರಕ್ಕೆ ಸಿಕ್ಕಿ ಬಿದ್ದು ತುಂಡು ತುಂಡಾಗಿದ್ದಳು. ತಕ್ಷಣವೇ ಕರೆಂಟು ಸ್ವಿಚ್‌ಗಳನ್ನ ಅದುಮಿ ಯಂತ್ರಗಳ ಚಾಲನೆಯನ್ನ ನಿಲ್ಲಿಸಿದರು. ಸೈರನ್ ಕೂಗಿಸಿ, ಕೆಲಸವನ್ನ ಸ್ಥಗಿತಗೊಳಿಸಿದರು. ಆ ನಂತರ ತಕ್ಷಣಕ್ಕೆ ತನಿಖೆ ಪ್ರಾರಂಭವಾಗಿತ್ತು. "ಆ ಹೆಂಗಸು ಯಾರು? ಅಲ್ಲಿ ಯಾಕೆ ಇದ್ದಳು." ಎನ್ನುವುದನ್ನ ಪತ್ತೆ ಮಾಡಿದರು.

ಕಾರ್ಮಿಕನೊಬ್ಬನ ಪತ್ನಿ ಅವಳು. ಗಂಡನಿಗೆ ಊಟ ಕೊಡಲೆಂದು ಒಳಕ್ಕೆ ಬಂದವಳು, ಯಾರಿಗೂ ಕಾಣದಂತೆ ಸಕ್ಕರೆಯನ್ನ ಕದಿಯಲೆಂದು ಬಂದವಳು ಅಲ್ಲಿ ಅವಿತಿಟ್ಟುಕೊಂಡಿದ್ದಳು. ಶಾಸ್ತ್ರಿ ಮತ್ತು ಇತರರು ಬಂದಾಗ, ಮೈಯನ್ನ ಮುದುಡಿ ನಿಂತಿರಬೇಕು. ಆಗ ಅವಳ ಸೀರೆಯ ಸೆರಗು ಚಕ್ರಕ್ಕೆ ಸಿಕ್ಕಿ ಕ್ಷಣಮಾತ್ರದಲ್ಲಿ ಅವಳನ್ನ ಪೂರ ಎಳೆದುಕೊಂಡು ಈ ಅವಘಡ ನಡೆದಿತ್ತು. ರಕ್ತ ಚಿಮ್ಮಿತ್ತು. ದೇಹ ತುಂಡಾಗಿತ್ತು.

ಬಡತನ ಬಹಳ ಕೆಟ್ಟದ್ದು, ಆಸೆ ಮತ್ತೂ ಕೆಟ್ಟದ್ದು. ಕಳ್ಳತನ ಮಾಡುವ ಸಲುವಾಗಿ ಒಳಗೆ ನುಸುಳಿದ್ದ ಹೆಂಗಸು ತನ್ನ ಪ್ರಾಣವನ್ನೇ ತೆತ್ತಿದ್ದಳು. ಅವಳ ಗಂಡನಾಗಿದ್ದವನು ಎದೆ ಎದೆ ಬಡಿದುಕೊಂಡು ಅಳುತ್ತಿದ್ದ.

ಬಟ್ಟೆಗಳ ಮೇಲೆ ಹಾರಿದ್ದ, ಮಾಂಸದ ತುಣುಕುಗಳನ್ನು, ಎಲುಬಿನ ಚೂರುಗಳನ್ನು ಒರೆಸುವ ಬಟ್ಟೆಯಲ್ಲಿ ಒರೆಸಿಕೊಂಡು ಸ್ವಲ್ಪ ಹೊತ್ತಿನಲ್ಲೇ ಮನೆಗೆ ಹೊರಟಿದ್ದ. ಸೀದಾ ಮನೆಗೆ ಬಂದಿದ್ದ. ಇಂತಹ ಒಂದು ದುರಂತಕ್ಕೆ ತಾನು ಪ್ರತ್ಯಕ್ಷ ಸಾಕ್ಷಿಯಾಗಬೇಕಾಯಿತಲ್ಲ. ಈ ವ್ಯಥೆ ಶಾಸ್ತ್ರಿಯನ್ನ ಬಹಳವಾಗಿ ಕಾಡಿತು.

ಕಸ ಗುಡಿಸಲು, ನೆಲವನ್ನು ತೊಳೆದು ಒರೆಸಲು, ಹೆಂಗಸರನ್ನ ನೇಮಿಸಿಕೊಂಡಿದ್ದರು. ಅವರ ಕೆಲಸ ಏನಿದ್ದರೂ ದಿನದ ಸಮಯದಲ್ಲಿ. ಈ ಹೆಂಗಸು, ವಾಚ್‌ಮನ್‌ನ್ನ ಕಣ್ಣು ತಪ್ಪಿಸಿ, ಅಥವಾ ಅವನನ್ನ ಗೋಗರೆದು, ಗಂಡನಿಗೆ ಊಟ ಕೊಡುವ ನೆಪದಲ್ಲಿ ಒಳಕ್ಕೆ ಬಂದಿದ್ದಳೇನೋ.... ವಿಚಾರಣೆ ನಡೆಯುತ್ತದೆ. ಪೋಲೀಸ್ ಕಂಪ್ಲೆಂಟ್ ಕೊಡಬೇಕಾಗುತ್ತದೆ. ಅಪ್ರಾಮಾಣಿಕ ಹಾಗೂ ಬೇಜವಾಬ್ದಾರಿಯ ವಾಚಮನ್ ಸಸ್ಪೆಂಡ್ ಆಗಬಹುದು. ಕಾರ್ಮಿಕನನ್ನೂ ತೆಗೆದು ಹಾಕಬಹುದು. ಕಾರ್ಮಿಕ ವರ್ಗದವರಿಗೆ ಕೆಲವು ನಿಬಂಧನೆಗಳಿರುತ್ತವೆ. ಕಾರ್ಮಿಕ ಯೂನಿಯನ್, ಸದಸ್ಯರು ವಿರೋಧಿಸಬಹುದು. ಗಲಭೆಯಾಗಬಹುದು. ಪ್ರತಿಭಟಿಸಬಹುದು. ಪೋಲೀಸ್ ಕೇಸ್ ಆಗಬಹುದು. ತಾನೂ ಕೋರ್ಟಿಗೆ ಹೋಗಬೇಕಾಗಿ ಬರಬಹುದು... ಈ ಕೃತ್ಯದಲ್ಲಿ ತಾನು ಮುಖ್ಯವಾದ ಸಾಕ್ಷಿಯಾಗಬೇಕಾಗಿ ಬಂತಲ್ಲ... ಈ ವಿಷಯ

ಕೊರೆಯಲಾರಂಭಿಸಿತು. ತಾನು ಮತ್ತೆ ಕೆಲಸಕ್ಕೆ ಸೇರಿದ್ದು ಅನುಚಿತವಾಯಿತೇನೋ ಅಂತ ಅಂದುಕೊಂಡ. ಆದರೆ ಈಗ ತಕ್ಷಣಕ್ಕೆ ಬಿಡುವಂತಿಲ್ಲ.

ವೆಂಕಟಾಚಲಯ್ಯನನ್ನು ಕಂಡಾಗ, ಈ ವಿಷಯಗಳನ್ನ ಕುರಿತು ಮಾತನಾಡಿದ. ಈಗ ನನ್ನ ಜವಾಬ್ದಾರಿ ಹೆಚ್ಚಿತು ಅಂತ ಪೇಚಾಡಿಕೊಂಡ.

"ನೀವು ಧೈರ್ಯವಂತರು ಕಣಪ್ಪಾ... ಕಾಡು ಪ್ರಾಣಿಗಳಿಗೇ ಅಂಜೋರಲ್ಲ; ಇನ್ನೂ ನಾಡು ಪ್ರಾಣಿಗಳಲ್ಲಿ ಅಂಜಿಕೆ ಏಕೆ?" ಹೊಗಳುವವನಂತೆ ಹೇಳಿದ.

"ಹಾಗಲ್ಲ ವೆಂಕಟಾಚಲಯ್ಯ, ಮನಸ್ಸು ಕೆಟ್ಟು ಹೋಗಿದೆ... ಮರೆಯುಕ್ಕೆ ಆಗ್ತಿಲ್ಲ"

"ಇಷ್ಟೊಂದು ಮನಸ್ಸಿಗೆ ಹಚ್ಚಕೋ ಬಾರ್ದು ಶಾಸ್ತ್ರಿ.... ಕಾಲ ಎಲ್ಲವನ್ನ ಮರೆಸುತ್ತೆ. ಐದು ವರ್ಷಗಳಿಂದ ಈ ಗ್ರಾಮ ಪಂಚಾಯ್ತಿಯ ಛೇರ್‌ಮನ್ ಆಗಿ ಕೆಲಸ ನಿರ್ವಹಿಸುತ್ತಿದೀನಿ. ಎಂತೆಂಥ ಜಗಳ, ಹೊಡೆತ ಬಡೆತಗಳನ್ನು ಕೇಳಿದೀನಿ. ನ್ಯಾಯವನ್ನ ಕೊಡಿಸಿದೀನಿ. ನನ್ನನ್ನ ಕಂಡರೆ ಆಗದೇ ಇರೋ ಜನ ಬೇಕಾದಷ್ಟು ಇದಾರೆ... ನಾನು ಆ ಬಗ್ಗೆ ಎಂದೂ ಮನಸ್ಸನ್ನ ಕೆಡಿಸಿಕೊಂಡಿಲ್ಲ. ನಿನ್ನ ಕಂಠಿ ಭಾವ ಎಂಥೋರು ಅಂತ ನಿನಗೇ ಗೊತ್ತಲ್ಲ.... ಅಂದ್ಹಾಗೇ ಮುಂದಿನ ಛೇರ್‌ಮನ್ ಆಗಿ ಕಾರ್ಯ ನಿರ್ವಹಿಸುವವರು ನೀವು ಕಲ್ಲೆದೆ ಬೇಕು...." ಎದೆಯನ್ನ ತಟ್ಟಿದ.

"ಅಂಥದ್ದೆಲ್ಲಾ ನಿಮಗೇ ಸರಿ ವೆಂಕಟಾಚಲಯ್ಯ... ನೀವು ಹಳಬರು ಎಷ್ಟೋ ವರ್ಷಗಳಿಂದ ಇಲ್ಲೇ ವಾಸವಾಗಿರೋರು. ಎಲ್ಲರನ್ನ ಅರಿತಿದೀರಪ್ಪಾ...

"ಏನಪ್ಪಾ ನಿಮ್ಮ ಮಾತಿನ ಅರ್ಥ? ಈ ಹಳ್ಳಿ ಬರೀ ನನ್ನೊಬ್ಬನದೇ ಅಲ್ಲ. ಇಲ್ಲಿ ವಾಸವಾಗಿರೋರಿಗೆಲ್ಲಾ ಸೇರಿದ್ದು. ಅದ್ಸರಿ... ನೀವೂ ನಿಮ್ಮ ಕಂಠಿ ಭಾವನತರಹ, ಈ ಹಳ್ಳಿಯನ್ನೇ ಬಿಟ್ಟು ಹೋಗುವ ತೀರ್ಮಾನ ತಗೊಂಡಿಲ್ಲ ತಾನೇ?"

"ಸಧ್ಯಕ್ಕೆ ಏನನ್ನೂ ತೀರ್ಮಾನಿಸಿಲ್ಲ. ಸುಮ್ಮನೇ ಮಾತಿಗೆ ಹೇಳ್ದೆ..."

ಎಲ್ಲೋ ಮನದ ಮೂಲೆಯಲ್ಲಿ ಆ ಆಲೋಚನೆಯೂ ಇದೆ ಅನ್ನೋ ಸೂಚನೆ ನಿಮ್ಮ ಮಾತಿನಲ್ಲಿದೆ. ನಿಮ್ಮ ಭಾವನ ಮಾತನ್ನ ಕೇಳ್ಕೊಂಡು ಈ ಹಳ್ಳಿಗೆ ಬಂದು ಸೇರ್ಕೊಂಡ್ರಿ, ಹಳ್ಳಿಯ ಜೀವನ ಸುಲಭ ಅಲ್ಲ ಅನ್ನೋ ಅನುಭವ ನಿಮಗೆ ಈಗಾಗ್ಲೇ ಆಗಿದೆ. ಅಲ್ದೇ ನೀವಿರೋ ಜಾಗಕ್ಕೆ ಸಕ್ಕರೆ ಕಾರ್ಖಾನೆ ನಿಮ್ಮನ್ನ ಹುಡುಕಿಕೊಂಡು ಬಂದಿದೆ. ಮತ್ತೆ ನಿಮ್ಮನ್ನು ಆ ಕೆಲಸ ಆಕರ್ಷಿಸಿದೆ. ನಿಮ್ಮ ವಿದ್ಯೆ, ಜ್ಞಾನ ಅನುಭವ ಆ ಉದ್ಯೋಗಕ್ಕೆ ಹೇಳಿ ಮಾಡಿಸಿದ್ದು. ಈ ವ್ಯವಸಾಯಕ್ಕೆ ಅಲ್ಲ. ಹೌದು ತಾನೇ....? ನನಗೆ? ನನಗೆ ಈ ಕೃಷಿ ಬಿಟ್ಟು ಬೇರೆ ಏನೂ ತಿಳಿಯದು. ನಮ್ಮಂಥೋರು ಹಳ್ಳಿಯಲ್ಲೇ ಬೆಳೀಬೇಕು. ಹಳ್ಳಿಯಲ್ಲೇ ಬಾಳಬೇಕು. ಇದನ್ನ ಬಿಟ್ಟರೆ ಬೇರೆ ಜೀವನ ಗೊತ್ತಿಲ್ಲ. ಹಾಗಂತ ನನಗೆ ಯಾವ ಬೇಸರವೂ ಇಲ್ಲ ಬಿಡಿ. ಇದು ನನ್ನ ಸ್ವಂತ ಆಯ್ಕೆ. ಯಾರ ಸಲಹೆಯ ಮೇರೆಗೆ ಇಲ್ಲಿಗೆ ಬಂದಿಲ್ಲ... ಕಡೇ

ವರ್ರ್ಗೂ ಇಲ್ಲಿಯೇ ಇರ್ತೀನಿ." ಒಂದೇ ಸಮನೆ ಹೇಳಿ ನಿಲ್ಲಿಸಿದ.

"ಯಾಕಪ್ಪ ಇಷ್ಟು ಖಾರವಾಗಿ ಮಾತನಾಡ್ತಿದೀರೀ?... ನನ್ನನ್ನ ಅಪರೋಕ್ಷವಾಗಿ ದೂಷಿಸುತ್ತಿರುವಂತಿದೆ."

"ನಾನ್ಯಾರು ನಿಮ್ಮನ್ನ ದೂಷಿಸುಕ್ಕೆ? ನೀವು ಸಂಸಾರ ಸಮೇತನಾಗಿ ಇಲ್ಲಿ ಬಂದು ನೆಲೆಸಿದಾಗ ನನಗೆ ಬಹಳಾನೇ ಖುಷಿ ಆಯ್ತು. ವಿದ್ಯಾವಂತ, ತಿಳುವಳಿಕಸ್ಥ ನಿಮ್ಮಂಥೋರಿಂದ ಈ ಹಳ್ಳಿಯ ಉದ್ಧಾರಕ್ಕೆ ಸಹಾಯ ಆಗುತ್ತೆ ಅಂತ ಅಂದ್ಕೊಂಡೆ. ಆದರೆ... ಈಗ ನಿಮ್ಮ ಮಾತಿನ ವರಸೆಯನ್ನ ನೋಡಿದರೆ.... ಒಂದು ಕಾಲನ್ನ ಆಗಲೇ ಹೊರಗೆ ಇಟ್ಟಾಗಿದೆ ಅಂತ ಅನ್ನಿಸ್ತಿದೆ."

"ಸಧ್ಯಕ್ಕೆ ಹಾಗೇನಿಲ್ಲಪ್ಪಾ. ಸಕ್ಕರೆ ಕಾರ್ಖಾನೆಯವರು, ಅವರಾಗಿಯೇ ಕರೆದು ನನಗೆ ಕೆಲಸ ಕೊಟ್ಟಿರುವುದು ನಿಜ. ಇದರಿಂದ ನನ್ನ ಆರ್ಥಿಕ ಮಟ್ಟ ಸುಧಾರಿಸಿರು ವುದೂ ಅಷ್ಟೇ ನಿಜ. ನಾನೂ ಸಂಸಾರಸ್ಥ. ಮಕ್ಕಳೊಂದಿಗ... ಸಾಲಗಾರ... ನನಗೆ ಹಣದ ಅಡಚಣೆ ಇದೆ. ಅವಶ್ಯಕತೆ ಇದೆ. ಅದು ತಪ್ಪು ಅಂತ ಅಂತೀರಾ?..."

"ತಪ್ಪು ಅಂತ ನಾನೆಲ್ಲಿ ಹೇಳಿದೆ? ನನಗೆ ಅನ್ನಿಸಿದ್ದನ್ನ ನೇರವಾಗಿ ಹೇಳಿದೆ. ನೀವೂ ಜವಾಬ್ದಾರಿ ಉಳ್ಳವರು. ನಿಮಗೆ ಸರಿ ಅನ್ನಸಿದ್ದನ್ನ ಮಾಡುವ ಸಂಪೂರ್ಣ ಸ್ವಾತಂತ್ರ್ಯ ನಿಮಗಿದೆ. ನನ್ನಿಂದ ಏನಾದ್ರೂ ಸಹಾಯ ಬೇಕಾಗಿದ್ರೆ ಸಂಕೋಚವಿಲ್ಲದೇ ಕೇಳಿ..." ವೆಂಕಟಾಚಲಯ್ಯ ಶಾಸ್ತ್ರಿಯ ಬೆನ್ನು ತಟ್ಟಿದ.

"ಆಪ್ತ ಅಂತ ಸಲಹೆ ಕೇಳಿದರೆ, ತಲೇನೇ ಕೆಡಿಸಿಬಿಟ್ಟಿದ್ರಲ್ಲಪ್ಪಾ..." ಎನ್ನುತ್ತ ತನ್ನ ಜೇಬಿನಿಂದ ತಂಬಾಕಿನ ಚೀಲವನ್ನ ತೆಗೆದ.

"ಈ ಸ್ನೇಹಿತನ್ನ ಯಾವಾಗಲೂ ಮರೆಯಲಾಗದಂಥ ಕೆಟ್ಟ ಚಟವನ್ನೂ ಹಚ್ಚಿಸಿ ಬಿಟ್ಟಿದೀನಲ್ಲಪ್ಪಾ... ನಿಮ್ಮ ಹೆಂಡ್ತಿ ಮಕ್ಕಳು ನನ್ನನ್ನ ಬೈದುಕೊಳ್ಳುವುದಂತೂ ನಿಜ..." ಶಾಸ್ತ್ರಿ ನಕ್ಕು ತಂಬಾಕನ್ನೂ ಅವನಿಗೂ ಕೊಟ್ಟು, ತಾನೂ ಬಾಯಿಗೆ ಹಾಕಿಕೊಂಡ.

"ತಂಬಾಕಿನ ರಸ ಬಟ್ಟೆ ಮೇಲೆ ಬಿದ್ದು ಬಟ್ಟೆಗಳೆಲ್ಲಾ ಕರೆಯಾಗಿದೆ. ಅಂತ ಸದಾ ಕಿರಿಕಿರಿ ಮಾಡ್ತಾನೇ ಇರ್ತಾಳೆ... ನಾನು ಮಾತನ್ನೇ ಆಡಲ್ಲ ಯಾಕೆ ಗೊತ್ತಾ?..."

"ನೀವು ನಿಮ್ಮ ಶ್ರೀಮತಿಗೆ ಹೆದರ್ತೀರೇನೋ ಅದಕ್ಕೆ..."

"ಅಲ್ಲ, ಬಾಯಲ್ಲಿ ತಂಬಾಕು ಇರುತ್ತಲ್ಲ... ಮಾತಾಡುಕ್ಕೆ, ಬೈಯುಕ್ಕೆ ಎಲ್ಲ ಆಗುತ್ತೆ?" ತಲೆ ಎತ್ತಿ ಆಕಾಶದ ಕಡೆ ನೋಡಿಕೊಂಡು ನುಡಿದ. ವೆಂಕಟಾಚಲಯ್ಯ ನಗುತ್ತ ಮತ್ತೆ ಶಾಸ್ತ್ರಿಯ ಬೆನ್ನು ತಟ್ಟಿದ.

* * *

ಫ್ಯಾಕ್ಟರಿಯಲ್ಲಿ ಆ ರಾತ್ರಿ ನಡೆದ ದುರ್ಘಟನೆಯ ಕೇಸಿನ ತನಿಖೆ ಪ್ರಾರಂಭ

ವಾಗಿತ್ತು. ಕಣ್ಣಾರೆ, ನಡೆದ ಘಟನೆಯನ್ನ ಕಂಡವರೆಲ್ಲ ತಮ್ಮ ತಮ್ಮ ಹೇಳಿಕೆಯನ್ನ ಕೊಟ್ಟಿದ್ದರು. ಈ ಸಂಬಂಧವಾಗಿ ಶಾಸ್ತ್ರಿ ಒಂದೆರಡು ಬಾರಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಬರಬೇಕಾಯಿತು. ಕಾರ್ಮಿಕರ ಸಂಘದ ಅಧ್ಯಕ್ಷ, ಕೆಲಸದಿಂದ ತೆಗೆದು ಹಾಕಿದವರನ್ನ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು, ಸತ್ತ ಹೆಂಗಸಿನ ಗಂಡಂಗೆ ಪರಿಹಾರ ಧನವನ್ನ ಕೊಡಬೇಕೆಂದು ಒತ್ತಾಯ ಮಾಡಿ ಮುಷ್ಕರ ನಡೆಸಿದ. ಫ್ಯಾಕ್ಟರಿಯ ಆಡಳಿತ ವರ್ಗದವರು ನಡೆಸಿದ ತುರ್ತು ಮೀಟಿಂಗ್‌ನಲ್ಲಿ, ಅವರಿಬ್ಬರನ್ನೂ ಕೆಲಸಕ್ಕೆ ವಾಪಸ್ಸು ಸೇರಿಸಿಕೊಳ್ಳಬೇಕೆಂದು ತೀರ್ಮಾನವಾಯಿತು. ಆದರೆ ಆ ಹೆಂಗಸಿನದೇ ತಪ್ಪಿದ್ದುದರಿಂದ ಯಾವ ಹಣವನ್ನ ಕೊಡಬೇಕಾಗಿಲ್ಲ ಎಂದು ನಿರ್ಧರಿಸಿದರು. ಅದುವರೆಗೆ ಹೊರಗಿನ ಕೆಲಸಕ್ಕೆ ಬರುತ್ತಿದ್ದ ಹೆಂಗಸರನ್ನ ತೆಗೆದು ಹಾಕಿ ಅವರ ಬದಲಿಗೆ ಗಂಡಾಳುಗಳನ್ನೇ ನೇಮಿಸಿಕೊಂಡರು.

ಈ ಸಮಯದಲ್ಲಿ, ತಾನು ಎರಡೆರಡು ಕಡೆಯೂ ಓಡಾಡಿಕೊಂಡು ಕೆಲಸವನ್ನ ನಿರ್ವಹಿಸಲು ಸಾಧ್ಯವಿಲ್ಲವೆಂದು ಶಾಸ್ತ್ರಿಗೆ ಮನವರಿಕೆ ಆಯಿತು. ಫ್ಯಾಕ್ಟರಿಯ ಜನರಲ್ ಮ್ಯಾನೇಜರ್ ಹತ್ತಿರ ಮಾತನಾಡಿ, ತನಗೆ ಬಿಡುಗಡೆ ಕೊಡಬೇಕೆಂದು ಕೇಳಿಕೊಂಡ. "ಕಬ್ಬು ಅರೆಯುವ ಕೆಲಸ ಮುಗಿಯದೇ ಯಾವುದನ್ನ ಕಾರ್ಯಗತ ಮಾಡಲಾಗುವುದಿಲ್ಲ. ಅಲ್ಲದೇ ನಿಮ್ಮಂಥ ಅನುಭವೀ, ಕೆಮಿಸ್ಟ್‌ರ ಅಗತ್ಯ ನಮಗೆ ಹೆಚ್ಚಾಗಿದೆ. ನಾವು ನಿಮ್ಮನ್ನ ವರ್ಷಪೂರ್ತಿ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೇವೆ. ನಿಮ್ಮ ಸಂಬಳವನ್ನ ಹೆಚ್ಚು ಮಾಡುತ್ತೇವೆ." ಆಡಳಿತ ಮಂಡಳಿಯವರು ಆಮಿಷ ಒಡ್ಡಿದರು. ಶಾಸ್ತ್ರಿ ಸಂಧಿಗ್ಧಕ್ಕೆ ಸಿಕ್ಕಿ ಬಿದ್ದ.

"ನನಗೆ ಯೋಚಿಸಕ್ಕೆ ಸಮಯಬೇಕು. ಗದ್ದೆ ತೋಟದ ಕೆಲಸಗಳೂ ಪೂರೈಸ ಬೇಕು. ನಾನು ಈಗಲೇ ಏನನ್ನ ಹೇಳಕ್ಕಾಗಲ್ಲ" ಅಂತ ಹೇಳಿ ಸಮಯವನ್ನು ತೆಗೆದುಕೊಂಡ. ಈಶ್ವರನ ದೇವಸ್ಥಾನದ ವಾರ್ಷಿಕೋತ್ಸವಕ್ಕೆ ಬಂದಿದ್ದ, ನಾಗಪ್ಪ ಭಟ್ಟರ ಕಡೆಯ, ಅನುಭವೀ ಜ್ಯೋತಿಷಿಗಳಿಗೆ ತನ್ನ ಜಾತಕವನ್ನ ತೋರಿಸಿದ.

"ನನ್ನ ಮನಸ್ಸು ಇಬ್ಬಗೆಯಾಗಿದೆ. ನನಗೆ ಈ ವ್ಯವಸಾಯದಿಂದ ಅನುಕೂಲವೋ, ಅಥವಾ ಉದ್ಯೋಗದಿಂದ ಅನುಕೂಲವೋ ಹೇಳಬೇಕು' ಅಂತ ಕೇಳಿಕೊಂಡ. ಅವರು ಕೂಲಂಕಷವಾಗಿ ಜಾತಕವನ್ನೂ ಪರಿಶೀಲಿಸಿದರು.

"ಈಗ ನಿಮಗೆ ಶುಕ್ರದೆಸೆ ಪ್ರಾರಂಭವಾಗಿದೆ. ಏಳರಾಟೆ ಶನಿಕಾಟವೂ ಮುಗಿಯ ಲಿದೆ. ಈಗ ನಿಮ್ಮ ರಾಶಿಯವರಿಗೆ ಸ್ಥಳ ಬದಲಾವಣೆ ಆಗುವ ಎಲ್ಲಾ ಸೂಚನೆಗಳಿವೆ. ಅದನ್ನ ಸದುಪಯೋಗ ಪಡಿಸಿಕೊಳ್ಳುವುದರಲ್ಲಿ ನಿಮ್ಮ ಜಾಣತನ ಅಡಗಿದೆ. ಕೈಗೆ ಸಿಕ್ಕಿರುವುದನ್ನ ಬಿಡಬೇಡಿ." ಎಂದು ಹೇಳಿದರು. ಆದರೂ ಶಾಸ್ತ್ರಿಗೆ ಸಮಾಧಾನ ವಿರಲಿಲ್ಲ. ಸಾತಕ್ಕನೊಡನೆ ತನ್ನ ಆತಂಕವನ್ನ ಹೇಳಿಕೊಂಡ.

"ನಾನು ಅವತ್ತೇ ಹೇಳಿದ. ಮಕ್ಕಳು ಹುಟ್ಟಿದ ಘಳಿಗೆ ಪ್ರಶಸ್ತವಾಗಿದೆ ಅಂತ. ಎಲ್ಲಾ ತಾನಾಗಿಯೇ ಒದ್ದುಕೊಂಡು ಬಂದಿದೆ. ಕೈತುಂಬಾ ಸಂಬಳ ಸಿಗುತ್ತೆ. ಸಾಲಗಾರನಾಗಿ, ಆದಾಯಕ್ಕಾಗಿ ಶ್ರಮಪಡುವ ಈ ಕೃಷಿಗಿಂತ, ನಿನ್ನ ವಿದ್ಯೆಗೆ ತಕ್ಕಂತೆ ಉದ್ಯೋಗಸ್ಥನಾಗಿರುವುದು ಮೇಲು ಅಂತ ನಂಗೂ ಅನ್ನಿಸುತ್ತೆ... ಇಷ್ಟರ ಮೇಲೆ ನಿನ್ನಿಷ್ಟ. ನಾನು ಯಾವುದಕ್ಕೂ ಬಲವಂತ ಮಾಡಲ್ಲ."

"ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಮಾತಾಡ್ತೀಯಲ್ಲ ಸಾತು. ಸರಿಯಾಗಿ ಒಂದ್ಮಾತು ಹೇಳ್ಬಾರ್ದಾ?... ಈ ಹಳ್ಳಿಯಿಂದ ಹೋಗಲೇ ಬೇಕಾ?"

"ಈ ಹಳ್ಳೀಲೇ ಇರ್ತೀನಿ ಅಂತ ನೀನು ಯಾರಿಗೂ ಬರೆದುಕೊಟ್ಟಿಲ್ಲ, ನೆಲದ ಋಣ, ನೀರಿನ ಋಣ ಎಲ್ಲಿ ಇರುತ್ತೋ ಅಲ್ಲಿಗೆ ವಿಧಿ ಎಳೆದುಕೊಂಡು ಹೋಗುತ್ತೆ. ಯೋಚಿಸಿ ಕೆಡಬೇಡ ಸುಮ್ಮನಿರು."

"ನಾನು ನಿಮ್ಮನ್ನೆಲ್ಲಾ ಈ ಹಳ್ಳಿಗೆ ಕರೆತಂದಾಗ, ನಿಮ್ಮೆಲ್ಲರಿಗೂ ನನ್ನ ಮೇಲೆ ಅಸಮಾಧಾನವಿತ್ತು. ಈಗ್ಯಾಕೆ ಹೀಗೆ ಮಾತಾಡ್ತೀಯ?... ಲಕ್ಷ್ಮಿಯಂತೂ ಹಗಲು ರಾತ್ರಿ ನನ್ನನ್ನ ಬೈದಿದಾಳೆ."

"ಅವಳನ್ನೂ ದೂಷಿಸಬೇಡ. ಅವಳ ಬೈಗುಳಕ್ಕೂ ಅರ್ಥವಿದೆ. ಇಲ್ಲಿ ಅವಳಿಗೆ ಏನು ಸುಖ ಸಿಕ್ತು ನೀನೇ ಹೇಳು. ಎಲ್ಲಾ ಅನುಕೂಲವಿದ್ದ ಊರನ್ನೂ ಬಿಟ್ಟು ಇಂಥ ಕುಗ್ರಾಮಕ್ಕೆ ಬಂದು ಬಿದ್ದರೆ, ಯಾರಿಗೆ ಬೇಸರವಾಗುಲ್ಲ? ನೀನೂ ಸುಖವಾಗಿರಲಿಲ್ಲ."

"ನಿನ್ನ ಮಾತು ನನಗೆ ಅರ್ಥವಾಯಿತು. ಲಕ್ಷ್ಮಿಗೆ ಈಗಲೇ ಏನನ್ನ ಹೇಳಬೇಡ. ಅವಳ ಚುಚ್ಚು ಮಾತುಗಳನ್ನ ನಾನು ಕೇಳಲಾರೆ..." ಸಾತಕ್ಕ ಮುಗುಳ್ನಕ್ಕಳು.

"ಅವಳು ನಿನ್ನ ಪತ್ನಿ. ಅವಳಿಗೆ ತಿಳಿಸದೇ ಯಾವುದನ್ನ ನಿರ್ಧರಿಸಬೇಡ. ಇವತ್ತೇ ಹೇಳು ಅಂತ ಹೇಳಲ್ಲ. ಆದರೆ ನೀನೇ ಅವಳ ಹತ್ತಿರ ಮಾತನಾಡಿದರೆ ಅವಳಿಗೂ ಖುಷಿಯಾಗುತ್ತದೆ." ಶಾಸ್ತ್ರಿ ಏನನ್ನೂ ಆಡದೇ ಅಲ್ಲಿಂದ ಕದಲಿದ.

ಕಡೆಗೂ ಶಾಸ್ತ್ರಿಯೇ ಒಂದು ನಿರ್ಧಾರಕ್ಕೆ ಬಂದ. ಈ ಜಮೀನು, ಈ ಮನೆ ಯಾವುದೂ ಪಿತ್ರಾರ್ಜಿತವಾಗಿ ಬಂದದ್ದಲ್ಲ. ತಾನಾಗಿಯೇ ಒದಗಿ ಬಂದದ್ದು. ಮುಂದೆ ಈ ಆಸ್ತಿ ಪಾಸ್ತಿಯನ್ನು ಗಂಡುಮಕ್ಕಳು ಅಭಿವೃದ್ಧಿ ಪಡಿಸುತ್ತಾರೆ ಅಂತ ನಂಬುವುದು ಕಷ್ಟ. ಗಂಡು ಮಕ್ಕಳಿಬ್ಬರೂ ಚಿಕ್ಕವರು. ಇನ್ನು ನಾಲ್ಕು ಜನ ಹೆಣ್ಣು ಮಕ್ಕಳ ಮದುವೆ ಮಾಡುವಷ್ಟರಲ್ಲಿ ಇನ್ನು ಸಾಲಗಾರನಾಗಬಹುದು. ಈ ಆಸ್ತಿಯೂ ಕೈ ಬಿಟ್ಟು ಹೋಗಬಹುದು. ಗಂಡು ಮಕ್ಕಳು ಓದಿ ವಿದ್ಯಾವಂತರಾಗಿ, ಒಳ್ಳೆಯ ನೌಕರಿಯಲ್ಲಿ, ಸಂಪಾದಿಸಲಿ. ವಿದ್ಯೆ ಎನ್ನುವ ಆಸ್ತಿಗಿಂತ ಬೆಲೆ ಬಾಳುವ ಆಸ್ತಿ ಬೇರೆ ಇಲ್ಲ. ನಾನು ಓದಿದ ವಿದ್ಯೆ, ಗಳಿಸಿದ ಅನುಭವ ಈಗ ನನಗೆ ಸಹಾಯಕವಾಗಿದೆ. ಮಳೆ ಇದ್ದರೆ ಬೆಳೆ... ಇಲ್ಲಿ; ತಿಂಗಳ ಕೊನೆಯಲ್ಲಿ ಕೈ ಮೇಲೆ ಸಂಬಳ ಅಲ್ಲಿ...

ನನ್ನಂಥ ಮಕ್ಕಳೊಂದಿಗನಿಗೆ ಅದೇ ಸರಿ... ಅದೇ ದಿನ ಪಟೇಲರ ಹತ್ತಿರ ಮಾತನಾಡಿದ... ತಾನು ಪೇಟೆಗೆ ಹೋಗುತ್ತಿರುವುದಾಗಿ ತಿಳಿಸಿದ.

"ಇದೇನು ಗುಂಡಪ್ನೋರೆ... ಒಂದೂ ಸೂಚನೆ ಕೊಡದೆ, ನೀವೇ ಎಲ್ಲಾ ನಿರ್ಧರಿಸಿದ ಹಾಗಿದೆ. ಈಗ ಬಂದು ಹೇಳ್ತಿದೀರಲ್ಲ. ಈ ಪಟೇಲ ಇಷ್ಟು ಬೇಗ ಹೊರಗಿನವಾಗಿಬಿಟ್ನಾ?" ಆಕ್ಷೇಪಣೆ ಮಾಡಿದರು, ನಿಂದನೆ ಇರಲಿಲ್ಲ.

"ಏನೋ ಪಟೇಲರೆ... ಏನೇನೋ ಆಗಿಹೋಯ್ತು. ಕೋರ್ಟು ಕಛೇರಿ ಅಲೆಯಬೇಕಾಗಿ ಬಂತು. ಬಟ್ಟೆ ಮೇಲೆ ರಕ್ತ, ಮಾಂಸ ಸಿಡಿಸಿಕೊಂಡು ಬಂದಾಗ್ನಿಂದ ಒಂದೇ ಗೋಳು, ರಾತ್ರಿ ಹೊತ್ತು ಸೈಕಲ್ ಮೇಲೆ ಒಬ್ಬರೇ ಓಡಾಡ್ಬೇಡಿ ಅಂತ... ಮನೆಯವರಿಗೆಲ್ಲಾ ಭಯ ಹತ್ತಿಕೊಂಡು ಬಿಟ್ಟಿದೆ.... ಪೇಟೇಲೇ ಮನೆ ಮಾಡಿ... ಅಂತಾರೆ."

"ಅಂದ್ರೇ ಹಳ್ಳೀನ ಬಿಟ್ಟು ಹೋಗೋದು ಅಂತ ನಿರ್ಧರಿಸಿದ್ದಾಗಿದೆ..."

"ನಿರ್ಧಾರ ಏನೋ ಆಗಿದೆ. ಆದರೆ ಪೂರ್ತಿ ಕೈ ತೊಳ್ಕೊಳ್ಳದೇ ಹೇಗೆ ಹೋಗಕ್ಕೆ ಆಗುತ್ತೆ? ಮನೆ, ದನಕರು, ಜಮೀನು ತೋಟ ಎಲ್ಲದಕ್ಕೂ ಒಂದು ದಾರಿ ಆಗಬೇಕಲ್ಲ ಪಟೇಲರೆ...."

"ಅಲ್ಲಾ ಗುಂಡಪ್ನೋರೆ... ಈಗಲೂ ನಿಮ್ಮ ಭಾವ ಶ್ರೀಕಂಠಪ್ನೋರು ಏನಾದ್ರೂ ಕಿತಾಪತಿ ಮಾಡಿರ್ಬಹುದಾ ಅಂತ ನಂಗೆ ಅನುಮಾನ... ಅವರೂ ಹೋದ್ರು..."

"ಇಲ್ಲ ಪಟೇಲರೆ, ಹಾಗೇನಿಲ್ಲ. ಆಗ ನನಗೆ ಯಾವ ಮುಂದಾಲೋಚನೆಯೂ ಇರಲಿಲ್ಲ. ಭಾವ ಹೇಳಿದ ಮಾತಿಗೆ ಹೂಂ ಅಂದಿದ್ದೆ. ಈಗ ಈ ಹಳ್ಳಿಗೆ ಬಂದಮೇಲೆ ಸಾಕಷ್ಟು ಅನುಭವ ಆಗಿದೆ. ಜೀವನ ಪಾಠ ಕಲಿಸಿದೆ... ಮಕ್ಕಳಿಗೆ ಮದುವೆ ಮಾಡಬೇಕು. ಗಂಡುಮಕ್ಕಳನ್ನ ಓದಿಸಬೇಕು. ನಮ್ಮಂಥೋರನ್ನ ವಿದ್ಯೆ ಕಾಪಾಡುತ್ತದೆ. ಮಾರ್ಗ ತೋರುತ್ತದೆ, ಅನ್ನೋ ಅರಿವಾಗಿದೆ."

"ನೀವು ತಿಳುವಳಿಕಸ್ಥರು. ಯಾರನ್ನೂ ಬಲವಂತದಿಂದ ಹಳ್ಳಿಗಳಲ್ಲಿ ಕಟ್ಟಿ ಹಾಕಕ್ಕೆ ಆಗಲ್ಲ. ನನ್ನ ಕಿರಿಮಗನೇ ನನ್ನ ಕೈಗೆ ಸಿಗದೇ ಎಲ್ಲೆಲ್ಲೋ ಅಲೆದಾಡಿಕೊಂಡಿದಾನೆ. ಮಕ್ಕಳಿಲ್ಲ. ಜವಾಬ್ದಾರಿ ಕಡಿಮೆ... ನಾವುಗಳು ಇರೋವರ್ಗೂ ಗೌಡರು ಅನ್ನೋ ಪಟ, ಆಮೇಲೆ ಏನೋ... ಶಿವನೇ ಬಲ್ಲ..."

"ಗೌಡ್ರೇ... ಈಗ್ಲೂ ನಾನು ಹಳ್ಳಿಯ ಸಂಬಂಧಾನ ಪೂರಾ ಕಡ್ಕೊಂಡು ಹೋಗ್ತಿಲ್ಲ... ಕೆಲವು ವರ್ಷಗಳು ವಾಸಮಾಡಿದ ಸ್ಥಳ ಇದು. ಇದನ್ನ ಮರೀತೀನ್ಯೆ? ಆಗ ಈಗ ಬರ್ತಿರ್ತೀನಿ. ಜಮೀನನ್ನೂ ಗುತ್ತಿಗೆಗೆ ಕೊಡೋಣ ಅಂತಿದೀನಿ. ತೋಟಾನ ಮಾರಿ ಬಿಡ್ತೀನಿ. ನನ್ನ ಪಾಲಿನ ಭತ್ತಾನ ಅಳೆಸಿಕೊಳ್ಳೋಕ್ಕಾದ್ರೂ, ಸುಗ್ಗಿಯ ಕಾಲದಲ್ಲಿ ಬಂದೇ ಬರಬೇಕಲ್ಲ..." ಶಾಸ್ತ್ರಿ ನಸುನಕ್ಕ. ಪಟೇಲರು ನಕ್ಕಂತೆ ಮಾಡಿದರು.

"ಕೊಟ್ಟಿಗೆ ತುಂಬಾ ದನಕರುಗಳಿವೆಯಲ್ಲ. ಅವನ್ನ ಎಲ್ಲಿಗೆ ಹೊಡೆಸ್ತೀರಿ!"

"ಎರಡು ಹಸುಗಳನ್ನ ನನ್ನ ಜತೆ ಕೊಂಡೊಯ್ತೀನಿ. ಉಳಿದವನ್ನ ಸಂತೆಯಲ್ಲಿ ಮಾರಿ ಬಿಡೋಣ ಅಂತ ಅಂದ್ಕೊಂಡಿದೀನಿ."

"ಸಂತೇಲಿ ಮಾರಿ, ನಷ್ಟ ಯಾಕೆ ಮಾಡ್ಕೊಳ್ತೀರಿ? ನಮ್ಮ ಹಟ್ಟಿಗೆ ಹೊಡೆಸಿ ಬಿಡಿ. ಅದೇನು ಬೆಲೆ ಕಟ್ತೀರೋ ಅದನ್ನ ಕೊಡ್ತೀನಿ." ಶಾಸ್ತ್ರಿ ಕಸಿವಿಸಿಗೊಂಡ. ಅವರಿಂದ ಈ ಮಾತನ್ನ ನಿರೀಕ್ಷಿಸಿರಲಿಲ್ಲ. ಸುಮ್ಮನಾದ.

"ಅವಸರ ಏನೂ ಇಲ್ಲ ಶಾಸ್ತ್ರಿಗಳೇ.... ಯೋಚಿಸಿ ಪರವಾಗಿಲ್ಲ."

"ಹಾಗೇನಿಲ್ಲ. ನೀವು ನಂಗಿಂತ ಹಿರಿಯರು. ನೀವು ಹೇಳಿದ ಹಾಗೇ ಆಗಲಿ." ಗೌಡರ ಸೊಸೆ ನೀಲಮ್ಮ ಕಂಚಿನ ಲೋಟಗಳಲ್ಲಿ ಕಾಯಿಸಿದ ಹಾಲಿಗೆ ಸಕ್ಕರೆಯನ್ನ ಹಾಕಿ ತಂದಿತ್ತಳು. ಶಾಸ್ತ್ರಿ ಹಾಲಿನ ಲೋಟವನ್ನೆತ್ತಿಕೊಂಡ.

"ನೀಲವ್ವಾ ಏನಾದ್ರೂ ಹಣ್ಣಿದ್ರೆ ತಂದಿಡವ್ವಾ... ಹೊರಡೋಕ್ಮುಂಚೆ ನಿಮ್ಮಾಕೆಯನ್ನ ಮಕ್ಕಳನ್ನ ಕರ್ಕೊಂಡ್ಬನ್ನಿ." ಸೊಸೆ ಬಾಳೆ ಹಣ್ಣುಗಳನ್ನು ತಂದಿತ್ತಳು. ಶಾಸ್ತ್ರಿ ಪಟೇಲರಿಗೆ ವಂದಿಸಿ, ಬಾಳೆ ಹಣ್ಣುಗಳನ್ನ ಕೈಯಲ್ಲಿ ತೆಗೆದುಕೊಂಡು ಮನೆಯ ಕಡೆಗೆ ನಡೆದ.

"ಎಲ್ಲಿ ಹೋಗಿದ್ಯೋ ಗುಂಡಣ್ಣ ಈ ಬಿಸಿಲ್ನಲ್ಲಿ..? ನೀನು ತೋಟಕ್ಕೆ ಹೋಗಿರ ಲಿಲ್ಲ ಅಂತ ವೈಕುಂಠ ಹೇಳಿದ."

"ಅವನನ್ನ ಯಾಕೆ ಕಳಿಸ್ದೆ? ನಾನು ಪಟೇಲರ ಮನೆಗೆ ಹೋಗಿದ್ದೆ."

"ಅವರು ಹೇಳಿ ಕಳಿಸಿದ್ರಾ? ಏನಂತೆ?"

"ನಾನೇ ಹೋಗಿದ್ದೆ. ಎಲ್ಲಾ ಇತ್ಯರ್ಥ ಮಾಡಬೇಕಾಗಿತ್ತು... ಸಧ್ಯದಲ್ಲೇ ಕೊಟ್ಟಿಗೆ ಯಲ್ಲಿರುವ ದನಕರುಗಳನ್ನು ಅವರ ಮನೆಗೆ ಹೊಡೆಸ್ತಿದೀನಿ...." ಲಕ್ಷ್ಮಿ ಹೊರಕ್ಕೆ ಬಂದು ನಿಂತಳು.

"ಹಾಗೇ ಎಲ್ಲವನ್ನ ಕೊಟ್ಟು ಬಿಡ್ತಿದೀರಾ?"

"ಹಾಗೇ ಕೊಟ್ಟು ಬಿಡೋಕೆ ನನಗೇನು ಹುಚ್ಚೇ? ತಕ್ಕಷ್ಟು ಬೆಲೆ ಕಟ್ಟಿ ಕೊಡ್ತಾರೆ ಎಷ್ಟು ಅಂತ ಕೇಳ್ಬೇಡ.... ಸಾತು, ಅಡಿಗೆ ಆಗಿದ್ರೆ ಊಟ ಮಾಡ್ತೀನಿ. ನರಸಿಂಹಯ್ಯ ಒಂದು ಮನೇನ ಬಾಡಿಗೆಗೆ ಅಂತ ನೋಡಿದಾರೆ... ಮಾಲೀಕರ ಹತ್ತಿರ ಮಾತನಾಡ್ಕೊಂಡು ಬರ್ಬೇಕು."

"ಮನೆ ಹೇಗಿದೆ? ನಲ್ಲಿ ನೀರು ಬರುತ್ತ? ದೀಪ ಇದೆಯಾ?...."

"ಎಲ್ಲಾ ಇದೆ ಮಾರಾಯ್ತಿ... ನಾಡ ಹೆಂಚಿನ ಮನೆ. ದೊಡ್ಡದಾಗಿದೆ. ಹಿತ್ತಿಲಿನ ನಲ್ಲಿಯಲ್ಲಿ ನೀರು ಬರುತ್ತೆ. ಕರೆಂಟ್ ದೀಪ ಇದೆ... ಹದಿನೆಂಟು ರುಪಾಯಿ ಬಾಡಿಗೆ. ಮುಂದೆ ಜಗುಲಿ ಕೂಡಾ ಇದೆ..." ಹೂವಿನ ಗಿಡಗಳೂ ಇವೆ.

"ಯಾಕೆ ಹಾಗೆ ಅಲವತ್ತು ಕೊಳ್ತೀರಿ? ನೋಡಿ ಅತ್ಗೆ ಹೇಗಾಡ್ತಾರೆ?"

"ನಾನು ಹಾಗೇನೇ... ನೆಮ್ಮದಿಯಿಂದ ಇರುಕ್ಕೆ ಬಿಡಲ್ಲ. ಕೆದಕಿ ಕೆದಕಿ ರೇಗಿಸ್ತಾಳೆ..." ಲಕ್ಷ್ಮಿ ಒಳಕ್ಕೆ ಸರಿದಳು. ಸ್ವಾತಕ್ಕ ಎಲೆ ಹಾಕಿದಳು.

* * *

ಹಾಲು ಕರೆಯುವ ಎರಡು ಹಸುಗಳನ್ನ ರಾಧೆಯನ್ನೂ, ಒಂದೆರಡು ಕರುಗಳನ್ನ ಬಿಟ್ಟು ಉಳಿದೆಲ್ಲವನ್ನೂ ಗೌಡರ ಆಳುಗಳು ಬಂದು ಹೊಡೆದುಕೊಂಡು ಹೋಗಿದ್ದರು. ಕೊಟ್ಟಿಗೆಯೆಲ್ಲಾ ಬಿಕೋ ಎನ್ನುತ್ತಿತ್ತು. ದನಗಳು 'ಅಂಬಾ...' ಎಂದು ಕೂಗಿ ಎಬ್ಬಿಸಿದ ಧ್ವನಿ ವೈಕುಂಠನನ್ನ ತಟ್ಟಿತು. ಎಲ್ಲರಿಗೂ ಕಾಣಿಸುವಂತೆ ಟವೆಲ್ಲನ್ನ ಕಣ್ಣಿಗೆ ಒತ್ತಿಕೊಂಡ. ನಾರಾಯಣನಿಗೂ ಬೇಸರವಾಗಿತ್ತು.

"ಅವ್ವಾವ್ರೇ ನಮ್ಮನೆ ದನಗಳೆಲ್ಲಾ ಗೌಡ್ರ ಮನೆ ಆಳು ಎಂಗೆ ನೋಡ್ಕೊಂಡಾರೋ ಏನೋ?" ದುಃಖಿಸಿದ.

"ನಮ್ಮ, ಅವುಗಳ ಋಣ ಇಷ್ಟೇ. ಇನ್ನು ಮುಂದೆ ಅವೆಲ್ಲಾ ಗೌಡರ ಸ್ವತ್ತು. ಯಾರು ಹುಲ್ಲು ನೀರು, ನೀಡ್ತಾರೋ ಅವರೇ ಯಜಮಾನರು... ಇನ್ನ ನೀನು ಇಲ್ಲಿದ್ದು ಏನು ಮಾಡ್ತೀಯ? ನಿನ್ನೂರಿನ ರೈಲಿಗೆ ಹತ್ತಿ ಹೊರಟು ಬಿಡು."

"ನಾನೂ ಪ್ಯಾಟೇಗೆ ಬರ್ತೀನ್ರವ್ವಾ... ನನ್ಕೈಲಾದ ಕೆಲ್ಸ ಮಾಡ್ಕೊಂಡು ಮನೇ ಮುಂದೆ ನಾಯಿ ಅಂಗೆ ಬಿದ್ದಿರ್ತೀನಿ."

"ಅಲ್ಲೇನು ಗದ್ದೆಯೆ? ಹೊಲವೇ ನಮಗೆ? ನೀನು ಒಕ್ಕಲು ಮಾಡುವವನು ನಿನ್ನನ್ನ ಯಾರಾದ್ರೂ ಕೆಲ್ಸಕ್ಕೆ ಇಟ್ಕೋತಾರೆ. ನಮ್ಜೊತೆ ಬಂದೇನು ಮಾಡ್ತೀಯ?"

"ಇಲ್ರವ್ವಾ... ಈ ಹಳ್ಳೀಲಿ ನೀವಿಲ್ದೆ ನಾ ಎಂಗಿರ್ಲಿ? ಸಕ್ಕರೆ ಕಾರ್ಖಾನೇಲಿ ನಂಗೂ ಒಂದು ಕಸ ಗುಡ್ಸೋ ಕೆಲ್ಸಾನ ಕೊಡ್ಸೋಕೇಳಿ."

"ನೋಡೋಣ..." ಸಾತಕ್ಕ ಅವನ ಸಮಾಧಾನಕ್ಕೆ ಹೇಳಿದಳು.

"ಈಗ ತಕ್ಷಣಕ್ಕೆ ಯಾರನ್ನ ಕೆಲ್ಸಕ್ಕೆ ತಗೊಳ್ಳಲ್ಲ ಅತ್ಗೆ... ಇನ್ನ ಮುಂದಿನ ವರ್ಷವೇ... ಕಬ್ಬು ಅರೆಯುವ ಕಾಲದಲ್ಲಿ" ನಾರಾಯಣ ಹೇಳಿದ.

ವೆಂಕಟಾಚಲಯ್ಯ ವೈಕುಂಠನಿಗೆ ಹೇಳಿ ಕಳಿಸಿದ. ಅವನಿಗೆ ಅವನಂಥ ನಿಯತ್ತಿನ ಆಳು ಬೇಕಾಗಿತ್ತು. ವೈಕುಂಠ ಅದನ್ನೂ ಸಾತಕ್ಕನಿಗೆ ಹೇಳಿದ. "ಅವ್ವಾವ್ರೇ ನಂಗೆ ಯಾರ ಮನ್ಯಾಗೂ ಇರಾಕೆ ಮನಸ್ಸಿಲ್ಲ. ನಾನು ಊರಿಗೇ ಒಂಟೋಯ್ತೀನಿ." ಅಳುತ್ತಾ ಹೇಳಿದ.

"ಮುಂಡೇದೆ... ಅಳೋದ್ಯಾಕೆ? ನೀನು ಪೇಟೆಗೆ ಬಂದ್ರೆ ಹಾಳಾಗಿ ಹೋಗ್ತೀಯ, ಷೋಕಿ ಕಲ್ತು ದುಡ್ಡು ಕಳ್ಕೋತೀಯ... ಇಲ್ದಿದ್ರೆ ಕರ್ಕೊಂಡು ಹೋಗ್ಬಹುದಾಗಿತ್ತು."

"ಹೌದು ಅತ್ಗೆ... ಈ ಮುಗ್ಧತೆ, ನಿಯತ್ತು ಎಲ್ಲಾ ಕಡಿಮೆ ಆಗುತ್ತೆ. ಅಂದ್ಹಾಗೇ ನಮ್ಮ ಈ ಜಾನೀನ ಎಲ್ಲಿ ಬಿಡೋದು?" ನಾರಾಯಣನೆಂದ.

"ಅದು ಈ ಹಳ್ಳೀಲೇ ಇರಲಿ. ವರ್ಷದಲ್ಲಿ ಮೂರು ಸಾರಿ ಮರಿ ಹಾಕಿದ್ರೆ ಅಲ್ಲಿ ಜಾಗ ಎಲ್ಲಿರುತ್ತೆ? ಲಕ್ಷ್ಮಿ ತಟಕ್ಕನೆ ನುಡಿದಳು.

"ಅವ್ವಾವ್ರೇ... ಜಾನೀನ ಅದರ ಮರಿಗಳ್ನ ನೋಡ್ಕೊಂಡು ನಾನು ಈ ಅಟ್ಟೀಲೇ ಇರ್ತೀವ್ನಿ..." ನಾರಾಯಣ ನಕ್ಕ.

"ಭಾವ ಈ ಮನೇನ ಗೋವಿಂದ ಶೆಟ್ಟರಿಗೆ ಬರೆದು ಕೊಟ್ಟಾಗಿದೆ... ಸಾಲ; ಬಡ್ಡಿ ಎಲ್ಲಾ ಚುಕ್ತಾ..." ಅವರ್‍ಯಾಕೆ ನಿನ್ನನ್ನ ಇಟ್ಕೋತಾರೆ?"

"ಹೌದೇನೋ ನಿಮ್ಮ ಭಾವ ನಮಗ್ಯಾರಿಗೂ ಹೇಳೇ ಇಲ್ಲ..." ಲಕ್ಷ್ಮಿ ಹಾಲಿನಲ್ಲಿ ನಿಂತು ಮನೆಯನ್ನೊಮ್ಮೆ ವೀಕ್ಷಿಸಿದಳು... ತಮ್ಮ ಸಂಸಾರ, ವಾಸ ಮಾಡಿದ ಮನೆ. ಹಬ್ಬ ಹುಣ್ಣಿಮೆಗಳನ್ನ ಆಚರಿಸಿದ ಮನೆ. ಶಾಂತಳಿಗೆ ಮದುವೆಯಾದಾಗ ಚಪ್ಪರ ಹಾಕಿಸಿದ ಮನೆ. ತಾನು ಗಂಡು ಮಕ್ಕಳನ್ನು ಹೆತ್ತ ಮನೆ... ಮನೆಯ ಮೇಲ್ಛಾವಣಿಗೆ ಹೊದೆಸಿದ್ದು ಕಬ್ಬಿನ ಸೋಗೆ... ಸೆಗಣಿ ಹಾಕಿ ಸಾರಿಸಿದ ನೆಲ, ಮಣ್ಣಿನ ಗೋಡೆ... ಆದರೂ ಇದು ನಮ್ಮ ಮನೆಯಾಗಿತ್ತು. ಇನ್ನು ಮುಂದೆ ಬಾಡಿಗೆಯ ಮನೆಯಲ್ಲಿರ ಬೇಕು. ಮಕ್ಕಳಿಗೆ ಆಡಲು ಜಾಗವಿದೆಯೋ ಇಲ್ಲವೋ? ಇಲ್ಲಿಯಂತೆ ಗುಲಾಬಿಯ ಗಿಡಗಳನ್ನ ಬೆಳೆಸುವಷ್ಟು ಜಾಗವಿದೆಯೋ ಇಲ್ಲವೋ? ಬಿಟ್ಟು ಹೋಗುವ ಸಮಯ ಬಂದಾಗ ಅವಳಿಗೆ ಮನೆಯ ಮೇಲೆ ಅಭಿಮಾನ ಉಕ್ಕಿತು.

"ಅತ್ಗೆ... ನಾವು ಈ ಹುಲ್ಲಿನ ಮನೆಗಾಗಿ ಎಷ್ಟು ಶ್ರಮ ಪಟ್ಟೆವು. ಬಾವಿ ನೀರು ಹೊತ್ತೆವು. ಸೆಗಣಿ ಕಸ ಬಾಚಿದೆವು... ಹೂವಿನ ಗಿಡಗಳನ್ನ ಬೆಳೆಸಿದೆವು. ಈಗ ಎಲ್ಲವನ್ನ ಬಿಟ್ಟು ಹೋಗ್ತಾ ಇದೀನಿ... ಯಾವುದೂ ನಮ್ಮದಲ್ಲ..." ವ್ಯಥೆಗೊಂಡಿದ್ದಳು.

"ಅಷ್ಟೇ ಯೋಗ... ಈ ಹಳ್ಳಿಯ ಋಣ ತೀರಿತು ಅಂತ ಅಂದ್ಕೋಬೇಕು... ಇಲ್ಲಿಂದ ಬಿಡುಗಡೆಯಾಗಿ ಹೋದ್ರೆ ಸಾಕು ಅಂತ ಹಂಬಲಿಸ್ತಾ ಇದ್ದೆ."

"ಅದು ತಪ್ಪಾ ಹೇಳಿ ಅತ್ಗೇ... ಮಕ್ಕಳಿಗೋಸ್ಕರ ನಾನು ಹಾಗೆ ಹೇಳಿದ್ದು."

"ತಪ್ಪೇನಿಲ್ಲ. ನಡೆಯೋದೆಲ್ಲಾ ಒಳ್ಳೇದಕ್ಕೆ... ಹೊರಡೋಕ್ಮುಂಚೆ ಒಂದಿನ ಈಶ್ವರನ ದೇವಸ್ಥಾನದಲ್ಲಿ ಪೂಜೆಗೆ ಕೊಡೋಣ... ನಾವ್ಯಾರೂ ಹೋಗಿಯೇ ಇಲ್ಲ. ನಾರಾಯಣಂಗೆ ಹೇಳಿದರೆ, ನಾಗಪ್ಪ ಭಟ್ಟರಿಗೆ ಹೇಳ್ತಾನೆ."

* * *

ಕೃಷ್ಣ ಬಂದಿಳಿದಾಗ ಎಲ್ಲರಿಗೂ ಸಂತಸದ ಜೊತೆಗೆ ಆಶ್ಚರ್ಯ. ನಾರಾಯಣ ಕಾಗ್ದ ಬರೆದಿದ್ದ. "ಭಾವ, ಹಳ್ಳೀನ ಬಿಟ್ಟು ಬಿಡ್ತಿದಾರಂತೆ. ಕಡೇ ಸಾರಿ ಒಮ್ಮೆ ನೋಡ್ಕೊಂಡು ಹೋಗೋಣ ಅಂತ ಬಂದೆ..."

"ಒಳ್ಳೇ ಕೆಲಸ ಮಾಡಿದೆ. ಪರೀಕ್ಷೆ ಯಾವಾಗ ಮುಗಿಯುತ್ತೆ?"

"ಅದಕ್ಕೆ ಇನ್ನ ಬೇಕಾದಷ್ಟು ಸಮಯ ಇದೆ. ಭಾವ ಎಲ್ಲಿ?"

"ಅವನು ಪೇಟೆಗೆ ಹೋಗಿದಾನೆ... ಮನೆಗೆ ಸುಣ್ಣ ಬಣ್ಣ ಹೊಡೆಸಬೇಕು ಅಂತ ಹೇಳ್ತಿದ್ದ... ಹೋಗು ಮೊದಲು ನಿಮ್ಮಕ್ಕನ ಮಾತನಾಡಿಸು... ಹಾಗೇ ಪುಟ್ಟ ಮಕ್ಕಳನ್ನ ನೋಡ್ಬಿಟ್ಟು ಬಾ..."

"ಅತ್ಗೆ... ಅವಳಿ ಮಕ್ಕಳು ಅಕ್ಕಂಗೇ ಮೊದಲು. ಇದಕ್ಕೆ ಮುಂಚೆ ಯಾರ್ರೂ ಹುಟ್ಟಿಲ್ಲ ಅಲ್ವಾ!"

"ನಮ್ಮ ಪಾತುಗೆ ಹುಟ್ಟಿದ್ವು... ಈಗ ಅವಳ ಮಗಳಿಗೂ ಅವಳಿ ಮಕ್ಕಳಾಗಿವೆ."

"ಯಾರ್ಗೆ... ನಮ್ಮ ಮೀನಾಕ್ಷೀಗಾ?" ನಾರಾಯಣ ಕೃಷ್ಣ ಇಬ್ಬರೂ ಒಟ್ಟಿಗೇ ಕೇಳಿದರು. ಸಾತಕ್ಕ ಬಾಯಿಗೆ ಕೈ ಇಟ್ಟು ನಕ್ಕಳು.

"ಮೀನಾಕ್ಷಿಯ ಮೇಲಿನ ಮೋಹ ಇನ್ನಾ ಕಡಿಮೆ ಆಗಿಲ್ವಾ?... ಅವಳ ಬಗ್ಗೆ ಯೋಚಿಸುವುದೂ ಮಹಾಪಾಪ..." ಅವಳೀಗ ಅವಳ ಗಂಡನ ಮೀನಾಕ್ಷಿ."

"ಹಾಗಲ್ಲ ಅತ್ಗೆ... ಮೀನಾಕ್ಷಿ ಒಂಥರಾ ಚೆನ್ನಾಗಿದ್ಲು... ಅದಕ್ಕೇ..."

"ನಾರಾಯಣ ನೀನು ಬೇಗ ಮದುವೆಯಾಗಿ ಬಿಡು. ಹೇಗೂ ಕೆಲಸ ಆಗಿದೆ. ಆಮೇಲೆ ಕೃಷ್ಣಂಗೂ ಬೇಗ ಮದುವೆ ಮಾಡಿ ಬಿಡೋಣ. ಅವನಿಗೆ ನಾನು ಹೆಣ್ಣನ್ನೂ ನೋಡಿದೀನಿ."

"ಹೌದಾ?... ಮೊದಲು ಕೆಲಸ ಸಿಗಲಿ... ಮದುವೆಗೆ ಏನು ಅವಾಂತರ?

"ನನಗೆ ಅವಾಂತರ... ನಿಮ್ಮಿಬ್ಬರ ಮದುವೆ ನೋಡಬೇಕೂಂತ ನನಗೆ ಆಸೆ... ನಿಂಗೂ, ಮೀನಾಕ್ಷಿಗಿಂತ ಸುಂದರವಾದ ಹುಡುಗೀನ ಹುಡುಕಿ ಕೊಡುವ ಜವಾಬ್ದಾರಿ ನನಗಿರಲಿ" ಕೃಷ್ಣ ಎದ್ದು ಅಕ್ಕನ ಕೋಣೆಗೆ ಹೋಗಿದ್ದ.

"ನಾರಾಯಣ.. ನಿನ್ನಲ್ಲೇ ಇರಲಿ, ಲಲಿತ-ಕೃಷ್ಣನ ಜೋಡಿ ಹೇಗಿರುತ್ತೆ?

"ಲಲಿತಾ ಇನ್ನು ತುಂಬಾ ಚಿಕ್ಕೋಳು ಅತ್ಗೆ..."

"ಚಿಕ್ಕೋಳು ನಿಜ... ಆದರೆ ರೂಪವತಿ... ಅವರಿವರು ವಿಚಾರಿಸ್ತಾನೇ ಇದಾರೆ. ಸುಂದರಿಯ ಮಗ ಚಂದ್ರು ವಿಚಾರಿಸಿದ, ಮಾಲಕ್ಷ್ಮಿ ವಿಚಾರಿಸಿದಳು. ಶಾಸ್ತ್ರಿಗೆ ತಿಳಿದರೆ ಮಾತು ಕೊಟ್ಟು ಬಿಡ್ತಾನೆ.... ಆಮೇಲೆ ಏನು ಮಾಡಕ್ಕಾಗಲ್ಲ."

"ಕೃಷ್ಣ ಏನಂತಾನೇ?" ಅಕ್ಕಂಗೆ ಒಪ್ಪಗೇನಾ?

"ನೀನು ಅವನ ಹತ್ರ ಮಾತಾಡು. ಒಂದು ಸಲ ನಿಶ್ಚಯವಾಗಿ ಬಿಟ್ಟರೆ ನಾನು ನಿಮ್ಮ ಭಾವನ ಹತ್ರ ಮಾತಾಡ್ತೀನಿ. ನಿಮ್ಮಕ್ಕನೂ ಖಂಡಿತಾ ಒಪ್ಕೋತಾಳೆ."

"ಸರಿ. ನಾನು ಅವನ ಹತ್ರ ಮಾತಾಡ್ತೀನಿ." ನಾರಾಯಣಂಗೆ ಆಶ್ಚರ್ಯವಾಗಿತ್ತು.

* * *

ಮನೆಯ ಸಾಮಾನುಗಳನ್ನ ಕಟ್ಟಿಡಲು ಪ್ರಾರಂಭಿಸಿದ್ದರು. ಬೇಡ ಅನ್ನಿಸಿದ್ದನ್ನೆಲ್ಲಾ ಹಿತ್ತಲಲ್ಲಿ ಎಸೆದಿದ್ದರು. ಲಲಿತಾ ಕೆಟ್ಟ ಮುಖ ಹೊತ್ತು ನಿಂತಿದ್ದಳು. ಕೃಷ್ಣ ಅವಳನ್ನ

ಸಮೀಪಿಸಿದ.

"ಇದೇನೇ ಇಲ್ಯಾಕೇ ನಿಂತಿದೀಯಾ? ಅಳ್ತಾ ಇದೀಯಾ?"

"ಅಳು ಬರ್ತಿದೆ ಮಾವಾ... ಇದನ್ನೆಲ್ಲಾ ಬಿಟ್ಟು ಹೇಗೆ ಹೋಗೋದು?"

"ಹಾಗಾದ್ರೆ ಇದ್ದು ಬಿಡು... ಬೇಕಾದ್ರೆ ನಾನೂ ನಿನ್ನ ಜತೆಗಿರ್ತೀನಿ" ನಕ್ಕ...

"ಸುಳ್ಳು... ಇಲ್ಲಿ ಹೇಗಿರ್ತೀರಿ? ಅಣ್ಣ ಎಲ್ಲವನ್ನೂ ಮಾರಿಬಿಟ್ಟಿದಾರಂತೆ. ಅತ್ತೆ ಹೇಳ್ತಾ ಇದ್ರು.... ಈಗ ಇದ್ಯಾವುದೂ ನಮ್ಮದಲ್ಲ."

"ಸರಿ ಬಿಡು. ಒಂದಲ್ಲ ಒಂದು ದಿನ ಮದುವೆ ಮಾಡ್ಕೊಂಡು, ನೀನು ಗಂಡನ ಮನೆಗೆ ಹೋಗೋಳು. ಆಗ ಬಿಟ್ಟು ಹೋಗ್ತಾ ಇದ್ಯೋ ಇಲ್ಲವೋ...?"

"ನಾನು ಮದುವೇನೇ ಮಾಡ್ಕೊಳ್ಳಲ್ಲ... ಹೀಗೇ ಇದ್ದು ಬಿಡ್ತೀನಿ."

"ಯಾಕೇ ನಾಚ್ಕೆನೇನೇ... ಶಾಂತ ಮಾಡ್ಕೊಂಡು ಹೋಗಲಿಲ್ವಾ?..."

"ಶಾಂತನ್ನಾದ್ರೆ ಭಾವ ಮದುವೆ ಮಾಡ್ಕೊಂಡ್ರು... ನನ್ನನ್ನ ಯಾರು ಮದುವೆ ಮಾಡ್ಕೋತಾರೆ?...." ಕೃಷ್ಣ ಓರೆಗಣ್ಣಿನಲ್ಲಿ ಅವಳನ್ನ ನೋಡಿದ.

"ನಿಂಗೂ, ನಿಮ್ಮ ಭಾವನಂಥ ಒಬ್ಬ ಗಂಡನ್ನು ನಾನು ಹುಡುಕಿ ಕೊಡ್ತೀನಿ." ಲಲಿತ ಅತ್ತ ತಿರುಗಿದಳು... ಮಾತನಾಡಲಿಲ್ಲ..." ಸರಿ ಬಿಡು. ಮದುವೆ ಬೇಡ. ಚೆನ್ನಾಗಿ ಓದಿ ಟೀಚರ್ ಆಗ್ತೀಯಾ?"

"ಥೂ ಟೀಚರ್ ಕೆಲಸ ನಂಗೆ ಇಷ್ಟವಿಲ್ಲ... ನಾನು ಹೀಗೇ ಇದ್ದು ಬಿಡ್ತೀನಿ ಅತ್ತೆ ತರಹ... ಒಬ್ಬಳೇ..."

"ಅವರು ಒಬ್ಬರೇ ಎಲ್ಲಿದಾರೆ!" ನಾವೆಲ್ಲಾ ಇಲ್ಲವಾ ಅವರ ಜೊತೆಗೇ..." ಮತ್ತೆನಕ್ಕ. "ಈಗಲೇ ಅದನ್ನೆಲ್ಲಾ ಯೋಚಿಸ್ಬೇಡ.... ದೊಡ್ಡೋರು ಹೇಳಿದ ಹಾಗೆ ಕೇಳು ಸಾಕು." ಅವಳ ತಲೆಯ ಮೇಲೆ ಮೊಟಕಿದ. ಅವಳು 'ಹ್ಞಾಂ' ಎಂದಳು ನೋವಿಗೆ. 'ನಡೀ ಒಳಕ್ಕೆ' ಎಂದ.

ಒಂದು ವಾರದ ಒಳಗೆ ಬೇಕಾಗುವ ಸಾಮಾನುಗಳನ್ನ ಕಟ್ಟಿದ್ದಾಗಿತ್ತು. ಮೂಟೆಗಳನ್ನ ಗಾಡಿಯಲ್ಲಿ ಹೇರಿಕೊಂಡು, ಹೊಸ ಮನೆಯಲ್ಲಿಡುವ ಕೆಲಸ ಬಾಕಿ ಇತ್ತು. ನರಸಿಂಹಯ್ಯನೇ ನಿಂತು ಮನೆಗೆ ಸುಣ್ಣ ಬಣ್ಣವನ್ನ ಹೊಡೆಸಿದ್ದಾಗಿತ್ತು. ಶ್ರೀನಿವಾಸ, ಅವನ ಹೆಂಡತಿ ನಾಗಲಕ್ಷ್ಮಿಯೇ ಹೋಗಿ, ದೇವರ ಪಟವನ್ನ ಇಟ್ಟು, ಹಾಲುಕ್ಕಿಸುವ ಸಂಪ್ರದಾಯವನ್ನ ನೆರವೇರಿಸಿದ್ದರು.

ಹಳ್ಳಿಯ ಜನರೆಲ್ಲಾ ಗುಂಪು ಗುಂಪಾಗಿ ಬಂದು ಎಲ್ಲರನ್ನೂ ಮಾತನಾಡಿಸಿ ಕೊಂಡು ಹೋಗಿದ್ದರು. ಗದ್ದೆಯಲ್ಲಿ ಕೆಲಸ ಮಾಡುವ ಕೂಲಿಯಾಳುಗಳು, ಆಗ ಈಗ ಬಂದು ಶಾಸ್ತ್ರ ಕೇಳಿ ಪ್ರಯೋಜನವನ್ನ ಪಡೆಯುತ್ತಿದ್ದ ನಾಯಕರುಗಳು, ಬಾವಿ ತೋಡುವ ಕೆಲಸದ ಲಕ್ಷ್ಮ, ಬೋವಿಯ ಮನೆಯವರು, ಲಕ್ಷ್ಮಿಗೆ ಹೆರಿಗೆ

ಮಾಡಿಸಿದ ಹೊನ್ನಿತಿ... ಎಲ್ಲರೂ ಪೆಚ್ಚಾಗಿದ್ದರು.

"ಪಟೇಲರು ಮನೆಯವರನ್ನೆಲ್ಲಾ ಕರೆಸಿ, ಹಾಲು ಹಣ್ಣು ಕೊಟ್ಟು ಸತ್ಕರಿಸಿದ್ದರು. "ಆಗ ಈಗ ಬರ್ತಾ ಇರಿ. ನಮ್ಮನ್ನೆಲ್ಲಾ ಮರೆತು ಬಿಡಬೇಡಿ." ಮರೆಯದೇ ಹೇಳಿದರು.

ವೆಂಕಟಾಚಲಯ್ಯ ಎಲ್ಲರನ್ನೂ ಪಾಯಸದ ಊಟಕ್ಕೆ ಕರೆದಿದ್ದರು. ಸಾತಕ್ಕನಿಗೆ ಮಡಿಯಲ್ಲೇ ಬಡಿಸಿದ್ದರು. "ನೀವಂತೂ ಸುಶ್ರಾವ್ಯವಾಗಿ ಭಾರತ ಭಾಗವತವನ್ನ ಓದುತ್ತಿದ್ದಿರಿ. ನಮಗೂ ಒಂದಿಷ್ಟು ಪುಣ್ಯ ಪ್ರಾಪ್ತವಾಯಿತು." ಸಾತಕ್ಕ ಆತನನ್ನೂ ಹೊಗಳಿದಳು..

"ನಿಮ್ಮಂಥ ಒಂದು ಕುಟುಂಬ, ನಮ್ಮ ಪಕ್ಕದಲ್ಲಿದ್ದುದೇ ನಮ್ಮ ಪುಣ್ಯ. ಗೋವಿಂದ ಶೆಟ್ಟರಿಗೆ ಮನೇನ ಬರೆದು ಕೊಟ್ಟಿದೀರಂತೆ... ಅವನು ಎಷ್ಟಾಗಲೀ ಶೆಟ್ಟಿ, ಬಹಳ ಲೆಖ್ಖಾಚಾರದವನು. ಮಾತುಕತೆ ಏನೂ ಇಲ್ಲ..." ಶಾರದಮ್ಮ ಲಕ್ಷ್ಮಿಗೆ ತಾಂಬೂಲವನ್ನ ರವಿಕೆ ಖಣವನ್ನ ಇಟ್ಟು ಕೊಟ್ಟಳು. ಮಕ್ಕಳಿಗೆ ಲಂಗದ ಬಟ್ಟೆಗಳನ್ನ ಇಟ್ಟುಕೊಟ್ಟಳು. ವೆಂಕಟೇಶನಿಗೆ ಷರಟಿನ ಬಟ್ಟೆಯನ್ನ ಕೊಟ್ಟಳು.

"ಇದೆಲ್ಲಾ ಯಾಕೆ ಶಾರದಮ್ಮ?..." ಲಕ್ಷ್ಮಿ ಸಂಕೋಚಗೊಂಡಳು.

"ಇನ್ನು ನಾವು ಮತ್ತೆ ಯಾವಾಗ ಭೇಟಿಯಾಗ್ತೀವೋ... ಇದೆಲ್ಲಾ ಏನು ಮಹಾ? ನಾವುಗಳಂತೂ ನಿಮ್ಮನ್ನ ನೆನೆಸಿಕೊಳ್ತಿರ್ತೀವಿ..." ಪ್ರಾಮಾಣಿಕವಾಗಿ ಹೇಳಿದಳು.

"ಪೇಟೆಗೆ ಬಂದಾಗ ತಪ್ಪದೇ ಬನ್ನಿ." ಅಲ್ಲಿಂದ ನಾಗಪ್ಪ ಭಟ್ಟರ ಮನೆಗೆ ಹೋಗಿ, ಕಾಫಿಯನ್ನ ಕುಡಿದು ಹೊರಟರು. ಆ ರಾತ್ರಿಯೇ, ಕೈಗೆ ಬೇಕಾದ ಕೆಲವು ಸಾಮಾನುಗಳನ್ನ ಉಳಿಸಿಕೊಂಡು ಉಳಿದವುಗಳನ್ನ ಗಾಡಿಗಳಿಗೆ ಹೇರಿದರು. ಕೃಷ್ಣ ನಾರಾಯಣ ಇಬ್ಬರೂ ಗಾಡಿಯನ್ನೇರಿದರು.

ಈ ರಾತ್ರಿ ಈ ಮನೆಯಲ್ಲಿ ಕಡೆಯ ರಾತ್ರಿ... ಹಳ್ಳಿಯಲ್ಲಿ ಕೊನೆಯ ರಾತ್ರಿ... ಲಕ್ಷ್ಮಿಯ ಗಂಟಲುಬ್ಬಿ ಬಂತು. ತಾನು ವೈಕುಂಠನೊಡನೆ ಸೇರಿಕೊಂಡು ಗುಬ್ಬಚ್ಚಿಗಳನ್ನ ಸೆರೆ ಹಿಡಿದದ್ದು ನೆನಪಾಯಿತು. ಭಾವಣೆಯ ಸಂದುಗೊಂದುಗಳಲ್ಲಿ ಗೂಡನ್ನ ಕಟ್ಟಿ ಕೊಂಡು ಮೊಟ್ಟೆಗಳನ್ನಿಟ್ಟು ಮರಿ ಮಾಡುವ ಗುಬ್ಬಚ್ಚಿಗಳು ಇಲ್ಲೇ ಉಳಿದುಕೊಂಡಿವೆ. ಅವುಗಳ ಮನೆಯನ್ನ ಅವುಗಳಿಗೆ ಬಿಟ್ಟುಕೊಟ್ಟು ನಾವುಗಳೇ ಇಲ್ಲಿಂದ ಹೊರಟಿದ್ದೇವೆ. ಇವುಗಳ ನೆನಪನ್ನು ನಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ.

"ಅವ್ವಾವ್ವೇ... ಅವ್ವಾವ್ವೇ ಅಂತ ನನ್ನ ಹಿಂದೆ ಮುಂದೆ ಸುತ್ತುತ್ತಾ, ನನ್ನ ಮಡಿಯನ್ನ ಕೆಡಿಸುತ್ತ, ನಮ್ಮವರಲ್ಲಿ ಒಬ್ಬನಾಗಿದ್ದ ವೈಕುಂಠನನ್ನ ಇಲ್ಲಿಯೇ ಬಿಟ್ಟು ಹೊರಟಿದೀವಿ. ಅವನನ್ನ ಕರೆದೊಯ್ಯುವಂತಿದ್ದರೇ...?" ಸಾತಕ್ಕ ಚಿಂತಿಸುತ್ತಿದ್ದಳು.

"ನಾನು ಯಾವ ಮಹದಾಸೆಯನ್ನ ಇಟ್ಟುಕೊಂಡು ಇಲ್ಲಿಗೆ ಬರಲಿಲ್ಲ. ಆದರೂ

ಇಲ್ಲಿಯವರಲ್ಲಿ ಒಬ್ಬನಾಗಿ ಇರಲು ಯತ್ನಿಸಿದೆ. ಆದರೆ ಹಣೇ ಬರಹವೇ ಬೇರೆ... ನಮ್ಮನ್ನು ಇಲ್ಲಿಂದ ಹೊರಡಿಸುತ್ತಿದೆ... ಆದರೂ ಇಲ್ಲಿಯ ಅನುಭವಗಳನ್ನೂ ಮರೆಯಲು ಸಾಧ್ಯವೇ? ಸ್ವಲ್ಪ ಕಳೆದುಕೊಂಡಿದ್ದೇನೆ. ಸ್ವಲ್ಪಗಳಿಸಿದ್ದೇನೆ..." ಶಾಸ್ತ್ರಿ ಯೋಚಿಸುತ್ತಿದ್ದ.

ಮೂವರು ನಿದ್ದೆಯಿಲ್ಲದೇ ಹೊರಳಾಡಿದರು. ಬೆಳಗಾಯಿತು. ಹಾಲನ್ನು ಕಾಯಿಸಿ, ಕಾಫಿಯನ್ನ ಕುಡಿದರು. ಮಕ್ಕಳಿಗೆ ಹಾಲನ್ನು ಕುಡಿಯಲು ಕೊಟ್ಟರು. ಉಳಿದ ಪಾತ್ರೆ ಪಡಗಗಳನ್ನ ಮೂಟೆಯಲ್ಲಿ ಕಟ್ಟಿದರು. ಎಲ್ಲರೂ ರೈಲಿನ ಹೊತ್ತಿಗೆ ಹೊರಡಲು ಸಿದ್ಧರಾದರು. ಮತ್ತೊಮ್ಮೆ ಮನೆಯ ಮೂಲೆ ಮೂಲೆಯನ್ನ ನೋಡಿದರು. ಹಿತ್ತಲನ್ನೂ ನೋಡಿದರು. ಬಾವಿಯಲ್ಲಿ ಇಣುಕಿದರು... ಮನದಣಿಯಲಿಲ್ಲ.

ಕಟ್ಟಿಟ್ಟ ಹಾಸಿಗೆಗಳನ್ನೂ, ಪಾತ್ರೆಗಳ ಮೂಟೆಯನ್ನ ಗಾಡಿಗೆ ಹೇರಿದ, ಶಿವಶಂಕರನನ್ನು ಗಾಡಿಗೆ ಹೂಡಿದ, ವೈಕುಂಠ ಪೆಚ್ಚಾಗಿದ್ದ. "ನೀನು ಗಾಡೀನ ಹೊಡ್ಕೊಂಡು ಬಂದು ಬಿಡು. ನಾವೆಲ್ಲಾ ರೈಲಿನಲ್ಲಿ ಬರ್ತೀವಿ" ಎಂದು ಹೇಳಿ ಅವನನ್ನೂ ಕಳಿಸಿದ. ಶಾಸ್ತ್ರಿ ತನ್ನ ಕುಟುಂಬದವರೊಂದಿಗೆ, ಕೈ ಚೀಲಗಳೊಂದಿಗೆ ರೈಲ್ವೇ ಸ್ಟೇಷನ್ನಿನತ್ತ ಸಾಗಿದ. ಪರಿಚಯದ ಅನೇಕರು ಅವರ ಹಿಂದೆ ಹಿಂದೆ ಬಂದರು. ಶಾಸ್ತ್ರಿ ಟಿಕೆಟ್ಟನ್ನು ತೆಗೆದುಕೊಂಡ. ತಾಳಗುಪ್ಪದಿಂದ ಬರುವ ರೈಲು ಸಮಯಕ್ಕೆ ಸರಿಯಾಗಿ ಬಂದು ನಿಂತಿತು. ಎಲ್ಲರೂ ಹತ್ತಿದರು. ಸ್ಟೇಷನ್ನಿನಲ್ಲಿ ಎರಡನೇ ಗಂಟೆಯನ್ನ ಬಾರಿಸಿದರು. ಗಾರ್ಡ್ ಹಸಿರು ಬಾವುಟವನ್ನ ತೋರಿದ. ಇಂಜಿನ್ 'ಕೂ' ಎಂದು ಕೂಗಿತು. 'ಚಸ್' ಎಂದು ಸದ್ದು ಮಾಡುತ್ತ, 'ಚುಕ್‌ಪುಕ್' ಎಂದು ರೈಲು ಚಲಿಸಿತು. ಸ್ಟೇಷನ್ನಿನ ಪ್ಲಾಟ್‌ಫಾರಂನಲ್ಲಿ ನಿಂತಿದ್ದವರೆಲ್ಲಾ ಶಾಸ್ತ್ರಿಯ ಪರಿವಾರದ ಕಡೆ ಕೈ ಬೀಸಿದರು. ರೈಲು ಪೇಟೆಯ ದಿಕ್ಕಿಗೆ ಹೊರಟಿತು. ಹಳ್ಳಿ ಹಿಂದೆ ಉಳಿಯಿತು. ಮರಗಿಡಗಳು ರೈಲಿನ ವೇಗಕ್ಕೆ ಸಮನಾಗಿ ಚಲಿಸುತ್ತಿದ್ದವು.

* * *

ಈಗ ಸಾತಕ್ಕ ಬದುಕಿಲ್ಲ, ತಂದೆ ತಾಯಿಗಳೂ ಇತ್ತೀಚೆಗೆ ತೀರಿ ಹೋದರು. ಈಗ ಉಳಿದಿರುವುದು ಬರೀ ಅವರ ನೆನಪುಗಳು ಮಾತ್ರ. ಮಕ್ಕಳೆಲ್ಲರೂ ಅವರವರ ಸಂಸಾರದಲ್ಲಿ ಮುಳುಗಿದ್ದಾರೆ. ಆದರೂ ಹಳ್ಳಿ ಎಂಬ ಹೆಸರು ಕೇಳಿದೊಡನೆ ಮೊದಲಿಗೆ ತಮ್ಮ ಹಳ್ಳಿಯ ನೆನಪಾಗುತ್ತದೆ. ಸಿಹಿಕಹಿ ಅನುಭವದ ಬೇವು ಬೆಲ್ಲದ ರುಚಿಯ ನೆನಪುಗಳು ಆಗೊಮ್ಮೆ ಈಗೊಮ್ಮೆ ಕಾಡುತ್ತಿರುತ್ತದೆ. ಆ ರೈಲು ನಿಲ್ದಾಣವನ್ನಂತೂ ಮರೆಯುವಂತೆಯೇ ಇಲ್ಲ. ದಿನದಲ್ಲಿ ಬೆಳಿಗ್ಗೆ ಮತ್ತು ರಾತ್ರಿಯ ಹೊತ್ತು ಆ ನಿಲ್ದಾಣದಲ್ಲಿ ರೈಲು ನಿಲ್ಲುತ್ತಿದ್ದುದು ಹಗಲು-ರಾತ್ರಿಯಂತೆ. ಎಂದೂ ತಪ್ಪಿದ್ದೇ ಇಲ್ಲ.

ಪ್ಲಾಟ್‌ಫಾರಂನಲ್ಲಿ ನಿಂತಿದ್ದ ವೈಕುಂಠನ ಕಣ್ಣೀರು, ಬಾಲವನ್ನ ಅಲ್ಲಾಡಿಸುತ್ತಾ

ನಿಂತಿದ್ದ ಜಾನಿ. ಲಲಿತ ಆ ದೃಶ್ಯವನ್ನ ಎಂದಿಗೂ ಮರೆಯುವಂತಿಲ್ಲ. ತಾವು ಓದಿದ ಪ್ರಾಥಮಿಕ ಶಾಲೆ, ವನವಿಹಾರಕ್ಕೆಂದು ಹೋಗುತ್ತಿದ್ದ ಹಳ್ಳಿಯ ಕೆರೆ, ಈಶ್ವರನ ದೇವಸ್ಥಾನ... ಪದ್ಮಿನಿ ರಾಗಿಣಿಯರ ನೆನಪಿನ ಪೆಟ್ಟಿಗೆಯಲ್ಲಿ. ಅಮೆರಿಕಾದಲ್ಲಿ ನೆಲೆಸಿರುವ ವೆಂಕಟೇಶನಿಗೆ ಆ ನೆನಪುಗಳು ಬೇಕಾಗಿಲ್ಲ. ರವಿಗಾಗಲೀ, ಶಶಿಗಾಗಲೀ, ಯಾವ ನೆನಪೂ ಇಲ್ಲ. ಆದರೂ ಹಳ್ಳಿಯ ಮಾತುಗಳನ್ನ ಎತ್ತಿದಾಗ ಕುತೂಹಲ ಎಂಬ ಹಕ್ಕಿಯ ಗರಿ ಕೆದರುತ್ತಿತ್ತು. ಆಸಕ್ತಿ ಮೂಡುತ್ತಿತ್ತು. ತಾವು ಒಂದು ಕಾಲದಲ್ಲಿ ವಾಸ ವಾಗಿದ್ದ ಹಳ್ಳಿ ಎಂಬ ಅಭಿಮಾನ ಗೂಡು ಕಟ್ಟುತ್ತಿತ್ತು.

ಈಗ ಆ ಹಳ್ಳಿಯೂ ಸಾಕಷ್ಟು ಬದಲಾಗಿದೆ. ವಿದ್ಯುಚ್ಛಕ್ತಿ ಬಂದಿದೆ. ನಲ್ಲಿಗಳು ಇವೆ. ಎಲ್ಲರ ಮನೆಯಲ್ಲೂ ರೇಡಿಯೋಗಳಿವೆ. ಕೆಲವರ ಮನೆಗಳಲ್ಲಿ ಟಿ.ವಿ. ಸೆಟ್‌ಗಳಿವೆ. ಜನಜೀವನದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ... ಹಳೆಯ ನೀರು ಕೊಚ್ಚಿ ಹೋಗಿ ಹೊಸಾ ನೀರು ಹರಿಯುತ್ತಿದೆ... ಆದರೂ ಹಳ್ಳಿ ಹಳ್ಳಿಯಾಗಿಯೇ ಉಳಿದಿದೆ. ಗ್ರಾಮವಾಗಿ ಬೆಳೆದಿಲ್ಲ.

ಒಮ್ಮೆ ಎಲ್ಲರೂ ಒಟ್ಟಾಗಿ ನಾಯಕನ ಹಟ್ಟಿಗೆ ಹೋಗಿ ಬರಬೇಕೆಂಬ ಹಂಬಲ ಹಾಗೇ ಉಳಿದಿದೆ. ಹಳ್ಳಿಯ ರಸ್ತೆ ಹೇಗಿದೆ? ಮನೆಗಳು ಹೇಗಿವೆ?.... ಮನೆಯ ಮುಂದಿನ ಬೀದಿ, ತಾವು ವಾಸ ಮಾಡಿದ ಮನೆ, ಎಲ್ಲವನ್ನ ನೋಡಬೇಕೆಂಬ ಆಸೆ, ಆಸೆಯಾಗಿಯೇ ನಿಂತಿದೆ. ಶಾಸ್ತ್ರಿಗಳ ಮಕ್ಕಳ ನೆನಪು ಎಷ್ಟು ಜನರಿಗೆ ಇದ್ದೀತು? ಯಾರೂ ಗುರುತಿಸುತ್ತಾರೋ ಇಲ್ಲವೋ? ಮರೆತಿರಲೂಬಹುದು.

"ಮುಂದಿನ ಸಾರಿ, ಎಲ್ಲರೂ ಸೇರಿದಾಗ ಎಲ್ಲರೂ ಒಟ್ಟಿಗೇ, ಹೋಗಿ ಬರೋಣ." ಲಲಿತ ತನ್ನ ಆಸೆಯನ್ನ ಮುಂದಕ್ಕೆ ದೂಡಿದಳು. ಕೃಷ್ಣ ನಕ್ಕ.

"ಶಿವಮೊಗ್ಗಾದಲ್ಲಿದ್ದಾಗಲೇ, ಎಂದೂ ಹೋಗಿರಲಿಲ್ಲ. ಈಗೆಂಥಾ ಆಸೆ?"

"ಇದು ನಾವುಗಳೆಲ್ಲರೂ ಸೇರಿದಾಗ ಹಾಕಿಕೊಳ್ಳುವ ಯೋಜನೆ. ಈ ಯೋಜನೆ ಎಂದಿಗೆ ನೆರವೇರುವುದೋ? ಮತ್ತೆ ಮತ್ತೆ ಮುಂದೂಡುತ್ತಲೇ ಇದ್ದೇವೆ." ಪದ್ಮಿನಿ ರಾಗ ಎಳೆದಳು.

"ಎಲ್ಲರೂ ಒಟ್ಟಿಗೆ ಸೇರಿದರೂ ಒಮ್ಮತವಿಲ್ಲ. ಒಬ್ಬರಿಗೆ ಬೇಕು... ಒಬ್ಬರಿಗೆ ಈಗ ಬೇಡ.... ಹೀಗಾದರೆ ಹೇಗೆ?" ರಾಗಿಣಿಯ ಪ್ರಶ್ನೆ.

"ಕಪ್ಪೇನ ತಕ್ಕಡಿಗೆ ಹಾಕಿದ ಹಾಗೆ..." ಶಾಂತ ಉಸುರಿದಳು.

"ಒಬ್ಬರಿದ್ದರೆ ಇನ್ನೊಬ್ಬರಿಲ್ಲ... ಬಿಡುವಿಲ್ಲ... ರಜವಿಲ್ಲ... ಈಗ ಆಗಲ್ಲ... ಹತ್ತು ಹಲವು ಕಾರಣಗಳು... ಆದರೆ ನೆನಪುಗಳೋ... ಚಲಿಸುವ ರೈಲಿನಂತೆ... ಅದಕ್ಕೆ ನಿಲ್ದಾಣವಿಲ್ಲ... ಚಲಿಸುತ್ತಲೇ ಇದೆ... ಚಲಿಸುತ್ತಲೇ ಇರುತ್ತದೆ....

ತೂಗುಯ್ಯಾಲೆಯಂತೆ ತೂಗಾಡುತ್ತಿದ್ದ ಜೀವನವೆಂಬ ವೃಕ್ಷದ ಕೊಂಬೆಗಳು

ಅತ್ತ ಇತ್ತ ಬೆಳೆದುಕೊಳ್ಳುತ್ತಲೇ ಇದ್ದವು. ಕೆಲವೊಮ್ಮೆ ಭಾರಿ ಕೊಂಬೆಯಾಗಿ ಕೆಲವೊಮ್ಮೆ ಸಣ್ಣ ಕೊಂಬೆಯಾಗಿ ... ಹೊಸ ಎಲೆಗಳು ಚಿಗುರುತ್ತಲೂ ಇದ್ದವು..... ಹಣ್ಣಾಗಿ ಉದುರುತ್ತಲೂ ಇದ್ದವು.... ನಿರೀಕ್ಷೆಯ ನೆರಳಿನ ಚಿತ್ರಗಳು ದಿಕ್ಕನ್ನು ಬದಲಾಯಿಸುತ್ತಲೇ ಇದ್ದವು. .... ಕೆಲವೊಮ್ಮೆ ಬೆಳಕಿನ ಕಿರಣಗಳನ್ನೂ ತೂರಿ ... ಕೆಲವೊಮ್ಮೆ ಬೆಳಕಿಗೆ ಅಡ್ಡವಾಗಿ ..... ನಿರಂತರ ಹೋರಾಟದ ಪಥದಲ್ಲಿ.

*** ಮುಗಿಯಿತು ***



ಸುಮಾರು ಅರವತ್ತು ವರ್ಷಗಳ ಹಿಂದಿನ ಘಟನಾವಳಿಗಳ ಅನುಭವಗಳನ್ನು ಓದುಗರೊಂದಿಗೆ ಹಂಚಿಕೊಳ್ಳಬೇಕೆಂಬ ಉದ್ದೇಶದಿಂದ ಈ ವಿಶಿಷ್ಟ ಕಾದಂಬರಿಯು ಸೃಷ್ಟಿಗೊಂಡು ಪ್ರಕಟಗೊಳ್ಳುತ್ತಿದೆ. ಇಲ್ಲಿ ಬರುವ ಘಟನೆಗಳನ್ನು, ಅನುಭವಗಳನ್ನು, ರಂಜನೀಯವಾಗಿ, ಸ್ವಾರಸ್ಯವಾಗಿ, ಕೌತುಕಮಯವಾಗಿ ಬಿಡಿ ಬಿಡಿಯಾಗಿ ಬರೆದಿಟ್ಟವರು ದಿ॥ ಎಮ್. ವಿ. ವೆಂಕಸುಬ್ಬಯ್ಯನವರು. ಅವರ ಭಾಷಾ ಶೈಲಿ, ಬರಹದ ಓಟ ಆ ದಶಕದ ಜನ ಜೀವನ, ಸಾಮಾಜಿಕ ಚಿಂತನೆಗಳೊಂದಿಗೆ ದಿನನಿತ್ಯದ ಹೋರಾಟ, ಜಂಝಾಟಗಳಿಗೆ ಅನುಗುಣವಾಗಿದೆ....

ವೆಂಕಟಸುಬ್ಬಯ್ಯನವರು ಸಂಸ್ಕೃತ, ಹಿಂದಿ, ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ನಾಟಕಗಳು, ಸಣ್ಣಕತೆಗಳು, ಕವನಗಳು, ಪ್ರಬಂಧಗಳು, ರೇಡಿಯೋ ಪ್ರಹಸನಗಳು, ಪ್ರವಾಸಕಥನಗಳು ಹೀಗೆ ಹತ್ತು ಹಲವಾರು ವಿಷಯಗಳು ಅವರ ಬರವಣಿಗೆಯ ಭಂಡಾರದಲ್ಲಿ ಅಡಗಿದ್ದವು. ಪರಿಷ್ಕರಿಸಿ, ಪ್ರಕಟಗೊಳಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ....

ಅವರ ಜೀವಿತ ಕಾಲದ ಅಮೂಲ್ಯವಾದ ಕೆಲವಾರು ವರ್ಷಗಳನ್ನು ಹಳ್ಳಿಯ ವಾತಾವರಣದಲ್ಲಿ ಕಳೆಯಬೇಕಾದ ಪರಿಸ್ಥಿತಿ ಒದಗಿದಾಗ ಅವರು ಧೈರ್ಯಗೆಟ್ಟವರಲ್ಲ. ಅವುಗಳ ಮೌಲ್ಯವನ್ನು ಕಟು ಸತ್ಯವನ್ನು ಆಗಾಗ ಬರೆದಿಡುವ ಹವ್ಯಾಸಗಳನ್ನಿಟ್ಟುಕೊಂಡಿದ್ದರು. ಮುಂದಿನ ಜನಾಂಗದವರಿಗೆ, ಅಂದಿನ ಚಿತ್ರಣಗಳನ್ನು ತಲುಪಿಸುವುದು ಅವರ ಉದ್ದೇಶವಾಗಿತ್ತೆಂದೆನಿಸುತ್ತದೆ. ಆ ಉದ್ದೇಶ, ಈಗ ಒಂದು ಉತ್ತಮ, ಉದಾತ್ತ ವಿಷಯಗಳನ್ನೊಳಗೊಂಡ ಸಾಮಾಜಿಕ ಕಾದಂಬರಿಯ ರೂಪದಲ್ಲಿ ಹೊರ ಬರುತ್ತಿದೆ.

ನಾನು ವೆಂಕಟಸುಬ್ಬಯ್ಯನವರ ಮಗಳು ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಇಚ್ಛಿಸುತ್ತೇನೆ. ಕಾದಂಬರಿಯಲ್ಲಿ ಕಾಣ ಸಿಗುವ ಪಾತ್ರಗಳು, ಸನ್ನಿವೇಶಗಳು ಹಾಗೂ ಸಂಭಾಷಣೆಗಳು ಎಲ್ಲವೂ ನಮ್ಮ ತಂದೆಯವರ ಸೃಷ್ಟಿಗಳೇ. ಕೆಲವೊಮ್ಮೆ ಅವುಗಳಿಗೆ ಬಣ್ಣವನ್ನು ಹಚ್ಚಿ ಅಲಂಕಾರ ಮಾಡುವ ಕೆಲಸವನ್ನು ನಾನು ಮಾಡಿದ್ದೇನೆ.....

ಈ ದಿನ, ನಾನು ಲೇಖಕಿಯರ ಸಾಲಿನಲ್ಲಿ ನಿಂತಿದ್ದೇನೆಂದರೆ; ಅದಕ್ಕೆ ನಮ್ಮ ತಂದೆಯವರೇ ಬಹುತೇಕ ಕಾರಣಕರ್ತರು, ಪೋಷಕರು. ಅದೇ ಭಾವನೆಯಿಂದ ಈಗ ಈ ಕಾದಂಬರಿಯನ್ನು ಒಂದು ಆಕಾರಕ್ಕೆ ತಂದಿರುವೆನಾದರೂ, ಕಾದಂಬರಿಯ ಕಥಾವಸ್ತು, ಪಾತ್ರಗಳು, ಸನ್ನಿವೇಶಗಳು ಎಲ್ಲದರ ಪೂರ್ಣ ಕೀರ್ತಿ ನಮ್ಮ ತಂದೆಯವರಿಗೆ ಸೇರುತ್ತದೆ.

ನಮ್ಮ ತಂದೆಯವರ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ ಇದ್ದಿತು. ಆ ಕಾರಣದಿಂದಾಗಿ ಈ ಕಾದಂಬರಿಯನ್ನು ನಮ್ಮ ತಂದೆಯವರ ನೆನಪಿನಲ್ಲಿ, ಕುಟುಂಬದ ಸದಸ್ಯರೆಲ್ಲರಿಗೂ ಕಾಣಿಕೆಯನ್ನಾಗಿ ಅರ್ಪಿಸಲು ಇಷ್ಟಪಡುತ್ತೇನೆ.

– ಪದ್ಮಾ ಶ್ರೀಧರ್,